
ಉಗಾದಿ ವಿಶೇಷಾಂಕ 1998

ಬಿಸಿಲ ಬದುಕು

•ವಾಣಿಜ್ಯ •ವಿಕಾಸ •ಮಾಹಿತಿ •ಸಂಪರ್ಕ



ರೂ. 15



ಇದು ನಿಮ್ಮ ಬದುಕು !

ನಿಖರವಾಗಿ ಒಂಬತ್ತು ತಿಂಗಳ ಹಿಂದೆ ಇಂಥ ವಿನೂತನ ಪತ್ರಿಕೆ ಪ್ರಾರಂಭಿಸಲು ಮುಂದಾದಾಗ ಅನೇಕರು 'ಹುಚ್ಚು ಸಾಹಸ' ಎಂದರು. ಕೆಲವು ಆಪ್ತರು ಸುರಕ್ಷಿತ ಅಂತರ ಕಾಯ್ದುಕೊಂಡರು. ಆದರೆ ಸಂಪಾದಕನ, ಪತ್ರಿಕೆಯ ಮುಖಮೂತಿ ನೋಡಿರದ ಸಾವಿರಾರು ಜನ ಸೂಕ್ಷ್ಮಗ್ರಾಹಿ ಓದುಗರು ಪತ್ರಿಕೆಯ ಬೆಂಬಲಕ್ಕೆ ನಿಂತರು. ಇಂದು ಕನ್ನಡದ ಮತ್ಯಾವ ಮಾಸಪತ್ರಿಕೆಗೂ ಇರದಷ್ಟು ಚಂದಾದಾರರ ಬಲ ನಮಗಿದೆ. ಒಂದು ಒಳ್ಳೆಯ ಉದ್ದೇಶದ ಪ್ರಾಮಾಣಿಕ ಪ್ರಯತ್ನವನ್ನು ಓದುಗರು ಒಪ್ಪಿಕೊಳ್ಳುತ್ತಾರೆ ಎಂಬ ಮಾತಿಗೆ 'ಬದುಕು' ಪ್ರತ್ಯಕ್ಷ ಸಾಕ್ಷಿ.

ಮೊದಮೊದಲು ಅನುಮಾನದಿಂದಲೇ ಹತ್ತಿರ ಬಂದ ಬಹುಪಾಲು ಏಜೆಂಟರು ಇಂದು ಪತ್ರಿಕೆಯ ಕುಟುಂಬದ ಸದಸ್ಯರಂತೆಯೇ ಜವಾಬ್ದಾರಿ ತೋರುತ್ತಿದ್ದಾರೆ. ಹಲವಾರು ಗಣ್ಯ ಜಾಹೀರಾತು ಸಂಸ್ಥೆಯವರು ಪತ್ರಿಕೆಯೆಡೆ ಕಣ್ಣು ತೆರೆಯುತ್ತಿದ್ದಾರೆ. ಹೀಗೆ ವಿವಿಧ ದಿಕ್ಕುಗಳಿಂದ ಬೆಂಬಲ, ಪ್ರೋತ್ಸಾಹ, ಸಹಕಾರ ಹರಿದು ಬಂದಿದ್ದರಿಂದಲೇ 'ಬದುಕು' ಮಾರುಕಟ್ಟೆಯಲ್ಲಿ ತನ್ನದೇ ಆದ ರೀತಿಯಲ್ಲಿ ತಲೆಯೆತ್ತಿ ನಿಲ್ಲಲು; ಇವತ್ತು ಇಂತಹದೊಂದು ವಿಭಿನ್ನವೂ, ಸಮೃದ್ಧವೂ ಆದ ವಿಶೇಷಾಂಕವನ್ನು ರೂಪಿಸಲು ಸಾಧ್ಯವಾಗಿದೆ.

ಇಂಥ ಯಶಸ್ಸು ಸಾಧ್ಯವಾಗಿಸಿದ ನಿಮಗೆ 'ಧನ್ಯವಾದ' ಎಂಬ ಸವಕಲು ಪದದಿಂದ ಕೃತಜ್ಞತೆ ಹೇಳಿದರೆ ಕೃತಕವಾದೀತೇನೋ ಎಂಬ ಭಯ, ಅಳುಕು. ಪತ್ರಿಕೆಯ ಗೆಲುವಿನೊಂದಿಗೇ ಬೆಸೆದು ಕೊಂಡಿರುವ ನಿಮ್ಮ ಬಳಿ ಔಪಚಾರಿಕತೆಯ ಸೋಗೇಕೆ?

'ಬದುಕು' ಬಳಗದ ಇನ್ನೊಂದು ಪ್ರಯೋಗವಾದ 'ಮನೆ' ಮಾಸಪತ್ರಿಕೆ ಶೀಘ್ರದಲ್ಲಿಯೇ ನಿಮ್ಮನ್ನು ತಲುಪಲಿದೆ. ನಂತರ.....ನಿಮ್ಮ ನಿರೀಕ್ಷೆಗಳನ್ನು ನಿಜವಾಗಿಸುವ ಹಲವಾರು ಕನಸುಗಳು, ಯೋಜನೆಗಳು ನಿಮ್ಮೆದುರು ಬಿಚ್ಚಿಕೊಳ್ಳಲಿವೆ.

ಉಗಾದಿಯ ಶುಭಾಶಯಗಳು

-ಸಂಪಾದಕ

ಪರಿವಿಡಿ

ಸಂಪಾದಕ
ಚಂದ್ರಕಾಂತ ವಡ್ಡು

ಸಂಪಾದಕೀಯ ನೆರವು
ಎಚ್. ಎಂ. ಪಂಡಿತಾರಾಧ್ಯ

ನಿರ್ವಹಣೆ
ಸಿ.ಪಿ ಸುರೇಶ್

ಪ್ರಸಾರ
ವೈ.ಬಿ. ವಿಜಯಕುಮಾರ

ಅಕ್ಷರ ಜೋಡಣೆ
ಜಿ. ಸುರೇಶ್
ಕೋಕಿಲ

ಮುಖಪುಟ ವಿನ್ಯಾಸ
ಚಂದ್ರಶೇಖರ ಗುಬ್ಬಿ

ಕಲೆ
ಕೆ. ವಿ. ಪುಂಡಲೀಕ, ಮೋಹಿನಿ ಮಾಧವ, ಪಿ. ಶ್ರೀಕಾಂತ್


ವಿಳಾಸ
'ಬಿಸಿಲ ಬದುಕು ಮಾಸಪತ್ರಿಕೆ'
ಅಂಕುರ ಪ್ರಕಾಶನ,
ಅಂಚೆ ಪೆಟ್ಟಿಗೆ - ೭೯೫೧, ಬಸವೇಶ್ವರ ನಗರ,
ಬೆಂಗಳೂರು - ೫೬೦ ೦೭೯.

✧

ಬಿಸಿಲ ಬದುಕು
ಹೊಸ ದೂರವಾಣಿ ಸಂಖ್ಯೆ :
3307810

ಲೇಖನ

ವಿಶೇಷ ಲೇಖನ



ದ್ವಿಚಕ್ರ ವಾಹನಗಳು

ಭದ್ರಾವತಿ ಅನಂತ್

ಕಥೆ

ಲಲಿತ ಪ್ರಬಂಧ/ಹಾಸ್ಯ

ಏಪ್ರಿಲ್ ೧೯೯೮ ಸಂಪುಟ ೧ ಸಂಚಿಕೆ ೧೦

ಮಾಸಪತ್ರಿಕೆ

ಬಿಸಿಲ ಬದುಕು

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಕವನ

ಸಿನಿಮಾ

ಓದುಗರ ಗಮನಕ್ಕೆ

ಈವರೆಗೆ ಪ್ರತಿ ತಿಂಗಳು ೧೫ನೇ ತಾರೀಖಿಗೆ ಮಾರುಕಟ್ಟೆಯಲ್ಲಿ ಇರುತ್ತಿದ್ದ **'ಬಿಸಿಲ ಬದುಕು'** ಮಾಸಪತ್ರಿಕೆ ಇನ್ನು ಮೇಲೆ ಪ್ರತಿ ತಿಂಗಳು ೨೯ರಂದು ಓದುಗರ ಕೈಸೇರಲಿದೆ.


-ಪ್ರಕಾಶಕ


ಓದುಗರ ಅಂಕಣ

ಸ್ವಯಂ ಸಂದರ್ಶನ

ವಿದ್ಯೆ- ಉದ್ಯೋಗ

ಸ್ಥಿರ ಶೀರ್ಷಿಕೆಗಳು







Printed, Published and Owned by Chandrakanta vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Fax : 080 5091136 Pager : 9622 738638 Printed at M.N.S. Enterprises, Bhattarahalli, Old Madras Road, Bangalore - 49. Editor : Chandrakanta Vaddu

ಜಿ.ಕೆ. ಗೋವಿಂದರಾವ್

ಮನೆ ವಿವಾದದ ಮೂಲ ಪ್ರಶ್ನೆ

The Government corrupts and the intellectual is willing

- Ramamanohar Lohia

ಪದ್ಮಭೂಷಣ, ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಯು.ಆರ್. ಅನಂತಮೂರ್ತಿ ಅವರಿಗೆ ಅವರ ಸಮಾಜವಾದಿಮಿತ್ರರೂ, ಲೋಹಿಯಾ ವಾದಿಗಳೂ ಮತ್ತು ಸದ್ಯ ರಾಜ್ಯದ ಮುಖ್ಯಮಂತ್ರಿಗಳೂ ಆದ ಜೆ.ಎಚ್.ಪಟೇಲರು ಡಾಲರ್ ಕಾಲೋನಿಯಲ್ಲಿ ಬಂಗಲೆಯೊಂದನ್ನು ಚಿಕ್ಕಾಸಿನ ಬೆಲೆಗೆ ನೀಡಿದ್ದಾರೆ. ಅದನ್ನು ಡಾ.ಮೂರ್ತಿ ಅವರು ತಾವು ರಾಜ್ಯಕ್ಕೆ ಸಲ್ಲಿಸಿದ 'ಸೇವೆ'ಗೆ ಸರಕಾರ ನೀಡುತ್ತಿರುವ "Reward" ಎಂದು ಹೇಳಿ ಸ್ವೀಕರಿಸಿದ್ದಾರೆ. ಇಷ್ಟರಲ್ಲೇ ಈ ಮನೆಯನ್ನು ಪ್ರವೇಶಿಸಿ ಬೆಂಗಳೂರಿನಲ್ಲಿ ವಾಸ್ತವ್ಯ ಆರಂಭಿಸುವವರಿದ್ದಾರೆ.

ಬಹಳ ಸಂತೋಷ.


ಡಾ. ಅನಂತಮೂರ್ತಿ ಅವರ ಬಗ್ಗೆ ನಮ್ಮಲ್ಲಿ ಹಲವರು ಅನೇಕ ವರ್ಷಗಳಿಂದ ಒಬ್ಬ ಆದರ್ಶವಾದಿ, ಗಾಂಧೀವಾದಿ, ಲೋಹಿಯಾವಾದಿಯನ್ನು ಕಂಡವರು. ಸಾಮಾಜಿಕ, ರಾಜಕೀಯ ಸಂದರ್ಭಗಳಲ್ಲಿ ಅನೇಕ ವೇಳೆ ನಮಗೆಲ್ಲರಿಗೂ ತಮ್ಮ ನಡೆನುಡಿಗಳಿಂದ ಮೇಲ್ಪಂಕ್ತಿ ಹಾಕಿ ಕೊಟ್ಟವರು. ಗ್ರಾಮೀಣ ಭಾರತದ ಬಗ್ಗೆ, ಗೋಪಾಲಗೌಡರಂಥ ಒಬ್ಬ ಧುರೀಣ ನಾಯಕನ ಬಗ್ಗೆ ಉಚ್ಚವರ್ಗದಲ್ಲಿ ಹುಟ್ಟಿ, ನಗರ ಪ್ರದೇಶಗಳಲ್ಲೇ ಬೆಳೆದ ನಮ್ಮಂಥವರಿಗೆ ಪರಿಚಯ ಮಾಡಿಕೊಟ್ಟವರು. ತಮ್ಮ ಬರಹದ ಮೂಲಕ ನಮಗೆ ಸ್ಫೂರ್ತಿಯಾಗಿದ್ದವರು. ವ್ಯವಸ್ಥೆಯಿಂದ ಏನನ್ನೂ ಪಡೆಯುವುದೂ ಬಯಸುವುದೂ ವ್ಯವಸ್ಥೆಯ ಕಡೆ ಆಸೆಗಣ್ಣುಗಳಿಂದ ನೋಡುವುದೂ ಎಲ್ಲವೂ ಕೂಡ ಒಂದು ಬಗೆಯ ಭ್ರಷ್ಟತನಕ್ಕೆ ಸಮನಾದುದು ಎಂದು ನಮಗೆ ಮನಗಾಣಿಸಿದವರು.

ಈಗ ಇದೇ ಡಾ. ಅನಂತಮೂರ್ತಿಯವರು ಸರಕಾರದ ಕೃಪೆಗೆ ಪಾತ್ರರಾಗಿ ಸುಮಾರು ೪೫ ಲಕ್ಷ ರೂ.ಗಳ ಮನೆಯನ್ನು ೯ ಲಕ್ಷಕ್ಕೆ ಪಡೆದಿದ್ದಾರೆ. ಹೀಗೆ ಪಡೆದದ್ದನ್ನು ಸಮರ್ಥಿಸಿಕೊಳ್ಳುತ್ತ ಹೋಗಿದ್ದಾರೆ. ತಾವು ಒಬ್ಬ "somebody" ಆಗಿರುವುದರಿಂದ ಈ ಬಗೆಯ ವಿಶೇಷ ಸವಲತ್ತು ಪಡೆಯುವುದರಲ್ಲಿ ತಪ್ಪಿಲ್ಲ ಎಂದು ವಾದಿಸುತ್ತಿದ್ದಾರೆ.

ತಾವೊಬ್ಬ ಲೇಖಕ; ವ್ಯಾಪಾರಿಯಂತೆ ತಮ್ಮನ್ನು ಕಾಣಬಾರದು ಎಂದು ಹೇಳುತ್ತಾರೆ.

ಈ ಲೇಖಕ ಅನ್ನುವುದಕ್ಕೆ ಅರ್ಥವೇನು ಎಂದು ನನಗೆ ಅರ್ಥವಾಗುವುದಿಲ್ಲ. ನನ್ನ ಪ್ರಕಾರ ಡಿ.ವಿ.ಜಿ. ಲೇಖಕರು. ಕಾರಂತರು, ಅನಕೃ ಲೇಖಕರು. ಅಂದರೆ ಯಾರು ತಮ್ಮ ಬರಹದ ಮೂಲಕ ಮಾತ್ರ ಅಥವಾ ಪ್ರಮುಖವಾಗಿ ಲೇಖನಗಳ ಮೂಲಕ ಮಾತ್ರ ಜೀವನ ಸಾಗಿಸಿದರೋ ಅವರು ಲೇಖಕರು - ಅನಂತ ಮೂರ್ತಿಯವರು ಲೇಖಕರು ಹೌದು. ಆದರೆ ಬರಹ ಅವರ ವೃತ್ತಿಯಲ್ಲ.

ಅವರು ೩೫ ವರ್ಷಗಳು ಅಧ್ಯಾಪಕರು, ಪ್ರೊಫೆಸರ್, ಕುಲಪತಿಗಳು, ವಿದೇಶಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದವರು. ಹಾಗಾದರೆ ಅನಂತಮೂರ್ತಿ ಅವರ ಪ್ರಕಾರ ಯಾವ ಸಂದರ್ಭದಲ್ಲಿ ತಮ್ಮ ಜೇಬಿಗೆ ಕೈ ಹಾಕಿ ತಮ್ಮ ಕಾಸಿಗೆ ಖೋತಾ ಆಗುತ್ತದೆ ಅಂದ ಕೂಡಲೆ ತಾವು ಬಡ ಲೇಖಕರು ಅಂತ ಜ್ಞಾಪಕಕ್ಕೆ ಬಂದು - ತಮ್ಮನ್ನು ಬೇರೆಯವರ, ಸಾಮಾನ್ಯರ Nobodyಗಳ ಸಾಲಿನಲ್ಲಿ ಸೇರಿಸಿ, ಅವಮಾನ ಮಾಡ ಬಾರದು ಅನ್ನಿಸಿಬಿಡುತ್ತದೆಯೇ?



ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಡಾ. ಯು. ಆರ್. ಅನಂತಮೂರ್ತಿ ಅವರಲ್ಲಿ ಅನೇಕರು ಆದರ್ಶವಾದಿ, ಗಾಂಧೀವಾದಿ, ಲೋಹಿಯಾವಾದಿಯನ್ನು ಕಂಡಿದ್ದಾರೆ. ಆದರೆ ಈಗ ಇದೇ ಅನಂತಮೂರ್ತಿ ಸರ್ಕಾರದ ಕೃಪೆಯಿಂದ ೪೫ ಲಕ್ಷ ರೂಪಾಯಿ ಮನೆಯನ್ನು ೯ ಲಕ್ಷಕ್ಕೆ ಪಡೆದು ವಿವಾದ ಹಡೆದಿದ್ದಾರೆ!

ಕೆಲವು ಪತ್ರಿಕೆಗಳಲ್ಲಿ ಅವರು ಮಾತನಾಡಿರುವುದನ್ನು ನೋಡಿದರೆ (ಉದಾ: 'ಸಲ್ಲಾಪ', 'ಹಾಯ್ ಬೆಂಗಳೂರು') ಉಳಿಯಲು ಒಂದು ಜೋಪಡಿಯೂ ಇವರಿಗೆ ಇಲ್ಲ ಎಂಬ ಭಾವನೆ ಹುಟ್ಟಬೇಕು ಅನ್ನಿಸುವ ಹಾಗಿದೆ. ಒಂಬತ್ತು ಲಕ್ಷ 'ಹೊಂಚಬೇಕಾದ' ಕನಿಕರ ಹುಟ್ಟಿಸುವಂಥ ಸ್ಥಿತಿಯಲ್ಲಿ ತಾವಿರುವ ಹಾಗೆ ಮಾತನಾಡುತ್ತಾರೆ.

ಡಾ. ಮೂರ್ತಿಯವರಿಗೆ ಮೈಸೂರಿನಲ್ಲಿ ಮನೆಯಿರುವ ವಿಷಯಕ್ಕಾಗಲಿ, ತೋಟ, ತೋಟದ ಮಧ್ಯೆ ಮನೆ ಇವು ಯಾವುದರ ಬಗ್ಗೆಯೂ ಯಾರದೂ ತಕರಾರಿಲ್ಲ. ಅವರ ಹಣ, ಅವರ ಮನೆ, ಅವರ ತೋಟ. ಕಷ್ಟಪಟ್ಟು ದುಡಿದದ್ದು, ಕಷ್ಟಪಟ್ಟು ಗಳಿಸಿದ್ದು.

ಆದರೆ ಇಷ್ಟಿದ್ದೂ ಕೂಡ ಸರಕಾರ ಒಂದು ನಿವೇಶನ ಕೊಡುತ್ತೇನೆ ಅಂದಾಗ, ಸರಕಾರದ ಮುಲಾಜಿಗೆ ಯಾವ ಅರ್ಥದಲ್ಲೂ ಸಿಲುಕಿಕೊಳ್ಳಬೇಕಾದಂಥ ಪರಿಸ್ಥಿತಿಯೇ ಇಲ್ಲದಿರುವಾಗ ಡಾ. ಮೂರ್ತಿಯವರು ನಿವೇಶನವನ್ನು ಸ್ವೀಕರಿಸಿ, ಕೊಂಚ ದಿವಸವಾದ ಮೇಲೆ 'ನಿವೇಶನ ಬೇಡ, ಮನೆ ಕೊಡಿ; ಈ ಮನೆ ಬೇಡ ಆ ಮನೆ ಕೊಡಿ; ಇಷ್ಟು ಹಣ ಸಾಧ್ಯವಿಲ್ಲ ಅಷ್ಟು ತೆಗೆದುಕೊಳ್ಳಿ' ಎಂದು ಚೌಕಾಸಿ ಮಾಡುವುದು ಮತ್ತು ಈ ರೀತಿ ಚೌಕಾಸಿ ಮಾಡಿ ಸ್ವೀಕರಿಸುವುದು ತಮ್ಮ ಹಕ್ಕು ಎಂಬಂತೆ ವಾದಿಸುವುದು ಅವರನ್ನು ಬಹಳ ವರ್ಷಗಳಿಂದ ಬಲ್ಲ ಯಾರಿಗಾದರೂ ಆತಂಕವನ್ನೂ, ಆಶ್ಚರ್ಯವನ್ನೂ ಹುಟ್ಟಿಸದಿರದು.

ಬಿ.ಡಿ.ಎ., ಅನಂತಮೂರ್ತಿ ಅವರಿಗೆ ಮನೆ ನೀಡಿದಾಗ ೪೫ ಲಕ್ಷ ಕೊಟ್ಟು ತೆಗೆದುಕೊಳ್ಳಬಹುದು ಎಂದು ಪತ್ರ ಬರೆದದ್ದು ನಿಜ ತಾನೆ?

ಹಾಗಾದರೆ ಆ ಮನೆಗೆ ೪೫ ಲಕ್ಷ ಬೆಲೆ ಅಂದ ಮೇಲೆ ಮುಖ್ಯಮಂತ್ರಿಗಳ ಮಧ್ಯ ಪ್ರವೇಶದಿಂದ ಅದು ೯ ಲಕ್ಷಕ್ಕೆ ಹೇಗೆ ಇಳಿಯಿತು? ಇಲ್ಲಿ ಯಾವ ತರ್ಕ, ನ್ಯಾಯ ಇದೆ ಎಂದು ಮುಖ್ಯಮಂತ್ರಿಯವರ ಪರವಾಗಿ ವಾದಿಸುತ್ತಿರುವ ಅವರ ರಾಜಕೀಯ ಕಾರ್ಯದರ್ಶಿ ಕೆ.ಎಚ್.ಶ್ರೀನಿವಾಸರು ಸಾರ್ವಜನಿಕರಿಗೆ ತಿಳಿಯಪಡಿಸಬೇಕು.

"Somebody" ಆಗಿದ್ದ ಅನಂತಮೂರ್ತಿ ಅವರು, ತಮ್ಮ 'ಸೇವೆಗೆ' ಸರಕಾರದ "reward" ಎಂದು ಮಾತನಾಡುತ್ತಿದ್ದ ಅನಂತಮೂರ್ತಿಯವರು ಇದ್ದಕ್ಕಿದ್ದ ಹಾಗೆ ೬೦೦ ಜನ ಇತರೇ ಅಭ್ಯರ್ಥಿಗಳಲ್ಲಿ ೪೯೮ನೇ ಅಭ್ಯರ್ಥಿ ಆಗಿಬಿಟ್ಟರು ಹೇಗೆ? ಈ Somebody ಇದ್ದಕ್ಕಿದ್ದ ಹಾಗೆ "Nobody" ಆಗಿಬಿಟ್ಟರೆ? ಇವರ ವಾದಗಳಲ್ಲಿ ಒಂದು ಸಾಮಾನ್ಯಮಟ್ಟದ Consistency ಯನ್ನು ಬಯಸುವುದೂ ಅಪರಾಧವಾಗುವುದಿಲ್ಲ ತಾನೆ?

ಆಯಿತು, ಇವರ ಸೇವೆಗೆ ಸರಕಾರ reward ಕೊಡಲೇಬೇಕೆಂಬ ಹಟ ಮಾಡಿದ್ದರೆ ಅದು ಅನಂತಮೂರ್ತಿ ಅವರಿಗೆ ಮಾತ್ರ ಸಲ್ಲಬೇಕಾದ reward ಅಷ್ಟೇ ಹೊರತು ವಂಶಪಾರಂಪರ್ಯವಾಗಿ ಉಳಿಯುವ ಆಸ್ತಿಯಲ್ಲ. ಅನಂತಮೂರ್ತಿ ಅವರ ಸೇವೆ, ಮಕ್ಕಳಿಗೆ ಆಸ್ತಿ-ಸರ್ವಥಾ ಒಪ್ಪತಕ್ಕ ಮಾತಲ್ಲ.

ಇವರ ಸೇವೆಗೆ reward ಕೊಟ್ಟರು ಎಂದೇ ಅಂದುಕೊಳ್ಳೋಣ - ಇವರಿಗಿಂತ ಹೆಚ್ಚಿನ ಸೇವೆ ಮಾಡಿದವರಿಲ್ಲವೆ? ಹೆಚ್ಚಿನ ಸೇವೆ ಮಾಡಿಯೂ ತಮ್ಮದು ಎಂದು ಹೇಳಿಕೊಳ್ಳುವುದಕ್ಕೆ ಒಂದು ಗೇಣುದ್ದ ಜಾಗ ಇಲ್ಲದೆ, ನಿಜವಾದ ಅರ್ಥದಲ್ಲಿ ದೇಶಸೇವೆ ಮಾಡಿದವರಿಲ್ಲವೆ? ಸರಕಾರದಿಂದ ಏನನ್ನು ಕೇಳುವುದಕ್ಕೂ ಮುಜುಗರ ಪಡುವ ಮಹಾನುಭಾವರಿಲ್ಲವೆ? ಆಯಿತು. ಕಲಾವಿದರಿಗೆ, ಲೇಖಕರಿಗೆ ನಿವೇಶನಗಳನ್ನು ಕೊಟ್ಟದ್ದು ಇದೆ. ಅದು ಸರಿ ಕೂಡ. ಕಡಿಮೆ ಬೆಲೆಗೂ ಕೊಟ್ಟಿದ್ದಾರೆ. ಖಂಡಿತ ತಪ್ಪಲ್ಲ. ಆದರೆ ಯಾರಿಗಾದರೂ ಕಟ್ಟಿದ ಮನೆ ನೀಡಲಾಗಿದೆಯೇ? ರಾಷ್ಟ್ರಪತಿಯಾಗಿದ್ದ ಎನ್.ಸಂಜೀವರೆಡ್ಡಿಯವರು ಬೆಂಗಳೂರಿನಲ್ಲಿ ಬಂದು ನೆಲಸಲು ಬಯಸಿದಾಗ ಅವರಿಗೂ ಕೂಡ ಅವರ ಜೀವಿತ ಕಾಲದವರೆಗೆ ಒಂದು ಸರಕಾರಿ ಬಂಗಲೆಯನ್ನು ನೀಡಲಾಯಿತೇ ಹೊರತು ಅವರ ಮಕ್ಕಳೂ ಆಸ್ತಿ ಮಾಡಿಕೊಳ್ಳಲು ಮನೆ ಕೊಡಲಿಲ್ಲ. ಡಾ. ಅನಂತಮೂರ್ತಿಯವರು ರಾಷ್ಟ್ರಪತಿಯವರಿಗಿಂತ ದೊಡ್ಡವರೆ ಅಥವಾ ಅವರ ಸೇವೆ ಸಂಜೀವರೆಡ್ಡಿಯವರ ಸೇವೆಗಿಂತ ಹೆಚ್ಚಿನದೆ?

ಈ ಇಡೀ ಪ್ರಕರಣದ ಹಿಂದೆ ಅಡಕವಾಗಿರುವುದು ನೈತಿಕ ಪ್ರಶ್ನೆ. ಸಾರ್ವಜನಿಕ ಹೊಣೆಗಾರಿಕೆ ಪ್ರಶ್ನೆ. Accountability ಪ್ರಶ್ನೆ. ಒಬ್ಬ ಲೇಖಕನ ಅತ್ಯಂತ ದೊಡ್ಡ ಜವಾಬ್ದಾರಿಯ ಪ್ರಶ್ನೆ.

ಈ ಪ್ರಶ್ನೆಗೆ ಹೋಗುವುದಕ್ಕೆ ಮುಂಚೆ ಒಂದೆರಡು ಮಾತಿದೆ. ಅದನ್ನು ಹೇಳಿ ಈ ಪ್ರಶ್ನೆಯನ್ನು ಎತ್ತಿಕೊಳ್ಳಲು ಬಯಸುತ್ತೇನೆ.

೧. ಮೈಸೂರಿನಲ್ಲಿ ಡಾ. ಮೂರ್ತಿಯವರ ಮಗಳು ವಿದ್ಯಾರ್ಥಿನಿಯಾಗಿದ್ದಾಗ, ತಂದೆಯ ಜೊತೆಯೇ ಇದ್ದಾಗ ಮೈಸೂರಿನ (MUDA) ಅರ್ಬನ್ ಡೆವೆಲಪ್‌ಮೆಂಟ್ ಅಥಾರಿಟಿಗೆ ಒಂದು ಅರ್ಜಿ (affidavit) ಸಲ್ಲಿಸಿ ತಮ್ಮ ಯಾವ ರಕ್ತ ಸಂಬಂಧಿಗೂ ಮೈಸೂರಿನಲ್ಲಿ ನಿವೇಶನವಾಗಲೀ ಮನೆಯಾಗಲೀ ಇಲ್ಲ ಎಂದು ಹೇಳಿಕೆ ಕೊಟ್ಟು ಒಂದು ನಿವೇಶನವನ್ನು ಪಡೆದಿದ್ದಾರೆ. ಅವರು

ಈ ಇಡೀ ಪ್ರಕರಣದ ಹಿಂದೆ ಅಡಕವಾಗಿರುವುದು ನೈತಿಕ ಪ್ರಶ್ನೆ. ಸಾರ್ವಜನಿಕ ಹೊಣೆಗಾರಿಕೆ ಪ್ರಶ್ನೆ. Accountability ಪ್ರಶ್ನೆ. ಒಬ್ಬ ಲೇಖಕನ ಅತ್ಯಂತ ದೊಡ್ಡ ಜವಾಬ್ದಾರಿಯ ಪ್ರಶ್ನೆ.

ನಿವೇಶನ ಪಡೆದ ಬಗ್ಗೆ ಅಲ್ಲ ನಾವು ಎತ್ತಿದ ಪ್ರಶ್ನೆ. ನಮ್ಮ ಪ್ರಶ್ನೆ ಇದ್ದುದು 'ರಕ್ತ ಸಂಬಂಧಿಗಳ್ಯಾರಿಗೂ ನಿವೇಶನವಾಗಲೀ.....' ಇತ್ಯಾದಿ ಹೇಳಿಕೆಗೆ. ಈ ರೀತಿಯ ಹೇಳಿಕೆ ಎಲ್ಲರೂ ಕೊಡಲೇಬೇಕು. ಇದರಲ್ಲಿ ಅನಂತಮೂರ್ತಿಯುವರು ಏನು ಮಾಡಲು ಸಾಧ್ಯ ಎಂಬ ಪ್ರಶ್ನೆಗೆ ಉತ್ತರ - 'ಅವರು ಅನಂತಮೂರ್ತಿಯವರು ಆದ್ದರಿಂದಲೇ' ಇಂಥ ಹೇಳಿಕೆ ಕೊಡಿಸಬಾರದಿತ್ತು ಅಥವಾ ಇಂಥ ಹೇಳಿಕೆಯನ್ನೊಳಗೊಂಡ affidavit ಕೊಡ ಬೇಕೆಂಬ MUDA ದ ನಿಬಂಧನೆಗಳನ್ನು ಮೂರ್ತಿ ಯವರು ಕಿತ್ತೊಗೆಸಬೇಕಿತ್ತು. ಇಲ್ಲಿಯೂ ಕೂಡ ಒಂದು ಅರ್ಥದಲ್ಲಿ ನೈತಿಕ ಪ್ರಶ್ನೆಯೇ ಇದೆ. ಆದ್ದರಿಂದ ನಾವು ಇದನ್ನೂ ಎತ್ತಿದೆವು. ಇಡೀ ಪ್ರಶ್ನೆಯನ್ನು ತಿರುಚಿ 'ನನ್ನ ಮಗಳಿಗೆ ನಿವೇಶನ ಹೊಂದುವ ಹಕ್ಕಿಲ್ಲವೆ?' 'ಅವಳೂ ಸ್ವತಂತ್ರಳಲ್ಲವೆ?' 'ಅವಳಿಗೆ ಇಪ್ಪತ್ತು ವರ್ಷ ವಯಸ್ಸಾಗಿರಲಿಲ್ಲವೆ'? ಎಂದೆಲ್ಲ ವಾದಿಸಿ ಕೊನೆಗೆ ಪ್ರಶ್ನೆ ಎತ್ತುವವರನ್ನು 'ನೀಚರು' ಎಂದು ತಿರಸ್ಕರಿಸುವುದು ಯಾವುದೂ ಉತ್ತರಗಳಲ್ಲ. 'ನನ್ನ ಹೆಂಡತಿ, ಮಕ್ಕಳ ಹೆಸರುಗಳನ್ನು ಎಳೆದು ತರುತ್ತಿದ್ದಾರೆ' ಎಂಬ ಇನ್ನಷ್ಟು ಕನಿಕರ ಸಂಪಾದಿ ಸುವ ಕ್ಷುಲ್ಲಕ ಮಾರ್ಗವಷ್ಟೆ.

೨. ಇದರ ಜೊತೆಗೆ ಇದಕ್ಕೆ ನೇರ ಸಂಬಂಧ ಪಡದ ಇನ್ನೊಂದು ಮಾತು ಹೇಳಲೇಬೇಕು. ಈ ಇಡೀ ಪ್ರಸಂಗದ ಬಗ್ಗೆ ಉದಯ ಟಿ.ವಿ. ಅವರು ಸಂದರ್ಶನ ಕಾರ್ಯಕ್ರಮ ಏರ್ಪಡಿಸಿದ್ದಾಗ ನಾನು ಮೇಲಿನ ವಿಷಯವನ್ನು - ಅಂದರೆ ಡಾ. ಮೂರ್ತಿ ಯವರು ಮಗಳು ನಿವೇಶನ ಪಡೆದ ರೀತಿಯ ಬಗ್ಗೆ - ಪ್ರಸ್ತಾಪಿಸಿದೆ.

ಅಂದೇ ರಾತ್ರಿ ಡಾ. ಮೂರ್ತಿ ಅವರ ಮಗ ಡಾ. ಶರತ್ ಅನಂತಮೂರ್ತಿ (ಮೈಸೂರು ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕ) ನನಗೆ ಫೋನ್ ಮಾಡಿ ಅತ್ಯಂತ ಹೊಲಸು ಭಾಷೆಯಲ್ಲಿ ಮಾತನಾಡಿ ನನ್ನನ್ನು ಹೊಡೆದು ಬಡಿಯುವುದಾಗಿ ಬೆದರಿಕೆ ಹಾಕಿದರು. ಈ ವಿಷಯ ಅವರ ತಂದೆಯವರ ಕಿವಿಗೆ ಬಿದ್ದಿರುವ ವಿಷಯವೂ ನನಗೆ ಗೊತ್ತು. ಆದರೂ ಕೂಡ ಒಂದೂ ಮಾತಾಡದೆ ಮೌನ ತಾಳಿರುವುದು ಮಗನ ನಿಲುವಿಗೆ ಸಮರ್ಥನೆ ನೀಡುವ ರೀತಿಯೋ ಏನೋ ಯಾರಿಗೆ ಗೊತ್ತು?

ಅವರ ಮಗ ನನಗೆ ಹೊಡೆಯುವ ಬಗ್ಗೆ ಹೆದರಿಕೆಗಿಂತ ಇಂಥ ಮನುಷ್ಯ ಅಧ್ಯಾಪಕ ನಾಗಿರುವ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ನನಗೆ ಹೆಚ್ಚು ಆತಂಕ ಎಂದು ಮಾತ್ರ ಹೇಳಬಯಸುತ್ತೇನೆ.

ಈ ಇಡೀ ಪ್ರಸಂಗದ ಹಿಂದೆ ಇರುವುದು ನೈತಿಕ ಪ್ರಶ್ನೆ. ಕೇವಲ ಕಾನೂನಿನ ಪ್ರಶ್ನೆಯಲ್ಲ. ನ್ಯಾಯಾಲಯದಲ್ಲಿ ಮಾತ್ರ ಇತ್ಯರ್ಥವಾಗ ಬೇಕಾದ ಪ್ರಶ್ನೆಯಲ್ಲ ಇದು.

ಇದು ವ್ಯಕ್ತಿಯ ಆತ್ಮಸಾಕ್ಷಿಗೆ ಸಂಬಂಧ ಪಟ್ಟಿದು. ಲೇಖಕನಾದ ಮೇಲೆ, ರಾಜಕಾರಣಿ ಯಾದ ಮೇಲೆ ಈ ಆತ್ಮಸಾಕ್ಷಿ ಎಂಬುದಕ್ಕೆ ವಿಸ್ತಾರ ದೊಡ್ಡದು, ವ್ಯಾಪ್ತಿ ದೊಡ್ಡದು. 'ಕೇವಲ ನನಗೆ ಮಾತ್ರ ಸಂಬಂಧಪಟ್ಟ ವಿಷಯ' ಎಂದು ಡಾ. ಮೂರ್ತಿಯವರು ಹೇಳುತ್ತಿರುವ ರೀತಿ ನೋಡಿದರೆ (ಹಾಯ್ ಬೆಂಗಳೂರು ೯-೧-೯೮) ಇವರ ಲೇಖನಗಳು, ಕತೆ ಕಾದಂಬರಿಗಳು ಸಾಮಾಜಿಕ ರಾಜಕೀಯ ನಿಲುವುಗಳು ಕೂಡ ಕೇವಲ ಇವರಿಗೆ ಮಾತ್ರ ಸಂಬಂಧಪಟ್ಟ ವಿಷಯಗಳಾಗಬೇಕು. ತಮ್ಮ ಲೇಖನಗಳು, ನಿಲುವುಗಳ ಮೂಲಕ ಜನತೆಯನ್ನು ಹೊಸ ಚಿಂತನೆಗೆ, ಹೊಸ ಅನುಭವಗಳಿಗೆ ಸ್ಪಂದಿಸುವ ಹಾಗೆ ಮಾಡಿ ಈಗ ಅತ್ಯಂತ ಜಟಿಲವೂ ಸಂಕೀರ್ಣವೂ ಆದ ಸಮಸ್ಯೆ ಎದುರಾದಾಗ ಅದೇ ಜನತೆಯೆದುರು 'ಇದು ಕೇವಲ ನನ್ನ ವೈಯಕ್ತಿಕ ಪ್ರಶ್ನೆ' ಎಂದು ಅಂದುಬಿಡುವುದು ಎಳ್ಳಷ್ಟೂ ಒಪ್ಪತಕ್ಕ ಮಾತಲ್ಲ. ೪೫ ಲಕ್ಷದ ಸಾರ್ವಜನಿಕ ಆಸ್ತಿಯನ್ನು ೯ ಲಕ್ಷಕ್ಕೆ ತೆಗೆದುಕೊಂಡಾಗ ಅದು ಕೇವಲ 'ನನ್ನ ಪ್ರಶ್ನೆ' ಹೇಗಾಗುತ್ತದೆ?

ಅಲ್ಲದೆ ಅನಂತಮೂರ್ತಿಯವರ ಇನ್ನೊಂದು ವಾದ ನೋಡಿ : 'ಇದು ಕೇವಲ ಕಾನೂನಿನ ಪ್ರಶ್ನೆ; ಕಾನೂನಿನ ಪ್ರಕಾರ ನಾನು ತಪ್ಪೆಸಗಿದ್ದೀನಿ ಎಂದು ಯಾರಾದರೂ ತೋರಲಿ, ಆಗ ಮನೆ ಬಿಟ್ಟು ಕೊಡುತ್ತೇನೆ. ಯಾರಿಗೂ ಹಾಗೆ ನಾನು ತಪ್ಪೆಸಗಿದ್ದೀನಿ ಎಂದು ತೋರಲಾಗುವುದಿಲ್ಲ' ಎಂದಿದ್ದಾರೆ. ಇಡೀ ಬದುಕು ಕಾನೂನಿನ ಪ್ರಕಾರ ಸಮ್ಮತವೆನ್ನಿಸಿದರೆ ಸಾಕಾಗುವುದಾದರೆ ನಮಗೆ ಕಲೆ ಯಾಕೆ ಬೇಕು? ಸಾಹಿತ್ಯ ಯಾಕೆ ಬೇಕು? ಮೌಲ್ಯಗಳು, ನೈತಿಕತೆ ಎಂಬ ಮಾತುಗಳಾದರೂ ಯಾಕೆ ಬೇಕು?

ಇನ್ನು ಒಂದು ಮಾತು. ಡಾ. ಅನಂತಮೂರ್ತಿ ಯವರು ಹೇಳುತ್ತಿದ್ದಾರೆ. ಹೀಗೆ ಕಡಿಮೆ ಹಣಕ್ಕೆ ಮನೆ ಗಳಿಸಿದ್ದರಲ್ಲಿ ತಪ್ಪೇನಿದೆ?... ನಮ್ಮ ಬದುಕಿನ ಎಲ್ಲ ವಿಭಾಗದಲ್ಲೂ ನಾವು ಸರಕಾರದ ನೆರವು, Subsidy ಗಳನ್ನು ಬಯಸುತ್ತಿಲ್ಲವೆ' ಎಂದು. ಈ ಬಗೆಯ ವಿವಾದಗಳಲ್ಲಿ ನಾವು ತೊಡಗುವುದೇ ನಮ್ಮೊಳಗೆ ಕ್ಷೀಣಿಸುತ್ತಿರುವ ಆತ್ಮವಿಶ್ವಾಸದ ಸಂಕೇತ. ಬದುಕು-ವಿವರಣೆ, ವಾದ, ವ್ಯಾಖ್ಯಾನ ಗಳಲ್ಲ. ವಿವರಣೆ, ವಾದ, ವ್ಯಾಖ್ಯಾನಗಳಲ್ಲಿ ನಮ್ಮನ್ನು ನಾವು ಬಹು ಜಾಣತನದಲ್ಲಿ ತೊಡಗಿಸಿ ಕೊಳ್ಳುವ ಪ್ರಕ್ರಿಯೆ ಭ್ರಷ್ಟತನದ ಒಂದು ಸಂಕೇತ.

ಗಾಂಧಿಯವರ ಬಗ್ಗೆ, ಲೋಹಿಯಾ ಅವರ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುತ್ತಾರೆ ಅನಂತಮೂರ್ತಿಯವರು. ಅವರು ಗಾಂಧೀ

ಸರ್ಕಾರದ ನೆರವು : ಡಿ.ವಿ.ಜಿ. ನಿಲುವು

ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಡಿ.ವಿ.ಜಿ. ಅವರ ಬಗ್ಗೆ ಒಂದು ಪ್ರಸಂಗವನ್ನು ನಾವು ಕೆಲವು ಗೆಳೆಯರು ಅವರ ಮನೆಗೆ ಹೋಗಿದ್ದಾಗ ಹೇಳಿದರು. ಅದನ್ನು ಇಲ್ಲಿ ಹೇಳಲೇಬೇಕೆನಿಸಿ ಹೇಳುತ್ತಿದ್ದೇನೆ.

ಡಾ. ಡಿ.ವಿ.ಜಿ. ಆರ್ಥಿಕವಾಗಿ ಯಾವಾಗಲೂ ಮುಗ್ಗಟ್ಟಿನಲ್ಲಿ ಇರುತ್ತಿದ್ದರು. ಮಗ ಡಾ. ಬಿ.ಜಿ.ಎಲ್.ಸ್ವಾಮಿ ಆರ್ಥಿಕ ಸಹಾಯ ನೀಡುತ್ತಿದ್ದರೂ ಅದು ಡಿ.ವಿ.ಜಿ. ಅವರಿಗೆ ಸಾಕಾಗುತ್ತಿರಲಿಲ್ಲ. ಮಗನನ್ನು ಮತ್ತಷ್ಟು ಕೇಳಲು ಸಂಕೋಚ. ಹೀಗಿರುವಾಗ ಒಮ್ಮೆ ಡಿ.ವಿ.ಜಿ. ಅವರ ಈ ಸ್ಥಿತಿ ಸರಕಾರದ ಗಮನಕ್ಕೆ ಬಂದು ಅಂದಿನ ಕಾಲಕ್ಕೆ ಸುಮಾರು ೫೦೦/-ಗಳಷ್ಟು ಧನ ಸಹಾಯ ಮಾಡಿದರು. ಡಾ. ಡಿ.ವಿ.ಜಿ. ಅವರು ಮೂರು ದಿವಸಗಳ ನಂತರ ಸರಕಾರಕ್ಕೆ ಹೀಗೆ ಉತ್ತರ ಬರೆದರು.

''ನಿಮ್ಮ ಧನ ಸಹಾಯ ಮುಟ್ಟಿತು. ನೀವು ನೀಡಿದ ಈ ಸಹಾಯವನ್ನು ನಮ್ರತೆಯಿಂದ ನಿರಾಕರಿಸಲು ನನಗೆ ಮೂರು ದಿನ ಬೇಕಾಯಿತಲ್ಲ ಎಂಬುದೇ ನನ್ನ ಬಗ್ಗೆ ನನಗೆ ಅತ್ಯಂತ ಅವಮಾನದ ಸಂಗತಿಯಾಗಿದೆ''. ಲೇಖಕನಿಂದ ಬಯಸುವುದು ಇಂಥ ಕಠೋರ ಆತ್ಮಗೌರವವನ್ನು ಮತ್ತು ಸ್ವಾಭಿಮಾನವನ್ನು. ಒಂದು ಜನತೆಯ ಸಂಸ್ಕೃತಿ ಬೆಳೆಯುವುದು ಇಂಥವರ ಇಂಥ ದೊಡ್ಡತನದಿಂದ.

ವಾದ ಕುರಿತು ಮಾತನಾಡಿದಾಗ, ಲೋಹಿಯಾ ವಾದ ಕುರಿತು ಮಾತನಾಡಿದಾಗ ಮಾತಿನ ಮೋಡಿಯಲ್ಲಿ ತಮ್ಮನ್ನೂ ಮತ್ತು ಕೇಳುಗನನ್ನೂ ಸಿಲುಕಿಸಿ ಗೊಂದಲಗೊಳಿಸುತ್ತಾರೆ. 'ಗಾಂಧಿಯ ಹಾಗೆ ಇರಲು ಸಾಧ್ಯವೆ?' ಲೋಹಿಯಾ ಹೇಳಿದ ಮಾತುಗಳ ಬಗ್ಗೆ ಲೋಹಿಯಾ ಅವರಿಗೇ ಅನೇಕ ಬಾರಿ ಪಾಲಿಸುವುದು ಕಷ್ಟವಾಗುತ್ತಿತ್ತು ಎಂದೆಲ್ಲ ಮಾತನಾಡುತ್ತಿದ್ದಾರೆ. ಗಾಂಧೀವಾದಿಯಾಗುವುದೆಂದರೆ 'ಕೌಪೀನಧಾರಿಯಾಗು' ಎಂದು ಅರ್ಥವಲ್ಲ; ಲೋಹಿಯಾವಾದಿಯಾಗು ಅಂದರೆ 'ಬ್ರಹ್ಮಚಾರಿಯಾಗಿ ಬದುಕಿ ದೇಶಕ್ಕೇ ನಿನ್ನನ್ನು ನೀನು ಸಮರ್ಪಿಸಿಕೋ' ಎಂದರ್ಥವಲ್ಲ. ಆ ಅರ್ಥಗಳಲ್ಲ ಎಂದು ಡಾ. ಅನಂತಮೂರ್ತಿ ಅವರಿಗೂ ಗೊತ್ತು; ಆದರೆ ವಾದಕ್ಕೆ, ಮಾತಿನ ಜಾಣ ಬಳಕೆಗೆ ಬಲಿಯಾಗಿ ಪ್ರಶ್ನೆಯಿಂದ ಜಾರಿಕೊಳ್ಳುವ ಪ್ರಯತ್ನವನ್ನಷ್ಟೇ ಮಾಡುತ್ತಿದ್ದಾರೆ ಎಂದು ಯಾರಿಗಾದರೂ ತೋರಲೇಬೇಕು.

❑

'ಹಾಯ್ ಬೆಂಗಳೂರು' (೯-೧-೯೮) ಪತ್ರಿಕೆ ಪ್ರತಿನಿಧಿ ಡಾ.ಮೂರ್ತಿ ಅವರನ್ನು ಸಂದರ್ಶಿಸುವಾಗ ರಾಜಕೀಯ ಪ್ರಭಾವದಿಂದ ಮಾತ್ರ ಮೂರ್ತಿ ಅವರಿಗೆ ಈ ಮನೆ ಸಿಗುವುದು ಸಾಧ್ಯವಾಯಿತು, ಎ.ಎನ್.ಮೂರ್ತಿರಾವ್, ಕರ್ಣ್ಣಿಂಖಾನ್, ದೊರೆಸ್ವಾಮಿ ಅಂತಹ ಹಿರಿಯರಿಗೆ ನಿವೇಶನವೂ ಸಿಕ್ಕಿಲ್ಲ ಎಂಬ ವಾದವಿದೆ ಎಂದು ಕೇಳಿದಾಗ ಡಾ. ಮೂರ್ತಿಯವರು ಅತ್ಯಂತ ಕಾಳಜಿ, ಕಳಕಳಿಗಳನ್ನು ಪ್ರದರ್ಶಿಸುತ್ತ 'ಈ ಹಿರಿಯರಿಗೆ ನಿವೇಶನ ನೀಡಿಲ್ಲ ಎಂದಾದರೆ ಮೊದಲು ಈ ಕೆಲಸಕ್ಕೆ ಮುಂದಾಗಬೇಕು. ನಾನು ಮುಖ್ಯಮಂತ್ರಿಗಳಿಗೂ ಇದೇ ಮಾತು ಹೇಳಿದ್ದೇನೆ. ಡಾಲರ್ ಕಾಲೋನಿಯಲ್ಲಿ ಹಂಚದೆ ಉಳಿದಿರೋ ಮನೆಗಳನ್ನು ಹಿರಿಯ ಸಾಹಿತಿಗಳಿಗೆ ಗಣ್ಯ ಕಲಾವಿದರಿಗೆ ನೀಡಿ ಎಂದಿದ್ದೇನೆ....' ಎಂದು ಉತ್ತರಿಸಿದ್ದಾರೆ.

ನನ್ನ ಪ್ರಶ್ನೆ ಇಷ್ಟು : ಈ ಹಿರಿಯರಿಗೆ ಸಿಗುವುದಕ್ಕೆ ಮುಂಚೆ ನಾನು ಮನೆಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಮುಖ್ಯಮಂತ್ರಿಗಳಿಗೆ ಏಕೆ ಹೇಳುವುದಿಲ್ಲ ಡಾ. ಅನಂತಮೂರ್ತಿ ಅವರು? ಮುಖ್ಯಮಂತ್ರಿಗಳಿಗೆ ಅಷ್ಟು ಹೇಳಿದ್ದರೂ ಸಮಾಜವಾದಿ ಪಟೇಲರೇನಾದರೂ ತಮ್ಮ ಆಪ್ತ ಗೆಳೆಯನ ಮಾತನ್ನು ಕಿವಿಯ ಮೇಲೆ ಹಾಕಿಕೊಂಡಿದ್ದಾರೆಯೇ?

ಇನ್ನೊಂದು ಕಡೆ ಇದೇ ಸಂದರ್ಶನದಲ್ಲಿ ಸರಕಾರವು ಅನಂತಮೂರ್ತಿ ಅವರಿಗೆ ಅವರು ಸಲ್ಲಿಸಿದ ಸೇವೆಗೆ ಜೀವಿತಾವಧಿ ಮನೆ ನೀಡಲಿ ನಂತರ ಆ ಮನೆ ಸರಕಾರಕ್ಕೆ ವಾಪಸ್ಸಾಗಲಿ ಎಂಬ ವಾದಕ್ಕೆ ಅವರ ಪ್ರತಿಕ್ರಿಯೆ ಕೇಳಿದಾಗ ಅನಂತಮೂರ್ತಿಯವರು 'ಸಂತೋಷದಿಂದ ಹೇಳುತ್ತೇನೆ. ಸರ್ಕಾರ ಮೊದಲು ಈ ಕೆಲಸ ಮಾಡಲಿ....' ಎಂದು ಹೇಳಿದ್ದಾರೆ. ಈ ಮಾತನ್ನು ತಮ್ಮ ಲೋಹಿಯಾವಾದಿ ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾರೆಯೆ? ಕೊಟ್ಟ ಮನೆಯನ್ನು ಹಿಂತಿರುಗಿಸಿದ್ದಾರೆಯೆ? ಆ ಯೋಚನೆ ಏನಾದರೂ ಇದೆಯೆ? ಸದ್ಯಕ್ಕಂತೂ ಏನೂ ಸೂಚನೆಗಳು ಕಾಣುತ್ತಿಲ್ಲ.

ಬದಲಿಗೆ ಅನಂತಮೂರ್ತಿ ಅವರಿಗೆ ಸುತ್ತಲೂ ತಮ್ಮ ಬಗ್ಗೆ 'ಅಸೂಯೆ' ಪಡುವವರೇ ಕಾಣುತ್ತಾರೆ. ತಮ್ಮ ಬಗ್ಗೆ 'ಅಸೂಯೆ' ಪಡುತ್ತಾರೆ ಅನ್ನುವುದೇ 'ದುರಭಿಮಾನದ' ಸಂಕೇತ. ಅವರಿಗೆ ಒಂದು ಮಾತು ನಮ್ಮದಾಗಿ ಹೇಳಲು ಬಯಸುತ್ತೇನೆ: 'ನಿಮ್ಮ ಬಗ್ಗೆ ಹೆಮ್ಮೆ ಪಟ್ಟಿದ್ದು ನಿಜ. ಅಸೂಯೆ ಪಡುವಂಥದ್ದೇನನ್ನೂ ನೀವು ಸಾಧಿಸಿಲ್ಲ. ನಿಮ್ಮ ಬಗ್ಗೆ ಮೂರೂ ಹೊತ್ತು ತಲೆಕೆಡಿಸಿಕೊಂಡು ಮತ್ಸರಪಡುವುದಕ್ಕೆ ನಮಗೆ ವೇಳೆಯೂ ಇಲ್ಲ.

❑

ಪಟೇಲರು ಮುಖ್ಯಮಂತ್ರಿಯಾದಾಗ ಅನಂತಮೂರ್ತಿಯವರು ಒಂದು ಮಾತು ಹೇಳಿದ್ದರು: ''ಆತಂಕಗೊಳ್ಳದ ಪಟೇಲರಲ್ಲಿ ನನಗೆ ಆಸಕ್ತಿ ಇಲ್ಲ'' ಎಂದು. ಇದೇ ಪಟೇಲರು ಈಗ ಚುನಾವಣೆಯಲ್ಲಿ ದಯನೀಯವಾಗಿ ಸೋತ ಮೇಲೆ 'ರಾಜಿನಾಮೆ ಕೊಡುವುದು ನಿಮ್ಮ ನೈತಿಕ ಕರ್ತವ್ಯವಲ್ಲವೆ' ಎಂದು ಕೇಳಿದರೆ 'ಇಡೀ ದೇಶದಲ್ಲಿ ನೈತಿಕತೆ ಎಲ್ಲಿದೆ ನನಗೆ ತೋರಿಸಿ' ಎಂದು ಉತ್ತರ ನೀಡುತ್ತಾರೆ.

ಡಾ. ಅನಂತಮೂರ್ತಿ ಅವರು
"I'm somebody" ಎಂದು ಹೇಳಿಕೊಂಡಾಗ
ನೆನಪಿಗೆ ಬಂದ ಕವನ

I'm nobody! who are you?
Are you nobody, too?
Then there's a pair of us - don't tell!
They would banish us, you know.
How dreary to be somebody!
How public, like a frog
To tell your name the live long day
To an admiring bog

- Emily Dickinson

ಹೀಗೆ 'ಇಡೀ ದೇಶದಲ್ಲಿ ನೈತಿಕತೆ ಎಲ್ಲಿದೆ' ಎಂದು ಸವಾಲು ಎಸೆದಾಗ ಕೇವಲ ರಾಜಕೀಯ ಜಗತ್ತು ಮಾತ್ರ ಪಟೇಲರ ಮನಸ್ಸಿನಲ್ಲಿತ್ತು ಎಂದು ನನಗೆ ಖಂಡಿತ ಅನ್ನಿಸುವುದಿಲ್ಲ. ಅವರ ಮನಸ್ಸಿನಲ್ಲಿ ತಮ್ಮ ನಡವಳಿಕೆಯನ್ನು ಪ್ರಶ್ನಿಸುವ, ಟೀಕಿಸುವ ಸಾರ್ವಜನಿಕ ಗಮನಕ್ಕೆ ತರುವ ಯಾರು ತಾನೆ ಇದ್ದಾರೆ ಎಂಬುದೂ ಇದೆ. ಪ್ರಜ್ಞಾಪೂರ್ವಕವಾಗಿಲ್ಲದಿರಬಹುದು, ಆದರೆ ಈ ಅರ್ಥ ಮಸುಕು ಮಸುಕಾಗಿ ಅವರ ಪ್ರಜ್ಞೆಯ ಪದರಗಳಲ್ಲಿ ಸೇರಿ ಹೋಗಿದೆ. ಇಂಥ ಸ್ಥಿತಿ ಬರುವುದಕ್ಕೆ, ಇಂಥ ಅಹಂಕಾರದ, ಠೇಂಕಾರದ ಪ್ರಶ್ನೆ ಕೇಳುವುದಕ್ಕೆ ಆಸ್ಪದವಾಗಿರುವುದು ಇಂದಿನ ನಮ್ಮ ಸಾಂಸ್ಕೃತಿಕ ಜಗತ್ತು, ಸಾಂಸ್ಕೃತಿಕ ವಾತಾವರಣ. ಅನಂತಮೂರ್ತಿ ಅಂಥವರಿಂದ ಆಗಿರುವ ಅದಃಪತನ.

ಆತಂಕಗೊಳ್ಳದ ಡಾ. ಅನಂತಮೂರ್ತಿಯವರಲ್ಲಿ ಈ ಜನತೆಗೆ ಆಸಕ್ತಿ ಹೇಗೆ ಸಾಧ್ಯ?

ಪಟೇಲರಲ್ಲೂ ನಮಗೆ ಆಸಕ್ತಿ ಇಲ್ಲ.

ಇಲ್ಲಿ ನಮ್ಮ ಆಸಕ್ತಿ ನಮ್ಮ ಲೇಖಕರು - ಮತ್ತು ಅವರಲ್ಲಿ ಅಗ್ರಗಣ್ಯರಾಗಿರುವ ಡಾ. ಅನಂತಮೂರ್ತಿಯವರೆಗಳಲ್ಲಿ.

ಈ ಇಡೀ ಪ್ರಸಂಗದಿಂದ ಹೊಮ್ಮುವ ಒಂದು ವಿಷಾದದ ಸಂಗತಿಯೆಂದರೆ ನೈತಿಕ ಪ್ರತಿಭಟನೆಯ ಪ್ರಮುಖ ಧ್ವನಿಯೊಂದು ಸ್ವಂತ ಆಯ್ಕೆ ಮೇರೆಗೆ ಸಂಪೂರ್ಣ ಅಡಗಿಹೋಯಿತು; ಜನತೆಯ ಒಂದು ಆಸೆ, ಕನಸು ಕಮರಿಹೋಯಿತು ಎಂಬುದು.

ವ್ಯವಸ್ಥೆಗೆ ಏನೂ ತೊಂದರೆ, ಕಸಿವಿಸಿ ಉಂಟು ಮಾಡದೆ ಭಾರಿ ಭಾರಿ ಕ್ರಾಂತಿಕಾರಕ ಬೆಂಕಿಯುಂಡೆಗಳನ್ನು ನಾವು ಕಾರುತ್ತ ಹೋಗಬಹುದು. ಆಕರ್ಷಕವಾಗಿಯೂ ಕಂಡುಬಿಡಬಹುದು. ಆದರೆ ಇದರಿಂದ ಇತರರಿಗೆ ಹೋಗಲಿ, ನಮಗೆ ನಾವೇ ಮಾಡಿಕೊಳ್ಳುತ್ತಿರುವ ಮೋಸದ, ವಂಚನೆಯ ಕುರಿತಾಗಿ ನಮಗೆ ಅರ್ಥವಾಗುತ್ತದೆಯೆ? ಅರ್ಥ ಮಾಡಿಕೊಳ್ಳುವಷ್ಟು ಪ್ರಾಮಾಣಿಕತೆಯನ್ನು ನಮ್ಮ ವ್ಯಕ್ತಿತ್ವದಲ್ಲಿ ಉಳಿಸಿಕೊಂಡಿದ್ದೇವೆಯೆ? ಇವು ಡಾ. ಅನಂತಮೂರ್ತಿಯವರನ್ನೂ ನಮ್ಮನ್ನೂ ಎಲ್ಲರನ್ನೂ ಕಾಡಬೇಕಾದ ಪ್ರಶ್ನೆಗಳು. ●

❑

ಇಡೀ ಬದುಕು ಕಾನೂನಿನ ಪ್ರಕಾರ ಸಮ್ಮತವೆನ್ನಿಸಿದರೆ ಸಾಕಾಗುವುದಾದರೆ ನಮಗೆ ಕಲೆ ಯಾಕೆ ಬೇಕು? ಸಾಹಿತ್ಯ ಯಾಕೆ ಬೇಕು? ಮೌಲ್ಯಗಳು, ನೈತಿಕತೆ ಎಂಬ ಮಾತುಗಳಾದರೂ ಯಾಕೆ ಬೇಕು?

❑



ಸಂಪರ್ಕ ಕ್ಷೇತ್ರದ ಕ್ರಾಂತಿ!

ಸೆಲ್ಯುಲರ್ ಫೋನ್
ಪೇಜರ್
ಇಂಟರ್‌ನೆಟ್

ನಾರಾಯಣ ಎಂ. ಭಟ್



❑ **ಬೆಂ**ಗಳೂರಿನ ಲಿಡೋ ಥಿಯೇಟರ್‌ನಲ್ಲಿ ಪ್ರೇಯಸಿಯೊಂದಿಗೆ ಕೊನೆಯ ಸೀಟಿನಲ್ಲಿ ಕೂತು ಚಿತ್ರ ನೋಡುವಾಸೆಯೇ. ಕ್ಯೂ ನಲ್ಲಿ ನಿಲ್ಲುವ ಆವಶ್ಯಕತೆ ಇಲ್ಲ. ಟಿಕೆಟ್ ಸಿಗಲಾರದೆಂಬ ಆತಂಕ ಬೇಡ. ಮನೆಯಲ್ಲಿಯೇ ಕೂತು 'ಇಂಟರ್‌ನೆಟ್' ಸೌಲಭ್ಯದಿಂದ ನಿಮ್ಮಿಬ್ಬರ ಸೀಟುಗಳನ್ನು ಬುಕ್ ಮಾಡಿಸಿ! ಜೊತೆಗೆ 'ಇಂಟರ್‌ವಲ್'ನಲ್ಲಿ Pepsi ಯೊಂದಿಗೆ Chips ಬೇಕೇ ಅಥವಾ ಬ್ರೆಡ್ ಸ್ಯಾಂಡ್‌ವಿಚ್ ಬೇಕೇ? ಎನ್ನುವುದನ್ನೂ ತಿಳಿಸಿ ಬಿಡಿ. ಮಧ್ಯಂತರದ ಬಿಡುವಿನಲ್ಲಿ ಅವು ನಿಮಗೆ ಸಪ್ಲೈ ಆಗಿಬಿಡುತ್ತವೆ! ಹ್ಞಾ.... ಇನ್ನು ನೀವು ಮಾಡಲೇಬೇಕಾದ ಒಂದೇ ಒಂದು ಕೆಲಸವೆಂದರೆ ನಿಮ್ಮ ಪ್ರೇಯಸಿಯನ್ನು Pick up ಮಾಡಲು ಮರೆಯದಿರುವುದು!

❑ 'ಸೌರವ ಗಂಗೂಲಿ'ಯ Latest Score ಎಷ್ಟು? ತಿಳಿಯಲು "Pager"ನ ಗುಂಡಿ ಒತ್ತಿ.

❑ ಅಮೆರಿಕದಲ್ಲಿರುವ ಅಕ್ಕ ಮತ್ತು ಭಾವನವರಿಗೆ ನಿಮ್ಮ Latest Joke ತಿಳಿಸಲೇಬೇಕು ಎಂದು ನಿಮಗನಿಸುತ್ತಿದೆಯೇ? Dont worry. ಇಂದೇ E-Mail ಮಾಡಿ.

❑ ಹುಬ್ಬಳ್ಳಿಯ ದೊಡ್ಡಣ್ಣ ಮೆಣಸಿನಕಾಯಿ ಅವರಿಗೆ ಬೆಂಗಳೂರಿನ ಮಂಡಿಯ ಧಾರಣೆ ತಿಳಿಯಲು ಮುಂಚಿನಂತೆ ಗಂಟಲು ಹರಿದುಕೊಂಡು ಕಿರಿಚಿಕೊಳ್ಳುವ ಅಗತ್ಯ ಇಂದು ಇಲ್ಲ. Cellular Phoneನಿಂದಾಗಿ ಅವರು ತೋಟದ ಮಧ್ಯೆ ಇದ್ದರೂ ಮಾಹಿತಿ ಲಭ್ಯ. ಈ ಸಲ ಮೆಣಸಿನ ಫಸಲನ್ನು ಮಂಡಿಗೆ ಕಳುಹಿಸಲು ಇದು ಸರಿಯಾದ ಕಾಲವೋ ಅಲ್ಲವೋ ಅನ್ನುವುದನ್ನು ಅವರು ನಿರ್ಧರಿಸುವುದು ಈಗ ಸುಲಭ.

❑ 'ಹಲೋss ನಮ್ಮ ಮನೆಗೆ ೨ ಕೆ.ಜಿ. ಗೋಧಿ ಹಿಟ್ಟು ಕಳುಹಿಸಿ ಪ್ಲೀಸ್ ಎಂದು ಶ್ರೀಮತಿ ಜಾನಕಿ ರಾಮಚಂದ್ರನ್ ಕರೆ ಮಾಡಿದ ಅರ್ಧ ಗಂಟೆಯೊಳಗಡೆಯೇ ಅಂಗಡಿ ಹುಡುಗ 'ಹಿಟ್ಟಿ'ನೊಂದಿಗೆ ಬಾಗಿಲ ಮುಂದೆ ಹಾಜರ್! ಎಂತಹ ಬದಲಾವಣೆ! ಒಂದು ಕಾಲದಲ್ಲಿ ಹೆತ್ತ ಮತ್ತು ಸತ್ತ ಸುದ್ದಿಯನ್ನಷ್ಟೇ ಶೀಘ್ರವಾಗಿ ತಲುಪಿಸಲು 'ಜನಸಾಮಾನ್ಯ'ನ ಬಳಕೆಗೆ ಬರುತ್ತಿದ್ದ ಸಂಪರ್ಕ ಸಾಧನಗಳು ಇಂದು ಜನಜೀವನದ ಪ್ರತಿಯೊಂದು ಅಂಗದಲ್ಲಿಯೂ ಹಾಸುಹೊಕ್ಕಾಗಿವೆ.

ತಾಸುಗಟ್ಟಲೇ ಕ್ಯೂನಿಂತು, ಅರ್ಜಿ ಕೊಟ್ಟು, ಹತ್ತಾರು ವರ್ಷ ಅಲೆದು, ಕಾದ ನಂತರವೂ ಮರೀಚಿಕೆಯಾಗಿಯೇ ಉಳಿಯುತ್ತಿದ್ದ 'ಫೋನ್ ಸಂಪರ್ಕ' ಇಂದು ಹಣ ಕಟ್ಟಿದ ತಕ್ಷಣವೇ ಕೊಂಡುಕೊಂಡು ಬಳಸಬಹುದಾದ 'ಸೆಲ್ಯುಲರ್ ಫೋನ್'ಗಳ ರೂಪದಲ್ಲಿ ಮಾರುಕಟ್ಟೆಯನ್ನು ಲಗ್ಗೆ ಹಾಕಿವೆ.

ದಿನಸಿ ಅಂಗಡಿಗೆ ಹೋಗಿ Ready to use ವಸ್ತುಗಳಾದ Shaving blade, Instant coffeeಗಳನ್ನು ಕೊಂಡಂತೆ Ready to use Mobile phoneಗಳನ್ನು ಕೊಳ್ಳಬಹುದಾಗಿದೆ. ಕೊಂಡುಕೊಂಡ ಕ್ಷಣದಿಂದಲೇ ಬಟನ್ ಒತ್ತಿ ನಿಮ್ಮ ಸ್ನೇಹಿತರಿಗೊ ಇಲ್ಲವೇ ನಿಮ್ಮ ವೈರಿಗೊ ನೀವು 'ಮೊಬೈಲ್' (Mobile) ಆದ ಸುದ್ದಿಯನ್ನು ಸಾರಿ ಜಂಭಕೊಚ್ಚಿಕೊಳ್ಳಬಹುದು. ಅಷ್ಟೇ ಏಕೆ ಬೆಳ್ಳುಳಿಯ ರೇಟೆಷ್ಟು? ಬಂಗಾರ ಕುಸಿಯಿತೇ? ಎ.ಸಿ.ಸಿ. ಕಂಪನಿಯ ಶೇರು ಎಷ್ಟು ಏರಿತು? ಇಂದು ಮಳೆ ಬರಬಹುದೇ? ರಾಜಧಾನಿ ಎಕ್ಸ್‌ಪ್ರೆಸ್ ಸಮಯಕ್ಕೆ ಸರಿಯಾಗಿ ಬರುವದೇ?.... ಹೀಗೆ ಎಲ್ಲವನ್ನೂ ಕ್ಷಣ ಮಾತ್ರದಲ್ಲಿ ತಿಳಿದುಕೊಳ್ಳಬಹುದು.

ಗ್ರಾಹಕರನ್ನು ಆಕರ್ಷಿಸಲು Cellular ಮತ್ತು Pager ಕಂಪನಿಗಳು ನೀಡುತ್ತಿರುವ ಕೆಲವು Value added services (ಮೌಲ್ಯ ಸೇರಿಸಿದ ಸೇವೆಗಳು) ಗಳಲ್ಲಿ ಇವು ಕೆಲವು ಮಾತ್ರ.

ಮುಂಜಾನೆಯ 'ಟ್ರೇನ್' ಹಿಡಿಯಲು ನಿಮ್ಮನ್ನು ಎಬ್ಬಿಸುವ ಸೇವೆಯನ್ನು ನಿಶುಲ್ಕವಾಗಿ ಪಡೆಯಿರಿ ಅಥವಾ ನೀವು ಊರಿನಲ್ಲಿರದಾಗ ನಿಮಗೆ ಬಂದ ಸಂದೇಶವನ್ನು ನೀವು ಇಷ್ಟಪಡುವ ವ್ಯಕ್ತಿಗೆ ತಲುಪಿಸಲು ವ್ಯವಸ್ಥೆಗಳನ್ನು ಪೇಜರ್ ಕಂಪನಿಗಳು ಒದಗಿಸಿವೆ. ಅಷ್ಟೇ ಏಕೆ, ಜೀವನ್ಮರಣದ ಹೋರಾಟದಲ್ಲಿರುವ ರೋಗಿಗಳಿಗೆ ಬೇಕಾದ 'ರಕ್ತಗುಂಪಿನ' ದಾನಿಗಳನ್ನು ಪ್ರಾರ್ಥಿಸುವ ಕರೆಗಳು ಆಗಾಗ Pagerಗಳ ಪರದೆಯ ಮೇಲೆ ಮೂಡುತ್ತವೆ.

ವಿಶ್ವದಾದ್ಯಂತ ಸಂಪರ್ಕ ಕ್ಷೇತ್ರದಲ್ಲಿ ಪ್ರತಿನಿತ್ಯ

ಕ್ರಾಂತಿಕಾರಿ ಬೆಳವಣಿಗೆಗಳಾಗುತ್ತಿವೆ ಎಂದರೆ ಉತ್ಪ್ರೇಕ್ಷೆ ಇಲ್ಲ. ಇಂತಹ ಬದಲಾವಣೆಯ ಹಿರಿಯಣ್ಣನಂತಿದೆ Internet ಎಂಬ ಸೇವೆ. Internet ಸೇವೆ ಎಂದರೆ ಹಲವಾರು ಮಾಹಿತಿ ಪೂರ್ಣ ಸಂಪರ್ಕ ಜಾಲಗಳು ಒಂದನ್ನೊಂದು ಬೆಸದುಕೊಂಡು ನಿರ್ಮಿತವಾಗಿರುವ ಮಾಹಿತಿಯ ಹೆದ್ದಾರಿ ಇದ್ದಂತೆ. ಇಲ್ಲಿ ದೊರೆಯುವ ಸಂಪರ್ಕ ಸೇವೆಗೆ ಸಾಟಿಯೇ ಇಲ್ಲ. ಇಲ್ಲಿ ದೊರಕದ ಮಾಹಿತಿ ಇಲ್ಲ!. ಅಮೆರಿಕದ ಅಧ್ಯಕ್ಷರ 'ಸೆಕ್ಸ್ ಸ್ಕ್ಯಾಂಡಲ್'ನಿಂದ ಹಿಡಿದು 'ಸಿತಾರ ವಾದನ'ದ ಪಾಠಗಳವರೆಗಿನ ಸಂಪೂರ್ಣ ಮಾಹಿತಿ ಲಭ್ಯ. ಅದೂ ನಿಮ್ಮ ಮನೆಯಲ್ಲಿರುವ ಕಂಪ್ಯೂಟರ್ ಪರದೆಯ ಮೇಲೆಯೇ!

ಈ ಮಾಹಿತಿಗಳನ್ನು ನೀವು ಯಾವಾಗ ಬೇಕಾದರೂ ಪಡೆಯಬಹುದು. ಪರದೆಯ ಮೇಲೆ ಮೂಡಿ ಬಂದ ಸುಂದರಿಯೊಬ್ಬಳ ಚಿತ್ರ ನಿಮಗೆ ಇಷ್ಟವಾದಲ್ಲಿ, ಅದರ Copyಯನ್ನು ನೀವು ಆ ಕ್ಷಣದಲ್ಲಿಯೇ ಪಡೆಯಲು ಸಾಧ್ಯವಾಗುವುದು, ಈ Internetನಲ್ಲಿರುವ ವಿಶೇಷತೆ. ಇದೇ ಅಲ್ಲದೇ ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಬೇಕಾದ ನೂರಾರು

ಜೆ.ಟಿ.ಎಂ. ಮೊಬೈಲ್ ಫೋನುಗಳು

ಜೆ.ಟಿ.ಎಂ. ನಿಂದಾಗಿ ಉದಯ ಟಿ.ವಿ. ಮೊಬೈಲ್ ಆಗಿದೆ. ಇನ್ನು ನೀವು? ಎಂದು ಪ್ರತಿನಿತ್ಯ ಪ್ರಣಯರಾಜ ಶ್ರೀನಾಥ ಅವರು ಉದಯ ಟಿ.ವಿ.ಯಲ್ಲಿ ಉಲಿಯುವುದನ್ನು ನೀವು ನೋಡಿಯೇ ಇರುತ್ತೀರಿ. ಆದರೆ ಹೀಗೆಂದರೇನು ಅಂತ ನಿಮಗೆ ಗೊತ್ತೆ? ಉದಯ ಟಿ.ವಿ. ಮೊಬೈಲ್ ಆಗಿದೆ ಎಂದರೆ ಉದಯ ಟಿ.ವಿ.ಗೆ ವಾರ್ತೆಗಳನ್ನು ನೀಡುವ ಪ್ರತಿಯೊಬ್ಬ ವರದಿಗಾರನ ಬಳಿಯೂ ಜೆ.ಟಿ.ಎಂ. ಮೊಬೈಲ್ ಫೋನ್ ಇದೆ ಎಂದು ಇದರರ್ಥ. ಇದರಿಂದಾಗಿ ವರದಿಗಾರರು ಎಲ್ಲಿ ಸಂಚಾರ ಮಾಡುತ್ತಿದ್ದರೂ ಅಂದರೆ ಕಾರಿನಲ್ಲಿ ಓಡಾಡುತ್ತಿದ್ದರೂ ಅಥವಾ ವಿಧಾನ ಸೌಧದ ಮುಂದೆ ನಿಂತಿದ್ದರೂ ಇಲ್ಲವೇ ಕೆ.ಆರ್. ಮಾರ್ಕೆಟ್‌ನ ಮಧ್ಯೆ ಇದ್ದರೂ ಸುದ್ದಿಗಳನ್ನು ನೇರವಾಗಿ, ಆ ಕ್ಷಣದಲ್ಲಿಯೇ ಶೀಘ್ರವಾಗಿ ಸ್ಪಷ್ಟವಾಗಿ ಟಿ.ವಿ. ಸಂಸ್ಥೆಯ ವಾರ್ತಾ ವಿಭಾಗಕ್ಕೆ ಕಳುಹಿಸಬಹುದು ಎಂದರ್ಥ.

ಜೆ.ಟಿ.ಎಂ. ಸಂಸ್ಥೆಯು ಸ್ವಿಡನ್‌ನ ತೆಲಿಯಾ ಎಬಿ, ಥೈಲ್ಯಾಂಡ್‌ನ ಜೆ.ಟಿ.ಓ.ಸಿ. ಮತ್ತು ಟೆಲಿಫೋನ್ ಸುವ್ಯವಸ್ಥೆ ಸಂಸ್ಥೆ ಹಾಗೂ ನಮ್ಮ ದೇಶದ United telecom Ltd., ಮತ್ತು The Sanmar groupಗಳ ಸಹ ಭಾಗಿತ್ವದಿಂದ ಅಸ್ತಿತ್ವಕ್ಕೆ ಬಂದಿರುವ ಸೆಲ್ಯುಲರ್ ಫೋನ್‌ಗಳ ಸಂಪರ್ಕಜಾಲ ಸೇವೆ ನೀಡುವ ಸಂಸ್ಥೆ.

ಉದಾರ ಆರ್ಥಿಕ ನೀತಿಯ ಲಾಭ ಪಡೆದು ಖಾಸಗಿ ವಲಯದಲ್ಲಿ ಇಂದು ಹೆಸರು ಮಾಡುತ್ತಿರುವ ಜೆ.ಟಿ.ಎಂ. ಸಂಪರ್ಕಜಾಲವು ಜಿ.ಎಸ್.ಎಂ. ಅನ್ನು ಅಳವಡಿಸಿಕೊಂಡಿದೆ.

ಯಶಸ್ವಿಯಾಗಿ ಒಂದು ವರ್ಷವನ್ನು ಪೂರೈಸಿರುವ ಜೆ.ಟಿ.ಎಂ. ಮೊಬೈಲ್ ಫೋನ್ ಸಂಸ್ಥೆಯು ೩ ಅಂತರರಾಷ್ಟ್ರೀಯ ಹಾಗೂ ೨ ರಾಷ್ಟ್ರೀಯ (ದೇಶಿಯ) ಕಂಪನಿಗಳ ಸಹಭಾಗಿತ್ವದ ಕಂಪನಿ. ಮೊಬೈಲ್ ಸಂಪರ್ಕ ಸೇವೆಯಲ್ಲಿ ತನ್ನ ಸಂಪರ್ಕ ಜಾಲವನ್ನು ಆಂಧ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ವಿಸ್ತಾರವಾಗಿ ಹರಡಿರುವ ಜೆ.ಟಿ.ಎಂ. ಬೇರೆ ರಾಜ್ಯಗಳಲ್ಲಿಯೂ ತನ್ನ ಜಾಲವನ್ನು ಪಸರಿಸಲು ಮುಂದಾಗಿರುವ ಸಂಸ್ಥೆ.

ಮಹಾನಗರಗಳಲ್ಲದ ಪ್ರದೇಶಗಳಲ್ಲಿ ಪ್ರಪ್ರಥಮ ಬಾರಿಗೆ ಮೊಬೈಲ್ ಸಂಪರ್ಕ ಜಾಲವನ್ನು ಒದಗಿಸಿರುವ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಜೆ.ಟಿ.ಎಂ. ಕಂಪನಿಯು ಉತ್ಕೃಷ್ಟವಾದ ಗುಣಮಟ್ಟ ಮತ್ತು ಗ್ರಾಹಕರ ಸೇವೆಯಲ್ಲಿ ಮುಂಚೂಣಿಯಲ್ಲಿದೆ.

ಸಧ್ಯಕ್ಕೆ ಜೆ.ಟಿ.ಎಂ. ಸಂಪರ್ಕ ಜಾಲದ ಸೇವೆಯು ಬೆಂಗಳೂರು, ಮಂಗಳೂರು, ಮೈಸೂರು, ಹೈದ್ರಾಬಾದ್, ಗುಂಟೂರು, ವಿಜಯವಾಡ ಹಾಗೂ ವೈಜಾಗ್‌ನಲ್ಲಿ ಲಭ್ಯ.

ಹಲವಾರು Value added Services ಗಳನ್ನು ಗ್ರಾಹಕರಿಗೆ ನೀಡುತ್ತಾ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿರುವ ಜೆ.ಟಿ.ಎಂ. ಸಂಪರ್ಕಜಾಲವು ತನ್ನ ಗ್ರಾಹಕರ ಆದ್ಯತೆ ಮತ್ತು ಅವಶ್ಯಕತೆಗಳನ್ನು ಗಮನಿಸಿ ಹಲವಾರು ಸೌಲಭ್ಯಗಳನ್ನು ನೀಡಿದೆ.

ಅವುಗಳ ಪೈಕಿ Prepaid SIM Card, Global connect, Closed user group

ಚಾಲ್ತಿಯಲ್ಲಿರುವ ದರಗಳು

ಸಮಯ	ಅವಧಿ	ದರ
೧. ಅತ್ಯಂತ ಬೇಡಿಕೆಯ ಸಮಯ (Peak time)	ಬೆ.೯.೦೦ ರಿಂದ ೧೧.೦೦ ಬೆ. ೫.೦೦ ರಿಂದ ೭.೦೦	ರೂ. ೧೬.೮೦ ಪ್ರತಿ ನಿಮಿಷಕ್ಕೆ
೨. ಸಾಮಾನ್ಯ ಬೇಡಿಕೆಯ ಸಮಯ (Normal time)	ಬೆ. ೬.೦೦ ರಿಂದ ೯.೦೦ ಬೆ ೧೧.೦೦ ರಿಂದ ೫.೦೦ ಸಂ. ೭.೦೦ ರಿಂದ ೯.೦೦	ರೂ. ೮.೪೦ ಪ್ರತಿ ನಿಮಿಷಕ್ಕೆ
೩. ಕಮ್ಮಿ ಬೇಡಿಕೆಯ ಸಮಯ (Off Peak time)	ರಾ ೯.೦೦ ರಿಂದ ೬.೦೦ ಭಾನುವಾರ ಮತ್ತು ರಾಷ್ಟ್ರೀಯ ರಜಾ ದಿನಗಳು.	ರೂ. ೪.೨೦ ಪ್ರತಿ ನಿಮಿಷಕ್ಕೆ

ಮಾಹಿತಿಗಳು, ದತ್ತಾಂಶಗಳೂ ಲಭ್ಯ. Internet ಬಳಸಿ, ಲಂಡನ್‌ನಲ್ಲಿರುವ ನಿಮ್ಮ ಹಳೆಯ ಸಹಪಾಠಿಯೊಂದಿಗೆ ಕಾಲೇಜಿನ ದಿನಗಳನ್ನು ನೆನಪಿಸಿಕೊಳ್ಳುವುದೂ ಸಾಧ್ಯ.

ಇದನ್ನೆಲ್ಲ ಓದುತ್ತಿದ್ದಂತೆ ನಿಮಗೆ ಇದೇನು ಕಾಲ್ಪನಿಕ ವೈಜ್ಞಾನಿಕ ಕಥೆಯೋ ಎಂಬ ಗುಮಾನಿ ಬರಬಹುದು. ಇದರಲ್ಲಿ ಆಶ್ಚರ್ಯವಿಲ್ಲ. ೧೦೦ ಕೋಟಿ ಜನಸಂಖ್ಯೆ ಇರುವ ನಮ್ಮ ದೇಶದಲ್ಲಿ ಇಂದಿಗೂ ಕೇವಲ ೧.೫೩ ಪ್ರತಿಶತದಷ್ಟು ಜನರು ಮಾತ್ರವೇ ಟೆಲಿಫೋನ್ ಹೊಂದಿದ್ದಾರೆ. ಅಂದರೆ ಪ್ರತಿ ೧೦,೦೦೦ ಜನಕ್ಕೆ ಒಂದು ಟೆಲಿಫೋನ್ ಇದ್ದರೆ ಪುಣ್ಯ! ಅದೂ 'ಡೆಡ್' ಆಗಿರದೆ ಕೆಲಸ ಮಾಡುತ್ತಾ ಇದ್ದರೆ ತಮ್ಮಂಥ ಅದೃಷ್ಟ ಶಾಲಿಗಳು ಇನ್ನೆಲ್ಲೂ ಇಲ್ಲಾ ಎಂದು ತಿಳಿಯಬೇಕಾಗುತ್ತದೆ. ವಾಸ್ತವ ಸ್ಥಿತಿ ಹೀಗಿರುವಾಗ ಸಂಪರ್ಕ ಸಾಧನೆಗಳ ಕ್ರಾಂತಿಯ ಬಗ್ಗೆ ಮಾತನಾಡುವುದು ವಿರೋಧ ಭಾಸವೆನಿಸುವುದಿಲ್ಲವೇ?

ಖಂಡಿತಾ ಇಲ್ಲ, ವಿದೇಶಿ ಸಂಚಾರ ನಿಗಮ ಲಿಮಿಟೆಡ್ (V.S.N.L.) ಚೇರ್‌ಮ್ಯಾನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ B.K.Syngal ಅವರ ಪ್ರಕಾರ, ನಮ್ಮ ದೇಶವು

Fax, Data Service ಇತ್ಯಾದಿಗಳು ವಿಶೇಷ ಆಕರ್ಷಣೆ ಪಡೆದಿವೆ.

ಜೆ.ಟಿ.ಎಂ. ಸೇವಾ ಶುಲ್ಕ

ಗ್ರಾಹಕರು ತಾವು ಬಳಸುವ ಅವಧಿಯನ್ನು ಅವಲಂಬಿಸಿ ಶುಲ್ಕವನ್ನು ತೆರೆಬೇಕಾಗುತ್ತದೆ. ಇಲ್ಲಿ ಗ್ರಾಹಕರಿಗೆ ಬರುವ ಕರೆಗಳಿಗೆ ಮತ್ತು ಅವರು ಬೇರೆಯವರಿಗೆ ಮಾಡುವ ಕರೆಗಳಿಗೂ ಶುಲ್ಕವನ್ನು ವಿಧಿಸಲಾಗುತ್ತದೆ. ಆದಾಗ್ಯೂ, ವಿಧಿಸುವ ದರವೂ ದಿನದ ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆಯಾಗಿರುತ್ತದೆ. ಅತ್ಯಂತ ಹೆಚ್ಚು ಕಾರ್ಯನಿರತವಾಗಿರುವ ವೇಳೆಯಲ್ಲಿ ದರವೂ ಹೆಚ್ಚಾಗಿದ್ದರೆ, ಕಮ್ಮಿ ಕಾರ್ಯನಿರತವಾಗಿರುವ ವೇಳೆಯಲ್ಲಿ ದರವೂ ಕಮ್ಮಿಯಾಗಿರುವುದು.

J.T.M. EASY Mobile

ಇಲ್ಲಿ ನೀವು ಕೇವಲ ೩೦೦೦ ರೂ. ಅಥವಾ ೧೫೦೦ ರೂಪಾಯಿಗಳನ್ನು ತೆತ್ತು ಮೊಬೈಲ್ ಕನೆಕ್ಷನ್ ಹೊಂದುವುದು ಸಾಧ್ಯ. ಇದಕ್ಕಾಗಿ ನಿಮಗೆ ಮೊದಲೇ ಪಾವತಿಸಿದ SIM Cardನ್ನು ಕಂಪನಿಯವರು ನೀಡುತ್ತಾರೆ. ಇದನ್ನು ಬಳಕೆಯ ಅವಧಿ ಮುಗಿದ ನಂತರ ಮತ್ತೊಮ್ಮೆ ನಿಗದಿತ ಶುಲ್ಕ ಸಲ್ಲಿಸಿ ಬಳಸಲು ಸಾಧ್ಯವಿದೆ.


ಜೆ.ಟಿ.ಎಂ. ಅವರ ಈ ವಿಶೇಷ ಪ್ಯಾಕೇಜ್ ವೈಶಿಷ್ಟ್ಯಗಳೆಂದರೆ

- ಡಿಪಾಜಿಟ್ ಕಟ್ಟಬೇಕಾಗಿಲ್ಲ
- ಪ್ರತಿ ತಿಂಗಳ ಬಿಲ್ ಪಾವತಿಸುವ ಕಷ್ಟವಿಲ್ಲ.
- ಪೇಪರ್ ಕೆಲಸದ ಅವಶ್ಯಕತೆ ಇಲ್ಲ. ದುಡ್ಡು ನೀಡಿ ಫೋನ್ ಸಂಪರ್ಕ ಪಡೆಯಿರಿ!

ಇನ್ನು ಕೆಲವೇ ಕೆಲವು ವರ್ಷಗಳಲ್ಲಿ ಸಂಪರ್ಕ ಕ್ಷೇತ್ರದಲ್ಲಿ ದಾಪುಗಾಲು ಇಕ್ಕಲಿದೆ. ಉದಾರವಾಗುತ್ತಿರುವ ಆರ್ಥಿಕ ನೀತಿ, ಸಡಿಲವಾಗುತ್ತಿರುವ ಪರ್ಮಿಟ್ ರಾಜ್ಯ, ಹೆಚ್ಚುತ್ತಿರುವ ವಾಣಿಜ್ಯ ವಹಿವಾಟು, ಸಂಪರ್ಕ ಕ್ಷೇತ್ರವನ್ನು ಹೆಚ್ಚೆಚ್ಚು ಜನರ ಬಳಿಗೆ ಕೊಂಡೊಯ್ಯಲಿದೆ. ಸರ್ಕಾರದ ಏಕಾಧಿಪತ್ಯ ಕೊನೆಗೊಂಡು ಹಲವಾರು ಖಾಸಗಿ ಕಂಪನಿಗಳು ಸಂಪರ್ಕ ಕ್ಷೇತ್ರವನ್ನು ಪ್ರವೇಶಿಸಿರುವ ಫಲ ಸ್ವರೂಪ ಸೇವೆಗಳೂ ಸುಧಾರಣೆಯಾಗಿ ಶುಲ್ಕಗಳಲ್ಲೂ ಇಳಿಮುಖ ಕಂಡುಬರುವುದು ನಿಶ್ಚಿತ. ಮಾರುಕಟ್ಟೆಯ ತೀವ್ರ ಪೈಪೋಟಿ ಇದಕ್ಕೆ ಕಾರಣವಾಗುವುದು ಎನ್ನುವುದು ದಿಟ.

ಹಾಗಾದಾಗ ಹಳ್ಳಿಯ ಬೋರನೂ ಪಟ್ಟಣದ ವಾಣಿಜ್ಯರಂಗದಲ್ಲಿ ತನ್ನ ಸರಕಿಗೆ ಒಳ್ಳೆಯ ಬೆಲೆ ಪಡೆಯಬಲ್ಲ. ಅಷ್ಟೇ ಅಲ್ಲದೆ ತನ್ನ ಹಳ್ಳಿಯನ್ನು

ಪೇಜರ್ ಪೇಜರ್ ಪೇಜರ್



ತೊರೆಯದೆಯೇ ವಿಶ್ವದೊಂದಿಗೆ ಸಂಪರ್ಕ ಹೊಂದಿರಲು ಸಾಧ್ಯವಾಗುವುದು.

ಆ ದಿನಗಳು ಬೇಗ ಬರಲಿ ಎಂದು ಹಾರೈಸೋಣ.

ಮೊಬೈಲ್ ಫೋನ್

ಮೊಬೈಲ್ ಫೋನ್, ಹೆಸರೇ ಸೂಚಿಸುವಂತೆ ನೀವು ಎಲ್ಲಿಗೆ ಬೇಕೆಂದರೆ ಅಲ್ಲಿಗೆ, ಯಾವಾಗ ಬೇಕೆಂದರೆ ಆವಾಗ, ನಿಮ್ಮೊಂದಿಗೆ ಕೊಂಡೊಯ್ಯಬಹುದಾದ ಸಂಚಾರಿ ಫೋನ್.

ಪೇಜರ್ ಪೇಜರ್

'ನಿಮ್ಮೊಂದಿಗೆ ಸದಾ' ಎನ್ನುವುದು ಪೇಜಿಂಗ್ ಸಂಪರ್ಕ ಜಾಲದ ಮೂಲ ಮಂತ್ರ. ಇದು ನಿಜಕ್ಕೂ ಸತ್ಯ. ಟೊಂಕದಲ್ಲಿ 'ಬಿಪ್ ಬಿಪ್' ಎಂದು ಸದ್ದು ಮಾಡುತ್ತಾ ಅಕ್ಕ ಪಕ್ಕದವರ ಗಮನ ಸೆಳೆಯುವ ಪೇಜರ್‌ಗಳು ಇಂದು ಸರ್ವೇಸಾಮಾನ್ಯ.

ಏನೀ ಪೇಜರ್‌ಗಳು

'ಪೇಜರ್'ಗಳು ಬೆಂಕಿ ಪೊಟ್ಟಣಕ್ಕಿಂತ ತುಸು ದೊಡ್ಡದಾದ ಸಂಪರ್ಕ ಉಪಕರಣಗಳು. ಇವುಗಳು ತಂತಿ ರಹಿತವಾಗೆ 'ಏಕ ಮುಖವಾಗಿ ಹರಿಯುವ ಸಂದೇಶಗಳನ್ನು' ಪಡೆದುಕೊಂಡು ತೆರೆಯ ಮೇಲೆ ಅವುಗಳನ್ನು ಮೂಡಿಸುತ್ತವೆ. ಇವು ಸಂಖ್ಯೆಗಳಲ್ಲೂ (numeric) ಅಥವಾ ಅಕ್ಷರಗಳಲ್ಲಿ (Alpha) ಇಲ್ಲವೇ ಸಂಖ್ಯೆ ಮತ್ತು ಅಕ್ಷರ ಎರಡು ರೂಪದಲ್ಲಿ ಸಂದೇಶಗಳನ್ನು ಮೂಡಿಸುತ್ತವೆ. 'ಪೇಜರ್' ಹೊಂದಿರುವ ವ್ಯಕ್ತಿ ಪೇಜಿಂಗ್ ಸೇವೆ ನೀಡುವ ಜಾಲದೊಂದಿಗೆ ಸದಾ ಸಂಪರ್ಕದಲ್ಲಿರುವುದರಿಂದ ಆತ ಸದಾ ಸಂದೇಶಗಳನ್ನು ಪಡೆಯಲು ಶಕ್ಯನಾಗಿರುತ್ತಾನೆ.

ಪೇಜಿಂಗ್ ಸೇವೆಯ ಕಾರ್ಯವೈಖರಿ ಬಗ್ಗೆ ಹೇಳುವುದಾದರೆ ಇದೊಂದು ತಂತಿ ರಹಿತ ವ್ಯವಸ್ಥೆಯಾಗಿದ್ದು, ರೇಡಿಯೋ ತರಂಗಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸುವುದರಿಂದ, ರೇಡಿಯೋ ತರಂಗಗಳು ತಲುಪುವ ಸ್ಥಳಗಳಿಗೆಲ್ಲ (ಪ್ರಸಾರ ವ್ಯಾಪ್ತಿಯ) ಸಂದೇಶಗಳೂ ತಲುಪುತ್ತವೆ. ಹೀಗಾಗಿ ನೀವು ಕಾರಿನಲ್ಲಿದ್ದರೂ, ಬಾರಿನಲ್ಲಿದ್ದರೂ ಇಲ್ಲವೇ ಅಡುಗೆ ಮನೆಯಲ್ಲಿದ್ದರೂ ಸಂದೇಶಗಳು ತಲುಪುತ್ತವೆ. ಆದರೆ ನೀವು 'ಸಂದೇಶ' ಕಳುಹಿಸಿದ ವ್ಯಕ್ತಿಗೆ ಪುನಃ ಮರು ಸಂದೇಶವನ್ನು ಕಳುಹಿಸಲು ಸಾಧ್ಯವಿಲ್ಲದ ಕಾರಣ ಇದುಕ್ಕೆ 'ಏಕಮುಖ ಸಂಪರ್ಕ ವ್ಯವಸ್ಥೆ' ಆದರೂ, ಈ ಸಂಪರ್ಕ ವ್ಯವಸ್ಥೆ ಹಲವಾರು ಅನುಕೂಲತೆ ಮತ್ತು ಸೌಲಭ್ಯಗಳನ್ನು ಗ್ರಾಹಕರಿಗೆ ಒದಗಿಸುವಲ್ಲಿ ಸಶಕ್ತವಾಗಿದೆ.

ಪೇಜಿಂಗ್ ಸರ್ವಿಸ್‌ನ ಗ್ರಾಹಕರನ್ನು ತಲುಪುವುದು ಸುಲಭ. ಇದಕ್ಕಾಗಿ ನೀವು ಮಾಡಬೇಕಾದ್ದು ಇಷ್ಟೇ. ಪೇಜಿಂಗ್ ಸರ್ವೀಸ್ ನೀಡುವ ಸಂಪರ್ಕ ಜಾಲವನ್ನು ಸಂಪರ್ಕಿಸಿ. ನೀವು ಸಂಪರ್ಕಿಸಲು ಇಚ್ಚಿಸುವ ವ್ಯಕ್ತಿಯ ಪೇಜರ್ ನಂಬರ್ ನೀಡಿ ನಂತರ ನೀವು ತಿಳಿಸಲು ಇಚ್ಚಿಸುವ ಸಂದೇಶ ಹೇಳಿ. ಆ ಕೂಡಲೇ ತಕ್ಷಣಕ್ಕೆ ಈ ಸಂದೇಶವು ಪೇಜರ್‌ನ ಪರದೆಯ ಮೇಲೆ ಮೂಡುವುದು.

ಪರದೆಯ ಮೇಲೆ ಸಂದೇಶ ಮೂಡಿದೆ ಎಂದು ಅರುಹಲು 'ಬಿಪ್ ಬಿಪ್' ಸದ್ದು ಪೇಜರ್‌ನಿಂದ ಹೊರಟು ಗಮನ ಸೆಳೆಯುವುದು.

ಇದರ ವಿಶೇಷತೆ ಎಂದರೆ ಇಲ್ಲಿ ಸಂಪರ್ಕಸಾಧಿಸಲು ತಂತಿಯ ಅವಶ್ಯಕತೆ ಇಲ್ಲ. ನಿಮ್ಮ ಕೈಯಲ್ಲಿರುವ ಪುಟ್ಟ ಫೋನ್‌ನ ಗುಂಡಿ ಒತ್ತಿ ಕ್ಷಣ ಮಾತ್ರದಲ್ಲಿ ಇಡೀ ವಿಶ್ವದೊಂದಿಗೆ ಸಂಪರ್ಕ ಸಾಧಿಸುವಿರಿ. ಇದು ಸಾಧ್ಯವಾಗುವುದು ರೇಡಿಯೋ ತರಂಗಗಳ ಮೂಲಕ. ನಿಮ್ಮ ಕೈಯಲ್ಲಿರುವ ಸೆಲ್ಯುಲರ್ ಫೋನ್‌ನಿಂದ ಹೊರಟ ನಿಮ್ಮ ಧ್ವನಿ ರೇಡಿಯೋ ತರಂಗಗಳಾಗಿ, ಸಂಪರ್ಕ ಜಾಲವನ್ನು ತಲುಪುತ್ತದೆ. ಈ ಸಂಪರ್ಕ ಜಾಲ ಹಲವಾರು ಸೂಪರ್ ಕಂಪ್ಯೂಟರ್‌ಗಳ ಸಂಕೀರ್ಣ ಜಾಲ. ಇಲ್ಲಿಂದ ನಿಮ್ಮ ಧ್ವನಿಯು ಅದು ತಲುಪಬೇಕಾದ ಸ್ಥಳಕ್ಕೆ ಟ್ರಾನ್ಸ್‌ಮೀಟರ್‌ಗಳ ಮೂಲಕ ಪ್ರಸರಿಸಲ್ಪಡುತ್ತದೆ. ಪ್ರತಿಯೊಂದು ಟ್ರಾನ್ಸ್‌ಮೀಟರ್ ತನ್ನದೇ ಆದ ಕಾರ್ಯ ಕ್ಷೇತ್ರವನ್ನು ಹೊಂದಿದೆ. ಅಷ್ಟೇ ಅಲ್ಲದೆ ಇತರ ಟ್ರಾನ್ಸ್‌ಮೀಟರ್‌ಗಳ ಜೊತೆಯು ಸಂಪರ್ಕ ಹೊಂದಿರುತ್ತದೆ. ಹೀಗಾಗಿ ನೀವು ಯಾವ ಸ್ಥಳದಲ್ಲಿದ್ದರೂ ಕಾರಿನಲ್ಲಿ ಚಲಿಸುತ್ತಿದ್ದರೂ ಇನ್ನೊಬ್ಬರೊಂದಿಗೆ ಸಂಪರ್ಕಿಸುವುದು ಸಾಧ್ಯವಾಗುತ್ತದೆ. ಇದೇ ರೀತಿ ಇನ್ನೊಬ್ಬರು ಸಹ ನಿಮ್ಮೊಂದಿಗೆ ಸದಾ ಸಂಪರ್ಕದಲ್ಲಿರಲು ಸಾಧ್ಯವಾಗುತ್ತದೆ. ಅದ್ದರಿಂದಲೇ ಇದಕ್ಕೆ Mobile Phone ಎಂಬ ಸಾರ್ಥಕ ಹೆಸರು. (ಚಿತ್ರ ನೋಡಿ). ಆದರೆ ಈ ಸಂಪರ್ಕ ಜಾಲವನ್ನು ಸ್ಥಾಪಿಸಿ ನಡೆಸಿಕೊಂಡು ಬರುವುದು ದುಬಾರಿ ಕೆಲಸ. ಹೀಗಾಗಿ ಈ ಸಂಪರ್ಕ ಜಾಲದ ಸೇವೆ ಪಡೆಯಲು ಗ್ರಾಹಕರು ಎರಡು ಕಡೆಯ ಸಂಪರ್ಕಕ್ಕೂ ಶುಲ್ಕ ತೆರಬೇಕಾಗುವುದು.

ಮೊಬೈಲ್ ಫೋನ್ ಅನ್ನು ಸಜೀವಗೊಳಿಸಲು ಬೇಕಾಗುವ SIM Cardನ್ನು ನೆಟ್‌ವರ್ಕ್ ಕಂಪನಿಗಳು ಬಿಡುಗಡೆ ಮಾಡುತ್ತವೆ. ಇವು ನೋಡಲು Credit cardಗಳಂತೆ ಇದ್ದು ಬಳಕೆಗೆ ತಯಾರಾಗಿರುತ್ತವೆ. ಇವುಗಳಲ್ಲಿ ಮೈಕ್ರೋಚಿಪ್‌ಗಳಿದ್ದು ನಿಮ್ಮ ಮೊಬೈಲ್ ಫೋನ್‌ನ ನಂಬರ್ ಮತ್ತು ನಿಮ್ಮ ಖಾತೆಯ ಎಲ್ಲಾ ವಿವರಗಳೂ ಇದರಲ್ಲಿ ಮುದ್ರಿಸಲ್ಪಟ್ಟಿರುತ್ತವೆ. ಈ SIM Cardನ್ನು ಮೊಬೈಲ್ ಫೋನ್‌ನೊಳಗೆ ಸೇರಿಸಿದೊಡನೆಯೇ ಇಡೀ ವಿಶ್ವವೇ ನಿಮ್ಮ ಬೆರಳಿನ ಅಡಿ ಬಂದು ಬಿಡುತ್ತದೆ.

ನೀವೂ ಮೊಬೈಲ್ ಫೋನ್ ಹೊಂದ ಬಯಸಿದ್ದೀರಾ?

ಹಾಗಾದರೆ, ನೀವು ಮಾಡಬೇಕಾದ್ದು ಇಷ್ಟೇ. ಮೊಬೈಲ್ ಫೋನ್ ಸಂಪರ್ಕ ಜಾಲವನ್ನು ಒದಗಿಸುವ ಸಂಸ್ಥೆಯ ಶೋರೂಂಗೆ ಹೋಗಿ ಅಲ್ಲಿ ನಿಮಗೆ SIM Card ಸಿಗುತ್ತದೆ. Credit

Cardನಂತೆ ತೆಳ್ಳಗಿರುವ ಈ ಕಾರ್ಡು ಮೊಬೈಲ್ ಫೋನ್ ಜಾಲದ Passport ಇದ್ದಂತೆ. ಇದರಲ್ಲಿರುವ Micro chipನಲ್ಲಿ ನಿಮ್ಮ Phone Number ಹಾಗೂ ನಿಮ್ಮ ಫೋನ್ ಖಾತೆಯ ಎಲ್ಲಾ ವಿವರಗಳು ಅಡಕವಾಗಿರುತ್ತವೆ. ಈ SIM Cardನ್ನು ಮೊಬೈಲ್ ಫೋನ್ Handsetನಲ್ಲಿ ತೂರಿಸಿ ಬಿಟ್ಟರಾಯಿತು. ಇಡೀ ವಿಶ್ವವೇ ನಿಮ್ಮ ಬೆರಳಿನ ತುದಿಯಲ್ಲಿರುತ್ತದೆ!

ಈ SIM Card, ನಿಮ್ಮ Handsetಅನ್ನು ಸಜೀವಗೊಳಿಸುವುದು. ಹೀಗಾಗಿ ಕ್ಷಣ ಮಾತ್ರದಲ್ಲಿಯೇ ಸಂಪರ್ಕಕ್ಕೆ ಸಿದ್ಧವಾಗುತ್ತದೆ. ಇಂದು ಮಾರುಕಟ್ಟೆಯಲ್ಲಿ Motorola, Ericson ಹೀಗೆ ಮುಂತಾದ ಪ್ರಸಿದ್ಧ ಕಂಪನಿಗಳು ತಯಾರಿಸುವ Handsetಗಳು ಲಭ್ಯ. SIM Cardನಿಂದ ಸಜೀವ ಗೊಂಡ Handsetನಿಂದ ನೀವು ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕರೆಗಳನ್ನು ಮಾಡಬಹುದು.

ಇದೇ ಅಲ್ಲದೆ ಮೊಬೈಲ್ ಫೋನ್‌ಗಳಲ್ಲಿ ಇನ್ನು ಹಲವಾರು ಅನುಕೂಲಗಳು, ಸೌಲಭ್ಯಗಳೂ ಇವೆ. ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಇಲ್ಲಿ ಗಮನಿಸೋಣ.

Caller Identity : ಇಲ್ಲಿ ಕರೆ ಮಾಡಿರುವ ವ್ಯಕ್ತಿಯ ಫೋನ್ ನಂಬರು Handsetನ ಪರದೆಯ ಮೇಲೆ ಮೂಡುವುದು. ಹೀಗಾಗಿ ನಿಮಗೆ ಬೇಡವಾದ ಕರೆಯಾದಲ್ಲಿ ಅದನ್ನು ನಿರ್ಲಕ್ಷಿಸಲು ಅನುಕೂಲವಾಗುತ್ತದೆ. ಹಾಗಂತ ನಿಮ್ಮ ಹೆಂಡತಿಯ ಮತ್ತು ಅವಳ ಅಣ್ಣ ತಮ್ಮಂದಿರ ಕರೆಗಳನ್ನು ಅಲಕ್ಷಿಸಬೇಡಿ!

Phone book : ಇದು ಒಂದು ರೀತಿಯಲ್ಲಿ ಮಿನಿ ಟೆಲಿಫೋನ್ ಡೈರೆಕ್ಟರಿ ಇದ್ದಂತೆ. ಈ ಸೌಲಭ್ಯದಿಂದಾಗಿ ೬೪ ಫೋನ್ ನಂಬರ್‌ಗಳನ್ನು ಸಂಗ್ರಹಿಸಿಟ್ಟುಕೊಳ್ಳಬಹುದು.

Answering Service : ನೀವು ಲೈನ್‌ನಲ್ಲಿ ಬಿಜಿಯಾಗಿರುವ, ಬರುವ ಕರೆಗಳನ್ನು ಉತ್ತರಿಸಿ ಬಂದಿರುವ ಸಂದೇಶಗಳನ್ನು ನಿಮಗೆ ಆನಂತರ ತಲುಪಿಸುವ ವ್ಯವಸ್ಥೆ ಇದು. Internet ಸಂಪರ್ಕ ಒದಗಿಸುವ Mobile Phoneಗಳೂ ಮಾರುಕಟ್ಟೆಗೆ ಬಂದಿವೆ.

ಇದೇ ಅಲ್ಲದೆ Call divert, call barring ಮುಂತಾದ ಸೌಲಭ್ಯಗಳನ್ನು ಮೊಬೈಲ್ ಫೋನ್ ಗಳಿಂದ ಪಡೆಯಬಹುದು.

ಇಂಟರ್‌ನೆಟ್

ನಿಮಗೆ ಈಗಾಗಲೇ ತಿಳಿದಂತೆ ಸಂಪರ್ಕ ಮತ್ತು ಮಾಹಿತಿಯ ಹೆದ್ದಾರಿ ಈ ಇಂಟರ್‌ನೆಟ್ ಎಂಬ ಸಂಪರ್ಕ ಜಾಲ.

Internet ಜಾಲದಲ್ಲಿ ನೀವೂ ಪಾಲ್ಗೊಳ್ಳಲು ಇಷ್ಟ ಪಡುತ್ತೀರಾ? ಹಾಗಾದರೆ ನಿಮ್ಮ ಮನೆಯಲ್ಲಿ ಅಥವಾ Officeನಲ್ಲಿ ಕಂಪ್ಯೂಟರ್ ಮತ್ತು ಟೆಲಿಫೋನ್ ಹೊಂದಿರಬೇಕಾದ್ದು ಅವಶ್ಯ. ದೂರಸಂಪರ್ಕ ಇಲಾಖೆಯಲ್ಲಿ ಈ ಕುರಿತು ಹೆಚ್ಚಿನ ಮಾಹಿತಿ ನಿಮಗೆ ಲಭ್ಯ.

ನೇರವಾಗಿ Internet ಜಾಲದೊಂದಿಗೆ ಸಂಪರ್ಕ ಸಾಧಿಸಲು ನಮ್ಮ ದೇಶದಲ್ಲಿ V.S.N.L. (ವಿದೇಶ ಸಂಚಾರ ನಿಗಮ ಲಿಮಿಟೆಡ್) ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತಿದೆ. ಈ ನಿಗಮದ ಜಾಲವನ್ನು GIAS (Gate way internet Access Service) ಎಂದು ಕರೆಯಲಾಗಿದೆ. V.S.N.L. ಸಂಸ್ಥೆಯ GIASನೊಂದಿಗೆ ನೇರ ಸಂಪರ್ಕ ಹೊಂದಿರುವವರು Internet ಜಾಲಕ್ಕೆ ಸೇರಿಕೊಂಡು ಬಿಡುತ್ತಾರೆ.

ಈ ಜಾಲಕ್ಕೆ ಸಂಪರ್ಕ ಪಡೆದಿರುವ ಗ್ರಾಹಕರು ಸುದ್ದಿ, Mail, Gopher ಮತ್ತು Web servicesಗಳನ್ನು ಪಡೆಯಲು ಅರ್ಹರಾಗುತ್ತಾರೆ.



ಉಗಾದಿ ಹನಿಗಳು



ವಿಶೇಷ ಕೊಡುಗೆ


ನಲ್ಲೆ
ಈ ವರ್ಷದ ಯುಗಾದಿಗೆ
ನನ್ನ ವಿಶೇಷ ಕೊಡುಗೆ;
ಇಗೋ-
ನಿನ್ನ ಅಂದದ ಕೊರಳಿಗೆ
ನನ್ನ ಮುತ್ತಿನ ತೊಡುಗೆ!

ನೀರೆ!

ನನ್ನ ಮನದ
ಅಂಗಳದಲ್ಲಿ ಹಸಿರು
ಸೀರೆಯುಟ್ಟು ನಿಂತ ನೀರೆ;
ಇಬ್ಬರೂ ಸೇರಿ
ಬೇವು ಬೆಲ್ಲ ಸವಿಯೋಣ
ಸಂಕೋಚ ಬಿಟ್ಟು
ಮನೆಯೊಳಗೆ ಬಾರೆ!

ಕೇಳಿದ್ದು

ಆಕೆ
ಯುಗಾದಿಗೆ
ತನ್ನ ಗಂಡನಲ್ಲಿ
ಕೇಳಿರಲಿಲ್ಲ ಹೊಸ ಬಟ್ಟೆ;
ಕೇಳಿದ್ದಾಳೆ-
ಯಾವಾಗ
ತುಂಬಿಸುತ್ತೀರೆಂದು ಹೊಟ್ಟೆ!



ಅಸ್ತ್ರ

ಪ್ರತಿ ವರ್ಷ
ಹೊಸ ಸಾಲ ಪಡೆಯಲು
ಈ ಯುಗಾದಿ ನನಗೊಂದು ಅಸ್ತ್ರ;
ಸಾಲ ತೀರಿಸುವಾಗ
ಮಾತ್ರ-ಕಣ್ಣೀರು ಭರಿಸಿ
ಕೈಗೆ ಕೊಡಿಸುತ್ತದೆ ಕರವಸ್ತ್ರ!

ಕಜ್ಜಾಯ-ಹೋಳಿಗೆ

ನಲ್ಲೆ
ನಮಗೆ
ಗತಿಯಿಲ್ಲ
ಒಂದ್ಹೊತ್ತಿನ ಕೂಳಿಗೆ;
ಮತ್ಯಾಕೆ
ಯುಗಾದಿಗೆ ಕಜ್ಜಾಯ-ಹೋಳಿಗೆ?

ಗೋಪಾಲಕೃಷ್ಣ ವಂಡ್ಸೆ





ಕಲ್ಲರಳಿ ಕಲೆಯಾದಾಗ....

ಗುಲ್ಬರ್ಗಾದ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯು ಸೃಜನಶೀಲ ಕಲಾ ಚಟುವಟಿಕೆಗಳ ಕೇಂದ್ರ. ಈ ಕೇಂದ್ರದಲ್ಲಿ ಅಪರೂಪದ ಪೇಂಟಿಂಗ್‌ಗಳ ಮತ್ತು ಪ್ರಾಚೀನ ವಸ್ತುಗಳ (ಎಂಟಿಕ್ಸ್) ಸಂಗ್ರಹಾಲಯವೂ ಇದೆ. ಜತೆಗೆ ಈಗ ಅಲ್ಲಿ ನೋಡತಕ್ಕಂಥ ಮತ್ತೊಂದು ಸಂಗತಿ ಇದೆ. ಅದು ಶಿಲ್ಪ ಕಲಾಕೃತಿಗಳ (Sculptures) ಸಂಗ್ರಹ.

ಈ ಶಿಲ್ಪ ಕಲಾಕೃತಿಗಳ ವಿಶೇಷವೆಂದರೆ ವಿದೇಶಗಳ ಹಲವಾರು ಪ್ರಸಿದ್ಧ ಶಿಲ್ಪಿಗಳು ಇತ್ತೀಚೆಗೆ ಈ ಸಂಸ್ಥೆಗೆ ಆಗಮಿಸಿ ತಿಂಗಳುಗಟ್ಟಲೇ ಅಲ್ಲಿಯೇ ವಾಸ್ತವ್ಯ ಮಾಡಿ ಅಪರೂಪದ ಶಿಲ್ಪಗಳನ್ನು ನಿರ್ಮಿಸಿದರು.

ಈ ವಿಶಿಷ್ಟ ಶಿಲ್ಪಕಲಾ ಶಿಬಿರದಲ್ಲಿ ಸಿಂಗಪುರದ ಮಿಸ್ ಹನ್‌ಸಾಯಿ ಪೊರ್ (Miss Han Sai Por), ಆಸ್ಟ್ರಿಯಾದ ಮಿಸ್ ಜಾನ್ ಎಲಿಜಬೆತ್ (Miss Jhan Elizbeth) ಜರ್ಮನಿಯ ಅನುಷ್ಕಾ (Miss Anuschka) ಮುಂತಾದ ಪ್ರಸಿದ್ಧ ಕಲಾವಿದರು ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯಲ್ಲಿದ್ದುಕೊಂಡು ಕಡೆದ ಶಿಲ್ಪಗಳು ಫೈನ್ ಆರ್ಟ್ಸ್ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೊಸ ಹೊಳಹು ನೀಡಿದವು.

ಈ ಕಲಾವಿದರ ಜತೆಗೆ ಆಗಮಿಸಿದ್ದ ಸಿಂಗಪುರದ ವಿನ್‌ಸೆಂಟ್ ಲಿಯೋ ಕಿಂಗ್ ಯಾರ್ಮ್ ಎಂಬ ನುರಿತ ಕಲಾವಿದ ಸದಾ ಪ್ರಯೋಗಶೀಲ. ಈತನ ಪೇಂಟಿಂಗ್ ನೋಡಿದವರಿಗೆ ಅದ್ಭುತ ಅನುಭವ ಸಹಜ. ಕಾರಣ ಈತ ತನ್ನ ಪೇಂಟಿಂಗ್‌ಗಳಿಗೆ ಬಳಸಿದ್ದು ಯಾವುದೇ ಬಣ್ಣಗಳನ್ನಲ್ಲ. ಆದರೆ ಆತ ಬಳಸಿದ್ದು ಗುಲ್ಬರ್ಗಾದ ರಸ್ತೆ ಪಕ್ಕದಲ್ಲಿಯೇ ಧಾರಾಳವಾಗಿ ಸಿಗುವ ಎಮ್ಮೆ ಸಗಣಿಯನ್ನು. ಈತ ಎಮ್ಮೆ ಸಗಣಿಯನ್ನೇ ಭಕ್ತಿಯಿಂದ ಆಯ್ದು, ಅದನ್ನು ಹದಗೊಳಿಸಿ ಬೋರ್ಡಿನ ಮೇಲೆ ಬಿಡಿಸಿದಾಗ ಅದೊಂದು ಅದ್ಭುತ ಪೇಂಟಿಂಗ್ ಆಯಿತು. ಕಲಾವಿದನ ಕಲ್ಪನೆಗೆ ಎಷ್ಟೊಂದು ಆಯಾಮಗಳಿರುತ್ತವೆ ಎಂಬುದಕ್ಕೆ ಇದೊಂದು ಸೂಕ್ತ ಉದಾಹರಣೆಯಾಯಿತು.

ಈ ಕಲಾವಿದರ ಜತೆಯಲ್ಲೇ ಕಲಾವಿದರಾದ ವಿ.ಜಿ.ಅಂದಾನಿ, ಶೇಷರಾವ್ ಬಿರಾದಾರ್, ವಿರೇಂದ್ರ ಷಾಹ, ಅನೀಲ್ ಬಿಹಾರಿ, ನಿಜಲಿಂಗಪ್ಪ ಹಳ್ಳಿ, ಪ್ರಕಾಶ್ ಗಡಕರ್, ದೆಹಲಿಯ ಪುಷ್ಪಾ ಬೇತಾಳ್, ಕೃಪಲಾ, ಭೂಪಾಲದ ಸಚೇಂದ್ರ ನಾಗದೇವ್, ಅಹಮದಾಬಾದಿನ ಟಿ.ಎಸ್.ನಳಿನಿ ಮುಂತಾದವರು ವಿವಿಧ ಶೈಲಿಯ ಕಲಾಕೃತಿ (Art works)ಗಳಿಂದ ಬೆರಗುಗೊಳಿಸಿದರು.

ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯ ಆವರಣದಲ್ಲಿ ನಿರ್ಮಿಸಲ್ಪಟ್ಟ ಶಿಲ್ಪ ಕಲಾಕೃತಿಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವ ದಟ್ಟವಾಗಿ ಬೀರಿರುವುದು

ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯ ಮುಖ್ಯಸ್ಥರಾದ ಕಲಾವಿದ ವಿ.ಜಿ. ಅಂದಾನಿ



ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಕಲಾವಿದೆ ಮಿಸ್ ಎಲಿಜಬೆತ್ ನಿರ್ಮಿಸಿದ ಕಲಾಕೃತಿಯಲ್ಲಿ ಭಾರತೀಯ ಸಂಪ್ರದಾಯ, ಭಕ್ತಿ ಭಾವಗಳು ಪ್ರತಿಬಿಂಬಗೊಂಡಿವೆ. ಸುರಪುರದ ಪಿಂಕ್ ಗ್ರಾನೈಟಿನಲ್ಲಿ ಈಕೆ ನಿರ್ಮಿಸಿದ ಕಲಾಕೃತಿಯಲ್ಲಿ ಕುಂಕುಮವನ್ನು ಪ್ರತಿಬಿಂಬಿಸಲು ಸ್ವಲ್ಪ ಪ್ರಮಾಣದ ಬಂಗಾರವನ್ನು (Gold) ಬಳಸಿದ್ದು ಆಕೆಯ ಪ್ರಯೋಗಶೀಲತೆಗೊಂದು ಸೂಕ್ತ ಉದಾಹರಣೆ.

ದೇಶ ವಿದೇಶಗಳ ಅಪರೂಪದ ಕಲಾವಿದರನ್ನು ಗುಲ್ಬರ್ಗಾದಂಥ ಹಿಂದುಳಿದ ಪ್ರದೇಶಕ್ಕೆ ಕರೆಸಿ ಅವರಿಂದ ಕಲಾದರ್ಶನ ಮಾಡಿಸಿ ಪ್ರಶಂಸೆಗೆ ಕಾರಣರಾದವರು ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆ ಮುಖ್ಯಸ್ಥರಾದ ಕಲಾವಿದ ಪ್ರೊ. ವಿ.ಜಿ. ಅಂದಾನಿಯವರು.

ಈಗ ಈ ಕಲಾವಿದರ ಅಪರೂಪದ ಕಲಾಕೃತಿಗಳೆಲ್ಲ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯ ಆವರಣದಲ್ಲಿ ಸಾರ್ವಜನಿಕರಿಗೆ ನೋಡಸಿಗುತ್ತಿವೆ. ಆಗಾಗ ಇದೇ ರೀತಿಯ ವಿವಿಧ ರಾಜ್ಯಗಳ ಮತ್ತು ವಿವಿಧ ದೇಶಗಳ ಕಲಾವಿದರನ್ನು ಶಿಲ್ಪಿಗಳನ್ನು ಗುಲ್ಬರ್ಗಾಕ್ಕೆ ಆಮಂತ್ರಿಸಿ ಅಪರೂಪದ ಕಲಾ ಸಂಗ್ರಹಾಲಯವೊಂದನ್ನು ರೂಪಿಸುವ ವಿಶಿಷ್ಟ ಯೋಜನೆಯೊಂದನ್ನು ಅಂದಾನಿ ಅವರು ಹಾಕಿಕೊಂಡಿದ್ದಾರೆ. ಅಂದಾನಿ ಅವರ ಈ ಯೋಜನೆ ಪೂರ್ಣಗೊಂಡರೆ ಅದೊಂದು ವಿಶಿಷ್ಟ ಸಂಗ್ರಹಾಲಯವಾಗುವುದರಲ್ಲಿ ಸಂದೇಹವೇ ಇಲ್ಲ.

ಮಮತಾ ಹೆಗಡೆ





ಲಲಿತ ಪ್ರಬಂಧ

ಆಯುಷ್ಕರ್ಮ ಶಾಲೆಯಲ್ಲಿ

ಈರಪ್ಪ ಎಂ. ಕಂಬಳಿ

ನಮ್ಮ ರಾಜಧಾನಿ ಬೆಂಗಳೂರಿನಲ್ಲಿ ವಿಪರೀತ ಇಂಗ್ಲಿಷ್ ವ್ಯಾಮೋಹದಿಂದಾಗಿ ಸಮೂಹ ಸನ್ನಿಗೊಳಗಾದವರಂತೆ ವರ್ತಿಸುವ ಪಾಲಕರನ್ನು ಸಲೀಸಾಗಿ ಹಿಡಿದು ಬೋಳಿಸಿ ದುಡ್ಡು ಮಾಡುವುದಕ್ಕೆ ಆಂಗ್ಲ ಮಾಧ್ಯಮ ಶಾಲೆ ತೆರೆಯುವ ದಂಧೆಗಿಂತ ಮಿಗಿಲಾದ ವ್ಯಾಪಾರ ಬೇರೊಂದಿಲ್ಲ. ಉದಾಹರಣೆಗೆ ಕಟ್ಟಾ ಪರಮಹಂಸರ ಅನುಯಾಯಿಯಾದ ನನಗೆ ಶ್ರೀಮಾತೆ ಶಾರದಾಮಣಿ ದೇವಿಯ ಹೆಸರಿನಲ್ಲಿ ಒಂದು ಆಂಗ್ಲ ಮಾಧ್ಯಮ ಶಾಲೆಯನ್ನು ತೆರೆಯಬೇಕೆಂಬ ಸಂಕಲ್ಪವಿದೆ ಅಂದುಕೊಳ್ಳಿರಿ. ಹಾಗೆಂದು ತದ್ವತ್ತಾಗಿ ಬೋರ್ಡು ಹಾಕಿದರೆ ಯಾವ ಗುಗ್ಗು ಕೂಡ ತಮ್ಮ ಪಿಳ್ಳೆಗಳನ್ನು ಇತ್ತ ಕಳಿಸುವುದಿಲ್ಲ. ಅದನ್ನೇ ಹೋಲಿ ಕ್ರಾಸ್, ಸೇಕ್ರೆಡ್ ಹಾರ್ಟ್ ನೆನಪಿಸುವಂತೆ 'ಶ್ರೀಮಾತೆ' ಯನ್ನೇ 'ಹೋಲಿ ಮದರ್' ಎಂದು ಹೆಸರಿಸಿದಾಗ ಯಾರೋ ಇಂಗ್ಲಿಷರಿಗೆ ಹುಟ್ಟಿದವರೇ ತೆಗೆದ ಶಾಲೆಯೆಂದು ಭ್ರಮಿಸಿದ ಬಕರಾಗಳು ಹಿಂದೆ ಮುಂದೆ ಯೋಚಿಸದೇ ನುಗ್ಗಲಾರಂಭಿಸುತ್ತವೆ. ಪಾಪ! 'ಪಶುವೇನ ಬಲ್ಲುದು ಹಸುರೆಂದರಸುವ ದಲ್ಲದೆ?' ಹೌದು ಸ್ವಾಮಿ, ಓದಿದ್ದು ಭಾರತೀಯ ವೈದ್ಯ ಪದ್ಧತಿಯ ಆಯುರ್ವೇದವೇ ಆಗಿರ ಬಹುದು. ಒಂದು ಇಂಗ್ಲಿಷ್ ಚುಚ್ಚುಮದ್ದು ಕೊಡದಿದ್ದವ ಅವನೆಂಥಾ ಡಾಕ್ಟರು? ಮನಸ್ಸಿ ನೊಳಗೆ ಮಡಿಪಂಚೆಯ ಧ್ಯಾನವೇ ಅಡಗಿರ ಬಹುದು. ಹೊರಗಡೆ ಬರ್ಮುಡಾ, ಜೀನ್ಸ್‌ಗಳೇ ಆಗಬೇಕು. ಅದೇ ನಮ್ಮ ವೈಚಾರಿಕ ಮನೋಭಾವಕ್ಕೆ ಹಿಡಿದ ಕುಷ್ಠ! ದಯವಿಟ್ಟು ವಾಚಕ ಮಹಾಶಯರು ಕ್ಷಮಿಸಬೇಕು. ತುಸು ವಿಷಯಾಂತರವಾಯಿತೇನೋ.

ನಾನು ಹೇಳಹೊರಟಿದ್ದು ಖಂಡಿತಾ ದುಡ್ಡು ಬೋಳಿಸುವ ಆಂಗ್ಲ ಶಾಲಾ ದಂಧೆಗೆ ಸಂಬಂಧಿಸಿ ದ್ದಲ್ಲ. ಅದಕ್ಕಿಂತಲೂ ಪ್ರಾಚೀನತಮವಾದ 'ಆಯುಷ್ಕರ್ಮ ಶಾಲೆ'ಗೆ ಸೇರಿದ್ದು. ಹಾಗೆಂದ ತಕ್ಷಣ ಅಮಾಯಕರು ಇದು ಯಾವುದೋ ಸಂಸ್ಕೃತಿ ಪಾಠಶಾಲೆಯಿರಬೇಕೆಂದು ತಪ್ಪಾಗಿ ಭಾವಿಸಬಹುದು. ನಮ್ಮ ಕರ್ಮ, ಏನಿದು ಆಯುಷ್ಕರ್ಮ? ಎಂದು ಹುಬ್ಬೇರಿಸಲೂ ಬಹುದು. ತಡೆಯಿರಿ, ಬಾಲ್ಯದಲ್ಲಿ ನಾನು ಬಹಳಷ್ಟು ಕಲಿತದ್ದು ಈ ಆಯುಷ್ಕರ್ಮ ಶಾಲೆಯಲ್ಲಿಯೇ ಎಂದು ಈಗಲೂ ನಾನು ಗರ್ವದಿಂದಲೇ ಹೇಳುತ್ತೇನೆ. (ರಾಷ್ಟ್ರೀಯ ಚಾನಲ್‌ನಲ್ಲಿ 'ಗರ್ವ' ಎಂದರೆ 'ಅಭಿಮಾನ' ಎಂದರ್ಥ. ವಾಚಕರು ನನ್ನ ಬಗೆಗೆ ತಪ್ಪು ಗ್ರಹಿಸಬಾರದಲ್ಲಾ ಎಂದು ಈ ಕಂಸಿನ ಸ್ಪಷ್ಟೀಕರಣ). ಆಂಗ್ಲ ಮಾಧ್ಯಮ ಶಾಲೆಗೂ ಆಯುಷ್ಕರ್ಮ ಶಾಲೆಗೂ ವೃಥಾ ತಳುಕು ಹಾಕಿ ಮೋಜು ನೋಡುವುದು ನನ್ನ ಹವ್ಯಾಸವಲ್ಲ ವಾದರೂ ಬೋಳಿಸುವ ಒಂದು ವಿಷಯದಲ್ಲಿ ಮಾತ್ರ ಎರಡಕ್ಕೂ ಸಾಮ್ಯವಿದೆ. ಅರ್ಥವಾಗಿ ರಬೇಕಲ್ಲ. ಒಂದು ಕಡೆ ತಲೆಯ ಮೇಲೆ ಕತ್ತರಿ ಆಡಿದರೆ, ಮತ್ತೊಂದು ಕಡೆ ನಿರಾಯಾಸವಾಗಿ ಕಿಸೆಗೆ ಕತ್ತರಿ ಬೀಳುತ್ತದೆ. ಅದೂ ನಿರಂತರವಾಗಿ!

ಈಗ 'ಆಯುಷ್ಕರ್ಮ' ಎಂದರೇನು ಎಂಬ



ಲಲಿತ ಪ್ರಬಂಧ

ಪರಿಭಾಷೆಯಿಂದಲೇ ಆರಂಭಿಸುತ್ತೇನೆ, ಬನ್ನಿರಿ. ಯಾಕೆಂದರೆ, ಅತ್ಯಂತ ಪ್ರಾಚೀನತಮವಾದ ಈ ಪದಕ್ಕೆ ಭಾರತೀಯ ಪರಂಪರೆಯಲ್ಲಿ ಬಹುಶಃ ಸನಾತನಿಗಳು 'ಆಯುಷ್ಕರ್ಮ'ಕ್ಕೆ ಸಂವಾದಿಯಾಗಿ 'ಕೇಶಮುಂಡನ' ಎಂದು ಸೀಮಿತಾರ್ಥದಲ್ಲಿ ಪರಿಭಾವಿಸಿರಬೇಕು. ಅದನ್ನೇ ನಮ್ಮ ಭಾರತೀಯ ಕರ್ಮಸಿದ್ಧಾಂತಿಗಳು 'ಆಯುಷ್ಯ ಪೂರ್ತಿ ಹುಲುಸಾಗಿ ಬೆಳೆಯುತ್ತಲೇ ಇರುವ ಮುಖದ / ತಲೆಯ ಬೆಳೆಯನ್ನು (ಹುಟ್ಟು-ಸಾವುಗಳಂಥ ವಿಶೇಷ ಪ್ರಸಂಗಗಳೂ ಸೇರಿದಂತೆ) ಯಥಾವಿಧಿ ಬೋಳಿಸಿಕೊಳ್ಳುವ ಕ್ರಿಯೆ/ಕರ್ಮವನ್ನೇ ಅನೂಚಾನವಾಗಿ ಒಂದು ವಿಧಿಯಂತೆ ಶಿಸ್ತಿನಿಂದ ನಡೆಸಿಕೊಂಡು ಬರುವುದು' ಎಂದು ಅರ್ಥೈಸಿದ್ದಾರೆ. ಕಾಲಕ್ರಮೇಣ ನಾಗರೀಕತೆ ಬೆಳೆದಂತೆ 'ಹಜಾಮತಿ' ಯೂ ಹಲವು ಹತ್ತು ರೂಪಗಳಲ್ಲಿ ಪರಿವರ್ತನೆಗೊಂಡು, ಕತ್ತಿ ಮಸೆಯುವುದರಿಂದ ಪ್ರಾರಂಭವಾಗಿ, ಮಿಷಿನ್ ಹಿಡಿಯುವ, ಕತ್ತರಿ ಪ್ರಯೋಗಿಸುವ ಚಾಕಚಕ್ಯತೆಗಳಿಂದೊಡಗೂಡಿ ಈಗ ಪ್ರತ್ಯೇಕ ಬ್ಲೇಡು ಹಾಕುವ ಹಂತಕ್ಕೆ ಬಂದು ತಲುಪಿರುವಲ್ಲಿನ 'ಕಷ್ಟದ ಕೆಲಸ' ಯಾರಿಗೂ ಬೇಡ!

ಕೇಶಕರ್ತನ ಶಾಲೆಯಿಂದ ಆದೇ ಹೊರಬಿದ್ದವರ ಮುಖಾವಲೋಕನ ಮಾಡಬೇಕು. ಒಂದೆರಡು ದಿನಗಳಾದರೂ ಅವರ ಮುಖಚಹರೆಯಲ್ಲಿ ವಿಶೇಷ ಕಳೆಯೇ ಪ್ರಾಪ್ತವಾಗಿರುವುದುಂಟು. ಆದುದರಿಂದಾಗಿಯೋ ಏನೋ, 'ಏನಿವತ್ತು ಪಟ್ಟಾಭಿಷೇಕ ಆದ್ಹಂಗಾಗಿದೆ' ಎಂದು ಕೇಳುವವರೂ ನಮ್ಮಲ್ಲಿದ್ದಾರೆ. ಬಹುಶಃ ಅಲ್ಲಿನ ಸಿಂಹಾಸನದಂಥ ಎತ್ತರದ ಖುರ್ಚಿಯಲ್ಲಿ ನಿರುಮ್ಮಳಾಗಿ ಕೂತು 'ತಂಪಾದ ಸೇವೆ' ಮಾಡಿಸಿಕೊಳ್ಳುವ ಈ ವಿಧಿಗೆ ಪರ್ಯಾಯವಾಗಿ ಹಾಗೆ ಪಟ್ಟಾಭಿಷೇಕ ಎಂದು ಕರೆದಿರಬೇಕು. ಒಂದು ಅರ್ಥದಲ್ಲಿ ಭಾರತೀಯ ಧರ್ಮಶಾಸ್ತ್ರಗಳಲ್ಲಿ ತಲೆಬೋಳಿಸಿಕೊಳ್ಳುವ ಕ್ರಿಯೆಗೆ ಹೀಗೆ ವಿಶೇಷ ಅರ್ಥವೂ ಆಚರಣೆಗಳೂ ಸಂದಿವೆ. ಅದೇ ರೀತಿ ತಲೆ ಬೋಳಿಸುವುದಕ್ಕೊಂದು ದೈವೀ ಸ್ವರೂಪ ಬೇರೆ ನೀಡಿದಂತೆ, ದೇವರಿಗೆ ಹರಕೆ ಹೊತ್ತವರು 'ತಲೆ ಒಪ್ಪಿಸುವ'ದಾಗಿ ಹೇಳಿಕೊಂಡು ಮುಡಿ (ತಲೆಗೂದಲು) ತೆಗೆಸಿ ಅರ್ಪಿಸಿ ತೀರಿಸಿಬಿಡುತ್ತಾರೆ ದೇವರ ರಿಣ. ಹೇಗಿದೆ? ಆಯುಷ್ಕರ್ಮಕ್ಕೆ ಎಂಥೆಂಥಾ ವಿಶೇಷ ಅರ್ಥವೂ, ಆಚರಣೆಯೂ ಅಂಟಿಕೊಂಡಿರುವುದನ್ನು ಆಳವಾದ ಅಧ್ಯಯನಕ್ಕೆ ಅಗು ಮಾಡಿದರೂ ಮುಗಿಯಲಾರದಷ್ಟು ಸಂಗತಿಗಳಿದ್ದಾವು. ಒಟ್ಟಾರೆ, 'ಆಯುಷ್ಕರ್ಮ' ಎಂದರೆ ಆಯುಷ್ಯವಿರುವವರೆಗೂ ಲಿಂಗಭೇದವಿಲ್ಲದೇ ಬೆಳೆಯುವ ಕೇಶವನ್ನು ಒಂದಲ್ಲ ಒಂದು ರೀತಿಯಲ್ಲಿ ತೆಗೆಸಿ ಮ್ಯಾನೇಜು ಮಾಡುವ 'ಅನಿವಾರ್ಯ ಕರ್ಮ' ಎಂದಂತಾಯಿತು.

ಕಾಡು ತೊರೆದ ಮಾನವ ನಾಡಾಡಿಯಾಗಿ ವಾಸ ಮಾಡಲು ತೊಡಗಿದೊಡನೇ ಮೊದಲು ಈ ಕೇಶಮುಂಡನ ಕಾರ್ಯಕ್ಕೆ ಕೈಯಿಕ್ಕಿರಬೇಕು. ಯಾಕೆಂದರೆ ಕಾಡು ಪ್ರಾಣಿಗಳಿಗಿಂತ ತಾನು ಭಿನ್ನವಾಗಿ ಕಾಣಿಸಿಕೊಳ್ಳಬೇಕಾದರೆ ಹಾಗೂ ತನಗೆ 'ತಲೆ'ಯಿರುವುದನ್ನು ತೋರಿಸಿಕೊಳ್ಳಬೇಕಾದರೆ ಕೇಶ ನಿವಾರಣೆಗೆ ತೊಡಗಬೇಕು. ಹೆಚ್ಚು ಹೆಚ್ಚು ನಾಗರೀಕನಾದಂತೆ ದೇಹದ ನಾನಾ ಕಡೆ ನಿರಾಯಾಸ ಬೆಳೆಯುವ ಕೂದಲನ್ನು ಕಲಾತ್ಮಕವಾಗಿ ನಿವಾರಿಸಿಕೊಳ್ಳಲು ಅಸ್ಥೆ ವಹಿಸುತ್ತ ಬಂದ ಹಾಗೇ ಈ ರೋಮ ನಿವಾರಣೆಯಲ್ಲಿ ರೋಮಾಂಚಕಾರಿ ಇತಿಹಾಸವೇ ಅಡಗಿದೆ!

ಎಷ್ಟೇ ಆದರೂ ಮನುಷ್ಯ ವಿವೇಚಿಸುವ 'ತಲೆ'ಯಿರುವ ಪ್ರಾಣಿಯೆಂದು ಹಿಂದೆಯೇ ಹೇಳಿದೆ. ಅದರಿಂದಾಗಿಯೇ ಅವನು ಯಾಮಾರಿಸುವುದರಲ್ಲಿ ದೇವರನ್ನೂ ಬಿಟ್ಟಿಲ್ಲ. ಹೇಗೆಂದಿರಾ? ಮಕ್ಕಳಿಲ್ಲದ ದಂಪತಿಗಳು ದೇವರಿಗೆ ಹರಕೆ ಹೊರುತ್ತಾರೆ. 'ಹೆಣ್ಣಾಗಲಿ ಗಂಡಾಗಲಿ ತಪ್ಪದೇ ನಿನ್ನ ಸನ್ನಿಧಾನಕ್ಕೆ ಅದರ ತಲೆ ತಂದು ಒಪ್ಪಿಸುತ್ತೇವೆ' ಎಂದು ದೇವರಿಗೂ ಆಸೆ ಹುಟ್ಟಿಸುತ್ತಾರೆ. ಅಕಸ್ಮಾತ್ ಮಗುವೂ ಆಗುತ್ತದೆ. ಆಗ ಮಗುವಿನ ತಲೆಯನ್ನು ಕಡಿದು ಸಲ್ಲಿಸಲು ಸಾಧ್ಯವೆ? ಆದರೆ, ಪ್ರಾಚೀನ ಕಾಲದಲ್ಲಿ ಆ 'ನರಬಲಿ'ಯೂ ಆಚರಣೆಯಲ್ಲಿತ್ತು. ಆ ಕಾಲದಲ್ಲಿ ನಮ್ಮ ದೇವರುಗಳು ಅಪ್ಪಟ ಮಾಂಸಾಹಾರಿಗಳೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಕಾಲಕ್ರಮೇಣ ಅದಕ್ಕೂ ಒಂದು ಪರಿಹಾರ ಕಂಡುಕೊಂಡ ಮನುಷ್ಯ ಮಗುವಿನ ಹುಟ್ಟುಗೂದಲನ್ನೇ ತೆಗೆದು ಹಿಟ್ಟಿನ ಹುಂಜದಂತೆ ಸಂಬಂಧಪಟ್ಟ ದೇವರಿಗೆ ಅರ್ಪಿಸಿ ಕೃತಾರ್ಥರಾಗುತ್ತಾ ಬಂದಿರಬೇಕು. ಮಗುವಿನ ತಲೆಯನ್ನೇ ಸಲ್ಲಿಸಲಾಯಿತೆಂದು ದೇವರು ಭಾವಿಸತಕ್ಕದ್ದು. ಕೂದಲು ತೆಗೆಯುವುದು ನರಬಲಿಯ ಸಂಕೇತಾರ್ಥದಲ್ಲಿ ಇಂದಿಗೂ ಬಳಸಿಕೊಂಡು ಬರಲಾಗುತ್ತಿದೆ. ಪಾಪ! ಕಲ್ಲು ದೇವರೇನು ಎದ್ದು ಬಂದು ಆಕ್ಷೇಪಿಸಲು ಸಾಧ್ಯವೆ?

ಒಂದು ಸಾರಿ ಹೀಗೇ ದೂರದೂರದಿಂದ ಬರುವವರನ್ನು ಎದುರುಗೊಳ್ಳಲು ನಗರದ ಕೇಂದ್ರ ಬಸ್‌ನಿಲ್ದಾಣಕ್ಕೆ ಹೋಗಿದ್ದೆ. ಇಳಿದಾಣದಲ್ಲಿ ನಿಂತಿದ್ದ ನನ್ನ ಮುಂದೆ ಅದೇ ತಾನೆ ತಿರುಪತಿಯಿಂದ ಬಂದ ಬಸ್ಸೊಂದು ಬಂದು ನಿಂತಿತು. ಹಾಗೇ ನೋಡುತ್ತಿರಲಾಗಿ, 'ತಾರಕ್ಕ ಬಿಂದಿಗೆಯಾ' ಎನ್ನುವಂತೆ, ತಲೆ ಬೋಳಿಸಿಕೊಂಡವರು ಸಾಲಾಗಿ ಇಳಿದು ಬರುತ್ತಿದ್ದರು. ಎಳೆ ಬಿಸಿಲಿನಲ್ಲಿ ಫಳಫಳ ಹೊಳೆಯುವ ವಿವಿಧ ಗಾತ್ರದ ತಾಮ್ರದ ತಂಬಿಗೆಗಳನ್ನು ಹೋಲುವಂತೆ ಅವು ಒಂದೊಂದಾಗಿ ಬಸ್ಸಿಳಿದು ಬರುತ್ತಿದ್ದಂತೆ ಕೆಳಗಿದ್ದ ಎಲ್ಲರ ಗಮನ ಅವರ ಮೇಲೆ ಕೇಂದ್ರೀಕೃತವಾಯಿತು. ಗಂಡ-ಹೆಂಡತಿ ಮತ್ತವರ ನಾಕೂ ಮಕ್ಕಳು ಹೋಲ್‌ಸೇಲ್ ಆಗಿ ತಲೆಯೊಪ್ಪಿಸಿ ಬಂದಿದ್ದರು - ಹೆಣ್ಣು ಗಂಡೆಂಬ ಭೇದ ಭಾವವಿಲ್ಲದೆ. ಹೇಗೆ ಬಣ್ಣಿಸುವುದೋ ಕಾಣೆ ಆ ಚೋದ್ಯವನ್ನು! ಜನ ನಿಬ್ಬೆರಗಾಗಿ ನಿಂತು ನೋಡುತ್ತಿದ್ದರು ಅವರ ಆ ಭಕ್ತಿಯ ಚಹರೆಪಟ್ಟಿಯನ್ನು. ಅವರು ಮಾತ್ರ ದೇವರ ರಿಣ ತೀರಿಸಿ ಬಂದ ತೃಪ್ತಿಯಲ್ಲಿ ಬೀಗುತ್ತ ತಲೆಭಾರವಿಳಿಸಿಕೊಂಡು ಬಂದು ನಿರುಮ್ಮಳ ಕಳೆ ಬೀರುತ್ತಿದ್ದರು. ಹೇ ಏಡುಕೊಂಡಲವಾಸಾ, ಹೆಂಗಸರನ್ನೂ ಬಿಡದೇ ತಲೆ ಬೋಳಿಸಿ ಕಳಿಸಿರುವ ನಿನಗಿನಿತೂ ದಯ ಬಾರದೆ? 'ಈ ಪರಿಯ ಸೊಬಗನಾವ

> ನಾಗರಿಕತೆಯ ತೀವ್ರ ಪೈಪೋಟಿಯಲ್ಲಿ ನಗರದ ಗಲ್ಲಿ - ಬೀದಿಗಳಲ್ಲಿ 'ಬ್ಯೂಟಿ ಪಾರ್ಲರ್' ಎಂಬ ಹೆಸರಿನಡಿಯಲ್ಲಿ ಹೆಂಗಸರಿಗಾಗಿಯೇ ಅದೆಷ್ಟು ಸಲೂನುಗಳು! ಬೇಡವಾದ ಕೂದಲನ್ನು ನಿವಾರಿಸುವಲ್ಲಿ ಇತ್ತೀಚೆಗೆ ಹೆಂಗಸರೇ ತೀವ್ರ ಪೈಪೋಟಿಗಿಳಿದಂತಿದೆ.


ಲಲಿತ ಪ್ರಬಂಧ

ದೇವರಲ್ಲೂ ಕಾಣೆ!'

ಇದನ್ನು ನೋಡಿಯೇ 'ತಿರುಪತಿ ಹಜಾಮತಿ' ಅಂದಿರಬೇಕು ಜನ. ಕೆಲವರಿಗೆ ದುಡ್ಡು-ಕಾಸು ಕೂಡಿ ಬೀಳುತ್ತಿದ್ದಂತೆ ಪದೇ ಪದೇ ತಿರುಪತಿಗೆ ಹೋಗಿ ಕೂದಲು ಅರ್ಪಿಸಿ ಬರುವ ಗೀಳು ಅಂಟಿಕೊಳ್ಳುತ್ತದೆ. 'ಕಾಸು ನನಗೆ - ಕೇಶ ನಿನಗೆ' ಅನ್ನುವಂತೆ. ಬಹುಶಃ ನಮ್ಮ ದೇಶದ ಬಹುದೊಡ್ಡ ಶ್ರೀಮಂತ ನಾಪಿತನೆಂದರೆ ಈಗ ತಿರುಪತಿ ಬೆಟ್ಟದ ಮೇಲೆ ಮಂಡಿಸಿದಾತನೇ ಎಂದು ನಿಸ್ಸಂಶಯವಾಗಿ ಹೇಳಬಹುದು. ಅಂತೆಯೇ ಆತನ ಆ ಖ್ಯಾತಿ/ಆಕರ್ಷಣೆ ದೇಶದುದ್ದಗಲಕ್ಕೂ ಹರಡಿರುವುದು.

ಅಂದ ಹಾಗೆ ನೆನಪಾಯಿತು. 'ಬೋಳಿಸುವ' ಹಾಗೂ 'ಟೊಪ್ಪಿಗೆ ಹಾಕುವ' ಈ ಎರಡೂ ಕೆಲಸಗಳಲ್ಲಿ ಗಾಢವಾದ ಸಾಮ್ಯತೆಯಿದ್ದು, ಸ್ವಾತಂತ್ರ್ಯೋತ್ತರ ಭಾರತೀಯ ಸಮಾಜದಲ್ಲಿ ಇವೆರಡೂ ವಿಶೇಷ ಅರ್ಥ ಪಡೆದುಕೊಂಡಿವೆಯೆಂದರೆ ತಪ್ಪಾಗಲಿಕ್ಕಿಲ್ಲ. ಬೋಳಿಸುವುದರಲ್ಲಿಯೂ ಸಣ್ಣಗೆ ಬೋಳಿಸುವುದು, ನುಣ್ಣಗೆ ಬೋಳಿಸುವುದು, ತಣ್ಣಗೆ ಬೋಳಿಸುವುದು ಇತ್ಯಾದಿ ಚಾಲ್ತಿಗಳಲ್ಲಿದ್ದಂತೆಯೇ ಟೋಪಿ ಹಾಕುವುದರಲ್ಲಿ ಕೂಡ ಹಲವು ರೀತಿಗಳುಂಟು. ರಾಜಾರೋಷವಾಗಿ, ಹಾಡುಹಗಲೇ ಎಲ್ಲರೆದುರಿಗೆ (ಇನ್ನೊಬ್ಬರಿಗೆ) ಟೊಪ್ಪಿಗೆ ಹಾಕಿ ಮೆರೆಯುವುದು ಒಂದು ತೆರನಾದರೆ, ನಾ ನಾ ಅನ್ನುವ ತಲೆಗಳಿಗೆ ಕೂಡ ಉಪಾಯವಾಗಿ ಅವಕ್ಕೆ ಗೊತ್ತೇ ಆಗದ ರೀತಿಯಲ್ಲಿ ಟೋಪಿ ಹಾಕಿ ಕಳಿಸುವುದು ಇನ್ನೊಂದು ತರಹ. ಅದಕ್ಕೆಲ್ಲ ಮುಜುಗರ ಪಟ್ಟರೆ ಆದೀತೆ? ಇತ್ತೀಚಿನ ದಿನಗಳಲ್ಲಿ ಬದುಕುವ ಕಲೆಯಲ್ಲಿ ಈ ಟೊಪ್ಪಿಗೆ ಹಾಕುವ ಕ್ರಿಯೆಗೇ ಹೆಚ್ಚಿನ ಪ್ರಾಶಸ್ತ್ಯ ಬಂದಿದೆಯಂತೆ. ಹಾಗೆ, ಇನ್ನೊಬ್ಬರಿಗೆ ಟೊಪ್ಪಿಗೆ ಹಾಕುವವರು ತಾವು ಮೊದಲೇ 'ತಲೆ ತೆಗೆದು' ನಿಂತಿರುತ್ತಾರೆನ್ನುವುದು ಬೇರೆ ಮಾತು.

ಏನೇ ಆದರೂ, ತಲೆ ಬೋಳಿಸಿ ಟೊಪ್ಪಿಗೆ ಹಾಕುವುದು ಒಂದಕ್ಕೊಂದು ಅಂಟಿದ ಕ್ರಿಯೆಗಳೆಂದು ಹೀಗೆ ಇಷ್ಟೆಲ್ಲ ಹೇಳಬೇಕಾಯಿತು. ಇರಲಿ. ಟೊಪ್ಪಿಗೆ ಹಾಕುವ ಬಗೆಗೆ ನಾನು ಬಾಲ್ಯದಲ್ಲಿ ಓದಿದ ಕತೆಯೊಂದು ನೆನಪಾಗುತ್ತದೆ.



ಮಕ್ಕಳಾಗದ ಸೇಠನೊಬ್ಬ ದೇವರನ್ನು ಮೊರೆ ಹೋಗಿ, (ಸಂಬಂಧಪಟ್ಟ ಅಧಿಕಾರಿಗಳಿಗೆ ಪರ್ಸೆಂಟೇಜಿನ ಆಸೆ ತೋರಿಸುವ ಖದೀಮ ವ್ಯಾಪಾರಿಗಳಂತೆ) ತನಗೊಂದು ಮಗುವನ್ನು ದಯಪಾಲಿಸಿದರೆ ಪ್ರತಿಯಾಗಿ 'ಸೋನೆ ಕಾ ಟೋಪಿ' ಸಲ್ಲಿಸುವೆನೆಂದು ದೇವರನ್ನು ಪುಸಲಾಯಿಸಿದ. ಬಂಗಾರವೆಂದರೆ ಮಲಗಿದ್ದ ಹೆಣವೂ ಎದ್ದು ಕೂರುವಾಗ, ದೇವರಿಗೇನು ಕಿವುಡೆ? ಅಂತೂ ಆತನಿಗೊಂದು ಗಂಡು ಮಗುವಾಯಿತು. ಚಿನ್ನದಂತಹ ಹುಡುಗ. ದೂರಾಲೋಚನೆಯ ಸೇಠು ಮಗನಿಗೆ 'ಸೋನ್ಯಾ' ಎಂದೇ ಹೆಸರಿಟ್ಟು ಕರೆದ. ಒಂದು ದಿನ ದೇವರ ಹರಕೆ ತೀರಿಸಲು ಹೊರಟ. ಸೋನ್ಯಾನನ್ನು ದೇವರ ಮುಂದೆ ನಿಲ್ಲಿಸಿ 'ಹೇ ಭಗವಾನ್ ಲೇವ್ ಏ ಸೋನ್ಯಾ ಕಾ ಟೋಪಿ' ಎಂದವನೇ ಹುಡುಗನ ತಲೆಯ ಮೇಲಿದ್ದ ಕಸೂತಿ ಹಾಕಿದ್ದ ನೂಲಿನ ಟೋಪಿಯನ್ನು ತೆಗೆದು ದೇವರ ಮುಂದಿಟ್ಟು, ಅಡ್ಡಬಿದ್ದ. ಬಾಪ್‌ರೇ! ದೇವರು ಮತ್ತೊಮ್ಮೆ ಮೋಸ ಹೋದ. ಮಗುವನ್ನು ಕಿತ್ತುಕೊಳ್ಳುವ ತಾಕತ್ತಿದೆಯೇ ಆತನಿಗೆ!

ವಾಚಕ ಮಹಾಶಯರು ದಯವಿಟ್ಟು ಕ್ಷಮಿಸಬೇಕು. 'ಏನಿದು ನಮ್ಮ ಕರ್ಮ? ಬರೀ ಪೀಠಿಕೆಯನ್ನೇ ಹನುಮಂತನ ಬಾಲದಂತೆ ಬೆಳೆಸುತ್ತಿರುವನಲ್ಲ ಈ ಪಾಪಿ' ಎಂದು ಧೂರ ಬೇಡಿರಿ. ಆಯುಷ್ಕರ್ಮದ ಬಗೆಗೆ ಸಮುಚಿತ ವಿವರಣೆ ನೀಡಲು ಹೋಗಿ ಇಷ್ಟೆಲ್ಲ ರಗಳೆ ಮಾಡಿದೆ. ಈಗ ಸೀದಾ ಶಾಲೆಯ ಕಟ್ಟೆ ಹತ್ತಿಸುತ್ತೇನೆ ಬನ್ನಿರಿ. ಬಾಲ್ಯದಲ್ಲಿ ನಾನು ಬಹಳಷ್ಟು ಕಲಿತದ್ದು ಈ ಆಯುಷ್ಕರ್ಮ ಶಾಲೆಯಲ್ಲಿಯೇ ಎಂದು ಬೇರೆ ಆರಂಭದಲ್ಲಿಯೇ ಹೇಳಿದ್ದ ನನ್ನ ಮಾತನ್ನು ತಾವು ಮರೆತಿರಲಿಕ್ಕಿಲ್ಲವಷ್ಟೆ?

ಸುಸಂಸ್ಕೃತರೆನ್ನಿಸಿಕೊಂಡಿದ್ದ ಸನಾತನಿಗಳು ಹಿಂದೆ ಉದಯ ಕಾಲದೊಳೆದ್ದು ಗಡಗಡ ನಡುಗುತ ನೀರಲ್ಲಿ ಮುಳುಗು ಹಾಕುವುದರೊಂದಿಗೆ ತಮ್ಮ ದಿನದ ಬದುಕಿಗಾರಂಭಿಸುತ್ತಿದ್ದರೆ, ಆಧುನಿಕರಾದ ನಾವೀಗ 'ಉದಯ ಕಾಲದೊಳೆದ್ದು ಮೊಗವ ಪರಪರ ಹೆರೆಯುತ್ತ ಸಿದ್ಧವಾಗಬೇಕಾದ ಅನಿವಾರ್ಯ ತರಾತುರಿ' ನಮ್ಮದಾಗಿದೆ. ಏನು ಮಾಡುವುದು ಹೇಳಿ. ಬಿಡದ ಕರ್ಮವೆಂದೇ ಅದನ್ನು ಆಯುಷ್ಕರ್ಮ ಎಂದು ಕರೆದಿರುವುದು. ಕೇಶ ನಿವಾರಣೆಗಾಗಿ ಗಂಡಸರಷ್ಟೇ ಅಲ್ಲ ಹೆಂಗಸರೂ ಸಾಕಷ್ಟು ತಲೆ ಕೆಡಿಸಿಕೊಂಡಿದ್ದಾರೆ ಇಂದಿನ ದಿನಗಳಲ್ಲಿ.

ನಮ್ಮ ಬಾಲ್ಯದ ದಿನಗಳಲ್ಲಿ ಗಂಡಸರಿಗಷ್ಟೇ ಸೀಮಿತವಾಗಿದ್ದ, ಊರಿಗೆ ಒಂದೊ ಎರಡೊ

ಲಲಿತ ಪ್ರಬಂಧ

ಕ್ಷೌರಿಕರ ಅಂಗಡಿಗಳಿರುತ್ತಿದ್ದವು. ಈಗ ಹಾಗಲ್ಲ. ನಾಗರಿಕತೆಯ ತೀವ್ರ ಪೈಪೋಟಿಯಲ್ಲಿ ನಗರದ ಗಲ್ಲಿ - ಬೀದಿಗಳಲ್ಲಿ 'ಬ್ಯೂಟಿ ಪಾರ್ಲರ್' ಎಂಬ ಹೆಸರಿನಡಿಯಲ್ಲಿ ಹೆಂಗಸರಿಗಾಗಿಯೇ ಅದೆಷ್ಟು ಸಲೂನುಗಳು! ಬೇಡವಾದ ಕೂದಲನ್ನು ನಿವಾರಿಸುವಲ್ಲಿ ಇತ್ತೀಚೆಗೆ ಹೆಂಗಸರೇ ತೀವ್ರ ಪೈಪೋಟಿಗಿಳಿದಂತಿದೆ. ಗಂಡಸರಾದರೆ ತಲೆ/ಮುಖದ ಮೇಲೆ ಹುಲುಸಾಗಿ ಬೆಳೆಯುವ ರೋಮವನ್ನು ಶಾಶ್ವತವಾಗಿ ಕಿತ್ತು ಹಾಕುವ ಸಾಹಸಕ್ಕೆ ಕೈಯಿಕ್ಕದೇ, ಶಿಸ್ತಿನಿಂದ ಅದರ ಕಟಾವು ಮಾಡುತ್ತಾನೆ/ಮಾಡಿಸುತ್ತಾನೆ. ಮತ್ತೆ ಅದು ಚಿಗುರುವುದನ್ನೇ ಎದುರು ನೋಡುತ್ತಲೇ ರೋಮಾಂಚಿತನಾಗುತ್ತಾನೆ. ಆಯುಷ್ಕರ್ಮ ಶಾಲೆಯಲ್ಲಿರುವ ಎತ್ತರದ ಸಿಂಹಾಸನದಲ್ಲಿ ಆರಾಮವಾಗಿ ಒರಗಿ ಕೂತು, ತಲೆ, ಕೆನ್ನೆ, ಗಲ್ಲಗಳ ಮೇಲಿನ ರೋಮಗಳಿಗೆ 'ಬುಡತಾಳ ಸಂಸ್ಕಾರ' ಪಡೆಯುವ ಕ್ರಿಯೆ ಇದೆಯಲ್ಲ - ನನ್ನ ದೃಷ್ಟಿಯಲ್ಲಿ ಅದುವೇ ನಿಜವಾದ 'ರೋಮಾಂಚನ'!.

ತಲೆಯ ಮೇಲೆ ಅಡ್ಡಾದಿಡ್ಡಿಯಾಗಿ ಬೆಳೆದಿದ್ದ ಹಿಂಡು ಕೂದಲ ಹೊರೆ ಇಳಿಸಿಕೊಂಡು ಹಗುರವಾಗಿ ಎಣ್ಣೆ-ನೀರು ಸವರಿದ ನೆತ್ತಿಯ ಮೇಲೆ ನವುರಾಗಿ ಬೆರಳಿಂದ ತೀಡಿದ ನಂತರ, ಅನುಭವೀ ಹಡಪಿಗರ ಕೈಯಲ್ಲಿ ಒಪ್ಪಿಸಿದ್ದ ಆ ತಲೆಯನ್ನು ಘಟವಾದನದಂತೆ 'ತರಿಕಿಟ ಧಿಮಿಕಿಟ' ಎಂದು ಲಯಬದ್ಧವಾಗಿ ಬಾರಿಸಿಕೊಂಡು ಕಣ್ಣು ಬಿಟ್ಟಾಗ ಅಹಹಾ ಏನು ಸುಖ! ಒಂದು ಕ್ಷಣ ಭೂಮಂಡಲವೇ ಅಲ್ಲೋಲ ಕಲ್ಲೋಲವಾಗಿ ಸ್ವಸ್ಥಾನಕ್ಕೆ ಬಂದು ನಿಂತಂತೆ!! ಅದೇ ರೀತಿ ಬಿಸಿಲಿಗೆ ಬೆಂದು ಬೆಂಡಾಗಿ, ಹದಿನೈದು ದಿನದ ಕುರುಚಲು ಕಾಡನ್ನು ಹೊತ್ತ ಮುಖಾರವಿಂದವನ್ನು ಅದೇ ರೀತಿ ಒಪ್ಪಿಸಿ ಕೂತಾಗಲೂ ಅದೇ ಅನುಭವ. ಸೋಪಿನ ತಣ್ಣನೆಯ ನೊರೆಯನ್ನು ಲೇಪಿಸಿಕೊಂಡು ನಿಧಾನವಾಗಿ ಹೆರೆಸಿಕೊಳ್ಳುವಾಗಿನ ಅನುಭವ ಇದೆಯಲ್ಲ, ಅವನೌನು ಅದುವೇ ನಿಜವಾದ 'ರೋಮಾಂಚನ'! ರೋಮಕ್ಕೂ ಪುಳಕಗೊಳ್ಳುವುದಕ್ಕೂ ಅವಿನಾಭಾವ ಸಂಬಂಧವಿರುವುದರಿಂದಲೇ ಅನುಭವಿಕರು ಹಾಗೆ ರೋಮಾಂಚನ ಎಂದು ಕರೆದಿರಬೇಕು. ಅದೇನಿದ್ದರೂ ಅನುಭವಕ್ಕೆ ಸೇರಿದ ಬಾಬತ್ತು. ಏನೇ ಆದರು, ಚರ್ಮಕ್ಕೆ ಅಂಟಿಕೊಂಡಂತೆ ಇರುವ ಕೂದಲೇ ಮೊದಲು ಸ್ಪರ್ಶಸುಖ ಅನುಭವಿಸಿ, ಟಿ.ವಿ. ಎಂಟೆನಾದಂತೆ ಸೆಟೆದು ನಿಂತು ತನಗಾದ ರೋಮಾಂಚನವನ್ನು ಮೊದಲು ಬಿತ್ತರಿಸುತ್ತದೆ. ನಂತರ ಅದು ದೇಹದ ತುಂಬೆಲ್ಲ ಹರಡುತ್ತದೆ!.

ಆದರೆ, ನಾವಿಲ್ಲಿ ಗಂಡಸರು ಪಡುವ ರೋಮಾಂಚನ ಹೆಂಗಸರ ಪಾಲಿಗೆ ಅವರ ಬ್ಯೂಟಿ ಪಾರ್ಲರುಗಳಲ್ಲಿ ದಕ್ಕಲಾರದೆಂದೇ ನನ್ನ ಅನುಮಾನ. ಜೈನ ಸನ್ಯಾಸಿ ಸವಣರು 'ಕೇಶಲುಂಚನ' ದಂಥ ಕೂದಲು ಕೀಳುವ ಕಠಿಣ ವ್ರತವೊಂದನ್ನು ಪಾಲಿಸುತ್ತಿದ್ದರೆಂದು ಓದಿ ಬಲ್ಲೆ. ಅದೇ ಕ್ರಮವನ್ನು ಬ್ಯೂಟಿ ಪಾರ್ಲರುಗಳಲ್ಲಿ ಹೆಂಗಸರ ಹುಬ್ಬಿನ ಕೂದಲು ಕೀಳುವಲ್ಲಿ ಅನುಸರಿಸುತ್ತಾರೆಂದು ಕೇಳಿದ್ದೇನೆ. ಎಷ್ಟೇ ಆದರೂ, ಹೆಂಗಸರು ಸಹನಶೀಲೆಯರಲ್ಲವೆ? ಕೂದಲು ಕೀಳುವಾಗ ಆಗುವ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಹುಟ್ಟಿನಿಂದಲೇ ಪಡೆದಿರುತ್ತಾರೇನೋ! ಅದು ಮಾತ್ರ ನಮ್ಮ ಕೈಲಾಗದು. ನಮ್ಮ ಮೊಗದ ಮೇಲಿನ ಕೂದಲು ಗರಿಕೆಯಂತೆ ಚಿಗುರುತ್ತಿರಬೇಕು. ದಿನ ಬಿಟ್ಟು ದಿನ

ನಾವದನ್ನು ಹೆರೆಯುತ್ತಿರಬೇಕು. ಅದುವೇ ಆಯಸ್ಸುಪೂರ್ತಿ ಬಿಡದೇ ಅನುಸರಿಸಬೇಕಾದ ನಮ್ಮ ಆಯುಷ್ಕರ್ಮ!

೨

ನಗರ ಪ್ರದೇಶಗಳಲ್ಲಿಯಂತೆ ನನ್ನೂರಿನ ಆಯುಷ್ಕರ್ಮ ಶಾಲೆಗಳಿಗೆ ಆಗಿನ್ನೂ ತರತರದ ಬೋರ್ಡು ಹಾಕುವ ಪರಿಪಾಠವಿರಲಿಲ್ಲ. ಅಂಗಡಿಯ ಮಾಲಿಕ/ಕೇಶಕರ್ತನ ಹೆಸರಿನಿಂದಲೇ ಗುರುತಿಸುವುದು ವಾಡಿಕೆ. ಹಡಪದ ಸಂಗಪ್ಪ ನನ್ನ ಅಪ್ಪನ ಖಾಸಾ ದೋಸ್ತು. ಅತ್ತ ಹಳ್ಳಿಯೂ ಅಲ್ಲದ ಇತ್ತ ನಗರವೂ ಅಲ್ಲದ ಎಡಬಿಡಂಗಿ ಊರಿನ ಏಕಮೇವಾದ್ವಿತೀಯ ಸರ್ಕಲ್ಲಿನ ಒಂದು ಮೂತಿಗೆ ದರ್ಗಾದ ಬೇವಿನ ಮರದ ಕೆಳಗೆ ಲಗತ್ತಾಗಿದ್ದ ತಗಡು ಬಡಿದ ಶಾಪ್ - ನಮ್ಮ ಸಂಗಪ್ಪನ ಕೇಶಕರ್ತನ ಶಾಲೆ.

ಉತ್ತರ ಕರ್ನಾಟಕದ ಬಹುತೇಕ ಜಾತಿ-ಜನಾಂಗಗಳು ಶತಶತಮಾನಗಳಿಂದಲೂ ಬಸವಣ್ಣನ ಪ್ರಭಾವಲಯಕ್ಕೆ ಒಳಗಾಗಿ ಬದುಕಿದ್ದ ಪ್ರಯುಕ್ತ ಹಾಗೆ ಇದ್ದಿರಬೇಕು. ನಮ್ಮ ಸಂಗಪ್ಪ ಕೂಡ ಬೆಳಿಗ್ಗೆ ಎದ್ದು ಚೊಂಬು ಹಿಡಿದು ಹೊರ ಹೋಗಿ ಬಂದು, ಮುಖ ತೊಳೆದು ಹಣೆಯ ಮೇಲೆ ಢಾಳಾಗಿ ವಿಭೂತಿ ಪಟ್ಟಿಗಳನ್ನು ಬಡಿದುಕೊಂಡು ದಾರಿಯಲ್ಲಿ ಅಡ್ಡ ಹಾದವರಿಗೆಲ್ಲ 'ಶರಣು' ಹೇಳುತ್ತಲೇ ಬಂದು ಅಂಗಡಿ ಬಾಗಿಲು ತೆಗೆಯುವುದು ಆತನ ಪದ್ಧತಿ. ಕಾಯಕಕ್ಕೆ ಕೈ ಹಚ್ಚುವ ಮುನ್ನ, ತನ್ನ ಅಂಗಡಿಯ ಬೆನ್ನಿಗಿದ್ದ ಅಶ್ರಫ್ ಅಲಿ ದರ್ಗಾಕ್ಕೆ ಹೋಗಿ ಎರಡು ಊದಿನ ಕಡ್ಡಿ ಚುಚ್ಚಿ ತಲೆ ಬಾಗಿ ಎದ್ದರೆ, ಹಣೆಯ ಮೇಲೆ ರಬ್ಬಾಗಿ ಬಡಿದಿದ್ದ ವಿಭೂತಿಯ ಹುಡಿ ಕಣ್ಣು ಕೆನ್ನೆಯ ಮೇಲೆ ಉದುರುತ್ತಿರುತ್ತದೆ. ಅರ್ಧ ಕಪ್ಪು ಕಡಕ್ ಟೀ ಹೀರಿ ಬಂದು, ಕಾದಿದ್ದ ಗಿರಾಕಿಗಳ ತಲೆಗೆ ನೀರು ಹೊಡೆದು ತೋಳೇರಿಸುತ್ತಾನೆ. ಇದು ಆತನ ನಿತ್ಯದ ಕ್ರಮ.

ಬಸವಣ್ಣ ಬೋಧಿಸಿದ 'ಕಾಯಕ ನೀತಿ'ಗೆ ಪಟ್ಟಾಗಿ ಅಂಟಿದ್ದ ನನ್ನ ಪ್ರದೇಶದ ನಾಪಿತ ಕುಟುಂಬಗಳು ಇಂದಿಗೂ ಅದೇ ದೈನ್ಯಾವಸ್ಥೆಯಲ್ಲಿ ಉಳಿದದ್ದು ಬೇಸರದ ಸಂಗತಿ. ಅದ್ಯಾವನೋ ಮುಠ್ಠಾಳ 'ಬೆಳಗೆದ್ದು ಹಜಾಮನ ಮುಖ ನೋಡಿದರೆ ಅಪಶಕುನ' ಎಂಬ ಮೂಢ ನಂಬಿಕೆಯೊಂದನ್ನು ಬೇರೆ ಪ್ರಚಾರ ಮಾಡಿದ್ದ. ಅದನ್ನು ತೊಡೆದು ಹಾಕುವುದಕ್ಕಾಗಿಯೇ ಹಠ ತೊಟ್ಟವರಂತೆ, ಯಾವ ಮಠಾಧೀಶನಿಗೂ ಕಡಿಮೆಯಿಲ್ಲದಂತೆ ಕಾಯಕ ನೀತಿಯನ್ನು ಅಳವಡಿಸಿಕೊಂಡ ಈ ಕೆಲಸಿಗರು ಬೆಳಗು-ಬೈಗು ತಮ್ಮ ಹಣೆಯ ಮೇಲೆ ಎದ್ದು ಕಾಣುವ ಹಾಗೆ ವಿಭೂತಿ ಬಳಿದುಕೊಳ್ಳುವುದನ್ನು ರೂಢಿಸಿಕೊಂಡರು. ಉತ್ತರ ಕರ್ನಾಟಕ ಪುರಾಣಿಕರು ಕತೆ ಹೇಳಿ ಒಲಿಸುವಂತೆ 'ನಿತ್ಯ ವಿಭೂತಿ ಬಳಿಯದಿದ್ದರೂ ವಿಭೂತಿ ಬಡಿದ ಮುಖ ನೋಡಿದರೂ ಸಾಕು ಪಾಪ ಪರಿಹಾರವಾದೀತು' ಎಂದು ಹೇಳುತ್ತಿದ್ದ ಮಾತುಗಳನ್ನು ಶಿರಸಾವಹಿಸಿ ಪಾಲಿಸುತ್ತಿದ್ದರೇನೋ. ಅದರಂತೆ ನಮ್ಮ ಈ ಸಂಗಪ್ಪನ ವಿಭೂತಿಯಿಲ್ಲದ ಮುಖವನ್ನು ಕಲ್ಪಿಸಿಕೊಳ್ಳಲೂ ಅಸಾಧ್ಯವೆನ್ನುವಷ್ಟರ ಮಟ್ಟಿಗೆ ನನ್ನೊಳಗೆ ಚಿತ್ರಿತವಾಗಿದೆ.

ಸಂಗಪ್ಪ ವಯಸ್ಸಿನ ಬೇದವಿಲ್ಲದೆ ನನ್ನೂರಿನ ಜನರೊಂದಿಗೆ ಬೆರೆಯುತ್ತಿದ್ದ ಆ ರೀತಿ, ಮಾತಿನ ಮೂಲಕ ಆಪ್ತವಾಗಿಬಿಡುತ್ತಿದ್ದ ಪರಿ ನನಗೂ ಮೆಚ್ಚಿಕೆಯಾಗಿತ್ತು. ಇಡೀ ಊರಿನ ಉಸಾಬರಿಯೋ ಆತನ ಬಾಯಲ್ಲಿರುತ್ತಿತ್ತು. ಅದು ಕೇವಲ ಪ್ರವೃತ್ತಿಯೋ ಅಥವಾ ವೃತ್ತಿಗೆ ಪೂರಕವಾಗಿರುವಂತೆ ಕಾಪಾಡಿಕೊಂಡು ಬಂದ ಚಾಳಿಯೋ ಅಂತೂ ಅಂಗಡಿಗೆ ಬಂದವರ ಬಾಯಿಂದಲೇ ಸುದ್ದಿ ಸಂಗ್ರಹಿಸುವುದು, ಹಾಗೆಯೇ ಬಂದವರ ಮೂಲಕವೇ ಅದನ್ನು ಬಿತ್ತರಿಸುವುದು, ಈ ಟ್ರಾನ್ಸ್‌ಮಿಷನ್ ಎಕ್ಸಿಕ್ಯೂಟಿವ್‌ನನ್ನು ಪರ್ಯಾಯವಾಗಿ ಸುದ್ದಿ ಸೂರಪ್ಪನೆಂದು ಕರೆದರೂ ಆದೀತು.


ಆದರೆ ಬಾಲ್ಯದ ಆ ದಿನಗಳಲ್ಲಿ ಆತನಿಗೂ ನನಗೂ ಒಂದೇ ಒಂದು ವಿಷಯದಲ್ಲಿ ಭಿನ್ನಾಭಿಪ್ರಾಯವಿತ್ತು. ನಾನು ಉದ್ದ ಕೂದಲು ಬಿಟ್ಟು ಕ್ರಾಪು ತೆಗೆಯುವ ಅಭಿಲಾಷೆಯಿರಿಸಿಕೊಂಡಿದ್ದರೆ, ನನ್ನಪ್ಪನ ಪೂರ್ವಸೂಚನೆಯಂತೆ ಸದಾ ನುಣ್ಣಗೇ ಬೋಳಿಸಿಬಿಡುತ್ತಿದ್ದ. ಅದೊಂದು ವಿಷಯದಲ್ಲಿ ಮಾತ್ರ ನನ್ನಲ್ಲಿ ಆತನ ಬಗೆಗೆ ದ್ವೇಷ-ಅಸಹನೆಗಳು ಮನೆ ಮಾಡಿಕೊಂಡಿದ್ದವು. ನಾವೆಲ್ಲ ಲಂಡ ಚಣ್ಣದಿಂದ ಬಿಳಿ ಪೈಜಾಮಿಗೆ ಬಡ್ತಿ ಹೊಂದಿ, ಹೈಸ್ಕೂಲು ಕಟ್ಟೆ ಹತ್ತಿದ್ದರೂ ಈ ವಿಷಯದಲ್ಲಿ ಮಾತ್ರ ನನ್ನ ಅಪ್ಪನಾಗಲಿ ಆತನ ಖಾಸಾ ದೋಸ್ತು ಈ ಸಂಗಪ್ಪನಾಗಲಿ ಸುತರಾಂ ವಿನಾಯಿತಿ ನೀಡುತ್ತಿದ್ದಿಲ್ಲ. ಕ್ರಮೇಣ ಮನವೊಲಿಸಿ ಗಾಂಧಿ ಕಟ್ಟಿಂಗ್‌ನಿಂದ ಮಿಷಿನ್ ಹಿಡಿಯುವ ಮಿಲಿಟರಿ ಕಟ್ಟಿಂಗ್‌ಗೆ ವರ್ಗಾವಣೆ ಪಡೆಯುವಲ್ಲಿ ತುಸು ಯಶಸ್ವಿಯಾದೆನೆನ್ನಿ. ಹೀಗೆ ಕೂದಲು ಮೊಟಕುಗೊಳಿಸುವಲ್ಲಿ ಸಂಗಪ್ಪನದೂ ಚೂರು ಸ್ವಾರ್ಥ ಇರಬೇಕೇನೋ ಎಂದು ತಿಳುವಳಿಕೆ ಬಂದ ಮೇಲೆ ಮೂಡಿದ ಅನುಮಾನ. ಹುಡುಗರು ಹೇಳಿದಂತೆ ಕೂದಲು ಉದ್ದ ಬಿಡುತ್ತ ಹೋದರೆ ಪ್ರತಿ ತಿಂಗಳೂ ಪದೇ ಪದೇ ಕಟ್ಟಿಂಗ್ ಮಾಡುತ್ತಿರಬೇಕು. ಹೇಳೀ ಕೇಳೀ ಉದ್ರಿ ಗಿರಾಕಿಗಳು ಬೇರೆ. ಅದೇ ಮಿಶಿನ್ ಹಿಡಿದೋ ಇಲ್ಲಾ ಕತ್ತಿ ಹಚ್ಚಿಯೋ ಕಳಿಸಿಬಿಟ್ಟರೆ ನಾಕೈದು ತಿಂಗಳು ಹೊರಳಿ ಅಂಗಡಿ ಕಡೆ ಹಣಿಕಿಯೂ ನೋಡಿರಬಾರದಲ್ಲ. ಅಪ್ಪ ಮತ್ತು ಸಂಗಪ್ಪ ಅವರುಗಳ ಮನಸ್ಸಿನಲ್ಲಿ ಇದೇ ಮಸಲತು ಇರಬೇಕೆಂದು ನನ್ನ ಭಾವನೆ.

ನನ್ನೂರಿನ ಹಡಪದ ಜನಾಂಗದವರು ಕಾಯಕ ನೀತಿಯನ್ನು ಬಹು ನೇಮದಿಂದ ಪರಿಪಾಲಿಸಿಕೊಂಡು ಬರುತ್ತ ತಮ್ಮ ವೃತ್ತಿ ಗೌರವವನ್ನೇನೋ ಕಾಪಾಡಿಕೊಂಡಿದ್ದವರಾದರೂ, ಜೊತೆಯಲ್ಲಿ ಉಚ್ಚ ವರ್ಗದವರ ಮನೋಧರ್ಮಕ್ಕೆ ಮಣಿದೋ ಏನೋ ತಾವೂ ಕೂಡ ಆರ್ಥಿಕವಾಗಿ ಎಷ್ಟೇ ಬಡವರಾಗಿದ್ದರೂ ಊರ ಮನೆಯವರಾಗಿ ಉಚ್ಚ ಜಾತಿಯ ಹುಸಿ ಪ್ರತಿಷ್ಠೆಯನ್ನು ಹೊಂದಿದವರಾಗಿದ್ದರಿಂದ ಆಗ ಸ್ಥಳೀಯ ಕೇರಿಗಳಲ್ಲಿ ವಾಸಿಸುವ ನಿಮ್ನ ವರ್ಗದವರ ತಲೆ ಮುಟ್ಟುತ್ತಿರಲಿಲ್ಲ. ಅವರಲ್ಲಿಯೇ ಪ್ರತ್ಯೇಕ ಹಜಾಮರಿರುತ್ತಿದ್ದರು. ವರ್ಷದಲ್ಲಿ ಒಂದೆರಡು ಬಾರಿ ಹಾಜರಾಗುತ್ತಿದ್ದ ಅವರು, ಕಟ್ಟಿಂಗ್‌ನಲ್ಲಿ ಅಷ್ಟೊಂದು ಕರಕುಶಲಿಗಳಾಗಿರುತ್ತಿರಲಿಲ್ಲ. ಕತ್ತಿಯನ್ನು ಮಸೆದು ಮಸೆದು, ಚರ್ಮದ ಪಟ್ಟಿಯ ಮೇಲೆ ತೀಡಿ, ಮರದ ಕೆಳಗೆ ಕೂರಿಸಿ ಕೂದಲನ್ನು ಕೆತ್ತಿ ತೆಗೆಯಬಲ್ಲರಷ್ಟೆ. ಶಾಲೆಗೆ ಬರುತ್ತಿದ್ದ ನಿಮ್ನ ವರ್ಗದ ನನ್ನ ಕೆಲ

ಮದುವೆ

ಹರೆಯ ಉಕ್ಕಿ
ಸೊಕ್ಕಿದೆಡೆ
ಗುರು-ಹಿರಿಯರು
ಕೂಡಿ ಹಾಕುವ
ಮೂಗುದಾಣ.

– ಜಗದೀಶ ಶ. ದುದ್ಗಿ



ಸ್ನೇಹಿತರು ಊರ ಮನೆಯ ಹಡಪಿಗರು ತಮ್ಮ ಕಟ್ಟಿಂಗ್ ಮಾಡುವುದಿಲ್ಲವೆಂಬ ಅವಕಾಶವನ್ನೇ ಬಳಸಿಕೊಂಡು, ಬಾಡಿಗೆ ಸೈಕಲ್ ಏರಿ ಹತ್ತಿರದ ನಗರ ಪ್ರದೇಶಗಳಿಗೆ ತೆರಳಿ ಕೇಳಿದಷ್ಟು ಕಾಸು ಕೊಟ್ಟು ಲೀಲಾಜಾಲವಾಗಿ ಆಗ ಚಾಲ್ತಿಯಲ್ಲಿದ್ದ ಅಮಿತಾಬ್‌ನ ಹಿಪ್ಪಿಕಟ್ಟಿಂಗ್ ಮಾಡಿಸಿಕೊಂಡು ಬಂದು ನಮ್ಮ ಶಾಲೆಗಳಲ್ಲಿ ಹೀರೋಗಳಂತೆ ಮಿಂಚುತ್ತಿದ್ದರು. ಮೋಟುಗೂದಲಿನ ನಾವೊ ಹಟ್ಟಿಯಲ್ಲಿ ಹಿಕ್ಕಿ ಬಳಿಯುವವರಂತೆಯೋ, ತುಸು ಬೆಳ್ಳಗಿರುವವರಾದರೆ ಮಠಗಳಲ್ಲಿ ಆರತಿ ತಟ್ಟೆ ಹಿಡಿಯುವ ಹುಡುಗರಂತೆಯೋ ಕಾಣುತ್ತಿದ್ದೆವು. ಅವರನ್ನು ನೋಡಿ ಕರುಬುವುದಷ್ಟೇ ನಮ್ಮ ಪಾಲಿಗೆ. ಏನೂ ಮಾಡುವ ಹಾಗಿರಲಿಲ್ಲ. ಆ ಪರಿಸ್ಥಿತಿ ಮುಂದೆ ಸುಧಾರಿಸಿತೆನ್ನಿ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿ ಹೆಸರು ಬಳಕೆಯಾದಷ್ಟು ಬೇಕಾಬಿಟ್ಟಿ ಯಾರ ಹೆಸರೂ ಬಳಕೆಯಾಗಲಿಲ್ಲ. ರೈಲಿನಲ್ಲಿ ಮೂರನೇ ದರ್ಜೆಯಲ್ಲಿ (ಈಗಿಲ್ಲ) ಪ್ರಯಾಣಿಸಿದರೆ ಆಗ ಅದು ಗಾಂಧಿ ಕ್ಲಾಸು; ಪರೀಕ್ಷೆ ಮೂರನೇ ದರ್ಜೆಯಲ್ಲಿ ಪಾಸು ಮಾಡಿದರೂ ಗಾಂಧಿ ಕ್ಲಾಸು; ಬಿಳಿ ಟೊಪ್ಪಿಗೆಗಂತೂ ಮೊದಲೆ ಗಾಂಧಿ ಟೊಪ್ಪಿಗೆಯೆಂದು ಹೆಸರು ಕುಂತಿದ್ದು; ಇನ್ನು ಸುಮ್ಮನೆ ತಲೆ ಬೋಳಿಸಿದರೂ ಅದಕ್ಕೆ ಗಾಂಧಿ ಹೆಸರೇ ಹೇಳುವುದೆ? ಬಹುಶಃ ಯಾವ ರಾಷ್ಟ್ರದಲ್ಲಿಯೂ ನಾಯಕರು ನಮ್ಮಲ್ಲಿಯಷ್ಟು ಅಗ್ಗವಾಗಿರಲಿಕ್ಕಿಲ್ಲ.

ಅದೇ ಸರಿಸುಮಾರಿಗೆ, ಸ್ಥಳೀಯ ಯುವಕರಿಂದ ಸಹಕಾರಿ ತತ್ವದ ಆಧಾರದ ಮೇಲೆ ಗಾಂಧಿ ವಾಚನಾಲಯವೊಂದು ತೆರೆಯಲ್ಪಟ್ಟಿತು. ನಮ್ಮ ದೇಶದಲ್ಲಿ ಸಹಕಾರ ಚಳುವಳಿ ಮಣ್ಣು ಮುಕ್ಕಿದಂತೆಯೇ, ನಮ್ಮ ವಾಚನಾಲಯವೂ ಒಂದೇ ವರ್ಷದಲ್ಲಿ ಬಾಗಿಲು ಹಾಕಿತು. ಆದರೆ, ನನ್ನ ಪಾಲಿಗೆ ಸಂಗಪ್ಪನ ಕ್ಷೌರದಂಗಡಿಯೇ ಗಾಂಧಿ ವಾಚನಾಲಯದಂತೆ ಭಾಸವಾಯಿತು. ಆರಂಭದಿಂದಲೂ, ಆತನ ಅಂಗಡಿಯಲ್ಲಿರುವ ದಿನಪತ್ರಿಕೆ ಹಾಗೂ ವಾರಪತ್ರಿಕೆಗಳೇ ನನಗೆ ಓದುವ ಹವ್ಯಾಸವನ್ನು ಅಂಟಿಸಿದ್ದು.

ಗಿರಾಕಿಗಳಿಲ್ಲದ ಮಧ್ಯಾಹ್ನ ಹೊತ್ತು ನಾನು ಸಂಗಪ್ಪನಂಗಡಿಯಲ್ಲಿನ ವಾರಪತ್ರಿಕೆ ಓದಲು ಹೋದರೆ, ಅಲ್ಲಿ ಕಾದಿರುತ್ತಿದ್ದ ಕಣ್ಣು ಮಂಜಾಗಿದ್ದ ಮುದುಕರಿಬ್ಬರು ನನಗೆ 'ಭಾಳಾ ಶಾಣ್ಯಾ ಇವಾ' ಎಂದು ಪೂಸಿ ಮಾಡಿ ಹೊಗಳಿ ಅಂದಿನ ದಿನಪತ್ರಿಕೆ ಓದಲು ಹಚ್ಚುತ್ತಿದ್ದರು. ಅಗ್ರಲೇಖನ, ಮುಖ್ಯ ಸುದ್ದಿ ಮಾತ್ರವಲ್ಲ ಮುಖಪುಟದಲ್ಲಿರುತ್ತಿದ್ದ ಸಂಪಾದಕ ರಂಗನಾಥ ದಿವಾಕರರ ಹೆಸರಿನಿಂದ ಆರಂಭಿಸಿ ಕೊನೆಯ ಪುಟದಲ್ಲಿರುತ್ತಿದ್ದ ಸೋಡಚೀಟಿ ನೋಟಿಸಿನವರೆಗೆ ಬಿಡದೇ ಓದಿಸಿ ಕೇಳುವುದು ಅವರ ನಿತ್ಯದ ಚಟ. ಅವರೊಂದಿಗೆ ತನ್ನ ಹೆಸರು ಮಾತ್ರ ಬರೆಯಲು ಬರುತ್ತಿದ್ದ ನಿರಕ್ಷರಕುಕ್ಷಿ ಸಂಗಪ್ಪನೂ ಸೇರುತ್ತಿದ್ದ. ಅದನ್ನು ಪೂರೈಸುವಲ್ಲಿ-ಮಂತ್ರಗಳ ಅರ್ಥವೇ ಗೊತ್ತಿರದಿದ್ದರೂ ಯಾಂತ್ರಿಕವಾಗಿ ಅವನ್ನು ಒದರುವ ಪುರೋಹಿತರಂತೆ ನಾನು ಕೂಡ ಅದು ಅನಿವಾರ್ಯ ಕರ್ಮವೆನ್ನುವಂತೆ, ಬಡಬಡಾ ಎಂದು ಓದಿ ಮುಗಿಸಲು ಹವಣಿಸುತ್ತಿದ್ದೆ. ಅಪ್ರಯತ್ನಪೂರ್ವಕವಾಗಿ ಹಾಗೆ ಓದುವಾಗ ಆಗಿನ ಶಿಕ್ಷಣ ಮಂತ್ರಿ ಶಂಕರೇಗೌಡ, ಅರ್ಥಮಂತ್ರಿ ರಾಮಕೃಷ್ಣ ಹೆಗಡೆ ಮೊದಲಾದವರ ಹೆಸರು ಚಿತ್ತದಲ್ಲಿ ಉಳಿದು, ಹೈಸ್ಕೂಲಿನಲ್ಲಿ 'ಜನರಲ್ ನಾಲೇಜ್' ಆಗಿ ಉಪಯೋಗಕ್ಕೂ ಬಂದದ್ದಿದೆ. ಅನೇಕ ವೇಳೆ ಟೈಮ್ ಪಾಸಿಗೆ ತಿಂದ ಸರಕೂ ಟಾನಿಕ್ ಆಗಿ ರಕ್ತ ಸೇರುವುದಿಲ್ಲವೆ ಹಾಗೆ.

ಕೆಲವೊಮ್ಮೆ ಆ ಮುದಿಯರನ್ನು ಯಾಮಾರಿಸಲು, ಓದುವ ಅವಸರದಲ್ಲಿ ಅವರಿಗೆ ಗೊತ್ತಾಗದಂತೆ ನಡುವಿನ ವಾಕ್ಯಗಳನ್ನು ಹಾರಿಸಿಕೊಂಡು ಹೋಗುತ್ತಿದ್ದೆ (ಸಂಪಾದಕರಂತೆ!) ಅವರೋ ಬಲುಘಾಟಿಗಳು. ತಕ್ಷಣ ಕಿಸೆಗಳನ್ನು ಹಿಡಿಯುವಂತೆ ಹಿಡಿದು ಓದದೇ ಬಿಟ್ಟ ವಾಕ್ಯಗಳನ್ನೂ ಮತ್ತೆ ಓದಲು ಹಚ್ಚುತ್ತಿದ್ದರು. ನನ್ನಲ್ಲಿ ವಾಚನಾಭಿರುಚಿ ಬೆಳೆದದ್ದೇ ಹೀಗೆ. ಆಯುಷ್ಕರ್ಮ ಶಾಲೆಯಲ್ಲಿ ಎಂದು ಹೇಳಿಕೊಳ್ಳಲು ನನಗಾವ ಹಿಂಜರಿಕೆಯೂ ಇಲ್ಲವೆನ್ನಿ. ಅದಕ್ಕೇ ನಾನು ಹೇಳಿದ್ದು ಸಂಗಪ್ಪನ ಕೇಶಕರ್ತನ ಶಾಲೆಗೆ 'ಗಾಂಧಿ ವಾಚನಾಲಯ' ಎಂದರೂ ಆದೀತು.

ದಿನನಿತ್ಯ ಹಾಗೆ ಪೇಪರು ಓದಿಸಿ ಓದಿಸಿ ನನ್ನನ್ನು ತರಬೇತುಗೊಳಿಸಿದ್ದ ಆ ಹಳೆಯ ಮುದುಕರ್‍ಯಾರೂ ಈಗ ಬದುಕಿ ಉಳಿದಿಲ್ಲ. ಸಂಗಪ್ಪನೂ ಈಗ ವೃದ್ಧಾಪ್ಯದ ದಿನಗಳಲ್ಲಿದ್ದಾನೆ. ಬೀದಿಯಲ್ಲಿ ಹಾದು ಹೋಗುವವರನ್ನೂ ಕೂಗಿ ಕರೆದು ಆಪ್ತವಾಗಿ ಮಾತನಾಡಿಸುವ ಪರಿ; ಉದ್ರಿ ಗಿರಾಕಿಗಳೇ ಹೆಚ್ಚಾಗಿರುತ್ತಿದ್ದ ಊರಿನಲ್ಲಿ ಬದುಕನ್ನು ನಿಭಾಯಿಸುತ್ತಿದ್ದ ಸದಾ ವಿಭೂತಿ ಪಟ್ಟೆಗಳಿಂದ ರಾರಾಜಿಸುತ್ತ ಶಿವಲಿಂಗವನ್ನು ನೆನಪಿಸುವ ಮುಖದಿಂದ 'ಶರಣು' ಎಂದೇ ಬಾಯಿ ಬಿಡುತ್ತ ಯಾವ ಕಾಯಕದಯ್ಯನಿಗೂ ಕಡಿಮೆಯಿಲ್ಲದ ಬದುಕು ನಡೆಸಿ; ಅಲ್ಲಲ್ಲಿ ಅಂಗಿ ಹರಿದಿದ್ದರೂ ತಪ್ಪದೇ ಅಂಗಡಿಗೆ ಪತ್ರಿಕೆಗಳನ್ನು ತರಿಸಿ ನನ್ನಂತವರಿಂದ ಓದಿಸಿ ಕೇಳಿ ಅಂದಿನ ದಿನಮಾನಗಳ ಬಗೆಗೆ ಚರ್ಚಿಸುತ್ತಿದ್ದ ಆತನ ಆ ಚಿತ್ರವನ್ನೂ ಹಾಗೂ ಆತನ ಆ ಆಯುಷ್ಕರ್ಮ ಶಾಲೆಯನ್ನೂ ಮರೆಯಲಾದೀತೆ!. ●



Good
Going!
HONDA
CD100

ದ್ವಿಚಕ್ರ ವಾಹನಗಳು

ಭದ್ರಾವತಿ ಅನಂತ್

ನೋ ಪ್ರಾಬ್ಲಮ್!

ಮರ ಸೇರಿದ ಮೊಬೈಕಿನ ಮುರುಟಿದ ಸ್ಪೋಕ್ಸ್‌ಗಳಂತಹ ರಸ್ತೆಗಳು, ನಾಯಿಹೊಕ್ಕ ಕುರಿಮಂದೆಯಂತಹ ಟ್ರಾಫಿಕ್, ಮೂಗಿಗೊಂದು ಮುಖವಾಡ ಕಂಪಲ್ಸರಿ ಮಾಡಿಬಿಡುವ ಪಲ್ಯೂಷನ್, ರಾಜಕೀಯದಲ್ಲಿನ ರೌಡಿಗಳ ಸಂಖ್ಯೆಯಂತೆ ಏರುತ್ತಲೇ ಇರುವ ಬೆಲೆಗಳು, ಬೆನ್ನೆಲುಬಿಲ್ಲದ ಸರ್ಕಾರಗಳಷ್ಟೇ ವೇಗವಾಗಿ ಮಾಯವಾಗುತ್ತಿರುವ ಪೆಟ್ರೋಲ್ ಸೆಲೆಗಳು, ಹೆಚ್ಚುತ್ತಿರುವ ಆಕ್ಸಿಡೆಂಟ್‌ಗಳು, ಹದಗೆಡುತ್ತಿರುವ ಆರೋಗ್ಯ, ಯಾವುದೂ No problem.

ನಮಗೆ ಬೇಕಿರುವುದೆಲ್ಲಾ ಒಂದು ರೊಂಯ್ಯನೆ ಓಡುವ ಟೂ-ವ್ಹೀಲರ್. ಪುಟ್ಟ ಮನೆಯ ಕಿಷ್ಕಿಂಧದಂಗಳದಲ್ಲಿ ಠೀವಿಯಿಂದ ನಿಲ್ಲಿಸಲು, ಮೆಚ್ಚಿದ ಹುಡುಗಿಯನ್ನು ಬೆಚ್ಚಗೆ ತಬ್ಬಿ ಕೂಡಿಸಿಕೊಂಡು ರೋಡಿನಲ್ಲಿ ಹಾರಲು, ಕತ್ತೆಯೂ ಹೊರಲಾಗದ ಲಗೇಜ್ ಹೊತ್ತು ವ್ಯಾಪಾರಕ್ಕೆ ತಿರುಗಲು, ಸೇಲ್ಸ್ ಎಕ್ಸಿಕ್ಯುಟಿವ್ ಕೆಲಸಕ್ಕೆ ಅರ್ಜಿ ಗುಜರಾಯಿಸಲು, ಎಲ್ಲಕ್ಕಿಂತ ಮುಖ್ಯವಾಗಿ ಬಸುರಿ ಬಸ್ಸುಗಳ ಗರ್ಭದಲ್ಲಿ ಒದ್ದಾಡುವುದನ್ನು ತಪ್ಪಿಸಿಕೊಳ್ಳಲು ಒಂದು ಪುಟ್ಟ ಗಾಡಿ.

ಕಸ್ತೂರಿಯ ತುತ್ತೂರಿಯಂತೆ ಸುವೇಗ ಅಥವಾ ಒಂದು ಲೂನಾದಿಂದಲೇ ಸೊಸೈಟಿಯಲ್ಲಿ ಬೀಗುವ ಕಾಲ ಒಂದಿತ್ತು. ಈಗ ಅವೆರಡೂ ಹೆಚ್ಚು ಕಡಿಮೆ Vintage ಗಾಡಿಗಳ ಗುಂಪಿಗೆ ಸೇರಿರೋದು ಬದಲಾಗುತ್ತಿರುವ ಕಾಲಕ್ಕೆ, ಅಭಿರುಚಿಗೆ, ತಂತ್ರಜ್ಞಾನಕ್ಕೆ ಉದಾಹರಣೆ. ಈಗಿನ ಕಾಲೇಜು ಹುಡುಗರ, ಹೊಸದಾಗಿ ಮದುವೆಯಾದ ಕನಸುಗಾರನ, ಈಗ ತಾನೇ ಕೆಲಸಕ್ಕೆ ಸೇರಿದ ಸ್ವೀಟ್‌ಟ್ವೆಂಟಿಯ dream machineಗಳೇ ಬೇರೆ. ಹೊಂಡಾದಿಂದ ಸನ್ನಿಯವರೆಗೆ, ಚೇತಕ್‌ನಿಂದ ಮಾರ್ವೆಲ್‌ವರೆಗೆ



ಎಲ್ಲಕ್ಕೂ ತಮ್ಮದೇ ಆದ ಮಾರುಕಟ್ಟೆಯಿದೆ.

ಒಂದು ಅಂದಾಜಿನ ಪ್ರಕಾರ ಕಳೆದ ಐದು ವರ್ಷಗಳಲ್ಲಿ ಬೆಂಗಳೂರಿನ ರಸ್ತೆಗಳ Congestion ಮೂರುಪಟ್ಟು ಹೆಚ್ಚಿದೆ. ಇದಕ್ಕೆ ದ್ವಿಚಕ್ರವಾಹನಗಳ ಕೊಡುಗೆ ಶೇ.೪೨. ಭಾರತದಲ್ಲೇ ಅತಿ ಹೆಚ್ಚು ದ್ವಿಚಕ್ರವಾಹನ ಮಾರಾಟವಾಗುವುದು ಬೆಂಗಳೂರಿನಲ್ಲಿ. ಕಳೆದ ಒಂದು ವರ್ಷದಲ್ಲೇ ಸುಮಾರು ೩೫,೦೦೦ ವೆಸ್ಪಾ ಸ್ಕೂಟರ್‌ಗಳು, ೪೨,೦೦೦ ಬಜಾಜ್ ಸ್ಕೂಟರ್‌ಗಳು, ೧೫,೦೦೦ TVS ಬೈಕುಗಳು ಹಾಗೂ ೬೨,೦೦೦ ಮೊಪೆಡ್‌ಗಳು ರಸ್ತೆಗಿಳಿದಿವೆ. ಒಟ್ಟಾರೆ ಟೂವೀಲರ್ ಮಾರುಕಟ್ಟೆಯಲ್ಲಿ ಬಜಾಜ್ ಒಂದಕ್ಕೇ ಸುಮಾರು ಶೇ.೩೮ ಪಾಲಿದೆ. 'ಜಸ್ಟ್ ಕಾಂಟ್ ಬೀಟ್ ಎ ಬಜಾಜ್' ನ ಭದ್ರಕೋಟೆ ಈಚಿನ ದಿನಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಅಲ್ಲಾಡ ತೊಡಗಿದೆ.

ಬಜಾಜ್‌ಗೆ ನೇರವಾದ ಪಂಚ್ ನೀಡಿರುವುದು ವೆಸ್ಪಾ. ಸ್ಕೂಟರ್ ಜಗತ್ತಿನಲ್ಲಿ ತನ್ನನ್ನು ಬಿಟ್ಟರಿಲ್ಲ ಎನ್ನುವಂತಿದ್ದ ಬಜಾಜ್, ಯಾವತ್ತೂ ಗ್ರಾಹಕರ ಆಸಕ್ತಿ-ಹಿತಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿರಲೇ ಇಲ್ಲ. ಒಂದೇ ಮಾದರಿಯಲ್ಲಿ ಅಲ್ಪ-ಸ್ವಲ್ಪ ಕಣ್ಣೊರೆಸುವ ಬದಲಾವಣೆ ಮಾಡಿ, ಬೇರೆ ಹೆಸರಿಟ್ಟು, ಬೇರೆ ಬೆಲೆ ನಮೂದಿಸಿ ಮಾರುಕಟ್ಟೆಗೆ ತಳ್ಳಿದ ನಿದರ್ಶನಗಳೂ ಇವೆ. ಸರ್ವಿಸ್‌ನಲ್ಲಿಯೂ ಇದೇ ಧೋರಣೆ. ಮಾರುತಿಯ ಮುಂಚಿನ ದಿನಗಳಲ್ಲಿ ಅಂಬಾಸಿಡರ್ ಇದ್ದ ಹಾಗೆ. The Customer was taken for granted.

ಕಾರು ಮಾರುಕಟ್ಟೆಯಲ್ಲಿ ಮಾರುತಿ ಮಾಡಿದ ಕೆಲಸವನ್ನ ದ್ವಿಚಕ್ರವಾಹನಗಳ ವಿಷಯದಲ್ಲಿ ವೆಸ್ಪಾ, ಹೀರೋ ಹಾಗೂ ಟಿ.ವಿ.ಎಸ್.ಗಳು ಮಾಡಿದವು. ಇವತ್ತು, ಒಂದು ಸಮೀಕ್ಷೆಯ ಪ್ರಕಾರ ಸುಮಾರು ೫೦ ಮುಖ್ಯ ಮಾಡೆಲ್‌ಗಳ Option ಗ್ರಾಹಕನಿಗಿದೆ. ವೆಸ್ಪಾದ ಸ್ಕೂಟರ್‌ಗಳು, ಕೈನೆಟಿಕ್ ಆಟೋಗೇರ್ ಬ್ಯೂಟಿಗಳು, ಹೀರೋ ಹಾಗೂ ಟಿವಿಎಸ್‌ನ ಅರ್ರೋಗೆಂಟ್ ಬೈಕ್‌ಗಳು Latest craze. ದ್ವಿಚಕ್ರವಾಹನದ ಮಾರುಕಟ್ಟೆ ಈಗಿನ ಶೇ.೧೨ ಗತಿಯಲ್ಲೇ ಬೆಳೆದರೆ ಬಹುಶಃ ಮುಂದಿನ ಶತಮಾನದ ಆರಂಭದ ಹೊತ್ತಿಗೇ ಬೆಂಗಳೂರಿನಲ್ಲಿ ತಡೆಯುಲಾಗದ Congestion ಉಂಟಾಗುತ್ತದೆ. ಆದರೆ, ಮೋಟಾರ್ ತಯಾರಕರಿಗೆ ಅದರಿಂದಾಗುವ ತೊಂದರೆಯೇನಿಲ್ಲ ಹೇಗೂ ಸಾರ್ವಜನಿಕ ಸಂಚಾರ ವ್ಯವಸ್ಥೆಯ ಲೋಪಗಳ major beneficiaries ಅವರೇ ತಾನೆ?


●

ಸ್ಕೂಟರ್ ಜಗತ್ತು

ಹಮಾರಾ ಬಜಾಜ್ ಹಾಗೂ ಇಟಾಲಿಯನ್ ಕನೆಕ್ಷನ್‌ನ ವೆಸ್ಪಾ ಸ್ಕೂಟರ್ ವಿಭಾಗದ ಪೈಲ್ವಾನುಗಳು. ತಲೆ ತಲಾಂತರದಿಂದ ''ಇದೇ ನೋಡಿ ಸ್ಕೂಟರ್; ಇದು ಮಾತ್ರವೇ ಸ್ಕೂಟರ್'' ಅಂತ ಗ್ರಾಹಕರ ತಲೆಸವರುತ್ತಿದ್ದ ಬಜಾಜ್‌ನ 'ಈಗೋಗೆ' ಈಗ ೧೦ ವರ್ಷಗಳ ಹಿಂದೆ ಬಲವಾದ ಪೆಟ್ಟು ನೀಡಿದ್ದು ಇಟಲಿಯ ವೆಸ್ಪಾ ಪಿಯಾಜಿಯೋ. ಇಂಡಿಕೇಟರ್‌ನಂಥ ಸಣ್ಣ, ಅತ್ಯಗತ್ಯ ವಿಷಯದ ಬಗ್ಗೆಯೂ ಎಂದೂ ತಲೆಕೆಡಿಸಿಕೊಳ್ಳದೆ ಇದ್ದೊಂದು ಡಿಸೈನನ್ನೇ Ultimate ಅಂತ ಮಾರುಕಟ್ಟೆಗೆ ತಳ್ಳುತ್ತಿದ್ದ ಬಜಾಜ್, ಬಹುಶಃ ವೆಸ್ಪಾದ ಸವಾಲನ್ನು ತೀರಾ ಈಚಿನವರೆಗೂ ಗಂಭೀರವಾಗಿ ತೆಗೆದುಕೊಂಡಿರಲೇ ಇಲ್ಲ. ಐದು ವರ್ಷಗಳ ಹಿಂದೆ ಬಜಾಜ್‌ನ ಮಾರ್ಕೆಟ್ ಶೇರಿನಲ್ಲಿ ಸುಮಾರು ಶೇ.೧೫ರಷ್ಟನ್ನು ವೆಸ್ಪಾ ಕಬಳಿಸಿದ ಮೇಲಷ್ಟೇ ಬಜಾಜ್ ಕೊಡವಿಕೊಂಡೆದ್ದಿದ್ದು. ಈಗ ಬಜಾಜ್‌ನಲ್ಲಿ ಮೂರು ಮಾಡೆಲ್‌ಗಳಿವೆ. ಆದರೆ ಯಾವುದರಲ್ಲಿಯೂ ಹೆಚ್ಚು ವ್ಯತ್ಯಾಸಗಳೇನಿಲ್ಲ. ಟಿಪಿಕಲ್ ಆಫ್ ಬಜಾಜ್!

ರೂ. ೨೭,೦೦೦ ದ ಬಜಾಜ್ ಚೇತಕ್ ಇವತ್ತಿಗೂ ಆ ಕಂಪನಿಯ Flagship ಗಾಡಿ. ಗಡಸು ದೇಹ, ಲೋ ಮೇಂಟೆನೆನ್ಸ್ ಹಾಗೂ ಗ್ರಾಹಕರ ರಾಯಲ್ಟಿ ಚೇತಕ್‌ನ Strengths. ಪುಟ್ಟಗಾಲಿಗಳ, ವೇಗದ ಚಾಲನೆಗೆ ಸುತರಾಂ ಬಗ್ಗದ, ದೊಡ್ಡ ಹಂಪುಗಳ ಮೇಲೆ ತಬ್ಬಿಬ್ಬಾಗುವಂತೆ ಅಪ್ಪಳಿಸಿ ಬಿಡುವ ಸೂಪರ್ ಎಕ್ಸೆಲ್ ಬೆಲೆ ರೂ.೨೬,೫೦೦. ಅಂತೂ ಹೇಗೋ ಅದಕ್ಕೂ ಒಂದು ಮಾರುಕಟ್ಟೆ ಇದೆ! ಇನ್ನು, ಇದೀಗ ಹೊರಬಂದಿರುವ ಕ್ಲಾಸಿಕ್ ಎಸ್.ಎಲ್.ನ ವೈಶಿಷ್ಟ್ಯ ಸುಧಾರಿತ ವಿನ್ಯಾಸ, ಜರಡಿಯಂತಹ ರಸ್ತೆಗಳಲ್ಲಿ ಸ್ವಲ್ಪ ಮಟ್ಟಿನ Comfort ನೀಡುವ anti-dive ಸಸ್ಪೆನ್‌ಷನ್ ಹಾಗೂ ಇದುವರೆಗೆ ಕಾರುಗಳಿಗೆ ಮಾತ್ರವೇ ಉಪಯೋಗಿಸಲಾಗುತ್ತಿದ್ದ ಪಾಲಿಯೂರಿಥೀನ್ ಬಣ್ಣ. ಬೆಲೆ ರೂ. ೩೧,೦೦೦.

ಬಜಾಜ್‌ಗೆ ಹೋಲಿಸಿದರೆ ವೆಸ್ಪಾ ದುಬಾರಿ. ವೆಸ್ಪಾ ಎನ್.ವಿ.ಗೆ ರೂ.೩೦,೩೦೪, ಸೆಲೆಕ್ಟ್-೨ಗೆ ರೂ. ೩೪,೮೦೧, ಸುಪ್ರಿಮೋಗೆ ರೂ. ೪೦,೫೨೯ ಹಾಗೂ ಸ್ಟಾರ್‌ಗೆ ರೂ.೩೭,೮೯೬. ಆದರೆ, ಶೀಘ್ರ ಪಿಕಪ್, ಡ್ರೈವಿಂಗ್ ಕಂಫರ್ಟ್, ವಿನ್ಯಾಸ, ಬಣ್ಣಗಳ ವೈವಿಧ್ಯ, ಎಂದೂ ಕೈ ಬಿಡದ ಬ್ರೇಕಿಂಗ್ ವ್ಯವಸ್ಥೆ, ಪಿಲಿಯನ್ ಸುರಕ್ಷತೆ ಎಲ್ಲವೂ Value for money ಅನ್ನಿಸಿ ಬಿಡುತ್ತವೆ. ಒಂದು ವಿಷಯದಲ್ಲಂತೂ ವೆಸ್ಪಾ ಬಜಾಜ್‌ಗಿಂತ ಖಂಡಿತವಾಗಿಯೂ ಮೈಲಿಗಳಷ್ಟು ಮುಂದಿದೆ.



ಇವನಾವ ಜಾತಿ

ವಿಜ್ಞಾನ ಪ್ರಯೋಗ ಶಾಲೆಯಲ್ಲಿ
ಗಾಜಿನ ಕಪಾಟಿನಲ್ಲಿ ಮೊಳಗೆ
ನೇತಾಡುತಿಹ
ಈ ಮಾದಿಯ ಮಾನವ
ಇವನಾವ ಜಾತಿ?

ಗೋರಿಯೋ, ಶಿಲುಬೆಯೋ
ಸ್ಮಶಾನವೋ, ಗುಡಿ ಕಟ್ಟೆಯೋ
ಎಲ್ಲಿದ್ದನೀತ?

ಇವನ ಹಣೆ, ಮೈಯಲ್ಲಿ
ಜಾತಿಯ ಕುರುಹಿಲ್ಲ
ಇವನಾವ ಜಾತಿ?

– ಚಿದಂಬರ ನಿಂಬರಗಿ

ಅದು ಅತ್ಯುತ್ತಮ automatic ವ್ಯವಸ್ಥೆಯ ಸರ್ವಿಸ್ ವೆಸ್ಪಾದ ಎಲ್ಲ ಡೀಲರುಗಳ ಬಳಿಯೂ ಲಭ್ಯ. ಬಜಾಜ್ ಸರ್ವೀಸ್ ಕೇಂದ್ರಗಳಲ್ಲಿ ನಿಮ್ಮನ್ನು ಕ್ಯಾರೇ ಅಂದರೆ ನಿಮ್ಮ ಅದೃಷ್ಟ!

ಕೈನೆಟಿಕ್ ಹೊಂಡಾ


ಫೋರ್-ಥ್ರೀ-ಟೂ-ಒನ್-ನ್ಯೂಟ್ರಲ್ ಅನ್ನುವ ಗೇರುಗಳ ಏಕತಾನದಲ್ಲಿ ಸಪ್ಪಗಾಗಿದ್ದ ಟೂವೀಲರ್ ಲೋಕಕ್ಕೆ ದಿಢೀರಂತ ಹಾರಿ ಬಂದು ಸಂಚಲನ ಉಂಟು ಮಾಡಿದ್ದು ಎಗ್ಗಿಲ್ಲದೆ ಸಾಗುವ ಕೈನೆಟಿಕ್ ಹೊಂಡಾ ಬ್ಯೂಟಿಗಳು. ಬೆಲೆಯಲ್ಲಿ ಬೈಕ್, ಡ್ರೈವ್‌ನಲ್ಲಿ ಮೊಪೆಡ್‌ನ ಅನುಭವ ಹಾಗೂ ಸವಾರಿಯಲ್ಲಿ ಸ್ಕೂಟರ್‌ನ ಕಂಫರ್ಟ್. ಅತ್ತ ಬೈಕಲ್ಲದ ಇತ್ತ ಮೊಪೆಡಲ್ಲದ ಸ್ಕೂಟರ್ ಜಾತಿಗೆ ಸೇರಿದ ಹೈಬ್ರಿಡ್ ತಳಿಗಳು.

ಅತ್ಯುತ್ತಮ ರೋಡ್ ಗ್ರಿಪ್, ಹಗುರದೇಹ, ಗೇರಿಲ್ಲದ ಚಾಲನೆ ಹಾಗೂ ಸೀರೆಯುಟ್ಟು ಓಡಿಸಬಹುದಾದ ಅನುಕೂಲ. ಇವೆಲ್ಲವೂ ಕೈನೆಟಿಕ್ ಹೊಂಡಾವನ್ನು instant hit ಮಾಡಿಬಿಟ್ಟವು. ವಿಶೇಷವಾಗಿ ಆಧುನಿಕ ಮಹಿಳೆಯ ಸರ್ಕಲ್ಲಿನಲ್ಲಿ. ಹೊಂಡಾ ಈಗ ಎರಡು ಮಾಡೆಲ್‌ಗಳಲ್ಲಿ ಲಭ್ಯವಿದೆ. Dx ಹಾಗೂ Zx ದೇಹದ ವಿನ್ಯಾಸ ಹಾಗೂ ಬೆಲೆ ಬಿಟ್ಟರೆ ಹೆಚ್ಚು ವ್ಯತ್ಯಾಸವೇನೂ ಇಲ್ಲ. Dxಗೆ ರೂ. ೩೭,೩೨೩. ಹಾಗೂ Zxಗೆ ರೂ.೩೮,೮೯೭. ಟಾರ್ಗೆಟ್ : ಮುಖ್ಯವಾಗಿ ನೌಕರಿ ಮಾಡುವ ಮಹಿಳೆಯರು, ಕಾಲೇಜ್ ಹುಡುಗಿಯರು. ಈಚೆಗೆ ಗಂಡಸರಿಗೂ ಪ್ರಿಯ. ಒಂದೇ ನ್ಯೂನತೆ, ಮೈಲೇಜ್. ಪ್ರತಿ ೩೫ ಕಿ.ಮೀ.ಗಳಿಗೊಂದು ಲೀಟರ್ ಪೆಟ್ರೋಲ್ ಹಾಕಿಸುವುದಕ್ಕೆ ಪರ್ಸ್ ನಿಜಕ್ಕೂ ತುಂಬಿ ತುಳುಕುತ್ತಿರಬೇಕು!.

ಬಹುಶಃ ಈಚೆಗೆ ಬಂದಿರುವ ಎಲ್ಲಾ ಟೂ ವೀಲರ್‌ಗಳಲ್ಲೂ ಅತ್ಯಂತ ಆಕರ್ಷಕ ಮಾಡೆಲ್, ಕೈನೆಟಿಕ್ ಮಾರ್ವೆಲ್. ಸೀಟಿನ ಕೆಳಗೆ ಒಂದು ದೊಡ್ಡ ಹೆಲ್ಮೆಟ್ ಇಡಬಹುದಾದಷ್ಟು ಜಾಗ, ಏರೋಡೈನಮಿಕ್ ಡಿಸೈನ್, ಇಂಜಿನ್ನಿಗೆ ಫೈಬರ್ ಕವಚ, ಹಂಪು-ಹಳ್ಳಗಳಲ್ಲಿ ಸರಾಗ ಚಾಲನೆ, ಐವತ್ತು ಮುಟ್ಟಿದರೂ ಟೆನ್ಷನ್ ಉಂಟು ಮಾಡದ ವೇಗ, ಲೀಟರಿಗೆ ೪೩ ಕಿ.ಮೀ. ಮೈಲೇಜ್, ಇವು ಮಾರ್ವೆಲ್‌ನ ಮಾರ್ವೆಲ್‌ಗಳು. ಬೆಲೆ ರೂ.೪೨,೨೨೦. ''ಬೈಕುಗಳೇ ಇದರ ಸ್ಪರ್ಧಿಗಳು'' ಅಂತ ಅದ್ವೈತ್‌ನ ಮ್ಯಾನೇಜರ್ ಸುಧಾಕರ್ ಹೇಳೋದ್ರಲ್ಲಿ ಅರ್ಥ ಇದೆ! ಪ್ರಮುಖ ಗ್ರಾಹಕರು ಸೋಷಿಯಲೈಟ್ ಮಹಿಳೆಯರು, ಟಾಪ್ ಎಕ್ಸಿಕ್ಯುಟಿವ್‌ಗಳು.

●

ಮನಮೋಹಕ ಬೈಕುಗಳು



ಅದ್ಯಾವ ಪುಣ್ಯಾತ್ಮ ಹೇಳಿದನೋ 'ಪವರ್ ಕರಪ್ಟ್ಸ್' ಅಂತ. ಅದು ಅಧಿಕಾರಶಾಹಿ ಹಾಗೂ ರಾಜಕೀಯ ಮಿತಿಗಳನ್ನು ದಾಟಿ ಇದೀಗ ಟೂ-ವೀಲರ್ ದುನಿಯಾಕ್ಕೂ ಬಂದುಬಿಟ್ಟಿದೆ! ವಿಶೇಷವಾಗಿ, ಬೈಕ್ ಪ್ರಪಂಚಕ್ಕೆ ೧೯೮೬ರಲ್ಲಿ ಯಮಹಾ Rx100 ದಾಳಿ ಮಾಡುವ ಮೊದಲು 'ಪವರ್'ನ ಕಾನ್ಸೆಪ್ಟೇ ಭಾರತೀಯ ಬೈಕು ತಯಾರಕರಿಗಿರಲಿಲ್ಲ. ಆದರೆ, ಒಂದು ಸಾರಿ ಶಕ್ತಿಯ, ವೇಗದ, ಅದರ 'ಥ್ರಿಲ್'ನ ರುಚಿಕಂಡ ಮೇಲೆ ಕಾಲೇಜ್ ಯುವಕರಿಗೆ ಬೇರೆಲ್ಲವೂ ಬೋರಾದವು. ಪರಿಣಾಮ, ಆಟೋಮೊಬೈಲ್ ಜಗತ್ತಿನಲ್ಲಿ Struggle for power?.

ರಾಜ್‌ದೂತ್ ಹಾಗೂ ಯೆಜ್ಡಿ ಸೇರಿದಂತೆ ಇವತ್ತು ೧೫ ಪ್ರಮುಖ ಮಾಡೆಲ್‌ಗಳು ಮಾರುಕಟ್ಟೆಯಲ್ಲಿವೆ. ಇವುಗಳಲ್ಲಿ ಕೇವಲ ತಮ್ಮ 'ಪವರ್' ಮಾತ್ರದಿಂದಲೇ ತಬ್ಬಿಬ್ಬು ಮಾಡಿಬಿಡುವ ಗಾಡಿಗಳು NSನ ಸುಜುಕಿ ಶಾವೋಲಿನ ಹಾಗೂ ಶೋಗನ್, ಯಮಹಾದ ಹೊಸ Rx2 ಹಾಗೂ ಬಜಾಜ್‌ನ KB 125

೫ ಗೇರುಗಳ ಶಾವೋಲಿನ್‌ನ ಮುಖ್ಯ ಆಕರ್ಷಣೆ ಅದರ ಸ್ಟೈಲಿಸ್ಟಿಕ್ ಡಿಸೈನ್, ರಸ್ತೆಗಳ ಏಳು-ಬೀಳುಗಳ ಎಫೆಕ್ಟ್ ಕಡಿಮೆ ಮಾಡುವ ಇಂಡಿಪೆಂಡೆಂಟ್ ಸಸ್ಪೆಂಷನ್ ಹಾಗೂ 12BHP ಪವರ್, ಬ್ರಿಡ್ಜ್‌ಸ್ಟೋನ್ ಏಜೆನ್ಸೀಸ್‌ನ ಶರತ್‌ರೆಡ್ಡಿ ಪ್ರಕಾರ "It's a shoor performance bike". ಶೋಗನ್, ಕ್ಯಾಟಲಿಸ್ಟ್ ಕನ್ವರ್ಟರ್ ಇರುವ ಭಾರತದ ಪ್ರಪ್ರಥಮ ಬೈಕ್. ಅಂದರೆ ಇದಕ್ಕೆ Unleaded ಪೆಟ್ರೋಲೇ ಬೇಕು. ''ಪರಿಸರಪ್ರೇಮಿ ಬೈಕ್'' ಅಂತಾರೆ ಶರತ್ ರೆಡ್ಡಿ.

ಸೆಂಟ್ರಲ್ ಲಾಕಿಂಗ್ ಸಿಸ್ಟಮ್, ಏರೋಡೈನಮಿಕ್ ಡಿಸೈನ್, ಇಂಜಿನ್ ಗಾರ್ಡ್ ಹಾಗೂ ನಗರದಲ್ಲಿ ಅಗತ್ಯವಾದ ನಿಧಾನಚಾಲನೆ ಅನುಕೂಲಗಳು ಯಮಹಾದ ಹೈಲೈಟ್‌ಗಳು. ಪುಷ್ಪಕ್ ಮೋಟಾರ್ಸ್‌ನ ಎಸ್.ರವಿ ಹೇಳುವ ಹಾಗೆ ''ನೋವಿಲ್ಲದ ಚಾಲನೆ ಹಾಗೂ ಕಡಿಮೆ ಮೇಂಟೆನೆನ್ಸ್''ನ ಕಾಳಜಿ ಇರುವವರಿಗಾಗಿ ಯಮಹಾ.

ಕೆಬಿ೧೨೫ನ ಯೂನಿಕ್ ಸೆಲಿಂಗ್‌ಪಾಯಿಂಟ್ ಅದರ ದೃಢತೆ. ಸಾಮಾನ್ಯ ಬೈಕುಗಳಿಂದ ಸ್ವಲ್ಪ ದೊಡ್ಡ ಗಾಲಿಗಳು ಹಾಗೂ ಹೆಚ್ಚು ಉದ್ದ ಈ ದೃಢತೆಯ ರಹಸ್ಯ.

ಈ ಎಲ್ಲಾ ಸಾಮರ್ಥ್ಯಶಾಲಿ ಬೈಕುಗಳ ಪ್ರಮುಖ ಟಾರ್ಗೆಟ್, ದುಡ್ಡಿಗೆ ಕಾಸಿನ ಕಿಮ್ಮತ್ತೂ ಕೊಡದ ಹೈಫೈ ನ್ಯೂ ಜನರೇಷನ್. ಮೈಲೇಜ್, ಎಕಾನಮಿ, ಸೇಫ್ಟಿ ಇತ್ಯಾದಿ ಅನವಶ್ಯಕ ಗೊಂದಲಗಳಲ್ಲಿ ತೊಳಲಾಡುವವರಿಗಾಗಿ ಹೀರೋ ಹೊಂಡಾ ಸ್ಪ್ಲೆಂಡರ್, ಸಿಡಿ-೧೦೦ ಹಾಗೂ ಸಿಡಿ೧೦೦ss, ಟಿ.ವಿ.ಎಸ್.ನ ಸುಜುಕಿ

ಸಮುರಾಯ್ ಹಾಗೂ ಸುಜುಕಿ ಮ್ಯಾಕ್ಸ್ ಮತ್ತು ಬಜಾಜ್‌ನ ೪s ಛಾಂಪಿಯನ್‌ಗಳಿವೆ. ಈ ಸಾಲಿಗೆ ಸದ್ಯದಲ್ಲೇ ಬಜಾಜ್‌ನ 'ಬಾಕ್ಸರ್' ಸೇರಲಿದೆ. ಮೈಲೇಜಿನಲ್ಲಿ ಬಹುಶಃ ಇವತ್ತಿಗೂ ಹೀರೋ ಹೊಂಡಾ ಎಲ್ಲರಿಗಿಂತ ಮುಂದಿದೆ. ಸುಜುಕಿ ಸಮುರಾಯ್‌ನ ಜನಪ್ರಿಯ "No problem" ಜಾಹಿರಾತು ಹುಟ್ಟಿದ್ದು ಟಿ.ವಿ.ಎಸ್.ನಡೆಸಿದ ಒಂದು ಸರ್ವೆ ನಂತರ. ಶಕ್ತಿ, ಪೆಟ್ರೋಲ್ ಮಿತವ್ಯಯ ಹಾಗೂ ನಗರ ಚಾಲನಾ ಸೌಲಭ್ಯಗಳೆಲ್ಲದರ ತೃಪ್ತಿಕರ ಸಮ್ಮಿಲನ ಸಮುರಾಯ್‌ಗೆ ಎಲ್ಲವೂ 'ನೋಪ್ರಾಬ್ಲಮ್'. ಮ್ಯಾಕ್ಸ್-೧೦೦ ಹಾಗೂ ೧೦೦-R ಮತ್ತು 4s ಛಾಂಪಿಯನ್‌ಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಶೋಕಿ ಸೌಲಭ್ಯಗಳಾವುವೂ ಇಲ್ಲ. ''ಸದಾ ಸುತ್ತವವರಿಗೆ ಹೇಳಿ ಮಾಡಿಸಿದ ಮಾಡೆಲ್‌ಗಳು'', ಅಂತಾರೆ ಬಜಾಜ್‌ನ ವಿವೇಕ್. ಇವೆಲ್ಲವುಗಳ ಪ್ರಮುಖ ಗ್ರಾಹಕರು ಸೇಲ್ಸ್ ಎಕ್ಸಿಕ್ಯುಟಿವ್‌ಗಳು, ಸಿವಿಲ್ ಕಂಟ್ರಾಕ್ಟರುಗಳು ಹಾಗೂ ಬದುಕಿನಲ್ಲಿ ಆದಷ್ಟು ಬೇಗ settle ಆಗ ಬಯಸುವ ಪ್ರೌಢ ಯುವಕರು.

೧. ಸುಜುಕಿ ಶೋಗನ್
ವೈಶಿಷ್ಟ್ಯ : ಅನ್‌ಲೆಡೆಡ್ ಪೆಟ್ರೋಲ್ ಬಳಕೆ, 14BHPಶಕ್ತಿ
ಮೈಲೇಜ್ : ಲೀಟರಿಗೆ ೩೮-೪೨ ಕಿ.ಮೀ.
ಬೆಲೆ : ರೂ. ೪೭,೯೫೦

೨. ಸುಜುಕಿ ಶಾವೋಲಿನ್
ವೈಶಿಷ್ಟ್ಯ : ಐದು ಗೇರು, 11.8 BHP ಶಕ್ತಿ, ಸ್ವತಂತ್ರ ಸಸ್ಪೆನ್‌ಷನ್
ಮೈಲೇಜ್ : ಲೀಟರಿಗೆ ೩೮-೪೨ ಕಿ.ಮೀ.
ಬೆಲೆ : ರೂ. ೪೪,೨೮೦

೩. ಬಜಾಜ್ ಕೆವಿ ೧೨೫
ವೈಶಿಷ್ಟ್ಯ : ದೊಡ್ಡ ಗಾಲಿಗಳು, ಹೆಚ್ಚು ದೃಢತೆ, ಅದ್ಭುತ ಶಕ್ತಿ, ಟೂಪೀಸ್ ಸೈಲೆನ್ಸರ್
ಮೈಲೇಜ್ : ಲೀಟರಿಗೆ ೬೦ ರಿಂದ ೭೦ ಕಿ.ಮೀ.
ಬೆಲೆ : ರೂ. ೪೨,೩೦೦.

೪. ಯಮಹಾ ಆರೆಕ್ಸ್‌ಜೆಡ್
ವೈಶಿಷ್ಟ್ಯ : ಇಂಜಿನ್‌ಗಾರ್ಡ್, 12BHP ಶಕ್ತಿ, ಕಡಿಮೆ ಮೇಂಟೆನೆನ್ಸ್.
ಮೈಲೇಜ್ : ಲೀಟರಿಗೆ ಸುಮಾರು ೫೫ ರಿಂದ ೬೦ ಕಿ.ಮೀ.
ಬೆಲೆ ರೂ. ೪೯,೧೮೫

೫. ಹೀರೋಹೊಂಡಾ ಸ್ಪ್ಲೆಂಡರ್
ವೈಶಿಷ್ಟ್ಯ : ಆಕರ್ಷಕ ವಿನ್ಯಾಸ, ಹೆಚ್ಚು ಗ್ರೌಂಡ್ ಕ್ಲಿಯರೆನ್ಸ್ ಅತ್ಯುತ್ತಮ ಮೈಲೈಜ್
ಮೈಲೇಜ್ : ಲೀಟರಿಗೆ ಸುಮಾರು ೬೫ ಕಿ.ಮೀ.
ಬೆಲೆ : ರೂ. ೪೩,೭೪೪

೬. ಹೀರೋಹೊಂಡಾ ಸಿಡಿ-೧೦೦ ಎಸ್.ಎಸ್.
ವೈಶಿಷ್ಟ್ಯ : ಉತ್ತಮ ಶಾಕ್ ಅಬ್ಸಾರ್ಬರ್ಸ್, ಅಗಲ ಟೈರುಗಳು, ಉತ್ತಮ ರೋಡ್‌ಗ್ರಾಪ್
ಮೈಲೇಜ್ : ಲೀಟರಿಗೆ ೬೦ ರಿಂದ ೭೦ ಕಿ.ಮೀ.
ಬೆಲೆ : ರೂ. ೪೧,೬೧೦

೭. ಹೀರೋ ಹೊಂಡಾ ಸಿಡಿ-೧೦೦
ವೈಶಿಷ್ಟ್ಯ : ೪ ಸ್ಟ್ರೋಕ್ ಇಂಜಿನ್, ಹೊಗೆಯಿಲ್ಲದ ಎಕ್ಸಾಸ್ಟ್, ಉತ್ತಮ ಮೈಲೇಜ್
ಮೈಲೇಜ್ : ಲೀಟರಿಗೆ ೬೫ ಕಿ.ಮೀ.
ಬೆಲೆ ರೂ. ೪೦,೦೩೨

೮. ಸುಜುಕಿ ಸಮುರಾಯ್
ವೈಶಿಷ್ಟ್ಯ : ಶಕ್ತಿ-ಪೆಟ್ರೋಲ್ ಮಿತವ್ಯಯ-ಡ್ರೈವಿಂಗ್ ಕಂಫರ್ಟ್‌ನ ಉತ್ತಮ ಸಮ್ಮಿಲನ
ಮೈಲೇಜ್ : ಲೀಟರಿಗೆ ೫೫ ರಿಂದ ೫೮ ಕಿ.ಮೀ.
ಬೆಲೆ : ರೂ. ೪೧,೨೯೦.

೯. ಸುಜುಕಿ ಮ್ಯಾಕ್ಸ್ ೧೦೦-R
ವೈಶಿಷ್ಟ್ಯ : ಉತ್ತಮ ವಿದ್ಯುತ್ ವ್ಯವಸ್ಥೆ, ಸದೃಢ ಬ್ರೇಕ್, ಆಲ್-ಡೌನ್ ಗೇರ್ ವ್ಯವಸ್ಥೆ
ಮೈಲೇಜ್ : ಲೀಟರಿಗೆ ೫೫ ರಿಂದ ೫೮ ಕಿ.ಮೀ.
ಬೆಲೆ : ರೂ. ೩೯,೬೯೦.

೧೦. ಬಜಾಜ್ 4s ಛಾಂಪಿಯನ್
ವೈಶಿಷ್ಟ್ಯ : ಕಡಿಮೆ ಮೇಂಟೆನೆನ್ಸ್, ಉತ್ತಮ ಮೈಲೇಜ್
ಮೈಲೇಜ್ : ಲೀಟರಿಗೆ ಸುಮಾರು ೭೦ ಕಿ.ಮೀ.
ಬೆಲೆ : ರೂ. ೪೨,೮೦೦

೧೧. ಯಮಹಾ ಆರ್‌ಎಕ್ಸ್ ೧೩೫
ವೈಶಿಷ್ಟ್ಯ : ಶೀಘ್ರ ಪಿಕಪ್, ಡಬಲ್‌ಕ್ರಾಡ್ಲ್ ಫ್ರೇಮ್, ಶಕ್ತಿಯುತ ಇಂಜಿನ್.
ಮೈಲೇಜ್ : ಲೀಟರಿಗೆ ೪೫ ಕಿ.ಮೀ.
ಬೆಲೆ : ರೂ. ೪೬,೮೦೫

ಮೊಪೆಡ್ : ಲೈಟ್ ಅಂಡ್ ಕನ್ವೀನಿಯೆಂಟ್

ಇದೊಂದು ಸದಾ ಬೆಳೆಯುತ್ತಿರುವ, ಬದಲಾಗುತ್ತಿರುವ ಮಾಯಾಲೋಕ. ಇವತ್ತು ಖ್ಯಾತಿ-ಜನಪ್ರಿಯತೆಯ ಶಿಖರದಲ್ಲಿರುವ ಮಾಡೆಲ್ ನಾಳೆ ಹಾಗೆಯೇ ಇದ್ದೀತೆಂಬ ನಂಬಿಕೆಯಿಲ್ಲದ ಅನಿಶ್ಚಿತ ಮಾರುಕಟ್ಟೆ. ಇದಕ್ಕೆ ಸ್ಪಷ್ಟ ಉದಾಹರಣೆ ಕೈನೆಟಿಕ್‌ನ ಲೂನಾ. ಒಂದು ಕಾಲಕ್ಕೆ ಸರ್ವಾಂತರ್ಯಾಮಿಯಾಗಿದ್ದ ಈ 'ಮೋಟಾರ್ಡ್-ಸೈಕಲ್' ಈಗ almost extinct. ಅಪ್ಪ ಹಾಕಿದ ಆಲದ ಮರಕ್ಕೆ ಜೋತುಬೀಳುವ ಬುದ್ಧಿ ಕೈನೆಟಿಕ್‌ದಲ್ಲವಾದರೂ, ಎಲ್ಲೋ ಒಂದು ಕಡೆ ಆಕಸ್ಮಾತ್ ಉಳಿದಿರಬಹುದಾದ Out of fashion mindಗಳಿಗಾಗಿ ಇನ್ನೂ ಲೂನಾ ತಯಾರಿಕೆ ನಡೆಸಿದೆ. ಲೂನಾದ ಗ್ರೇಟೆಸ್ಟ್ ಅಡ್ವಾಂಟೇಜ್ ಅಂದ್ರೆ, ಇದನ್ನು ಯಾರು ಬೇಕಾದರೂ ರಿಪೇರಿ ಮಾಡಬಹುದು!

ಲೂನಾ ಜನಪ್ರಿಯವಾಗಿದ್ದ ಸಮಯದಲ್ಲೇ ಅದಕ್ಕೆ ತೀವ್ರ ಪೈಪೋಟಿ ನೀಡುತ್ತಿದ್ದ ಟಿ.ವಿ.ಎಸ್.೫೦ ಮಾತ್ರ ಹೊಸ - ಹೊಸ ಮಾಡೆಲ್‌ಗಳು, ವಿನ್ಯಾಸಗಳಿಂದಾಗಿ ಇನ್ನೂ ಮಾರುಕಟ್ಟೆಯಲ್ಲಿ ಉಳಿದುಕೊಂಡಿದೆ. ಅಲ್ಪ-ಸ್ವಲ್ಪ ವ್ಯತ್ಯಾಸಗಳೊಂದಿಗೆ ಟಿ.ವಿ.ಎಸ್. ಈಗ ಐದು ಮಾಡೆಲ್‌ಗಳಲ್ಲಿ ಲಭ್ಯ. ಟಿ.ವಿ.ಎಸ್.೫೦, ಎಕ್ಸ್‌ಎಲ್, ಛಾಂಪ್, ಎಕ್ಸ್‌ಎಲ್.ಸೂಪರ್ ಹಾಗೂ ಛಾಂಪ್ ಸೂಪರ್, ಗಡಸು ದೇಹ, ಪರ್ಸಿಗೆ ಕತ್ತರಿ ಬೀಳದ ಮೇಂಟೆನೆನ್ಸ್ ಹಾಗೂ ಎಷ್ಟು ಭಾರ ಹೇರಿದರೂ ಕುಗ್ಗದ ಸಾಮರ್ಥ್ಯ ಟಿ.ವಿ.ಎಸ್. ಮೊಪೆಡ್‌ಗಳ ಪ್ಲಸ್ ಪಾಯಿಂಟುಗಳು. ಮುಖ್ಯ ಮಾರುಕಟ್ಟೆ ಗ್ರಾಮಾಂತರ ಪ್ರದೇಶ.

> **ಕಾಳಿದಾಸ**
>
> ನೀ ಕಂಡ ದಿನದಂದು
> ನಾ ಆದೆ ಕಾಳಿದಾಸ
> ಆದರೆ ಬರೆಯಲಿಲ್ಲ 'ಅಭಿಜ್ಞಾನ
> ಶಾಕುಂತಳೆ'
> ಯಾಕೆಂದರೆ
> ನೀನು 'ಕಾಳಿ'ಯೂ ಅಲ್ಲ
> ನಾನು 'ದಾಸ'ನೂ ಅಲ್ಲ
>
> -ಸಿರಿಗೇರಿ ಯರಿಸ್ವಾಮಿ

ಹದಿಹರೆಯದ ಹುಡುಗಿಯರಿಗೆಂದೇ ಟಿವಿಎಸ್ ವಿನ್ಯಾಸಗೊಳಿಸಿದ ಸ್ಕೂಟಿ, ಹೀರೋ ಕಂಪನಿಯ ವಿನ್ನರ್ ಹಾಗೂ ಬಜಾಜ್‌ನ ಸನ್ನಿಜಿಪ್‌ಗಳಿಗೆ ಮಾರುಕಟ್ಟೆಯಲ್ಲಿ ಅಷ್ಟೇನೂ ಒಳ್ಳೆಯ ಪ್ರತಿಕ್ರಿಯೆ ಬಂದಿಲ್ಲವಾದರೂ ಅವುಗಳ ನಡುವೆಯೇ ತೀವ್ರ ಪೈಪೋಟಿ ನಡೆದಿದೆ. ಒಂದು ರೀತಿಯಲ್ಲಿ ಪೂರ್ ಮ್ಯಾನ್ಸ್ (ಅಥವಾ ವುಮನ್ಸ್?) ಕೈನೆಟಿಕ್ ಹೊಂಡಾ ಎಂದು ಹೇಳಬಹುದಾದ ಇವು ಹಗುರ, ಡ್ರೈವ್ ಮಾಡಲು ಸುಲಭ ಹಾಗೂ ಕೆಟ್ಟು ಹೋದರೆ ತಳ್ಳಿಕೊಂಡಾದರೂ ಮನೆ ಸೇರುವ ಗ್ಯಾರಂಟಿ! ಹೈವೇಯಲ್ಲಿ ಅಥವಾ ತೀವ್ರ ಗಾಳಿಯಿರುವ ರೋಡಿನಲ್ಲಿ ಹೋದರೆ ರಸ್ತೆಯಲ್ಲಿ ಓಡುವುದಕ್ಕಿಂತ ಗಾಳಿಯಲ್ಲಿ ಹಾರುವುದೇ ಹೆಚ್ಚು! ಆದರೂ, ನಗರದೊಳಗೆ, ಮನೆಯಿಂದ ಕಾಲೇಜಿಗೆ, ಪಕ್ಕದ ಬೀದಿಯ ಬ್ಯೂಟಿ ಪಾರ್ಲರಿಗೆ, ಮನೆ ಹತ್ತಿರದ ಚಿತ್ರಮಂದಿರಕ್ಕೆ, ಮಾರ್ಕೆಟ್ಟಿಗೆ, ಸಾಫ್ಟ್‌ಬಾಲ್ ಮ್ಯಾಚಿಗೆ, ಅತ್ತಿಗೆಯ ಅಕ್ಕನ ಮಗಳ ಸೀಮಂತಕ್ಕೆ ಹೋಗುವುದಕ್ಕೆಲ್ಲಾ very handy! ಹೆಚ್ಚು-ಕಡಿಮೆ ಇದೇ ಗುಂಪಿಗೆ ಕೈನೆಟಿಕ್ ಪ್ರೈಡ್ ಕೂಡ ಸೇರುತ್ತದಾದರೂ, ಸ್ವಲ್ಪ ಹೆಚ್ಚು ಸಾಮರ್ಥ್ಯ, ತೂಕ ಹಾಗೂ ಉತ್ತಮ ಗ್ರೌಂಡ್ ಕ್ಲಿಯರೆನ್ಸ್ ಇರುವುದರಿಂದ ತುಸು ವಿಶೇಷವಾಗಿ ನಿಲ್ಲುತ್ತದೆ.

ಮೊಪೆಡ್ ಹಾಗೂ ಸ್ಕೂಟರ್‌ನ ಹೈಬ್ರಿಡ್ ನಂತಿರುವ ಹೀರೋ ಪುಚ್, ಬಂದ ಹೊಸದರಲ್ಲಿ ಮೆರೆಯಿತಾದರೂ ಈಗ ಸ್ವಲ್ಪ ತಣ್ಣಗಾಗಿದೆ. ಪವರ್‌ಫುಲ್ ಇಂಜಿನ್, ಮೂರುಗೇರುಗಳಲ್ಲೇ ಉತ್ತಮ ಪಿಕಪ್ ಹಾಗೂ ಸಮಾಧಾನಕರ ಮೈಲೇಜ್ ಇದ್ದರೂ ಹೀರೋಗೆ ಹೊಡೆತ ಬಿದ್ದಿದ್ದು ಅದರ fragile ದೇಹದಿಂದಾಗಿ. ಒಮ್ಮೆ ಹೊರಹೋಗಿ ಬರುವುದರೊಳಗಾಗಿ ಹಿರೋಪುಚ್ ಅಲ್ಲಲ್ಲೇ ಕೆಲ ಪಾರ್ಟುಗಳನ್ನು ಕಳಚಿಕೊಂಡು ತೂಕಕಳೆದುಕೊಂಡುಬಿಟ್ಟಿರತ್ತೆ ಅನ್ನೋದು ಎರಡು ವರ್ಷಗಳ ಹಿಂದಿದ್ದ ಜೋಕ್. ಈಗ ಸಾಕಷ್ಟು ಸುಧಾರಣೆ ಮಾಡಿ, ದೌರ್ಬಲ್ಯಗಳನ್ನೆಲ್ಲಾ ಸರಿಪಡಿಸಿ, autogearನ ಹೀರೋಪುಚ್-ಆಟೋಮ್ಯಾಟಿಕ್ಕನ್ನು ಮಾರ್ಕೆಟ್ಟಿಗೆ ಬಿಟ್ಟಿದೆ ಹೀರೋ ಕಂಪನಿ. ಇದಕ್ಕೆ ನೇರ ಸ್ಪರ್ಧೆಯಿರುವುದು ಕೈನೆಟಿಕ್ ಸಫಾರಿ ವಿನಿಂದ ಪರ್ಫಾರ್ಮೆನ್ಸ್‌ನಲ್ಲಿ ಬಹುಶಃ ಹೀರೋ, ಸಫಾರಿಗಿಂತ ಉತ್ತಮ.

ಇತ್ತೀಚೆಗೆ ರೋಡಿಗಿಳಿದ ತಕ್ಷಣ ಅತಿ ಹೆಚ್ಚು ಸುದ್ದಿ ಮಾಡಿದ್ದು ಹೀರೋ ಹೊಂಡಾದ ಸ್ಟ್ರೀಟ್. ನೋಡೋದಿಕ್ಕೆ ಬಜಾಜ್ ಎಂ-೮೦ ತರಹದ ugly ವಿನ್ಯಾಸ ಹೊಂದಿದ್ದರೂ ಇದರ ಬಹುಮುಖ್ಯ ಅಡ್ವಾಂಟೇಜ್ ಕ್ಲಚ್ ರಹಿತ ಡ್ರೈವಿಂಗ್. ನಗರಕ್ಕೆ ಹೇಳಿ ಮಾಡಿಸಿದಂತಿರುವ ರೋಲರಿಗೇರ್ ಹಾಗೂ ಆಟೋ ಕ್ಲಚ್ ವ್ಯವಸ್ಥೆ ಮೇಲ್ನೋಟಕ್ಕೆ ಅದ್ಭುತ ಎನ್ನಿಸುವುದಾದರೂ ಮಾರುಕಟ್ಟೆಯಿಂದ ಇನ್ನೂ ನಿಖರ ಪ್ರತಿಕ್ರಿಯೆಗಳು ಬಂದಿಲ್ಲ. ಹೆಚ್ಚು-ಕಡಿಮೆ ಇದಕ್ಕೆ ಸ್ಪರ್ಧಿಯಾಗಿಯೇ ಕಣಕ್ಕಿಳಿದಿರುವ ಕೈನೆಟಿಕ್ ಕೆ-೪ನ ಸಾಮರ್ಥ್ಯ ಕೂಡ ಇನ್ನೂ ಪ್ರೂ ಆಗಬೇಕಿದೆ. ಭಾರತದ ಮೊತ್ತ ಮೊದಲ ಫೋರ್‌ಸ್ಟ್ರೋಕ್ ಗೇರ್ಡ್ ಮೊಪೆಡ್ ಹಾಗೂ ಲೀಟರಿಗೆ ಸುಮಾರು ೭೫ ಕಿ.ಮೀ. ಮೈಲೇಜ್ ಎರಡೂ ಸಧ್ಯಕ್ಕೆ ಕೆ-೪ನ ಹೆಗ್ಗಳಿಕೆಗಳು.

೧. ಬಜಾಜ್ ಎಂ-೮೦
ವೈಶಿಷ್ಟ್ಯ : ಉತ್ತಮ ಇಂಜಿನ್ ಶಕ್ತಿ, ಭಾರ ಒಯ್ಯುವ ಸಾಮರ್ಥ್ಯ, ಕಡಿಮೆ ಮೇಂಟೆನೆನ್ಸ್, ಹಳ್ಳಿಗಾಡಿನ ಗಾಡಿ!
ಮೈಲೇಜ್ : ಲೀಟರಿಗೆ ೫೦ ರಿಂದ ೫೫ ಕಿ.ಮೀ.
ಬೆಲೆ : ರೂ. ೨೧,೦೦೦

೨. ಕೈನೆಟಿಕ್ ಕೆ೪-೧೦೦
ವೈಶಿಷ್ಟ್ಯ : ೪ - ಸ್ಟ್ರೋಕ್ ಇಂಜಿನ್, ಉತ್ತಮ ಪಿಕಪ್, ಟ್ಯೂಬ್ಯುಲಾರ್ ಚಾಸಿ, ಪರಿಸರಪ್ರೇಮಿ.
ಮೈಲೇಜ್ : ಲೀಟರಿಗೆ ೬೫-೭೦ ಕಿ.ಮೀ.
ಬೆಲೆ : ರೂ. ೩೧,೫೦೦.

೩. ಹೀರೋ ಹೊಂಡಾ ಸ್ಟ್ರೀಟ್
ವೈಶಿಷ್ಟ್ಯ : ಆಟೋ ಕ್ಲಚ್, ರೋಟರಿ ಗೇರ್, ಸುಲಭ ಸ್ಟಾರ್ಟ್.
ಮೈಲೇಜ್ : ಲೀಟರಿಗೆ ೫೫ ರಿಂದ ೬೦ ಕಿ.ಮೀ.
ಬೆಲೆ : ರೂ. ೩೫,೨೩೨

೪. ಹೀರೋಪುಚ್ - ಆಟೋಮ್ಯಾಟಿಕ್
ವೈಶಿಷ್ಟ್ಯ : ಆಟೋಗೇರ್, ೬೫ ಸಿ ಇಂಜಿನ್, ಉತ್ತಮ ಮೈಲೇಜ್
ಮೈಲೇಜ್ : ಲೀಟರಿಗೆ ೬೦ ರಿಂದ ೭೦ ಕಿ.ಮೀ.
ಬೆಲೆ : ರೂ. ೧೬, ೩೫೧

೫. ಹೀರೋ ಶಕ್ತಿ
ವೈಶಿಷ್ಟ್ಯ : ಹೆಚ್ಚು ಭಾರ ಒಯ್ಯಬಲ್ಲ ಸಾಮರ್ಥ್ಯ, ದೊಡ್ಡ ಟೈರ್, ೬೫ ಸಿಸಿ ಇಂಜಿನ್
ಮೈಲೇಜ್ : ಲೀಟರಿಗೆ ೬೦ ರಿಂದ ೭೦ ಕಿ.ಮೀ.
ಬೆಲೆ: ರೂ. ೨೨,೦೫೮

೬. ಕೈನೆಟಿಕ್ ಸಫಾರಿ ವಿ೨
ವೈಶಿಷ್ಟ್ಯ : ಟ್ಯಾಬ್ಯುಲಾರ್ ಚಾಸಿ, ಪಫ್ ಏರ್‌ಫಿಲ್ಟರ್, ಒಂದು ವರ್ಷಕ್ಕೆ ಸಂಪೂರ್ಣ ವಾರಂಟಿ.
ಮೈಲೇಜ್ : ಲೀಟರಿಗೆ ೬೫ ರಿಂದ ೭೦ ಕಿ.ಮೀ.
ಬೆಲೆ: ರೂ. ೧೮,೧೫೪

೭. ಕೈನೆಟಿಕ್ ಪ್ರೈಡ್
ವೈಶಿಷ್ಟ್ಯ : ೭೩ ಸಿಸಿ ಇಂಜಿನ್, ಸೀಟ್ ಕೆಳಗೆ ವಿಶಾಲ ಪೆಟ್ಟಿಗೆ, ಉತ್ತಮ ಪಿಕಪ್.
ಮೈಲೇಜ್ : ಲೀಟರಿಗೆ ೭೦ ಕಿ.ಮೀ.
ಬೆಲೆ: ರೂ. ೨೩,೨೧೧

೮. ಸನ್ನಿ ಜಿಪ್
ವೈಶಿಷ್ಟ್ಯ : ಹಗುರ, ಸ್ಟೆಪ್ನಿ ಸೌಲಭ್ಯ, ಓಡಿಸಲು ಸುಲಭ
ಮೈಲೇಜ್ : ಲೀಟರಿಗೆ ೪೫-೫೦ ಕಿ.ಮೀ.
ಬೆಲೆ: ರೂ. ೧೭,೦೦೦

೯. ಹಿರೋ ವಿನ್ನರ್
ವೈಶಿಷ್ಟ್ಯ : ಆಟೋಗೇರ್, ಆಟೋ ಲ್ಯೂಬ್, ದೊಡ್ಡಚಕ್ರ, ವಿಶಾಲ ಲಗೇಜ್ ಪೆಟ್ಟಿಗೆ,
ಮೈಲೇಜ್ : ಲೀಟರಿಗೆ ೪೫- ೫೦ ಕಿ. ಮೀ.
ಬೆಲೆ: ರೂ. ೨೮,೦೯೦

೧೦. ಟಿವಿಎಸ್ ಸ್ಕೂಟಿ
ವೈಶಿಷ್ಟ್ಯ : ಹಗುರ, ವೇರಿಯೋ ಮ್ಯಾಟಿಕ್ ಗೇರ್‌ಬಾಕ್ಸ್, ವಿಶಾಲ ಲಗೇಜ್ ಪೆಟ್ಟಿಗೆ.
ಮೈಲೇಜ್ : ಲೀಟರಿಗೆ ೫೦ ಕಿ.ಮೀ.
ಬೆಲೆ: ರೂ. ೨೨,೬೬೦

೧೧. ಟಿವಿಎಸ್ ಎಕ್ಸೆಲ್
ವೈಶಿಷ್ಟ್ಯ : ಸಿದ್ಧ ದೃಢತೆ, ಎಲೆಕ್ಟ್ರಾನಿಕ್ಸ್ ಇಗ್ನಿಷನ್
ಮೈಲೇಜ್ : ಲೀಟರಿಗೆ ೫೫ ಕಿ.ಮೀ.
ಬೆಲೆ: ರೂ. ೧೪,೦೧೦

೧೨. ಟಿವಿಎಸ್-೫೦
ವೈಶಿಷ್ಟ್ಯ : ಪವರ್‌ಪೋರ್ಟ್ ಇಂಜಿನ್, ಭಾರ ಒಯ್ಯುಲು ಸಾಮರ್ಥ್ಯ
ಮೈಲೇಜ್ : ಲೀಟರಿಗೆ ೫೦-೫೫ ಕೀ.ಮಿ.
ಬೆಲೆ: ರೂ. ೧೩,೯೮೦

೧೩. ಟಿವಿಎಸ್ ಎಕ್ಸೆಲ್ ಸೂಪರ್
ವೈಶಿಷ್ಟ್ಯ : ಸುಧಾರಿತ ವಿನ್ಯಾಸ, ಎಣ್ಣೆಯಲ್ಲದ್ದಿದ ಕ್ಲಚ್, ೭೦ ಸಿಸಿ ಇಂಜಿನ್, ಹೆಚ್ಚು ಲಗೇಜ್ ಸ್ಪೇಸ್
ಮೈಲೇಜ್ : ಲೀಟರಿಗೆ ೫೫ ರಿಂದ ೬೦ ಕಿ.ಮೀ.
ಬೆಲೆ: ರೂ. ೧೭,೦೮೦

೧೪. ಟಿವಿಎಸ್ ಛಾಂಪ್
ವೈಶಿಷ್ಟ್ಯ : ಉತ್ತಮ ಶಾಖ ನಿಯಂತ್ರಿತ ಇಂಜಿನ್, ದೃಢತೆ.
ಮೈಲೇಜ್ : ಲೀಟರಿಗೆ ೫೨-೫೫ ಕಿ.ಮೀ.
ಬೆಲೆ: ರೂ. ೧೪,೭೫೦

೧೫. ಟಿವಿಎಸ್ ಸೂಪರ್ ಛಾಂಪ್
ವೈಶಿಷ್ಟ್ಯ : ಆಟೋಗೇರ್, ಉತ್ತಮ ಪಿಕಪ್, ಕಿಕ್‌ಸ್ಟಾರ್ಟ್
ಮೈಲೇಜ್ : ಲೀಟರಿಗೆ ೫೦ ಕಿ.ಮೀ.
ಬೆಲೆ: ರೂ. ೧೭,೩೮೦

೧೬. ಕೈನೆಟಿಕ್ ಲೂನಾ
ವೈಶಿಷ್ಟ್ಯ : ಸುಲಭ ಡ್ರೈವಿಂಗ್, ಸುಲಭ ರಿಪೇರಿ, ಹಗುರ
ಮೈಲೇಜ್ : ಲೀಟರಿಗೆ ೫೦ ರಿಂದ ೬೦ ಕಿ.ಮೀ.
ಬೆಲೆ: ರೂ. ೧೪,೮೫೪

ಸಾಮಾಜಿಕ ಪ್ರಜ್ಞೆಯುಳ್ಳ ವಿರಳ ವಾಣಿಜ್ಯೋದ್ಯಮಿ

ಭರತ ಖಿಮಜಿ



ಭರತ ಖಿಮಜಿ ಉತ್ತರ ಕರ್ನಾಟಕದ ಜನತೆಗೆ ಚಿರಪರಿಚಿತ ಹೆಸರು ಎಂದರೆ ಅತಿಶಯೋಕ್ತಿಯಾಗದು. ಅವರು ಒಬ್ಬ ದೊಡ್ಡ ಉದ್ದಿಮೆದಾರರಷ್ಟೆ ಆಗಿರದೆ ಸಮಾಜ ಸೇವಕರೂ ಉದಾರ ದಾನಿಗಳೂ ಆಗಿರುವದೇ ಅವರ ಈ ಜನಪ್ರಿಯತೆಗೆ ಕಾರಣ. ಐವತ್ತಾರು ವರ್ಷ ವಯಸ್ಸಿನ ಭರತ ಖಿಮಜಿ ಕಳೆದ ಮೂರು ದಶಕಗಳಿಂದ ಉದ್ದಿಮೆ ಕ್ಷೇತ್ರದಲ್ಲಿದ್ದಾರೆ. ಅವರ ಸಾಹಸ ಪ್ರವೃತ್ತಿ, ಪ್ರಯೋಗಶೀಲ ಗುಣ ಇಂದು ಅವರನ್ನು ಔದ್ಯಮಿಕ ಕ್ಷೇತ್ರದಲ್ಲಿ ಬಹಳ ಎತ್ತರಕ್ಕೆ ಒಯ್ದಿವೆ.

ಕಚ್ಛ್ ಪ್ರದೇಶದ ಸುಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರ ಮನೆತನಕ್ಕೆ ಸೇರಿದ ಇವರು ಕಳೆದ ಅನೇಕ ದಶಕಗಳಿಂದ ಹುಬ್ಬಳ್ಳಿ ನಗರವನ್ನು ತಮ್ಮ ಕರ್ಮಭೂಮಿಯನ್ನಾಗಿ ಆರಿಸಿಕೊಂಡಿದ್ದಾರೆ. ಹತ್ತಿ ವ್ಯಾಪಾರಕ್ಕೆಂದು ಇಲ್ಲಿಗೆ ಬಂದ ಈ ಮನೆತನ ಉದ್ದಿಮೆ ಕ್ಷೇತ್ರದಲ್ಲಿ ಕಾಲಿರಿಸಿ ಅಲ್ಲಿ ತನ್ನದೆ ಆದ ಹೆಸರನ್ನು ಗಳಿಸಿದೆ. ಇವರ ಮನೆತನಕ್ಕೆ ಸೇರಿದ ಎ.ಕೆ. ಇಂಡಸ್ಟ್ರೀಸ್ ಮತ್ತು ಬಿ.ಡಿ.ಕೆ. ಕಂಪನಿ ಇಂದು ಈ ಭಾಗದ ಜನರ ಮನೆ ಮಾತಾಗಿವೆ.

ಭರತ ಖಿಮಜಿ ಎಪ್ಪತ್ತರ ದಶಕದಲ್ಲಿ ಬಿ.ಡಿ.ಕೆ. ಕಂಪನಿ ಪ್ರಾರಂಭಿಸಿದರು. ಇಂದು ಅದು ಅನೇಕ ಉದ್ದಿಮೆಗಳ ಸಮೂಹವಾಗಿದೆ. ಕೆಮಿಕಲ್ ಉದ್ದಿಮೆಗಳಿಗೆ ಅಗತ್ಯವಾದ ವಾಲ್ವಗಳು ಮತ್ತು ಪಂಪಗಳ ತಯಾರಿಕೆಯಲ್ಲಿ ಈ ಕಂಪನಿ ನಿರತವಾಗಿದೆ. ಕಂಪನಿ ಪ್ರಾರಂಭವಾದಾಗ ಒಟ್ಟು ವ್ಯವಹಾರದ ಮೊತ್ತ ಕೇವಲ ಒಂದು ಕೋಟಿ ರೂಪಾಯಿ ಆಗಿದ್ದರೆ ಇಂದು ಅದು ಐವತ್ತು ಕೋಟಿ ರೂಪಾಯಿಗಳಿಗೆ ಮುಟ್ಟಿದೆ. ಇವರ ಉದ್ದಿಮೆ ನೇರವಾಗಿ ೧೨೦೦ ಜನಕ್ಕೆ ಉದ್ಯೋಗಾವಕಾಶ ಕಲ್ಪಿಸಿದ್ದರೆ ಪೂರಕ ಉದ್ದಿಮೆಗಳಲ್ಲಿ ೨೦೦೦ ಜನಕ್ಕೆ ಉದ್ಯೋಗ ದೊರೆತಿದೆ.

ಇಪ್ಪತ್ತೈದು ಎಕರೆಯಷ್ಟು ವಿಸ್ತಾರವಾದ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಬಿ.ಡಿ.ಕೆ. ಉದ್ದಿಮೆಗಳ ಸಮೂಹ ಸ್ಪರ್ಧಾತ್ಮಕ ಬೆಲೆಗಳಲ್ಲಿ ಉತ್ತಮ ಗುಣಮಟ್ಟದ ಉತ್ಪಾದನೆಗಳನ್ನು ಗ್ರಾಹಕರಿಗೆ ಒದಗಿಸುವ ಆದರ್ಶ ಧ್ಯೇಯವನ್ನು ಹೊಂದಿದೆ. ಅಂತೆಯೆ ಅದು ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗವನ್ನು ಹೊಂದಿದೆ. ಬಿ.ಡಿ.ಕೆ. ಉತ್ಪಾದಿಸುವ ವಾಲ್ವಗಳು ಮತ್ತು ಪಂಪಗಳು ತೈಲ ಶುದ್ಧೀಕರಣ ಕಾರ್ಖಾನೆ, ಕೆಮಿಕಲ್ ಪ್ರೊಸೆಸ್ ಉದ್ದಿಮೆ, ಪೆಟ್ರೊಕೆಮಿಕಲ್, ಗೊಬ್ಬರ, ಶಾಖೋತ್ಪನ್ನ ಹಾಗೂ ಅಣು ವಿದ್ಯುತ್ ಉತ್ಪಾದನಾ ಸ್ಥಾವರಗಳು, ದೂಷಿತ ದ್ರವ ಶುದ್ಧೀಕರಣ ಯಂತ್ರಾಗಾರಗಳು, ಗಣಿ ಉದ್ದಿಮೆ ಇವೆ ಮೊದಲಾದ ಪ್ರಮುಖ ಉದ್ದಿಮೆಗಳಲ್ಲಿ ಬಳಸಲ್ಪಡುತ್ತಿವೆ. ಭಾರತದ ಅನೇಕ ಪ್ರತಿಷ್ಠಿತ ಯೋಜನೆಗಳಿಗೆ ಅಗತ್ಯವಾದ ಸರ್ವೀಸ್ ವಾಲ್ವಗಳನ್ನು ಒದಗಿಸಿದ ಕೀರ್ತಿ ಬಿ.ಡಿ.ಕೆ. ಕಂಪನಿಗೆ ಸೇರುತ್ತದೆ. ಅದರ ಉತ್ಪಾದನೆಗಳಿಗೆ ಬಹುಮುಖ ಮೆಚ್ಚುಗೆ ಸಿಕ್ಕಿದೆ.

ಬಿ.ಡಿ.ಕೆ. ಪ್ರೊಸೆಸ್ ಕಂಟ್ರೋಲ್ಸ, ಬಿ.ಡಿ.ಕೆ. ಎಂಜನಿಯರಿಂಗ್ ಇಂಡಸ್ಟ್ರೀಸ್, ಬಿ.ಡಿ.ಕೆ. ಮಾರ್ಕೆಟಿಂಗ್ ಸರ್ವಿಸಸ್, ಬಿ.ಡಿ.ಕೆ. ಪ್ರೊಸೆಸ್ ಇಕ್ವಿಪ್‌ಮೆಂಟ್ಸ್, ಬಿ.ಡಿ.ಕೆ. ಡೆವಲಪರ್ಸ್ ಮತ್ತು ಬಿಲ್ಡರ್ಸ್, ಬಿ.ಡಿ.ಕೆ. ಆಗ್ರೋ ಕೆಮಿಕಲ್ಸ್, ಬಿ.ಡಿ.ಕೆ. ಸ್ಪೋರ್ಟ್ಸ್ ಫೌಂಡೇಶನ್, ಬಿ.ಡಿ.ಕೆ. ಅಕ್ವಾಪ್ಯೂರ್ ಮತ್ತು ಬಿ.ಡಿ.ಕೆ. ಫಾರ್ಮ ಹಾಗೂ ನರ್ಸರಿ ಇವೆಲ್ಲ ಬಿ.ಡಿ.ಕೆ. ಸಮೂಹದಲ್ಲಿ ಸೇರಿದ ಸಂಸ್ಥೆಗಳಾಗಿವೆ. ಡೈಫರಗ್ಮ, ಬಟರ್‌ಫ್ಲೈ ಮತ್ತು ಪ್ಲಗ್ ವಾಲ್ವಗಳ ಉತ್ಪಾದನೆಯಲ್ಲಿ ಬಿ.ಡಿ.ಕೆ. ಪ್ರೊಸೆಸ್ ಕಂಟ್ರೊಲ್ಸ ದೇಶದಲ್ಲೇ ಅತ್ಯಂತ ದೊಡ್ಡ ಉದ್ದಿಮೆಯಾಗಿದೆ. ಅದು ಬೆಳೆಯುತ್ತಿರುವ ಉದ್ದಿಮೆಯಾಗಿದ್ದು ೧೯೯೭-೯೮ರಲ್ಲಿ ೧೦ ಕೋಟಿ ರೂಪಾಯಿ ಮೌಲ್ಯದ ಉತ್ಪಾದನೆ ಸಾಧಿಸಿದೆ.


ಹಲವಾರು ಉದ್ದಿಮೆಗಳಲ್ಲಿ ಬಳಸಲ್ಪಡುತ್ತಿರುವ ವಾಲ್ವ ಮತ್ತು ಪಂಪಗಳನ್ನು ಖಿಮಜಿ ಅವರು ಅತಿ ಮುಂದುವರಿದ ಅಮೇರಿಕ, ರಷ್ಯಾ, ಜರ್ಮನಿ, ಇಟಲಿ, ಕೆನಡಾ, ಆಸ್ಟ್ರೇಲಿಯಾ ಮೊದಲಾದ ರಾಷ್ಟ್ರಗಳಿಗೂ ನಿರ್ಯಾತ ಮಾಡುತ್ತಿದ್ದಾರೆಂದರೆ ಅವುಗಳ ಗುಣಮಟ್ಟದ ಬಗ್ಗೆ ಹೆಚ್ಚಿಗೆ ಹೇಳುವುದೇ ಬೇಡ. ಜಗತ್ತಿನ ಔದ್ಯಮಿಕ ನಕಾಶೆಯಲ್ಲಿ ಇಂದು ಹುಬ್ಬಳ್ಳಿ ನಗರವನ್ನು 'ವಾಲ್ವಸಿಟಿ' ಎಂದು ಗುರುತಿಸಲಾಗುತ್ತಿದೆ. ನಗರಕ್ಕೆ ಈ ಖ್ಯಾತಿ ತಂದವರು ಭರತ ಖಿಮಜಿ ಎಂದೇ ಹೇಳಬೇಕು.

ಭರತ ಅವರು ತಮ್ಮ ಕಚ್ಛಿ ಸಮಾಜದ ಅಖಿಲ ಭಾರತ ಮಟ್ಟದ ಮತ್ತು ಸ್ಥಳೀಯ ಮಟ್ಟದ ಪದಾಧಿಕಾರಿಗಳಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳೊಡನೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದಾರೆ. ಯಾವುದೇ ಒಂದು ಸಮಾಜಕ್ಕೆ ಲಾಭವಾಗುತ್ತಿದ್ದರೆ ಅದಕ್ಕೆ ಭರತ ಅವರ ಸಹಾಯ ಹಸ್ತ ಸದಾ ಸಿದ್ಧವಾಗಿರುತ್ತದೆ. ಬಲಗೈ ಕೊಟ್ಟಿದ್ದು ಎಡಗೈಗೆ ಗೊತ್ತಿರದಂತೆ ಅವರು ಇದ್ದು ಬಿಡುತ್ತಾರೆ. ಕ್ರೀಡೆಗಳಲ್ಲಿ ವಿಶೇಷ ಆಸಕ್ತಿ ಇರುವ ಅವರು ಬಿಲಿಯರ್ಡ್ ಮತ್ತು ಕ್ರಿಕೆಟ್ಟಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದಾರೆ. ಅದಕ್ಕಾಗಿ ಒಂದು ಪ್ರತಿಷ್ಠಾನವನ್ನೆ ಸ್ಥಾಪಿಸಿದ್ದಾರೆ. 'ಉದ್ಯೋಗ ರತ್ನ' ಪ್ರಶಸ್ತಿಯನ್ನು ಪಡೆದಿರುವ ಅವರು ಸ್ವತಃ ಒಂದು ಸಂಸ್ಥೆಯೆ ಆಗಿದ್ದಾರೆಂದರೆ ತಪ್ಪಾಗದು. ಚಿಕ್ಕಉದ್ದಿಮೆಗಳ ಸಂಘದೊಂದಿಗೆ ನಿಕಟ ಸಂಬಂಧ ಇಟ್ಟುಕೊಂಡಿರುವ ಅವರು ಅನೇಕ ಉದ್ದಿಮೆಶೀಲ ವ್ಯಕ್ತಿಗಳಿಗೆ ತಾಂತ್ರಿಕ ಹಾಗೂ ಆಡಳಿತ ತರಬೇತಿ ಕಲ್ಪಿಸಿದ್ದಾರೆ.

ತೋಟಗಾರಿಕೆ ಮತ್ತು ಸಸ್ಯ ಸಂರಕ್ಷಣೆ ಅವರಿಗೆ ಪಂಚಪ್ರಾಣ. ಅದಕ್ಕಾಗಿ ಅವರು ಕ್ರಿಮಿನಾಶಕ, ಗೊಬ್ಬರ ತಯಾರಿಕಾ ಘಟಕವನ್ನು ಸ್ಥಾಪಿಸಿದರು.

ಬಿ.ಡಿ.ಕೆ. ಗುಂಪಿನ ಮೂರು ಘಟಕಗಳಿಗೆ ಐ.ಎಸ್.ಓ.-೯೦೦೧ ಸರ್ಟಿಫಿಕೆಟ್ ದೊರೆತಿದೆ. ಔದ್ಯಮಿಕವಾಗಿ ಹಿಂದುಳಿದ ಜಿಲ್ಲೆ ಎಂದು ಘೋಷಿಸಲ್ಪಟ್ಟಿರುವ ಧಾರವಾಡ ಜಿಲ್ಲೆಯ ಔದ್ಯಮಿಕ ವಿಕಾಸಕ್ಕೆ ಬಹುದೊಡ್ಡ ಕೊಡುಗೆ ನೀಡುತ್ತ ಬಂದಿರುವ ಭರತ ಖಿಮಜಿ ಸಾಮಾಜಿಕ ಪ್ರಜ್ಞೆಯುಳ್ಳ ವಿರಳ ಉದ್ದಿಮೆದಾರರಲ್ಲಿ ಒಬ್ಬರಾಗಿದ್ದಾರೆ. ಕ್ಯಾನ್ಸರ ಸಂಸ್ಥೆ, ಜೈಂಟ್ಸ ಗ್ರೂಫ್, ಮಹಾವೀರ ಸಹಕಾರಿ ಬ್ಯಾಂಕ್ ಮೊದಲಾದ ಸಂಘ ಸಂಸ್ಥೆಗಳ ಸ್ಥಾಪನೆಯಲ್ಲಿ ಬಹು ದೊಡ್ಡ ಪಾತ್ರ ವಹಿಸಿದ್ದಾರೆ. ಇಷ್ಟೆಲ್ಲ ಸಾಧಿಸಿಯೂ ಈ ಭರತ ರಾಮಾಯಣದ ಭರತನಂತೆ ತೆರೆಯ ಮರೆಯಲ್ಲಿಯೆ ಇರಬಯಸುತ್ತಾರೆ.

ಎಸ್.ವೈ. ಜೋಶಿ



ಇಲಿಝಾರೊ ಚಿಕಿತ್ಸಾ ಪದ್ಧತಿ

ವಿಜಯಲಕ್ಷ್ಮಿ

ಹುಬ್ಬಳ್ಳಿ ನಗರವು ಕರ್ನಾಟಕದ ಎರಡನೆ ರಾಜಧಾನಿ ಎನಿಸಿದ್ದು ಅದು ಭರದಿಂದ ಬೆಳೆಯುತ್ತಿದೆ. ಅಂತೆಯೆ ಮೂಲಭೂತ ಸೌಕರ್ಯಗಳ ಅಗತ್ಯವೂ ಹೆಚ್ಚುವುದೂ ಸಹಜವಾಗಿದೆ. ಜನರಿಗೆ ಅವಶ್ಯವೆನಿಸುವ ಸೇವೆಗಳಲ್ಲಿ ಆರೋಗ್ಯ ಸೇವೆ ಅತಿ ಮಹತ್ವದ್ದೆಂದರೆ ತಪ್ಪಾಗದು. ಇಂದು ಅನೇಕ ಹೊಸ ಹೊಸ ರೋಗಗಳು ಕಾಣಿಸಿಕೊಳ್ಳುತ್ತಿರುವಂತೆ ಆರೋಗ್ಯ ವಿಜ್ಞಾನ ಮತ್ತು ಚಿಕಿತ್ಸಾ ವಿಧಾನಗಳಲ್ಲೂ ಹೊಸ ಸಂಶೋಧನೆಗಳು ಬೆಳಕಿಗೆ ಬರುತ್ತಿವೆ. ಆಯಾ ರೋಗಗಳ ಚಿಕಿತ್ಸೆಗಾಗಿ ಪರಿಣತರ ಅಗತ್ಯವಾಗಿದೆ. ಇದಕ್ಕನುಗುಣವಾಗಿ ಹುಬ್ಬಳ್ಳಿ ನಗರದಲ್ಲೂ ಪರಿಣತ ವೈದ್ಯರು ಹಾಗೂ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗ ತೊಡಗಿದೆ. ಎಲುಬು ಮತ್ತು ಕೀಲುಗಳ ತಜ್ಞ ಡಾ. ಕಲಮದಾನಿಯವರ ಕ್ಷೇಮಾ ಆರ್ಥೋಪೀಡಿಕ್ಸ್ ಆಸ್ಪತ್ರೆ ಇಂಥ ವಿಶೇಷ ಆಸ್ಪತ್ರೆಗಳಲ್ಲಿ ಒಂದಾಗಿದೆ. ಅದು ಸ್ಥಾಪಿತವಾದ ಅಲ್ಪಾವಧಿಯಲ್ಲೆ ಉತ್ತಮ ಸೇವೆ ಹಾಗೂ ಸೌಕರ್ಯ ಒದಗಿಸುವದರೊಂದಿಗೆ ಜನಪ್ರಿಯವಾಗಿದೆ.

ಕ್ಷೇಮಾ ಆಸ್ಪತ್ರೆ ರೋಗಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವದಕ್ಕಾಗಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಹೊಂದಿದೆ. ಅಮೆರಿಕೆಯಲ್ಲಿಯಂತೆ ಡಾ. ಕಲಮದಾನಿಯವರು ತಮ್ಮ ಆಸ್ಪತ್ರೆಯಲ್ಲಿ ಗುಂಪು ಡಾಕ್ಟರ ಸೇವೆ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಅಂದರೆ ರೋಗಿ ಒಮ್ಮೆ ಕೊಟ್ಟ ಶುಲ್ಕದಲ್ಲೇ ಇತರ ಪರಿಣತ ಡಾಕ್ಟರರ ಸಲಹೆ ಪಡೆಯಲು ಸಾಧ್ಯವಾಗಿದೆ. ಇನ್ನು ಕೆಲವು ದಿನಗಳಲ್ಲಿ ಐವತ್ತು ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ಪ್ರಾರಂಭವಾಗಲಿದೆ.

ಡಾ. ಕಲಮದಾನಿಯವರು ರಷ್ಯಾ ಮೂಲದ 'ಇಲಿಝಾರೊ' ಚಿಕಿತ್ಸಾ ಪದ್ಧತಿಯನ್ನು ತಮ್ಮ ಆಸ್ಪತ್ರೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಮೊದಲು ಮೂಳೆ ಮುರಿತ, ಕೊಳೆತ ಎಲುಬು ಇಲ್ಲವೆ ದುರ್ಮಾಂಸ ಬೆಳೆದ ಎಲುಬಿನ ಪ್ರಕರಣಗಳಲ್ಲಿ ಅವುಗಳನ್ನು ಕತ್ತರಿಸಿ ಹಾಕಲಾಗುತ್ತಿತ್ತು. ಇದರಿಂದ ಕಾಲು ಇಲ್ಲವೆ ಕೈ ಊನವಾಗುತ್ತಿತ್ತು. ಆದರೆ 'ಇಲಿಝಾರೊ' ಚಿಕಿತ್ಸಾ ಪದ್ಧತಿಯಿಂದ ಅಂಥ ಪರಿಸ್ಥಿತಿ ಬರುವುದಿಲ್ಲ. ಇದರ ಪ್ರಕಾರ ರೋಗಗ್ರಸ್ತ ಮೂಳೆಯನ್ನು ತೆಗೆದು ಹಾಕಿ ಕಾಲು ಇಲ್ಲವೆ ಕೈಯನ್ನು ಅತಿಯಾಗಿ ಕುಗ್ಗಿಸಿ ನಂತರ ಹಿಗ್ಗಿಸಲಾಗುವುದರಿಂದ ಅದು ಮೊದಲಿನ ಸ್ಥಿತಿಗೆ ಬರುತ್ತದೆ. ಮೊದಲು ೪-೫ ಸೆಂಟಿಮೀಟರ್ ಎಲುಬನ್ನು ತೆಗೆದುಹಾಕಿ ಕುಗ್ಗಿಸಿ ನಂತರ ಹಿಗ್ಗಿಸಲಾಗುತ್ತಿತ್ತು. ಆದರೀಗ ಡಾ. ಕಲಮದಾನಿಯವರು ಏಳರಿಂದ ಹತ್ತು ಸೆಂಟಿಮೀಟರ್‌ವರೆಗೆ ಮೂಳೆ ತೆಗೆದು ಹಾಕಿ ತ್ವರಿತವಾಗಿ ಕುಗ್ಗಿಸಿ ಮುಂದೆ ಪ್ರತಿ ದಿನ ಒಂದು ಮಿಲಿಮೀಟರ ಹಿಗ್ಗಿಸುವ ವಿಧಾನವನ್ನು ಯಶಸ್ವಿಯಾಗಿ ಬಳಸಿದ್ದಾರೆ. ಇದರಿಂದ ಸುಮಾರು ಮೂವತ್ತು ರೋಗಿಗಳಿಗೆ ಪ್ರಯೋಜನವಾಗಿದೆ.

ಪುಣೆಯ ರಾಜೇಶ ಎಂಬ ಎಂ.ಬಿ.ಎ. ವಿದ್ಯಾರ್ಥಿಯ ಕಾಲಿನಲ್ಲಿ ದುರ್ಮಾಂಸ ಬೆಳೆದಿತ್ತು. ಅಲ್ಲೆಲ್ಲೂ ಯೋಗ್ಯ ಚಿಕಿತ್ಸೆ ಸಿಗದೆ ಆತ ಡಾ.ಕಲಮದಾನಿಯವರ ಕಡೆಗೆ ಬಂದ. ಅವನ ಕಾಲಿನ ರೋಗಗ್ರಸ್ಥ ಮೂಳೆಯನ್ನು ಏಳು ಸೆಂಟಿಮೀಟರಿನಷ್ಟು ಕತ್ತರಿಸಿ ತ್ವರಿತವಾಗಿ ಕುಗ್ಗಿಸಲಾಯಿತು. ಮುಂದೆ ಪ್ರತಿದಿನ ಒಂದ ಮಿ.ಮೀ. ಹಿಗ್ಗಿಸುತ್ತ ಹೋಗಲಾಯಿತು. ಏಳು ತಿಂಗಳಲ್ಲಿ ಅವನ ಕಾಲು ಮೊದಲಿನ ಅಳತೆಗೆ ಬಂದಿತು.

ತೀರ್ಥಹಳ್ಳಿಯ ಸ್ಮಿತಾ ಎಂಬ ನಾಲ್ಕು ವರ್ಷದ ಬಾಲಕಿಯ ಕಾಲು ಹುಟ್ಟಿನಿಂದಲೆ ಮುರಿದು ಕೂಡಿಕೊಳ್ಳದಂತಾಗಿತ್ತು. ಐದು ಸೆಂ.ಮೀ. ಎಲುಬನ್ನು ಕತ್ತರಿಸಿ ತ್ವರಿತವಾಗಿ ಕುಗ್ಗಿಸಿ ಹಿಗ್ಗಿಸಿ ಅದನ್ನು ಸರಿಪಡಿಸಲಾಯಿತು.

ಅರಣ್ಯ ಇಲಾಖೆಯ ಪಟಕಾರ ಎಂಬ ನೌಕರನ ಕಾಲು ಮುರಿದು ಹತ್ತು ಸೆಂ.ಮೀ. ಮೂಳೆ ಕೊಳೆತು ಹೋಗಿತ್ತು. ಕಾಲನ್ನು ಕತ್ತರಿಸಲು ಅವನಿಗೆ ಸಲಹೆ ನೀಡಲಾಗಿತ್ತು. ಆದರೆ ಕಲಮದಾನಿಯವರು ಅವನಿಗೆ ಚಿಕಿತ್ಸೆ ಮೂಲಕ ಕಾಲು ಕತ್ತರಿಸದೆ ಗುಣಪಡಿಸಿದರು.

ಡಾ. ಕಲಮದಾನಿಯವರು ಹೀಗೆ ಅನೇಕ ಕ್ಲಿಷ್ಟವಾದ ಮೂಳೆ ಮುರಿತ ಇಲ್ಲವೆ ರೋಗಗಳಿಗೆ 'ಇಲಿಝಾರೊ' ಚಿಕಿತ್ಸಾ ಪದ್ಧತಿಯಿಂದ ಪರಿಹಾರ ಒದಗಿಸಿ ಅನೇಕ ರೋಗಿಗಳ ಜೀವನದಲ್ಲಿ ಕಾರ್ಗತ್ತಲಿನ ಬದಲು ಬೆಳಕನ್ನು ಚೆಲ್ಲಿದ್ದಾರೆ. ಮೂಳೆ ಮುರಿತ ಸರಿಪಡಿಸಲು ಅವರು ಮೊಳೆ ಹಾಗೂ ಸ್ಕ್ರೂಗಳಿಂದ ಅದನ್ನು ಸರಿಪಡಿಸುವ ವಿಧಾನವನ್ನೂ ಅವರು ಅನುಸರಿಸುತ್ತಾರೆ. ಇದಕ್ಕಾಗಿ ಅವರು ಜರ್ಮನಿಯ ಮೊಳೆಗಳನ್ನೆ ಬಳಸುತ್ತಾರೆ. ಇವು ಮುರಿಯುವ ಇಲ್ಲವೆ ಬಗ್ಗುವ ಸಂಭವ ಕಡಿಮೆ.


ಡಾ. ಕಲಮದಾನಿಯವರ ಮನೆತನ ಮೂಲತಃ ಬೈಲಹೊಂಗಲಕ್ಕೆ ಸೇರಿದ್ದು ಇವರ ತಂದೆ ಮುಂಬಯಿಯಲ್ಲಿ ನೌಕರಿಯಲ್ಲಿದ್ದು ಭಾಷಾವಾರು ಪ್ರಾಂತ ರಚನೆಯ ನಂತರ ಅವರು ಹುಬ್ಬಳ್ಳಿಗೆ ಬಂದರು. ಡಾ. ಕಲಮದಾನಿ ಆರು ವರ್ಷದವರಿದ್ದಾಗ ತಂದೆಯನ್ನು ಕಳೆದುಕೊಂಡರು.

ಅವರು ಹುಬ್ಬಳ್ಳಿಯ ಲ್ಯಾಮಿಂಗಟನ್ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ ಪಿ.ಸಿ. ಜಾಬಿನ ಸೈನ್ಸ್ ಕಾಲೇಜ್ ಸೇರಿದರು. ೧೯೭೭ರಲ್ಲಿ ಕೆ.ಎಂ.ಸಿ.ಯಿಂದ ಎಂ.ಬಿ.ಬಿ.ಎಸ್. ಪಾಸಾದರು. ೧೯೮೧ರಲ್ಲಿ ಬಾಂಬೆ ಹಾಸ್ಪಿಟಲಿನಿಂದ ಎಲುಬು ಮತ್ತು ಕೀಲು ರೋಗಗಳ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಮುಂದೆ ಕೆಲ ಕಾಲ ಮಿರಜದಲ್ಲಿಯ ಸುಪ್ರಸಿದ್ಧ ಎಲುಬು-ಕೀಲು ತಜ್ಞ ಡಾ. ಜಿ.ಎಸ್. ಕುಲಕರ್ಣಿ ಜೊತೆ ಕೆಲಸ ಮಾಡಿದರು. ೧೯೮೪ರಲ್ಲಿ ಅವರು ಹುಬ್ಬಳ್ಳಿಯಲ್ಲಿ ತಮ್ಮ ಸ್ವಂತ ಪ್ರಾಕ್ಟೀಸ್ ಆರಂಭಿಸಿದರು. ಆಗ ಅವರ ಮೂಲ ಬಂಡವಾಳ ಕೇವಲ ಒಂದು ಸಾವಿರ ರೂಪಾಯಿ!

ಅವರು ತಮ್ಮ ವೃತ್ತಿಗೆ ಸಂಬಂಧಿಸಿದ ವಿಷಯದಲ್ಲಿ ಹೆಚ್ಚಿನ ಪ್ರಾವೀಣ್ಯವನ್ನು ಪಡೆಯುತ್ತಲೆ ಬಂದಿದ್ದಾರೆ. ಈ ವಿಷಯದಲ್ಲಿ ದೇಶದಲ್ಲೇ ಅತ್ಯುಚ್ಚವೆನಿಸುವ ಮದ್ರಾಸದ ನ್ಯಾಶನಲ್ ಬೋರ್ಡ್ ಪರೀಕ್ಷೆಯನ್ನು ಪಾಸಾಗಿದ್ದಾರೆ. ೧೯೯೬ರಲ್ಲಿ ಅವರು ವಿದೇಶ ಯಾತ್ರೆ ಕೈಗೊಂಡರು. ಅಮಸ್ಟರ ಡ್ಯಾಮ್‌ನಲ್ಲಿ ನಡೆದ ಒಂದು ಜಾಗತಿಕ ಪರಿಷತ್ತಿನಲ್ಲಿ ಪ್ರಬಂಧ ಮಂಡಿಸಿದರು. ಜರ್ಮನಿಯಲ್ಲಿ ನಾಲ್ಕು ವಾರಗಳ ವಿಶೇಷ ತರಬೇತಿ ಪಡೆದರು.

೧೯೯೬ರ ಫೆಬ್ರವರಿಯಲ್ಲಿ ಅವರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಎಲುಬು ಮತ್ತು ಕೀಲು ತಜ್ಞರ ಸಮ್ಮೇಳನ ನಡೆಯಿತು. 'ಇಲಿಝಾರೊ' ಚಿಕಿತ್ಸಾ ಪದ್ಧತಿಯ ಬಗ್ಗೆ ಅವರು ಬೆಂಗಳೂರಲ್ಲಿ ಒಂದು ಕಮ್ಮಟವನ್ನೂ ಏರ್ಪಡಿಸಿದ್ದರು. ಸ್ಥಳೀಯ ಎಸ್.ಡಿ.ಎಂ. ಕಾಲೇಜಿನಲ್ಲಿ ಗೆಸ್ಟ್ ಲೆಕ್ಚರರ್ ಆಗಿರುವ ಡಾ. ಕಲಮದಾನಿಯವರು ಹುಬ್ಬಳ್ಳಿಯ ಎನ್.ಎಂ.ಆರ್.ಸ್ಕ್ಯಾನ್ ಸೆಂಟರ್‌ನ ಡೈರೆಕ್ಟರರೂ ಆಗಿದ್ದಾರೆ. ಇನ್ನೂ ಹೆಚ್ಚು ಸುಸಜ್ಜಿತವಾಗುವ ಅವರ ಆಸ್ಪತ್ರೆಯ ಉಪಯೋಗ ಇತರ ಡಾಕ್ಟರರಿಗೂ ಲಭ್ಯವಾಗುವಂತೆ ಮಾಡಲು ಅವರು ಆಲೋಚಿಸಿದ್ದಾರೆ.

ಮನೋರೋಗ ಚಿಕಿತ್ಸಕ ಡಾ. ವಿನೋದ್ ಕುಲಕರ್ಣಿ



ಆಶಾ ಜೋಶಿ

ಮನುಷ್ಯನ ಮನಸ್ಸಿಗೂ ಅವನ ದೇಹಕ್ಕೂ ನಿಕಟ ಸಂಬಂಧವಿದೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. 'ಮನಸ್ಸಿನಂತೆ ಮಹಾದೇವ' ಎನ್ನುವ ಮಾತೂ ಅದನ್ನೆ ಪುಷ್ಟೀಕರಿಸುತ್ತದೆ. ಮನುಷ್ಯ ಉತ್ತಮ ಆರೋಗ್ಯವನ್ನು ಕಾಪಾಡಿ ಕೊಳ್ಳಬೇಕಾದರೆ ಅವನಿಗೆ ಪೌಷ್ಟಿಕ ಆಹಾರ ಮಾತ್ರ ಸಾಲದು. ಅವನು ತನ್ನ ಮನಸ್ಸನ್ನೂ ಸ್ಥಿಮಿತದಲ್ಲಿ ಇಟ್ಟು ಕೊಳ್ಳಬೇಕಾಗುತ್ತದೆ. ಇಂದಿನ ಯಾಂತ್ರಿಕ ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವೆಲ್ಲರೂ ಅನೇಕ ರೋಗಗಳಿಂದ ಬಳಲುತ್ತಿದ್ದೇವೆ. ಅವುಗಳ ನಿವಾರಣೆಗಾಗಿ ಅನೇಕ ಔಷಧಿಗಳನ್ನು ಸೇವಿಸುತ್ತೇವೆ. ಸಾವಿರಾರು ರೂಪಾಯಿಗಳನ್ನು ಹಾಳು ಮಾಡುತ್ತೇವೆ. ಆದರೆ ಇವುಗಳಲ್ಲಿ ಅನೇಕ ರೋಗಗಳಿಗೆ ನಮ್ಮ ಮನಸ್ಸೇ ಮೂಲವೆಂಬುದನ್ನು ನಾವು ತಡವಾಗಿ ಕಂಡುಕೊಳ್ಳುತ್ತೇವೆ. ಇಂದಿನ ಮಾನವ ಬಹಳಷ್ಟು ಮಾನಸಿಕ ಒತ್ತಡದಿಂದ ಬಳಲುತ್ತಿದ್ದಾನೆ. ಅದಕ್ಕೆ ಅನೇಕ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿವೆ. ಕೆಲವು ಸಲ ಕೌಟುಂಬಿಕ ಪರಿಸ್ಥಿತಿಯೂ ಇದಕ್ಕೆ ಕಾರಣವಾಗಿರುತ್ತದೆ. ಇದಕ್ಕೆಲ್ಲ ಮನಸ್ಸೇ ಮೂಲವೆಂಬುದನ್ನು ಮರೆತು ದೇಹಕ್ಕೆ ಚಿಕಿತ್ಸೆ ಪಡೆದು ನಿರಾಶೆ ಹೊಂದುತ್ತೇವೆ. ಇದಕ್ಕೆಲ್ಲ ಮನೋರೋಗ ತಜ್ಞರ ಬಳಿಗೆ ಕೇವಲ ಹುಚ್ಚು ಹಿಡಿದವರು ಹೋಗಬೇಕೆನ್ನುವ ಭಾವನೆ ಇನ್ನೂ ಕೆಲವರಲ್ಲಿ ಉಳಿದಿದೆ. ಆದಾಗ್ಯೂ ಕ್ರಮೇಣ ಉಳಿದ ಡಾಕ್ಟರಿಗೆ ತೋರಿಸಿದಂತೆ ಮನೋರೋಗ ತಜ್ಞರ ಬಳಿಗೂ ಹೋಗಬೇಕೆಂಬ ಹಂಬಲ ಹೆಚ್ಚುತ್ತಿರುವದು ಸಂತೋಷದಾಯಕ. ಸಮಾಜದ ಸ್ವಾಸ್ಥ್ಯಕ್ಕೆ ಇದು ಅಗತ್ಯ ಕೂಡ.

ಮೊದ ಮೊದಲು ಯಾವ ಡಾಕ್ಟರಗೆ ತೋರಿಸಿದರೂ ರೋಗ ಗುಣವಾಗದಿದ್ದರೆ ಜನ ಮಂತ್ರಮಾಟಕ್ಕೆ ಮೊರೆ ಹೋಗುತ್ತಿದ್ದರು. ಶಿಕ್ಷಣದ ಪ್ರಭಾವ ಹೆಚ್ಚಿದಂತೆ ಇದು ಕಡಿಮೆಯಾಗುತ್ತ ಬಂತು. ಉತ್ತಮ ಮನೋರೋಗ ತಜ್ಞರ ಕೊರತೆಯೂ ಈ ಮಂತ್ರ ಮಾಟಕ್ಕೆ ಮೊರೆ ಹೋಗುವಂತೆ ಮಾಡುತ್ತಿತ್ತು. ಆದರೀಗ ಕಾಲ ಬದಲಾಗಿದೆ. ಹುಬ್ಬಳ್ಳಿಯ ಸುಪ್ರಸಿದ್ಧ ಮನೋರೋಗ ತಜ್ಞ ಡಾ. ವಿನೋದ ಕುಲಕರ್ಣಿ ಅಂಥವರು ಲಭ್ಯವಿರುವದರಿಂದ ಮನೋರೋಗ ಚಿಕಿತ್ಸೆ ಹೆಚ್ಚು ಜನಪ್ರಿಯವಾಗುತ್ತಿದೆ. ಅವರಲ್ಲಿಗೆ ದೂರ ದೂರದ ಪ್ರದೇಶಗಳಿಂದ ಚಿಕಿತ್ಸೆಗಾಗಿ ಬರುತ್ತಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿರುವದೆ ಇದಕ್ಕೆ ಸಾಕ್ಷಿ.

೧೯೫೩ ರಲ್ಲಿ ಬಿಜಾಪುರದಲ್ಲಿ ಹುಟ್ಟಿದ ಡಾ. ವಿನೋದ ಕುಲಕರ್ಣಿ ೧೯೭೭ರಲ್ಲಿ ಬಳ್ಳಾರಿಯ ಮೆಡಿಕಲ್ ಕಾಲೇಜಿನಿಂದ ವೈದ್ಯಕೀಯ ಪದವಿಧರರಾದರು. ಮುಂದೆ ಉನ್ನತ ಶಿಕ್ಷಣಕ್ಕಾಗಿ ಮುಂಬಯಿಯ ಸುಪ್ರಸಿದ್ಧ ಕೆ.ಇ. ಎಂ.ಆಸ್ಪತ್ರೆಗೆ ಆರಿಸಲ್ಪಟ್ಟರು. ೧೯೮೦ರಲ್ಲಿ ಅಲ್ಲಿಂದ ಎಂ.ಡಿ. ಹಾಗೂ ಡಿ.ಪಿ.ಎಂ. ಪದವಿ ಪಡೆದರು. ಅಂತಾರಾಷ್ಟ್ರೀಯ ಖ್ಯಾತಿಯ ಮಾನಸಿಕ ರೋಗಗಳ ತಜ್ಞರಾದ ಡಾ. ಡೋಂಗಾಜಿ ಹಾಗೂ ಡಾ. ಬಗಾಡಿಯಾ ಅವರಿಂದ ಡಾ. ವಿನೋದ ಕುಲಕರ್ಣಿ ಅವರಿಗೆ ತರಬೇತಿ ಸಿಕ್ಕಿತು. ಮುಂದೆ ಒಂದು ವರ್ಷ ಕೆ.ಇ. ಎಂ. ಆಸ್ಪತ್ರೆಯಲ್ಲೆ ಸೇವೆ ಸಲ್ಲಿಸಿ ಹುಬ್ಬಳ್ಳಿಗೆ ಬಂದು ೧೯೮೨ರಲ್ಲಿ ತಮ್ಮ ಸ್ವಂತ ಆಸ್ಪತ್ರೆ ಪ್ರಾರಂಭಿಸಿದರು.

ವಿದ್ಯಾನಗರದಲ್ಲಿರುವ ಡಾ. ವಿನೋದ ಕುಲಕರ್ಣಿ ಅವರ ಮಾನಸ ನರ್ಸಿಂಗ್ ಹೋಂ ನಲ್ವತ್ತು ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯಾಗಿದೆ. ಉತ್ತರ ಕರ್ನಾಟಕದಲ್ಲೆ ಇದು ಅತ್ಯಂತ ದೊಡ್ಡ ಆಸ್ಪತ್ರೆಯಾಗಿದ್ದು, ಇದೊಂದೇ ಆಸ್ಪತ್ರೆಯಲ್ಲಿ ಇ.ಇ.ಜಿ. ಯಂತ್ರ ಸೌಲಭ್ಯವಿದೆ. ಹೃದಯದ ಬಗ್ಗೆ ಇ.ಸಿ.ಜಿ. ಇದ್ದಂತೆ ಇ.ಇ.ಜಿ.ಯಿಂದ ಮಿದುಳಿನ ಬಗ್ಗೆ ಗೊತ್ತಾಗುತ್ತದೆ. ಇದರ ಜೊತೆಗೆ ಇನ್ನೂ ಅನೇಕ ಅತ್ಯಾಧುನಿಕ ಉಪಕರಣಗಳಿವೆ. ಇಲ್ಲಿ ಮದ್ಯಪಾನ ವ್ಯಸನಿಗಳಿಗೂ ಚಿಕಿತ್ಸೆ ನೀಡುವ ಸೌಲಭ್ಯವಿದೆ. ಸಂಗೀತವನ್ನು ಒಂದು ಚಿಕಿತ್ಸಾ ವಿಧಾನವನ್ನಾಗಿ ಇಲ್ಲಿ ಬಳಸಿಕೊಳ್ಳಲಾಗುತ್ತದೆ. ರೋಗಿಗಳ ಪ್ರತಿ ಕೋಣೆಯಲ್ಲಿ ಧ್ವನಿವರ್ಧಕವನ್ನು ಅಳವಡಿಸಲಾಗಿದೆ. ಅದರ ಮೂಲಕ ಭಕ್ತಿ ಗೀತೆಗಳು, ಶಾಸ್ತ್ರೀಯ ಸಂಗೀತ ಬಿತ್ತರಿಸಲಾಗುತ್ತಿದೆ. ಇದರಿಂದ ಮನೋರೋಗಿಗಳಿಗೆ ಮಾನಸಿಕ ಶಾಂತಿ ದೊರೆತು ಅವರು ಬೇಗ ಗುಣಮುಖರಾಗಲು ಸಹಾಯಕವಾಗುತ್ತದೆ. ಸಂಗೀತದಂತೆ ಡಾ. ವಿನೋದ ಕುಲಕರ್ಣಿ ಅವರ ಪ್ರೀತಿಯ ಮಾತುಗಳೂ ರೋಗಿಗಳಿಗೆ ಚೈತನ್ಯ ನೀಡುತ್ತವೆ. ಡಾ. ವಿನೋದ ಅವರು ವೃತ್ತಿಯಲ್ಲಿ ಯಶಸ್ವಿಯಾಗಲು ಅವರ ಧರ್ಮಪತ್ನಿ ಶ್ರೀಮತಿ ಆಶಾ ನೀಡಿದ ಕೊಡುಗೆ ಅಪಾರ.

ಡಾ. ವಿನೋದ ಕುಲಕರ್ಣಿಯವರು ಪ್ರತಿ ತಿಂಗಳ ಮೊದಲನೆ ರವಿವಾರ ವಿಜಾಪುರಲ್ಲಿ ಮತ್ತು ಎರಡನೆ ರವಿವಾರ ರಾಯಚೂರಲ್ಲಿ ಸಲಹೆಗೆ ಲಭ್ಯವಿರುತ್ತಾರೆ. ಇದನ್ನು ಅವರು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿದ್ದಾರೆ.

ಡಾ. ವಿನೋದ ಕುಲಕರ್ಣಿ ಅವರಿಗೆ ತಮ್ಮ ವೃತ್ತಿಯಲ್ಲಿ ಅನೇಕ ರೋಚಕ ಅನುಭವಗಳು ಬಂದಿವೆ. ಅನೇಕ ಮಾನಸಿಕ ರೋಗಿಗಳಿಗೆ ಒಂದು ರೀತಿಯಲ್ಲಿ ಪುನರ್ಜನ್ಮ ನೀಡಿದ್ದಾರೆ. ಫ್ರಾನ್ಸ ದೇಶದ ನಾಗರಿಕನೊಬ್ಬ ಕರ್ನಾಟಕದಲ್ಲಿಯ ಹಂಪಿ ನೋಡಲು ಬಂದಾಗ ಮನೋರೋಗಕ್ಕೆ ಒಳಗಾಗಿ ತನ್ನ ಹಾಗೂ ಇತರರ ಜೀವಕ್ಕೆ ಅಪಾಯ ಒಡ್ಡುವ ಸ್ಥಿತಿ ತಲುಪಿದ್ದ. ಅವನನ್ನು ಡಾ. ವಿನೊದ ಕುಲಕರ್ಣಿಯವರ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಸೂಕ್ತ ಚಿಕಿತ್ಸೆ ನೀಡಿದ ನಂತರ ಅವನು ಸಂಪೂರ್ಣ ಗುಣಮುಖನಾಗಿ ಸ್ವದೇಶಕ್ಕೆ ಹಿಂದಿರುಗಿದ. ಅಲ್ಲಿಯ ಮನೋರೋಗ ತಜ್ಞರು ಕೂಡ ಡಾ. ವಿನೋದ ಕುಲಕರ್ಣಿಯವರಿಗೆ ದೂರವಾಣಿ ಮೂಲಕ ಅಭಿನಂದನೆ ಸಲ್ಲಿಸಿದರು. ಫ್ರಾನ್ಸ್‌ನ ಆ ನಾಗರಿಕ ಈಗಲೂ ಕೂಡ ಡಾ.ವಿನೋದ ಕುಲಕರ್ಣಿಯವರಿಗೆ ಫೋನ್ ಮಾಡಿ ಆಗಾಗ ಸಲಹೆ ಸೂಚನೆಗಳನ್ನು ಕೇಳುತ್ತಿರುತ್ತಾನೆ. ಒಬ್ಬ ಕಾಫಿ ತೋಟದ ಮಾಲಿಕ ಮದ್ಯ ವ್ಯಸನಿಯಾಗಿದ್ದ. ಅವನನ್ನು ಆ ಚಟದಿಂದ ಮುಕ್ತಗೊಳಿಸಿದರು. ಹೀಗೆಯೆ ಹೇಳುತ್ತ ಹೋದರೆ ಅವುಗಳಿಗೆ ಕೊನೆ ಎಂಬುದೆ ಇರಲಾರದು.

ಕರ್ನಾಟಕದಲ್ಲಿ ಅತಿ ಶ್ರೇಷ್ಟವಾದ ಮಾನಸಿಕ ರೋಗಿಗಳ ಮತ್ತು ಮಧ್ಯಪಾನ ವ್ಯಸನಿಗಳ ಪುನರ್ವಸತಿ ಕೇಂದ್ರವೊಂದನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವುದು ಡಾ. ವಿನೋದ ಕುಲಕರ್ಣಿಯವರ ಹೆಬ್ಬಯಕೆಯಾಗಿದೆ.

●

'ಬದುಕು' ಕಥಾ ಸ್ಪರ್ಧೆ ಬಹುಮಾನಿತರು

ಅಮೂರ್ತರ ಲೋಕದಲ್ಲಿ
ಚಿಂತಾಮಣಿ ಕೊಡ್ಲೆಕೆರೆ

ನರಸಿಂಹ ಐತಾಳರೂ ಪುಟ್ಮಾಣಿಯೂ
ಯು.ಆರ್. ಲಲಿತಾ

ಪಟ್ಟಾ
ಚಿತ್ರಶೇಖರ ಕಂಠಿ

ಬಹುಮಾನ ಮೊತ್ತವಾದ ರೂ. ೫೦೦೦ವನ್ನು ಮೇಲಿನ ಮೂರು ಕಥೆಗಳಿಗೆ ಸಮವಾಗಿ ಹಂಚಲಾಗಿದೆ.

ತೀರ್ಪುಗಾರರ ಟಿಪ್ಪಣಿ

ಕನ್ನಡ ಪತ್ರಿಕೆಗಳು, ವಿಶೇಷಾಂಕಗಳು, ಸಾಹಿತ್ಯಾಸಕ್ತ ವೇದಿಕೆಗಳು ಕಾಲಕಾಲಕ್ಕೆ 'ಕಥಾ ಸ್ಪರ್ಧೆ', 'ಕಾವ್ಯ ಸ್ಪರ್ಧೆ'ಗಳನ್ನು ನಡೆಸುತ್ತಾ ಬಂದಿರುವುದು ಕನ್ನಡ ಸಾಹಿತ್ಯದ ಆರೋಗ್ಯ ಪೂರ್ಣ ಘಟನೆಯಾಗಿದೆ. ಇಂತಹ ಸ್ಪರ್ಧೆಗಳು ಹೊಸ ಬರಹಗಾರರಿಗೆ, ನಿಯಮಿತ ಚೌಕಟ್ಟಿನಲ್ಲಿ ಬರೆಯದೆ, ಜನಪ್ರಿಯ ಪತ್ರಿಕೆಗಳ ಆಶಯಕ್ಕೆ ಒಗ್ಗದ ಪ್ರಯೋಗಗಳನ್ನು ಮಾಡುವ ಲೇಖಕರಿಗೆ ಮುಕ್ತ ಅವಕಾಶಗಳನ್ನು ಒದಗಿಸುತ್ತವೆ. ಹೊಸ ಅಭಿವ್ಯಕ್ತಿಗೆ ಸಾಧ್ಯತೆಗಳನ್ನು ತೆರೆದಿಡುತ್ತವೆ. ಈ ಸ್ಪರ್ಧೆಗಳ ಮುಖ್ಯ ಉದ್ದೇಶ ಕೂಡ ಅದೇ ಆಗಿರುತ್ತದೆ.

ಒಂಬತ್ತು ತಿಂಗಳುಗಳ ಹಿಂದೆಯಷ್ಟೇ ಪ್ರಾರಂಭವಾಗಿ ಹೊಸ ಬಗೆಯ ಪತ್ರಿಕೋದ್ಯಮದಲ್ಲಿ ನಿರತವಾಗಿರುವ 'ಬಿಸಿಲ ಬದುಕು' ಪತ್ರಿಕೆ ಇದೀಗ ವಿಶೇಷಾಂಕವೊಂದನ್ನು ಹೊರ ತರುತ್ತಿದ್ದು - ಕಥಾ ಸ್ಪರ್ಧೆ ಅದರ ಆಕರ್ಷಣೆಯಾಗಿದೆ. ಸ್ಪರ್ಧೆಗೆ ಎಂದಿನಂತೆ ಉತ್ಸಾಹದ ಪ್ರತಿಕ್ರಿಯೆ ದೊರೆತಿದೆ.

ಸ್ಪರ್ಧೆಗೆ ಬಂದ ಎಲ್ಲ ಕಥೆಗಳನ್ನು ಓದಿ, ಐವತ್ತನ್ನು ಪರಿಗಣಿಸಬಹುದೆಂದು ಸಂಪಾದಕೀಯ ಮಂಡಳಿ ತೀರ್ಪುಗಾರರಿಗೆ ನೀಡಿತು. ಈ ಸ್ಪರ್ಧೆಯ ವಿಶೇಷತೆಯೆಂದರೆ - 'ಒಂದೇ' ಬಹುಮಾನವಿರುವುದು. ಅಂದರೆ - ಒಂದು, ಎರಡು, ಮೂರು ಎಂದು ಆಯ್ಕೆ ಮಾಡದೆ ಕೇವಲ ಒಂದನ್ನು ಮಾತ್ರ ಬಹುಮಾನಕ್ಕೆ ಅರ್ಹವಾದುದು ಎಂದು ಆರಿಸುವುದು. ಇದು ತುಸು ಕಷ್ಟದ ಕೆಲಸವೇ.

ಸಂಪಾದಕ ಮಂಡಳಿ ತೀರ್ಪುಗಾರರಿಗೆ ನೀಡಿದ ಕಥೆಗಳನ್ನು ಒಂದು ಸುತ್ತಿನಲ್ಲಿ ಮೊದಲು ಓದಲಾಯಿತು. ಎರಡನೆಯ ಸುತ್ತಿನ ಓದಿಗೆ ಆಯ್ಕೆ ಮಾಡಿಕೊಳ್ಳುವಾಗ ಇಪ್ಪತ್ತು ಕಥೆಗಳು ಉಳಿದುಕೊಂಡವು. ಈ ಇಪ್ಪತ್ತು ಕಥೆಗಳನ್ನು ಮತ್ತೊಮ್ಮೆ ಓದಿದಾಗ ಬಹುಮಾನಕ್ಕೆ ಯೋಗ್ಯವಾದ ಏಳು ಕಥೆಗಳು ಉಳಿದುಕೊಂಡವು. ಈ ಕಥೆಗಳನ್ನು ಮತ್ತೆ ಓದಿದಾಗ ಒಂದನ್ನು ಮಾತ್ರ ಬಹುಮಾನಕ್ಕೆ ಯೋಗ್ಯವೆಂದು ಆರಿಸುವುದು ಕಷ್ಟವಾಯಿತು. ಹೀಗಾಗಿ, ಸಂಖ್ಯೆಯನ್ನು (ಅಂದರೆ ಪ್ರಥಮ, ದ್ವಿತೀಯ, ತೃತೀಯ ಎಂದು) ನೀಡದೆ ಮೂರು ಕಥೆಗಳನ್ನು ಆಯ್ದು, ಬಹುಮಾನದ ಮೊತ್ತವನ್ನು ಈ ಮೂರೂ ಕಥೆಗಳಿಗೆ ಹಂಚಲು ಸಂಪಾದಕರಿಗೆ ಸೂಚಿಸಲಾಗಿದೆ.

ಒಂದು ರೀತಿಯಲ್ಲಿ ಇದು ಕೂಡ ಸಂದಿಗ್ಧವೇ. ಏಕೆಂದರೆ ಈ ಮೂರೂ ಕಥೆಗಳ ಗುಣಮಟ್ಟ ಒಂದೇ ರೀತಿಯಲ್ಲಿಲ್ಲ. ಆಶಯ, ಧ್ವನಿಸುವ ನಿಲುವು ಬೇರೆ ಬೇರೆ. ಆದರೆ ಸಣ್ಣ ಕಥೆಯ ಮಾದರಿಯನ್ನು ದುಡಿಸಿಕೊಳ್ಳುವ ನಿಟ್ಟಿನಲ್ಲಿ, ಕಥೆ ಹೇಳುವ ವಿಧಾನದಲ್ಲಿ, ಶೈಲಿಯ ಉಪಯೋಗದಲ್ಲಿ ಇವು ಯಶಸ್ವಿಯಾಗಿವೆ. ಇನ್ನೂ ಒಂದೆರಡು ಗಮನಿಸಬಹುದಾದ ಕಥೆಗಳಿದ್ದರೂ ಅವು ಹಸ್ತ ಪ್ರತಿಯಲ್ಲಿ ೨೦ ಪುಟಗಳನ್ನು ಮೀರಿದ್ದವು. ಸಾಮಾನ್ಯ ದೃಷ್ಟಿಯಿಂದ ನೋಡಿದಾಗ ಪುಟಗಳ ಸಂಖ್ಯೆ ಆಯ್ಕೆಯ ಮಾನದಂಡವಲ್ಲದಿದ್ದರೂ ಸ್ಪರ್ಧೆಗಳಲ್ಲಿ ಅದೂ ಅನಿವಾರ್ಯವಾಗಿಬಿಡುತ್ತದೆ. ಆದರೆ ಗುಣಾತ್ಮಕ ಅಂಶವೆಂದರೆ ಇಲ್ಲಿ ಆಯ್ಕೆಯಾಗಿರುವ ಮೂರು ಕಥೆಗಳು ಇಂಥ ಇತಿಮಿತಿಗಳನ್ನು ಮೀರಿ ಅಥವ ಅರಿತುಕೊಂಡು ಆ ಅಂಶದೊಳಗೆ ನಡೆಸಿದ ಯಶಸ್ವಿ ಪ್ರಯತ್ನಗಳಾಗಿವೆ. ಸಿದ್ಧ ಮಾದರಿಯ ಲವಲವಿಕೆಯ ಕಥಾ ಶೈಲಿ, ಪ್ರಯೋಗಶೀಲತೆ;

ಸಾಮಾಜಿಕ ನ್ಯಾಯದ ಪ್ರಶ್ನೆ ಈ ಅಂಶಗಳು ಸ್ಥೂಲವಾಗಿ ಸದ್ಯದ ಕನ್ನಡ ಕಥೆಗಳನ್ನು ರೂಪಿಸುತ್ತಿವೆ ಅನ್ನಿಸುತ್ತದೆ. ಇವುಗಳ ಜತೆಗೇ ಇಂಥ ಅನೇಕ ಹೊಸ ಅಂಶಗಳನ್ನು ಒಳಗೊಂಡ ಒಳ್ಳೆಯ ಕಥೆಗಳು ಆಗಾಗ ಪ್ರಕಟಗೊಳ್ಳುತ್ತಲೇ ಇರುತ್ತವೆ. ಆದರೂ ಎಪ್ಪತ್ತರ ದಶಕದಲ್ಲಿ ಹುಟ್ಟಿದ ಹೊಸ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗಳು - ಕನ್ನಡ ಸಾಹಿತ್ಯದಲ್ಲಿ ಮುಖ್ಯ ವಾಹಿನಿಯಂತೆ ಕೆಲಸ ಮಾಡುತ್ತಿರುವುದು ಕಂಡು ಬರುತ್ತದೆ. ಇಲ್ಲಿ ಆಯ್ಕೆ ಮಾಡಿರುವ ಮೂರು ಕಥೆಗಳು ಮೇಲಿನ ಅಂಶಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರತಿನಿಧಿಸುತ್ತವೆ.

ಇಲ್ಲಿನ 'ಅಮೂರ್ತರ ಲೋಕದಲ್ಲಿ' ಪ್ರಯೋಗಶೀಲ ಕಥೆ. 'ಮಾಯಾ ವಾಸ್ತವವಾದಿ' ಬರಹಗಳಂತೆ ಮೇಲು ನೋಟಕ್ಕೆ ಅಸಂಗತ ಅನ್ನಿಸುವಂಥದ್ದು. ಧ್ವನಿಪೂರ್ಣ ವ್ಯಂಗ್ಯ, ಜಾಣತನದ ನಿರೂಪಣೆ, ಕೆಲವೆಡೆ ಆಯ್ದು ಹಾಕಿದಂತಿರುವ ಪದಗಳು ತಟ್ಟನೆ ಮನ ಸೆಳೆಯುತ್ತವೆ. ಒಂದು ಸಮಾಜದ ಕ್ರಿಯಾಶೀಲತೆ (ಕಲೆ, ಸಾಹಿತ್ಯ, ಸಂಗೀತ ಏನೇ ಆಗಿರಲಿ) ಜಡಗಟ್ಟಿ, ದಾರಿದ್ರ್ಯ ಆವರಿಸಿ ಹುಟ್ಟುವ ವಾತಾವರಣದ 'ಸ್ಥಿತಿ'ಯನ್ನು ಇದು ಅಚ್ಚುಕಟ್ಟಾಗಿ ತೆರೆದಿಡುತ್ತದೆ. ಎಚ್ಚರದ ಸಂಕೇತವಾಗಬೇಕಾದ 'ವಿಮರ್ಶೆ' ವಾಣಿಜ್ಯಕರಣಕ್ಕೊಳಗಾದಾಗಿನ ದುರಂತವನ್ನಿದು ಆರೋಗ್ಯಪೂರ್ಣ ವ್ಯಂಗ್ಯದೊಂದಿಗೆ ನೋಡನೋಡುತ್ತಲೇ ಮುಗಿದು ಹೋಗಿಬಿಡುತ್ತದೆ! ಕಥೆಗಾರನ ಸಂಯಮ ಸಮರ್ಥವಾಗಿ ಕೆಲಸ ಮಾಡಿದ್ದು ಒಂದು ಪ್ರಬಂಧದಂತೆ ಓದಿಸಿಕೊಂಡು ಹೋಗುವ ಅಂಶ ಕೂಡ ಈ ಕಥೆಯಲ್ಲಿದೆ.

'ನರಸಿಂಹ ಐತಾಳರೂ ಪುಟ್ಮಾಣಿಯೂ' ಸಂಬಂಧಗಳ ಅರ್ಥಹೀನತೆಯನ್ನು ಹಿಡಿದಿಡಲು ಯತ್ನಿಸಿದೆ. ರುಜು ಮಾರ್ಗದ ಮೂಲಕವಲ್ಲದೆ ವಿಶ್ವಾಸದ್ರೋಹದಿಂದ ಬದುಕಿನಲ್ಲಿ ಯಶಸ್ವಿಯಾದ ವ್ಯಕ್ತಿಯೊಬ್ಬ ಅಂಥ ಸಂದರ್ಭಕ್ಕೆ ತನ್ನ ಕುಟುಂಬದಿಂದಲೇ ಸಿಲುಕಿ ಪಶ್ಚಾತ್ತಾಪ ಪಡುವ ಸ್ಥಿತಿ ತಲುಪುವುದನ್ನು ಈ ಕಥೆ ಜನಪ್ರಿಯ ಮಾದರಿಯನ್ನು ಅನುಕರಿಸಿ ಹೇಳುತ್ತದೆ. ಗೆಳೆಯನೊಬ್ಬನಿಗೆ ದ್ರೋಹ ಬಗೆದು ಜೀವನದಲ್ಲಿ ಯಶಸ್ವಿಯಾದ ಐತಾಳರು ಆ ಪಾಪ ಪ್ರಜ್ಞೆಯಲ್ಲೇ ಗೆಳೆಯನ ಮಗನನ್ನು ಮನೆಯವರ ವಿರೋಧದ ನಡುವೆ ಸಾಕುವುದು, ಕೊನೆಗೆ ಮಕ್ಕಳು ಕೈ ತಪ್ಪಿ ಹೋಗಿ ತಾವೇ ಮೌಲ್ಯ ಕಳೆದುಕೊಂಡು ಮರುಗಿ ಆತ್ಮಹತ್ಯೆ ಮಾಡಿಕೊಳ್ಳುವುದು, ಪ್ರಾಯಶ್ಚಿತ್ತ ಪಡುವುದು ಎಲ್ಲ ಅಂದುಕೊಂಡಂತೆಯೇ ನಡೆಯುತ್ತವೆ. ಆದರೆ ನಿರೂಪಣೆಯಲ್ಲಿನ ಪ್ರಾಮಾಣಿಕತೆ, ಕುಂದಾಪುರ ಕೋಟ ಬ್ರಾಹ್ಮಣರ ಭಾಷೆಯ ಬಳಕೆ, ಶೈಲಿ ಕಥೆಯನ್ನು ಗಟ್ಟಿಯಾಗಿಸಿವೆ.

ನಿರೂಪಣೆ, ಭಾಷೆಯನ್ನು ಚೆನ್ನಾಗಿ ದುಡಿಸಿಕೊಂಡಿರುವ ಸಾಲಿಗೆ 'ಪಟ್ಟಾ' ಕಥೆ ಕೂಡ ಸೇರುತ್ತದೆ. ಟೆನೆನ್ಸಿ ಕಾಯಿದೆಯಲ್ಲಿ ಜಮೀನುಗಳನ್ನು ಕಳೆದುಕೊಂಡು ಭಿಕಾರಿಗಳಾದ ಜಮೀನುದಾರರು ಅನುಭವಿಸಿದ್ದ ಸ್ಥಿತಿಯನ್ನು ಕಥೆ ಹಿನ್ನೆಲೆಯಾಗಿರಿಸಿಕೊಂಡಿದೆ. ಆದರೆ ಈ ಕಥೆಯಲ್ಲಿ ಜೀತದಾಳಾಗಿದ್ದ ನಾಗೇಂದ್ರನ ಔದಾರ್ಯದಿಂದಾಗಿ ಈರಯ್ಯನ ಜಮೀನುಗಳು ಉಳಿಯುತ್ತವೆ. ಮುಂದೆ ಕಾಲ ಕಳೆದು ನಾಗೇಂದ್ರನ ಮಗನಿಗೆ ಸರ್ಕಾರಿ ನೌಕರಿ ಸೇರಲು ಲಂಚ ನೀಡಬೇಕಾದ ಪ್ರಸಂಗ ಬಂದಾಗ ಆತ ಈರಯ್ಯನ ಸಹಾಯ ಕೇಳುತ್ತಾನೆ. ಉದಾರಿಯಾದರೂ ಅಷ್ಟೊಂದು ಹಣವಿಲ್ಲದ ಈರಯ್ಯ ಶಹರದಲ್ಲಿ ಕೆಲಸ ಮಾಡುವ ಮಗನನ್ನು ಸಹಾಯ ಮಾಡುವಂತೆ ಕೇಳಿದಾಗ ಹೃದಯಹೀನ ಮಗ ಕೆಳ ವರ್ಗದವರ ಬಗ್ಗೆ ನಂಬಿಕೆ ಇಡುವುದು ಒಳ್ಳೆಯದಲ್ಲವೆಂಬ ಕಿವಿಮಾತು ಹೇಳಿಕಳಿಸುತ್ತಾನೆ. ಮಾನವಂತನಾದ ಈರಯ್ಯ, ಒಂದು ಕಾಲದಲ್ಲಿ ನಾಗೇಂದ್ರ ಮಾಡಿದ ತ್ಯಾಗ ನೆನೆದು ಅದೇ ಹೊಲಗಳನ್ನು ಮಾರಿ ಆತನ ಮಗನ ನೌಕರಿಗಾಗಿ ನೀಡಿ ಕೆಳವರ್ಗ ಮುಂದೆ ಬರುವಲ್ಲಿ ಸಹಕಾರಿಯಾಗುತ್ತಾನೆ. ಹೈದರಾಬಾದ್ ಕರ್ನಾಟಕದ ಆಡು ಭಾಷೆ ಕಥೆಯ ಪ್ಲಸ್ ಪಾಯಿಂಟ್ ಆಗಿದೆ.

ಒಟ್ಟಾರೆಯಾಗಿ ನೋಡಿದರೆ ಸ್ಪರ್ಧೆಯ ಫಲಿತಾಂಶ ತುಸು ನಿರಾಶಾದಾಯಕವಾಗಿದೆಯೆಂದೆ ಹೇಳಬೇಕು. ಕಥೆಗಾರರಲ್ಲಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವ, ಸವಾಲುಗಳನ್ನೆದುರಿಸಿ ಹೊಸತನವನ್ನು ಹುಡುಕುವ ಉಮೇದು, ಅನುಭವ ದ್ರವ್ಯವನ್ನು ಕಲೆಯಾಗಿ ಮಾಡುವಲ್ಲಿ ತೋರಬೇಕಾದ ಕಲಾತ್ಮಕ ನೈಪುಣ್ಯ, ಬದುಕಿನ ಸೋಲು-ಗೆಲುವುಗಳನ್ನು ಗುರುತಿಸಿ ಅದಕ್ಕೆ ತಮ್ಮದೇ 'ಧ್ವನಿ'ಯನ್ನು ಹೊರಡಿಸಲು ಬೇಕಾದ ಪರಿಣತಿ ಕಾಣಿಸದಿರುವುದು ನಿರಾಶಾದಾಯಕವಾಗಿದೆ. ಎಲ್ಲ ಪ್ರಯೋಗಶೀಲತೆಗಳಿಗೆ ಅವಕಾಶಗಳನ್ನು ಮಾಡಿಕೊಡುವ 'ಸ್ಪರ್ಧೆ'ಗಳಲ್ಲಿಯಾದರೂ ಕಥೆಗಾರರು ತಾದಾತ್ಮ್ಯತೆ ಸಾಧಿಸಿ ಬರೆಯುವುದನ್ನು ರೂಢಿಸಿಕೊಳ್ಳಬೇಕಾಗಿದೆ.

ಕೇಶವ ಮಳಗಿ

ಅಮೂರ್ತರ ಲೋಕದಲ್ಲಿ

ಬಹುಮಾನಿತ ಕಥೆ

ಚಿಂತಾಮಣಿ ಕೊಡ್ಲೆಕೆರೆ

"ಇಲ್ಲಿ ಕತೆ, ಕವಿತೆ, ಕಾದಂಬರಿ ಮುಂತಾದವುಗಳನ್ನು ನಿಷ್ಪಕ್ಷಪಾತವಾಗಿ ವಿಮರ್ಶೆ ಮಾಡಿಕೊಡಲಾಗುವುದು" ಎಂಬ ಬೋರ್ಡನ್ನು ನೋಡಿ ರವಿಗೆ ಪುಳಕ ಉಂಟಾಯಿತು. ಅಂತೂ ಅವನ ಆಸೆ ಈಡೇರುವಂಥ ಸಂದರ್ಭವೊಂದು ಇದೀಗ ಒದಗಿ ಬಂದಿತ್ತು. ಇಲ್ಲಿ ಇಂಗ್ಲಿಷ್ ಹೇಳಿಕೊಡಲಾಗುವುದು, ಶಾಸ್ತ್ರೀಯ ಸಂಗೀತ ಹೇಳಿಕೊಡಲಾಗುವುದು, ಯೋಗಾಸನ ಕ್ಲಾಸುಗಳು ಆರಂಭವಾಗಿವೆ ಎಂಬ ಬೋರ್ಡುಗಳನ್ನು ರಸ್ತೆಗಳಲ್ಲಿ ಕಾಣುವುದು ಹೊಸತಲ್ಲ. ಆದರೆ ಈಗ ರಸ್ತೆ ಬದಿಯ ಬೋಂಡಾ, ಮಿರ್ಚಿ ಮಾರಾಟಗಳ ಜೊತೆ ಜೊತೆಯಲ್ಲಿ ಸಾಹಿತ್ಯ ವಿಮರ್ಶೆಯ ಪ್ರಚಾರ! ಕೆಲ ಕ್ಷಣಗಳ ಹಿಂದೆ ಅದನ್ನು ಊಹಿಸಲೂ ಸಾಧ್ಯವಿರಲಿಲ್ಲ. ಆದರೆ ರವಿ ಅದನ್ನೀಗ ಕಂಡಿದ್ದ ಅಂದರೆ ಕವಿಗಳು ಅದನ್ನು ಈಗಾಗಲೇ ಕಂಡಿರಬಹುದು. 'ರವಿ ಕಾಣದ್ದನ್ನು ಕವಿ ಕಂಡ' ಎಂಬ ಮಾತು ಎಂದಿಗೂ ಸುಳ್ಳಾಗಲಾರದು. 'ಸುಳ್ಳಾಗಬಾರದು' ಎಂದು ಕವಿಗಳೇ ತಿಳಿದಂತಿದೆ ಎಂದು ಬಾಲಂಗೋಚಿ ಸೇರಿಸಿ ರವಿ ವ್ಯಂಗ್ಯವಾಗಿ ನಕ್ಕ.

ಇರಲಿ, ಇದನ್ನೋದಿದ ರವಿ ಮೊದಲು ಮುಖ ಒರೆಸಿಕೊಂಡ. ತಾನು ನಿತ್ಯವೂ ಓಡಾಡುವ ಈ ಹಾದಿಯಲ್ಲಿ ಯಾರಾದರೂ ಬೇಕಂತಲೇ ಇಂಥ ಬೋರ್ಡನ್ನು ಹಾಕಿಸಿರಬಹುದೇ ಎಂದೊಮ್ಮೆ ಯೋಚಿಸಿದ. ಹಾಗಿರಲು ಸಾಧ್ಯವಿಲ್ಲ. ರವಿಗೆ ಅಂಥ ಗೆಳೆಯರು ಇಲ್ಲವೆಂದಲ್ಲ. ಆದರೆ ನೂರಿನ್ನೂರು ರೂಪಾಯಿ ಖರ್ಚು ಮಾಡಿ ಬ್ಯಾನರ್ ಹಾಕಿಸಿ ತಮಾಷೆ ನೋಡುವಷ್ಟು ಅವರು ಶ್ರೀಮಂತರಲ್ಲ. ಹಾಗಂದುಕೊಳ್ಳುತ್ತಲೇ ಅವನ ಕೈ ಅದೇಕೋ ಚೀಲದಲ್ಲಿದ್ದ ಡೈರಿಯತ್ತ ಚಲಿಸಿತು. ಡೈರಿ ತೆರೆದು ತನ್ನ ಗೆಳೆಯರ ಹೆಸರುಗಳನ್ನೆಲ್ಲ ಒಮ್ಮೆ ನೋಡಿದ. ಇದು ಅವರಾರ ಕಿತಾಪತಿಯೂ ಅಲ್ಲ ಎಂದು ರವಿಗೆ ಮನವರಿಕೆಯಾಯಿತು. ಅವನು ಯೋಚಿಸಿದ.

ಬರಹಗಾರರಿಗೆ ತಮ್ಮ ಕೃತಿಗಳ ಕುರಿತು ಪ್ರೀತಿ ಇರುತ್ತದೆ. ಹಾಗೆಯೇ, ಅವುಗಳ ಕುರಿತು ಸ್ಪಷ್ಟವಾದ ಅಭಿಪ್ರಾಯಗಳನ್ನು ತಿಳಿಯಬೇಕೆಂಬ ಅಪೇಕ್ಷೆಯೂ ಇರುತ್ತದೆ. ಕೆಲವು ಲೇಖಕರು ತಮ್ಮನ್ನೂ, ತಮ್ಮ ಕೃತಿಗಳನ್ನೂ ಹೊಗಳುವುದನ್ನೇ ವಿಮರ್ಶೆ ಎಂದು ಭಾವಿಸುತ್ತಾರೆ. (ಹೀಗೆ ರವಿ ಯೋಚಿಸುವಾಗ ಒಂದು ಕಾಗೆ ಹಾರಿ ಹೋಯಿತು. ಅದು ಎಡದಿಂದ ಬಲಕ್ಕೆ ಹಾರಿ ತೇನು? ಹಾಗಾದರೆ ಶುಭ) ಮತ್ತೆ ಕೆಲವು ಜಾಣರು ಇವೆರಡನ್ನೂ, ಅಂದರೆ ಸ್ವಲ್ಪ ಹೊಗಳುವುದು, ಸ್ವಲ್ಪ ದೋಷಗಳನ್ನು ಎತ್ತಿ ತೋರಿಸುವುದು ಎರಡನ್ನೂ ಅಷ್ಟಷ್ಟು ಮಾಡಿ ಎರಡೂ ಕಡೆಯಿಂದ (ಲೇಖಕ ಒಂದೆಡೆ, ಓದುಗ ಇನ್ನೊಂದೆಡೆ) ಮೆಚ್ಚುಗೆಗೆ ಪಾತ್ರವಾಗಬಹುದು ಎಂದು ತಿಳಿಯುತ್ತಾರೆ.

ಆದರೆ ಎಷ್ಟೋ ಸಲ ಇಂಥ ಆಟಗಳಿಂದ ಅವರು ಇಬ್ಬರಿಂದಲೂ ಸಾಕಷ್ಟು ದೂರ ಹೋಗಿಬಿಡುತ್ತಾರೆ. (ಈ ಹೊತ್ತಿಗೆ ಸರಿಯಾಗಿ ಒಂದು ಆಟೋ ಭುರ‍್ರೆಂದು ಓಡಿ ಹೋಯಿತು) ಇನ್ನು ಕೆಲವರಿದ್ದಾರೆ. ಅವರು ತಮ್ಮ ಕೃತಿಯನ್ನು ಕುರಿತು ಬರೆದಿದ್ದಾರೆಂದು. ಸ್ವತಃ ಲೇಖಕರಿಗೇ ಮನವರಿಕೆ ಆಗುವುದಿಲ್ಲ. ಕೆಲವರಿಗೆ ವಿಮರ್ಶೆ ಎಂದರೆ ಪುಸ್ತಕವನ್ನು ಪರಿಚಯಿಸುವುದು, ಪುಸ್ತಕದ ಸಾರಸಂಗ್ರಹವನ್ನು ಹೇಳುವುದು. ಎಲ್ಲರಿಗಿಂತ ತಮಾಷೆಯ ಜನರೆಂದರೆ ಪತ್ರಿಕೆಯ ಪುಟಗಳ ಮಿತಿಯಲ್ಲಿ ದೀರ್ಘ ವಿಶ್ಲೇಷಣೆ, ವಿಮರ್ಶೆ ಮಾಡಲು ಸಾಧ್ಯವಿಲ್ಲ ಎನ್ನುವವರು. ಇಂಥವರು ಎಲ್ಲೆಡೆಗಳಲ್ಲೂ ಹೀಗೇ ಹೇಳುತ್ತ ಕಾಲ ಕಳೆಯುವವರು; ಮುನ್ನುಡಿ ಬರೆದರೆ ಇದು ವಿಮರ್ಶೆಗೆ ಜಾಗವಲ್ಲ ಎನ್ನುತ್ತಾರೆ. ಪುಸ್ತಕ ಬಿಡುಗಡೆಯ ದಿನ ಪುಸ್ತಕದ ಕುರಿತು ಮಾತನಾಡುವುದಕ್ಕೇ ಸಮಯದ ಅಭಾವ ಇರುವುದಾಗಿ ಹೇಳುತ್ತಾರೆ. ಪತ್ರ ಬರೆದಾಗ ಮುಖತಃ ವಿಸ್ತಾರವಾಗಿ ಮಾತನಾಡುವ ಆಸೆ ಇದೆಯೆಂದು ಹೇಳುತ್ತಾರೆ. ಪ್ರತ್ಯಕ್ಷ ಸಿಕ್ಕಾಗ ಗುರುತು ಮರೆಯುತ್ತಾರೆ. ಇಂಥವರನ್ನು ನೋಡಿದಾಗಲೆಲ್ಲ ರವಿಗೆ ತನ್ನೂರಿನ ಶೇಷಪ್ಪ ಕಾಮತರು ನೆನಪಾಗುತ್ತಾರೆ.


ಶೇಷಪ್ಪ ಕಾಮತರು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಜೈಲಿಗೆ ಹೋದವರೆಂಬ ಕಾರಣದಿಂದ ಊರಿನ ಸ್ವಾತಂತ್ರ್ಯ ದಿನಾಚರಣೆಗಳ ಅಧ್ಯಕ್ಷ, ಮುಖ್ಯ ಅತಿಥಿ - ಎಲ್ಲ ಆಗಬೇಕಾಗುತ್ತಿತ್ತು. ಧ್ವಜಾರೋಹಣ ಆದ ಕೂಡಲೇ ಕವಾಯತಿಗೆ ನಿಂತ ಮಕ್ಕಳನ್ನುದ್ದೇಶಿಸಿ ಮಾತನಾಡಿ ಒಳಗೆ

ಭಾಷಣ, ನೃತ್ಯಗಳು ಮುಗಿದ ಬಳಿಕ 'ನಾನು ಹೇಳಬೇಕಾದುದೆಲ್ಲವನ್ನೂ ಹೇಳುತ್ತೇನೆ' ಎನ್ನುತ್ತಿದ್ದರು. ಒಳಗೆ ಆಡಿಟೋರಿಯಂನಲ್ಲಿ ಮಕ್ಕಳ ಭಾಷಣ, ಹಾಡು, ಕುಣಿತ ಮುಗಿದ ಬಳಿಕ ಅಧ್ಯಕ್ಷ ಭಾಷಣಕ್ಕೆ ಎದ್ದು ನಿಂತು ''ಮುದ್ದು ಮಕ್ಕಳೇ, ನಾನು ಹೇಳಬೇಕಾದುದೆಲ್ಲವನ್ನೂ ಆಗಲೇ ಹೊರಗೆ ಹೇಳಿ ಮುಗಿಸಿದ್ದೇನೆ'' ಎನ್ನುತ್ತಿದ್ದರು. ಅವರ ಮಾತಿನಲ್ಲಿ ಸತ್ಯಾಂಶವಿತ್ತು - ಅವರಿಗೆ ಒಳಗಾಗಲೀ, ಹೊರಗಾಗಲೀ ಹೇಳಬೇಕಾದುದೇನೂ ಇರಲೇ ಇಲ್ಲ!.....

ಇವನ್ನೆಲ್ಲ ನೆನಪಿಗೆ ತಂದುಕೊಳ್ಳುತ್ತ ರವಿ ಈ ನಿಷ್ಪಕ್ಷಪಾತ ವಿಮರ್ಶೆಯ ವಿಷಯದಲ್ಲಿ ಪುನಃ ಗೊಂದಲಕ್ಕೆ ಬಿದ್ದ. ಈ ವಿಮರ್ಶೆ ಮಾಡುವವರು ಯಾರು, ಪ್ರಕಟಿಸುವುದು ಎಲ್ಲಿ ಮತ್ತು ಒಂದು ವಿಮರ್ಶೆಯನ್ನು ನಿಷ್ಪಕ್ಷಪಾತವಾದುದೆಂದು ನಿರ್ಣಯಿಸುವುದಾದರೂ ಹೇಗೆ - ಒಂದೂ ಅರ್ಥವಾಗಲಿಲ್ಲ. ನಿಷ್ಪಕ್ಷಪಾತಿಯಾಗಿರುವವನು ನಿಲ್ಲುವ ಜಾಗ ಯಾವುದು ಆತ ನ್ಯಾಯಾಧೀಶನ ಜಾಗದಲ್ಲಿ ನಿಂತಿರುತ್ತಾನೋ, ಕೃತಿಯ ಪಕ್ಕವೋ, ಕೃತಿಕಾರನ ಪಕ್ಕವೋ, ಓದುಗರ ಪಕ್ಕವೋ ಅಥವಾ ಈ ಎಲ್ಲ ಬಿಂದುಗಳಿಂದ ಸಮಾನ ದೂರದಲ್ಲೋ, ಆತ ಶುದ್ಧ ಸಾಹಿತ್ಯದ ನಿಷ್ಠ ಆರಾಧಕನೋ - ಹಾಗಾದರೆ ಶುದ್ಧ ಸಾಹಿತ್ಯ ಎಂದರೇನು, ನಿಷ್ಠೆ ಎಂದರೇನು? ಈ ಎಲ್ಲ ಪ್ರಶ್ನೆಗಳನ್ನೂ ರವಿ ಬಗೆಹರಿಸಿಕೊಳ್ಳಬೇಕಾಗಿತ್ತು.

ಪಕ್ಕದ ಲಾಂಡ್ರಿಯವನಲ್ಲಿ ವಿಚಾರಿಸಿದ, ಈ ವಿಮರ್ಶೆಯ ಆಫೀಸಿನವರು ಎಷ್ಟು ಹೊತ್ತಿಗೆ ಬರುತ್ತಾರೆ. ಎಲ್ಲಿಂದ ಬರುತ್ತಾರೆ. ಅವರ ಫೋನ್ ನಂ. ಇತ್ಯಾದಿ ಇದೆಯೇ - ಎಂದೆಲ್ಲ. ಲಾಂಡ್ರಿಯಾತ ಇಸ್ತ್ರಿ ಹಾಕುತ್ತ 'ಬರ್‍ತಾರೆ, ಬರ್‍ತಾರೆ' ಎಂದ. 'ಏನಾದರೂ ವಿಮರ್ಶೆ, ಗಿಮರ್ಶೆ ಮಾಡಿಸುವುದಿದ್ದರೆ ಕೊಟ್ಟು ಹೋಗಿರಿ ಸಾರ್, ಸಂಜೆ ಬಂದು ಇಸ್ಕಳ್ಳಿ' ಎಂದಾಗ ರವಿ ನಿಜಕ್ಕೂ ಆಶ್ಚರ್ಯ ಪಟ್ಟ ಪರವಾಗಿಲ್ವೇ - ಈತನಿಗೂ ಪರಿಚಯವಾಗುವ ಮಟ್ಟಿಗೆ ವಿಮರ್ಶೆ ಆಫೀಸಿನ ಕೆಲಸಗಳು ನಡೀತಿವೆ! 'ಏನು ಸ್ವಾಮೀ, ಬಿಸಿನೆಸ್ ಚೆನ್ನಾಗಿರುತ್ತೇನು ಆಫೀಸಲ್ಲಿ?' ಎಂದು ಕೇಳಿದ. 'ತುಂಬಾ ಚೆನ್ನಾಗಿ ನಡೀತಿದೆ ಸಾರ್, ಮಲ್ಲೇಶ್ವರಂ ಕಡೆ ಇನ್ನೊಂದು ಆಫೀಸು ಸದ್ಯದಲ್ಲೇ ಓಪನ್ ಮಾಡ್ತಿದಾರಂತೆ' ಎಂದ. 'ಮಲ್ಲೇಶ್ವರಂನ ಗ್ರಾಹಕರಿಗೊಂದು ಸಿಹಿ ಸುದ್ದಿ - ನಿಮ್ಮ ನಗರದ ಗ್ರಾಹಕರ ತೃಪ್ತಿಗೋಸುಗ...' ಎಂದು ಕಂಪ್ಯೂಟರ್ ಸೆಂಟರ್, ಫೋಟೋ ಅಂಗಡಿ, ಸ್ವೀಟ್ ಸ್ಟಾಲ್‌ಗಳವರು ಜಾಹೀರಾತು ಪತ್ರ ಪ್ರಕಟಿಸುತ್ತಾರಲ್ಲ, ಅದೇ ಥರ ಈ ವಿಮರ್ಶೆ ವ್ಯಾಪಾರ ನಡೀತಿದೆಯೇನು? ಇಂದು ಇಲ್ಲ, ಮುಂದೆ ಮಲ್ಲೇಶ್ವರಂ.... ಹೀಗೇ ಕರ್ನಾಟಕಾದ್ಯಂತ ಈ ಬಿಸಿನೆಸ್ ಲಾಭಕರವಾಗಿ ನಡೆಯಬಹುದು. ಮುಂದೆ?

ಇಂಥ ನಿಷ್ಪಕ್ಷಪಾತ ವಿಮರ್ಶೆಗಳಿಂದ ಆರೋಗ್ಯಕರ ವಾತಾವರಣ ಸೃಷ್ಟಿಯಾಗುತ್ತದೆ. ತಾನು ಬರೆಯಬೇಕಾದುದು ಕತೆಗಳನ್ನು, ಕವಿತೆಗಳನ್ನಲ್ಲ - ಎನ್ನುವುದು ಕೆಲವರಿಗೆ ಮನವರಿಕೆಯಾಗುತ್ತದೆ. ತನ್ನ ಕಾದಂಬರಿಯ ಮೂರನೇ ಅಧ್ಯಾಯದ ಎಂಟನೇ ಪ್ಯಾರಾದಲ್ಲಿ ಮಾಡಿದ ಒಂದು ಸಣ್ಣ ನಿರ್ಧಾರ ಇಡೀ ಕಾದಂಬರಿಯನ್ನು ಶಿಥಿಲಗೊಳಿಸಿತೆಂಬುದನ್ನು 'ಪೂರ್ವಭಾವೀ ಮೌಲ್ಯ-ಮಾಪನ'ಕ್ಕೊಪ್ಪಿಸಿದ ಕಾದಂಬರಿಕಾರ ತಿಳಿದುಕೊಂಡು ಅದನ್ನು ಸರಿಪಡಿಸಿಕೊಂಡು ಬಿಡುತ್ತಾನೆ. ಕವಿತೆಯ ಕೊನೆಯನ್ನು ಅನಗತ್ಯವಾಗಿ ಲಂಬಿಸಿದ ಕವಿಗಳೂ ತಿದ್ದುಪಡಿಗಳನ್ನು ಮಾಡಿಕೊಳ್ಳುತ್ತಾರೆ. ಎಲ್ಲೆಲ್ಲೂ ಸತ್ವಪೂರ್ಣ ಕೃತಿಗಳು, ಓದುಗರಿಗೆ ಹಬ್ಬವೋ ಹಬ್ಬ! ಸ್ಪರ್ಧೆ





ಇನ್ನು ಮುಂದೆ ಕೆಟ್ಟದು, ಒಳ್ಳೆಯವರ ನಡುವೆ ಅಲ್ಲ - ಉತ್ತಮ, ಅತ್ಯುತ್ತಮಗಳ ನಡುವೆ! ಭಲೇ, ಎಂಥ ಚಾಣಾಕ್ಷ ಜನರು ಈ ವಿಮರ್ಶೆಯ ಆಫೀಸಿನವರು, ISO ೯000 ಸರ್ಟಿಫಿಕೇಟನ್ನೂ ತೆಗೆದುಕೊಂಡು ಬಿಟ್ಟಿದ್ದಾರೋ ಹೇಗೆ ತಮ್ಮ ವಿಮರ್ಶಾಕಾರ್ಯದ ಅಂತಾರಾಷ್ಟ್ರೀಯ ಮಾನ್ಯತೆಯನ್ನು ಸ್ಥಾಪಿಸಲು!

ರವಿ ನೋಡುತ್ತಿದ್ದಂತೆಯೇ ಜಯನಗರದ ಆ ಪುಟ್ಟ ಆಫೀಸಿನ ಮುಚ್ಚಿದ ಬಾಗಿಲುಗಳೆದುರು ಕ್ಯೂ ಬೆಳೆಯಲಾರಂಭಿಸಿತ್ತು. ರವಿಯ ಪರಿಚಯದ ಅನೇಕ ಸಾಹಿತಿ ಮಿತ್ರರು ಆ ಕ್ಯೂನಲ್ಲಿದ್ದರು. 'ನನ್ನ ಕೃತಿಯ ಬೆಲೆ ಜಗತ್ತಿಗೆ ತಿಳಿಯಲು ಇದೇ ಸರಿಯಾದ ಉಪಾಯ' ಎಂದು ನಿಲುವಂಗಿ ತೊಡವಿಕೊಂಡ ಆ ನಲವತ್ತರ ಸುಮಾರಿನ ವ್ಯಕ್ತಿಯನ್ನು ಎಲ್ಲಿಯೋ ನೋಡಿದಂತಿದೆಯಲ್ಲ! 'ಯಾಕೆ ಸರ್, ನಿಮ್ಮ ಕೃತಿಯ ಬೆಲೆಯನ್ನು ಎರಡನೇ ಪುಟದಲ್ಲಿ ಅಚ್ಚು ಹಾಕಿಸಿದ್ದೀರಲ್ಲ' ಎಂದು ಚೇಷ್ಟೆ ಮಾಡುತ್ತಿದ್ದ ವ್ಯಕ್ತಿ ಮೊದಲಿನಾತನಿಗೆ ತುಂಬ ಆತ್ಮೀಯನಿರಬೇಕು. ರವಿಯೂ ಒಂದು ಹಾಳೆ ತೆಗೆದುಕೊಂಡು ಸರಸರ ಒಂದು ಪದ್ಯ ಬರೆದು (ಬಹುಶಃ ಈ ಹಿಂದೆಯೇ ಬರೆದ ಪದ್ಯವನ್ನು ನೆನಪಿನಿಂದ ಇಳಿಸಿರಬೇಕು) ಕ್ಯೂನಲ್ಲಿ ನಿಂತ.

ರವಿಯ ಮುಂದೆ ನಿಂತಿದ್ದಾತ ಕೆಲವು ಪತ್ರಿಕಾ ವಿಮರ್ಶೆಗಳನ್ನು, ಕೆಲವು ಲೇಖಕರಿಗೆ ಅವರ ಗೆಳೆಯರು ಬರೆದ ಪತ್ರಗಳ ನಕಲನ್ನು ಹಿಡಿದು ನಿಂತಿದ್ದ. ರವಿ ಚಿಕ್ಕದಾಗಿ ಕೆಮ್ಮಿ ಆತನ ಗಮನ ಸೆಳೆಯಲು ಯತ್ನಿಸಿದ. ಯಶಸ್ವಿಯೂ ಆದ. 'ಹಲೋ ಸರ್, ನಾನು ರವಿ ಅಂತ. ನೀವು ಈ ವಿಮರ್ಶೆಗಳನ್ನು ಹಿಡಿದುಕೊಂಡು... ಎನ್ನುತ್ತಿದ್ದಂತೆ ಆತ 'ಪುನರ್ಮೌಲ್ಯ ಮಾಪನಕ್ಕೆ ಒಪ್ಪಿಸುತ್ತಿದ್ದೇನೆ' ಎಂದ 'ಓಹ್!' ಎಂದು ರವಿ ಉದ್ಗರಿಸಿದ. ಈ ವಿಮರ್ಶೆಯ ಆಫೀಸು ಎಂತೆಂಥ ಸನ್ನಿವೇಶಗಳನ್ನು ನಿರ್ಮಿಸಿದೆ! ಅಚ್ಚಾದ ಕೃತಿಗಳ ಮೌಲ್ಯಮಾಪನ, ಅಚ್ಚಾಗದ ಕೃತಿಗಳ ಮೌಲ್ಯ ಮಾಪನ, ಆಗಲೇ ಬಂದ ವಿಮರ್ಶೆಗಳ ವಿಮರ್ಶೆ, ಖಾಸಗಿಯಾಗಿ ಸಾಹಿತಿ ಮಿತ್ರರು ಬರಕೊಂಡ ಪತ್ರಗಳ ವಿಮರ್ಶೆ... ಯೋಚಿಸುತ್ತ ರವಿಗೆ ಭಯವಾಯಿತು. ಗೆಳೆಯರೆಂಬ ದಾಕ್ಷಿಣ್ಯಕ್ಕೊಳಗಾಗಿ ತನಗೆ ಅವರು ಕೊಟ್ಟ ಪುಸ್ತಕಗಳಲ್ಲಿ ಇರಲಾರದ ಅಂಶಗಳನ್ನೂ ಸೇರಿಸಿ ಹೊಗಳಿ ಪತ್ರ ಬರೆದು ಗೆಳೆತನದ ಮರ್ಯಾದೆ ಕಾಪಾಡಿಕೊಳ್ಳುವ ರವಿಗೆ ತನ್ನ ಮುಂದಿನಾತ ತನ್ನ ಪತ್ರಗಳಲ್ಲೂ ಒಂದನ್ನು ಹಿಡದ ನಿಂತಿರಬಹುದಲ್ಲ, ಎನ್ನಿಸಿ ಕಳವಳವಾಯಿತು. 'ಸರ್, ಈ ವಿಮರ್ಶೆಯ ಆಫೀಸು, ಆಫೀಸಿನವರು ಇವರ ಬಗ್ಗೆ ತಮಗೇನಾದರೂ ಗೊತ್ತೆ?' ಎಂದು ಕೇಳಿದ. ಆದಕ್ಕೆ ಮುಂದಿನ ವ್ಯಕ್ತಿ ಕೊಟ್ಟ ಉತ್ತರಿಂದ ಏನೂ ಅರ್ಥವಾಗುವಂತಿರಲಿಲ್ಲ. ''ಅದೊಂದು ಸ್ವಾಯತ್ತ ಸಂಸ್ಥೆ. ಅಂತಾರಾಷ್ಟ್ರೀಯ ಕಂಪನಿಗಳ ನಿಯಮದಂತೆ ಅದು ಕಾರ್ಯವನ್ನು ನಿರ್ವಹಿಸುತ್ತದೆ. ಸರಕಾರದ ಉದಾರೀಕರಣ ನೀತಿಯ ಫಲಶ್ರುತಿಯಿದು. ಲೇಖಕರು, ಪ್ರಕಾಶಕರು, ಮುದ್ರಕರು, ಓದುಗರು ಅಷ್ಟೇ ಏಕೆ ರಾಜಕಾರಣಿಗಳು, ಕಲಾವಿದರು, ಇಂಜನಿಯರುಗಳು, ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವವರು ಇಲ್ಲವೇ ಸಾಹಿತ್ಯದಲ್ಲಿ ಯಾವುದೇ ಆಸಕ್ತಿಯನ್ನು ಹೊಂದಿರಲಾರದವರು, ವಯೋವೃದ್ಧರು, ತರುಣರು ಮತ್ತು ಬಾಲಕರು, ಸ್ತ್ರೀ ಪುರುಷರು, ಶ್ರೀ ಸಾಮಾನ್ಯರು ಮತ್ತು ಬರೀ ಸಾಮಾನ್ಯರು, ವಯಸ್ಸು, ಆರೋಗ್ಯ, ಅಂತಸ್ತು, ಪ್ರಾದೇಶಿಕತೆ, ಎತ್ತರ, ತೂಕ, ಅಗಲ, ವೇಷಭೂಷಣಗಳು, ಚಪ್ಪಲಿಗಳು, ಶೂಗಳು ಅಥವಾ ಬರಿಗಾಲುಗಳು ಇಂಥ ಯಾವುದೇ ವ್ಯತ್ಯಾಸವಿಲ್ಲದೆ ಕೃತಿಗಳನ್ನು ಮೌಲ್ಯಮಾಪನಕ್ಕೆ ಸಲ್ಲಿಸಬಹುದಾಗಿದೆ. ಕೃತಿಯ ಮೌಲ್ಯಮಾಪನದ ವರದಿಯನ್ನು ಮೌಲ್ಯಮಾಪನಕ್ಕೆ ಸಲ್ಲಿಸಿದವರು ಅಪೇಕ್ಷಿಸಿದಲ್ಲಿ ಗೌಪ್ಯವಾಗಿಡಲಾಗುವುದು. ಮೌಲ್ಯ ಮಾಪನದ ವರದಿಯನ್ನು ಆಂಶಿಕವಾಗಿಯಾಗಲೀ, ಸಮಗ್ರವಾಗಿಯಾಗಲೀ ಪ್ರಕಟಿಸಲಿಚ್ಛಿಸುವವರು ಕರಾರಿಗೊಳಪಟ್ಟು ಹಾಗೆ ಮಾಡಲು ಸ್ವತಂತ್ರರಿರುತ್ತಾರೆ. ಮೌಲ್ಯ ಮಾಪನದ ಫೀಸು ಎಲ್ಲರಿಗೂ ಸಮಾನವಾಗಿರುತ್ತದೆ ಹಾಗೂ ಸರಕಾರಕ್ಕೆ ಈ ಕುರಿತು ಸಲ್ಲಿಸಬೇಕಾಗುವ ಶೇ. ಹತ್ತರ ತೆರಿಗೆಯನ್ನೂ ಮುರಿದುಕೊಳ್ಳಲಾಗುತ್ತದೆ. ಮೌಲ್ಯಮಾಪನಕ್ಕೆ ಮೊದಲು ಶೇ. ಐವತ್ತರಷ್ಟು ಫೀಸಿನ ಹಣವನ್ನು ಮಾತ್ರ ಕಟ್ಟಿದರೆ ಸಾಕೆಂಬ ನಿಯಮ ಈ ಹಿಂದೆ ಇತ್ತು. ನಮ್ಮ ಸಾಹಿತಿಗಳ ಮತ್ತು ಮೌಲ್ಯ ಮಾಪನದ ಬಳಿಕ ಸಾಹಿತಿಗಳಲ್ಲವೆಂದು ಸಾಬೀತಾಗುವವರ ಪ್ರಾಮಾಣಿಕತೆ, ವಿಶ್ವಾಸರ್ಹತೆಗಳನ್ನು ಪರೀಕ್ಷಿಸಿದ ಸಂಸ್ಥೆಯು ಸಂಪೂರ್ಣ ಫೀಸನ್ನು ಮೊದಲೇ ಕಟ್ಟಬೇಕೆಂಬ ಹೊಸ ನಿರ್ಧಾರವನ್ನು ಇತ್ತೀಚೆಗೆ ಪ್ರಕಟಿಸಿದೆ. ಇಷ್ಟರಲ್ಲೇ ಈ ಸಂಸ್ಥೆ ಷೇರು ಮಾರುಕಟ್ಟೆಗೂ ಇಳಿಯಲಿದೆ! ಹಲವಾರು ಕೋಟಿ ರೂ.ಗಳನ್ನು ಸಂಗ್ರಹಿಸಿ ವಿಮರ್ಶೆಯ ಒಂದು ದೊಡ್ಡ ಜಾಲವನ್ನೇ ನಿರ್ಮಿಸುವ ಮಹತ್ವಾಂಕಾಂಕ್ಷೆಯನ್ನು ಸಂಸ್ಥೆಯು ಹೊಂದಿರುತ್ತದೆ. ನುರಿತ ಆಡಳಿತ ತಜ್ಞರು ಕಂಪನಿಯ ಆಡಳಿತದ ಹೊಣೆಯನ್ನು ವಹಿಸಿಕೊಳ್ಳುವರು. ಸಾರ್ವಜನಿಕ ಜೀವನದಲ್ಲಿ ಉನ್ನತ ಮೌಲ್ಯಗಳನ್ನು ಎತ್ತಿಹಿಡಿಯುವ ಆದರ್ಶವು ಈ ನಿಷ್ಪಕ್ಷ ವಿಮರ್ಶೆ (ಪ್ರೈ) ಲಿ. ಕಂಪನಿಯದಾಗಿರುತ್ತವೆ''- ನಿಜಕ್ಕೂ ರವಿಗೆ ಆತ ಹೇಳಿದ ವಿಷಯಗಳಲ್ಲಿ ಬಹಳಷ್ಟು ಅರ್ಥವಾಗಲಿಲ್ಲ. ಆದರೆ ಈ ನಿ.ವಿ. (ಪ್ರೈ) ಲಿ. ಕುರಿತ ಅವನ ಕುತೂಹಲ ಮಾತ್ರ ಕ್ಷಣದಿಂದ ಕ್ಷಣಕ್ಕೆ ಹೆಚ್ಚಾಗುತ್ತಲೇ ಇತ್ತು.

''ಅನೇಕ ಪ್ರಕಾಶಕರು ಕಂಗಾಲಾಗಿದ್ದಾರೆ'' ಮುಂದಿನಾತ ರವಿಗೆ ವಿವರಿಸಿದ. ಆ ಪ್ರಕಾಶಕರ ಬಳಿ ಇರುವ ಕಾದಂಬರಿಗಳ ಹಸ್ತ ಪ್ರತಿಗಳನ್ನು ವಿಮರ್ಶಿಸಿದ ಈ ಆಫೀಸಿನ ಮೌಲ್ಯ ಮಾಪಕರು, ವಿಮರ್ಶಕರು - ಯಾವ ಕೃತಿಯೂ ಪ್ರಕಟಣೆಗೆ ಯೋಗ್ಯವಲ್ಲ ಎಂದು ತೀರ್ಮಾನಿಸಿದ್ದು ಅವರನ್ನು ಕಳವಳಕ್ಕೀಡು ಮಾಡಿದೆಯಂತೆ 'ಸಿ.ವಿ. ಪ್ರೈ (ಲಿ) ಮೌಲ್ಯ ಮಾಪನದಲ್ಲಿ ಹೆಚ್ಚಿನ ಶ್ರೇಯಾಂಕಗಳನ್ನು ಪಡೆದ ಕೃತಿ' ಎಂದು ಕೆಲವು ಲೇಖಕರು ತಮ್ಮ ಕೃತಿಗಳ ಮುಖಪುಟದಲ್ಲಿ ಅಚ್ಚು ಹಾಕಿಸಿದ್ದರಿಂದ ಈ ಸಮಸ್ಯೆ ಇನ್ನೂ ದೊಡ್ಡದಾಯಿತಂತೆ ''ಹಾಗೆ ಬರೆಯುವುದು ಪುಸ್ತಕ ಪ್ರಕಟಣೆಯ ಅಧಿನಿಯಮಗಳಲ್ಲೊಂದು ಎಂಬಂತೆ ಪ್ರಕಟಣ ಕ್ಷೇತ್ರದಲ್ಲಿ ಬೆಳವಣಿಗೆಗಳಾಗುತ್ತಿವೆ. ಓದುಗರು ಮತ್ತು ಸಗಟು ಖರೀದಿಗಾರರು ನಿ.ವಿ. ಪ್ರೈ ದ ಸರ್ಟಿಫಿಕೇಟನ್ನು ಹಾಜರುಪಡಿಸುವಂತೆ ಪ್ರಕಾಶಕರು ಮತ್ತು ಮಾರಾಟಗಾರರ ಮೇಲೆ ಒತ್ತಡ ತರುತ್ತಿದ್ದಾರೆ. ಆದ್ದರಿಂದಲೇ ಈಗ ಕೃತಿಗಳ ಮರುಪ್ರಕಟಣೆಗಳನ್ನು ಕೂಡ ಈ ಕಂಪನಿಯ ಪರೀಕ್ಷೆಗೊಪ್ಪಿಸಿಯೇ ಕೈಗೆತ್ತಿಕೊಳ್ಳಲಾಗುತ್ತಿದೆ. ಅಲ್ಲದೆ, ನನ್ನಂಥ ಕೆಟ್ಟ ಕುತೂಹಲದ ವ್ಯಕ್ತಿಗಳೂ ಇದ್ದೇವೆ. ಬೇರೆಯವರ ಪತ್ರ, ಪುಸ್ತಕ ಹಿಡಿದು

ನಿಂತುಕೊಂಡು.... ಹೆಹೆಹೆ.....'' ಎಂದು ಮುಂದಿನಾತ ನಕ್ಕ. ಇವನ್ನೆಲ್ಲ ಕೇಳುತ್ತ ರವಿ 'ಅರೆರೆ! ಇಷ್ಟು ದಿನ ನನಗೆ ಇವೆಲ್ಲ ಗೊತ್ತೇ ಇರಲಿಲ್ಲವಲ್ಲ' ಎಂದು ಆಶ್ಚರ್ಯಪಟ್ಟ.


ಈ ಮಾತುಗಳನ್ನಾಡುತ್ತ ಆತ ಮತ್ತು ರವಿ ಕ್ಯೂದಲ್ಲಿ ಮುಂದು ಮುಂದಕ್ಕೆ ಚಲಿಸುತ್ತಲೂ ಇದ್ದರು. ಮುಖವಾಡ ಧರಿಸಿದ ವ್ಯಕ್ತಿಗಳು ಪುಸ್ತಕ, ಹಸ್ತಪ್ರತಿಗಳನ್ನು ಪಡೆದು, ಮೌಲ್ಯ ಮಾಪನದ ಹಣಕ್ಕೆ ರಸೀದಿ ಕೊಡುತ್ತ ಬಹುಕ್ಷಿಪ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ರವಿಯ ಪಾಳಿಯೂ ಬಂತು. ರವಿ ಅವರ ಬಳಿ ಕಂಪನಿಯ ಕುರಿತು ಕೆಲ ವಿಷಯ ಚರ್ಚಿಸಲು ಪ್ರಯತ್ನಿಸಿದ. ''ಕಂಪನಿಯ ಕುರಿತಾದ, ವಿಮರ್ಶೆಯ ಕುರಿತಾದ, ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳ ಕುರಿತಾದ ಯಾವುದೇ ಪ್ರಶ್ನೆಗೂ ಉತ್ತರಿಸಲಾಗುವುದಿಲ್ಲ. ಕಂಪನಿಯ ಕಾರ್ಯ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡದೆ ಸಹಕರಿಸಿ'' ಎಂಬ ಬೋರ್ಡಿನತ್ತ ಕೌಂಟರಿನವರು ಕೈ ತೋರಿಸಿದರು. ರವಿ ಬಾಯಿ ಮುಚ್ಚಿಕೊಂಡು ಕವನ ವಿಮರ್ಶೆಗೆ ಹತ್ತು ರೂಪಾಯಿ ತೆತ್ತು ಈಚೆ ಬಂದ. ಸಂಜೆ ಐದು ಹದಿನೆಂಟಕ್ಕೆ ಬಂದು ವಿಮರ್ಶೆಯ ರಿಪೋರ್ಟನ್ನು ಪಡೆದು ಹೋಗುವಂತೆ ಸೂಚಿಸಲಾಗಿತ್ತು. ಇಲ್ಲ, ಇವರು ಬೇರೆ ಗ್ರಹದ ವ್ಯಕ್ತಿಗಳೇನೂ ಅಲ್ಲ. ಆದರೆ ಇವರು ಎಲ್ಲವನ್ನೂ ನಿಯಂತ್ರಿಸುತ್ತಿರುವ ಶಕ್ತಿ ಮಾತ್ರ ಅಗಾಧವಾದುದು. ಬಹುಶಃ ಆಗಲೇ 'ಆತ' ಹೇಳುತ್ತಿದ್ದ ಹಾಗೆ ಇವೆಲ್ಲವೂ ಉದಾರೀಕರಣ ನೀತಿಯ ಫಲವಾಗಿರಬೇಕು. ಏನದು ಉದಾರೀಕರಣ ನೀತಿ? ಮುಂದಿನ ವ್ಯಕ್ತಿಗೇ ಅದು ಗೊತ್ತಿದ್ದರೂ ಇರಬಹುದು, ಆದರೆ ರವಿ ಆತನನ್ನು ಕೇಳಲು ಸಂಕೋಚಪಟ್ಟ.

ಇಷ್ಟು ಹತ್ತಿರದಲ್ಲೇ ಇರುವ ಕಛೇರಿಯೊಂದು ಸಾಹಿತ್ಯ ಕ್ಷೇತ್ರದಲ್ಲಿ ಮಾಡುತ್ತಿರುವ ವಿಪ್ಲವಗಳ ಕುರಿತು ತನಗಿದ್ದ ಅಜ್ಞಾನದ ಬಗೆಗೆ ರವಿಗೆ ತುಂಬ ವ್ಯಥೆಯೆನಿಸಿತು. ಆದುದರಿಂದ ಅವನು ಒಂದು ಕಪ್ ಟೀ ಕುಡಿದ. 'ಆದುದರಿಂದ ಎನ್ನುವುದಕ್ಕೆ ಕಾರಣವಿದೆ. ರವಿಗೆ ಟೀ ಕುಡಿಯಲು ಒಂದು ಕಾರಣಬೇಕು. ಕಾರಣವಿಲ್ಲದೆ ಟೀ ಕುಡಿದರೂ ರವಿಯನ್ನು ಕೇಳುವರು ಯಾರು? ರವಿಯ ಸೃಜನಶೀಲ ಮನಸು ಇಂಥ ಉದ್ಧಟ ಪ್ರಶ್ನೆಗಳನ್ನು ಸಹಿಸುವುದಿಲ್ಲ.

ಟೀಯ ಒಂದೊಂದೇ ಗುಟುಕು ಗಂಟಲೊಳಗೆ ಇಳಿಯುತ್ತಿದ್ದಂತೆ ರವಿಯ ಗ್ರಹಿಕೆಗೆ ಅನೇಕ ಘಟನೆಗಳು, ಸಂಗತಿಗಳು ದಕ್ಕ ಹತ್ತಿದವು. ಇತ್ತೀಚೆಗೆ ಕವಿಗೋಷ್ಠಿಗಳಲ್ಲಿ ಕವಿಗಳ ಸಂಖ್ಯೆ ಇಳಿಮುಖವಾಗ ತೊಡಗಿತ್ತು. ಒಂದು ಸಭೆಯಲ್ಲಂತೂ ನಿಜಕ್ಕೂ ಪ್ರೇಕ್ಷಕರ ಸಂಖ್ಯೆ ಕವಿಗಳಿಗಿಂತ ಒಂದೆರಡರಷ್ಟು ಜಾಸ್ತಿ ಇತ್ತು. ಕವಿತೆಗಳು ವಿಮರ್ಶೆ ಪ್ರೈ ಲಿ., ಇವರಿಂದ ಪರೀಕ್ಷಿಸಲ್ಪಡುತ್ತಿವೆ! ಕವಿಗಳಲ್ಲ, ಮೌಲ್ಯ ಮಾಪನಕ್ಕೆ ಒಪ್ಪಿಸುತ್ತಿರುವವರು. ಕವಿಗೋಷ್ಠಿಗಳನ್ನು ಏರ್ಪಡಿಸುವವರು! ಕವಿಗಳ ಸಂಖ್ಯೆ ಕಡಿಮೆಯಾಗಿರುವುದಷ್ಟೇ ಅಲ್ಲ, ಕವಿತೆಗಳ ಗುಣಮಟ್ಟದಲ್ಲೂ ಕೊಂಚ ಸುಧಾರಣೆ ಇದೆ. ಕವಿಗೋಷ್ಠಿಗಳಲ್ಲಿ ಕವಿತೆ ಓದುವವರು ಕೂಡ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದವರ ಆತ್ಮವಿಶ್ವಾಸದಿಂದ ವರ್ತಿಸುತ್ತಿದ್ದಾರೆ. ಇವೆಲ್ಲ ಸಹಜ ಸಂಗತಿಗಳೆಂದು ರವಿ ತಿಳಿದಿದ್ದನು. ಕೆಲವು ಲೇಖಕರ ಕೃತಿಗಳಲ್ಲಿ ಪಾತ್ರಗಳು ಹೆಚ್ಚು ಆತ್ಮವಿಶ್ವಾಸದಿಂದ ವರ್ತಿಸುತ್ತವೆ, ಕೆಲವು ಲೇಖಕರ ಕೃತಿಗಳಲ್ಲಿ ಸಂಕೋಚದಿಂದ ಒದ್ದಾಡುತ್ತಿರುತ್ತವೆ. ಕೀಳರಿಮೆಯಿಂದ ನರಳುತ್ತಿರುತ್ತವೆ-ಇದಕ್ಕೆಲ್ಲ ಆಯಾ ಲೇಖಕರ ಮನೋಭಾವವೇ ಕಾರಣ ಎಂಬ ಥಿಯರಿಯನ್ನು ತಯಾರಿಸಿಟ್ಟುಕೊಂಡಿರುವ ರವಿಯು ಕವಿಗಳ ಕೀಳರಿಮೆ ಮತ್ತು ಮೇಲರಿಮೆಗಳಲ್ಲೂ ಅದೇ ಪ್ರವೃತ್ತಿಯನ್ನು ಹುಡುಕುತ್ತಿದ್ದನು. ಆದರೆ ಯಶಸ್ವಿಯಾಗಿರಲಿಲ್ಲ. ಈಗ ಮಿಸ್ಸಿಂಗ್ ಲಿಂಕ್ ಸಿಕ್ಕಿತು!

...ಸಂಜೆ ಐದು ಹದಿನೆಂಟಕ್ಕೆ ರವಿ ವಿಮರ್ಶೆಯ ಆಫೀಸೆದುರು ಇದ್ದ. ಬ್ಲಡ್ ರಿಪೋರ್ಟ್ ಪಡೆವವರೋಪಾದಿಯಲ್ಲಿ ಬೆಳಿಗ್ಗೆ ಕೃತಿಗಳನ್ನು ಮೌಲ್ಯಮಾಪನಕ್ಕೆ ಸಲ್ಲಿಸಿದ ಎಲ್ಲರೂ ಅಲ್ಲಿ ಸೇರಿದ್ದರು. ವಿಮರ್ಶೆ (ಪ್ರೈ) ಲಿ. ದ ಕಾರ್ಯಕ್ಷಮತೆ, ವೇಗ ನಿಜಕ್ಕೂ ಅಪೂರ್ವವೆನ್ನಬೇಕು. ಒಂದು ದೊಡ್ಡ ಕಾದಂಬರಿಯನ್ನು ಕೂಡ ಅಷ್ಟೇ ಕಾಲಾವಕಾಶದಲ್ಲಿ ವಿಮರ್ಶೆ ಮಾಡಿ ಮುಗಿಸಿದ್ದರು. ಅಂದಿನ ಕೆಲಸವನ್ನು ಅಂದೇ ಮಾಡಬೇಕೆನ್ನುವ ಗುರುಹಿರಿಯರ ಉಪದೇಶವನ್ನು ರವಿಗೆ ಎಂದೂ ಪರಿಪಾಲಿಸಲು ಸಾಧ್ಯವಾಗಿರಲಿಲ್ಲ. ಹಾಗೆ ಪರಿಪಾಲಿಸಿದವರನ್ನು ಆತ ಈ ಹಿಂದೆ ನೋಡಿರಲೂ ಇಲ್ಲ!

ಇಷ್ಟು ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಿದರೂ ಅಲ್ಲಿದ್ದ ಕೆಲವರು ವಿಮರ್ಶೆಯ ರಿಪೋರ್ಟ್ ಬಂದ ಬಳಿಕ ಆಕ್ಷೇಪವೆತ್ತಲಾರಂಭಿಸಿದರು. ಆಗ ಕಂಪನಿಯ ಜನರಿಗಿಂತ ಮುಖ್ಯವಾಗಿ ನೆರೆದಿದ್ದವರೇ. ''ಏಽಽನ್ಸಾರ್, ಒಮ್ಮೆ ಮೌಲ್ಯ ಮಾಪನಕ್ಕೆ ಸಲ್ಲಿಸಿದ ಮೇಲೆ ಆ ತೀರ್ಮಾನವನ್ನು ಗೌರವದಿಂದ ಕಾಣಬೇಕಲ್ಲವೆ? ಅದು ಬಿಟ್ಟು ನಮ್ಮ ಮೂಗಿನ ನೇರಕ್ಕೇ ವಿಮರ್ಶೆ ಇರಬೇಕೆಂದು ಬಯಸುವುದು ತರವಲ್ಲ'' ಎಂದು ಬುದ್ಧಿ ಹೇಳಿದ ಮೇಲೆ ಅವರೆಲ್ಲ ಗೊಣಗುತ್ತ ಹೊರಟು ಹೋದರು. ಆಫೀಸಿನ ಮಧ್ಯಾಹ್ನದ ಕಾರ್ಯಾವಧಿ ಬಲುಬೇಗ ಮುಗಿದು ಹೋಯಿತು. ಸಂಜೆ ಪುಸ್ತಕಗಳನ್ನು ವಿಮರ್ಶೆಗೆ



ತುತ್ತು - ಮುತ್ತು

ಪುಟ್ಟನನ್ನು ಉಣಿಸಲೆಂದು
ತುತ್ತಿಗೊಂದು ಮುತ್ತು ಕೊಟ್ಟಳು
ಅವನ ತಾಯಿ.
ಅದನು ಮರೆತ ಪುಟ್ಟ
ಹೊತ್ತಿಗೊಂದು ತುತ್ತು ಕೊಟ್ಟ
ಹೆಂಡತಿಯ ಮಾತಿನಂತೆ ತನ್ನ
ತಾಯಿಯನ್ನು ಹೊರಗಿಟ್ಟ.

-ಎ.ಎಚ್. ನಿರಂಜನಕುಮಾರ

ಸ್ವೀಕರಿಸಲಾಗುವುದಿಲ್ಲವಂತೆ. ಆಫೀಸಿನ ಕದ ಮುಚ್ಚಿದ ನಂತರ ಆಫೀಸ್‌ನಲ್ಲಿ ಕುಳಿತಿದ್ದ ಮುಖವಾಡದವರು ಯಾರೊಡನೆಯೂ ಮಾತನಾಡದೆ ಕಾರಲ್ಲಿ ಕುಳಿತು ಭುರ್ರೆಂದು ಓಡಿದರು. ಕಾರು ದಿನಾಲೂ ಒಂದೇ ದಿಕ್ಕಿನಲ್ಲಿ ಹೋಗುವುದಿಲ್ಲವಂತೆ. ಮುಖವಾಡದ ಜನರು ಎಲ್ಲಿಂದ ಬರುತ್ತಿದ್ದಾರೆನ್ನುವುದೂ ಯಾರಿಗೂ ಪತ್ತೆ ಹಚ್ಚಲಾಗಬಾರದು ಎನ್ನುವುದು ಇದರ ಉದ್ದೇಶ. ಒಂದು ದಿನ ಕಾರು ಬನಶಂಕರಿ ಮೂರನೇ ಹಂತದತ್ತ ಓಡಿದರೆ ಇನ್ನೊಂದು ದಿನ ಮಲ್ಲೇಶ್ವರಂ. ಮತ್ತೊಂದು ದಿನ ಜರಗನಹಳ್ಳಿ, ಒಮ್ಮೊಮ್ಮೆ ಹೊಸೂರು ರೋಡ್.

ರವಿ ಪಾರ್ಕಲ್ಲಿ ಒಬ್ಬನೇ ಕುಳಿತು ರಿಪೋರ್ಟ್ ಬಿಚ್ಚಿದ. ಪಕ್ಕಾ ಬ್ಲಡ್ ರಿಪೋರ್ಟ್ ಮಾದರಿಯಲ್ಲೇ ಮೊದಲಿಗೆ ರಸ, ಪ್ರತಿಮೆ, ಪ್ರತೀಕ, ಲಯಗಳನ್ನು 'ಪರ್‌ಸೆಂಟ್' ಹಾಕಿ ತೋರಿಸಲಾಗಿತ್ತು. ನವರಸಗಳಲ್ಲಿ ಕೆಲರಸಗಳು ರವಿಯ ಕವಿತೆಯಲ್ಲಿ ಶೂನ್ಯವೆಂದು ಗುರುತಿಸಿದ್ದರು. ಈ ಗಣಿತ ಗುಣಿತ ವಿಚ್ಛೇದನೆಯ ಬಳಿಕ 'ಅನಾಲಿಸಿಸ್' (ವಿಶ್ಲೇಷಣೆ) ಭಾಗದಲ್ಲಿ ಕವಿತೆಯ ಗುಣದೋಷಗಳ ಕುರಿತು ಎರಡು ಪ್ಯಾರಾಗಳಲ್ಲಿ ಚರ್ಚಿಸಿದ್ದರು. 'ಸಲಹೆ'ಯ ಭಾಗದಲ್ಲಿ ಕನ್ನಡ, ಇಂಗ್ಲಿಷ್, ಸಂಸ್ಕೃತ ಸಾಹಿತ್ಯವನ್ನು ಚೆನ್ನಾಗಿ ಓದಿ ಅರಗಿಸಿಕೊಳ್ಳಲು ಸೂಚಿಸಿದ್ದರು. 'ಪ್ರಯತ್ನಪಟ್ಟರೆ ಯಾವುದೂ ಅಸಾಧ್ಯವಲ್ಲ' ಎಂಬ ಮಾತೂ ಕೂಡ ಅಲ್ಲಿತ್ತು. ರವಿಯ ಮುಂದೆ ಹೊಸ ಹಾದಿಯೊಂದು ತೆರೆದಿತ್ತು.....

◆

ಇಪ್ಪತ್ತನೇ ಶತಮಾನದ ಅಂತ್ಯದ ವರ್ಷಗಳಲ್ಲಿ ಆರಂಭವಾದ 'ನಿಷ್ಪಕ್ಷ ವಿಮರ್ಶೆ (ಪ್ರೈ) ಲಿ' ಇಪ್ಪತ್ತೊಂದನೇ ಶತಮಾನದ ಇಡೀ ಮೊದಲ ದಶಕವನ್ನಾಳಿತು. ಕನ್ನಡ ಸಾಹಿತ್ಯದಲ್ಲಿ ಈ ಸಂಸ್ಥೆ ತಂದ ಕ್ರಾಂತಿಕಾರಕ ಬದಲಾವಣೆಗಳನ್ನು ಬರೆಯುತ್ತ ಹೋದರೆ ಅದು ಒಂದು ಕಥೆಯ ಅಳತೆ, ಮಿತಿಗಳನ್ನು ಮೀರಿದ ವಿವರಗಳಂತೆ ತೋರಬಹುದು. ಆದರೂ ಸಂಗ್ರಹವಾಗಿ ಕೆಲ ಮಾತುಗಳನ್ನು ಹೇಳಬಹುದು.

ವಿಮರ್ಶಾ ಸಂಸ್ಥೆಯ ರಹಸ್ಯವನ್ನು ಯಾವ ಪತ್ತೇದಾರರೂ ಭೇದಿಸಲಾಗಲಿಲ್ಲ. ಅವರು ಬೇರೆ ಗ್ರಹಗಳಿಂದ ಬಂದವರಲ್ಲವಾದರೂ ಆಫೀಸಿನ ಕೆಲಸ ಮುಗಿದ ಬಳಿಕ ಬೇರೆ ಯಾವುದೋ ಗ್ರಹದಲ್ಲಿ ಅಂತರ್ಧಾನರಾಗಿಬಿಡುವರೇನೋ ಎಂಬಂತೆ ತೋರುತ್ತಿತ್ತು. ಕನ್ನಡ ಸಾಹಿತ್ಯದ ಕಳೆದ ಹತ್ತು ಹದಿನೈದು ವರ್ಷಗಳ ಸಮೃದ್ಧ ಫಸಲಿನ (ಇಪ್ಪತ್ತೊಂದನೇ ಶತಮಾನದಲ್ಲಿ ನಿಂತಕೊಂಡು ಈ ಮಾತುಗಳನ್ನಾಡುತ್ತಿದ್ದೇನೆ.) ಹಿಂದೆ ಈ ಸಂಸ್ಥೆಯ ದುಡಿಮೆ, ನಿಃಸ್ಪೃಹತೆ, ಅದು ಗೈದ ಮೌನಕ್ರಾಂತಿ... ಇವೆಲ್ಲ ಇವೆ. ಅವರ ರಹಸ್ಯವನ್ನು ಭೇದಿಸುವುದು ಸಾಹಿತಿಗಳಿಗೆ ಮುಖ್ಯವಾಗಿ ತೋರಲಿಲ್ಲ. ಅವರ ರಹಸ್ಯಮಯತೆಯನ್ನು ಸಾಹಿತಿಗಳೆಲ್ಲರೂ ಒಪ್ಪಿಕೊಂಡರು ಪ್ರಕೃತಿಯ ರಹಸ್ಯಮಯತೆಯ ಹಾಗೆ. ಒಂದು ಕವಿತೆಯ ಪ್ರೇರಣೆ ಎಲ್ಲಿಂದ ಬರುತ್ತದೆ. ಯಾಕೆ ಬರುತ್ತದೆ. ಕವಿತೆ ಬರೆಯುತ್ತಿರುವಾತ ಒಮ್ಮೆಲೇ ಒಂದು ದಿನ ಕಥೆ ಬರೆಯಲು ಆರಂಭಿಸುವುದೇಕೆ, ಮಾರಾಟವೇ ಆಗದಿದ್ದರೂ ಕವನ ಸಂಕಲನಗಳನ್ನು ಅಚ್ಚು ಹಾಕಿಸುವುದೇಕೆ - ಇಂಥ ಸಂಗತಿಗಳ ಕುರಿತು ದೀರ್ಘವಾಗಿ ಆಲೋಚಿಸದೆ ವಸ್ತು ಸ್ಥಿತಿಯನ್ನು ಸಾಹಿತ್ಯಲೋಕ ಹೇಗೆ ಸ್ವೀಕರಿಸುತ್ತದೆಯೋ, ಅದೇ ಬಗೆಯಲ್ಲಿ 'ನಿಷ್ಪಕ್ಷ ವಿಮರ್ಶೆ'ಯ ನಿಗೂಢ ಜಾಲದ ಚಟುವಟಿಕೆಯನ್ನೂ ಅದು ಒಪ್ಪಿಕೊಂಡಿತು. ಎಲ್ಲಕ್ಕಿಂತ ಮುಖ್ಯವಾದುದೆಂದರೆ ನಿಷ್ಪಕ್ಷಪಾತ ವಿಮರ್ಶೆಯಿಂದ ತೊಂದರೆಯೇನೂ ಆಗುತ್ತಿರಲಿಲ್ಲವಲ್ಲ! ಒಂದು ಜನಾಂಗದ ಅಭಿರುಚಿಯನ್ನೇ ಅದು ಎತ್ತರಿಸಿತ್ತು. ಹೊರ ದೇಶಗಳಲ್ಲಿ ವಿಮರ್ಶಾಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಗಳು, ಹೊಸ ವಿಚಾರಗಳು - ಇಂಥ ಸಂಗತಿಗಳ ಕುರಿತು ಈ ಸಂಸ್ಥೆಯವರು Up-to-date ಆಗಿರುತ್ತಿದ್ದರು. ಒಂದು ಭಾಷೆಯ, ಸಾಹಿತ್ಯದ ಕುರಿತಾದ ಜವಾಬ್ದಾರಿಯನ್ನು ಅಲ್ಲಿಯ ಸಮಾಜದ ಪರವಾಗಿ ಈ ಸಂಸ್ಥೆ ಹೊತ್ತಂತಿತ್ತು. ಬರವಣಿಗೆಯ ಅಸ್ಖಾಲಿತ್ಯಗಳನ್ನು ತಿದ್ದುವ ಮೂಲಕ, ಓದಿನ ಅಗತ್ಯವನ್ನು ಸೂಚಿಸುವ ಮೂಲಕ, ನೇರವೂ, ಸ್ಪಷ್ಟವೂ ಆದ ವಿಚಾರಗಳ ಮೂಲಕ ಆಗಲೇ ಸೃಷ್ಟಿಯಾದ ಸಾಹಿತ್ಯದ ವಿಮರ್ಶೆಯನ್ನು ಮಾಡುತ್ತಲೇ ಈ ಸಂಸ್ಥೆ ಅಪ್ರತ್ಯಕ್ಷವಾಗಿ ಸಮಾಜದ 'ಬೇಕು'ಗಳನ್ನು ಬರಹಗಾರರ ಮುಂದೆ ಇಡುತ್ತಿತ್ತು. ಶಿಲ್ಪಿಗಳಂತೆ, ವೈದ್ಯರಂತೆ, ಯಾವುದೇ ಕುಶಲ ಕಲೆಗಾರರಂತೆ ಸಾಹಿತಿಗಳೂ ತಮ್ಮ ಶಬ್ದಗಳನ್ನು, ವಿಚಾರಗಳನ್ನು, ಬರಹಗಳನ್ನು ಶುದ್ಧವಾಗಿ, ಸ್ವಚ್ಛವಾಗಿ ಹಾಗೂ ಸುಂದರವಾಗಿ ರೂಪಿಸುತ್ತ ಹೋದರು. ಸಾಹಿತ್ಯದ ಅನೇಕ ಚಳುವಳಿಗಳ ಅರ್ಥಪೂರ್ಣ ಅಸ್ತಿತ್ವ ಸಂವಾದ, ಸಹ ಜೀವನ ಈ ದಶಕದ ಕನ್ನಡ ಸಾಹಿತ್ಯದ ಪ್ರಮುಖ ಲಕ್ಷಣವಾಯಿತು. ಅಕಾಡೆಮಿ ಬಹುಮಾನಗಳು, ಸರಕಾರದ ಇತರ ಸಾಹಿತ್ಯದ ಪ್ರಶಸ್ತಿಗಳು ಯಾವುದರ ಕುರಿತೂ ಈ ಅವಧಿಯಲ್ಲಿ ಆಕ್ಷೇಪಗಳು ಬರಲಿಲ್ಲ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯ ಕುರಿತು ವಿವಾದಗಳಾಗಲಿಲ್ಲ. ಪುಸ್ತಕ ಬಹಿಷ್ಕಾರದಂಥ ಕ್ರಮಗಳು ಅವಶ್ಯಕವಾಗಲಿಲ್ಲ. ಎಂದೂ ಬರೆಯದೆಯೂ ಸಾಹಿತಿಗಳೆನಿಸಿಕೊಳ್ಳಬೇಕೆಂಬ ಚಪಲದ ಸಾಹಿತ್ಯೋಪ ಜೀವಿಗಳು ಮಾತ್ರ ಹೇಳ ಹೆಸರಿಲ್ಲವಾಗಿ ಹೋದರು. ಇದು ಕೂಡ ವಿಮರ್ಶಾ ಸಂಸ್ಥೆಯ ಪ್ರಮುಖ ಸಾಧನೆ. ಕಳೆದ ಶತಮಾನದಲ್ಲಿ ಅನೇಕ ಸಲ ಸಾಹಿತಿಗಳಲ್ಲದವರೂ ಆ ಕೋಟಾದಲ್ಲಿ ಪರಿಷತ್ತುಗಳಿಗೆ ನಾಮಕರಣ ಗೊಳ್ಳುತ್ತಿದ್ದರು. ಅಂಥ ಸಂದರ್ಭಗಳು ಈಗ ತಪ್ಪಿದವು. ರವಿಯಂಥ ಹುಡುಗರು ಇಂದು ಕನ್ನಡ ಸಾಹಿತ್ಯದ ಮುಂಚೂಣಿಯಲ್ಲಿದ್ದರೆ ಅದಕ್ಕೆ ವಿಮರ್ಶಾಸಂಸ್ಥೆಯ ಸಕಾಲಿಕ ಸಲಹೆ, ಸೂಚನೆಗಳೇ ಕಾರಣವೆಂದು ಅಂಥವರು ಹೃದಯ ತುಂಬಿ ಹೇಳುತ್ತಾರೆ.

ಹಾಗಾದರೆ ಹತ್ತೊಂಬತ್ತನೆಯ ಶತಮಾನದ ಕೊನೆಯ ದಿನಗಳಲ್ಲಿ ಏನಾಗುತ್ತಿತ್ತು? ವಿಮರ್ಶಕರು ಇದ್ದರಲ್ಲವೆ, ವಿಮರ್ಶೆಗಳೂ ಆಗುತ್ತಿದ್ದವಲ್ಲವೆ, ಕೆಲವು ಮಹತ್ವದ ಕೃತಿಗಳೂ ಬಂದವಲ್ಲವೆ? ಇಷ್ಟು ದಿನಗಳ ಬಳಿಕ

ವಿಮರ್ಶೆಯ ಕಂಪನಿ ಇರದೇ ಇದ್ದರೆ ಕನ್ನಡ ಸಾಹಿತ್ಯ ಹೇಗಿರುತ್ತಿತ್ತು ಮತ್ತು ಈಗ ಅದು ಇರುವುದರಿಂದ ಆದ ಲಾಭಗಳೇನು ಎಂಬ ಕುರಿತು ತುಂಬ ನಿಖರವಾದ ಮಾತುಗಳನ್ನು ಹೇಳುವುದು ಕಠಿಣವೆನಿಸುತ್ತಿದೆ. ಆದರೆ ಇಷ್ಟು ಮಾತ್ರ ಹೇಳಬಹುದು. ಅದು ಸಾಹಿತ್ಯ ವಿಮರ್ಶಕರ ಅಸ್ತಿತ್ವವನ್ನೇನೂ ಅಲ್ಲಗಳೆಯಲಿಲ್ಲ. ಆದರೆ 'ತನ್ನ ಕೆಲಸ ಇದು, ಇದಿಷ್ಟು' ಎಂಬಂತೆ ವ್ಯವಸ್ಥಿತವಾಗಿ ಹಸ್ತ ಪ್ರತಿಗಳ, ಪ್ರಕಟಿತ ಪ್ರತಿಗಳ ಮೌಲ್ಯಮಾಪನ ಮಾಡುತ್ತ ಹೋಯಿತು. ಕಂಪನಿಯ ಕಾರ್ಯದಕ್ಷತೆ ಯಾರೂ ಮೆಚ್ಚುವಂತಿತ್ತು. ಆದರೆ ಅವರ ನಿಗೂಢತೆ? ಅದೇಕೆ ಅವರು ನಿಗೂಢವಾಗಿರಬೇಕು, ಅದೇಕೆ ಯಾರ ಕೈಗೂ ಸಿಕ್ಕದಂತಿರಬೇಕು? ಕೈಗೇ ಸಿಕ್ಕದವರನ್ನು ಈ ಪ್ರಶ್ನೆ ಕೇಳಿ ಉತ್ತರ ಪಡೆಯುವವರು ಯಾರು?

ಈ ನಡುವೆ ವಿಚಿತ್ರ ಬೆಳವಣಿಗೆಗಳಾದವು. ಉತ್ತಮ ಅಭಿರುಚಿಯ ಅಸಾಮಾನ್ಯ ಕೃತಿಗಳನ್ನು ಓದಿ ಓದಿ ಜನರು ಬೇಸತ್ತು ಹೋದರು. ಅವರು ಲೇಖಕನಿಂದ ತಪ್ಪುಗಳನ್ನು ಬಯಸಲಾರಂಭಿಸಿದರು. ವ್ಯಾಕರಣದ ತಪ್ಪುಗಳಿಂದ, ತೂಕ ತಪ್ಪಿ ಬರೆವ ಉದ್ದುದ್ದ ಪ್ಯಾರಾಗಳಿಂದ, ಅಡಿಗೆ ಐಟಂಗಳಿಂದ ತುಂಬಿರುತ್ತಿದ್ದ ಸಂಭಾಷಣೆಗಳಿಂದ ಸಿಕ್ಕುತ್ತಿದ್ದ ಮನರಂಜನೆಯನ್ನು ಅವರು ಹುಡುಕಲಾರಂಭಿಸಿದ್ದರು. ಪಂಚತಾರಾ ಹೋಟಲುಗಳಲ್ಲಿ ಉತ್ಕೃಷ್ಟ ತಿಂಡಿಯನ್ನು ತಿಂದ ಬಾಯಿ ರಸ್ತೆ ಬದಿಯ ದಾಬಾಗಳಲ್ಲಿ ಸಿಗುವ ಸಾಮಾನ್ಯ ಮಟ್ಟದ ತಿನಿಸುಗಳನ್ನು ಕೆಲವು ಸಲ ಇಷ್ಟಪಡುವಂತೆ ಜನರು ಸಾಧಾರಣಮಟ್ಟದ ಪುಸ್ತಕಗಳನ್ನು ಓದಲು ಅಪೇಕ್ಷಿಸಿದರು. ಆದರೆ ಸಾಧಾರಣ ಪುಸ್ತಕಗಳೆಲ್ಲಿವೆ, ಎಲ್ಲಿವೆ?

ಒಮ್ಮೆಲೇ ಪ್ರಕಾಶಕರು ಎಚ್ಚೆತ್ತರು. ನಿ.ವಿ.ಪ್ರೈ (ಲಿ). ತಿರಸ್ಕರಿಸಿದ ಕೃತಿಗಳ ಧೂಳು ಕೊಡವಿ ಮುದ್ರಿಸಿದರು. ದಿಢೀರೆಂದು ಅಂಥ ಬರಹಗಾರರಿಗೆ, ಅಂಥ ಕೃತಿಗಳಿಗೆ ಬೇಡಿಕೆ ಹೆಚ್ಚಿತು. ಆ ಪುಸ್ತಕಗಳು ಬಿಸಿ ಶೇಂಗಾ ಬೀಜದಂತೆ ಮಾರ್ಕೆಟ್ಟಲ್ಲಿ ಮಾರಾಟವಾದವು. ಕಳೆದ ಶತಮಾನದ ಅನೇಕ ಸಾಧಾರಣ ಕೃತಿಗಳು ಮರುಮುದ್ರಣಗಳನ್ನು ಕಂಡವು. ''ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ'' ಎಂದು ಕೆಲ ಲೇಖಕ-ಲೇಖಕಿಯರು ಮುಖ ಮುಚ್ಚಿಕೊಂಡು ನಕ್ಕರು. ಅತ್ತೆ ಯಾರು, ಸೊಸೆ ಯಾರು? ತನ್ನ ಬಿಡುವರಿಯದ ದುಡಿಮೆಯಿಂದ 'ನಿಷ್ಪಕ್ಷಪಾತ ವಿಮರ್ಶೆ (ಪ್ರೈ) ಲಿ.' ಸಾಧಿಸಿದ್ದಾದರೂ ಏನು?

ಈ ಬೆಳವಣಿಗೆಗಳಾಗುತ್ತಿದ್ದಾಗಲೇ ಒಂದು ದಿನ 'ನಿ.ವಿ.ಪ್ರೈ(ಲಿ)'ದ ಬಾಗಿಲು ತೆರೆಯಲಿಲ್ಲ. ರಜಾ ದಿನಗಳೇ ಇಲ್ಲವೆ ಇಡೀ ಒಂದು ದಶಕ ದುಡಿದದ್ದು ಈ ಸಂಸ್ಥೆಯ ಆಕಸ್ಮಿಕ ರಜೆಯ ಕಾರಣವೂ ತಿಳಿಯಲಿಲ್ಲ. ದಿನಗಳು, ವಾರಗಳು ಕಳೆದರೂ ಕಂಪನಿಯವರು ಬರಲಿಲ್ಲ. ಇನ್ನು ಬರುವುದೂ ಇಲ್ಲ ಎಂದೇ ಎಲ್ಲರಿಗೂ ಅನಿಸಿಬಿಟ್ಟಿದೆ. ಬಂದಷ್ಟೇ ವಿಚಿತ್ರವಾಗಿ ಕಂಪನಿಯವರು ಹೊರಟು ಹೋಗಿದ್ದರು. ''.....ವಿಮರ್ಶೆ ಮಾಡಿಕೊಡಲಾಗುವುದು'' ಎಂಬ ಬೋರ್ಡು ಬಣ್ಣಗೆಟ್ಟು ಕರುಣಾಜನಕವಾಗಿ ಕಾಣುತ್ತಿತ್ತು. ಅಡ್ಡಾದಿಡ್ಡಿ ಓಡಾಡುವ ಸಾಹಿತ್ಯದ ದಿನಚರಿಯನ್ನು ಶಿಸ್ತಿಗೊಳಪಡಿಸಿದ ವಿಮರ್ಶೆಯ ಕಂಪನಿಯವರು ತಮ್ಮ ಕಾರ್ಯ ಒಂದು ಹಂತದ ಯಶಸ್ಸನ್ನು ಕಂಡ ಬಳಿಕ ಚಟುವಟಿಕೆಗಳು ಹಿಮ್ಮುಖವಾಗಿ ಚಲಿಸಲಾರಂಭಿಸಿವೆ ಎಂದು ಗ್ರಹಿಸಿ ನಿರಾಸೆಯಿಂದ ಎಲ್ಲವನ್ನೂ ಬಿಟ್ಟು ಹೊರಟುಬಿಟ್ಟರೆ? ಹೇಳದೇ ಹೊರಟು ಹೋದವರು ಬಂದರೂ ಬಂದಾರು ಎಂಬ ಕ್ಷೀಣ ಆಸೆಯಿಂದ ಸಾಹಿತ್ಯಲೋಕ ಕಾಯುತ್ತಲೇ ಇದೆ. ಇಂಥ ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು ಅಲ್ಲಿ ಅಷ್ಟು ಅಸಹಜವೇನೂ ಅಲ್ಲ. ●

ಕ್ಲಾಸ್ ರೂಂ

ಚಡ್ಡಿ ದೋಸ್ತ್

ನಾನು ದ್ವಿತೀಯ ಬಿ.ಎ. ಓದುತ್ತಿರುವಾಗ ಅರ್ಥಶಾಸ್ತ್ರದ ಉಪಾನ್ಯಾಸಕರು ಉಪನ್ಯಾಸ ನೀಡ್ತಾಯಿದ್ರು. ಮಧ್ಯದಲ್ಲಿ ಪದೇ ಪದೇ ಪ್ರಶ್ನೆ ಕೇಳೋದು ಅವರ ಅಭ್ಯಾಸವಾಗಿ ಬಿಟ್ಟಿತ್ತು. ಒಂದ್ಸಾರೆ ಇದ್ದಕ್ಕಿದ್ದಂತೆ 'ಕಾರ್ಲ್‌ಮಾರ್ಕ್ಸ್' ನಿಮಗೆ ಗೊತ್ತಾ? ಅಂತ ಕೇಳಿದ್ರು. ಆಗ ತರಗತಿ ಎಲ್ಲ ನಿಶ್ಶಬ್ದವಾಯಿತು. ಆಗ ನಾನು ಅದಕ್ಕೆ ಪ್ರತಿಯಾಗಿ 'ಉನ್ನಾರ್' ಎಂದು ತಿರುಗುತ್ತರ ಕೊಟ್ಟೆ. ಉತ್ತರ ಕೊಟ್ಟಿದ್ದೇ ತಡ ಉಪನ್ಯಾಸಕರು 'ಏನ್ರಿ ಕಾರ್ಲ್‌ಮಾರ್ಕ್ಸ್ ನಿಮ್ಮ ಚಡ್ಡಿದೋಸ್ತಾ? ಅಂತಾ ಕೇಳಿಬಿಡಬೇಕಾ? ನಿಶ್ಶಬ್ದವಾಗಿದ್ದ ಕ್ಲಾಸ್ ರೂಂ ಗೊಳ್ಳೆಂದು ನಕ್ಕಿದ್ದೆ ನಕ್ಕಿದ್ದು.

–ಹಿ.ಮ. ಉದಯಕುಮಾರ
ಬಳ್ಳಾರಿ

'ಕುಂಡಿ' ಎಂಬ ಗೆಳೆಯ

ಸುಮಾರು ೧೭ ವರ್ಷಗಳ ಹಿಂದೆ, ನಾನು ೬ನೇ ಕ್ಲಾಸಿನಲ್ಲಿ ಓದುತ್ತಿದ್ದಾಗ, ನಾರಾಯಣರಾವ್ ಎಂಬ ವಿಜ್ಞಾನದ ಶಿಕ್ಷಕರು ಚೇಳಿನ ಬಗ್ಗೆ ಪಾಠ ಮಾಡುತ್ತ, 'ಚೇಳು ತನ್ನ ಯಾವ ಅಂಗದಿಂದ ಕುಟುಕುತ್ತದೆ' ಎಂದು ಕೇಳಿದರು. ಇಡಿ ಕ್ಲಾಸ್ ರೂಂ 'ಕೊಂಡಿಯಿಂದ' ಎಂದು ಕೂಗಿತು. ಹಾಗಾದರೆ ಯಾರು ಬೋರ್ಡು ಮೇಲೆ ಬರೆಯುತ್ತೀರಿ ಎಂದು ಕೇಳಿದರು. ''ನಾಸಾ ನಾಸಾ'' ಎಂದು ಎಲ್ಲರೂ ಕೈ ಎತ್ತಿದೇವು. ಶಿಕ್ಷಕರು ಹಿಂದೆ ಕೂತಿದ್ದ ತಿಮ್ಮಪ್ಪ ಎಂಬ ವಿದ್ಯಾರ್ಥಿಯನ್ನು ಕರೆದರು. ಆತ 'ಕೊಂಡಿ'ಯಿಂದ ಕುಟುಕುತ್ತದೆ ಎಂದು ಬರೆದು ಬೆನ್ನಿನ ಮೇಲೆ ಮೇಸ್ಟ್ರಿಂದ ಬೆತ್ತ ಆಡಿಸಿಕೊಂಡು ಬಾಸುಂಡಿ ತರಿಸಿಕೊಂಡಿದ್ದ. ನಾವು ನಕ್ಕಿದ್ದೆ ನಕ್ಕಿದ್ದು.

'ನೀನು ಸರಿಯಾಗಿ ಬರಿ ಬಾರೋ' ಎಂದು ನಾಗಭೂಷಣಯ್ಯ ಎಂಬ ನನ್ನ ಇನ್ನೊಬ್ಬ ಗೆಳಯನನ್ನು ಕರೆದರು. ಆತ ಒಳ್ಳೇ ಸ್ಟೈಲ್ ಆಗಿ 'ಚೇಳು ತನ್ನ ಕುಂಡಿಯಿಂದ ಕುಟುಕುತ್ತದೆ'' ಎಂದು ಬರೆದ. ಶಿಕ್ಷಕರೂ ಸೇರಿ ಎಲ್ಲರೂ ಜೋರಾಗಿ ನಗಬೇಕೆ! ಅವತ್ತಿನಿಂದ ನನ್ನ ಗೆಳಯನಿಗೆ 'ಕುಂಡಿ' ಎಂಬ ಹೆಸರೇ ಬಿತ್ತು. ಅದೇ ಹೆಸರೇ ಅವನಿಗೆ ಶಾಶ್ವತವಾಗಿ ಉಳಿಯಿತು. ಈಗ ನನ್ನ ಗೆಳೆಯ 'ಕುಂಡಿ' ಶಿಕ್ಷಕನಾಗಿ ಎಲ್ಲೊ ಕೆಲಸ ಮಾಡುತ್ತಿದ್ದಾನೆಂದು ಯಾರೊ ಹೇಳಿದ್ದು ನೆನಪು.

– ಶಿವಕುಮಾರಗೌಡ
ಹಗರಿಬೊಮ್ಮನಹಳ್ಳಿ

ವಿಶೇಷ ಬಹುಮಾನ


ಆಗ ನಾನು ಹತ್ತನೆ ತರಗತಿ ವಿದ್ಯಾರ್ಥಿ. ಶಾಲೆಯಲ್ಲಿ ವಾರ್ಷಿಕೋತ್ಸವ ನಡೆಯುತ್ತಿತ್ತು. ಗುರುಗಳು ಯಾರಿಗೂ ತಿಳಿಯದಂತೆ ಒಳ್ಳೆಯ ನಡತೆಯ ವಿದ್ಯಾರ್ಥಿಯನ್ನು ಆಯ್ಕೆ ಮಾಡಿ ವಿಶೇಷ ಬಹುಮಾನ ನೀಡಲು ನಿರ್ಧರಿಸಿದರು. ಎಲ್ಲ ಕಾರ್ಯಕ್ರಮಗಳು ಮುಗಿದು 'ಈಗ ವಿಶೇಷ ಬಹುಮಾನ ಪ್ರಕಟಣೆ'' ಅಂದರು. ಕೊನೆಯಲ್ಲಿ ಆ ವ್ಯಕ್ತಿ ಯಾರಿರಬಹುದು ಎಂದು ಕೇಳಿದರು? ಆಗ ಎಲ್ಲ ಹುಡುಗರೂ ನನ್ನ ಹೆಸರನ್ನು ಕೂಗಲಾರಂಭಿಸಿದರು. ಇದನ್ನು ಕಂಡ ಗುರುಗಳು ಗಲಿಬಿಲಿಗೊಂಡರು. ಅಂತೂ ನನಗೆ ಪ್ರಶಸ್ತಿ ದೊರೆಯಲಿಲ್ಲ. ಗುರುಗಳಿಗೆ ಆಯ್ಕೆ ಸಮಸ್ಯೆಯ ಅರಿವಾಗಿರಬಹುದು. ಇನ್ನೂ ಆ ಘಟನೆ ನನ್ನ ಮನಸ್ಸಿನಲ್ಲಿದೆ.

– ಲೋಕೇಶ್ ಜಿ.,
ಗೊಲ್ಲರ ಹಳ್ಳಿ

ಸೂಯೆಜ್ ಕಾಲುವೆ


ನಾನು ಎಸ್.ಎಸ್.ಎಲ್.ಸಿ. ಓದುತ್ತಿದ್ದೆ. ಕೆಲ ಶಿಕ್ಷಕರು ವರ್ಗವಾಗಿ ಹೊಸ ಶಿಕ್ಷಕರು ಬಂದರು. ಹಾಗೆ ಹೊಸದಾಗಿ ವರ್ಗವಾಗಿ ಬಂದ ಒಬ್ಬರು ನಮಗೆ ಭೂಗೋಳ ಪಾಠ ಹೇಳುತ್ತಿದ್ದರು. ಆಗ ಕಿಟಲೆ ಹುಡುಗರು ''ಸೂಯೆಜ್ ಕಾಲುವೆ ಯಾವ ರಾಜ್ಯದಲ್ಲಿ ಹರಿಯುತ್ತದೆ? ಅದು ದಿನಾಲು ಬಿಟ್ಟೂ ಬಿಡದೆ ಹರಿಯಲು ಕಾರಣವೇನು?'' ಎಂದು ಪ್ರಶ್ನೆ ಹಾಕುತ್ತಿದ್ದರು. ಯಾಕೆಂದರೆ ಭೂಗೋಳ ಮೇಸ್ಟರ ಮೂಗಿನಲ್ಲಿ ದಿನಾಲು ಪಾಠ ಮಾಡುವಾಗ ಸಿಂಬಳ ಹರಿಯುತ್ತಿತ್ತು. ಇದನ್ನು ನೋಡಿ ಅವರ ಮೂಗನ್ನು ಸೂಯೆಜ್ ಕಾಲುವೆಗೆ ಹೋಲಿಸಿ ಈ ಪ್ರಶ್ನೆಯನ್ನು ಹಾಕುತ್ತಿದ್ದರು. ಈ ಪ್ರಶ್ನೆ ಕೇಳಿದ ತರಗತಿಯ ಎಲ್ಲರೂ

ಮತ್ತೆ ಅಮ್ಮಾ



೧೯೮೫-೮೬ ರಲ್ಲಿ ೮ನೇ ತರಗತಿಯಲ್ಲಿ ಓದುತ್ತಿದ್ದೆ. ಆವಾಗ ನಮ್ಮ ಶಾಲೆಗೆ ಹೊಸದಾಗಿ ಮೇಡಂ ಬಂದಿದ್ದರು. ಮೊದಲ ದಿನ ಕ್ಲಾಸ್ ಮಾಡುವಾಗ ನಾನು ಮತ್ತು ನನ್ನ ನಾಲ್ಕು ಜನ ಗೆಳೆಯರು ಕೋಣೆಯ ಬಾಗಿಲಲ್ಲಿ ನಿಂತು 'ಒಳಗೆ ಬರಮೇನಮ್ಮಾ'' ಎಂದು ಕೇಳಿದೆವು. ನಮಗೆ ಮೇಡಂ ಅನ್ನಬೇಕೆಂದು ಗೊತ್ತಿರಲಿಲ್ಲ. ತಕ್ಷಣ ಅವರು ಸಿಟ್ಟಿನಿಂದ 'ಬನ್ನಿರಿ' ಎಂದರು. ಬೆಂಚ್ ಮೇಲೆ ಪಾಠ ಕೇಳುತ್ತಾ ಕುಳಿತೆವು. ಪಾಠ ಮುಗಿದ ನಂತರ 'ನಾನು ಹೇಳುವುದು ತಿಳಿಯಿತೇನು' ಎಂದರು. ನಾವು 'ತಿಳೀತಮ್ಮಾ' ಎಂದೆವು. ಆಗ ಸಿಟ್ಟಿಗೆದ್ದ ಅವರು ಏನದು 'ಅಮ್ಮಾ' ಎಂದು ಬಯ್ದರು. 'ನನಗೆ ಅಮ್ಮಾ-ಗಿಮ್ಮಾ ನಡಿಯೋದಿಲ್ಲ. ಯಾವ ಹಳ್ಳಿಯವರು ನೀವು' ಎಂದು ಗದರಿಸಿ, 'ಇನ್ನು ಮುಂದೆ ಮೇಡಂ ಅಥವಾ ಟೀಚರ ಎನ್ನಬೇಕು' ಎಂದರು. ಆವಾಗ ನಾವೆಲ್ಲರೂ 'ಆಯಿತಮ್ಮಾ' ಇನ್ನು ಮೇಲೆ ನಿಮಗೆ 'ಮೇಡಂ' ಅನ್ನುತ್ತೇವಮ್ಮ' ಎಂದಾಗ ಏನದು ಮತ್ತೆ ಅಮ್ಮಾ ಎಂದು ಏಟು ಕೊಟ್ಟೇ ಬಿಟ್ಟರು.

– ಮಲ್ಲಿಕಾರ್ಜುನ ಗುಳಿಗಿ, ಸತ್ಯಂಪೇಟ



ಸಂಧಿ ಎಂದರೇನು?

ನಾನು ೬ನೇ ತರಗತಿಯಲ್ಲಿರುವಾಗ ಕನ್ನಡ ಮೇಸ್ಟ್ರು ವ್ಯಾಕರಣ ಮಾಡುತ್ತಿರುವಾಗ ಒಬ್ಬ ಹುಡುಗನನ್ನು ನಿಲ್ಲಿಸಿ 'ಸಂಧಿ ಎಂದರೇನು?' ಅಂತ ಪ್ರಶ್ನೆ ಕೇಳಿದರು. ಆ ಹುಡುಗ 'ಅಕ್ಕ ಪಕ್ಕ ಮನೆಯಿದ್ದು, ನಡುವೆ ಸ್ವಲ್ಪ ಸ್ಥಳ ಇರುವುದಕ್ಕೆ 'ಸಂಧಿ' ಎನ್ನುವರು ಎಂದನು. ಆಗ ನಮ್ಮ ಕ್ಲಾಸಿನ ಹುಡುಗ ಹುಡುಗಿಯರು ನಕ್ಕಿದ್ದೆ ನಕ್ಕಿದ್ದು.

– ಕೆ.ಎನ್. ವತ್ಸಲ ಹೆಗಡೆ
ಹರಪನಹಳ್ಳಿ

ನೀವೂ ಬರೆಯಿರಿ

ಶಾಲೆ ಕಾಲೇಜುಗಳ ತರಗತಿ ಕೋಣೆಗಳಲ್ಲಿ ತಮಾಷೆಗಳಿಗೆ ಬರವುಂಟೆ? ಇಂಥ ಪ್ರಸಂಗಗಳು ಹಲವೊಮ್ಮೆ ಗಂಭೀರ ತಿರುವು ಪಡೆಯುವುದು ಅಸಂಭವವಲ್ಲ. ಈ ಬಗ್ಗೆ ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಈ ಅಂಕಣದಲ್ಲಿ ಬರೆಯಬಹುದು.

ಗೊಳ್ಳೆಂದು ನಕ್ಕು ಬಿಡುತ್ತಿದ್ದರು. ಕೊನೆಗೆ ಆ ಮೇಸ್ಟ್ರಗೆ ಈ ವಿಷಯ ಗೊತ್ತೇ ಆಗಲಿಲ್ಲ.

– ಎನ್.ಡಿ.ಬಿ. ರಾಜಾ
ಬಿ.ಪುರ

ಸ್ವಾತಂತ್ರ್ಯ

ನಮ್ಮ ಗುರುಗಳೊಬ್ಬರು ಕ್ಲಾಸಿನಲ್ಲೊಮ್ಮೆ ''ಸಂಗಮೇಶ ದಿನವೆಲ್ಲ ಹಾಜರಿದ್ದು ಸ್ವಾತಂತ್ರ್ಯ ದಿನದಂದು ಗೈರು ಹಾಜರಿ ಇದ್ದೆಯಲ್ಲೋ'' ಎಂದು ಪ್ರಶ್ನಿಸಿದರು. ''ಸರ್ ಅಂದು ನಾನು ಶಾಲೆಗೆ ಬರುತ್ತಿದ್ದೆ. 'ಸ್ವಾತಂತ್ರ್ಯ ದಿನ' ಈ ಶಬ್ದವನ್ನು ತಿಳಿದುಕೊಂಡು ಅಂದು ಮನೆಯಲ್ಲಿ ಪಾಲಕರ ಕೆಲಸ ಮಾಡಿಯೂ ಶಾಲೆಯಲ್ಲಿ ನೀವೂ ಹೇಳಿದ ಹಾಗೆ ಕೇಳಬೇಕೇನು?' ಎಂದು ತಿರುಗಾಡಲು ಹೋದೆ ಸರ್'' ಎಂದು ಹೇಳಿದಾಗ ಹುಡುಗರೆಲ್ಲರೂ ನನ್ನ ಒಳ್ಳೆಯ ಉತ್ತರಕ್ಕೆ ಹೊಗಳಿ ನಕ್ಕು ಬಿಟ್ಟಿದ್ದರು.

– ಸಂಗಮೇಶ ಸೊಬರದ
ಹಾಬಲಕಟ್ಟಿ

ಪರಶುರಾಮನ ತಂದೆ?

ನಾನು ೪ನೇ ಕ್ಲಾಸಿನಲ್ಲಿ ಓದುತ್ತಿದ್ದಾಗ ಕನ್ನಡ ಪಾಠ ಮಾಡುವ ಉಪಾಧ್ಯಾಯರು ಜಮದಗ್ನಿಯ ಮಗನಾದ ಪರಶುರಾಮನ ಬಗ್ಗೆ ಪಾಠ ಮಾಡುತ್ತಿದ್ದರು. ನಮ್ಮ School Head Masterಗೆ ಒಬ್ಬ ಮಗನಿದ್ದನು. ಅವನ ಹೆಸರು ಪರಶುರಾಮ ಅಂತ. ಒಬ್ಬ ಹುಡುಗ ಯಾವಗಲೂ ತರ್ಲೆ ಮಾಡುತ್ತಿದ್ದ. ಆ ಹುಡುಗನನ್ನ ಎದ್ದು ನಿಲ್ಲಿಸಿ ಉಪಾಧ್ಯಾಯರು 'ಪರಶುರಾಮ ಯಾರ ಮಗ' ಎಂದು ಪ್ರಶ್ನೆ ಕೇಳಿದರು. ಆಗ ಆ ಹುಡುಗ 'ಪರಶುರಾಮ School Head Masterರ ಮಗ' ಎಂದು ಹೇಳಿದ್ದ. ನಾವು ನಗದೆ ಏನು ಮಾಡಬೇಕು!

– ಪ್ರತಿಮಾ ಜಿ.ಎಸ್.
ಗೊರಕೋಡು

ಸಾಯೋ ಕಾಲಕ್ಕೆ



ನಾನು ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾಗ ಮಲೆಯಾಳಿ ಮೂಲದ ಸಹಪಾಠಿಯೊಬ್ಬನಿದ್ದ. ಆತನಿಗೆ ಕನ್ನಡ ಮಾತನಾಡಲು ಕಷ್ಟವಾಗುತ್ತಿದ್ದರೂ ಅದು ಆತನಿಗೆ ಅನಿವಾರ್ಯವಾಗಿತ್ತು. ಮನೆಯಲ್ಲಿ ಮಲಯಾಳಂನಲ್ಲಿ ಮಾತಾಡುತ್ತಿದ್ದ ಆತ ಅಧ್ಯಾಪಕರೊಂದಿಗೆ ಹಿಂದಿ, ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದ. ಆದರೆ ನಮ್ಮಲ್ಲಿ ಅನೇಕರೊಂದಿಗೆ ಕನ್ನಡದಲ್ಲಿಯೇ ಮಾತನಾಡಬೇಕಾಗುತ್ತಿದ್ದುದರಿಂದ ಆತನ 'ಮಲಯಾಳಂ ಮಿಶ್ರಿತ ಕನ್ನಡ'ದೊಳಗೆ ಹೇಗೊ ಹೇಗೊ ನುಸುಳುವ ತಪ್ಪು, ವಿಚಿತ್ರಗಳಿಂದ ಆತ ಅನೇಕ ಬಾರಿ ನಮ್ಮ ನಡುವೆ ನಗೆಪಾಟಲಾಗುತ್ತಿದ್ದ. ಅಂಥ ಒಂದು ಘಟನೆ : ನಮ್ಮ ಅಧ್ಯಾಪಕರೊಬ್ಬರು ಆತನಲ್ಲಿ 'ಚಂದ್ರನಿಗೆ ಸಾಯಂಕಾಲ ನನಗೆ ಸಿಕ್ಕಿ ಹೋಗಲು ಹೇಳು' ಎಂದು ಹೇಳಿ ಕಳುಹಿಸಿದ್ದರಂತೆ. ತರಗತಿ ಮುಗಿದ ಮೇಲೆ ಇತರ ಗೆಳೆಯರೊಂದಿಗೆ ಹರಟುತ್ತ ಮನೆಗೆ ಹೊರಬಿದ್ದ ನನ್ನನ್ನು ಕರೆದು ಆತ ಹೇಳಿದ 'ಸಾಯೋಕಾಲಕ್ಕೆ ಸರ್ ಸಿಗ್ಲಿಕ್ಕೆ ಹೇಳಿದ್ದಾರೆ'.

ಆತನ ವಿಚಿತ್ರ ಮಾತು ಕೊನೆಗೆ ಅರ್ಥವಾಗಿ ಬಿದ್ದು ಬಿದ್ದು ನಕ್ಕಿದ್ದು.

– ಚಂದ್ರ ಕೆ. ಹೆಮ್ಮಾಡಿ, ಕುಂದಾಪುರ

ಸಪ್ತಪದಿ ಸಾರ್ಥಕಗೊಳಿಸಿದ ದಂಪತಿಗಳು

ಒಂದೇ ವೃತ್ತಿಯಲ್ಲಿರುವ ಹಲವು ಜೋಡಿಗಳ ಸಂದರ್ಶನವನ್ನು ಆಧರಿಸಿದ ಲೇಖನ

ಡಾ. ಟಿ.ಕೆ. ತಾಪಸ್

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಾಗೃತಗೊಳ್ಳುತ್ತ ನಡೆದಿರುವ ಭಾರತೀಯ ಸಮಾಜವು 'ವಿವಾಹ'ವೆಂಬ ಸಾಮಾಜಿಕ-ಧಾರ್ಮಿಕ ಸಂಸ್ಥೆಯನ್ನು ಸಹ ತೀವ್ರ, ತೀಕ್ಷ್ಣ ಪರೀಕ್ಷೆಗೊಡ್ಡಿದೆ. ವಿವಾಹ-ಜೋಡಿಗಳಾಯ್ಕೆಯಲ್ಲಿ ಸ್ವಂತಿಕೆ, ಸಂಪ್ರದಾಯ-ಸಂಕೋಲೆಗಳ ಸಡಿಲಿಕೆ, ವೈವಾಹಿಕ ಸಂಬಂಧಗಳು ಮಾನವ ಸಂಬಂಧಗಳ ಮೇಲೆ ಬೀರುತ್ತಿರುವ ಪರಿಣಾಮಗಳ ವಿಶ್ಲೇಷಣೆಯಿಂದ ದೊರೆತ ಕಟು ಅನುಭವಗಳ ಪುನರಾವರ್ತನೆಯಿಂದ ಬಚಾವಾಗುವ ಯತ್ನ, ಎಲ್ಲೆಡೆ ಕಂಡು ಬರುತ್ತಿದೆ.

'ತಂದು ಹಾಕಲು ಗಂಡು, ಮಾಡಿ ಹಾಕಲು ಹೆಣ್ಣು' ಎಂಬ ಜನಜನಿತ ನಂಬುಗೆಯನ್ನು ಹೊಸಕಿ ಹಾಕುವಂತೆ ಇಂದು ಗಂಡು-ಹೆಣ್ಣುಗಳ ಕರ್ತವ್ಯ-ಕ್ಷೇತ್ರಗಳಿಗಿದ್ದ 'ಲಕ್ಷ್ಮಣರೇಖೆ' ಮಸುಕಾಗುತ್ತಲಿದೆ. ಗಂಡು ತನ್ನ ಹೆಂಡತಿಯತ್ತ ನೋಡುವ ದೃಷ್ಟಿಕೋನವು ಬದಲಾಗುತ್ತಿದ್ದಂತೆಯೇ ಹೆಣ್ಣೂ ಸಹ ತನ್ನ 'ಅಡುಗೆ ಮನೆಯ ಅನಭಿಷಿಕ್ತ ರಾಣಿ' ಎಂಬ ವ್ಯಂಗ್ಯ ಭರಿತ ಬಿರುದಿನಿಂದ ಮುಕ್ತಿ ಪಡೆಯಲು ಸಮರ್ಥಳಾಗುತ್ತಿದ್ದಾಳೆ. ಅವಳಿಗೆ ಅಚ್ಚುಮೆಚ್ಚಿನದಾದ ಬಂಗಾರದಿಂದ ಮಾಡಿದ್ದಾದರೂ ಅವಳ ಸೀಮಿತ ಕಾರ್ಯ ಕ್ಷೇತ್ರವೊಂದು 'ಪಂಜರ'ವೆಂಬರಿವು ಅವಳಲ್ಲುಂಟಾಗಿದೆ. ಈ ಬದಲಾವಣೆಗಳಿಗೆಲ್ಲ ಹೆಚ್ಚುತ್ತಿರುವ ಶಿಕ್ಷಣಾವಕಾಶಗಳೇ ಕಾರಣ. ಕೋಣೆಯ ಕೂಸುಗಳಾಗಿ ಕೊಳೆಯುತ್ತಿದ್ದ ಗಂಡು-ಹೆಣ್ಣುಗಳು ಇಂದು ಓಣಿಯ ಕೂಸುಗಳಾಗಿ ಪ್ರಗತಿಗೊಳ್ಳಲು ಹೆಚ್ಚು ಹೆಚ್ಚು ಅವಕಾಶಗಳು ಪ್ರಾಪ್ತವಾಗುತ್ತಿರುವದು ಶುಭಸೂಚಕವೇ ಸರಿ.

ಧರ್ಮಾರ್ಥಕಾಮೇತ್ಯಾದಿಗಳಲ್ಲಿ ಒಬ್ಬರನ್ನೊಬ್ಬರು ಅತಿಕ್ರಮಿಸದಿರುವ 'ಏಳು ಹೆಜ್ಜೆಗಳ ಪ್ರತಿಜ್ಞೆಯನ್ನು ಅದರ ಮರ್ಮ ತಿಳಿಯದೇ ಗೈದು ಮರೆಯುತ್ತಿದ್ದ ಕಾಲವೊಂದಿತ್ತು. ಇಂದು ಸವಕಲಾದ ಆ ಪ್ರತಿಜ್ಞೆಯ ಬದಲು ನೈಜ ಸ್ವಾತಂತ್ರ್ಯ ಮಿತಿಗಳ ಗೊತ್ತುಪಡಿಸುವಿಕೆ ಸಾಕಾರಗೊಂಡಿದೆ, ಸ್ತ್ರೀ-ಪುರುಷರು ತಮ್ಮನ್ನು ಬದಲಾದ ಲೈಂಗಿಕ ಸಮೀಕರಣಗಳಿಗೆ, ಜಾಗತಿಕ ಸಾಮಾಜಿಕ ವಾತಾವರಣಕ್ಕೆ, ನವನವೀನ ಸುಸಂಧಿಗಳಿಗೆ ಒಡ್ಡಿಕೊಳ್ಳುವ ಮೂಲಕ.

ನಾಲ್ಕು ದಂಪತಿಗಳ ಸಂದರ್ಶನಾಧಾರಿತ ಈ ಲೇಖನದಲ್ಲಿ ಈ ಪರಿವರ್ತನೆಯ ಪರಿಣಾಮಗಳನ್ನು ವಿಶ್ಲೇಷಿಸಿ ನಿರ್ಧಾರಗಳನ್ನು ನಿಲುಕುವ ಪ್ರಯತ್ನ ಮಾಡಲಾಗಿದೆ. ನಿರ್ಧಾರಗಳ ಸ್ವೀಕಾರಾರ್ಹತೆಯನ್ನು ಹೆಚ್ಚಿಸಲು ಸಂದರ್ಶನಕ್ಕಾಗಿ ಆಯಲಾದ ದಂಪತಿಗಳನ್ನು ಪ್ರಾತಿನಿಧಿಕವಾಗುವಂತೆ ಯತ್ನಿಸಲಾಗಿದೆ. ಹೊರನಾಡಿನಿಂದ ಕರ್ನಾಟಕಕ್ಕೆ ಶಾಶ್ವತವಾಗಿ ವಲಸೆ ಬಂದ ಒಂದು, ಗಡಿನಾಡ ಕರ್ನಾಟಕ ಮೂಲದ ಒಂದು, ಕರ್ನಾಟಕದ 'ಗಂಡು ಮೆಟ್ಟಿದ' - ಉತ್ತರ ಕರ್ನಾಟಕದ ಎರಡು - ಹೀಗೆ ಒಟ್ಟು ನಾಲ್ಕು ಜೋಡಿಗಳನ್ನು ಸಂದರ್ಶಿಸಲಾಗಿದೆ.

ಎರಡು ಜೋಡಿಗಳ ಮಾತೃಬಾಷೆ ಮರಾಠಿಯಾದರೂ ಕರ್ನಾಟಕದಲ್ಲಿ ನೆಲೆಯೂರಿದ ಆ ಎರಡಕ್ಕೂ ಕನ್ನಡವಲ್ಲದೆ ಬೇರೆ ಬೇರೆ ಭಾಷೆಗಳ ಬಗೆಗೆ ಆದರಾಭಿಮಾನಗಳುಂಟು; ಇನ್ನೆರಡು ಜೋಡಿಗಳ ಮಾತೃಭಾಷೆ ಕನ್ನಡವಾದರೂ, ಆ ಕನ್ನಡದಲ್ಲಿಯೇ ಹಳೆ ಮೈಸೂರಿನ 'ಸೆರಗು ಕನ್ನಡ'ದ ಕಂಪಿನೊಡನೆ ಗಡಿನಾಡ ಕನ್ನಡದ ಸೊಗಡೂ ಸೇರಿ ಹೊಸದೊಂದು 'ಭಾಷಾ ಪರಿಮಳ' ರೂಪುಗೊಂಡದ್ದು; ಗಂಡು ಕನ್ನಡದ ಪೌರುಷಗಳನ್ನು ಕೆಲಕಾಲ ಆಂಧ್ರಪ್ರದೇಶದಲ್ಲೂ ಈಗ ಗಡಿನಾಡಿನಲ್ಲಿಯೂ ಪ್ರಸರಿಸುತ್ತಿರುವದು - ಭಾಷಾ ಭಾವೈಕ್ಯದ ದೃಷ್ಟಿಯಿಂದ ಗಮನಾರ್ಹವಾದುದು.

ಭಾರತೀಯರು ತಮಗಾಗಿ ತಾವೇ ನಿರ್ಮಿಸಿಕೊಂಡ ರಾಜ್ಯ ಘಟನೆಯು ಜಾರಿಯಲ್ಲಿ ಬಂದ ನಂತರದ ವರ್ಷಗಳಲ್ಲಿಯೇ ಜನಿಸಿದವರು ನಾಲ್ಕು ಜೋಡಿಗಳು. ಹೀಗಾಗಿ ಅವರೆಲ್ಲ ಹುಟ್ಟಿನಿಂದಲೇ ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡುತ್ತಿರುವವರು. ಪ್ರಗತಿಶೀಲ ವಿಚಾರಗಳನ್ನು ತಮ್ಮೊಡನೆ 'ತಮ್ಮವ' ಅಥವಾ 'ತಮ್ಮಾವಳಲ್ಲೂ' ಹುಟ್ಟುಹಾಕಲು ಬಹುಶಃ ಇದೇ ಬಲವಾದ ಪ್ರೇರಕ ಶಕ್ತಿಯಿರಬೇಕು. ಪರಸ್ಪರರ ಬೇಕು ಬೇಡಗಳನ್ನು, ಗುಣಾವಗುಣಗಳನ್ನರಿತು, 'ಹೊಂದಾಣಿಕೆಯ ಹರಿಗೋಲಿನಿಂದ' ಸಂಸಾರ ನೌಕೆ ಮುಗುಚದಂತೆ ಜಾಗ್ರತೆ ವಹಿಸುವ ಕಲೆಯನ್ನು ಕರಗತ ಮಾಡಿಕೊಳ್ಳಲು ಬೇಕಾದ ಕನಿಷ್ಠ ಮೂರರಿಂದ ಗರಿಷ್ಠ ಸುಮಾರು ಎರಡು ದಶಕಗಳ ದಾಂಪತ್ಯ ಜೀವನಾನುಭವ ಈ ಜೋಡಿಗಳಿಗೆ ದಕ್ಕಿದೆ. ಸಂದರ್ಶನದಲ್ಲಿ ಪರೋಕ್ಷವಾಗಿಯಾದರೂ ವೈವಾಹಿಕ ಸಂಬಂಧಗಳಲ್ಲಿಯ ಬಿರುಕುಗಳ ಬಗೆಗಿನ ಸಂಶಯ ಸುಳಿಯಲಿಲ್ಲ.

ಇಲ್ಲಿನ ಎಲ್ಲ ಗಂಡ-ಹೆಂಡತಿಯರಲ್ಲೂ 'ಶಿಕ್ಷಣ ಉತ್ತಮ ಜೀವನ ರೂಪಿಸಿಕೊಳ್ಳಲು ಸಹಾಯಕ' ಎಂಬ ಭರವಸೆ ಒಡೆದು ತೋರುತ್ತದೆ. ಸಾಮಾನ್ಯ ಶಿಕ್ಷಣದ ಜೊತೆಗೆ, ತಮ್ಮನ್ನು ಲಾಭದಾಯಕ ಜೀವನಕ್ರಮದತ್ತ ಕೊಂಡೊಯ್ಯುವ ಸಾಧನವಾದ ವೃತ್ತಿ ಶಿಕ್ಷಣದ ಬಗೆಗೂ ಅರಿವು ಮೂಡಿರುವದು ಸಂತೋಷ ತರುತ್ತದೆ. ಜೀವನವನ್ನು ನಮ್ಮ ಇಚ್ಛೆ ಅಭಿರುಚಿಗಳನುಸಾರ ನಿರ್ವಹಿಸಲು ಇಂಬುಗೊಡುವ ಹೊಸ ಹೊಸ ಪದವಿಗಳನ್ನು ಶ್ರಮವಹಿಸಿ ಪಡೆದ ಈ ದಂಪತಿಗಳು ವಾಣಿಜ್ಯ ಕ್ಷೇತ್ರಗಳಲ್ಲಿ ನೌಕರಿ, ವಾಣಿಜ್ಯ ವ್ಯವಹಾರ ಕ್ಷೇತ್ರ, ಶಿಕ್ಷಣ ವೃತ್ತಿ, ನ್ಯಾಯವಾದಿತ್ವಗಳಲ್ಲಿ ಭಾಗ ವಹಿಸುತ್ತಾ ಗೌರವಾನ್ವಿತ ಜೀವನ ಸಾಗಿಸುತ್ತಿದ್ದಾರೆ. ಇಬ್ಬರು ಮಹಿಳೆಯರು ಪ್ರಶಸ್ತಿ ಸಹಿತ ಪ್ರಥಮ ವರ್ಗದಲ್ಲಿ ಪದವಿಗಳಿಸಿದ್ದಾರೆ. ಅದೇ ರೀತಿ ಇಬ್ಬರು ಪುರುಷರೂ ಸಹ ತಮ್ಮ ವಿದ್ಯಾಲಯಗಳ ಸರ್ವೋತ್ಕೃಷ್ಟ ವಿದ್ಯಾರ್ಥಿಯಾಗಿ, ಪದವಿ ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯಕ್ಕೇ ಶ್ರೇಯಾಂಕ ಗಳಿಸಿದ್ದಾರೆ.

ಎಲ್ಲರೂ ಸ್ವಾವಲಂಬನೆಯ ಜೀವನ ವಿಧಾನವನ್ನು ನಂಬಿದ್ದಾರೆ; ವೈವಾಹಿಕ ಜೀವನದ ಸುಖ, ಆರ್ಥಿಕ ಭದ್ರತೆಯ ಗಳಿಕೆಯ ನಂತರವೇ ಎಂದು ಮನಗಂಡಿದ್ದಾರೆ. ಎಲ್ಲ ಜೋಡಿಗಳ ಸುಖಾನುಭವ-ತೃಪ್ತಿಗಳಿಗೆ ಇದು ಪ್ರಬಲ ಕಾರಣವೆಂಬಂತೆ ತೋರುತ್ತದೆ. ಆದರೆ ಸ್ತ್ರೀಗೆ ಸಹಜವಾದ ಶಿಶುಪಾಲನೆ, ಗೃಹಕೃತ್ಯಗಳಲ್ಲಿ ನಾಲ್ಕೂ

ಗೃಹಿಣಿಯರು ಆದ್ಯತೆ ಕೊಟ್ಟಿದ್ದಾರೆ. ಈ ದಿಶೆಯಲ್ಲಿ ಅವರು ಅಪೇಕ್ಷಿಸಿದ ಸಹಾಯ-ಸಹಕಾರಗಳು ತಮ್ಮ ಗಂಡಂದಿರಿಂದ ಅವರಿಗೆ ಲಭ್ಯವಾಗುತ್ತಿರುವುದು ದೇಶದಲ್ಲಿ ಬೀಸುತ್ತಿರುವ ಹೊಸ ಬಗೆಯ ಸಾಮಾಜಿಕ ಗಾಳಿಯ ಕುರುಹಾಗಿದೆ.

ಸಂದರ್ಶಿತ ದಂಪತಿಗಳೆಲ್ಲರೂ ಶಿಕ್ಷಣಕ್ಕೆ ನೀಡಿದ ಆದ್ಯತೆ ಅವರ ವಿಚಾರಧಾರೆಯನ್ನು ವಿಶಾಲವೂ, ವೈವಿಧ್ಯಮಯವೂ, ಸುಸಂಸ್ಕೃತವಾದುದನ್ನಾಗಿಯೂ ಮಾರ್ಪಡಿಸಿದುದು ಸ್ಫುಟವಾಗಿ ಕಂಡುಬರುತ್ತದೆ. ನಮ್ಮ ಧರ್ಮಾಚರಣೆಯಲ್ಲಿ ವಿಧಿ, ಪರಂಪರೆ, ಆಚಾರಣೆಗಳ ನಿಜವಾದ ಸತ್ವವನ್ನು ಅರಿಗಿಸಿಕೊಳ್ಳುವಲ್ಲಿ, ದಂಪತಿಗಳಲ್ಲಿ ಪರಸ್ಪರರ ಬಗೆಗಿರಬೇಕಾದ ಭಾವನೆಗಳ ತಿಳಿವಳಿಕೆಯಲ್ಲಿ, ಆದರ್ಶನಾಗರಿಕರಾಗಿ ದೇಶಕ್ಕೆ ಸಲ್ಲಬೇಕಾದ ಸೇವೆಯನ್ನು ಸಲ್ಲಿಸುವ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ, ಕುಟುಂಬದ ಇತರರ ಬಗೆಗೆ ಇಟ್ಟುಕೊಳ್ಳಬೇಕಾದ ಅಭಿಪ್ರಾಯ, ಸಲ್ಲಿಸಬೇಕಾದ ಸೇವೆಯ ಕುರಿತು ಮಾನವೀಯ ದೃಷ್ಟಿಕೋನವನ್ನು ಬೆಳೆಯಿಸಿಕೊಳ್ಳುವಲ್ಲಿ ಅವರು ಪಡೆದ ಶಿಕ್ಷಣ ಅವರಿಗೆ ಮಾರ್ಗದರ್ಶನ ನೀಡುತ್ತಿದ್ದುದರಿಂದ, ಅದು ಆದರ್ಶಪ್ರಾಯವೂ, ಅರ್ಥಪೂರ್ಣವೂ, ಅನುಕರಣೀಯವೂ ಆಗಿದೆ. ಸಂದರ್ಶನದಲ್ಲಿ ಪಾಲ್ಗೊಂಡವರ ಹೇಳಿಕೆಗಳಿಂದ ಇದು ವ್ಯಕ್ತವಾಗಿದೆ.

ಈಗ ವಿವಾಹವೆಂಬ ಸಮಾಜೋ-ಧಾರ್ಮಿಕ ವಿಧಿಯನ್ನೇ ತೆಗೆದುಕೊಳ್ಳಿ, ನಾಲ್ಕು ದಂಪತಿಗಳಲ್ಲಿ ಯಾರೂ ಪ್ರೇಮ ವಿವಾಹಕ್ಕೊಳಗಾಗಿಲ್ಲ. ಈ ಅರ್ಥದಲ್ಲಿ ಅವರೆಲ್ಲ 'ಅನ್‌ಫ್ಯಾಶನೆಬಲ್'. ವಧೂ-ವರರ ಅಭಿಪ್ರಾಯ ಗಣನೆಗೆ ತೆಗೆದುಕೊಂಡು ಅದನ್ನು ಗೌರವಿಸುವ, ಆದರೆ ಹಿರಿಯರಿಂದ ನಿಶ್ಚಿತವಾಗುವ ರೂಢಿಗತ ವಿವಾಹ ಪದ್ಧತಿಯನ್ನು ಅದು ಕೇವಲ 'ಹಳೆಯದು' ಎಂಬ ಕಾರಣಕ್ಕೆ ಅವರಾರೂ ತಿರಸ್ಕರಿಸಿಲ್ಲ. ಪರಿಶಿಷ್ಟ ವರ್ಗಕ್ಕೆ ಸೇರಿದ ಒಂದು, ಹಿಂದುಳಿದ ಸಮುದಾಯಕ್ಕೆ ಸೇರಿದ ಒಂದು, ಕೆಳಮಧ್ಯಮ ವರ್ಗದ ಮುಂದುವರಿದ ಪಂಗಡದ ಒಂದು, ಮಧ್ಯ ಮಧ್ಯಮ ವರ್ಗಕ್ಕೆ ಸೇರಿದ ಮುಂದುವರಿದ ಪಂಗಡದ ಇನ್ನೊಂದು - ಈ ನಾಲ್ಕು ಜೋಡಿಗಳೂ ಮೇಲೆ ವಿವರಿಸಿದ ಜಾಣತನ ಪ್ರದರ್ಶಿಸಿವೆ. ಗಂಡನು ಹೆಂಡತಿಗಿಂತ ದೊಡ್ಡವನೇ ಇರಬೇಕೆಂಬ ಅಥವಾ ಬಹಳೇ ದೊಡ್ಡವನಿರಬೇಕೆಂಬ ಗೊಡ್ಡು ಪರಂಪರೆಗೆ ಅವರು ಅಂಥ ಬೆಲೆಕೊಟ್ಟಿಲ್ಲ. ಹೆಂಡತಿಗಿಂತ ಚಿಕ್ಕವನಾದೊಡನೇ ಗಂಡ ಆಕೆಯ ತಮ್ಮನಾಗುವದಿಲ್ಲ ಎಂಬ ವ್ಯಾವಹಾರಿಕ ಜ್ಞಾನ ಅವರಲ್ಲಿ ಮೂಡಿದೆ. ದಶಕಗಳ ಹಿಂದಿನ ಭಾರತೀಯ ಕುಟುಂಬಗಳಲ್ಲಿ ದಾಖಲಾಗಿರುವ ಸದಸ್ಯರ ಹುಟ್ಟಿನ ವರ್ಷ ವಿವಿಧ ನಿರ್ಧಾರಗಳಿಗೊಳಪಡುತ್ತಿತ್ತು ಎಂಬುದು ಈ ಮನೆತನಗಳ ಹಿರಿಯರ ಅರಿವಿನಲ್ಲಿದ್ದುದರಿಂದಲೇ ಅವರೂ ಸಹ ಇಂಥ ಸಂಬಂಧಗಳಿಗೆ 'ಅಸ್ತು' ಎಂದಿರಬಹುದು. ದಂಪತಿಗಳಲ್ಲಿಯ ಅತಿ ಹೆಚ್ಚಿನ ವಯಸ್ಸಿನ ಅಂತರ ಎಂಟು ವರ್ಷಗಳಾದುದರಿಂದ ಪರಸ್ಪರರ ಬಗೆಗೆ ನಿಕಟವಾಗಿ, ಮುಕ್ತವಾಗಿ, ನಿರ್ಭಯವಾಗಿ ವಿಚಾರವಿನಿಮಯ ಸಾಧ್ಯವಾಗುತ್ತಿರುವುದು ಅವರವರ ಸದ್ಯದ ಪ್ರಗತಿಯ ವೇಗಕ್ಕೆ ಮುಖ್ಯ ಕಾರಣವಾಗಿರಬಹುದೆಂದೆನಿಸುತ್ತದೆ.

ತಮ್ಮ ಮಾತಾ ಪಿತೃಗಳ ಬಗೆಗೆ ದಂಪತಿಗಳಿಗೆ ಗೌರವವಿದೆ. ಅಂತೆಯೇ ತಂದೆ-ತಾಯಿಗಳೂ ಸಹ ದಂಪತಿಗಳಿಗೆ ಅವಶ್ಯಕ ಸ್ವಾತಂತ್ರ್ಯ ನೀಡಿದ್ದಾರೆ. ಹಾಗಾಗಿ ಇಡೀ ಕುಟುಂಬಕ್ಕೆ ಹೊಸದಾದ ಶಿಕ್ಷಣ ಕ್ಷೇತ್ರ, ಜೀವನ ವಿಧಾನಗಳನ್ನು ಆಯ್ದುಕೊಳ್ಳಲು ಅವರಿಗೆ ಸಾಧ್ಯವಾಗಿದೆ; ಅವರ ಆತ್ಮ ವಿಶ್ವಾಸ ವರ್ಧಿಸಿದೆ; ಯಶಸ್ಸು ಬಾಗಿಲು ತಟ್ಟಿದೆ. ಅಜ್ಜನ ಕೊನೆಯಾಸೆಯನ್ನು ಗೌರವಿಸಿ ಕಾನೂನು ಪರೀಕ್ಷೆ ಪಾಸು ಮಾಡಿದ, ನಿವೃತ್ತಿಯ ನಂತರ ನ್ಯಾಯವಾದಿಯಾಗಿ ಸೇವೆ ಸಲ್ಲಿಸಿ ಮನದಾಳದ ಬಯಕೆಯನ್ನು ಪೂರೈಸ ಬಯಸುವ ಉದ್ಯೋಗಸ್ಥ ಮಹಿಳೆ ಇಲ್ಲಿದ್ದಾಳೆ; ಯಶಸ್ವೀ ಜೀವನ ನಿರ್ವಹಿಸಲು ಅಗತ್ಯವಾದ ಸಹಾಯ ನೀಡಿದ ದೊಡ್ಡಪ್ಪನನ್ನು ಕೃತಜ್ಞತೆಯಿಂದ ಸ್ಮರಿಸುವ ಸದ್‌ಗೃಹಸ್ಥ ಇಲ್ಲಿದ್ದಾನೆ; ಮೂರು ದಶಕಗಳ ಹಿಂದೆಯೇ ಮುಂದುವರಿದ ಪಂಗಡದ ತಾಯಿ ಪರಿಶಿಷ್ಟರನ್ನೊಬ್ಬರನ್ನು ಬಾಳ ಸಂಗಾತಿಯನ್ನಾಗಿ ಆಯ್ದುಕೊಂಡು ಅಂದಿನ ಸಮಾಜವನ್ನು ಎದುರಿಸಿದುದಕ್ಕಾಗಿ ಅಭಿಮಾನ ಪಡುವ ಮಗಳಿದ್ದಾಳೆ; ದೈವದ ಬೆಂಬಲ, ಸಾಧು-ಸಂತರ ಆಶೀರ್ವಾದ, ಹಿರಿಯರ ಶುಭೇಚ್ಛೆ, ಅಲ್ಲದೆ ದಿನಕ್ಕೆ ಕನಿಷ್ಠ ಹತ್ತು ಗಂಟೆಗಳ ಕಠಿಣ ಪರಿಶ್ರಮ-ಇವು ತಮ್ಮ ಯಶಸ್ಸಿನ ಗುಟ್ಟು ಎಂಬ ವಿನೀತಭಾವವಿರುವ ಸ್ತ್ರೀ ಪುರುಷರಿದ್ದಾರೆ.

ದಂಪತಿಗಳಲ್ಲಿ ಪರಸ್ಪರರ ಬಗೆಗೆ ಗೌರವಾಭಿಮಾನಗಳಿವೆ. ತಮ್ಮ 'ಅಹಂ'ನ್ನು ತೊರೆದು ಜೀವನ ಸಂಗಾತಿಯ ಒಳ್ಳೆಯ ಗುಣಗಳನ್ನು ಎತ್ತಿತೋರಿಸುವ ವಿಶಾಲ ಮನಸ್ಸಿದೆ. ತಾವೂ ಮುಂದುವರೆಯುತ್ತ, ಸಂಗಾತಿಯನ್ನೂ ತಮ್ಮ ಸಹಾಯ, ಸಹಕಾರಗಳಿಂದ ಪ್ರಗತಿಯತ್ತ ಕೊಂಡೊಯ್ಯುವ ಮಾನವೀಯತೆಯಿದೆ. ಮಕ್ಕಳ ಲಾಲನೆ-ಪಾಲನೆ ಮೊದಲು, ಆರ್ಥಿಕ ಸಬಲತೆ, ಸ್ವಾತಂತ್ರ್ಯಗಳ ಗಳಿಕೆ ಆ ಮೇಲೆ ಎಂಬ ಕರ್ತವ್ಯ ಪ್ರಜ್ಞೆ ಇಬ್ಬರಲ್ಲೂ ಜಾಗೃತವಾಗಿದೆ. ಇಬ್ಬರಲ್ಲೂ ತನಗಿಂತ ತನ್ನ ಜೀವನ ಸಂಗಾತಿ ಹೆಚ್ಚು ಯಶಸ್ವಿ

ಗೆಳತಿ

ನಾ
ಬರೆಯುವ ಕವನ
ನೀ
ಮುಡಿಯುವ
ಮಲ್ಲಿಗೆಯಲ್ಲಿ ಅಡಗಿದೆ

- ಮೋನಪ್ಪ ಎಂ. ಕಳಸರ್

ಎಂದು ಮುಕ್ತವಾಗಿ ಒಪ್ಪಿಕೊಳ್ಳುವ ವ್ಯಕ್ತಿತ್ವ ಸುಧಾರಣಾಕಾಂಕ್ಷೆಯ ಉದಾತ್ತತೆಯಿದೆ. ಗಂಡನಿಗಿಂತಲೂ ನಾನು ಹೆಚ್ಚು ಪ್ರಮಾಣದಲ್ಲಿ 'ಪರ ಮೈತ್ರೀಭಾವ ಸಹಿತೆ'ಯೆಂದು ಹೇಳಿಕೊಳ್ಳುವ 'ಗಂಡೆದೆ' ಇದೆ. ಯಶಸ್ಸನ್ನು ಗಳಿಸಲು ಜೀವನ ಸಂಗಾತಿಯ ಮಾರ್ಗದರ್ಶನ, ಟೀಕೆ ಟಿಪ್ಪಣಿಗಳನ್ನು ಸ್ವೀಕರಿಸುವ ಮುಕ್ತ ಮನಸ್ಸಿದೆ.

ಇಲ್ಲಿ ಸಂದರ್ಶಿಸಿದ ದಂಪತಿಗಳು ಕೇವಲ 'ಪುಸ್ತಕದ ಹುಳು'ಗಳಲ್ಲ 'ಎನ್.ಸಿ.ಸಿ.'ಯಲ್ಲಿ, ಕ್ರೀಡಾ ಸ್ಪರ್ಧೆಗಳಲ್ಲಿ, ಕ್ರೀಡಾನಿರ್ಣಾಯಕರಾಗಿ; ಸಿದ್ಧ ಆಶುಭಾಷಣಕಾರರಾಗಿ; ಕಸೂತಿ-ಚಿತ್ರಕಲೆಗಳಲ್ಲಿ ಅವರ ಹೃನ್ಮನಗಳು ಪಕ್ವಗೊಂಡಿವೆ. ಪಾರಿತೋಷಕ ಪದಕಗಳನ್ನು ಅವರು ಈ ವೈವಿಧ್ಯಮಯ ರಂಗಗಳಲ್ಲಿ ಪಡೆದಿದ್ದಾರೆ. ಇಂಥ ಪಠ್ಯೇತರ ಚಟುವಟಿಕೆಗಳು ಅವರಿಗೆ ವ್ಯಾಪಕ ವಿದೇಶ ಸಂಚಾರದ ಅನುಭವ ನೀಡಿವೆ. ಇಂಥ ಸಾಧನೆಗಳಿಗೆ ಹೆಚ್ಚಾಗಿ ಮಹಿಳೆಯರು ಭಾಜನರಾಗಿರುವದು ಹೆಮ್ಮೆ ತರುತ್ತದೆ.

ಥಳುಕಿನ ಜೀವನಕ್ಕೆ ಅವರಲ್ಲಾರೂ ಮನಸೋತಿಲ್ಲ. ತಮಗೆ ಶಾಂತಿ, ಸಮಾಧಾನ, ತೃಪ್ತಿ ತಂದು ತಮ್ಮ ಜವಾಬ್ದಾರಿಗಳನ್ನು ನಿಭಾಯಿಸುವಷ್ಟು ಆದಾಯ ಗಳಿಸುವುದು ಅವರ ಗುರಿ. ತಮ್ಮ ಜೀವನಮಟ್ಟ ಕಾಯ್ದುಕೊಳ್ಳಲು ಅವರು ಮಿತಕುಟುಂಬಕ್ಕೆ ಶರಣು ಹೋಗಿದ್ದಾರೆ. ಸಮಾಜ ಸೇವೆಯನ್ನು ತಮ್ಮ ವೃತ್ತಿಯ ಗುರಿಯನ್ನಾಗಿಸಿಕೊಂಡಿರುವದಂತೂ ಸದ್ಯದ ಪರಿಸ್ಥಿತಿಯಲ್ಲಿ ಅಚ್ಚರಿ ಮೂಡಿಸುತ್ತದೆ.

ಅವರಲ್ಲಿ ತಮ್ಮ ಅತ್ತೆ-ಮಾವಂದಿರ ಸದ್ಗುಣಗಳನ್ನು ಎತ್ತಿ ತೋರಿಸುವ ಮನೋಭಾವವಿದೆ. ಮಕ್ಕಳ ವ್ಯಕ್ತಿತ್ವ ವಿಕಾಸ, ವಿದ್ಯಾಭ್ಯಾಸಗಳ ಬಗೆಗೆ ಕಳಕಳಿ, ಕಾಳಜಿ ಇದೆ. ಕಾಲಕಾಲಕ್ಕೆ ವೃತ್ತಿ ಜೀವನದಲ್ಲಿ ಅಪೇಕ್ಷಿಸಿದ ಯಶಸ್ಸು, ಬಡ್ತಿಗಳಿಂದಾಗಿ ತಮ್ಮ ಕಾರ್ಯದಲ್ಲಿ ತೃಪ್ತಿಯೂ, ಜೀವನದಲ್ಲಿ ಸಮಾಧಾನವೂ ದೊರಕಿದೆ.

ಮಮತಾ - ಆನಂದ್ ಖಾನಾಪುರಿ

ಮಮತಾರ ಜನ್ಮ ಚಿತ್ರದುರ್ಗದಲ್ಲಿ ೧೯೭೦ರಲ್ಲಿ. ಸುಮಾರ ಮೂರು ದಶಕಗಳ ಹಿಂದೆ ತಾಯಿ ಸುನಂದಮ್ಮ ಮತ್ತು ಚನ್ನವೀರಪ್ಪ ಪರಸ್ಪರರಿಗೊಲಿದು ಅಂತರ್‌ಜಾತೀಯ ವಿವಾಹಬಂಧನಕ್ಕೊಳಗಾದರು. ಪಿ.ಯು.ಸಿ.(ಸೈನ್ಸ್)ನಲ್ಲಿ ಶೇಕಡಾ ೮೮ರಷ್ಟು ಗುಣ ಪಡೆದ ಮಮತಾ ಚಿತ್ರದುರ್ಗ ಜಿಲ್ಲೆಗೇ ಮೊದಲಿಗರಾಗಿ ತೇರ್ಗಡೆ. ಮೈಸೂರು ವಿಶ್ವವಿದ್ಯಾಲಯದ ಇಲೆಕ್ಟ್ರಾನಿಕ್ಸ್ ಬಿ.ಇ.ಯಲ್ಲಿ ಶೇಕಡಾ ೭೫ ಗುಣಗಳನ್ನು ಪಡೆದು ತೇರ್ಗಡೆ. ೧೯೯೪ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನೇಮಕ. ಸದ್ಯ ಹುಬ್ಬಳ್ಳಿಯಲ್ಲಿ ವಾಸ. ಉಪನ್ಯಾಸ ಕೊಡುವುದರ ಜೊತೆಗೆ ವಿದ್ಯಾರ್ಥಿನಿ ನಿಲಯದ ಕ್ಷೇಮ ಪಾಲಕಿ ಸಹ.

೧೯೯೫ರಲ್ಲಿ ಆನಂದ್ ಖಾನಾಪುರಿಯವರೊಡನೆ ವಿವಾಹ. ೧ ವರ್ಷ ೭ ತಿಂಗಳ ಮಗು ಆಶಿತಾ (ಸಂತೃಪ್ತೆ)ಳ ಜವಾಬ್ದಾರಿ. ಮಾವ ದಿವಂಗತ. ಅತ್ತೆ ಸದಾ ಅಸ್ವಸ್ಥ ಸಮಸ್ಯೆಗಳುಂಟಾದಾಗಲೆಲ್ಲ ತಾಯಿಯ ಹತ್ತಿರ ಮಗುವನ್ನು ಬಿಟ್ಟಿರುವ ಪರಿಪಾಠ. ತಮ್ಮ, ತಂಗಿ, ಅಣ್ಣ ಎಲ್ಲರೂ ಉಚ್ಚ ಶಿಕ್ಷಣ ಪಡೆಯುತ್ತಿದ್ದಾರೆ. ಒಂದೇ ಸ್ಥಳದಲ್ಲಿ ದಂಪತಿಗಳ ವಾಸದಿಂದ ಖರ್ಚು ಉಳಿತಾಯ, ಕೆಲಸದ ಸಮಯ ಹೊಂದಾಣಿಕೆ, ಗಂಡನಿಂದ ಮಾರ್ಗದರ್ಶನ, ಸಹಾಯ-ಸಹಕಾರ ಲಭ್ಯ. ವೃತ್ತಿ, ಸೂಕ್ತ ವರ ಸಿಕ್ಕಿದುದಕ್ಕೆ ಸಹಾಯಕ. ಸಂಪ್ರದಾಯದಂತೆ ವಿವಾಹ. ತೃಪ್ತಿಕರ ದಾಂಪತ್ಯ ಜೀವನ.

ಆನಂದ್ ೩೬ ವರ್ಷದವರು. ಬೆಳಗಾವಿಯಲ್ಲಿ ಜನನ. ಕನ್ನಡ ಮಾತೃಭಾಷೆಯೊಡನೆ, ಮರಾಠಿ, ಹಿಂದಿ ತಿಳಿದಿದೆ. ಮೈಸೂರು ವಿಶ್ವವಿದ್ಯಾಲಯದ ಬಿ.ಇ. ಇಲೆಕ್ಟ್ರಾನಿಕ್ಸ್‌ದಲ್ಲಿ ದ್ವಿತೀಯ ವರ್ಗದಲ್ಲಿ ತೇರ್ಗಡೆ (೧೯೮೫). ದೊಡ್ಡ ಕುಟುಂಬದ ಹಲವರು ನಿರಕ್ಷಕರು. ಮೊದಲ ವರ್ಗದ ಗುತ್ತಿಗೆದಾರರಾದ ತಂದೆ ರಾಮಪ್ಪ ತಮ್ಮ ಸಹೋದರರ ಬಗ್ಗೆ ಶ್ರದ್ಧೆ ವಹಿಸಿ ಅವರನ್ನು ದೊಡ್ಡ ದೊಡ್ಡ ಹುದ್ದೆಗಳವರೆಗೂ ನಿಲುಕಿಸಿದರು. ಉಪಕೃತ ದೊಡ್ಡಪ್ಪ ಆನಂದ್‌ಗೆ ಆಸರೆಯಾದರು.

೧೯೮೫ರಲ್ಲಿ ಕುಟುಂಬದ ಸಮಸ್ಯೆಗಳನ್ನೆದುರಿಸಿ, ೧೯೮೬ರಿಂದ ೧೯೯೨ರ ವರೆಗೆ ಮುಂಬೈ ಬೆಂಗಳೂರುಗಳಲ್ಲಿ ಸೇವೆ ಸಲ್ಲಿಸಿ ೧೯೯೨ರಲ್ಲಿ ಆಯ್.ಎ.ಎಸ್. ತರಬೇತಿಗೆ ಆಯ್ಕೆಯಾಗಿದ್ದರೂ ಲೋಕಸೇವಾ ಆಯೋಗದಿಂದ ಉಪನ್ಯಾಸಕರಾಗಿ ಆಯ್ಕೆಯಾಗಿ ಸರ್ಕಾರಿ ಸೇವೆಗೆ ಸೇರ್ಪಡೆ. ಸದ್ಯ ಕಾರ್ಯನಿರ್ವಾಹಕ ವಿಭಾಗ ಮುಖ್ಯಸ್ಥ. ಹೆಂಡತಿ ವೃತ್ತಿಯಲ್ಲಿ ತಮಗಿಂತ



ದಕ್ಷ ಎಂದು ಹೇಳುವುದನ್ನು ಸಹೋದ್ಯೋಗಿಗಳು, ಪ್ರಾಚಾರ್ಯರು, ವಿದ್ಯಾರ್ಥಿನಿಯರು ಸಮರ್ಥಿಸುತ್ತಾರೆಂದು ಅಭಿಮಾನದಿಂದ ದೃಢಪಡಿಸಿದರು. ಈ ದಕ್ಷತೆ ಇನ್ನೂ ಬೆಳೆಯಲು ಮನೆಗೆಲಸಗಳನ್ನು ಹಂಚಿಕೊಳ್ಳುತ್ತಾರೆ, ಪ್ರೀತಿಯಿಂದ.

ಮೇಘನಾ - ದತ್ತಾತ್ರೇಯ ಹುರಳಿಕೊಪ್ಪ

೧೯೬೫ರ 'ಹುತಾತ್ಮರ ದಿನ'ದಂದು ಹುಬ್ಬಳ್ಳಿಯಲ್ಲಿ ಮೇಘನಾರ ಜನನ. ೧೯೮೩ರ ತನಕ ಬಿ.ಕಾಂ., ಎಲ್.ಎಲ್.ಬಿ. (ಸ್ಪೆಶಲ್) ಪದವಿಗಳ ಪ್ರಾಪ್ತಿ. ಸ್ನೇಹಮಯಿ, ಮಾತುಗಂಟಿ ಮೇಘನಾರಿಗೆ ಮಾತೃಭಾಷೆ ಕನ್ನಡವಲ್ಲದೆ, ಇಂಗ್ಲಿಷ್, ಮರಾಠಿ, ಹಿಂದಿಗಳಲ್ಲಿ ನಿರರ್ಗಳತೆ. ೧೯೮೫ರಲ್ಲಿ ಜೀವವಿಮಾ ನಿಗಮವನ್ನು ಸಹಾಯಕಿಯಾಗಿ ಸೇರಿದ ಮೇಘನಾಗೆ ೧೯೯೨ರಲ್ಲಿ ಹಿರಿಯ ದರ್ಜೆ ಸಹಾಯಕಳಾಗಿ ಬಡ್ತಿ.

ಹಾವೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಮೇಧಾವಿ ಯುವಕ ದತ್ತಾತ್ರೇಯರ ಪರಿಚಯ. ಮೇಘನಾ ಮೊದಲಿನಿಂದಲೂ ಸ್ವತಂತ್ರ ವಿಚಾರಶಕ್ತಿಯ ಪ್ರಿಯ ವ್ಯಕ್ತಿ. ದಿಟ್ಟೆಯೂ ಸಹ. ಎರಡೂ ಕಡೆಯ ಹಿರಿಯರೂ ದತ್ತಾತ್ರೇಯರವರ ಜನ್ಮ ದಾಖಲೆಯ ಅಧಿಕೃತತೆಯನ್ನು ನಿರ್ಲಕ್ಷಿಸಿದಾಗ, ಅವರನ್ನೇ ವರಿಸಲು ನಿರ್ಧಾರ. ಪರಸ್ಪರರನ್ನು ಅರಿತುಕೊಳ್ಳಲು ವೃತ್ತಿ ಸಹೋದ್ಯೋಗಿಗಳು ಸಹಾಯಕ. ರೂಢಿಗತ ವಿವಾಹ ಬಂಧನ, ೧೯೮೬ರಲ್ಲಿ. ಹನ್ನೆರಡು ವರ್ಷಗಳ ಗೃಹಸ್ಥ ಜೀವನದಲ್ಲಿ ಒಂದು ಗಂಡು ಮಗು.

ನೇರವಾಗಿ ತುಲನೆ ಅಸಾಧ್ಯವಾದ ಹುದ್ದೆಗಳಲ್ಲಿ ಶ್ರದ್ಧೆಯಿಂದ ಸೇವೆ ಸಲ್ಲಿಸುತ್ತಿರುವ ಇಬ್ಬರೂ ಯಶಸ್ವಿಗಳೆಂಬ ಅಭಿಪ್ರಾಯ. ಆದರೂ ನನ್ನವರಿಗಿಂತ ನಾನು ಹೆಚ್ಚು 'ಸೋಶಿಯೆಬಲ್' ಎಂದು ಧೈರ್ಯದಿಂದ ಬೆನ್ನು ತಟ್ಟಿಕೊಳ್ಳುತ್ತಾರೆ. ಕಾಲಕಾಲಕ್ಕೆ ದೊರಕಬೇಕಾದ ಬಡ್ತಿ ದೊರಕಿ ಸಂತೃಪ್ತಿಯ ಸೇವಾಜೀವನ ಸಾಧ್ಯ.

ಗಂಡ-ಹೆಂಡತಿ ಬೇರೆ ಬೇರೆ ಸ್ಥಳದಲ್ಲಿ ವಾಸ. ಆದುದರಿಂದ ಆರ್ಥಿಕ ಅನಾನುಕೂಲ. ಹುಬ್ಬಳ್ಳಿಯ ಸ್ವಂತ ಮನೆಯಲ್ಲಿ ಅತ್ತೆ-ಮಾವಂದಿರ ಅಕ್ಕರಾಸ್ತೆಯ ಸಹಾಯ, ಸಹಕಾರ, ಮಾರ್ಗದರ್ಶನ ಲಭ್ಯ. ಆಗಾಗ ಪತಿಯೊಡನೆ ಉದ್ಯೋಗಕ್ಕೆ ಸಂಬಂಧಿಸಿದ ಚರ್ಚೆ, ಮಾರ್ಗದರ್ಶನ ಸಾಧ್ಯ. ಕಳೆದ ೬ ವರ್ಷಗಳಿಂದ ಕುಟುಂಬದ ಜವಾಬ್ದಾರಿಗಳ ಯಶಸ್ವೀ ನಿರ್ವಹಣೆ.

ಅಜ್ಜನ ಇಚ್ಛೆಗನುಸಾರ ಎಲ್.ಎಲ್.ಬಿ. ಮಾಡಿದ ಮೇಘನಾಗೆ ನಿವೃತ್ತಿಯ ನಂತರ ನ್ಯಾಯವಾದಿಯಾಗಿ ಸೇವೆ ಸಲ್ಲಿಸಿ ಅಜ್ಜನ ಇನ್ನೊಂದು ಬಯಕೆಯನ್ನೂ ಸಫಲಗೊಳಿಸುವ ಮಹದಾಸೆ.

ದತ್ತಾತ್ರೇಯ ಹುರಳಿಕಟ್ಟಿ ನಿವೃತ್ತ 'ಸ್ಟೇಶನ್ ಮಾಸ್ತರ್' ಮಲ್ಹಾರಭಟ್ಟರ ಮಗ. ೧೯೫೯ರ



ಮೊದಲ ಜೂನ್‌ರಂದು ಶಿಗ್ಗಾಂವಿಯಲ್ಲಿ ಜನನ. ೨೦ ವರ್ಷಕ್ಕೆ ಪ್ರಶಸ್ತಿ ಸಹಿತ ಬಿ.ಎಸ್ಸಿಯಲ್ಲಿ ತೇರ್ಗಡೆ-ಪ್ರಥಮ ವರ್ಗದಲ್ಲಿ ಕಲಿಯುತ್ತಿದ್ದ ಗದುಗಿನ ಜೆ.ಟಿ. ಕಾಲೇಜಿನ ಸರ್ವೋತ್ಕೃಷ್ಟ ವಿದ್ಯಾರ್ಥಿ. ಎನ್.ಎಸ್.ಎಸ್.ನಲ್ಲೂ ಸಹ ಹೆಸರು ಮಾಡಿದರು. ಅಮಿತ ಭಾಷಾ ಪ್ರೇಮದಿಂದಾಗಿ ಮಾತೃಭಾಷೆ ಕನ್ನಡವಲ್ಲದೆ, ಇಂಗ್ಲಿಷ್, ಹಿಂದಿ,



ಮರಾಠಿ, ತೆಲುಗುಗಳಲ್ಲಿ ಪ್ರಾವೀಣ್ಯ.

ಸಹಾಯಕರಾಗಿ ೧೯೮೧ರಲ್ಲಿ ಭಾರತೀಯ ಜೀವ ವಿಮಾ ನಿಗಮ ಸೇರಿದ ದತ್ತಾತ್ರೇಯರೀಗ ಎರಡು ಬಡ್ತಿಗಳಾಚೆಯ 'ಆಡಳಿತಾಧಿಕಾರಿ' (ಮಾರುಕಟ್ಟೆ ವಿಭಾಗ)ಯಾಗಿ ಬೆಳಗಾವಿಯಲ್ಲಿ ಸೇವೆಯಲ್ಲಿ. ಹೆಂಡತಿಯಿಂದ ಜವಾಬ್ದಾರಿ ಹೊರುವದಾಗಿ ಆಶ್ವಾಸನೆ ಪಡೆದೇ ಬಡ್ತಿಯ ಮೇಲೆ ದೂರದ ಹೈದರಾಬಾದಿಗೆ ಪ್ರಯಾಣ. ಅವಳ ದಕ್ಷತೆ ಕರ್ತವ್ಯ ಪ್ರಜ್ಞೆಗಳ ಬಗ್ಗೆ ಮುಕ್ತಕಂಠದ ಪ್ರಶಂಸೆ. ದತ್ತಾತ್ರೇಯ ಮಿತಭಾಷಿ. ಕೆಲಸದಲ್ಲಿ ಅಪರಿಮಿತ ಶ್ರದ್ಧೆ. 'ಏನಾದರೂ ಆಗು, ಮೊದಲು ಮಾನವನಾಗು' ಎಂಬ ತತ್ವಕ್ಕೆ ಸೇವೆಯಲ್ಲೂ ಆದ್ಯತೆ. ಆದುದರಿಂದಲೇ ಏಕಕಾಲಕ್ಕೆ ವರಿಷ್ಠರಿಗೂ ಕಿರಿಯರಿಗೂ ಆತ್ಮೀಯರಾಗಿ ವೃತ್ತಿ ಯಶಸ್ಸಿನಿಂದ ಬೀಗುತ್ತಿರುವ ದತ್ತಾತ್ರೇಯರ ದೃಷ್ಟಿಯಲ್ಲಿ ಯಶಸ್ಸಿನ ಮಾನದಂಡ ಆಳು-ಕಾಳು, ಕಾರು, ಟೆಲಿಫೋನ್, ಬಂಗ್ಲೆಗಳಲ್ಲ. ಎಲ್ಲರ ಹಿತ ಬಯಸುವ ತಮ್ಮ ಮಿತಕುಟುಂಬದ ಸದಸ್ಯರೆಲ್ಲರ ಬಗೆಗೂ ಅವರಿಗೆ ಅಭಿಮಾನ.

ರಾಧಿಕಾ - ವಿನಾಯಕ್ ಗೋಖಲೆ

ರಾಧಿಕಾಗೆ ಈಗ ೩೯ ವರ್ಷ. ಮಹಾರಾಷ್ಟ್ರದಲ್ಲಿರುವ ಕೊಲ್ಹಾಪುರದಲ್ಲಿ ೧೯೫೯ರಲ್ಲಿ ಜನ್ಮ. ಮೂಲತಃ 'ಕಾನ್ಹೇರೆ'ಯವರು. ತಂದೆ ಸುಂಕದ ಇಲಾಖೆಯಲ್ಲಿ 'ಸಹಾಯಕ ಕಲೆಕ್ಟರ್'. ಪುಣೆ ವಿಶ್ವವಿದ್ಯಾಲಯದ ಬಿ.ಎ. (ಆನರ್ಸ್) ಪದವಿ ಮನಃಶಾಸ್ತ್ರ, ಸಮಾಜಶಾಸ್ತ್ರ, ತತ್ವಜ್ಞಾನಗಳಲ್ಲಿ. ಮಾತೃಭಾಷೆ ಮರಾಠಿಯ ಜೊತೆಗೆ ಇಂಗ್ಲಿಷ್, ಹಿಂದಿ ಸಂಪರ್ಕ. ೧೯೮೪ರಲ್ಲಿ ಗಂಡನೊಡನೆ ಹುಬ್ಬಳ್ಳಿಗೆ ನೆಲೆಸಲು ಬಂದ ನಂತರ ಈಗ ಚನ್ನಾಗಿ ಸ್ಥಳೀಯ ಕನ್ನಡ ಮಾತನಾಡುತ್ತಾರೆ. ೧೯೮೦ರಲ್ಲೇ ಸಾಂಪ್ರದಾಯಿಕ ಪದ್ಧತಿಯ ವಿವಾಹ. ಈಗ ೧೫ ವರ್ಷದ ಮಗಳು ಹಾಗೂ ೧೦ ವರ್ಷದ ಮಗ. ಅವರು ಚಿಕ್ಕವರಿದ್ದಾಗ ಸಂಪೂರ್ಣ ಲಕ್ಷ್ಯ ಅವರ ಲಾಲನೆ ಪಾಲನೆಯಲ್ಲಿ, ಮನೆ ವಾರ್ತೆಯಲ್ಲಿ ಲೀನ. ಈಗಲೂ ಸಹ ಮಕ್ಕಳು ಶಾಲೆಗೆ ಹೋದ ಸಮಯದಲ್ಲಿ ಮಾತ್ರ ವ್ಯವಹಾರದಲ್ಲಿ ತೊಡಗಿಕೊಂಡಿರುತ್ತಾರೆ. ಎಂ.ಎಸ್.ಡಬ್ಲ್ಯೂಗೆ ಸವೆಸಿದ ಎರಡು ವರ್ಷಗಳು, ಪದವಿ ಶಿಕ್ಷಣ, ಸುತ್ತಲಿನ ಜನಜೀವನದ ಬಗೆಗೆ ಆಕರ್ಷಣೆ ತಂದಿದೆ.

ಕಳೆದ ೧೨ ವರ್ಷಗಳಿಂದಲೂ ಕಿರ್ಲೋಸ್ಕರ್ ಎಂಜಿನ್‌ಗಳ ಸುಸ್ಥಿತಿ ಕಾಪಾಡುವ ವಾಣಿಜ್ಯ ಸಂಸ್ಥೆಯೊಂದರ ಪಾಲುಗಾರ್ತಿ, ಈ ತರಹದ ವ್ಯವಹಾರದಲ್ಲಿ ಅಖಿಲ ಭಾರತದಲ್ಲಿ ಇವರು ಒಬ್ಬಳೇ ಮಹಿಳೆ. ವ್ಯವಹಾರದ ಯಶಸ್ಸು ಇನ್ನೂ ಮೂರು ಶಾಖೆಗಳನ್ನು ತೆರೆಯುವಲ್ಲಿ ಪರ್ಯವಸಾನ. ಮೂವತ್ತು ಡಿಪ್ಲೊಮಾ ಧಾರಕರಿಗೆ ಉದ್ಯೋಗ; ಸಾಕಷ್ಟು ಸಂಖ್ಯೆಯ ಆಡಳಿತ ಸಿಬ್ಬಂದಿಗೆ ಸಹ. ಸರಳ ಜೀವನ; ಹಸನ್ಮುಖ ನಿಲುವು ಇವರ ಬಂಡವಾಳ. ''ನಾನು ಹಿಂಜರಿಕೆಯ ಸ್ವಭಾವದವಳು ಆದರೆ ಗಂಡನ ಉತ್ತೇಜನ, ಮಾರ್ಗದರ್ಶನದ ಆತ್ಮವಿಶ್ವಾಸ ಕುದುರಿಸಿದೆ'' ಎಂದರು. ತಮ್ಮ 'ಪ್ರಾವಿಡೆಂಟ್ ಫಂಡ್'ನ್ನೇ ಬಂಡವಾಳ ಮಾಡಿಕೊಂಡು ವ್ಯವಹಾರ ಪ್ರಾರಂಭಿಸಿದ ಗಂಡನ ಸಾಹಸ ಪ್ರವೃತ್ತಿಯ ಬಗೆಗೆ ಅಪಾರ ಅಭಿಮಾನ. ಪತಿಯದು 'ಮಧ್ಯಮ ವರ್ಗ' ಎಂಬುದರ ಬಗೆಗೆ ಹೆಮ್ಮೆ. 'ಬಿಸಿನೆಸ್'ಗೆ ಅಪರಿಚಿತವಾದ ತಮ್ಮ ಕುಟುಂಬ



ವರ್ಗದವರಿಗೆಲ್ಲ ಇವರ ಯಶಸ್ಸಿನಿಂದ ಅಚ್ಚರಿ.

ವಿನಾಯಕ ಗೋಖಲೆ ರತ್ನಗಿರಿಯಲ್ಲಿ ೧೯೫೪ರಲ್ಲಿ ಹುಟ್ಟಿದರು. ವಾಣಿಜ್ಯ ವಲಯಗಳಲ್ಲಿ 'ಮೋಹನ' ಎಂದೇ ಪರಿಚಿತ. ೧೯೭೪ರಲ್ಲಿ ಪುಣೆ ವಿಶ್ವವಿದ್ಯಾಲಯದಲ್ಲಿ ಬಿ.ಕಾಂ. ಉತ್ತೀರ್ಣ. ನಂತರದ ೯ ವರ್ಷ 'ಕಿರ್ಲೋಸ್ಕರ್ ಆಯಿಲ್ ಎಂಜಿನ್ಸ್' ಸಂಸ್ಥೆಯಲ್ಲಿ ಮಾರುಕಟ್ಟೆಯ ವ್ಯವಸ್ಥಾಪಕ ಹುದ್ದೆಯಲ್ಲಿ ಯಶಸ್ವಿ. ಅದರ ಕಾರಣ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಕರ್ನಾಟಕ, ತಮಿಳುನಾಡು, ಕೇರಳದಲ್ಲಿ ವಾಸ್ತವ್ಯ, ನಿರಂತರ ಸಂಚಾರ. ಇದರ ಫಲ ತಮಿಳು, ಮಲೆಯಾಳಂ, ಕನ್ನಡ, ಹಿಂದಿ, ಇಂಗ್ಲಿಷು ಭಾಷೆಗಳಲ್ಲಿ ಪ್ರೀತಿ. ಮನೆ ಮಾತು ಮರಾಠಿ.

೧೯೮೪ರಲ್ಲಿ ಕಂಪನಿಗೆ ಇವರ ಕಣ್ಣುಕುಕ್ಕುವ ಯಶಸ್ಸು ತಿಳಿದು ಕಿರ್ಲೋಸ್ಕರ ಎಂಜಿನ್‌ಗಳ ಪ್ರಾದೇಶಿಕ ಹಂಚಿಕೆದಾರರಾಗಿ ಆಯ್ಕೆ ಹಾಗೂ ಹುಬ್ಬಳ್ಳಿಯಲ್ಲಿ ಸ್ಥಾಯಿ ಜೀವನ. ತಮ್ಮ ಯಶಸ್ಸು ಅನಿರೀಕ್ಷಿತವಲ್ಲ ಎಂಬ ಆತ್ಮ ವಿಶ್ವಾಸ. ಹೆಂಡತಿಯೂ ಸಹ ಯಶಸ್ವಿ ಆಗಿಯೇ ಆಗುತ್ತಾಳೆಂಬ ಭರವಸೆ. ಅದು ನಿಜವಾದದ್ದು ತಿಳಿದು ಹೆಮ್ಮೆ. ಇಬ್ಬರೂ ಪ್ರತಿದಿನ ಕನಿಷ್ಠ ಹತ್ತು ತಾಸುಗಳ ಪರಿಶ್ರಮದಲ್ಲಿ ಮಗ್ನ.

ರಾಧಿಕಾರ ಜೀವನೋತ್ಸಾಹ ಅಪರಿಮಿತ. ಅವರು 'ನೆಟ್ ಬಾಲ್'ನಲ್ಲಿ ಅಖಿಲ ಭಾರತ 'ರೆಫರಿ'. ಹ್ಯಾಂಡ್‌ಬಾಲ್, ಹಾಕಿ ಕ್ರೀಡೆಗಳಲ್ಲಿ ಮಹಾರಾಷ್ಟ್ರ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಯುರೋಪ್, ಚೀನಾ, ಆಸ್ಟ್ರೇಲಿಯಾ ಪ್ರವಾಸ ಮಾಡಿದ್ದಾರೆ. ಗಂಡನೊಡನೆ ಅಮೇರಿಕೆಗೆ ತೆರಳಲು ಯೋಜಿಸುತ್ತಿದ್ದಾರೆ. ನಟನೆ, ಪೇಂಟಿಂಗ್, ಕಸೂತಿಗಳಲ್ಲೂ ಹೇಳಿಕೊಳ್ಳಬಹುದಾದ ಸಾಧನೆ.

ವಾಣಿಜ್ಯ-ವ್ಯವಹಾರ ಎರಡೂ ಕುಟುಂಬಗಳಿಗೂ ಅಪರಿಚಿತವಾಗಿದ್ದರೂ ಸಹ ಗಂಡ-ಹೆಂಡತಿ ಇಬ್ಬರೂ ತಮ್ಮ ತಮ್ಮ ವ್ಯವಹಾರ ಕ್ಷೇತ್ರಗಳಲ್ಲಿ ತೃಪ್ತಿ ತರುವ ಯಶಸ್ಸು ಪಡೆದಿರುವದು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ಆದರೆ ಈ ಯಶಸ್ಸಿನಿಂದ ಅವರ ತಲೆ ತಿರುಗಿಲ್ಲ. ಕಠಿಣ ಪರಿಶ್ರಮ ಗೈಯಲು ಇತರನೇಕರಿಗೆ ಸಾಧ್ಯವಿರಬಹುದು. ಆದರೆ ಯಶಸ್ಸಿಗೆ ಅದೊಂದೇ ಕಾರಣವಿರಲಾರದು. ತಮ್ಮ ಯಶಸ್ಸಿಗೆ ಶ್ರೀ ಬ್ರಹ್ಮಚೈತನ್ಯರ ಆಶೀರ್ವಾದ, ಹಿರಿಯರ ಶುಭೇಚ್ಛೆ, ದೈವದ ಬೆಂಬಲಗಳೇ ಮುಖ್ಯ ಕಾರಣ ಎಂಬ ವಿರಳ ವಿನೀತಭಾವ.


ನಂದಾ - ಮಂಜುನಾಥ್ ಮಾಳವದೆ

ನಲವತ್ತೊಂದು ವರ್ಷದ ನಂದಾ ಮಹೀಂದ್ರಕರ್ ಹುಬ್ಬಳ್ಳಿಯಲ್ಲಿ ಜನಿಸಿದರು. ಅವರು ಧಾರವಾಡದವರು. ೧೯೭೭ರಲ್ಲಿ ಮನಃಶಾಸ್ತ್ರದಲ್ಲಿ ಬಿ.ಎ. ಪ್ರಶಸ್ತಿ ಸಹಿತ ಪ್ರಥಮ ವರ್ಗದಲ್ಲಿ ಪಾಸು. ಮೂರು ವರ್ಷಗಳ ತರುವಾಯ ಎಲ್.ಎಲ್.ಬಿ. (ಸ್ಪೆಶಲ್) ಪದವಿ.



ಎರಡೂ ಕರ್ನಾಟಕ ವಿಶ್ವವಿದ್ಯಾಲಯದಿಂದ. ಮನೆ ಮಾತು ಮರಾಠಿ. ನ್ಯಾಯಾಲಯಗಳಲ್ಲಿ ಅಗತ್ಯವಾದ ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿಯೂ ಪ್ರೌಢಿಮೆ. ವಿವಾಹಕ್ಕೆ ನೇರವಾಗಿ ಕಾರಣವಲ್ಲದ ನ್ಯಾಯವಾದಿ ವೃತ್ತಿಯಲ್ಲಿ ಕಳೆದ ೧೮ ವರ್ಷಗಳಿಂದಲೂ ತೊಡಗಿಸಿಕೊಂಡಿದ್ದಾರೆ. ಇವರ ನ್ಯಾಯಾವಾದಿತ್ವ ನೋಡಿ ಮೆಚ್ಚಿದ ಮತ್ತು ಮಡದಿಯೂ ನ್ಯಾಯವಾದಿಯೇ ಆಗಿರಬೇಕೆಂಬ ಮಂಜುನಾಥರ ಬಯಕೆಯಂತೆಯೇ ತಮ್ಮದೂ ಆಗಿದ್ದುದರಿಂದ ೧೯೮೪ರಲ್ಲಿ 'ಕಂಕಣಬಲ'. ಹಿರಿಯರೇ ನಿಂತು ಪೂರೈಸಿದ ಮದುವೆ. ೧೪ ವರ್ಷಗಳ ಸಾಂಸಾರಿಕ ಜೀವನದಲ್ಲಿ ಒಬ್ಬ ಮುದ್ದು ಮಗಳು; ತೃಪ್ತಿ ಹೊಂದಿದ ಸಂಸಾರ. ನ್ಯಾಯಾಲಯದ ಎಲ್ಲ ಕೆಲಸಗಳಲ್ಲೂ ಪತಿಯೊಡನೆ ಸಹಭಾಗಿ. ಇದರಿಂದ ವೃತ್ತಿಯಲ್ಲಿ ಚರ್ಚೆ, ವಿಭಜಿತ ಜವಾಬ್ದಾರಿ, ಹೊಂದಾಣಿಕೆ ಸಾಧ್ಯ.

ಸ್ವಾವಲಂಬನೆ, ಕಷ್ಟಗಳಿಗೆ ಎದೆಗೊಡುವದು, ಸಾದಾ ಜೀವನ ಈ ಕುಟುಂಬದ ಮುಖ್ಯ ಲಕ್ಷಣಗಳು. ಮಗಳು ಶಾಲೆಗೆ ದಾಖಲಾಗುವ ತನಕ ನಂದಾ ಲಾಲನೆ-ಪಾಲನೆ, ಮನೆ ವಾರ್ತೆಗಳಲ್ಲಿ ಮಗ್ನ. ನಂತರ ವೃತ್ತಿ ಪ್ರವೇಶ.



ಮಗಳು ಶಾಲೆಯಲ್ಲಿರುವ ವೇಳೆಯಲ್ಲಿ ವೃತ್ತಿಕಾರ್ಯ. ನಂತರ ಮಗಳ ಶಿಕ್ಷಣ, ಗಂಡನ ಬೇಕು ಬೇಡಗಳತ್ತ ಗಮನ. ತಮ್ಮ ಜ್ಞಾನಾನುಭವಗಳ ಸದುಪಯೋಗವಾಗಬೇಕೆನ್ನುವ ಮಹದಾಸೆ. ವೃತ್ತಿಯಲ್ಲಿ ಹಣಗಳಿಕೆಗೆ ಆದ್ಯತೆಯಿಲ್ಲ. ಗತಿ ಹೀನ ಮಹಿಳೆಯರಿಗೆ ಪುಕ್ಕಟೆ ಕಾನೂನು-ಮಾರ್ಗದರ್ಶನ. ಬಡವರಿಂದ ನೈಮಿತ್ತಿಕ ಹಣ ಸಂಗ್ರಹ. ವೃತ್ತಿಯ ಮೂಲಕ ಅಳಿಲು ಸಮಾಜ ಸೇವೆಯ ಹೊಳಹು ಶಾಲೆಯ ದಿನಗಳಲ್ಲಿ ನಿರಂತರ ಪಾಲ್ಗೊಳ್ಳುತ್ತಿದ್ದ ಆಶುಭಾಷಣಗಳಿಂದ ಮೊಳಕೆಯೊಡೆದದ್ದು.

ಮಂಜುನಾಥ್ ಮಾಳವದೆ ಹುಟ್ಟಿದ್ದೂ ಹುಬ್ಬಳ್ಳಿಯಲ್ಲಿಯೇ ನಲವತ್ತೆರಡು ವರ್ಷಗಳ ಹಿಂದೆ. ೧೯೭೫ರಲ್ಲಿ ಬಿ.ಕಾಂ. ಪಾಸು ಮಾಡಿದ ಅವರು ೧೯೮೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಎಲ್.ಎಲ್.ಬಿ. (ಸ್ಪೆಶಲ್) ಯನ್ನು ಪ್ರಥಮ ವರ್ಗ ಮತ್ತು ದ್ವಿತೀಯ ಶ್ರೇಯಾಂಕದೊಂದಿಗೆ ಪ್ರತಿಭಾಪೂರ್ಣವಾಗಿ ಪೂರೈಸಿದರು. ಮರಾಠಿ ಅವರ ಮಾತೃಭಾಷೆಯಾದರೂ ಉರ್ದು, ಹಿಂದಿ, ಕನ್ನಡ, ಇಂಗ್ಲಿಷ್‌ಗಳಲ್ಲಿ ಪರಿಣತಿಯಿದೆ. ಸ್ಥಳೀಯ ಕಾನೂನು ಮಹಾವಿದ್ಯಾಲಯದಲ್ಲಿ ಕಳೆದ ೮ ವರ್ಷಗಳಿಂದಲೂ ಗೌರವ ಪ್ರಾಧ್ಯಾಪಕರಾಗಿದ್ದಾರೆ. ಎಲ್.ಎಲ್.ಎಂ. ಪರೀಕ್ಷೆಯ ಹಾಜರಾತಿಯನ್ನು ಪೂರ್ಣಗೊಳಿಸಿದ್ದಾರೆ. ೧೯೮೨ರಿಂದ ಹುಬ್ಬಳ್ಳಿ ನ್ಯಾಯಕ್ಷೇತ್ರದಲ್ಲಿ ಜನಪ್ರಿಯ ನ್ಯಾಯವಾದಿಗಳಾಗಿದ್ದಾರೆ.

ಇಬ್ಬರು ಕಿರಿಯ ನ್ಯಾಯವಾದಿಗಳ ಸಹಾಯ, ಗೃಹಿಣಿಯ ಸಹಕಾರದೊಂದಿಗೆ ಮುನ್ನಡೆಯುತ್ತಿದ್ದಾರೆ. ಕರ್ತವ್ಯಗಳ ಹಂಚಿಕೆಯೊಡನೆ ಮುಕ್ತ ಚರ್ಚೆಯ ಮೂಲಕ ಪರಸ್ಪರ ವೃತ್ತಿ ದಕ್ಷತೆಯ ಬೆಳವಣಿಗೆ ಸಾಧ್ಯವಾಗುತ್ತಲಿದೆ. ಸ್ವಾವಲಂಬನೆ, ಕಷ್ಟ ಸಹಿಷ್ಣುತೆಯ ಫಲವಾದ ವೃತ್ತಿಯಶಸ್ಸು ಇವರಿಗೆ ತೃಪ್ತಿ ತಂದಿದೆ. ಹೆಂಡತಿಯ ತ್ಯಾಗ, ಸಹಕಾರಗಳನ್ನು ನೆನೆಯುವ ದೊಡ್ಡ ಮನಸ್ಸಿನವರು.

ಮಂಜುನಾಥರು ಅಂತರ ಮಹಾವಿದ್ಯಾಲಯ ಭಾಷಣ ಕೂಟಗಳಲ್ಲಿ, ಆಕಾಶವಾಣಿಯಲ್ಲಿ ಭಾಷಣಗಳ ಮೂಲಕ ಮಿಂಚಿದ್ದಾರೆ. ನ್ಯಾಯವಾದಿಗಳಿಗಾಗಿರುವ ಕ್ರೀಡಾ ಹಾಗೂ ದೈಹಿಕ ಕೂಟಗಳಲ್ಲಿ ಬಂಗಾರ ಪದಕ ಗಳಿಸಿದ್ದಾರೆ. ರಂಗನಟರೂ ಅಹುದು. 'ಕೈ ಕೆಸರಾದರೆ ಬಾಯಿ ಮೊಸರು' ಎಂಬುದರ ಪ್ರಸ್ತುತತೆಯನ್ನು ದಂಪತಿಗಳು ತಮ್ಮ ಸಂಘರ್ಷ ಪೂರ್ಣ ಬದುಕಿನ ಮೂಲಕ ಸಾಕಾರಗೊಳಿಸಿದ್ದಾರೆ.

ಬೆಂಗಳೂರಿನ ವಕೀಲ ದಂಪತಿ

ಸುನೀತಾ ಗಣಪತಿ

ಪತಿ-ಪತ್ನಿಯರಿಬ್ಬರೂ ಒಂದೇ ವೃತ್ತಿಯಲ್ಲಿದ್ದು ಸಾಂಸಾರಿಕ ಜೀವನದಂತೆ ವೃತ್ತಿ ಜೀವನವನ್ನೂ ಒಟ್ಟಾಗಿ ನಡೆಸುವ ದಂಪತಿಗಳನ್ನು ಭೇಟಿ ಮಾಡಿ ಅವರ ಅನುಭವಗಳನ್ನು ಹಂಚಿಕೊಳ್ಳಬೇಕೆಂದುಕೊಂಡಾಗ ನನಗೆ ಲಭ್ಯವಾದವರು ಬೆಂಗಳೂರಿನ ವಕೀಲ ದಂಪತಿ ಶ್ರೀಪಾದ ಮತ್ತು ಪ್ರಣತಿಯವರು. ಶ್ರೀಪಾದರವರು ಶಿವಮೊಗ್ಗಕ್ಕೆ ಹತ್ತಿರದ ಕೃಷಿಕ ಕುಟುಂಬವೊಂದರಿಂದ ಬಂದಿದ್ದು ವಕೀಲ ವೃತ್ತಿಗೆ ಹೊಸಬರು. ಪ್ರಣತಿಯವರು ಬೆಂಗಳೂರಿನವರೇ ಆಗಿದ್ದು ವಕೀಲ ಕುಟುಂಬದಿಂದ ಬಂದವರು. ತಂದೆ ರಾಂಭಟ್‌ರವರು ವಕೀಲ ವೃತ್ತಿ ನಡೆಸುತ್ತಿದ್ದರೆ ತಾಯಿ ವಿಜಯಲಕ್ಷ್ಮಿ ರಾಂ ಭಟ್‌ರವರು ರಾಜಕಾರಣದಲ್ಲಿ ನುರಿತವರು.

ಈ ವಕೀಲ ದಂಪತಿಗಳನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಒಂದೇ ಪ್ರಶ್ನೆಯನ್ನು ಇಬ್ಬರ ಮುಂದೆ ಇಟ್ಟಾಗ ಬಂದ ಉತ್ತರಗಳಿವು:

ಪ್ರಶ್ನೆ : ನೀವು ವಕೀಲ ವೃತ್ತಿಗೆ ಬರಲು ಕಾರಣವೇನು?

ಶ್ರೀಪಾದ : ನಾನು ಬಯಸಿ ಈ ವೃತ್ತಿಗೆ ಇಳಿಯಲಿಲ್ಲ. ಬದುಕಿನ ಅವಶ್ಯಕತೆ ನನ್ನನ್ನು ಇಲ್ಲಿಗೆ ತಂದಿತು.

ಪ್ರಣತಿ : ನಮ್ಮ ತಂದೆ ವಕೀಲರಾದ್ದರಿಂದ ನಾನೂ ವಕೀಲಳಾಗಬೇಕೆಂಬುದು ಅವರ ಆಸೆಯಾಗಿತ್ತು. ನಾನು ಕೂಡ ಅದನ್ನೇ ಇಷ್ಟಪಟ್ಟಿದ್ದೆ.

ಪ್ರಶ್ನೆ : ನಿಮ್ಮ ವೃತ್ತಿಯಲ್ಲಿ ನೀವು ಯಾವ ಯಾವ ಕೆಲಸಗಳನ್ನು ಮಾಡುತ್ತೀರಿ?

ಶ್ರೀಪಾದ : ಮುಖ್ಯವಾಗಿ ನನ್ನದು ಡಾಕುಮೆಂಟೇಷನ್, ಆಸ್ತಿಯ ರಿಜಿಸ್ಟ್ರೇಷನ್, ಬಾಡಿಗೆ ಮನೆಗಳಿಗೆ ಸಂಬಂಧಿಸಿದ ಮೊಕದ್ದಮೆಗಳು ಇತ್ಯಾದಿ.

ಪ್ರಣತಿ : ಬ್ಯಾಂಕ್‌ಗಳ ಸಾಲ ವಸೂಲಿ, Writ side, ಹೈಕೋರ್ಟಿನಲ್ಲಿ II ಅಪೀಲುಗಳು ಇತ್ಯಾದಿ.

ಪ್ರಶ್ನೆ : ಹೆಚ್ಚಿನ ಸಂದರ್ಭಗಳಲ್ಲಿ ನೀವು ನಿಮ್ಮ ಆತ್ಮ ಸಾಕ್ಷಿಗೆ ವಿರುದ್ಧವಾಗಿ ಕೆಲಸ ಮಾಡಬೇಕಾಗುತ್ತದೆ ಅಲ್ಲವೆ? Lawyers are liars ಎನ್ನುತ್ತಾರಲ್ಲ?

ಶ್ರೀಪಾದ : ಆತ್ಮಸಾಕ್ಷಿಯ ಬಗ್ಗೆ ನಾನು ಯಾವತ್ತೂ ತಲೆಕೆಡಿಸಿಕೊಳ್ಳುವವನಲ್ಲ. ನಮ್ಮ ಕಕ್ಷಿಗಾರರು ನಮಗೆ ಶುಲ್ಕ ಕೊಡುತ್ತಾರೆ. ನಾವು ಅವರ ಪರವಾಗಿ ವಾದಿಸುತ್ತೇವೆ. ಅದು ನಮ್ಮ ಕರ್ತವ್ಯ ಮತ್ತು ನಿಯತ್ತು. ಅವರು ನಮಗೆ ಹಣ ಕೊಡುವುದು ಮೊಕದ್ದಮೆ ನಡೆಸುವುದಕ್ಕಾಗಿ ಹೊರತು ಅದನ್ನು ಗೆದ್ದುಕೊಡುವುದಕ್ಕಾಗಿ ಅಲ್ಲ. ಗೆಲ್ಲುವುದು, ಸೋಲುವುದು ಅವರವರ ಅದೃಷ್ಟ. ಇದನ್ನು ನಾವು ಕಕ್ಷಿಗಾರರಿಗೆ ಮೊದಲೇ ತಿಳಿಸಿರುತ್ತೇವೆ.

ಪ್ರಣತಿ : ನಾವು ವಾದಿಸುವುದು ಕಕ್ಷಿಗಾರರು ದೊರಕಿಸಿಕೊಡುವ ದಾಖಲಾತಿಗಳ ಆಧಾರದ ಮೇಲೆ. ಅವರು ಸುಳ್ಳು ದಾಖಲಾತಿಗಳನ್ನು ಒದಗಿಸಿಕೊಟ್ಟರೆ ಅದು ನಮ್ಮ ತಪ್ಪಲ್ಲ. ನಾವು ಸುಳ್ಳು ಹೇಳುವುದಕ್ಕೆ ಕಕ್ಷಿಗಾರರೇ ಕಾರಣರಾಗುತ್ತಾರೆ. ಕಕ್ಷಿಗಾರರ ಗೆಲುವಿಗಾಗಿ ನಾವು ಕೆಲವೊಮ್ಮೆ ಸುಳ್ಳು ಹೇಳುವುದು ಅನಿವಾರ್ಯ. ಇನ್ನು, ಮನಸ್ಸಾಕ್ಷಿಗೆ ತೀರ ವಿರುದ್ಧವಾಗಿರುವ ಮೊಕದ್ದಮೆಗಳಾದರೆ ನಾವು ಅದನ್ನು ಕೈಗೆತ್ತಿಕೊಳ್ಳುವುದೇ ಇಲ್ಲ.

ಪ್ರಶ್ನೆ : ನೀವಿಬ್ಬರೂ ಒಂದೇ ವೃತ್ತಿಯಲ್ಲಿರುವುದರಿಂದ ಅನುಕೂಲಗಳಿವೆ ಎನಿಸುತ್ತದೆಯಾ?

ಶ್ರೀಪಾದ : ಹೌದು, ತುಂಬಾ ಅನುಕೂಲವಾಗುತ್ತದೆ. ನಾವು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲು ವೃತ್ತಿಯೂ ಸಹಾಯ ಮಾಡುತ್ತದೆ. ಒಬ್ಬರಿಂದ ಮತ್ತೊಬ್ಬರು ಸಾಕಷ್ಟು ಕಲಿಯುತ್ತೇವೆ. ಒಬ್ಬರ ಗೈರು ಹಾಜರಿಯಲ್ಲಿ ಮತ್ತೊಬ್ಬರು ಅದನ್ನು ನಿಭಾಯಿಸುತ್ತೇವೆ.

ಪ್ರಣತಿ : ನಮ್ಮ ದಾಂಪತ್ಯದಲ್ಲಿ ಹೆಚ್ಚಿನ ಸಾಮರಸ್ಯ ಉಂಟಾಗಿದೆ. ಒಬ್ಬರಿಂದ ಮತ್ತೊಬ್ಬರು ಕಲಿಯಲು ಸಾಕಷ್ಟು ಇರುವುದರಿಂದ "ego" ಸಮಸ್ಯೆ ಕೂಡ ಇರುವುದಿಲ್ಲ.

ಪ್ರಶ್ನೆ : ಒಂದು ವೈಯಕ್ತಿಕ ಪ್ರಶ್ನೆ. ನಿಮ್ಮ ಬಾಳ ಸಂಗಾತಿ ವಕೀಲರಾಗಿರಬೇಕೆಂದು ಬಯಸಿದ್ದಿರಾ?

ಶ್ರೀಪಾದ : ಇಲ್ಲ, ನಾನು ಲಾಯರನ್ನು ಮದುವೆಯಾದದ್ದು ಕೇವಲ ಆಕಸ್ಮಿಕ.

ಪ್ರಣತಿ : ಹೌದು. ವಕೀಲರನ್ನೇ ಮದುವೆಯಾಗಬೇಕೆಂಬುದು ನನ್ನ ಮನದಾಸೆಯಾಗಿತ್ತು.

ಪ್ರಶ್ನೆ : ಈ ವೃತ್ತಿಯಲ್ಲಿ ನೀವು ತುಂಬಾ ಮೆಚ್ಚಿಕೊಂಡ ಅಂಶಗಳೇನಾದರೂ ಇವೆಯಾ?

ಶ್ರೀಪಾದ : ಇದು ಒಂದು ಶ್ರೇಷ್ಠ ವೃತ್ತಿ. ಗೌರವಯುತವಾದದ್ದು. ಕರಿ ಕೋಟಿನವರಿಗೆ ಎಲ್ಲಿ ಹೋದರೂ ಗೌರವ ಇದೆ. ಇದರಲ್ಲಿ ಸಾರ್ವಜನಿಕ ಸೇವೆ ಕೂಡ ಸಾಧ್ಯ.

ಪ್ರಣತಿ : ವಾದ ಮಾಡುವುದೆಂದರೆ ನನಗೆ ತುಂಬಾ ಇಷ್ಟ. ಇದು ನನಗೆ ತುಂಬಾ ಮೆಚ್ಚುಗೆಯಾದ ಅಂಶ.


ಪ್ರಶ್ನೆ : ಈ ವೃತ್ತಿ ನಿಮಗೆ ತೃಪ್ತಿ ಕೊಟ್ಟಿದೆಯೇ?

ಇಬ್ಬರೂ : ನೂರಕ್ಕೆ ನೂರು ಭಾಗ ನಾವು ತೃಪ್ತರು.

ಪ್ರಶ್ನೆ : ನಿಮ್ಮ ಮಗಳಿಗೆ ಈ ವೃತ್ತಿಯನ್ನು ಶಿಫಾರಸು ಮಾಡುತ್ತೀರಾ?

ಇಬ್ಬರೂ : ಖಂಡಿತ. ನಮ್ಮ ಇಷ್ಟವನ್ನು ಅವಳ ಮೇಲೆ ಹೇರುವುದಿಲ್ಲ. ಅವಳು ವಕೀಲಳಾಗಬೇಕೆಂಬುದು ನಮ್ಮ ಬಯಕೆ ಅಷ್ಟೆ.





ಕೇಂದ್ರದಲ್ಲಿ ಕಮಲ ಅರಳಿತು. ದೇಶದಲ್ಲಿ ಸೌಹಾರ್ದ ಉಳಿದೀತೇ?

ಕೋ. ಚೆನ್ನಬಸಪ್ಪ

ಈ ಲೇಖನ ಪ್ರಕಟವಾಗಿ ಓದುಗರ ಕಣ್ಣಿಗೆ ಬೀಳುವುದರ ಒಳಗಾಗಿ ಭಾರತ ದೇಶದ ಇತಿಹಾಸದಲ್ಲಿ ಒಂದು ನಿರ್ಣಾಯಕ ಮಹತ್ತರ ಬದಲಾವಣೆ ಆಗಿ ಹೋಗಿರುತ್ತದೆ. ದೆಹಲಿಯಲ್ಲಿ ಸಂಘ ಪರಿವಾರದ ಸರ್ಕಾರ ಸ್ಥಾಪನೆ ಆಗಿ, ಭಾರತದ ಇತಿಹಾಸದ ಆಕಾಶದಲ್ಲಿ ಅವರು ಹೇಳುವಂತೆ ಧ್ರುವತಾರೆ, ಇತರ ಕೆಲವರು ಭಾವಿಸಿರುವಂತೆ ಒಂದು ಧೂಮಕೇತು ಮೂಡಿ ಈ ದೇಶದ ಮುಂದಿನ ಘಟನಾ ಪ್ರವಾಹಕ್ಕೆ ಒಂದು ತಿರುವು ಉಂಟಾಗಲು ನಾಂದಿಯಾಗುತ್ತದೆ. ಈ ಘಟನೆ - ದೆಹಲಿ ಸಿಂಹಾಸನದ ಮೇಲೆ ಸಂಘ ಪರಿವಾರ ಪ್ರಧಾನಿ ಪ್ರತಿಷ್ಠಾಪಿತವಾಗುವುದು, ಎಷ್ಟೋ ಸರ್ಕಾರಗಳು ಬಂದು ಹೋಗುವಂತೆ, ನಾಲ್ಕು ದಿನ ಇದ್ದು (ಬಿದ್ದು) ಹೋಗುವ ವ್ಯವಸ್ಥೆ ಆಗಲಾರದು. ಡಿಸೆಂಬರ್ ೬, ೧೯೯೨ರಂದು ಅಯೋಧ್ಯೆಯಲ್ಲಿ ನಡೆದ ಬಾಬ್ರಿ ಮಸೀದಿ ಧ್ವಂಸ ಕಾರ್ಯದ ಮುಂದಿನ ಅಧ್ಯಾಯ ಪ್ರಾರಂಭವಾಗುತ್ತದೆ.

ಈ ಸಂಘ ಪರಿವಾರ ಸಾಮ್ರಾಜ್ಯ ಸ್ಥಾಪನೆಯ ಮುಖ್ಯ ಉದ್ದೇಶವನ್ನು ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಯಾವ ಸಂದೇಹಕ್ಕೂ ಎಡೆಯಿಲ್ಲದೆ ಸುಸ್ಪಷ್ಟ ಶಬ್ದಗಳಲ್ಲಿ ಸಾರಿದ್ದಾರೆ. ಮೊದಲನೆಯದು: ಮಸೀದಿ ಇದ್ದಲ್ಲಿಯೆ ರಾಮ ಮಂದಿರ ನಿರ್ಮಾಣ. ಎರಡನೆಯದು : ಸರ್ವರಿಗೂ ಸಮಾನ ಸಿವಿಲ್ ಕೋಡ್ (Common Civil Code) ರಚನೆ. ಮೂರನೆಯದು : ಕಾಶ್ಮೀರಕ್ಕೆ ವಿಶಿಷ್ಟ ಸ್ಥಾನ ಕೊಟ್ಟಿರುವ ಸಂವಿಧಾನದ ೩೭೦ನೆ ಆರ್ಟಿಕಲ್ ಅನ್ನು ಕೈಬಿಡುವುದು. ಇನ್ನುಳಿದ ರೋಟಿ, ಮಕಾನ (ಅನ್ನ, ವಸತಿ) ಸಮಸ್ಯೆ ಅಕ್ಷರ ವಿದ್ಯೆ....ಸಂಘ ಪರಿವಾರದ ಇತರ ಬಾಬುಗಳು.

ಮೇಲಿನ ಮೂರು ಪ್ರಮುಖ ಉದ್ದೇಶಗಳನ್ನು ಯಾವ ಮಾತ್ರಕ್ಕೂ ಸಡಿಲಿಸುವ, ಮಾರ್ಪಡಿಸುವ, ಸ್ಥಗಿತಗೊಳಿಸುವ ಮಾತು ಸುತರಾಂ ಇಲ್ಲವೆಂದು ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರು ತಮಗಿರುವ ಕಂಠತ್ರಾಣವನ್ನೆಲ್ಲ ಉಪಯೋಗಿಸಿ ಪ್ರಚಾರ ಮಾಡಿದರು. ದಕ್ಷಿಣದಲ್ಲಿ ಜಯಲಲಿತ, ಪ.ಬಂಗಾಳದ ಮಮತ ಬ್ಯಾನರ್ಜಿ, ಲೋಕಶಕ್ತಿಯ ಹೆಗಡೆ ಅವರು ಇದಕ್ಕೆ ಒಪ್ಪುವರೆ? ಎಂದು ಪ್ರಶ್ನಿಸಿದಾಗ, 'ಮಿತ್ರಪಕ್ಷದವರಿಗೆ ಇದು ಸಹ್ಯವಲ್ಲವೆಂದು ಬಿಜೆಪಿ ತನ್ನ ಮೂಲ ಸಿದ್ಧಾಂತಗಳನ್ನು ಕೈಬಿಡಲಾರದು' ಎಂದು ಘಂಟಾ ಘೋಷವಾಗಿ ಸಾರಿದರು. ಅವರ ಈ ಘೋಷಣೆಯನ್ನು ಕೇಳಲಾರದಷ್ಟು ಅವರ ಮಿತ್ರರು ಕಿವುಡರೆಂದು ಎಂದಿಗೂ ಭಾವಿಸಲಾಗದು. ಕೇಳಿಯೂ ಅವರಿಗೆ ಬೆಂಬಲ ಕೊಡುತ್ತಿದ್ದಾರೆ ಎಂದ ಮೇಲೆ ಅಂಕೆಯಲ್ಲಿ?

ಚುನಾವಣೆಯ ಕಾಲಕ್ಕೆ ಬಿಜೆಪಿಯೊಡನೆ ಕೈಜೋಡಿಸಿದ ಮಿತ್ರ ಪಕ್ಷಗಳ ಮುತ್ಸದ್ದಿಗಳು ತಮ್ಮ ಸಂಖ್ಯಾಬಲದಿಂದ, ಬುದ್ಧಿಬಲದಿಂದ, ರಾಜಕೀಯ ಚಾತುರ್ಯದಿಂದ ಸಂಘ ಪರಿವಾರವನ್ನು ಮೃದುವಾಗಿಸುತ್ತೇವೆಂದು ನಂಬಿರಬಹುದು. ಬಹುಶಃ ತಮಗಿಷ್ಟ ಬಂದಂತೆ ಆಡಿಸಬಹುದೆಂದೂ ನಂಬಿರಬಹುದು. ಸಂಘ ಪರಿವಾರ ರಾಮಮಂದಿರ ನಿರ್ಮಾಣ ಮಾಡದಂತೆ, ಆರ್ಟಿಕಲ್ ೩೭೦ ಅನ್ನು ಕೈಬಿಡದಂತೆ, ಸರ್ವರಿಗೂ ಸಮಾನ ಸಿವಿಲ್ ಕೋಡ್ ರಚಿಸದಂತೆ ತಾವು ಮಾಡುವುದರಲ್ಲಿ ಯಶಸ್ವಿಯಾದರೆ ಅದೊಂದು ಪವಾಡವೇ ಸರಿ. ಆ ವ್ಯಕ್ತಿಗಳು ಶ್ರೀರಾಮಚಂದ್ರನ ಅವತಾರವೆಂದೇ ಪೂಜಿಸಲು ಅರ್ಹರಾಗುತ್ತಾರೆ.

ಡಿಸೆಂಬರ್ ೬, ೧೯೯೨ರಂದು ಅಯೋಧ್ಯೆಯಲ್ಲಿ ನಡೆದ ಬಾಬ್ರಿ ಮಸೀದಿ ಧ್ವಂಸ ಕಾರ್ಯದ ಮುಂದಿನ ಅಧ್ಯಾಯ ಪ್ರಾರಂಭವಾಗುತ್ತದೆ.

ಆದರೆ ಅದು ಸಾಧ್ಯವೆ? ಇದು ಮಿಲಿಯನ್ ಡಾಲರ್ ಪ್ರಶ್ನೆ!

ಇಂಥ ಸಮಸ್ಯೆಗಳಿಗೆ ಉತ್ತರ ಹುಡುಕುವಾಗ ಸಂಘ ಪರಿವಾರದ ಇತ್ತೀಚೆಗಿನ ಇತಿಹಾಸವನ್ನು ನೋಡಬೇಕು. ಬಾಬ್ರಿ ಮಸೀದಿ ಧ್ವಂಸ ಆಗುವ ಮುಂಚೆ, ಶ್ರೀರಾಮ ಇಟ್ಟಿಗೆ ಯಾತ್ರೆ, ರಾಮರಥ ಪರ್ಯಟನದ ಭಾವೋದ್ದೀಪನದ ಹೊಳೆ ಹರಿಸಿದರು. ಆಗ ಉ.ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಮಸೀದಿಯನ್ನು ರಕ್ಷಿಸುವುದಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಭರವಸೆ ಕೊಟ್ಟಿತು. ಬಿಜೆಪಿ ನಾಯಕರು ಸಂಸತ್ತಿನಲ್ಲಿಯೂ ಹಾಗೆಯೆ ಹೇಳಿದರು. ನಮ್ಮ ಅಂದಿನ ರಾಷ್ಟ್ರಪತಿಗಳೂ ಹಾಗೆಯೇ ಹೇಳಿದರು. ಆದರೆ ಆದದ್ದೇನು? ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಮೂರು ಗೋಪುರಗಳನ್ನು ಉರುಳಿಸಿದರು. ಉ.ಪ್ರದೇಶದ ಸರ್ಕಾರೀ ಯಂತ್ರದ ಬಲದಿಂದಲೆ!

ಈಗ ಕೇಂದ್ರ ಸರ್ಕಾರದ ಯಂತ್ರ ಬಲದಿಂದಲೇ ಸಂವಿಧಾನದ ಗೋಪುರವನ್ನು

ಕಳಚುವುದಿಲ್ಲ ಎಂದು ನಂಬಬಹುದೆ? ಅವರ ಆಣೆ, ಭಾಷೆಗಳಿಗೆ ಬೆಲೆ ಕೊಡಬಹುದೆ? ಬಿಜೆಪಿ ರಾಮಮಂದಿರ ಕಟ್ಟೇ ಕಟ್ಟುವುದಾಗಿ ಹೇಳಿದ್ದಾರೆ. ಈಗ ಜಾರ್ಜ್ ಫರ್ನಾಂಡೀಸರ ಮನವೊಲಿಸಲು, ಹೆಗಡೆ ಅವರ ಬೆಂಬಲ ಪಡೆಯಲು ತಮ್ಮ ರಾಮಮಂದಿರ ನಿರ್ಮಾಣ ಕಾರ್ಯಕ್ರಮವನ್ನು ಸ್ವಲ್ಪ ಹಿಂದಕ್ಕಿಡಲು ಒಪ್ಪಿಯಾರೆ? ಸಮಾನ ಸಿವಿಲ್‌ಕೋಡ್ ರಚನೆಯನ್ನು ವಿಳಂಬ ಮಾಡಿಯಾರೆ? ಹಾಗೇನಾದರೂ ಹಿಂದೇಟು ಹಾಕಿದರೆ ಗೋವಿಂದಾಚಾರ್ಯರು, ಉಮಾ ಭಾರತಿ... ಮುಂತಾದವರು ಇವರನ್ನು ಹರಿದು ತಿಂದಾರು! ಈ ನನ್ನ ಮಾತು ಈಗ ಉತ್ಪ್ರೇಕ್ಷೆ ಆಗಿ ಕಂಡೀತು. ಅದನ್ನು ನಂಬದವರೂ ಇರಬಹುದು. ಸಂಘ ಪರಿವಾರ ಅಧಿಕಾರದಲ್ಲಿ ಸಾಕಷ್ಟು ಕಾಲ - ಈ ಸಂಸತ್ ಜೀವಾವಧಿಯವರೆಗೆ - ಇದ್ದುದೇ ಆದರೆ ತಮ್ಮ ಗುರಿಯನ್ನು ಈಡೇರಿಸಿಕೊಳ್ಳದಿರಲಾರರು.

ಈ ದೀರ್ಘಾವಧಿಯ ಕಾರ್ಯಾಚರಣೆ ಆದೀತೋ ಇಲ್ಲವೋ ಎಂಬ ಮಾತನ್ನು ಬದಿಗಿಟ್ಟರೂ, ಒಂದು ಕ್ಷಿಪ್ರ ಪರಿಣಾಮ ಆಗುವುದಂತೂ ನಿಸ್ಸಂದೇಹ. ಬಾಬ್ರಿ ಮಸೀದಿ ಧ್ವಂಸ ಆದ ದಿನ ದೆಹಲಿಯಲ್ಲಿ ಸೇರಿದ್ದ ನನ್ನ ವಕೀಲ ಮಿತ್ರರಿಗೆ ಒಂದು ಮಾತು ಹೇಳಿದ್ದೆ : 'ಇದು ಸ್ವತಂತ್ರ ಭಾರತ ಎರಡನೆಯ ಮಹಾವಿಪತ್ತು. ಇದು ಅಯೋಧ್ಯೆಗೆ, ಉ.ಪ್ರದೇಶಕ್ಕೇ ಸೀಮಿತವಾಗುವುದಿಲ್ಲ. ಇದರ ಪರಿಣಾಮ ಇಡೀ ದೇಶಕ್ಕೆ ಹಬ್ಬೀತು. ಶಿಖ್ಖರ ಉಗ್ರ ವಿಧ್ವಂಸಕ ಕೃತ್ಯ ಪಂಜಾಬಿಗೆ ಸೀಮಿತವಾದಂತೆ, ಮುಸ್ಲಿಮರ ಪ್ರತೀಕಾರ ವಿಧ್ವಂಸಕ ಕೃತ್ಯ ಉ.ಪ್ರದೇಶಕ್ಕೇ ಸೀಮಿತವಾಗುವುದಿಲ್ಲ. ಇಡೀ ದೇಶಕ್ಕೇ ಹಬ್ಬೀತು''. ನನ್ನ ಈ ಅಂಜಿಕೆ ದಿಟವಾಗಿ ಮುಂಬಯಿ, ದೆಹಲಿ,... ಮದ್ರಾಸ್‌ಗೆ ಮುಸ್ಲಿಮ್ ಉಗ್ರಗಾಮಿಗಳ ವಿಧ್ವಂಸಕ ಕೃತ್ಯ ಹಬ್ಬಿತು. ಅದು ಕೊಯಮತ್ತೂರಿನವರೆಗೆ ಬಂದಿದೆ. ಬೆಂಗಳೂರಿಗೆ ಬರಲಾರದೆಂದು ಯಾರು ಹೇಳಿಯಾರು? ಸರಣಿ ಬಾಂಬ್ ಸ್ಫೋಟ ಶಹರಗಳ ಸರಣಿಗೆ ವಿಸ್ತರಿಸೀತು.

ಈ ದೇಶದಲ್ಲಿ ಆಗುತ್ತಿರುವ ಸರಣಿ ಬಾಂಬ್ ಸ್ಫೋಟಗಳಿಗೆ ಪಾಕಿಸ್ತಾನದ ಐ.ಎಸ್.ಐ. ಕಾರಣವೆಂದು ಭಾರತ ಸರ್ಕಾರ ಹೇಳಿದೆ. ತಪಾಸಣೆಯ ಫಲವೂ ಅದೇ ಆಗಿದೆ. ಈ ಬಾಂಬ್ ಸ್ಫೋಟದಿಂದ ಭಾರತ ಸರ್ಕಾರವಾಗಲಿ, ಸಂಘ ಪರಿವಾರವಾಗಲೀ ಅಲ್ಲಾಡುವುದಿಲ್ಲ. ಇದು ಸ್ವತಃ ಸಿದ್ಧ ಸತ್ಯ. ಉಗ್ರರನ್ನು ಗಲ್ಲಿಗೇರಿಸುತ್ತಾರೆ. ಅವರೇ ಸಾಯಲು ಸಿದ್ಧರಾಗಿರುವಾಗ ನೇಣು ಗಂಬ ಅವರನ್ನು ಹೆದರಿಸಲಾರದು.

ಈ ಸಮಸ್ಯೆಯನ್ನು ಚಿಂತಿಸುತ್ತಿರುವಾಗ ಸ್ವಾತಂತ್ರ್ಯ ಪೂರ್ವದ ಇತಿಹಾಸವನ್ನು ಜ್ಞಾಪಿಸಿಕೊಂಡೆ. ಈ ಹಿಂದೂ-ಮುಸ್ಲಿಂ ಸಮಸ್ಯೆ ಇಂದು ನಿನ್ನೆಯದಲ್ಲ. ಈ ಶತಮಾನದ ಆದಿಯಿಂದಲೂ ಇದ್ದೇ ಇದೆ. ಆಗಲೂ ಈ ಸಮಸ್ಯೆಯ ಪರಿಹಾರ ಮಾರ್ಗವನ್ನು ಯೋಚಿಸಿದ್ದರು. ೧೯೨೪ರಲ್ಲಿ ಇಂಥ ಘಟನೆ ಅಮೇಥಿ, ಶಂಭಾರ್, ಗುಲ್ಬರ್ಗಾ, ಕೊಹಾಟ್ ಮುಂತಾದ ಕಡೆ ನಡೆದಾಗ ಗಾಂಧೀಜಿ ಉಪವಾಸ ಕೈಕೊಂಡರು. ದೆಹಲಿಯಲ್ಲಿ ಮೀರ್ ಮಹಮ್ಮದ್

ದೆಹಲಿಯಲ್ಲಿ ಸಂಘಪರಿವಾರದ ಸರ್ಕಾರ ಸ್ಥಾಪನೆ ಆಗಿ, ಭಾರತದ ಇತಿಹಾಸದ ಆಕಾಶದಲ್ಲಿ ಅವರು ಹೇಳುವಂತೆ ಧ್ರುವತಾರೆ, ಇತರ ಕೆಲವರು ಭಾವಿಸಿರುವಂತೆ ಒಂದು ಧೂಮಕೇತು ಮೂಡಿ ಈ ದೇಶದ ಮುಂದಿನ ಘಟನಾ ಪ್ರವಾಹಕ್ಕೆ ಒಂದು ತಿರುವು ಉಂಟಾಗಲು ನಾಂದಿಯಾಗುತ್ತದೆ.

ಅಲಿ ಎಂಬ ಆಪ್ತರ ಮನೆಯಲ್ಲಿ ಉಪವಾಸ ಪ್ರಾಯಶ್ಚಿತ್ತ ಕೈಗೊಂಡರು. ಆ ನಿರ್ಧಾರವನ್ನು ೨೫-೯-೨೪ರ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟಿಸಿ ಹೀಗೆ ಹೇಳಿದ್ದರು:


''ಈ ಇಬ್ಬರನ್ನೂ (ಹಿಂದೂ-ಮುಸ್ಲಿಮರನ್ನು) ಅಗತ್ಯವಾದರೆ ನನ್ನ ರಕ್ತದಿಂದಲಾದರೂ ಒಂದು ಗೂಡಿಸುವುದೇ ನನ್ನ ಆಸೆ. ಅದನ್ನು (ರಕ್ತ ತರ್ಪಣ) ಮಾಡುವುದಕ್ಕಿಂತ ಮುಂಚೆ ನಾನು ಹಿಂದೂಗಳನ್ನು ಪ್ರೀತಿಸುವಂತೆ ಮುಸಲ್ಮಾರನ್ನೂ ಪ್ರೀತಿಸುತ್ತೇನೆಂದು ಋಜುವಾತು ಮಾಡಬೇಕು. ಎಲ್ಲರನ್ನೂ ಸಮಾನವಾಗಿ ಪ್ರೀತಿಸೆಂದು ನನ್ನ ಧರ್ಮ ನನಗೆ ಬೋಧಿಸುತ್ತದೆ''. (ಯಂಗ್ ಇಂಡಿಯಾ ೨೫-೯-೨೪).

ಆದರೆ ಆ ಪ್ರೇಮದ ಮಾತನ್ನು ಯಾರು ಕೇಳಿದರು?

ಮತ್ತೆ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೀಯ ಭಾಷಣದಲ್ಲಿ ಗಾಂಧೀಜಿ: 'ಮುಸಲ್ಮಾನರು ಅಲ್ಪಸಂಖ್ಯಾತರಾಗಿದ್ದರೆ, ಬಹುಸಂಖ್ಯಾತರಾದ ಹಿಂದೂಗಳ ಮಧ್ಯದಲ್ಲಿ ಹಿಂದೂಗಳ ಮಿತ್ರತ್ವ (ಮೈತ್ರಿಯಿಂದ)ದಿಂದ ಗೌರವದಿಂದ ಬಾಳುವಂತಾಗಬೇಕು. ಒಂದು ಸರ್ಕಾರ ಕಳ್ಳರಿಂದ ದರೋಡೆಕಾರರಿಂದ ರಕ್ಷಣೆ ಕೊಟ್ಟೀತು. ಆದರೆ ಸ್ವರಾಜ್ಯ ಸರ್ಕಾರವೂ ಒಂದು ಕೋಮಿನವರು ಇನ್ನೊಂದು ಕೋಮಿನವರನ್ನು ಸಂಪೂರ್ಣ ಬಹಿಷ್ಕರಿಸಿದರೆ ರಕ್ಷಣೆ ಕೊಡಲಾರದು... ಜಗಳ ಜೀವನದ ಸಾಮಾನ್ಯ ಸಂಗತಿಯಾದರೆ ಅದನ್ನು ಯಾದವೀ ಯುದ್ಧವೆಂದು ಕರೆಯುತ್ತಾರೆ. ಆಗ ಆ ಪಕ್ಷಗಳೆ ಹೊಡೆದಾಡಿ ಬಗೆಹರಿಸಿಕೊಳ್ಳಬೇಕು.... ಸ್ವರಾಜ್ಯ ಸರ್ಕಾರದ ಅರ್ಥ ಹಿಂದೂ, ಮುಸಲ್ಮಾನ ಮತ್ತು ಇತರ ಎಲ್ಲರ ಮುಕ್ತ ಸಂಯುಕ್ತ ಇಚ್ಛೆಯಿಂದ (free joint will) ರಚಿಸಿದ ಸರ್ಕಾರ....' (Collected works of Mahatma Gandhi Vol:25, Page 478)

ನಮಗೆ ಸ್ವರಾಜ್ಯ ಬಂದು ೫೦ ವರ್ಷಗಳಾದವು. ಈಗ ರಚಿಸಿರುವ ಸರ್ಕಾರ ಎಲ್ಲ ಕೋಮಿನವರ ಮುಕ್ತ, ಸಂಯುಕ್ತ ಇಚ್ಛೆಯಿಂದ ಆಗಿದೆಯೆ? ಸಂಘ ಪರಿವಾರದ ಬುನಾದಿ ಬಾಳಾಠಾಕ್ರೆಯ ಮಾತಿನಲ್ಲಿ ಮುಸಲ್ಮಾನರು ದೇಶದ್ರೋಹಿಗಳು. ಅವರು ಇಲ್ಲಿರುವುದಾದರೆ ಈ ದೇಶದ ಬಹು ಸಂಖ್ಯಾತರಾದ ಹಿಂದೂ ಧರ್ಮ, ಸಂಸ್ಕೃತಿ, ನಡಾವಳಿಯನ್ನು ಅಂಗೀಕರಿಸಿ ಬದುಕಬೇಕೆಂಬುದು ಸಂಘ ಪರಿವಾರದ ಪ್ರಣಾಳಿಕೆ! ಹಾಗಾದರೆ ಅಲ್ಪ ಸಂಖ್ಯಾತರಾದ ಮುಸ್ಲಿಮರು ನಿರ್ಭಯವಾಗಿ, ಮರ್ಯಾದೆಯಿಂದ ಬಾಳಲು ಸಾಧ್ಯವೆ?

ಗಾಂಧೀಜಿ ಹಾಗೆ ಹೇಳಿದ್ದಾರೆ ಎಂದರೆ, 'ಆ ಗಾಂಧಿ ಯಾವೂರ ದಾಸಯ್ಯ' ಎನ್ನುತ್ತಾರೆ. ಪರಿವಾರದವರು! 'ಅದಕ್ಕೇ ಅವನನ್ನು ಮುಗಿಸಿದ್ದು' ಎನ್ನುತ್ತಾರೆ ಗೋಡ್ಸೆ ಬಂಧುಗಳು!! ಹಾಗಾದರೆ ದೇಶದ ಗತಿ? ೧೯೨೪ರಲ್ಲಿ ಹೇಳಿದ ಯಾದವೀ ಯುದ್ಧ ಪರಿಸ್ಥಿತಿ ಇದು ಖಾಡಾಖಾಡ ಯುದ್ಧವಲ್ಲ. ಕೈಲಾಗದ ಅಲ್ಪಸಂಖ್ಯಾತರು ಕದ್ದು ಸೇಡು ತೀರಿಸಿಕೊಳ್ಳುವ ಕೃತ್ಯ. ಆದರಿಂದ ಮುಸಲ್ಮಾನರು - ಐಎಸ್ಐ ಪಿತೂರಿಗಾರರು ಈ ದೇಶದ ಒಂದಂಗುಲ ನೆಲವನ್ನೂ ತೆಗೆದುಕೊಳ್ಳಲಾರರು. ಒಂದೇ ಒಂದು ದಿನ ಇಲ್ಲಿ ಆಡಳಿತ ನಡೆಸಲಾರರು! ಇದು ಅವರಿಗೆ ಗೊತ್ತೇ ಇದೆ. ಹಾಗಾದರೆ ಇದರಿಂದ ಏನನ್ನು ಸಾಧಿಸಿದಂತಾಯಿತು? ಏನೂ ಇಲ್ಲ. ತಮ್ಮ ಒಡಲಿನ ಅಳಲನ್ನು, ಉರಿಯುವ ಸಂಕಟದ ಬೇಗೆಯನ್ನು ಇಂಥ ದುಷ್ಕೃತ್ಯದಿಂದ ಹೊರ ಹಾಕುತ್ತಾರೆ. ಅವರಿಗೆ ಬೇಕಾಗಿರುವುದೂ ಅಷ್ಟೆ! ಅಂತೂ ಅಶಾಂತಿ ತಪ್ಪಿದ್ದಲ್ಲ. ಶಾಂತಿ ಬೇಕೆಂದರೆ ಪ್ರೇಮದ ಬುನಾದಿ ಹಾಕಬೇಕು. ಆದರ ಹೊರತು ಬೇರೆ ದಾರಿಯಿಲ್ಲ. ಆದರೆ ಸಂಘ ಪರಿವಾರಕ್ಕೆ ಪ್ರೇಮದ ಮಾತು ಹಿಡಿಸುವುದಿಲ್ಲ.



ಬಹುಮಾನಿತ ಕಥೆ

ಚಿತ್ರಶೇಖರ ಕಂಠಿ

ಊರಿಗಿ ಊರ ಮಂದೀನೆ ಲಚ್ಚಣ ದೇಸಾಯಿ ಮನಿ ಮುಂದ ಜಮಾ ಆಗಿ ಜಾತ್ರಿ ನೆರದಂಗ ಆಗಿತ್ತು. ಹೊಲದ ಪಟ್ಟೇದಾರ ಮುಂದೆಲ್ಲ ಅಂಗಳದಾಗ ತುಂಬಿ ಹೋಗಿದ್ರ, ಹೆಸರಿಗಿ ಹೊಲ ಇಲ್ಲದ ಜನ ಮನಿ ಮುಂದ ಠಿಕಾಣಿ ಹಾಕಿದ್ರು. 'ನಿನಗ ಯಾರದು ಬರ್ತಾದೊ?' ಅಂತ ಒಬ್ಬ ಕೇಳ್ದಾಗ.

'ನನಗ ನೌದರ ಪರಮೇಶಿದು' ಅಂತ ಒಬ್ಬಂದ್ರ, ಮತ್ತೊಬ್ಬ;

'ಖಾಸಿಮಸಾಬನ ಮಡ್ಡಿ ಹೊಲ ನನಗ ಬರ್ತದ' ಅಂತಿದ್ದ.

'ನಿನ್ನ ವ್ಹಾರ್ಯಾ ಛೆಂದದನೊ ನಿಂಗಪ್ಪ, ಶಿವಬಸಪ್ಪನ ಏಕ್‌ಲಂಬರ್ ಮರಾಮುರಿ ಎರಿ ಹೊಲ ನಿಂದಾತದ' ಅಂತ ಮತ್ತೊಬ್ಬ ಹೇಳ್ತಿದ್ದ. ಅರ್ಧ ಬೀಡಿ ಸೇದಿ ನೆಲಕ ಒರಸಿ ಕಿಂವ್ಯಾಗ ಸಿಗಸ್ಗೊಂಡ ಸಿದ್ದಪ್ಪ ತೊಡಿ ಸಂದ್ಯಾಗ ಮಾರಿ ಇಟಗೊಂಡು ಪುಂಡಿ ಕಟಗಿಲಿಂದ ನೆಲ ಕೆದರತಿದ್ದ.

'ಯಾಕೊ ಸಿದ್ದಪ್ಪ ಹಿಂಗ್ಯಾಕ ಕುಂತಿದ್ದಿ?' ಅಂತ ರಸೂಲಪಟೇಲ ಕೇಳ್ದಾಗ;

'ಏನಾಡ್ಲಿ ಕಾಕ, ನನ್ನ ನಸೀಬೇ ಖೊಟ್ಟಿ ಅದ. ಕೈಗಿ ಬಂದ ತುತ್ತು ಬಾಯಿಗಿಲ್ಲ ಅಮ್ಮಂಗ ನನಗ ತೆಲಗಾಣಿ ಭೀಮಣ್ಣನ ವಾರಿ ಹೊಂಟದ. ಅದಕ್ಯಾರರ ಹೊಲ ಅಂತಾರ? ಗುಡ್ಡದ ಮ್ಯಾಲ ಒಣಕಲ್ಲಿನ ಹಾಸಿಗಿ. ಹುಡುಕೇನಂದ್ರ ಒಂದು ಹಿಡಿ ಮಣ್ಣಿಲ್ಲ. ಅಂಥಾ ಹೊಲ ತೂಗೋಂಡು ನಾ ಏನ್ ಬಿತ್ತಂಗ್ಹೀನಿ ಬೆಳೆ ಬೆಳೆಂಗ ಹೀನಿ, ಹೇಳು' ವ್ಯಸನದಿಂದ ಹೇಳ್ತಿದ್ದ ಸಿದ್ದಪ್ಪ.

ಊಳವನೇ ಭೂಮಿ ಮಾಲಿಕ ಅನ್ನೋ ಕಾನೂನು ಸರ್ಕಾರ ಮಾಡಿದಾಗ ಇದೆಲ್ಲ ಹಗರಣ ನಡದಿತ್ತು.

ಪಟ್ಟೇದಾರ್ ಆಗೋ ಸಂಭ್ರಮದಾಗ ಒಂದ್ಕಡಿ ಮಂದಿ ಮಾತಾಡ್ಕೋತಿದ್ರು, ಮತ್ತೊಂದು ಕಡಿ, ಮನಿಗಿ ಆಸರಾ ಇದ್ದ ಭೂಮಿ ಕೈ ಬಿಡ್ತದಲ್ಲಂತ ಮಂದಿ;

'ಏನು ಹಿರೇರು ಘಳಸಿಟ್ಟ ಆಸ್ತಿ ಅಮ್ಮಂಗ ಚಿತ್ರಗುಪ್ತರು ಬಂದಂಗ ಬಂದು ಕುಂತಾರ ಭಾಡೇಮಕ್ಕಳು'

'ಇರದೇ ನಾಕ ಪಲಗ ಭೂಮಿ ಅದೀಟು ಇವನಿಗಿ ಮುಂಡಾ ಮೋಚಿದರ ಹೆಂಡ್ರು-ಮಕ್ಕಳೇನು ಮಣ್ಣು ತಿನ್ನಬೇಕಾ?'

'ತಂಗಿ ಮದೀನು ಆತದ ನನಗ ನೌಕರೀನೂ ಸಿಗ್ತದ ಅದೀಟು ಹೊಲ ಮಾರಿ ಬಿಡು ಯಪ್ಪಾ' ಅಂದಿದ್ದ ಮಗನ ಮಾತರ ಹೋದ ವರ್ಸ ಕೇಳಿದ ನಂದರ ಮಗಳ ಮದಿ ಒಜ್ಜೀನು ಇಳೀತಿತ್ತು ಮಗನೂ ಅನ್ನಕ ಹತ್ತಿದ್ದ. ಈಗ ಕೈಯ್ದಾಗಿಂದ ಕಳಕೊಂಡು ಸುಮ್ಮನೆ ಕ್ವಾಡಂಗಿ ಆಗ್ಲತ್ತನಲ್ಲ.

'ಯಾರೇರ ಹಣೇಬಾರದಾಗ ಏನೇನು ಬರದಿರ್ತದೊ ಅದು ಆಗೇ ಆತದ. ನಮ್ಮ ಕೈಯ್ದಾಗ ಏನದ'.

ಅಂಗಳದ ಒಳಗ ಸೇರಿದ್ದ ಭೂಮಾಲೀಕರು ಮಾತಾಡ್ಕೋತಿದ್ರು. ಒಬ್ಬ 'ಬೀಡಿ ಅದ ಏನೊ ತಾರೊ' ಅಂತಿದ್ರ, ಹಬ್ಬಕ್ಕೊಮ್ಮ ಹೋಳಿಗಿ ಊಟ ಮಾಡಿ ಗೋಲಕುಂಡಾನೋ ಚಾರ್ ಮಿನಾರೊ ಸೇದ್ತಿದ್ದ ಹುಸನಪ್ಪ ಬಿರಸ್ಪಾಲ್ ಸಿಗರೇಟು ಕರಿ



ಪ್ರೇಮದ ಹಾಡು

ನಿನ್ನ ಕಣ್ಣು ಕನ್ನಡಿಯಲ್ಲಿ
ನನ್ನ ಚಿತ್ರ ಮೂಡಿ
ನನ್ನ ಹೃದಯದ ವೀಣೆಯಿಂದ
ಪ್ರೀತಿಯ ನಾದ ಹೊಮ್ಮಿ
ಸಂಗೀತದ ಸಮ್ಮಿಲನದಲ್ಲಿ
ಜಗ ಮರೆತ ಜೋಡಿಯ ಕಂಡು
ಕವಿ-
ತಾ ಬರೆದ(ಳು) ಪ್ರೇಮದ ಹಾಡು

– ಐ. ಎಂ. ಕುಂಬಾರ

ತುಟ್ಯಾಗ ಇಟ್ಟು ಬಾಯಿ ತುಂಬ ಹೊಗಿ ತುಂಬ್ಕೊಂಡು ಸುಖ ಅನುಭವಸೋದು ಅಷ್ಟೇ ಅಲ್ಲದೆ 'ತಗೋ ಸೇದೊ' ಅಂತ ಗುಡ್ಡಕ ತನ್ನ ಜತಿಗಿ ತೆಗ್ಗು ಹಾಕದಕ ಬರ್ತಿದ್ದ ಭೀಮುಗನೂ ಕೊಡ್ತಿದ್ದ.

ಮಾಂತಪ್ಪನ ಬೇನಗಿಡದ ಕಟ್ಟೆಮ್ಯಾಲ ಕುಂತಿದ್ದ ತಿಪ್ಪವ್ವಗ ನೋಡಿದ ಬಸ್ಸಪ್ಪನ ಹೇಣ್ತಿ ಹೊಟ್ಯಾಗ ತೊಳಸಿದಂಗ ಆಗ್ತಿತ್ತು.

'ಇಕೀನ ಸತ್ತೇನಾಸಾಲಿ, ದೀಪ ಅಡ್ಯಾಗ ಹಚ್ಚಲಿ, ಛಿನಾಲಿ ನಿನ್ನೀತನ ತೆಲಿ ಅಮ್ಮದು ಹೆಂಡಿಬುಟ್ಟಿ ಮಾಡ್ಕೊಂಡು ಸೊಡ್ಡು ಹಿಡದು ಹೆಂಡಿಕಸ ಮಾಡ್ಲಕ ಬಂದು ಹೋಗಾ ಮುಂದ, ಹರಕ ಪವಾಡು ಹಾಸಿ ಸೌಕಾರ್ತಿ ರೊಟ್ಟಿ ಹಾಕ್ರಿ ಅಂತಿದ್ದಕ್ಕಿ ಈವತ್ತ ನಾಕು ಸೀಮಿ ಸರದಾರನ ಹೆಣ್ತಿ ಹಾಂಗ, ನಿಜಾಮನ ಮೊಮ್ಮಗಳ್ಹಂಗ ಒನಪು ಮಾಡ್ಕೋತ ಕುಂತಾಳ, ಇಕೀನ ಹೆಣ ಎತ್ತಲಿ' ಅಂತ ಮನಸಿನಾಗ ಶಾಪ ಹಾಕ್ತಿದ್ದೋಳು 'ಅದೇನು ಸುಡಗಾಡದ ಬರಗಾಲ ಬಂದಿತ್ತೊ ಏನ್‌ಮಣ್ಣೊ, ಪಾಲಿಗಿ ಹಚಗೋತೆ ಬಂದೋರು ಅದೊಂದು ವರ್ಸ ಹೊಲ ಕಡದು ಹಾಕಿದ್ದಿಲ್ಲಂದ್ರ ಈವತ್ತ ಬಂಗಾರದಂಥ ಭೂಮಿ ಕೈ ಬಿಟ್ಟು ಹೋಕಿತ್ತಾ?' ಅಂತ ಹಲುಬುತ್ತಿದ್ದಳು.

'ಪಟ್ಟಾ ಆದ ಮರದಿನಾನೇ ಊರಿಗಿ ಬಾ ಎಡ್ಡು ಹೋರಿ ಕುಡ್ತೀನಿ ಅಂತ ನಮ್ಮಪ್ಪ ನಮ್ಮ ಹಿರ್‍ಯಾಗ್ಗ ಹೇಳಿ ಕಳಸ್ಯಾನ ಸಣವ್ವ' ಅಂತ ಬಡಗೇರ ನಾಗಪ್ಪನ ಎಳಿ ಹೇಣ್ತಿ ಕಮಲಾ ಗುರುಬಾಯಿಗಿ ಹೇಳ್ತಿದ್ದಳು.

ಮನಸಮ್ಮೋ ಮನಸ್ಸುಗಳು ಒಡದು ಗಬ್ಬು ನಾರೋ ಬಚ್ಚಲು ಮೋರಿ ಆಗಿ ಹೊಲಸೆದ್ದಿದ್ದು; ಪರಪಂಚಾನೇ ಅರೀದ ಪಾರಗೋಳಿಗಿ ಏನು ತಿಳದೇತು? ಒಂದೇ ಗಿಡದ ನೆಳ್ಳಾಗ ಹೊಲ ಕಳಕೋಮವರ, ಪಡಕೋಮವರ ಮಕ್ಕಳು ಕೈ ಕೈ ಹಿಡಕೊಂಡು ಆಡ್ತಿದ್ದವು. 'ಖದಲ್ ಬದಲ್ ಕಡ್ಲಿಕಾಯಿ ಇವರು ಬಿಟ್ಟು ಇವರ್‍ಯಾರು?' ಅಂತ ಹಾಡ್ತಿದ್ದವು. ನಾಕೆಂಟು ಪಾರಗೋಳು ಸೇರಿ ಸಲಾಮ್‌ಟೇಕರಿ ಆಡ್ತಿದ್ದವು. ಮಡಪತಿ ಶಾಣಯ್ಯ ಜೋರಾಗಿ ಈಸ್ಸೂರ ಗುಡಿ ಧಿಡಿಮ್ಯಾಲ ಅಂಗ್ಯೆ ಊರಿ ಬಗ್ಗದ. ಓಡಕೋತ ಬಂದುಹಾರಿ ಬೆನ್ನ ಮ್ಯಾಲ ಕುಂತ ತಳವಾರ ಹಣಮ್ಯಾ. ಖಂಡಿಕಿ ಅಗಲದ ಎಲಿ ಮ್ಯಾಲ ಸುಣ್ಣ ಸವರಿ, ಕಾಚ್ ಹಾಕಿ ಬಾಯ್ಯಾಗ ಇಟಗೊಂಡ ಶಾಣಯ್ಯನ ಅವ್ವ ಸಂಗಮ್ಮ ನೋಡಿ ಧಕ್ಕನೆ ದಿಕ್ಕಡದು ಓಡಿ ಬಂದು ಮಗನ ಬೆನ್ನ ಮ್ಯಾಲ ಕುಂತಿದ್ದ ಹಣಮ್ಯಾಗ ಬೆನ್ನಮ್ಯಾಲ ಗುದ್ದಿ ಕಿಂವಿ ಹಿಡದು ತೆಳಗ ಇಳಸಿ;

'ಏ ಭಾಡು ಜರಾ ಅರ ಖಬರ್ ಆದನಾ? ಖಾಡೂ ಬೆಳದಂಗ ಬೆಳದೀದಿ ಪಾರನ ಮ್ಯಾಲ ಕೂಡಬಾರ್ದು ಅಮ್ಮದು ತಿಳ್ಯಲ್ಲ?' ಅಂತ ಬೈಯ್ದು 'ಏ ಸಾಕು ನಡಿಯೊ ಬೀಳಸಪ್ಪ' ಅಂತ ಮಗನಿಗೂ ಅಂದು ಕರ್‍ಕೊಂಡು ಹೋಗಾ ಮುಂದ;

'ದೊಡ್ಡೋರು ಸಣ್ಣೋರು ಅಮ್ಮ ಖಬರಿಲ್ದೇ ಉಪ್ಪು ಎಣ್ಣಿ ಇರಲಾರ್‍ದೆ ಉರಿಲತ್ತವ ಇವರ ಮಣ್ಣಾಗಿಡಲಿ. ಏನ್ ಕಡಕಂತರ್ ಕಾಯ್ಕೊಂಡು ಕುಂತದೊ ಯಾರಿಗ್ಗೊತ್ತು.' ಅಂತ ಮನಸಿನಗಾ ಶಾಪ ಹಾಕ್ತಿದ್ದಳು ಸಂಗಮ್ಮ.

ಬೆಟ್ಟು ಒತ್ತೋರು ಹೆಬ್ಬಟ್ಟು ಒತ್ತುತಿದ್ದರು. ಹೆಸರು ಬರಿಯೋರು ಹೆಸರು ಬರೀತಿದ್ದರು. ತಾಲೂಕಿನಿಂದ ಬಂದ ಆಪೀಸರ್‌ಗೋಳು, ನೀವು ಇಂಥಾ ದಿನ ಬರ್‍ರಿ ಅಂತ ತಾಕೀತು ಮಾಡ್ತಿದ್ದರು.

'ಆ ವರ್ಸ ನಾವು ಹೊಲ ಹಾಕಿದಿಲ್ಲ, ನಮ್ಮ ಬಲ್ಲಿ ಖಾಸೀಮನ ಅಪ್ಪ ದುಡೀಲಾಕಿದ್ದ ಜರಾ ಛೆಂದ ನೋಡ್ರಿ ದೇಸಾಯಿ' ಅಂತ ಮಸ್ತಾನ ಹೇಳ್ತಿದ್ದ.

'ನೀ ಅಂತ್ಯೊ ಠಾಕರೂ, ಶಂಕ್ರ ಹೊಲ ಹೈಕೊಂಡಿದ್ದು ಗುಡ್ಡದ ಮ್ಯಾಲಿಂದಲ್ಲ ಹಳ್ಳದ ಹೊಲ ಅಮ್ಮದು ಕಿಲ್ಲಿ ಪಾಣಿದಾಗೇ ನಿಚ್ಚಳ ಬಂದದಲ್ಲ'.

ಅಂತ ದೇಸಾಯಿ ಬಟ್ಟು ಮಾಡಿ ತೋರಸ್ತಿದ್ದ.

'ಏ ನಾಗಿಂದ್ರ ಬಾರೊ' ತಮ್ಮ ಲಚ್ಚಣ ದೇಸಾಯಿ ಕರದಾಗ ಮಂದ್ಯಾಗಿಂದ ಎದ್ದು ಬಂದ ನಾಗಿಂದ್ರ ಚಪ್‌ಗಲ್ ಹೈಕೊಂಡು ಕುಂತ.

'ಇಗಾ ತಮ್ಮ ಹನ್ನೊಂದು ತಿಂಗಳು ಈರಯ್ಯನ ಹೊಲ ಮಾಡಿದ್ದಿ. ಅವರ ಮಠದ ತೆಳಗಿನ ಎಡ್ಡು ಕೂರಿಗಿ ಹೊಲಕ್ಕ ನೀ ಹಕ್ಕುದಾರಿದ್ದಿ ನೋಡು'.

ಲಚ್ಚಣ ದೇಸಾಯಿ ಹೇಳಿ;

'ನೀ ಮಂಗಳಾರ ದಿನ ಆಫೀಸಿಗಿ ನಡಿ ಅಂದ'.

'ಎದಕ ಹೋಬೇಕರಿ ದೇಸಾಯಿ?' ನಾಗಿಂದ್ರ ಕೇಳ್ದಾಗ.

'ಏ ಮಳ್ಳ, ಇಲ್ಲಿ ಏನು ನಡದದಮ್ಮದರ ಖಬರ್ ಅದನೋ ಇಲ್ಲೊ. ಎದಕಂದರ ನಿಬ್ಬಣಕ ಹೋತೇನು? ಹೊಲ ಪಟ್ಟಾ ಮಾಡ್ಕೋಲಕ ನಡಿ ಅಲ್ಲತ್ತೀನಿ' ಅಂದ.

'ಬ್ಯಾಡರಿ ದೇಸಾಯಿ, ನನಗ ಅವರ ಹೊಲ ಬ್ಯಾಡ. ನಮಗ ದೇವರು ಕೊಟ್ಟಾನ. ಹಸದು ಬಂದೋರಿಗಿ ಹಿಡಿ ತುಂಬಾ ಅನ್ನಾ ಹಾಕಾ ಮಠದ ಈರಯ್ಯಕಾಕನ ಜಮೀನು ನನಗ ಬ್ಯಾಡ'.

ಅಂದಿದ್ದು ಕೇಳಿ ಸುತ್ತಮುತ್ತ ನೆರದಿದ್ದ ಮಂದಿ ಬಾಯಿ ಬಾಯಿ ಬಿಡ್ಲತ್ತರು.

'ಅಲಾ ಇವನ, ಇಂವ ಏನು ಧಡ್ಡ ಭಾಡೇಮಗ ಅಂತೀನಿ. ಬಂಗಾರದಂಥ ಹೊಲ ಬ್ಯಾಡಂತನಲ್ಲ'.

'ಸತ್ಯ ಹರಿಚಂದ್ ಆಬೇಕೆಂತ ಮಾಡ್ಯಾನೋ ಏನೊ?

'ಹಂದಿ ಪೀಳಿಗಿ ಹದನಾರು ಇದ್ದಂಗ ಮನಿ ತುಂಬ ಚೋಟು ಗೇಣು ಅವ ಅಮ್ಮದರ ತಿಳೀಬಾರ್‍ದ'

'ಅಲ್ಲ ಚಿಗವ್ವ, ಕೈ ಕಾಲು ಹಿಡದು ಎಪ್ಪಾ, ಎಣ್ಣಾ, ಅಂದ್ರ ಐದ್ದುಡ್ಡು ಹುಟ್ಟಲ್ಲ ಹಿಂಥದರಾಗ ಹೊಲ ಬ್ಯಾಡಂತನಲ್ಲ. ಖರೆ ಅಂದ್ರ ನಾಗಪ್ಪನ ತೆಲಿ ಕೆಟ್ಟಿರಬೇಕು'.

ನೆರದಿದ್ದ ಮಂದಿ ತಮ್ಮ ತಮ್ಮೊಳಗ ಆಡ್ಕೋತಿದ್ರು. ನಾಗಿಂದ್ರ ಹೀಂಗಂದೇನಮ್ಮ ಕಲ್ಪನಾ ಈರಯ್ಯಗನೂ ಇರಲಿಲ್ಲ. ಇವನ ಮಾತು ಕೇಳಿ ಅವನೂ ನೆಲ ಮುಗಲು ನೋಡಲತ್ತ.

'ಇಗಾ ತಮ್ಮ ನಾಗಿಂದ್ರಪ್ಪ ನೀ ಊರಿಗೇ ದೊಡ್ಡಂವ ಅನ್ನಸ್ಕೊ ನಂದೇನು ತಕಾರಾರಿಲ್ಲ.

ಮನಸು ಬದಲಾಸಿ ಮತ್ತ ನಾಳಿಗಿ ಬಂದು ಹೊಲ ಅಂದ್ರಿಲ್ಲ ನೆಲ ಅಂದ್ರಿಲ್ಲ. ಈಗೇ ಇನ್ನೊಂದು ಮೋಖಾ ಕುಡ್ತೀನಿ ಜರಾ ಸುಚಾಯಿಸಿ ನೋಡು'. ಲಚ್ಚಣ್ಣ ದೇಸಾಯಿ ಹೇಳ್ದ. ಆಜೂ ಬಾಜೂ ಕುಂತವರ ಮಾರಿ ನೋಡ್ದ ನಾಗಿಂದ್ರ ಹೆಂಗಸರ ನಡು ಕುಂತಿದ್ದ ತನ್ನ ಹೇಣ್ತಿ ಮಾರಿ ತುಂಬ ಅದೇ ಚಂದ್ರಾಮನ ಬೆಳದಿಂಗಳಿರದು ಖಾತ್ರಿ ಮಾಡ್ಕೊಂಡು'.

ಇದೇನು, ಯಾಪಾರಾ, ವ್ಯವಹಾರ ನಾ ಮಾತು ಬದಲಾಸದಕ? ಹೊಲ ಬ್ಯಾಡಾಂತ ಒಮ್ಮ ಹೇಳಿನಿ ಖಲಾಸ್ ಮತ್ತೇನು ಮಾತಿಲ್ಲ ಕತಿ ಇಲ್ಲ'.

ಅಂದು ಶೆಲ್ಯ ಝಾಡಸಿ ಹೆಗಲ ಮ್ಯಾಲ ಹೈಕೊಂಡು ಮಂದ್ಯಾಗಿಂದ ಎದ್ದು ಹೊರಗ ಬಂದ. ಮಂದೆಲ್ಲ ಹದ್ದಿನಂಗ ಇವನಿಗೇ ನೋಡ್ತಿದ್ರು.

ರಾತ್ರಿ ಉಂಡು ಸೂರು ನೋಡ್ಕೋತ ಹೊರಸಿನ ಮ್ಯಾಲ ಮಲಗಿದ್ದ ಈರಯ್ಯನ ಮನಸಿನ ತುಂಬ ನಾಗಿಂದ್ರನೇ ತುಂಬಿ ಹೋಗಿದ್ದ. 'ನಾಗಿಂದ್ರನಂಥೋರು ಭೂಮಿ ಮ್ಯಾಲಿನ್ನ ಇರದರಿಂದೇ ಹೊತ್ತಿಗಿ ಸರಿಯಾಗಿ ಮಳೆ ಬೆಳೆ ಆಗಲತ್ತವಂತ ಯೋಚಿಸ್ತಿದ್ದ. ಈಟೊತ್ತಿಗಿ ಅಂವನ ಪಾಲಬೇಕಿದ್ದ ಹೊಲ ನಮಗೇ ಉಳೀತಲ್ಲ ಅನ್ನೋ ಸಂತೋಷದೊಳಗ ಈರಯ್ಯನ ಹೇಣ್ತಿ ದೇವರ ಜಗುಲಿ ಮ್ಯಾಲ ತುಪ್ಪದ ದೀಪ ಹಚ್ಚಿ ಪೂಜಿ ಮಾಡಿದ್ದಳು.

ಮಳಿ ಬೆಳಿ, ಬ್ಯಾಸಿಗಿ ಮತ್ತು ಸುಗ್ಗಿ ಕಾಲ ಹಿಂಗೇ ಜಾರತಿದ್ದವು. ಪುಗಸಟ್ಟೆ ಬಂದಿದ್ದ ಹೊಲ ಕೆಲವರು ಮಾರಿದ್ರು, ಏನಾದರಾಗಲಿ ಅಂತ ಕಡದು ಹಾಕಿದ್ರು, ಮಕ್ಕಳು ಮರಿ ಮದಿ ಮಾಡಿದ್ರು, ದೊಡ್ಡೂರಾಗ ಮನಿ ತೊಗೊಂಡ್ರು, ಲಂಚ ಕೊಟ್ಟು ಮಕ್ಕಳಿಗಿ ನೌಕರಿಗಿ ಹಚ್ಚಿದ್ರು, ಬೆಳಿಲಾರ್ದಂತ ಖಟಕು ಭೂಮಿ ಸಿಕ್ಕಿದವರದು ಅದೇ ತಿಕ್ಕದು ಬುಕ್ಕದು ನಡದಿತ್ತು.

ಹೊಲ ಕಳಕೊಂಡೋರು ಏಸದಿನ ಅಂತ ಮಾಲಿಕರಂಗೇ ಇದ್ದಾರು? ಸರಕಾರಿ ನೌಕರಿ ಇಲ್ಲ ಮತ್ತ ಬ್ಯಾರೆ ಧಂದಾ ಇಲ್ಲ. ಹರಕು ಮುರುಕು ಬಟ್ಟೆ ಹ್ಯಾಂಗೊ ಮೈ ಮುಚ್ಚೀತು, ಹೊಟ್ಟೆ ಕೇಳಬೇಕಲ್ಲ. ಆಳಾಗಿ ದುಡದವರ ಕೈಯ್ದಾಗೇನು ಹರಗಿ ಬಿತ್ತಿ ಕೂಲಿ ಮಾಡದು? ಅಮ್ಮ ಮರ್ಯಾದೆ ಕಾಡತಿತ್ತು. ಧೊರಿ, ಸೌಕಾರ, ಮಾವಾ, ಕಾಕಾ ಅನ್ನಸ್ಕೋತಿದ್ದ ಮಂದಿ ಮನಿ ಹೊರಕ ಬರದಕೇ ಹಿಂದ ಮುಂದ ನೋಡ್ತಿದ್ರು. ಇಂಥೋರ ಹೊಲದಾಗ ಗಾಡಿಗಳ್ಯಾ ಮಾಡದಕ್ಕಿಂತ ಕಲಬುರ್ಗಿಗಿ ಹೋಗಿ ಕಪ್ಪು ಬಸಿ ತೊಳ್ಯಾದೆ ಛಲೊ ಅಂತ ಲೆಕ್ಕ ಹಾಕಿದ ಶಿವಬಸ್ಸಪ್ಪ, ನೂರಂದ, ಚೆನ್ನಪ್ಪಗೌಡ, ಬಸಲಿಂಗ ಖಿಟ್ಲಾ ತೊಗೊಂಡು ಊರೇ ಬಿಟ್ಟರು. ಮನ್ಯಾಗಿನ ಎತ್ತು ಗಾಡಿ ಮಾರಿದ ರವಿಕಾಂತ ಮಾಲಿಪಾಟೀಲ ನಡು ಊರಾಗೊಂದ ಕಿರಾಣಿ ದುಕಾನು ತೆರಕೊಂಡು ಕುಂತ್ರ 'ಕಪಕುಲದೋರು ಕುಡದ ಕಪ್ಪು ಬಸಿ ತೊಳ್ಯಾದು ಬ್ಯಾಡೊ ತಮ್ಮ ಈರಪಾಕ್ಷಿ' ಅಂತ ಊರಾಗಿನ ಹಿರೇರು ಹೇಳಿದರನೂ ಕೇಳಲಾರ್ದೆ ಹೇಣ್ತಿ ಮೈ ಮ್ಯಾಲಿನ ಬಂಗಾರ ಒಡಿ ಮಾರಿ ಹೋಟೆಲ್ ಸುರು ಮಾಡೇ ಬಿಟ್ಟ. ಹೊದಲೂರ ನೀಲಕಂಠ ಮತ್ತೊಂದು ನಮೂನಿ ಒಪ್ಪಂದ ಮಾಡ್ಕೊಂಡ. ಒಂದು ದಿನ ಮಗತುಮ್‌ಗ ಮನಿಗಿ ಕರಿಸಿ;

'ಇಗಾ ಮಗತುಮ್ ನನ್ನ ಹೊಲ ಅರ ನಿನ್ನ ಕಬ್ಜಾ ಆಗ್ಯದ. ನಿನ್ನ ಬಲ್ಲಿ ಎತ್ತಿಲ್ಲ ಬಾರ್ದಾನಿ ಇಲ್ಲ. ಈ ಗಾಡಿ ಎತ್ತು ಇಟಗೊಂಡು ಏನಾಡ್ಲಿ? ನನ್ನ ಎತ್ತು ಗಾಡಿ ನೀನೇ ತೊಗೊ. ನಾನೂ ನಿನ್ನ ಸಂಗಟ ಹೊಲದಾಗ ದುಡೀತೀನಿ. ಬೆಳದಿರದಾಗ ಚಾರಾಣೆ ಹಿಸ್ಸಾ ನನಗ ಕುಡು ಸಾಕು' ಅಮ್ಮ ಇಚಾರ ಇಟ್ಟಾಗ ಈ ಮಾತಿಗಿ ಮಗತುಮನೂ ಒಪ್ಪಿದ್ದ. ಓದದಂತ ಕಲಬುರ್ಗಿಯಾಗಿದ್ದ ನಾಕರ ಪಾರಗೊಳು ಊರಿಗಿ ವಾಪಸ್ ಬಂದವು. ಜಂಗಳದನ ಊರು ಸೇರೊ ಹೊತ್ತಿಗಿ ದಿನಾ ತಪ್ಪಾಲಾರ್ದೆ ನಡು ಊರಾಗಿನ ದೇವಕಿ ಗುಡಿ ಕಟ್ಟೆ ಮ್ಯಾಲ ಬಂದು ಕೂಡ್ತಿದ್ದ ಸಂಗಪ್ಪ ಸೌಕಾರ ಬರದೇ ಬಿಟ್ಟ.

ಶಿವಲಿಂಗನ ಮನಿ ಬಟ್ಟೆ ಒಗೀತಿದ್ದ ಸಂಬಣ್ಣನ ಹೆಣ್ತಿ;

'ಹೆಸರಿನಾಗ ತುರ್ತು ಸದಿ ಬಂದದ ಆಯಿ, ಕೂಲಿ ಮಂದಿನಿ ಎಬ್ಬಸಬೇಕು, ಹೊಲದು ಮನಿದು ಕೆಲಸಾನೆ ಸಾಕಾಗಿ ಹೋತದ ನಿಮ್ಮ ಅರಬಿ ಬ್ಯಾರೆ ಯಾರ ಕೈಲೆರ ಒಗಸ್ಕೋರಿ' ಅಂದಿದ್ದಳು.

ಊರ ಮಂದಿ ಮನಸು ಒಡದವು. ಒಬ್ಬರ ಮಾರಿ ಒಬ್ರು ನೋಡಿಽ ನೋಡಲಾರದಂಗ ಹೊಂಟು ಹೋತಿದ್ರು.

ಅಂದಪ್ಪನ ಮಗನ ಗಟ್ಟಿ ಆಗಿದ್ದ ಮದಿ ಮುರದು ಹೋಯ್ತು. 'ನಿನ್ನ ಮಗ ಏನು ಓದಿ ಬರದಂವಲ್ಲ, ಅಮೀನ್‌ಸಾಬ್ ನೌಕರೀನು ಇಲ್ಲ. ಛಲೋ ಭೂಮಿ ಅವ, ಒಬ್ಬನೆ ಮಗ ಅಂತ ಮಗಳಿಗಿ ಕುಡದಕ ತಯಾರಾಗಿದ್ದ. ಇದ್ದ ಹೊಲನೇ ಹೋಗಿ ನೀವೇ ಸಲಕಿ ಗುದ್ದಲಿ ಹಿಡದು ನಿಂತ ಮ್ಯಾಲ ಈ ಮನ್ಯಾಗ ನನ್ನ ಮಗಳೇನು ಸುಖ ಕಾಣ್ತಾಳ' ಅಂತ ಬೀಗ ಹೇಳ್ದಾಗ.

'ಹೀಂಗಂದರ ಹ್ಯಾಂಗರೀ ಬೀಗರೆ, ಮದಿ ಆದಮ್ಯಾಲ ಹೀಂಗ ಆಗಿತ್ತಂದ್ರ ನಿಮ್ಮ ಮಗಳಿಗಿ ಮನಿಗಿ ಕರ್ಕೊಂಡು ಹೋಗ್ತಿದ್ರ್ಯಾ? ನಮ್ಮ ಮ್ಯಾಲ ನಂಬಿಕಿ ಇಡ್ರಿ. ನಾವು ಮನಿ ಮಂದಿ ದುಡದು ನಿಮ್ಮ ಮಗಳು ಹೊಸ್ತಲು ದಾಟಿ ಹೊರಗ



ಊಟ ಬಲ್ಲವನಿಗೆ ರೋಗವಿಲ್ಲಾ ; ಜನರ 'ನಾಡಿ-ಮಿಡಿತ' ಬಲ್ಲವನಿಗೆ 'ಸೋಲು' ಇಲ್ಲಾ..!

ಬರಲಾರ್ದಂಗ ನೋಡ್ಕೊತೀವಿ. ಮದಿ ಬ್ಯಾಡಂತ ಅನ್ನ ಬ್ಯಾಡ್ರಿ'.

ಅಂತ ಗಂಡ ಹೇಣ್ತಿ ಹಂಬಲಿಸಿದರೂ ಇವರ ಮಾತೇನು ಬೀಗರ ಕಿವಿಯೊಳಗ ಹೋಗಲಿಲ್ಲ ಮದಿವಿ ಮುರದು ಬಿತ್ತು.

ಉಂಡು ಬಂದು ಮಠದ ಅಂಗಳದಾಗಿನ ಮಂಚದ ಮ್ಯಾಲ ಅಡ್ಡಾದ ಈರಯ್ಯ ಮುಗಲು ನೋಡ್ತಾನ ಚಂದ್ರಾಮ ನಿಚ್ಚಳಾಗಿ ಜಗಕ್ಕ ಬೆಳಕು ಚೆಲ್ಲಿದ್ದ. ಮುಂಜೇನಿ ನಾಗಿಂದ್ರ ಮಠಕ ಬಂದು ಹೇಳಿದ ಮಾತು ನೆನಪಾದವು.

'ಮುತ್ಯಾ, ನಿಮ್ಮ ಮ್ಯಾಲ ಭರೋಸಾ ಇಟ್ಟೇ ಬಂದೀನಿ ಇಲ್ಲ ಅನ್ನಬ್ಯಾಡ್ರಿ. ನಮ್ಮಂತ ಬಡೂರ ಮಕ್ಕಳಿಗಿ ನೌಕರಿ ಸಿಗದೇ ದುಸ್ತರದ. ನಮ್ಮ ಜಗಪ್ಪಗ ಆದೇನೊ ಥಂಧಂದು ಸರ್ಕಾರಿ ನೌಕರಿ ಬಂದದಂತ. ಐವತ್ತು ಸಾವಿರ ಲಂಚ ಕೊಟ್ರ ಕೆಲಸ ಖಾತ್ರಿ ಅಂತ. ಹ್ಯಾಂಗರ ಮಾಡಿ ನೀವು ರೊಕ್ಕದ ಇಂತಜಾಮ್ ಮಾಡದರೆಂದ್ರ ನೌಕರಿ ಗಟ್ಟಿ ಅಂದಾನ. ಹೊಟ್ಟಿ-ಬಟ್ಟಿ ಕಟ್ಟಿ ಮೂರ್‍ನಾಕು ವರ್ಷನಾಗ ನಿಮ್ಮಗಂಟು ಬಡ್ಡಿ ಚುಕ್ತಾ ಮಾಡ್ತೀನಿ. ಬೇಕಾದರ ಛಾಪಾ ಕಾಗದ ಮ್ಯಾಲನೂ ಬರಕೋರಿ.' ಅಂದಿದ್ದ.

'ಹೀಂಗ ಏಕ್‌ದಮ್ ಬಂದು ಪನ್ನಾಸ್ ಹಜಾರಂದ್ರ ನಾ ಎಲ್ಲಿಂದ ತರಲ್ಯೊ ನಾಗಿಂದ್ರ? ಐದ್ಹತ್ತು ಸಾವಿರಂದರ ಏನರ ಖಟ್‌ಪಟ್ ಮಾಡ್ತಿದ್ನಪ್ಪ. ಇರಲಿ, ಶನಿವಾರತನ ತಡಿ ನಾಳಿಗೇ ನಾ ನಮ್ಮ ದೊಡ್ಡ ಹುಡುಗನ ಬಲ್ಲಿ ಹೋಗಿ ಏನರ ಹುಟ್ಟತದೇನೊ ಕೇಳಿ ಬಂದು ಏನಮ್ಮದು ಹೇಳ್ತೀನಿ'.

ಅಂತ ಹೇಳಿ ಕಳಸಿದ್ದ.

ಮಗ್ಗಲು ಹೊಳ್ಳಿದ ಈರಯ್ಯ;

'ಮಗನಿಗಿ ನೌಕರಿ ಹತ್ತಿ ಹದನಾಕು ವರ್ಸಾಯ್ತು. ಇಲ್ಲೀತನ ಒಂದು ದುಡ್ಡು ನಾನರ ಕೇಳಿಲ್ಲ. ಈಗ ಕೇಳಿದ್ರ ಇಲ್ಲ ಅಲ್ಲಾಕಿಲ್ಲ'

ಅಂತ ತನಗ ತಾನೇ ಹೇಳಿಕೊಂಡು ಕಣ್ಣು ಮುಚ್ಚಿದ.

ಈರಯ್ಯ ಮನಿಗಿ ಬರದರಾಗೆ ಮಗ ಆಫೀಸಿಗಿ ಹೋಗಿದ್ದ. ಮಕ್ಕಳನೂ ಸಾಲಿಗಿ ಹೋಗಿದ್ದವು. ಮತ್ತೊಮ್ಮ ಮೈ ತೊಳಕೊಂಡು ಊಟ ಮಾಡಿದಂವ ಫ್ಯಾನಿನ ಗಾಳ್ಯಾಗ ಗಡದ್ದ ನಿದ್ದಿ ಮಾಡ್ದ.

ರಾತ್ರಿ ತಂದಿ ಮಗ ಮೊಮ್ಮಕ್ಕಳು ಕೂಡೇ ಊಟ ಮಾಡಿದ್ರು. ಸೊಸಿ ಹಾಸಿಗಿ ಹಾಸಿ ಕೆಳಗಿಳದು ಬಂದಾಗ ಮಗ ಮ್ಯಾಲಿನ ಖೋಲಿಗಿ ಬಂದ. ಅಪ್ಪ ಯಾವುದೊ ಪುಸ್ತಕದ ಹಾಳಿ ತಿರುಗಸ್ತಿದ್ದ. ಮನಿ, ಊರಿನ ಸುದ್ದಿ ಮಾತಾಡಿದ ಮ್ಯಾಲ ವಿಷಯಕ ಬಂದ ಈರಯ್ಯ ತಾ ಬಂದ ಸಮಾಚಾರ ತಿಳಸ್ದ.

'ಬಾಬಾ, ಹಳ್ಳೀ ಮಂದಿ ಮಾತು ನಂಬದು ನೀರಿಲ್ಲದ ಹಾಳ ಬ್ಯಾವಾಗ ಹಾರೋದು ಎರಡೋ ಒಂದೆ. ಐವತ್ತು ಸಾವಿರಂದರೇನು ಕಮ್ಮ ಆಯ್ತಾ? ಅವನ ಮಗ ಓಟೊಂದು ಶ್ಯಾಣ್ಯಾ ಇದ್ದನಂದ್ರ ತಾನೇ ನೌಕರಿ ಸಿಗ್ತಿತ್ತು. ಪನ್ನಾಸ್ ಹಜಾರಂದರ ಏನಂತ ತಿಳಿದಾನಾಂವ? ನನ್ನ ಮಕ್ಕಳನೂ ದೊಡ್ಡೋರಾಗ್ಯಾರ. ಏಸು ರೊಕ್ಕ ಆದರನೂ ಅವರಿಗೇ ಸರಿಯಾಗಲ್ಲ. ಇಂಥದರಾಗ ಐವತ್ತು ಸಾವಿರ ನಾ ಎಲ್ಲಿಂದ ತರಲಿ? ಲಂಚ ಕೊಟ್ಟು ನೌಕರಿಗಿ ಸೇರದಕಿಂತ ಹೊಲದಾಗ ದುಡದು ತಮ್ಮದು ಕಲೀಲಾಕ ಹೇಳ್ರಿ. ಕೈಯ್ದಾಗಿಂದು ಕೊಟ್ಟು ಕ್ವಾಡಗಾಗದಕಿಂತ ಇಲ್ಲಂತ ಹೇಳಿ ಕೈ ತೊಳಕೋಮದು ಛಲೋ ಅಲ್ಲ?'

ಅಂತ ಮಗ ಹೇಳ್ದಾಗ;

'ಅಲ್ಲೋ ಬಸವಾ, ನಾಗಿಂದ್ರಪ್ಪ ಎಲ್ಲೋರಂಗ ಅಲ್ಲ. ದೇವರಂಥಾ ಮನುಷ್ಯ. ನೀ ಇನ್ನಾ ಸಣ್ಣಾಂವಿದ್ದಿ ಸರಕಾರದ ಕಾನೂನು ಬಂದು ಊರಮಂದಿ ಹೊಲನೇ ಕಳಕೊಂಡ್ರು. ಆವಾಗ ಇವನೂ ನಮ್ಮ ಭೂಮಿ ಪಟ್ಟಾ ಮಾಡ ಸ್ಕೋಂಡಿದ್ನಂದ್ರ, ಈವತ್ತ ನೀ ಈ ಜಾಗದಾಗ ಇರ್ತಿದ್ಯಾ? ಜರಾ ಇಚಾರ ಮಾಡು ಅವನಿಗಿನೂ ಈಗೊಂದು ಟೇಮ್ ಅದ. ಅಂವ ಮಾಡಿದ ಉಪಕಾರಕ ನಾವೆಲ್ಲ ಬೀದಿ ಪಾಲಾಗಿಲ್ಲ. ಅಂವ ಏನು ಪುಗಸಟ್ಟಿ ಕೇಳಿಲ್ಲ ಬಡ್ಡಿಗಿ ಸಾಲ ಕೇಳ್ಯಾನ'.

ಅಂತ ಹೇಳ್ದಾಗ ಎದ್ದು ನಿಂತ ಬಸವಾ;

'ಅದೇನರ ಇರವಲ್ಲದ್ಯಾಕ ನನ್ನ ಬಲ್ಲೆಂತೂ ರೊಕ್ಕ ಇಲ್ಲ. ನೀವೇನು ಮಾಡ್ತಿರೋ ಮಾಡ್ಕೋರಿ'.

ಅಂತ ಹೇಳಿ ಬಾಗಲು ಮುಚಗೊಂಡು ಕೆಳಗ ಇಳದು ಬಂದ. ಈರಯ್ಯನ ಮನಸು ಮಗನ ಮಾತು ಕೇಳಿ ಘಾಸಿ ಆಯ್ತು. ಲಕ್ಷಾಂತರ ರೂಪಾಯಿ ಮಗನ ಬಲ್ಲಿ ಅವ ಅಮ್ಮ ಸತ್ಯಾನೂ ಈರಯ್ಯಗ ತಿಳದಿತ್ತು. ಕೊಡೊ ಮನಸ್ಸೇ ಇಲ್ಲದವನ ಬಲ್ಲಿ ಏಟಿದ್ದರ ಎದಕ ಬಂತು, ಅಂತ ಸಮಾಧಾನ ಮಾಡ್ಕೊಂಡು ಲೈಟು ಆರಿಸಿದ.

ಈರಯ್ಯ ಗುರುವಿನ ಗದ್ದುಗಿ ಮುಂದ ಚಾಪಿ ಹಾಸ್ಕೊಂಡು ಕುಂತು ಪಂಚಾಂಗ ನೋಡ್ತಿದ್ದಾಗ ಒಳಗ ಬಂದ ನಾಗಿಂದ್ರಪ್ಪ ಪಾದುಕ ಮುಟ್ಟಿ ನಮಸ್ಕಾರ ಮಾಡಿ ಕುಂತು;

'ಬಾ ಅಂತ ಹೇಳಿ ಕಳಸಿದ್ರಲ್ಲ ಮುತ್ಯಾ ಯಾಕ?' ಅಂತ ಕೇಳ್ದ.

ಪಂಚಾಂಗ ಮುಚ್ಚಿಟ್ಟ ಈರಯ್ಯ 'ಕೂಡು ಬರ್ತೀನಿ' ಅಂತ ಎದ್ದು ಒಳಗ ಹೋಗಿ ಬ್ಯಾಗ ತೊಗೊಂಡು ಹೊರಗ ಬಂದು ಕುಂತು ಬ್ಯಾಗಿನೊಳಗಿಂದ ನೂರರ ನೋಟಿನ ಐದು ಗಟ್ಟಾ ತೆಗದು ನಾಗಿಂದ್ರನ ಮುಂದಿಟ್ಟು;

'ಇಗಾ ತೊಗೊ ಪೂರಾ ಪನ್ನಾಸ್ ಹಜಾರ್, ನಿನಗ ಹ್ಯಾಂಗ್ಯಾಂಗ ಸೌಡ್ ಆತದೊ ಹಾಂಗ ಚುಕ್ತಾ ಮಾಡು. ಮದಲ ನಿನ್ನ ಮಗನಿಗಿ ನೌಕರಿ

ಖಾತಿರ ಆಗ್ಲಿ' ಅಂದ.

'ಹಂಗಾರ ನಾ ಕೇಳಿದ್ದ ಸುದ್ದಿ ಖರೇನಾ ಮುತ್ಯಾ?' ಅನುಮಾನದಿಂದ ನಾಗಿಂದ್ರ ಕೇಳಿದ.

'ಅದು ಸುದ್ದಿ ಅಲ್ಲೋ ಖೋಡಿ ಹಕೀಕತ್ತೇ. ಹೊಟ್ಯಾಗ ಹುಟ್ಟಿದ ಮಗ ರೊಕ್ಕ ಇದ್ರೂ ಇಲ್ಲಂದ. ನಿನ್ನಂತ ದೊಡ್ಡ ಮನಸ್ಸು ಅವನಿಗಿತ್ತಂದ್ರ ಹೀಂಗ ಅಂತಿದ್ದಿಲ್ಲ. ಸುಗ್ಗಿ ದಿಂದಾಗ ಮಠಕ ಬಂದ ಅನಾಜಿನಾಗೆ ನಮ್ಮಿಬ್ಬರ ಹೊಟ್ಟಿ-ಬಟ್ಟಿ ನಡೀತದ. ಒಂದು ಕೂರಿಗಿ ಹೊಲ ಸುಲ್ತಾನಸಾಬಗ ಮೂರು ವರ್ಸ ಕಡದು ಹಾಕೀನಿ. ನಿನ್ನ ಕೈಲಿ ಆಯ್ತಾ ವಾಪಸ್ ಕುಡು. ಇಲ್ಲಂದ್ರ ಮನಸಿಗೇನು ಚಿಂತಿ ಹಚಗೋಬ್ಯಾಡ. ನೀನೂ ನನ್ನ ಬೆನ್ನಿಗಿ ಬಿದ್ದ ತಮ್ಮಂತ ತಿಳಕೋತೀನಿ. ಒಟ್ಟಿನಾಗ ನಿನ್ನ ಮಗನಿಗಿ ನೌಕರಿ ಹತ್ತಿದ್ರ ಸಾಕು'.

ಅಂತ ಈರಯ್ಯ ಹೇಳ್ದಾಗ ನಾಗಿಂದ್ರನ ಕಣ್ಣು ತುಂಬಿ ಬಂದವು. ಶೆಲ್ಯದಿಂದ ಕಣ್ಣೊರತಗೊಂಡು;

'ಮುತ್ಯಾ ದೇವರು ಗುಡಿ-ಗುಂಡಾರದಾಗಿಲ್ಲರಿ ನಿಮ್ಮಂಥೋರ ಒಳಗ ಹಾನ'. ಅಂದ ತಲಿ ಕೆಳಗ ಹಾಕಿ.

'ನೀ ಹಾಂಗಂತಿ ತಮ್ಮ ನಾಗಿಂದ್ರು. ನಾ ಏನು ನಿನಗ ಉಪಕಾರ ಮಾಡ್ಲತ್ತಿಲ್ಲ. ದೇವರು ಹನಾನೊ ಇಲ್ಲೊ ಗೊತ್ತಿಲ್ಲ. ಆದ್ರ ನನ್ನ ಮಗನಂಥ ರಾಕ್ಷಸರು ಮಾತ್ರ ಖಾತ್ರಿ ಹರ ನೋಡು. ಹಿಂದಕ ನೀ ಹೊಲ ಬ್ಯಾಡ ಅಂದಿದಿಲ್ಲಂದ್ರ ಈವತ್ತ ತಾನೂ ಕಂತಿಭಿಕ್ಷಾ ಮಾಡಿ ಹೊಟ್ಟಿ ತುಂಬಸ್ಕೊ ಬೇಕಾಗ್ತಿತ್ತು ಅಮ್ಮದು ನನ್ನ ಮಗನಿಗಿ ತಿಳೀಲಿಲ್ಲ. ಇರ್ಲಿ ಮದಲ ನೀ ಹೋಗಿ, ನಿನ್ನ ಮಗನಿಗಿ ಖಳಸೊ ಬಂದೋಬಸ್ತ ಮಾಡು'.


ಅಂತ ಹೇಳಿದ ಈರಯ್ಯ ಗದ್ದುಗಿ ಮ್ಯಾಲಿನ ಟೆಂಗು ನಾಗಿಂದ್ರನ ಕೈಗಿ ಕೊಟ್ಟಾಗ ಅಂವ ಶೆಲ್ಯ ಹಾಸಿ ರೂಪಾಯಿ, ಟೆಂಗು ಕಟಗೊಂಡು ಗದ್ದುಗಿಗಿ ಹಣಿ ಹಚ್ಚಿ ನಮಸ್ಕಾರ ಮಾಡೋವಾಗ ಈರಯ್ಯನೂ ಮನಸಿನಾಗ ನಾಗಿಂದ್ರಗ ನಮಸ್ಕಾರ ಮಾಡ್ತಿದ್ದ.

●

ಪ್ರಾದೇಶಿಕ ಪದಗಳ ಅರ್ಥ

ಪಟ್ಟಾ- ಒಡೆತನ - Registration
ಠಿಕಾಣಿ- ಸೇರು
ಮಡ್ಡಿ -ಸಾಧಾರಣ
ವ್ಹಾರ್‍ಯಾ-ಅದೃಷ್ಟ
ಮಾರಿ-ಮುಖ
ವಾರಿ- ಗುಡ್ಡ
ನಾಕ-ನಾಲ್ಕು
ಮುಂಡಾಮೋಚು - ಇವನಿಗಿಡು
ವರ್ಸ-ವರ್ಷ
ಬೇನಗಿಡ -ಬೇವಿನ ಮರ
ಅಡಿ-ಹೊಲ, ಭೂಮಿ
ಸೊಡ್ಡು - ಕಡ್ಡಿ ಪೊರಕೆ
ಎಡ್ಡು- ಎರಡು
ಚೋರಾಗು- ಔಟಾಗು
ಈಸ್ವೂರ - ಈಶ್ವರ
ಛಿಡಿ- ಮೆಟ್ಟಲು
ಖಂಡಿಕಿ- ಅಂಗುಲ
ಖಾಡು- ಬಂಡೆಯಂತೆ
ಕಡಕಂತರ- ಅಳಗಾಲ
ಬಟ್ಟು- ಬೆರಳು
ತಾಕೀತು- ಎಚ್ಚರಿಕೆ
ನಿಬ್ಬಣ - ಮದುವೆ ಬೀಗರು
ನೆರಿದಿದ್ದ- ಸೇರಿದ್ದ
ಮೋಖಾ - ಅವಕಾಶ
ಸುಚಾಯಿಸಿ - ಯೋಚಿಸಿ
ಹೊರಸು = ಹುರಿಮಂಚ
ಧಂದಾ - ಉದ್ಯೋಗ
ದುಕಾನು - ಅಂಗಡಿ
ಒಡಿ- ಒಡವೆ
ಬಾರ್ದಾನಿ - ಒಕ್ಕಲುತನ
ಸಂಗಟ - ಜೊತೆ
ಹಿಸ್ಸಾ - ಪಾಲು
ಕುಡು - ಕೊಡು
ಇಚಾರ - ವಿಚಾರ
ಜಂಗಳದನ - ಊರದನ
ಸದಿ- ಕಳೆ
ಅರಬಿ - ಬಟ್ಟೆ
ಗಟ್ಟಿ - ನಿಶ್ಚಿತಾರ್ಥ
ಭರೋಸಾ - ಭರವಸೆ
ದುಸ್ತರ - ಕಠಿಣ
ಇಂತಜಾಮ- ವ್ಯವಸ್ಥಾ
ಚುಕ್ತಾ - ಪೂರ್ತಿ
ಛಾಪಾ - stamp
ಖಟಪಟ್ - ಪ್ರಯತ್ನ
ಕಮ್ಮ - ಕಡಿಮೆ
ಬಲ್ಲಿ -ಬಳಿ
ಗಟ್ಟಾ- ಕಂತೆ
ಪೂರಾ- ಪೂರ್ತಿ
ಸೌಡ್ - ಅನುಕೂಲ
ಹಕೀಕತ್ತು - ವಸ್ತು ಸ್ಥಿತಿ
ಅನಾಜು - ಕಾಳು
ಕೂರಿಗಿ- ೪ ಎಕರೆ

ಪದಬಂಧ - ೪



ಪದಬಂಧ ೩ರ ಸರಿಯುತ್ತರ

ಎಡದಿಂದ ಬಲಕ್ಕೆ:

೧. ಅವಿವಾಹಿತ, ೪. ಯುವ ಪ್ರತಿಭೆ, ೭.ನಯಗಾ, ೯. ಚಾಕರಿ, ೧೦. ಕದಿ, ೧೧. ರಚನೆಗಾರ, ೧೪. ಸುತ, ೧೬. ಡಿಜ, ೧೮. ನರಮಾನವ, ೨೧. ಕಣಿ, ೨೨. ನಗರ, ೨೩. ನಯನ, ೨೪. ಹಣ ಸಂಕಟ, ೨೫. ವಾರದ ರಜೆ

ಮೇಲಿನಿಂದ ಕೆಳಕ್ಕೆ :

೨. ವಿಶಾಲ ನದಿ, ೩. ಹಿನ್ನಲೆಗಾರ, ೫. ವರೋಪಚಾರ, ೬. ತಿರಸ್ಕರಿಸು, ೮. ಮನೆ, ೧೦. ಕರಡಿ, ೧೨. ಚಪ್ಪರ, ೧೩. ಕಾನನ, ೧೫. ತರುಣಿ, ೧೭. ಜನ ಕಲ್ಯಾಣ, ೧೮.ನರಕ ಲೋಕ, ೧೯. ಮಾನ, ೨೦. ವನವಿಹಾರ, ೨೧.ಕನಸುಗಾರ.

ಎಡದಿಂದ ಬಲಕ್ಕೆ

೧. ಸುಂದರ, ಓರಣವಾಗಿ ಬರೆದ ಬಂಗಾರದ ಲಿಪಿ.................. (೫)
೪. ನಕ್ಕು ನಗಿಸುವ, ಹಾಸ್ಯ ಮಾಡುವ ವ್ಯಕ್ತಿಗಳು...................... (೫)
೭. ಗರಗರ ತಿರುಗಿಸಿ ಹತ್ತಿಯಿಂದ ನೂಲು ತೆಗೆಯುವ ರಾಟೆ ತಿರುಗಿದೆ. (೩)
೯. ಉತ್ಸವಕ್ಕಾಗಿ ಬೀದಿಯಲ್ಲಿ ಕಟ್ಟಿದ ತಳಿರು........................ (೩)
೧೦. ಸರಕಾರ ವಿಧಿಸಿದ ತೆರಿಗೆ.. (೨)
೧೧. ನೆಪ ತೋರಿಸಲು ಮರೆವು ಹೋಗು............................ (೫)
೧೪. ತಿರುಪತಿಗೆ ಹೋದ ಗಂಡ ತಿರುಗಿದ್ದಾನೆ........................ (೨)
೧೬. ಕಮರಿಯಲ್ಲಿ ಬಿದ್ದ ಆನೆ ತಿರುಗಿದೆ................................ (೨)
೧೮. ಪರಿಚಯವಿಲ್ಲದಿದ್ದರೂ ಉಪಚಾರ ಮಾಡಿದ ಸೇವಕ............ (೫)
೨೧. ನಸು ಮೊಗದ ಪುತ್ರ.. (೨)
೨೨. ಸಾಗರ ದಾಟಿದರೂ ಸಿಗಲಾರದ ಸಂಬಳ........................ (೩)
೨೩. ಮರಗುಟ್ಟುವ ಹಾಗೆ ಶಬ್ದ ಮಾಡಿದ ಶಂಕರನ ವಾದ್ಯ............. (೩)
೨೪. ಜಾತ್ರೆಯಲ್ಲಿ ದಾಟಲು ಸಾಧ್ಯವಾಗದಂಥ ಮನುಷ್ಯರ ಸಮೂಹ, ಗದ್ದಲ.. (೫)
೨೫. ರಮಣನನ್ನು ನೆನೆಯುತ್ತ ಸಾಯುವ ಕೊನೆಯ ಘಟ್ಟ............ (೫)

ಮೇಲಿನಿಂದ ಕೆಳಕ್ಕೆ

೨. ವ್ರತ ಮಾಡಿ ಬೇಡಿಕೊಂಡಾಗ, ತಥಾಸ್ತು ಎನ್ನುವ ಶಿವ........... (೫)
೩. ಅನಕ್ಷರಸ್ಥನಾದರೂ ಮಾಡಿದ ತಪ್ಪಿಗೆ ಮನ್ನಿಸು ಎಂದು ಕೇಳಿಕೊಂಡಿದ್ದು... (೫)
೫. ಕರುವನ್ನು ಹೊಡೆದೋಡಿಸಿದೆ, ದಯೆ ತೋರಿಸು................ (೫)
೬. ಪ್ರಜೆಗಳ ಅಂಕಿ ಅಂಶ ತಿಳಿಯಲು, ಸರ್ಕಾರ ಮಾಡಿದ ಎಣಿಕೆ ಕಾರ್ಯ.. (೫)
೮. ಸಂಘಟನೆಯಿಂದ ಕೂಲಿಕಾರರು ಮಾಡಿದ ಸತ್ಯಾಗ್ರಹ........... (೨)
೧೦. ಕಟ ಕಟನೆ ಹಲ್ಲು ಕಡಿಯುತ್ತ ವೀರನು ಹೊರ ತೆಗೆದ ಖಡ್ಗ...... (೩)
೧೨. ನನಗರಿವಿಲ್ಲದಂತೆ ಬಾರಿಸಿದ ದೊಡ್ಡ ಡೋಲು................. (೩)
೧೩. ಹಾರ ಹಾಕಿಸಿಕೊಳ್ಳಲು ಮಹಾಜನರಲ್ಲಿ ಬಂದು ಇರುವಿಕೆ ತೋರಿಸಿಕೊಂಡಿದ್ದು.. (೩)
೧೫. ಪಂಗನಾಮ ಹಾಕಿ ಹಾರಿ ಹೋದ ಚಿಟ್ಟೆ........................ (೩)
೧೭. ಕಟಂಜನದಲ್ಲಿ ನಿಂತು ಮಾಡಿದ ಮೋಸಗಾರಿಕೆ................. (೫)
೧೮. ಪರಮೇಶ್ವರನೂ ಮೆಚ್ಚಬಹುದಾದ ಅತೀ ಸಂತೋಷ......... (೫)
೧೯. ಚಾಡಿ ಹೇಳಲು ಬಂದವರಿಗೆ ಹೊಡೆಯಲು ಬಳಸಿದ ಬಾರಕೋಲು (೨)
೨೦. ಕಡ್ಲೆಕಾಯಿ ತಿನ್ನಲು ಹೋಗಿ ಕುಳಿತ ಸಮುದ್ರ ದಡ........... (೫)
೨೧. ಮತಿ ಗೆಟ್ಟರೂ ಸಹ ತೆಗೆದುಕೊಂಡ ಸಾಲ ತಿರುಗಿಮುಟ್ಟಿಸಿದ್ದು.. (೫)

○ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ಸಿಹಿ ಸಜ್ಜೆ ರೊಟ್ಟಿ

ಬೇಕಾಗುವ ಸಾಮಗ್ರಿಗಳು



ಅರ್ಧ ಕೆ.ಜಿ. ಸಜ್ಜೆಹಿಟ್ಟು,೩೦೦ ಗ್ರಾಂ ಬೆಳ್ಳನೆಯ ಅಚ್ಚು ಬೆಲ್ಲ, ಒಂದು ಚಮಚ ಏಲಕ್ಕಿ ಪುಡಿ, ಗಸಗಸೆ, ತುರಿದ ಒಣ ಅಥವಾ ಹಸಿ ಕೊಬ್ಬರಿ, ರುಚಿಗೆ ತಕ್ಕಷ್ಟು ಸಣ್ಣದಾಗಿ ಪುಡಿ ಮಾಡಿದ ಬಾದಾಮಿ, ಗೋಡಂಬಿ, ಜಾಕಾಯಿ.

ಮಾಡುವ ವಿಧಾನ

ಬೆಲ್ಲವನ್ನು ಸಣ್ಣದಾಗಿ ಪುಡಿ ಮಾಡಿ ಅಗತ್ಯವಿದ್ದಷ್ಟು ತಣ್ಣನೆಯ ನೀರಿನಲ್ಲಿ ಬೆಲ್ಲವನ್ನು ಒಂದು ಗಂಟೆಯವರೆಗೆ ಕರಗುವಂತೆ ಇಡಿ. ನೀರಿನಲ್ಲಿ ಬೆಲ್ಲ ಪೂರ್ಣ ಕರಗಿದ ನಂತರ ಸಜ್ಜೆ ಹಿಟ್ಟಿನಲ್ಲಿ ಬೆಲ್ಲದ ನೀರನ್ನು ಬೆರಸಿ ಹದವಾಗಿ ನಾದಿ ನಂತರ ಮೇಲೆ ತಿಳಿಸಿದ ಎಲ್ಲಾ ಸಾಮಾನುಗಳನ್ನು ಹಾಕಿ ಕಲಸಿ. ಚಿಕ್ಕ ಚಿಕ್ಕ ಉಂಡೆಗಳನ್ನು ಮಾಡಿಕೊಂಡು ರೊಟ್ಟಿ ಬಡಿದ ಹಾಗೆ ಬಡಿದು ಕಾಯ್ದ ಹಂಚಿನಲ್ಲಿ ಸಣ್ಣನೆಯ ಉರಿಯಲ್ಲಿ ಬೇಯಿಸಿ. ಸಿಹಿ ಸಜ್ಜೆ ರೊಟ್ಟಿ ಶುದ್ಧವಾದ ತುಪ್ಪದೊಂದಿಗೆ ತಿನ್ನಲು ಬಲು ರುಚಿ ಅಲ್ಲದೆ ಆರೋಗ್ಯಕ್ಕೂ ಉತ್ತಮ.

- ರಾಘವೇಂದ್ರ ಶರ್ಮ
ಗುರುಮಠಕಲ್

ಅನಾನಸ್ ಕಡಕ್ ಗೊಜ್ಜು

ಬೇಕಾಗುವ ಸಾಮಗ್ರಿಗಳು



೧೫೦ ಗ್ರಾಂ ಎಣ್ಣೆ, ಸಾಮಾನ್ಯ ಗಾತ್ರದ ಎರಡು ಅನಾನಸ್, ಎರಡು ಟೀ ಚಮಚ ಜೀರಿಗೆ, ಮೆಂತೆ, ಹತ್ತು ಒಣ ಮೆಣಸಿನಕಾಯಿ, ಅರ್ಧ ಹೋಳು ಕೊಬ್ಬರಿ ತುರಿ, ೨ ಟೀ ಚಮಚ ಎಳ್ಳು, ಎರಡು ಅಚ್ಚು ಬೆಲ್ಲ, ೧೦೦ ಗ್ರಾಂ ಹುಣಸೆಹಣ್ಣು, ಚಿಟಕಿ ಅರಿಸಿನ, ಉಪ್ಪು, ಕರಿಬೇವು, ಸಾಸಿವೆ.

ಮಾಡುವ ವಿಧಾನ

ಜೀರಿಗೆ, ಮೆಂತೆ, ಮೆಣಸಿನಕಾಯಿ, ಎಳ್ಳು ಕೆಂಪಾಗುವಂತೆ ಹುರಿದು ಕೊಬ್ಬರಿ ತುರಿ ಯೊಂದಿಗೆ ಪುಡಿಮಾಡಿಟ್ಟುಕೊಳ್ಳಬೇಕು. ಎಣ್ಣೆಯೊಂದಿಗೆ ಸಾಸಿವೆ, ಕರಿಬೇವು ಹಾಕಿ ಒಗ್ಗರಣೆ ತಯಾರಿಸಿಕೊಂಡು ಸಣ್ಣ ಸಣ್ಣನೆಯ ಅನಾನಸ್ ತುಂಡುಗಳನ್ನು ಹಾಕಿ ಕರಿಯುತ್ತಿರಬೇಕು. ಅನಾನಸ್ ಬೆಂದ ನಂತರ ಹುಣಸೆ ರಸ ತೆಗೆದು ಇದರೊಂದಿಗೆ ಬೆರಸಬೇಕು. ಬೆಲ್ಲವನ್ನೂ ಹಾಕಿ ಗೊಟಾಯಿಸುತ್ತಿರಬೇಕು. ಐದು-ಹತ್ತು ನಿಮಿಷ ಗೊಟಾಯಿಸಿದ ನಂತರ ಮಾಡಿಟ್ಟು ಕೊಂಡಿರುವ ಪುಡಿಯನ್ನೂ, ರುಚಿಗೆ ತಕ್ಕಷ್ಟು ಉಪ್ಪನ್ನೂ ಹಾಕಿ ಐದು ನಿಮಿಷಗಳ ಕಾಲ (ಸಣ್ಣ ಉರಿಯೊಂದಿಗೆ) ಬಿಸಿ ಮಾಡಬೇಕು.

ಈ ಗೊಜ್ಜು ಮಕ್ಕಳಿಗಂತೂ ದೋಸೆ, ಚಪಾತಿ, ಇಡ್ಲಿ, ಮುಂತಾದವುಗಳ ಜೊತೆ ಬಹಳ ಇಷ್ಟವಾಗುತ್ತದೆ. ಗಾಳಿಯಾಡದ ಪಾತ್ರೆಯಲ್ಲಿ ಮುಚ್ಚಿಟ್ಟರೆ ಹತ್ತಾರು ದಿನಗಳವರೆಗೆ ಇರುತ್ತದೆ.

- ಸರ್ವಮಂಗಳಾ ವೆಂ. ಭಟ್
ಮಂಡ್ಯ

ಮಸಾಲೆ ಅನ್ನ

ಬೇಕಾಗುವ ಸಾಮಗ್ರಿಗಳು



ಒಂದು ಪಾವು ಅಕ್ಕಿ, ಒಂದು ಟೀ ಚಮಚ ಉದ್ದಿನ ಬೇಳೆ, ಒಂದು ಟೀ ಚಮಚ ಕಡಲೆಬೇಳೆ, ಒಂದು ಟೀ ಚಮಚ ಎಣ್ಣೆ, ೫ ಹಸಿಮೆಣಸಿನ ಕಾಯಿ, ಸ್ವಲ್ಪ ಕೊತ್ತಂಬರಿ, ಸ್ವಲ್ಪ ಹಸಿ ಕೊಬ್ಬರಿ. ಒಂದು ಟೀ ಚಮಚ ಮಸಾಲೆ ಪುಡಿ, ಒಂದು ಟೀ ಚಮಚ ಅರಿಶಿನ ಪುಡಿ, ಒಂದು ಈರುಳ್ಳಿ, ಒಂದು ಬದನೆಕಾಯಿ, ಒಂದು ಟೊಮಟೊ, ಒಂದು ಆಲೂಗಡ್ಡೆ, ಒಂದು ಸವತೆಕಾಯಿ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ

ಮೊದಲು ಪಾತ್ರೆಗೆ ಎಣ್ಣೆ ಹಾಕಿ ಕಾಯಲು ಬಿಡಿರಿ. ಕಾದ ನಂತರ ಸಾಸಿವೆ ಜೀರಿಗೆ ಮತ್ತು ಎಲ್ಲ ಸಾಮಗ್ರಿ ಹಾಕಿರಿ. ನಂತರ ಸ್ವಲ್ಪ ನೀರು ಹಾಕಿರಿ. ಅದು ಕುದಿಯುವಾಗ ಅಕ್ಕಿ ಹಾಕಿರಿ. ೧೫ ನಿಮಿಷ ಬಿಟ್ಟು ಆಗಾಗ ನೀರು ಹಾಕಿ ನೋಡುತ್ತಿರಿ. ಎಲ್ಲ ನೀರು ಮುಗಿದ ನಂತರ ನೀವು ಬಯಸಿದ ಮಸಾಲೆ ಅನ್ನ ಅಥವಾ ಪಲಾವ ತಯಾರಾಗುತ್ತದೆ.

- ಆರ್. ಸಿ. ಕರಡಿ
ಕೆರೂರ

ಅವರೆ ಕಾಳಿನ ಕಡಬು

ಬೇಕಾಗುವ ಸಾಮಗ್ರಿಗಳು



ಪಾವು ಅಕ್ಕಿ ತರಿ (ಇಡ್ಲಿ ರವೆ). ಅರ್ಧಪಾವು ಉದ್ದಿನ ಬೇಳೆ, ರುಚಿಗೆ ತಕ್ಕಷ್ಟು ಹಸಿ ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಶುಂಠಿ, ಜೀರಿಗೆ, ಮೆಣಸು, ಉಪ್ಪು ಇಂಗು.

ಮಾಡುವ ವಿಧಾನ

ಉದ್ದಿನ ಬೇಳೆಯನ್ನು ಚನ್ನಾಗಿ ನೀರಿನಲ್ಲಿ ನೆನಸಿ ಬಳಿಕ ರುಬ್ಬಿ, ಅದರ ಜೊತೆಗೆ ಅಕ್ಕಿ ತರಿ ಅಥವಾ ಇಡ್ಲಿ ರವೆ ಚನ್ನಾಗಿ ತೊಳೆದು ರುಬ್ಬಿದ ಹಿಟ್ಟಿಗೆ ಸೇರಿಸಿರಿ. (ಒಗ್ಗರಣೆಗೆ ಹಸಿ ಮೆಣಸಿನಕಾಯಿ, ಕೊತ್ತಂಬರಿ, ಶುಂಠಿ ಹಾಕಿ, ಅದರಲ್ಲಿ ಬೇಳೆ ಹಾಕಿ ಚನ್ನಾಗಿ ಹುರಿಯಿರಿ ಹಸಿ ವಾಸನೆ ಹೋಗುವವರೆಗೂ) ಜೀರಿಗೆ ಮೆಣಸನ್ನು ಪುಡಿ ಮಾಡಿ ಹಿಟ್ಟಿಗೆ ಬೆರಸಿರಿ. ನಂತರ ಅದನ್ನು ರುಬ್ಬಿದ ಹಿಟ್ಟಿಗೆ ಸೇರಿಸಿ ಹಬೆಯಲ್ಲಿ ಇಡ್ಲಿ ತರಹ ಬೇಯಿಸಿರಿ. ಜೊತೆಗೆ ಕಾಯಿ ಚಟ್ನಿ ಸೇರಿಸಿ ತಿನ್ನಬಹುದು.

- ಸುಶೀಲಾ ಗಾಯಕವಾಡ
ಮೊಳಕಾಲ್ಮೂರು

ತುಂಬು ಬದನೆಕಾಯಿ

ಬೇಕಾಗುವ ಸಾಮಗ್ರಿಗಳು

ಪಾವು ಕೆ.ಜಿ. ಎಳೆಯ ಬದನೆಕಾಯಿ, ಒಂದು ಚಮಚ ಉದ್ದಿನ ಬೇಳೆ, ಐದು ಹೋಳು ಬೆಳ್ಳುಳ್ಳಿ ಬೀಜ, ಐದು ಕೆಂಪು ಒಣ ಮೆಣಸಿನಕಾಯಿ,



ಒಂದು ದೊಡ್ಡ ಈರುಳ್ಳಿ, ಒಂದು ಟೊಮಟೊ, ಒಂದು ಚಮಚ ಅರಿಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಸ್ವಲ್ಪ ತುಪ್ಪ.

ಮಾಡುವ ವಿಧಾನ

ಉದ್ದಿನ ಬೇಳೆ, ಮೆಣಸಿನ ಕಾಯಿಗಳನ್ನು ಎಣ್ಣೆಯಲ್ಲಿ ಹುರಿದುಕೊಂಡು ಮೇಲೆ ಹೇಳಿದ

ಮಸಾಲೆ ಪದಾರ್ಥಗಳನ್ನು ಸೇರಿಸಿ ಗಟ್ಟಿಯಾಗಿ ರುಬ್ಬಿಕೊಳ್ಳಬೇಕು. ನಂತರ ಬದನೆಕಾಯಿಗಳನ್ನು ನಾಲ್ಕು ಭಾಗಗಳಾಗಿ ಕತ್ತರಿಸಿಕೊಂಡು, ರುಬ್ಬಿಟ್ಟುಕೊಂಡಿರುವ ಮಸಾಲೆಯನ್ನು ತುಂಬಿಟ್ಟು ಐದು ನಿಮಿಷಗಳ ಅನಂತರ ಒಂದು ಪಾತ್ರೆಯಲ್ಲಿ ಸ್ವಲ್ಪ ಡಾಲ್ಡ ಹಾಕಿ ಕಡಿಮೆ ಉರಿಯಲ್ಲಿ ಚೆನ್ನಾಗಿ ತಾಳಿಸಿರಿ. ಈಗ ತುಂಬು ಬದನೆಕಾಯಿ ಪಲ್ಯ ತಯಾರಾಯಿತು.

- ರಾಜಶ್ರೀ ವಿನಾಯಕ ಗುಮಾಸ್ತೆ, ಸಿದ್ದಾಪುರ

ಗೆಣಸಿನ ಹೋಳಿಗೆ

ಬೇಕಾಗುವ ಸಾಮಗ್ರಿಗಳು

ಒಂದು ಕೆ.ಜಿ. ಗೆಣಸು, ಮುಕ್ಕಾಲು ಕೆ.ಜಿ. ಬೆಲ್ಲ, ನಾಲ್ಕೈದು ಏಲಕ್ಕಿ ಮತ್ತು ಅರ್ಧ ಕೆ.ಜಿ. ಮೈದಾಹಿಟ್ಟು.



ಮಾಡುವ ವಿಧಾನ

ಗೆಣಸುಗಳನ್ನು ಶುಚಿಗೊಳಿಸಿ ಬೇಯಿಸಬೇಕು. ಬೆಂದ ಗೆಣಸುಗಳನ್ನು ತೆಗೆದುಕೊಂಡು ಅದರೊಂದಿಗೆ ಬೆಲ್ಲ ಮತ್ತು ಏಲಕ್ಕಿ ಹಾಕಿ ನುಣ್ಣಗೆ ರುಬ್ಬಬೇಕು. ಮೈದಾ ಹಿಟ್ಟನ್ನು ಕಲಿಸಿಟ್ಟುಕೊಳ್ಳಬೇಕು. ಸ್ವಲ್ಪ ಮೈದಾಹಿಟ್ಟಿನೊಂದಿಗೆ ಹೂರಣವನ್ನು ಸೇರಿಸಿ ಸಣ್ಣ ಸಣ್ಣ ಉಂಡೆಗಳ ಆಕಾರ ಮಾಡಿ ಅವುಗಳನ್ನು ಲಟ್ಟಿಸಬೇಕು. ಹಂಚಿನ ಮೇಲೆ ಸ್ವಲ್ಪ ಎಣ್ಣೆ ಹಾಕಿ ಎರಡೂ ಮಗ್ಗಲು ಬೇಯಿಸಬೇಕು.

ಬಿಸಿ ಬಿಸಿಯಾದ ಹೋಳಿಗೆಯನ್ನು ತುಪ್ಪದೊಂದಿಗೆ ತಿಂದರೆ ಬಹಳ ರುಚಿಯಾಗಿರುತ್ತದೆ.

- ಎನ್.ಎಂ. ಸುಲೋಚನಮ್ಮ, ಕೊಟ್ಟೂರು

ಬೆಣ್ಣೆ ಬಿಸ್ಕೀಟ್

ಬೇಕಾಗುವ ಸಾಮಗ್ರಿಗಳು



ಒಂದು ಕಪ್ ಬೀಸಿದ ಸಕ್ಕರೆ, ಒಂದು ಕಪ್ ಮೈದಾಹಿಟ್ಟು, ಒಂದು ಕಪ್ ತುಪ್ಪ.

ಮಾಡುವ ವಿಧಾನ

ಒಂದು ಕಪ್ ಮೈದಾ ಹಿಟ್ಟು ಮತ್ತು ಒಂದು ಕಪ್ ತುಪ್ಪವನ್ನು ಚನ್ನಾಗಿ ಕಲಿಸಿ ನಂತರ ಒಂದು ಕಪ್ ಸಕ್ಕರೆಯನ್ನು ಆ ಮಿಶ್ರಣಕ್ಕೆ ಬೆರಸಿ ಚನ್ನಾಗಿ ಚಪಾತಿ ಹಿಟ್ಟಿನಂತೆ ನಾದಬೇಕು. ನಾದುವಾಗ ಸ್ವಲ್ಪ ನೀರು ಚಿಮುಕಿಸಿ ನಾದಬೇಕು. ಹತ್ತು ನಿಮಿಷ ನೆನೆಯಲು ಬಿಟ್ಟು ನಂತರ ಆ ಮಿಶ್ರಣದಲ್ಲಿಯ ಸ್ವಲ್ಪ ಭಾಗವನ್ನು ತೆಗೆದುಕೊಂಡು ಚಪಾತಿ ಲಟ್ಟಿಸಿದ ಹಾಗೆ ಲಟ್ಟಿಸಿ. ಸ್ವಲ್ಪ ದಪ್ಪವಾಗಿದ್ದರೆ ಚೆನ್ನ. ನಮಗೆ ಬೇಕಾದ ಆಕಾರಕ್ಕೆ ಅಂದರೆ ತ್ರಿಕೋನ, ವೃತ್ತ ಮತ್ತು ಚೌಕಾರಕ್ಕೆ ಚಾಕುವಿನಿಂದ ಕತ್ತರಿಸಿಕೊಳ್ಳಬೇಕು.

ಒಲೆ ಹೊತ್ತಿಸಿ ಅದರ ಮೇಲೆ ಪುಟ್ಟಿ (ಕಬ್ಬಿಣದ)ಯಲ್ಲಿ ಉಸುಕು ಹಾಕಿ ಅದನ್ನು ಚನ್ನಾಗಿ ಕಾಯಿಸಿರಿ. ನಂತರ ಒಂದು ತಟ್ಟೆಗೆ ತುಪ್ಪ ಸವರಿ ಅದರಲ್ಲಿ ಕತ್ತರಿಸಿದ ತುಂಡುಗಳನ್ನು ಉಸುಕಿನಲ್ಲಿ ಕಾಯಲು ಇಡಬೇಕು. ಅದರ ಮೇಲೆ ಇನ್ನೊಂದು ತಟ್ಟೆಯನ್ನು ಮುಚ್ಚಬೇಕು. ಐದು ನಿಮಿಷದ ನಂತರ ಉರಿ ಕಡಿಮೆಮಾಡಿ ಆ ತುಂಡುಗಳನ್ನು ತಿರುವಿ ಹಾಕಿ ಎರಡು ನಿಮಿಷದ ನಂತರ ಉರಿಯಿಂದ ಕೆಳಗಿರಿಸಿರಿ. ಈಗ ಬೆಣ್ಣೆ ಬಿಸ್ಕೀಟು ರೆಡಿಯಾಗಿದೆ.

- ಈ . ಲಕ್ಷ್ಮೀದೇವಿ, ಸಿಂಧನೂರು

ಬದನೆಕಾಯಿ ಭರತ್

(ಮಹಾರಾಷ್ಟ್ರ ಪದ್ಧತಿ)

ಬೇಕಾಗುವ ಸಾಮಗ್ರಿಗಳು

ಎರಡು ದೊಡ್ಡ ಬದನೆಕಾಯಿ, ೬ಹಸಿಮೆಣಸಿನಕಾಯಿ, ೧ಕಪ್ ಈರುಳ್ಳಿ ತಪ್ಪಲು ಸಣ್ಣಗೆ ತುಂಡು ಮಾಡಿಟ್ಟುಕೊಳ್ಳುವುದು, ತಕ್ಕಷ್ಟು ಕಡ್ಲೆಬೀಜ, ಕೋತಂಬರಿ ಸೊಪ್ಪು, ಒಂದು ಟೀ ಚಮಚ ಅಜವಾಯಿನ್ (ವೂಮಂ), ಒಂದು ಟೀ ಚಮಚ ಜೀರಿಗೆ, ಒಂದು ಗಡ್ಡೆ ಬೆಳ್ಳುಳ್ಳಿ, ೨ ಟೇಬಲ್ ಚಮಚ ಎಣ್ಣೆ ಹಾಗು ರುಚಿಗೆ ತಕ್ಕ ಉಪ್ಪು.

ಅಡುಗೆಮನೆ

ಮಾಡುವ ವಿಧಾನ




ಮೊದಲು ಬದನೆಕಾಯಿಯನ್ನ ಗ್ಯಾಸ್ ಮೇಲೊ ಅಥವಾ ಒಲೆಯಲ್ಲಿಯೊ ಸುಡಬೇಕು. ಹಂಚಿನಲ್ಲಿ ಚಿಟಿಕೆ ಎಣ್ಣೆ ಹಾಕಿ ಮೆಣಸಿನಕಾಯಿಯನ್ನು ಹುರಿದುಕೊಳ್ಳಬೇಕು. ಒಂದು ಬಾಣಲಿಯಲ್ಲಿ ಮೆಣಸಿನಕಾಯಿ, ಉಪ್ಪು, ಬೆಳ್ಳುಳ್ಳಿ ಹಾಕಿ ಕುಟ್ಟಬೇಕು. ಆಮೇಲೆ ಬದನೆಕಾಯಿ ಮೇಲಿನ ಸಿಪ್ಪೆ ತೆಗೆದು ಹಾಕಿ ಅದರ ಜೊತೆಗೆ ಎಲ್ಲ ನುಣ್ಣಗೆ ಆಗುವ ತನಕ ಕುಟ್ಟಬೇಕು. ಆಮೇಲೆ ಒಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಅದು ಬಿಸಿ ಆದ ನಂತರ ಅಜವಾಯಿನ್, ಜೀರಿಗೆ ಹಾಕಿ ಚಟಪಟ ಅಂದ ಮೇಲೆ ಅದಕ್ಕೆ ಕಡ್ಲೆ ಬೀಜ ಹಾಕಿ, ಅದು ಚೆನ್ನಾಗಿ ಹುರಿದ ಮೇಲೆ ಈರುಳ್ಳಿ ತಪ್ಪಲು ಹಾಕಿ ಅದು ಹುರಿದ ಮೇಲೆ ಅದಕ್ಕೆ ಕುಟ್ಟಿದ ಮಿಶ್ರಣ ಬೆರಸಿ, ಕೊತ್ತಂಬರಿ ಹಾಕಿ ಅದಕ್ಕೆ sim gas ಮಾಡಿ ಮುಚ್ಚಳ ಮುಚ್ಚಿ ಅದು ಹತ್ತು-ಹದಿನೈದು ನಿಮಿಷದ ನಂತರ ಕೆಳಗಿಳಿಸಿ. ಬದನೆಕಾಯಿ ಭರತ್ ತಯಾರಿಗಿದೆ. ಬಿಸಿ ಬಿಸಿ ಪೂರಿಯೊಂದಿಗೆ ತಿನ್ನಬಹುದು.

-ರಾಧಾ ಡ್ಯಾನಿಯಲ್, ಜಲಗಾಂವ

ಆಲೂ ಪಕೋಡಾ

ಬೇಕಾಗುವ ಸಾಮಗ್ರಿಗಳು



ಮೈದಾ ಹಿಟ್ಟು ೧೦೦ ಗ್ರಾಂ, ಆಲೂಗಡ್ಡೆ-೧, ಕ್ಯಾರೇಟ್ (ಗಜ್ಜರಿ)-೧, ಸ್ವಲ್ಪ ಕ್ಯಾಬೀಜ ತುರಿ, ಹಸಿ ಶುಂಠಿ, ಹಸಿಮೆಣಸಿನಕಾಯಿ ೪-೫, ಸ್ವಲ್ಪ ಡಾಲ್ಡಾ ಕೊತ್ತಂಬರಿ ಸೊಪ್ಪು, ರುಚಿಗೆ ತಕ್ಕಷ್ಟು ಉಪ್ಪು, ಸ್ವಲ್ಪ ಸಕ್ಕರೆ, ಅಡುಗೆ ಸೋಡಾ, ಕರಿಯಲು ಎಣ್ಣೆ.

ಮಾಡುವ ವಿಧಾನ

ಡಾಲ್ಡಾವನ್ನು ಕಾಯಿಸಿ ಮೈದಾ ಹಿಟ್ಟಿನಲ್ಲಿ ಹಾಕಿ ನಾದಬೇಕು. ನಂತರ ತುರಿದ ಆಲೂಗಡ್ಡೆ, ಗಜ್ಜರಿ, ಕ್ಯಾಬೀಜ, ಶುಂಠಿ, ಸಣ್ಣಗೆ ಹೆಚ್ಚಿಟ್ಟುಕೊಂಡು ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು ಹಾಗೂ ಉಪ್ಪು ಸಕ್ಕರೆಯಲ್ಲವನ್ನು ಹಾಕಿ ಗಟ್ಟಿಯಾಗಿ ನಾದಿಟ್ಟುಕೊಳ್ಳಬೇಕು. ಅವಶ್ಯವಿದ್ದಲ್ಲಿ ಮಾತ್ರ ನೀರನ್ನು ಬಳಸಬಹುದು. ೧೫ ನಿಮಿಷ ಬಿಟ್ಟು ಬಾಣಲೆಯಲ್ಲಿ ಎಣ್ಣೆ ಹಾಕಿ ಕಾದ ಮೇಲೆ ಸಣ್ಣ ಉರಿಯ ಮೇಲೆ ಸಣ್ಣ ಸಣ್ಣ ಉಂಡೆಯಾಕಾರದಲ್ಲಿ ಎಣ್ಣೆಯಲ್ಲಿ ಹಾಕಿ ಕೆಂಪು ಬಣ್ಣಕ್ಕೆ ಬರುವವರೆಗೆ ಕರಿಯಬೇಕು. ಬಿಸಿಯಿರುವಾಗಲೇ ತಿಂದರೆ ಗರಿಗರಿ ಆಲೂ ಪಕೋಡಾ ಹೆಚ್ಚು ರುಚಿಕರವಾಗುತ್ತವೆ.

- ಶಾರದಾ ಶ್ರೀಶೈಲ, ಹುಲಕೋಟ

ವಿವಿಧ ಋತುಗಳಲ್ಲಿ ಲಲನೆಯರ ಸೌಂದರ್ಯ

ಡಾ. ಆರತಿ ವೆಂಕಟೇಶ್

ಪ್ರಕೃತಿಯಲ್ಲಿ ವಿವಿಧ ಋತುಗಳಿವೆ. ಆ ಋತುಗಳಿಗೆ ಅನುಸಾರವಾಗಿ ಮಹಿಳೆ ತನ್ನ ಸೌಂದರ್ಯವನ್ನು ಕಾಪಾಡಿಕೊಳ್ಳಬಹುದು.

ಮಳೆಗಾಲದಲ್ಲಿ ಸೌಂದರ್ಯ ಪೋಷಣೆ

ಸುರಿಯುವ ವರ್ಷ ಋತುವಿನಲ್ಲಿ ಸುಲಭವಾಗಿ ಒಣಗುವ ಉಡುಪುಗಳನ್ನು ಧರಿಸುವುದು ಉತ್ತಮ. ನಿಮ್ಮ ಹತ್ತಿ ಮತ್ತು ರೇಶಿಮೆ ಉಡುಪುಗಳನ್ನು ಒಳಗೆ ಎತ್ತಿಟ್ಟು ದಟ್ಟ ಬಣ್ಣಗಳ ಶಿಫಾನ್, ಸಿಂಥೆಟಿಕ್ ಸೀರೆಗಳನ್ನು ಹೆಚ್ಚಾಗಿ ಉಡಬೇಕು. ಈ ಋತುವಿನಲ್ಲಿ ತಿಳಿಯಾದ, ವರ್ಣರಹಿತವಾದ ಉಡುಪುಗಳನ್ನು ಧರಿಸುವುದಕ್ಕಿಂತ ದಟ್ಟ ಮೋಡಗಳು ಕವಿದ ವಾತಾವರಣದಲ್ಲಿ ದಟ್ಟ ರಂಗಿನ ಗಾಢವರ್ಣಗಳ ಉಡುಪನ್ನು ಧರಿಸಿದರೆ ಹೆಚ್ಚು ಶೋಭಾಯಮಾನ ವಾಗಿರುತ್ತದೆ. ಉದಾಹರಣೆಗೆ - ದಟ್ಟ ಹಸಿರು, ಕಿತ್ತಲೆಗೆಂಪು, ಅಚ್ಚ ನೀಲಿ, ನೇರಳೆ ಮುಂತಾದ ಬಣ್ಣದ ಬಟ್ಟೆಗಳನ್ನು ಹೆಚ್ಚಾಗಿ ಧರಿಸಿ.



ಕಾಲಿಗೆ ರಬ್ಬರ್ ಅಥವಾ ಪ್ಲಾಸ್ಟಿಕ್ ಚಪ್ಪಲಿಗಳನ್ನೇ ಹಾಕಿಕೊಳ್ಳಿ. ಸಾಕ್ಸ್ ಅಥವಾ ಸ್ಟಾಕಿಂಗ್ಸ್ ಧರಿಸುವ ಅಭ್ಯಾಸ ನಿಮಗಿದ್ದರೆ ಮಳೆಗಾಲದಲ್ಲಿ ಅದನ್ನು ಬಳಸಬೇಡಿ. ವಿವಿಧ ವಿನ್ಯಾಸಗಳ ನಾಜೂಕಿನ ಚಪ್ಪಲಿಗಳನ್ನು ಸುರಿಯುವ ಮಳೆಯಲ್ಲಿ ಧರಿಸಬೇಡಿ. ನೀರಿನಲ್ಲಿ ನೆನೆದರೆ ಅಂಥ ಚಪ್ಪಲಿ ಬಾಳಿಕೆ ಬರುವುದಿಲ್ಲ, ನೀವು ಮಳೆಯಲ್ಲಿ ನೆನೆದರೂ ಸುಲಭವಾಗಿ ತೊಳೆದು ಒರೆಸಿಕೊಳ್ಳುವಂತಹ ಚಪ್ಪಲಿಗಳು ಉತ್ತಮ.

ತಲೆಗೂದಲನ್ನು ನಯವಾಗಿ ಬಾಚಿ ಜಡೆ ಹೆಣೆದುಕೊಳ್ಳಿ. ಮಳೆಗಾಲದಲ್ಲಿ ವಿವಿಧ ಕೂದಲ ವಿನ್ಯಾಸ (hair-style) ಪ್ರಯತ್ನಿಸಲು ನೋಡಬೇಡಿ. ತಲೆಗೂದಲು ಮೋಟಾಗಿದ್ದರೆ ಆದಷ್ಟು ಸರಳವಾದ ವಿನ್ಯಾಸ ಅನುಸರಿಸಿ. ತಲೆಗೂದಲನ್ನು ಭುಜದವರೆಗೆ ಇಳಿಬಿಡುವ ಆಸೆ ನಿಮಗಿದ್ದರೆ ಕೂದಲನ್ನು ಹೆಚ್ಚಾಗಿ ನೆನೆಯಲು ಬಿಡದೇ ಛತ್ರಿಯನ್ನೋ, ರೈನ್‌ಕೋಟನ್ನೋ ಉಪಯೋಗಿಸಿ. ಇಲ್ಲದಿದ್ದರೆ ಕೂದಲು ಒದ್ದೆಯಾಗಿ ನಿಮ್ಮ

ಹೇರ್‌ಸ್ಟೈಲ್ ಹಾಳಾಗುವುದಲ್ಲದೇ ನಿಮ್ಮ ಆರೋಗ್ಯಕ್ಕೂ ಹಾನಿಕರ. ಮಳೆಗಾಲದಲ್ಲಿ ವಾರಕ್ಕೊಮ್ಮೆ ಬಿಡುವಾಗಿ ಕೂದಲು ತೊಳೆದರೆ ಸಾಕು. ಉದ್ಯೋಗಸ್ಥ ಮಹಿಳೆಯರಿಗೆ ಅವಸರದಲ್ಲಿ ಕೂದಲು ಒಣಗಿಸಿಕೊಳ್ಳುವುದು ಕಷ್ಟ. ಅಂಥ ಸಮಯದಲ್ಲಿ ಕೂದಲನ್ನು ಒದ್ದೆಯಾಗಿಯೇ ಬಿಟ್ಟು ಕೆಲಸಕ್ಕೆ ಎಂದೂ ಹೋಗಬೇಡಿ. ಅದಕ್ಕಾಗಿ ಮಾರುಕಟ್ಟೆಯಲ್ಲಿ ದೊರೆಯುವ 'ಹೇರ್ ಡ್ರೈಯರ್' ಖರೀದಿಸಬಹುದು. ತುರ್ತು ಪರಿಸ್ಥಿತಿಗಳಲ್ಲಿ ನಿಮ್ಮ ಗೆಳತಿಯರಿಂದಲೋ ಅಥವಾ ನೆರೆಹೊರೆಯವರಿಂದಲೋ ಎರವಲು ಪಡೆಯುವುದರಲ್ಲಿ ತಪ್ಪೇನಿಲ್ಲ. ನಿಮ್ಮ ಆರೋಗ್ಯಕ್ಕಿಂತ ಅರ್ಥವಿಲ್ಲದ ಒಣ ಅಭಿಮಾನ ಮುಖ್ಯವಲ್ಲ. ಈ ಸಮಯದಲ್ಲಿ ತಲೆಗೂದಲಿಗೆ ಎಣ್ಣೆಯೊಂದರ ಹೊರತು ಹೆಚ್ಚಾಗಿ ಆರೈಕೆ ಮಾಡಿಕೊಳ್ಳುವ ಅಗತ್ಯವಿಲ್ಲ. ಶೀತಪ್ರಕೃತಿಯ ಶರೀರವುಳ್ಳವರು ತಲೆಗೆ ಮೆಹಂದಿಯನ್ನು ಮಳೆಗಾಲದಲ್ಲಿ ಹಾಕಿಕೊಳ್ಳದಿರುವುದೇ ಲೇಸು. ತಲೆಯ ಬುರುಡೆಗೆ ಬೆಚ್ಚಗೆ ಮಾಡಿದ ಕೊಬ್ಬರಿ ಎಣ್ಣೆ ಹಚ್ಚಿ ಲಘುವಾದ ಶಾಂಪೂವಿನಿಂದ ಕೂದಲು ತೊಳೆದರೆ ಸಾಕು.

ಮಳೆಗಾಲದಲ್ಲಿ ಚರ್ಮದ ಪೋಷಣೆಯೂ ಅಗತ್ಯ. ಒಂದು ದೊಡ್ಡ ಚಮಚದಷ್ಟು ಮೊಟ್ಟೆಯ ಬಿಳಿಯ ಭಾಗ ತೆಗೆದಿರಿಸಿ. ಅದಕ್ಕೆ ಅರ್ಧ ಚಮಚ ನಿಂಬೆರಸ. ಅರ್ಧ ಚಮಚ ಜೇನುತುಪ್ಪ ಮಿಶ್ರಣ ಮಾಡಿ ಮುಖಕ್ಕೆ ಹಚ್ಚಿ ಅರ್ಧ ಗಂಟೆ ಕಾಲ ಬಿಟ್ಟು ಮುಖವನ್ನು ಬೆಚ್ಚಗಿನ ನೀರಿನಲ್ಲಿ ತೊಳೆದುಕೊಳ್ಳಿ. ನಿಮ್ಮ ಚರ್ಮ ಶುಷ್ಕವಾಗಿದ್ದರೆ ಮೊಟ್ಟೆಯ ಹಳದಿ ಭಾಗಕ್ಕೆ ಹಾಲಿನ ಕೆನೆ ಮತ್ತು ನಾಲ್ಕು ತೊಟ್ಟು ಪನ್ನೀರು ಬೆರೆಸಿ ಮುಖಕ್ಕೆ ಹಚ್ಚಿಕೊಳ್ಳಿ. ಹದಿನೈದು ನಿಮಿಷ ಬಿಟ್ಟು ಬೆಚ್ಚಗಿನ ನೀರಿನಲ್ಲಿ ಮುಖ ತೊಳೆದುಕೊಳ್ಳುವುದರಿಂದ ನಿಮ್ಮ ಮುಖ ಕಾಂತಿಯುಕ್ತವಾಗುತ್ತದೆ. ಈ ಕ್ರಮವನ್ನು ವಾರಕ್ಕೊಮ್ಮೆ ಅನುಸರಿಸಿದರೆ ಸಾಕು.


ಕೆಲವು ಬಾರಿ ಮಳೆಗಾಲದಲ್ಲಿ ಬಟ್ಟೆಗಳು ಒಣಗುವುದು ಕಷ್ಟ. ಅಂತಹ ಸಮಯದಲ್ಲಿ ಹಾಕಿಕೊಳ್ಳಲು ನಾಲ್ಕಾರು ಬಟ್ಟೆಗಳನ್ನು ಹೆಚ್ಚಾಗಿ ತೆಗೆದಿಟ್ಟುಕೊಳ್ಳಿ. ಬಟ್ಟೆ ಒಣಗಿಲ್ಲವೆಂದು ಕೆಲವರು ಅರ್ಧ ಒಣಗಿದ್ದ ಉಡುಪನ್ನೇ ಧರಿಸುವ ಅಭ್ಯಾಸ ಹೊಂದಿರುತ್ತಾರೆ. ಇದು ಆರೋಗ್ಯಕ್ಕೆ ಒಳ್ಳೆಯದಲ್ಲ. ನೀವು ಉಪಯೋಗಿಸುವ ಕಾಲುಚೀಲ, ಶೂಸ್ ಸಂಪೂರ್ಣವಾಗಿ ಒಣಗಿದ ನಂತರ ಧರಿಸಿ. ಕಾಲುಚೀಲಗಳು ಅರ್ಧಂಬರ್ಧ ಒದ್ದೆಯಾಗಿದ್ದರೆ ಕಾಲುಬೆರಳ ಸಂದಿಗಳಲ್ಲಿ ಹುಣ್ಣುಗಳು (fungal infection) ಕಾಣಿಸಿಕೊಳ್ಳಬಹುದು. ಮಧುಮೇಹ ರೋಗದಿಂದ ನರಳುತ್ತಿರುವವರು ಕಾಲುಗಳ ಬಗ್ಗೆ ವಿಶೇಷ ಮುತುವರ್ಜಿ ವಹಿಸುವುದು ಅಗತ್ಯ.

> ಪ್ರಕೃತಿಯಲ್ಲಿ ವಿವಿಧ ಋತುಗಳಿವೆ. ಆ ಋತುಗಳಿಗೆ ಅನುಸಾರವಾಗಿ ಮಹಿಳೆ ತನ್ನ ಸೌಂದರ್ಯವನ್ನು ಕಾಪಾಡಿಕೊಳ್ಳಬಹುದು.

ಬೇಸಿಗೆಯ ಬೇಗೆಯಲ್ಲಿ ಸೌಂದರ್ಯ

ಬೇಸಿಗೆಯ ಸೂರ್ಯಕಿರಣಗಳು ಶರೀರದ ಸೌಂದರ್ಯದ ಮೇಲೆ ಬೀರುವ ಪರಿಣಾಮಗಳು ಬಹಳ. ಮೊದಲನೆಯದಾಗಿ ಚರ್ಮದ ಮೇಲೆ ಕಠಿಣ ಪ್ರಭಾವ ಬೀರಿ ಶುಷ್ಕವಾಗಿಸಿ, ಸುಕ್ಕುಗಳನ್ನುಂಟು ಮಾಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಬೇಸಿಗೆ ಕಾಲದಲ್ಲಿ ಚರ್ಮದ ಪೋಷಣೆ ಅವಶ್ಯಕ. ಮುಖಕ್ಕೆ ಯಾವುದೇ ಮೇಕಪ್ ಬಳಸದೆ ನೇರವಾಗಿ ಸೂರ್ಯಕಿರಣಗಳಿಗೆ ಒಡ್ಡಬಾರದು. ಬಿಸಿಲಿನಲ್ಲಿ ಓಡಾಡಬೇಕಾದ ಸಂದರ್ಭದಲ್ಲಿ ಮುಖಕ್ಕೆ ಫೌಂಡೇಷನ್ ಕ್ರೀಮ್ ಬಳಸಲೇಬೇಕು. ಈಗ ಮಾರುಕಟ್ಟೆಯಲ್ಲಿ ಬಿಸಿಲು ರಕ್ಷಕ ದ್ರವ ಲಭ್ಯವಾಗಿದೆ (sun screen lotion). ಅಗತ್ಯವಿದ್ದವರು ಅದನ್ನು ಉಪಯೋಗಿಸಬಹುದು. ನಿಮಗಿಷ್ಟವಿದ್ದರೆ ತುಟಿಗಳಿಗೆ ನಯವಾಗಿ ತಿಳಿಬಣ್ಣದ ರಂಗು ಲೇಪಿಸಿಕೊಳ್ಳಿ. ಬೇಸಿಗೆಯಲ್ಲಿ ಮುಖದ ಅಲಂಕಾರ ನೈಜತೆ ಮೀರದಂತಿರಲಿ, ಅತಿಯಾದ ಮೇಕಪ್ ಬೆವರುಹನಿಯಿಂದ ಅಸ್ತವ್ಯಸ್ತವಾಗುತ್ತದೆ.

ನೀವೇನೇ ಮೇಕಪ್ ಉಪಯೋಗಿಸಿದರೂ ರಾತ್ರಿ ಮಲಗುವ ಮುನ್ನ ಮುಖದಲ್ಲಿ ತುಣುಕೂ ಮೇಕಪ್ ಇಲ್ಲದಂತೆ ಸ್ವಚ್ಛವಾಗಿ ತೊಳೆಯಬೇಕು. ರಾತ್ರಿ ಚರ್ಮಕ್ಕೆ ಹೆಚ್ಚು ಪೋಷಣೆ ಅಗತ್ಯವಾದುದರಿಂದ ಮುಖಕ್ಕೆ ಕ್ರೀಮ್ ಹಚ್ಚುವುದು ಕಡ್ಡಾಯ. ಎಲ್ಲರಿಗೂ ದುಬಾರಿಯಾಗಿ ಮಾರಾಟವಾಗುವ ಕ್ರೀಂಗಳನ್ನು ಕೊಳ್ಳುವ ಚೈತನ್ಯ ಇರುವುದಿಲ್ಲ! ಅಂಥ ಗೆಳತಿಯರಿಗಾಗಿ ಸುಲಭವಾಗಿ, ಕಡಿಮೆ



ವೆಚ್ಚದಲ್ಲಿ ಮನೆಯಲ್ಲೇ ತಯಾರಿಸಿಕೊಳ್ಳಬಹುದಾದ ಕ್ರೀಂ ಇಲ್ಲಿದೆ - ನಾಲ್ಕು ಅಥವಾ ಆರು ಬಾದಾಮಿಯನ್ನು ರಾತ್ರಿ ನೀರಿನಲ್ಲಿ ಅಥವಾ ಅನುಕೂಲವಾದರೆ ಹಾಲಿನಲ್ಲಿ ನೆನೆಹಾಕಿ ಇಡಿ. ಬೆಳಿಗ್ಗೆ ಅದರ ಸಿಪ್ಪೆ ಬಿಡಿಸಿಕೊಂಡು ನೀರು ಬೆರೆಸದೇ ನುಣ್ಣಗೆ ರುಬ್ಬಿಕೊಳ್ಳಿ. ಈ ರುಬ್ಬಿದ ಮಿಶ್ರಣಕ್ಕೆ ನಾಲ್ಕು ಚಮಚ ಹಾಲಿನ ಕೆನೆಯನ್ನು ಬೆರೆಸಿ ಒಂದು ಬಿಗಿಯಾದ ಬಾಟಲ್‌ನಲ್ಲಾಗಲಿ, ಡಬ್ಬಿಯಲ್ಲಾಗಲಿ ಮುಚ್ಚಿಡಿ. ಫ್ರಿಡ್ಜ್ ಇರುವವರು ಇದನ್ನು ಫ್ರಿಡ್ಜ್‌ನಲ್ಲಿಟ್ಟರೆ ಇನ್ನೂ ಉತ್ತಮ. ಈ ರೀತಿ ತಯಾರಿಸಿದ ಕ್ರೀಂ ಅನ್ನು ವಾರಕ್ಕಿಂತ ಹೆಚ್ಚು ದಿನ ಇಡದಿರುವುದು ಕ್ಷೇಮ. ವಾರಕ್ಕಾಗುವಷ್ಟು ಮಾತ್ರ ಪ್ರತಿಸಲವೂ ತಯಾರಿಸಿದರೆ ಸಾಕು! ಪ್ರತಿ ರಾತ್ರಿ ಮನೆಯಲ್ಲೇ ಸಿದ್ಧಪಡಿಸಿದ ಈ ಕ್ರೀಮನ್ನು ಮುಖಕ್ಕೆ ನಯವಾಗಿ ಹಚ್ಚಿ ಬೆಳಿಗ್ಗೆ ತಣ್ಣೀರಿನಲ್ಲಿ ಮುಖ ತೊಳೆದು ಕೊಂಡರೆ ಚರ್ಮ ಮೃದುವಾಗಿಯೂ, ಬಿಳುಪಾಗಿಯೂ ಉಳಿಯುತ್ತದೆ.

ಬೆಳಿಗ್ಗೆ ಹೊತ್ತಿನಲ್ಲಿ ಮೂರು ಅಥವಾ ನಾಲ್ಕು ಬಾರಿ ತಣ್ಣನೆ ನೀರಿನಲ್ಲಿ ಮುಖ ತೊಳೆಯುವುದರಿಂದ ಬೆವರಿನಿಂದ ಉಂಟಾಗುವ ಜಿಡ್ಡಿನಾಂಶವನ್ನು ತಡೆಗಟ್ಟಬಹುದು. ದಿನಕ್ಕೊಂದು ಬಾರಿಯಾದರೂ ತಣ್ಣನೆ ನೀರು ಅಥವಾ ಐಸ್ ನೀರಿಗೆ ನಿಂಬೆರಸ ಬೆರೆಸಿ ಅದನ್ನು ಮುಖಕ್ಕೆ ಲೇಪಿಸಿಕೊಂಡರೆ ಚರ್ಮ ಕಾಂತಿಯುಕ್ತವಾಗಿ ಮೊಡವೆಗಳು ನಿವಾರಣೆಯಾಗುತ್ತವೆ. ವಾರಕ್ಕೊಮ್ಮೆ ಮುಖವನ್ನು ಹಬೆಗೆ ಒಡ್ಡಿ ಇದನ್ನು Steaming ಎನ್ನುತ್ತಾರೆ. ಇದರಿಂದ ಬೆವರು ಹನಿಗಳಿಂದ ಮುಚ್ಚಿರುವ ಚರ್ಮರಂಧ್ರಗಳು ತೆರೆದುಕೊಂಡು ಮುಖದಲ್ಲಿ ಮೊಡವೆ, ಕಪ್ಪು ಕಲೆಗಳು ತಲೆದೋರುವುದಿಲ್ಲ.

ಬೇಸಿಗೆಯಲ್ಲಿ ಕಣ್ಣುಗಳ ಸೌಂದರ್ಯ ಪೋಷಣೆಯೂ ಅತಿ ಮುಖ್ಯ. ಸೂರ್ಯನ ಅಲ್ಟ್ರಾವಯಲೆಟ್ ಕಿರಣಗಳು ನೇರವಾಗಿ ಕಣ್ಣುಗಳಿಗೆ ತಗಲುವುದು ಕಣ್ಣುಗಳಿಗೆ ಅಪಾಯ. ಆದಷ್ಟು ಪ್ರಖರವಾದ ಸೂರ್ಯ ಕಿರಣಗಳಿಗೆ ನೇರವಾಗಿ ನಿಮ್ಮ ದೃಷ್ಟಿ ಒಡ್ಡಬೇಡಿ! ನೀವು ಬಿಸಿಲಿನಲ್ಲಿ ಅಡ್ಡಾಡುವಾಗ ಕಣ್ಣುಗಳಿಗೆ ತಂಪಾದ ಕನ್ನಡಕ ಬಳಸುವುದು ಬರಿಯ ಶೋಕಿಗೆ ಮಾತ್ರವಲ್ಲದೇ ಕಣ್ಣುಗಳ ಸುರಕ್ಷತೆಗೂ ಬಹಳ ಸಹಾಯಕವಾಗುತ್ತದೆ. ನಿಮ್ಮ ಕಣ್ಣುಗಳು ಆಯಾಸಗೊಂಡು ಉರಿಯುತ್ತಿದ್ದರೆ ರಾತ್ರಿ ಮಲಗುವ ಮುನ್ನ ಕಣ್ಣಿನ ಮೇಲೆ ಸೌತೇಕಾಯಿ ಬಿಲ್ಲೆಯನ್ನಾಗಲೀ, ಅಥವಾ ಶುದ್ಧವಾದ ಪನ್ನೀರಿನಲ್ಲಿ ತೊಯ್ದ ಹತ್ತಿಯ ತುಂಡನ್ನಾಗಲಿ ಇಟ್ಟು ಅರ್ಧ ಗಂಟೆ ವಿಶ್ರಮಿಸಿದರೆ ಕಣ್ಣು ಕಾಂತಿಯುತವಾಗುತ್ತದೆ.

ಬೇಸಿಗೆ ಕಾಲದಲ್ಲಿ ಕೆಲವರಿಗೆ ಅತಿ ಬೆವರು ಸಾಲೆಯಿಂದ ತುಂಬಾ ತೊಂದರೆಯುಂಟಾಗುತ್ತದೆ. ಇದರಿಂದ ಮೈಯಲ್ಲಿ ದುರ್ವಾಸನೆ ಉಂಟಾಗಿ ಮುಜುಗರ ತರಿಸುತ್ತದೆ. ಇದನ್ನು ತಡೆಗಟ್ಟಲು ನೀವು ದಿನನಿತ್ಯ ಎರಡು ಬಾರಿ ಸ್ನಾನ ಮಾಡಬಹುದು. ಸ್ನಾನಕ್ಕಾಗಿ ದಟ್ಟ ಸುವಾಸನೆಯುಳ್ಳ ಸಾಬೂನು ಉಪಯೋಗಿಸಿ. ಸ್ನಾನದ ನೀರಿನಲ್ಲಿ ಅನುಕೂಲವಿದ್ದರೆ ನಿಮಗೆ ಪ್ರಿಯವೆನಿಸಿದ ಪರ್‌ಫ್ಯೂಮ್ ನಾಲ್ಕೈದು ತೊಟ್ಟು ಬೆರೆಸಿಕೊಂಡು ಸ್ನಾನ ಮಾಡಿದರೆ ಅಹ್ಲಾದಕರವಾಗಿರುತ್ತದೆ. ಪರ್‌ಫ್ಯೂಮ್ ಅಭ್ಯಾಸವಿಲ್ಲದಿದ್ದರೆ ಎರಡು ತೊಟ್ಟು 'ಡೆಟಾಲ್' ಹಾಕಿಕೊಂಡು ಸ್ನಾನ ಮಾಡಬಹುದು. ಇದು ಕ್ರಿಮಿನಾಶಕವಲ್ಲದೇ ದೇಹವನ್ನೂ ಸ್ವಚ್ಛವಾಗಿಡುತ್ತದೆ.

ಬೇಸಿಗೆಯಲ್ಲಿ ಕಿತ್ತಲೆ ಹಣ್ಣು ಹೇರಳವಾಗಿ ಕಡಿಮೆ ಬೆಲೆಯಲ್ಲೇ ಸಿಗುತ್ತದೆ. ಹಣ್ಣು ತಿಂದ ನಂತರ ಅದರ ಸಿಪ್ಪೆಯನ್ನು ಎಸೆಯ ಬೇಡಿ! ಅದನ್ನು ಬಿಸಿಲಲ್ಲಿ ಒಣಗಿಸಿ ಪುಡಿ ಮಾಡಿಟ್ಟುಕೊಂಡು ಪ್ರತಿದಿನ ಅದಕ್ಕೆ ನೀರು ಬೆರೆಸಿ ಶರೀರಕ್ಕೆ ಹಚ್ಚಿ ಸ್ನಾನ ಮಾಡಿದರೆ ಮೈ ಚರ್ಮ ಮೃದುವಾಗಿ ಕಾಂತಿಯುತವಾಗುವುದಲ್ಲದೇ ಬೆವರಿನ ಅಂಶವೂ ಬಹಳ ತಗ್ಗುತ್ತದೆ.

ಅತಿಯಾಗಿ ಬೆವರುವ ಪ್ರವೃತ್ತಿಯವರಿಗೆ ಮೇಲ್ಕಂಡ ಸಲಹೆಗಳಷ್ಟೇ ಸಹಾಯಕವಾಗುವುದಿಲ್ಲ. ಅಂಥ ಮಹಿಳೆಯರು ದೇಹದಲ್ಲಿರುವ ಅನಾವಶ್ಯಕ ರೋಮಗಳನ್ನು ನಿವಾರಿಸಿಕೊಳ್ಳಬೇಕು. ಇದಕ್ಕಾಗಿ ಕೂದಲು ತೆಗೆಯುವ ಕ್ರೀಂ, ಲೋಶನ್‌ಗಳು ಮಾರುಕಟ್ಟೆಗಳಲ್ಲಿ ಈಗ ಹೇರಳವಾಗಿ ಲಭ್ಯವಾಗಿವೆ. ಅಗತ್ಯವಾದರೆ ದೇಹದ ಸಂದುಗಳಲ್ಲಿ deodorant spray ಉಪಯೋಗಿಸಬಹುದು. ಇದನ್ನು ನೇರವಾಗಿ ದೇಹಕ್ಕೆ ಸಿಂಪಡಿಸಿಕೊಳ್ಳಬೇಕು. ಕೆಲವರು ಬಟ್ಟೆ ಧರಿಸಿದ ನಂತರ ಇದನ್ನು ಬಳಸುತ್ತಾರೆ. ಇದರಿಂದ ಬಟ್ಟೆ ಅನಾವಶ್ಯಕವಾಗಿ ಹಾಳಾಗುತ್ತದೆಯೇ ಹೊರತು ದೇಹಕ್ಕೆ ಮಾತ್ರ

ಸೀರೆಯಲ್ಲಿ ನಾರಿ

ತರತರಹದ ಸೀರೆಗಳು, ಬಣ್ಣ ಬಣ್ಣಗಳ ಸೀರೆಗಳು, ಆಕರ್ಷಕ ಸೀರೆಗಳು, ಸುಂದರ ಸೀರೆಗಳು ಯುವತಿಯರ ಸೌಂದರ್ಯವನ್ನು ವರ್ಧಿಸುತ್ತವೆ. ಯುವತಿಯರು ತಮಗಾಗಿ ಸೀರೆಗಳನ್ನು ಆಯ್ಕೆ ಮಾಡುವಾಗ ತಮ್ಮ ಮೈ ಬಣ್ಣ, ಎತ್ತರ, ಆಕಾರ, ಗಾತ್ರಗಳಿಗನುಸಾರವಾಗಿಯೇ ಆಯ್ಕೆ ಮಾಡಬೇಕು.

ಬೇಸಿಗೆಯಲ್ಲಿ ಕೆಂಪು ಅಥವಾ ಕಪ್ಪು ಬಣ್ಣದ ಸೀರೆಗಳನ್ನು ಕೊಳ್ಳಬೇಕು. ಬಿಸಿಲಿನ ಶಾಖವನ್ನು ಈ ಬಣ್ಣಗಳು ಹೀರುತ್ತವೆ. ಅದರಂತೆ ಮಳೆಗಾಲ ಹಾಗೂ ಚಳಿಗಾಲಗಳಲ್ಲಿ ಮಂದವಾಗಿರುವ ಬಣ್ಣದ ಸೀರೆಗಳನ್ನು ಆಯ್ಕೆ ಮಾಡಬೇಕು.

ಅತಿಯಾಗಿ ಕಪ್ಪಾಗಿರುವ ಯುವತಿಯರು ಕಡು ಬಿಳಿಯ ಸೀರೆಗಳನ್ನು ಮತ್ತು ಮಂದವಾದ ಬಣ್ಣಗಳ ಸೀರೆಗಳನ್ನು ತೊಡಬಾರದು. ಕೆಂಪು ಮಿಶ್ರಿತ ಬಣ್ಣದವರು ತಿಳಿ ಬಣ್ಣಗಳ ಸೀರೆಗಳನ್ನು ಉಡಬೇಕು. ಕಪ್ಪು ಛಾಯವುಳ್ಳವರು ನಸು ಹಳದಿ, ಬಿಳಿ, ಬಾದಾಮಿ, ನಸುಹಸಿರು, ಗುಲಾಬಿ, ಕನಕಾಂಬರ ಬಣ್ಣದ ಹಾಗೂ ಚಿಕ್ಕ ಹೂವುಗಳಿಂದ ಸೀರೆಗಳನ್ನು ಆಯ್ಕೆ ಮಾಡಬೇಕು. ದೊಡ್ಡ ಹೂವುಗಳಿರುವ ಬೂದು ಬಣ್ಣ, ಕೋಕೋ ಬಣ್ಣ, ಆಕಾಶ ನೀಲಿ, ಸ್ತ್ರೀಯರಿಗೆ ಅಂದವಾಗಿ ಕಾಣುತ್ತದೆ.

ಅದರಂತೆ ಕಡು ನೀಲಿ, ಹಸಿರು, ಟೊಮೆಟೋ ಕೆಂಪು, ಕಪ್ಪು ಸೀರೆಯಲ್ಲಿ ಬಿಳಿಯ ಹೂವುಗಳು, ನೇರಳೆ ಮುಂತಾದ ಬಣ್ಣದ ಸೀರೆಗಳು ಬಿಳಿ ಬಣ್ಣದವರಿಗೆ ಒಪ್ಪುತ್ತದೆ.

ಸ್ಥೂಲಕಾಯದವರು ಹಗುರವಾಗಿರುವ ಸೀರೆಗಳನ್ನು ಆರಿಸಬೇಕು. ಉದ್ದನೆಯವರು ದೊಡ್ಡ ಅಂಚಿನ ಸೀರೆಗಳನ್ನು ತೊಡಬೇಕು. ಗಿಡ್ಡನೆಯವರು ಚಿಕ್ಕ ಅಂಚಿನ ಸೀರೆ ಉಡುವುದು ಉತ್ತಮ ಹೆಚ್ಚಾಗಿ ನೂಲಿನ ಸೀರೆಗಳನ್ನು ಉಡಬೇಕು.

ಹೀಗೆ ಯುವತಿಯರಾಗಲೀ, ಮಹಿಳೆಯರಾಗಲಿ ತಮ್ಮ ಆಕಾರ, ಬಣ್ಣ, ತೂಕಕ್ಕನುಸಾರವಾಗಿ ಸೀರೆಗಳನ್ನು ತೊಟ್ಟು ತಮ್ಮ ಅಂದ ಚಂದವನ್ನು ಹೆಚ್ಚಿಸಿಕೊಳ್ಳಬೇಕು.


– ಸುರೇಖ ಕೆ.

ಯಾವ ಉಪಯೋಗವು ಆಗುವುದಿಲ್ಲ! ನೀವು ಆಗತಾನೇ ಕೂದಲು ನಿವಾರಕ ಕ್ರೀಂ ಅಥವಾ ಲೋಶನ್ ಬಳಸಿದ್ದರೆ ತಕ್ಷಣ ಆ ಜಾಗಕ್ಕೆ deodorant ಹಾಕಿಕೊಳ್ಳಬೇಡಿ! ಇದರಿಂದ ಚರ್ಮ ಅನಾವಶ್ಯಕವಾಗಿ ಕೆರಳುತ್ತದೆ.

ಬೇಸಿಗೆಯಲ್ಲಿ ಹೆಚ್ಚಿನ ಕೊಬ್ಬಿನಾಂಶ, ಎಣ್ಣೆ ಇರುವ ಪದಾರ್ಥಗಳನ್ನು ತ್ಯಜಿಸಿ, ಹಣ್ಣುಗಳು, ತಾಜಾ ತರಕಾರಿ, ಹಸಿ ತರಕಾರಿ, ಹಣ್ಣಿನ ರಸವನ್ನು ಯಥೇಚ್ಛವಾಗಿ ಸೇವಿಸಿ. ಬೇಸಿಗೆಯಲ್ಲಿ ಕೈಗೆಟಕುವ ಬೆಲೆಗೆ ಸಿಗುವ ಟೊಮಾಟೋ ಹಣ್ಣು ಅಥವಾ ಕಿತ್ತಲೆ ಹಣ್ಣುಗಳಲ್ಲಿ ರಸ ತೆಗೆದು ದೊಡ್ಡ ಪಾತ್ರೆಯಲ್ಲಿ ಜ್ಯೂಸ್ ಮಾಡಿಟ್ಟುಕೊಳ್ಳಿ. ಫ್ರಿಡ್ಜ್‌ನಲ್ಲಿ ಇಟ್ಟರೆ ಇನ್ನೂ ಸೂಕ್ತ. ಬಾಯಾರಿಕೆಯಾದಾಗ, ಏನಾದರೂ ಕುರುಕಲು ತಿನ್ನಬೇಕೆನಿಸಿದಾಗ ಒಂದು ಲೋಟ ಈ ರಸ ಕುಡಿದರೆ ದೇಹಕ್ಕೂ ತಂಪು, ಆರೋಗ್ಯಕ್ಕೂ ಒಳ್ಳೆಯದು. ನಿಮ್ಮ ತೂಕ ಹೆಚ್ಚಾಗಿದ್ದರೆ ಜ್ಯೂಸ್‌ಗೆ ಸಕ್ಕರೆ ಬೆರೆಸದೇ ಕುಡಿಯಿರಿ. ನಿಮ್ಮ ಹಸಿವನ್ನು ತಗ್ಗಿಸಿ ತೂಕವನ್ನು ಸಮತೋಲನಗೊಳಿಸಲು ಅನುಕೂಲವಾಗುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ ದಿನಕ್ಕೆ ಹತ್ತು ಲೋಟವಾದರೂ ನೀರು ಕುಡಿಯುವುದನ್ನು ಮರೆಯಬೇಡಿ!

ಬಿಸಿಲಿನ ಬೇಗೆಯಲ್ಲಿ ನಿಮ್ಮ ಉಡುಗೆ ತೊಡುಗೆಗಳಲ್ಲೂ ಬದಲಾವಣೆ ಬೇಕಾಗುತ್ತದೆ. ನಿಮ್ಮ ಶಿಫಾನ್, ರೇಶಿಮೆ ಭಾರಿ ಉಡುಪುಗಳನ್ನು ಒಳಗೆ ತೆಗೆದಿಟ್ಟು ತೆಳುವಾದ ಹತ್ತಿ, ಆರ್ಗಂಡಿ ಬಟ್ಟೆಗಳನ್ನು ಹೊರ ತೆಗೆಯಿರಿ. ಬಟ್ಟೆಗಳು ಆದಷ್ಟು ನವಿರಾದ ರಂಗು ಹೊಂದಿರಲಿ! ತಿಳಿ ನೀಲಿ, ತಿಳಿ ಹಳದಿ, ತಿಳಿಗೆಂಪು, ಗುಲಾಬಿ, ಬಿಳಿ, ತಿಳಿನೇರಳೆ ಮುಂತಾದ ಬಣ್ಣಗಳು ಬೇಸಿಗೆಯಲ್ಲಿ ಬಹಳ ಆಹ್ಲಾದಕರವಾಗಿ ಕಾಣುತ್ತದೆ. ಹೆಚ್ಚಾಗಿ ದೊಡ್ಡ ವಿನ್ಯಾಸಗಳಿಲ್ಲದ ಸೀರೆಗಳು ಉಡುವುದರಿಂದಲೂ ನಿಮ್ಮ ಶರೀರ ತಂಪಾಗಿರುತ್ತದೆ.

ಬಟ್ಟೆಗಳನ್ನು ಸ್ವಚ್ಛವಾಗಿ ಒಗೆದು, ಗಂಜಿ ಹಾಕಿ ಇಸ್ತ್ರಿ ಮಾಡಿದ ಮೇಲೇ ಧರಿಸಿ. ಒಮ್ಮೆ ಧರಿಸಿದ ಉಡುಪನ್ನು ಬೇಸಿಗೆಯಲ್ಲಿ ಮತ್ತೆ ಧರಿಸಬೇಡಿ! ಗರಿಮುರಿಯಾದ ತಿಳಿಬಣ್ಣದ ಸೀರೆಗಳನ್ನು ಶುಚಿಯಾಗಿ ಒಗೆದು ಇಸ್ತ್ರಿ ಮಾಡಿ ಉಟ್ಟರೆ ನೋಡಲು ಎರಡು ಕಣ್ಣು ಸಾಲದು! ಇಸ್ತ್ರಿ ಮಾಡಿದ ಕೂಡಲೇ ಬಟ್ಟೆಗಳಿಗೆ ನವಿರಾಗಿ ಸೆಂಟ್ ಸಿಂಪಡಿಸಿ ಒಳಗಿಡಿ. ಯಾವ ಸಂದರ್ಭದಲ್ಲಿ ನೀವು ಅದನ್ನು ಧರಿಸಿದರೂ ನಯವಾದ ಪರಿಮಳ ಹೊಮ್ಮಿ ಆಹ್ಲಾದ ನೀಡುತ್ತದೆ. ಬೇಸಿಗೆಯಲ್ಲಿ ನಿಮ್ಮ ಅಲಂಕಾರ ಮಿತಿಯಾಗಿರಲಿ. ಹಣೆಗೆ ಸಣ್ಣ ಬಿಂದಿಗಳನ್ನು ಇಡಿ. ಕಣ್ಣಿಗೆ ನಯವಾಗಿ ಕಾಡಿಗೆ ಹಚ್ಚಿದರೆ ಸಾಕಾಗುತ್ತದೆ. ಅಗತ್ಯವಾದರೆ ತುಟಿಗಳಿಗೆ ಸೀರೆಗೆ ಒಪ್ಪುವಂತಹ ರಂಗು ತೆಳುವಾಗಿ ಹಚ್ಚಿದರೆ ನಿಮ್ಮ ಅಲಂಕಾರ ಬೇಸಿಗೆಯ ಪ್ರಖರತೆಗೆ ಬೇಕಾದಷ್ಟಾಯಿತು! ಈ



ಋತುವಿನಲ್ಲಿ ಮೈ ತುಂಬಾ ಒಡವೆಗಳನ್ನು ಧರಿಸಬೇಡಿ. ಹೆಚ್ಚಾಗಿ ಮುತ್ತುಗಳು ಅಳವಡಿಸಿರುವ ಒಡವೆ ಉಪಯೋಗಿಸಿ. ತಿಳಿ ಬಣ್ಣದ ಉಡುಪುಗಳಿಗೆ ಮುತ್ತಿನ ಒಡವೆಗಳು ಸೊಗಸಾಗಿ ಕಾಣುತ್ತವೆ.

ನಿಮ್ಮ ತಲೆಗೂದಲು ನೀಳವಾಗಿರಲಿ, ತುಂಡಾಗಿರಲಿ, ಬೇಸಿಗೆಯಲ್ಲಿ ನಿಮ್ಮ ಕೇಶವಿನ್ಯಾಸ ಕೊರಳನ್ನು ಮುಚ್ಚದಂತಿರಲಿ. ಕೂದಲು ಕೊರಳು ಮುಚ್ಚುವುದರಿಂದ ಕತ್ತಿನ ಹಿಂಭಾಗ, ಕಿವಿಯ ಹಿಂದೆ ಬೆವರು ಹೆಚ್ಚಾಗುತ್ತದೆ. ನೀಳವಾದ ಕೂದಲು ಹೊಂದಿದವರು ಕೂದಲನ್ನು ಎತ್ತಿ ಕಟ್ಟಿ ಬಣ್ಣ ಬಣ್ಣದ ಕ್ಲಿಪ್‌ಗಳನ್ನು ಹಾಕಿದರೆ ಚೆನ್ನಾಗಿರುತ್ತದೆ. ತುಂಡುಗೂದಲು ಇದ್ದರೆ ಬೇಸಿಗೆ ಕಳೆಯುವವರೆಗೂ ಕೂದಲು ಕೊರಳಿನಿಂದ ಇಳಿಯದಂತೆ ಕತ್ತರಿಸಿಕೊಂಡರೆ ಉತ್ತಮ. ಈಗ ಬ್ಯೂಟಿಪಾರ್ಲರ್‌ಗಳಲ್ಲಿ ತುಂಡುಗೂದಲನ್ನು ಅನೇಕ ಆಕರ್ಷಕ ವಿಧಗಳಲ್ಲಿ ಕಟ್ ಮಾಡುತ್ತಾರೆ. ನೀಳಗೂದಲು ಮಹಿಳೆಯರಿಗೆ ಒಂದು ಸಲಹೆ : ನೀವೇನೇ ಕೇಶ ವಿನ್ಯಾಸ ಅಳವಡಿಸಿಕೊಂಡರೂ ತಲೆ ತುಂಬಾ ಸುವಾಸನೆಯುಕ್ತ ಹೂವಿನಿಂದ ಅಲಂಕರಿಸಿಕೊಳ್ಳುವುದು ಮಾತ್ರ ಮರೆಯಬೇಡಿ! ಮಲ್ಲಿಗೆ, ಜಾಜಿಯಂಥ ಹೂವುಗಳ ಸುವಾಸನೆಗೆ ಯಾವ ರಾಸಾಯನಿಕ ಪರ್‌ಫ್ಯೂಮ್ ಅಥವಾ ಡಿಯೋಡರೆಂಟ್ ಸಾಟಿಯಾಗಲು ಸಾಧ್ಯ? ನಿಮ್ಮ ದೇಹ ನೈಸರ್ಗಿಕ ಚೆಲುವಿನಿಂದ ಕಂಗೊಳಿಸಲಿ. ಆಗ ಸೂರ್ಯನ ತೀಕ್ಷ್ಣ ಕಿರಣಗಳ ನಡುವೆಯೂ ನೀವು ಅಂದವಾಗಿ, ಆಹ್ಲಾದಕರವಾಗಿ ಕಾಣುವಿರಿ.

[ಮುಂದಿನ ಸಂಚಿಕೆಯಲ್ಲಿ ಮಾಗಿಕಾಲದಲ್ಲಿ (winter) ಸೌಂದರ್ಯ ರಕ್ಷಣೆ ಮಾಡುವುದರ ಬಗ್ಗೆ ವಿವರಣೆ ನೀಡಲಾಗುವುದು]

ಹೆಜ್ಜೆ-೯

ಆರೋಗ್ಯ ಪೂರ್ಣ ದೇಹ, ಮನಸ್ಸುಗಳು ಯಶಸ್ವೀ ವ್ಯಕ್ತಿತ್ವದ ಮಹತ್ವದ ಗುಟ್ಟು. ಅದಕ್ಕಾಗಿ ಬೇಕು ಎಲ್ಲ ರಸ ಗ್ರಂಥಿಗಳ ಅನುಕೂಲ ಸಹಕಾರ.

ಆರೋಗ್ಯ ಮತ್ತು ಮನಸ್ಸು

'ಕೃಶಾಂಗ'

ರಸಗ್ರಂಥಿ ವಿಜ್ಞಾನವೆಂಬುದೊಂದಿದೆ. ಈ ವಿಜ್ಞಾನದ ವಿಷಯ ನಿರ್ನಾಳ ಅಥವಾ ಒಳಸುರಿಕ ಗ್ರಂಥಿಗಳು. ನಮ್ಮ ಶರೀರದ ಚಟುವಟಿಕೆಗಳು ಸರಿಯಾದ ಬಗೆಯಲ್ಲಿ ಸಾಗಲು ಅತ್ಯಾವಶ್ಯಕವಾದ ರಸದೂತಗಳೆಂಬ ರಾಸಾಯನಿಕ ವಸ್ತುಗಳನ್ನು ಈ ಗ್ರಂಥಿಗಳು ಉತ್ಪಾದಿಸಿ ನೇರವಾಗಿ ರಕ್ತಕ್ಕೆ ಸುರಿಸುತ್ತವೆ. ಆದುದರಿಂದಲೇ ಇವುಗಳಿಗೆ ನಿರ್ನಾಳ ಗ್ರಂಥಿಗಳೆಂದು ಹೆಸರು.

ವ್ಯಕ್ತಿಯ ಬೆಳವಣಿಗೆ ಮತ್ತು ನಡಾವಳಿಯನ್ನು ರೂಪಿಸುವಲ್ಲಿ ರಸಗ್ರಂಥಿಗಳು ಮಹತ್ವದ ಪಾತ್ರ ವಹಿಸುತ್ತವೆ. ವ್ಯಕ್ತಿಯ ದೇಹದಾಕಾರ, ಬೆಳವಣಿಗೆಯ ಗತಿ ಮತ್ತು ವ್ಯಾಪ್ತಿ, ಕಲಿಯುವ ಮತ್ತು ಕಲಿತುದನ್ನು ತನ್ನಲ್ಲಿ ಸ್ಥಿರೀಕರಿಸಿಕೊಳ್ಳುವ ಸಾಮರ್ಥ್ಯ, ಭಾವಲಹರಿ ಹಾಗು ಮನಃಸ್ಥಿತಿಗಳ ಮೇಲೆ ಪ್ರಭಾವ ಬೀರುವ ಇಂದ್ರಿಯಗಳ ಮೇಲೆ ಇವುಗಳು ಪರಿಣಾಮ ಬೀರುತ್ತವೆ. ಪಿಟ್ಯೂಟರಿ, ಥೈರೈಡ್, ಅಡ್ರಿನಲ್, ಮೆದೋಜೀರಕ, ಪ್ಯಾರಥೈರೈಡ್, ಬೀಜಗಳು, ಅಂಡಾಶಯಗಳು - ಈ ಏಳು ಮುಖ್ಯ ಗ್ರಂಥಿಗಳು ವ್ಯಕ್ತಿತ್ವ ವಿಕಾಸದಲ್ಲಿ ಪಾಲ್ಗೊಳ್ಳುತ್ತವೆ.

ಥೈಮಸ್ ಗ್ರಂಥಿ ಶ್ವಾಸನಳಿಕೆಯ ಎರಡೂ ಬದಿಗಿದೆ. ಅದರ ಚಟುವಟಿಕೆ ವ್ಯಕ್ತಿ ಪ್ರೌಢ ನಾಗುವ ತನಕ ಮಾತ್ರ. ಬಾಲಕ-ಬಾಲಕಿಯರನ್ನು 'ಹುಡುಗತನ' ದಲ್ಲಿಡುವುದು ಇದರ ವೈಶಿಷ್ಟ್ಯ. ಪ್ರೌಢತ್ವದಲ್ಲಿಯೂ ಅದು ಕ್ರಿಯಾಶೀಲವಾಗುಳಿದರೆ ಮುದಿಗೂಸಿನ -ಬೆಳೆದ ಹುಡುಗನ-ಸ್ವಭಾವ ಕಂಡುಬರಬಹುದು.


ಪೈನೀಯಲ್ ಸಹ ಥೈಮಸ್‌ನಂತೆಯೇ. ಇದು ಮಿದುಳಿನ ತಳದಲ್ಲಿ ಪಿಟ್ಯೂಟರಿ ಗ್ರಂಥಿಯ ಹಿಂದುಗಡೆಯ ಮೇಲ್ಭಾಗದಲ್ಲಿ ಸ್ಥಿತ. ಇದೂ ಸಹ 'ಹುಡುಗಾಟ'ದ ಪ್ರಚೋದಕ. ಈ ಗ್ರಂಥಿ ಆಂತರಿಕವಾಗಿ ಸುರಿಸುವ ರಸ ದೇಹ ಪ್ರೌಢತ್ವ ತಲುಪಲು ಸಹಾಯಕಾರಿ. ಈ ಎರಡೂ ಗ್ರಂಥಿಗಳ ಪಾತ್ರ ವ್ಯಕ್ತಿತ್ವ ವಿಕಾಸದಲ್ಲಿ ಗೌಣ.

ಪಿಟ್ಯೂಟರಿಯನ್ನು ಒಳಸುರಿಕ ಗ್ರಂಥಿಗಳ ನೇತಾರನೆನ್ನಬಹುದು. ಇದಕ್ಕೆ ಎರಡು ಹಾಲೆಗಳಿವೆ. ಮುಂದಿನದು ಹತ್ತು ಹಾಗೂ ಹಿಂದಿನದು ಎರಡು ರಸದೂತಗಳನ್ನು ತ್ಪಾದಿಸುತ್ತದೆ. ಈ ಗ್ರಂಥಿ ಇತರ ಗ್ರಂಥಿಗಳನ್ನೂ ಪ್ರಚೋದಿಸುತ್ತದೆ. ಭಿನ್ನ ಭಿನ್ನ ರಸಸ್ರಾವದ ಮೂಲಕ ಒಂದಕ್ಕೊಂದು ಸಂಬಂಧಿಸದ ಭಿನ್ನ ಭಿನ್ನ ಕಾರ್ಯಗಳನ್ನು ನಿರ್ವಹಿಸುವ, ಹಲವು ಭಾಗಗಳಿಂದ ರಚಿತವಾದ ಈ ಪುಟ್ಟ ಗ್ರಂಥಿ ತಲೆಬುರುಡೆಯ ತಳದಲ್ಲಿದೆ. ಈ ಗ್ರಂಥಿಯ ಹಿಂಭಾಗದ ರಸದ ಅತಿಸ್ರಾವದಿಂದ ರಾಕ್ಷಸಾಕಾರದಂಥ ಅಸಾಮಾನ್ಯ ದೈಹಿಕ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕುಬ್ಜತ್ವ ಈ ಗ್ರಂಥಿಯ ನಿಷ್ಕ್ರಿಯತೆಯ ಪರಿಣಾಮ. ಬೃಹತ್ ಪಾದಗಳೂ, ದೀರ್ಘಬಾಹುಗಳೂ, ವಿಶಾಲಮುಖವೂ, ಕುಗ್ಗಿದ ಮಾನಸಿಕ ಶಕ್ತಿಯೂ ಈ ಗ್ರಂಥಿಯ ಕಾರ್ಯಶೀಲತೆಯ ಏರುಪೇರಿನ ಫಲಗಳು. ಮುಂಭಾಗದ ರಸಸ್ರಾವದ ಹೆಚ್ಚುವಿಕೆ ರಕ್ತದೊತ್ತಡ, ಉಸಿರಾಟದ ವೇಗಗಳನ್ನು ತೀವ್ರಗೊಳಿಸಬಹುದು.

ಕುತ್ತಿಗೆಯ ಕೆಳಮುಂಭಾಗದಲ್ಲಿ ಕಂದು ಬಣ್ಣದ ಮುದ್ದೆಯ ರೂಪದಲ್ಲಿರುವ ಥೈರೈಡ್ ಗ್ರಂಥಿ ಹಿಗ್ಗಿದರೆ ಕತ್ತುಬ್ಬು ಎಂಬ ಕುಂದು ಕಾಣುತ್ತದೆ. ವ್ಯಕ್ತಿಯ ಹುಟ್ಟಿನ ಸಮಯದಲ್ಲಿ ಈ ಗ್ರಂಥಿಯ ಅನುಪಸ್ಥಿತಿ, ಅಥವಾ ಶೂನ್ಯ ಕ್ರಿಯಾಶೀಲತೆ ಬಹ್ವಂಶ ಕುಂಠಿತ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ತೋರ್ಪಡಿಸಬಹುದು. ಇಂಥವರಿಗೆ 'ಕ್ರೆಟಿನ್' ಎನ್ನುತ್ತಾರೆ. ಮಗುವಿನ ಪ್ರಾರಂಭಾವಸ್ಥೆಯಲ್ಲಿ ಈ ಗ್ರಂಥಿ ಆವಶ್ಯಕವಾಗಿರುವಷ್ಟು ಕ್ರಿಯಾಶೀಲವಾಗಿರದಿದ್ದರೆ ದೇಹದ ಮತ್ತು ಬುದ್ಧಿಯ ಮಂದತ್ವ ಕಾಣಬಹುದು. ವ್ಯಕ್ತಿ ಪೂರ್ಣವಾಗಿ ಬೆಳೆದ ನಂತರ ಈ ಗ್ರಂಥಿ ಕ್ರಿಯಾಶೂನ್ಯವಾದರೆ, ಆ ವ್ಯಕ್ತಿ ಮಾನಸಿಕ ಚುರುಕನ್ನು ಕಳೆದುಕೊಂಡು ಆಸಕ್ತಿರಹಿತನೂ, ನಿದ್ರಾಸಕ್ತನೂ, ನಿರುದ್ದೇಶ ಜೀವನ ಸಾಗಿಸುವವನೂ ಆಗಬಹುದು. ಆತನ ತೂಕವೂ ಅತಿಯಾಗಿ ಹೆಚ್ಚಬಹುದು. ನೋಡುವವರು ಮುಜುಗರಪಡುವಂಥವನಾದ ಈತ ಕಾರ್ಯಗಳಲ್ಲಿ ಮಂದಗತಿಯವನೂ, ತಿಳಿಗೇಡಿಯೂ, ಮಬ್ಬುಗಣ್ಣಿನ ಆಲಸಿಯೂ ಆಗಿ ಕಂಡುಬರಬಹುದು. ಆವಶ್ಯಕತೆಗಿಂತ ಹೆಚ್ಚು ಕ್ರಿಯಾಶೀಲವಾದ ಗ್ರಂಥಿ ಇದಾಗಿದ್ದರೆ - ಅತಿಯಾಗಿ ರಕ್ತಸ್ರಾವವಾಗುತ್ತಿದ್ದರೆ - ಅಂಥ ವ್ಯಕ್ತಿಯ ಸಾಮಾಜಿಕ ಸಂಬಂಧಗಳು ಹದಗೆಡಬಹುದು. ರಸಗ್ರಂಥಿಯ ಕೊರತೆಯ ಪ್ರಕರಣಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುವ ಈ ದೋಷವು ಸಾಮಾನ್ಯವಾಗಿ ಹದಿನಾರರಿಂದ ಮೂವತ್ತು ವರ್ಷಗಳವರೆಗಿನ ವ್ಯಕ್ತಿಗಳಲ್ಲಿ ಪ್ರಕಟವಾಗುವುದು. ಅಂಥ ವ್ಯಕ್ತಿಗಳ ಕುತ್ತಿಗೆಯು ವಿಕಾರವಾಗಿ ಉಬ್ಬಿರುವುದು. ಜುಗುಪ್ಸೆ ತರುವ ಮುಖಲಕ್ಷಣಗಳು ಗೋಚರಿಸಬಹುದು. ಕನಿಷ್ಠ ಪಾತಳಿಯ ಆರೋಗ್ಯ ಹೊಂದಿರುವ ಈ ವ್ಯಕ್ತಿಗಳು ಅತಿ ಚಂಚಲಚಿತ್ತರೂ, ಶೀಘ್ರಕೋಪಿಗಳೂ, ನರವಿಕಾರಗಳಿಗೊಳಗಾದವರೂ ಆಗಿರುತ್ತಾರೆ.

ಅಡ್ರಿನಲ್ ಗ್ರಂಥಿಗಳು ಮೂತ್ರ ಪಿಂಡಗಳ ಮೇಲೆ ಸ್ಥಿತವಾಗಿವೆ. ಇವುಗಳ ರಸಸ್ರಾವದಲ್ಲಿ ಏರುಪೇರುಂಟಾದರೆ 'ಎಡಿಸನ್'ನ ರೋಗದಿಂದ ವ್ಯಕ್ತಿಗಳು ಬಳಲಬಹುದು. ಪರಿಣಾಮವಾಗಿ,

ಹೆಚ್ಚುತ್ತಾ ಹೋಗುವ ದಣಿವು, ಅಶಕ್ತತೆ, ಒಂದೇ ಸವನೆ ಇಳಿಯುತ್ತಾ ಹೋಗುವ ರಕ್ತದೊತ್ತಡ, ಚರ್ಮದ ಬಣ್ಣ ಗಾಢ ಕಪ್ಪಿಗೆ ತಿರುಗುವದು, ಹಸಿವೆಯ ನಿರಂತರ ಇಳಿತ, ರಕ್ತಹೀನತೆ ಸಾವಿನ ಬಾಗಿಲಿಗೆ - ಆ ವ್ಯಕ್ತಿಯನ್ನು ತಂದು ನಿಲ್ಲಿಸಬಹುದು. ಭೀತಿಗೊಂಡಾಗ ಅಥವಾ ನಮ್ಮ ಭವಿಷ್ಯ ಮಸುಕಾಯಿತೆಂದು ನಾವು ಆತಂಕಗೊಂಡಾಗ ಭಾವನಾತ್ಮಕ ಅಸಮತೋಲನ ಗ್ರಂಥಿಯ ರಸಸ್ರಾವದಿಂದುಂಟಾಗಿ ದೇಹ



ಆಕ್ರಮಣ ಅಥವಾ ಪಲಾಯನಕ್ಕೆ ಸಿದ್ಧಗೊಳ್ಳುತ್ತದೆ. ತಾರುಣ್ಯದಲ್ಲಿ ದೇಹವನ್ನು ಅಶಿಸ್ತು ಮತ್ತು ಮಿತಿಮೀರಿ ದುಡಿಸಿಕೊಂಡು ಯಶಸ್ಸು ಕಂಡವರು ಮುಂದೆ ರಸಸ್ರಾವದ ಆಕಸ್ಮಿಕ ಕೊರತೆಯಿಂದ ಅವಧಿಪೂರ್ವ ವೃದ್ಧಾಪ್ಯ ಹಾಗೂ ಅಸಮರ್ಥತೆಗಳನ್ನನುಭವಿಸುತ್ತಾ ಸಮಾಜದ ಕೀಟಲೆಗೆ ಗುರಿಯಾಗುತ್ತಿರುವ ಉದಾಹರಣೆಗಳನೇಕ.

ಅತ್ಯಂತ ಮಹತ್ವದ ದ್ವಿರೂಪಗ್ರಂಥಿ ಮೇದೋಜೀರಕ. ಇದು ನಾಳ ಗ್ರಂಥಿ ಹಾಗೂ ನಿರ್ನಾಳಗ್ರಂಥಿ. ನಾಳಗ್ರಂಥಿ ಕಿಣ್ವಗಳನ್ನೊದಗಿಸಿ, ಕೊಬ್ಬು, ಕಾರ್ಬೊಹೈಡ್ರೇಟ್ ಮತ್ತು ಪ್ರೊಟೀನ್‌ಗಳನ್ನು ಕರಗಿಸಲು ಸಹಾಯ ಮಾಡುತ್ತದೆ. ನಿರ್ನಾಳಗ್ರಂಥಿ 'ಇನ್‌ಸುಲಿನ್' ಸುರಿಸಿ ದೇಹದಲ್ಲಿಯ ಸಕ್ಕರೆ ಸಂಗ್ರಹಿಸಿ, ಅದನ್ನು ಸದುಪಯೋಗಗೊಳಿಸುತ್ತದೆ. 'ಇನ್‌ಸುಲಿನ್' ಕೊರತೆ ದಾಹ ಹೆಚ್ಚಿಸುತ್ತದೆ. ಮೇದೋಜೀರಕ ಮತ್ತು ಅದರ ವಿರುದ್ಧ ಕ್ರಿಯೆಯ ಅಡ್ರೆನಲ್‌ಗಳ ಅಸಮತೋಲನದಿಂದಾಗಿ ಚೈತನ್ಯದ ಕೊರತೆಯುಂಟಾಗಿ ವ್ಯಕ್ತಿತ್ವ ಕಳಾಹೀನವಾಗುತ್ತದೆ. ಮೇದೋಜೀರಕ ಸಕ್ಕರೆ ಸಂಗ್ರಹಕನಾದರೆ ಅಡ್ರೆನಲ್‌ಗಳು ಅದರ ಬಳಕೆದಾರರು. ಬಳಕೆಯ ಪ್ರಕ್ರಿಯೆ ಸಕ್ಕರೆ ಶಕ್ತಿಯಾಗಿ ರೂಪಾಂತರಗೊಳ್ಳುವದರಿಂದಾಗುತ್ತದೆ. ಈ ಕ್ರಿಯೆ ಅತ್ಯಂತ ಚುರುಕಿನಿಂದಾದಾಗ ಖಾಲಿಯಾಗುವ ಯಕೃತ್ತು ಕೊಬ್ಬನ್ನು ಕರಗಿಸಲು ಪ್ರಾರಂಭಿಸುವದರಿಂದ ವ್ಯಕ್ತಿ ತೆಳ್ಳಗಾಗುತ್ತ, ಒಣಗುತ್ತಾ ಹೋಗುತ್ತಾನೆ.

ಪ್ಯಾರಾಥೈರೈಡ್ ಗ್ರಂಥಿಯನ್ನು 'ಥೈರೈಡ್‌ನ ತಡೆ ಉಪಕರಣ' ಎನ್ನುತ್ತಾರೆ. ಇದಕ್ಕುಂಟಾಗುವ ಹಾನಿ ವ್ಯಕ್ತಿಯನ್ನು ನರಸತ್ತವನನ್ನಾಗಿಸುತ್ತದಲ್ಲದೆ, ಸ್ನಾಯುಗಳ ಮೇಲಣ-ಆತನ ನಿಯಂತ್ರಣ ದುರ್ಬಲಗೊಳ್ಳುತ್ತದೆ. ತೀವ್ರತರ ಹಾನಿ ಸ್ನಾಯುಸೆಳೆತ ಮತ್ತು ಸಾವುಗಳಿಗೆಡೆಮಾಡಬಹುದು. ಊತಗೊಂಡ ಥೈರೈಡ್ ಗ್ರಂಥಿಯನ್ನು ಶಸ್ತ್ರಚಿಕಿತ್ಸೆಗೊಳಪಡಿಸಿದಾಗ ಪ್ಯಾರಾ ಥೈರೈಡ್ ಗ್ರಂಥಿ ಗಾಸಿಗೊಂಡರೆ ಅಥವಾ ಅದರ ತುಸು ಭಾಗವೇ ನಾಶವಾದರೆ ಅದು ಪ್ರಾಣಾಂತಿಕವಾಗಬಹುದು.

'ಗೋನಾಡ್' ಎಂದು ಕರೆಯಲ್ಪಡುವ ಲೈಂಗಿಕ ಗ್ರಂಥಿಗಳು ಅತಿ ಜಟಿಲವಾದುವು. ಇವುಗಳೇ ಬೀಜ ಮತ್ತು ಅಂಡಾಶಯಗಳು. ಇವುಗಳ ಬಗೆಗೆ ಮಾತ್ರ ಬಹಳಷ್ಟು ವಿಷಯಗಳು ಖಚಿತವಾಗಿ ತಿಳಿದಿವೆ. ಈ ಗ್ರಂಥಿಗಳು ಎರಡು ಕಾರ್ಯಗಳನ್ನು ನಿರ್ವಹಿಸುತ್ತವೆ. ಒಳಸುರಿತ ಹಾಗೂ ಪುನರುತ್ಪತ್ತಿ. ಇವು ವ್ಯಕ್ತಿಯ ರಚನಾತ್ಮಕ ಬೆಳವಣಿಗೆಯ ಮೇಲೆ ನಿಶ್ಚಿತ ಪರಿಣಾಮ ಬೀರುತ್ತವೆ. ಶರೀರದ ಆಕಾರ, ಕಾಲು ಮತ್ತು ದೇಹಗಳ ತುಲನಾತ್ಮಕ ಉದ್ದ ಮತ್ತು ಕುತ್ತಿಗೆಯ ಆಕಾರ ಈ ಗ್ರಂಥಿಗಳ ಸುರಿತವನ್ನವಲಂಬಿಸಿವೆ. ಇವುಗಳ ಮತ್ತು ಇತರ ಗ್ರಂಥಿಗಳ ಒಳಸುರಿತಗಳು ಪರಸ್ಪರ ಪ್ರಭಾವಕ್ಕೊಳಗಾಗುತ್ತವೆ.

ಒಟ್ಟಿನಲ್ಲಿ, ರಸಗ್ರಂಥಿಗಳ ಕಾರ್ಯ ಹಾಗೂ ವ್ಯಕ್ತಿಯ ಆರೋಗ್ಯ, ದೃಷ್ಟಿಕೋನ ಮತ್ತು ಸ್ವಭಾವಗಳು ಒಂದನ್ನೊಂದು ಪ್ರಭಾವಗೊಳಿಸುತ್ತವೆ. ತೀಕ್ಷ್ಣ ವೈಚಾರಿಕರು ತಮ್ಮ ಮನಸ್ಸು ಹಾಗೂ ಭಾವನೆಗಳನ್ನು ನಿಯಂತ್ರಣದಲ್ಲಿಡಲು ಶಕ್ತರು. ಸಾಮಾನ್ಯರು ಉದ್ರೇಕಕ್ಕೊಳಗಾಗುತ್ತಾರೆ. ಹಾಗಾದಾಗ ಅತ್ಯಂತ ಮಹತ್ವದ ಅಡ್ರೆನಲ್‌ಗಳೂ ಉದ್ರೇಕಗೊಂಡು ರಸಸ್ರಾವದ ಮೂಲಕ ವ್ಯಕ್ತಿತ್ವಕ್ಕೆ ಹಾನಿಯುಂಟುಮಾಡಬಹುದು.

ಆರೋಗ್ಯಪೂರ್ಣದೇಹ, ಮನಸ್ಸುಗಳು ಯಶಸ್ವೀ ವ್ಯಕ್ತಿತ್ವದ ಮಹತ್ವದ ಗುಟ್ಟು, ಅದಕ್ಕಾಗಿ ಬೇಕು ಎಲ್ಲ ರಸಗ್ರಂಥಿಗಳ ಅನುಕೂಲ ಸಹಕಾರ.

ಮಾತಿಗೆ ಮೊದಲು ಮೋತಿ



ಹುಟ್ಟಿದ ಕೂಡಲೇ ಮೊದಲು ಕಾಣಸುವದು ಮುಖ.

ಆ ನಂತರ ನಿಧಾನಕ್ಕೆ ಕಲಿಯುವದು ಮಾತು. ಈ ಮಾತು ಬಂದ ತಕ್ಷಣ, ಮಾತಿನೊಡನೆಯೇ ಮನುಷ್ಯ ಹದವಾಗಿ ಬೆರೆತು, ಮಾತಿನ ಜೊತೆಗೇ ಮುಖವನ್ನೂ ಜೋಡಿಸಿಕೊಂಡೇ, ಅಂದುಕೊಳ್ಳವುದು.., ನೊಂದುಕೊಳ್ಳುವುದು... ಆಡಿಕೊಳ್ಳುವುದು... ನೋಡಿಕೊಳ್ಳುವುದು ಎಲ್ಲ. ಒಂದು ಮುಖದ ಜೊತೆಗೆ ಇನ್ನೊಂದು ಮುಖ ಹಚ್ಚಿಕೊಳ್ಳುವುದು, ಬಿಚ್ಚಿಕೊಳ್ಳುವುದು, ಕಡೆಗೆ ಮುಚ್ಚಿಕೊಳ್ಳುವುದು ಕೂಡ ಮಾತಿನಿಂದಲೇ.

ತಟ್ಟನೆ ನೋಡಿದ ತಕ್ಷಣ ಕಾಣುವ ಆ ಮುಖಕ್ಕೆ, ಹಾಗೆ ಕೇಳಿದರೆ ನಿಜವಾಗ್ಲೂ ಎರಡೇ ಜಾತಿ, ಛೇ! ವಂಶದಿಂದೇನೂ ಬಂದದ್ದಲ್ಲ ಬಿಡಿ. ಹುಟ್ಟಿನಿಂದ ಬಂದದ್ದು. ಅದೇ.. ಒಂದುಗಂಡು, ಇನ್ನೊಂದು ಹೆಣ್ಣು.

ಅನಸೂಯ ಸಿದ್ಧರಾಮ

ಇರುವ ಈ ಎರಡೇ ಜಾತಿಯಲ್ಲೂ ಹೆಣ್ಣಿನ ಮುಖಕ್ಕೇ ಹೆಚ್ಚಿನ ಮೀಸಲಾತಿ.

ಹೊರಗೆ ತುದಿಗಾಲಮೇಲೆ ನಿಂತು ಉದ್ವಿಗ್ನತೆಯಿಂದ ಚಡಪಡಿಸುತ್ತಿರುವವರಿಗೆ, ಒಳಗಿನಿಂದ ಬಂದ ದಾದಿ, ಕುತೂಹಲದಿಂದ ಬಿತ್ತರಿಸುವ ಬಾತ್ಮಿ... ಫೇಡೇ, ಇಲ್ಲಾ ಜಿಲೇಬಿ ಎಂಬುದು, ಸ್ವಾದದೊಳಗೆ ಎರಡೂ ಸಿಹಿಯೇ ನಿಜ. ಒಂದು ವ್ಯತ್ಯಾಸ ಎಂದರೆ, ಒಂದು ಅತೀಮಧುರ, ಇನ್ನೊಂದು ಕಠೋರ! ಅನುಭವದಲ್ಲಿ!

'ಯಾಕ್ರೀ, ನಿಮ್ಮ ಸೊಸೀ ಕಾಣ್ತಾ ಇಲ್ಲಾ...?

ಹಾಗೇ ಸುಮ್ಮನೆ ಕೇಳಿದ ಪ್ರಶ್ನೆಗೆ ಬರುವ ಉತ್ತರ, ಅಷ್ಟೇ ಅನಾಸಕ್ತಿಯದು ಮಾತ್ರವಲ್ಲ ತೀರ ಅಸಡ್ಡೆಯದೂ ಕೂಡ.

ಶೋಧ

ಹುಡುಗಿಯೊಬ್ಬಳು
ತಾನು ಕಳೆದುಕೊಂಡ
ಪ್ರೀತಿಯನ್ನು ತನ್ನ ಪ್ರಿಯಕರನ
ಹಳೆಯ
ಪ್ರೇಮ ಪತ್ರ
ಗಳಲ್ಲಿ
ಹುಡುಕುತ್ತಿದ್ದಳು.

-ಕಲಿವೀರ ಕಳ್ಳಿಮನಿ

'ಹೌದ್ರೀ.... ತವರ್ಮನೀಗೆ ಹೋಗ್ಯಾಳ ಬಾಣಂತನಕ್ಕ....'

'ಮತ್ತ ನೀವ ಹೋಗಿಲ್ಲsss... ನೋಡ್ಲಿಕ್ಕೆ?

'ಏನ್ ಹೋಗ್ತೀರಿ... ಏನ್ ಕೂಸಿನ ಮೋತಿ ನೋಡ್ತೀರಿ ಹೆಣ್ಣ ಹಡದ ಕುಂತಾಳ ತಣ್ಣ!

ಹಿಂದೆಯೂ ತುಳಿಸಿಕೊಂಡು, ಈಗಲೂ ತುಳಿಸಿಕೊಳ್ಳುತ್ತ, ಮುಂದೆಯೂ ತುಳಿಸಿಕೊಳ್ಳಲು ಸಿದ್ಧವಾಗೇ ಕುಳಿತಿರುವ ಹೆಣ್ಣುಮುಖದ ಕತೆ ಇದು.

ಅಂತಸ್ತು, ಅಧಿಕಾರ, ಗತ್ತು, ತೊತ್ತು ಅಂತೆಲ್ಲ ಕೂಡ ಮುಖದ ಮೇಲೇ ಪತ್ತೆ ಹಚ್ಚೋದು ಅಂದರೆ ಇದೇನೂ ಸಾಮಾನ್ಯ ಸಂಶೋಧನೆ ಅಲ್ಲಬಿಡಿ. ಅವರ ತೀರ್ಪು ಸರಿಯೋ ತಪ್ಪೋ ಯಾರಿಗೆ ಬೇಕು? ಒಟ್ಟಾರೆ ಮುಖ ಕಾಣುತ್ತದೆ. ಅದರ ಹಿಂದೆ ಮತ್ತೇನೋ ಕಾಣುತ್ತದೆ.

ಯಾರಿಗೋ ಬಾಡಿಗೆ ಮನೆ ಬೇಕಾಗಿತ್ತು. ನಂಗೆ ಗೊತ್ತಿದ್ದವರನ್ನು ವಿಚಾರಿಸಿದೆ.

'ಮನೀ ಕೊಟ್ರೇನ್ರಿ?

ಇನ್ನೂ ಇಲ್ಲ ಬರ್ರಿ. ಮೊನ್ನೆ ಒಬ್ರು ಬಂದಿದ್ರು. ನೋಡ್ಲಿಕ್ಕೇನೋ ಒಳ್ಳೆಯವ್ರಂಗsss ಕಂಡ್ರು. ಆದ್ರ.... ಯಾಕೋ, ಮುಖದ ಮ್ಯಾಲೆ.. ಮಾಂಸಾತಿನ್ನೂ ಮಂದೀ ಹಂಗ ಕಂಡ್ರ ಬಿಡ್ರಿ. ಏನೋ ನೆವಾ ಹೇಳಿ ಆಗೂದಿಲ್ಲಾ ಅಂದೆ'

ಅವರ ಯೋಚನೆ, ನಿರಾಧಾರ ತರ್ಕ ಕೇಳಿ ಆಘಾತವಾಯ್ತು. ಮುಖದ ಮೇಲೆ ಅನ್ನಾ ತಿನ್ನುವವರ ಹಾಗೆ ಕಾಣುವವರನ್ನು ಹೇಗೆ ಪತ್ತೆಹಚ್ತೀರಿ? ಅಂತ ಕೇಳಬೇಕೆನ್ನಿಸಿತು. ನಿಮ್ಮ ಮುಖವನ್ನೊಮ್ಮೆ ಕನ್ನಡಿಯಲ್ಲಿ ನೋಡಿಕೊಂಡ್ರೆ, 'ಮನುಷ್ಯರನ್ನೇ ತಿನ್ನುವ ಜನದ ಹಾಗೆ ಕಾಣ್ತೀರಿ' ಅಂತಲೂ ಹೇಳಬೇಕೆನ್ನಿಸಿತು. ಆಗ ಇನ್ನೆಂತಹ ಅವಲಕ್ಷಣದ ಮಾತು ಕೇಳಬೇಕಾದೀತೋ ಅಂತ ತೆಪ್ಪಗಾದೆ.

'ಛೇ, ಯಾರ ಮುಖಾ ನೋಡಿ ಎದ್ನೋ ಮುಂಜಾನೆ, ಹೋದ ಕೆಲಸ ಒಂದೂ ಆಗ್ಲಿಲ್ಲಾ..' ಎಂದು ದಿನವೂ ಗೊಣಗುವವರು. ಬೆಳಿಗ್ಗೆದ್ದು ಮೊದಲು ತಮ್ಮದೇ ಮುಖ ನೋಡಿಕೊಂಡಿರುತ್ತಾರೆ ಎಂದು ಯಾರೋ ಹೇಳಿದ ನೆನಪು.

ಮೂಕ ಪ್ರಾಣಿಗಳ ಜೊತೆ ಹೋಲಿಸಲಾಗದಂತಹ ಹೋಲಿಕೆಗಳು ಈ ಮನುಷ್ಯರ ಮುಖಕ್ಕಿರುವದರಿಂದಲೇ, ನಾವೆಷ್ಟೇ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದರೂ ನಗೆ-ಹೊಗೆ, ನೋವು-ನಲಿವು, ಸುಖ-ದುಃಖ, ಸಂಭ್ರಮದಂತಹ ಭಾವನೆಗಳನ್ನು ಒಡೆದು ತೋರಿಸುವ ಈ ಮುಖಕ್ಕೆ ಅಷ್ಟು ಮಹತ್ವ ಇರೋದು ಕಣ್ಣು-ಕಿವಿ-ಬಾಯಿ-ಮೂಗುಗಳಂತಹ ಸೌಂದರ್ಯಸೂಚಕ ಅಂಗಗಳೆಲ್ಲಾ ಭೂಷಣಪ್ರಾಯ ಆಗಿರೋದು, ಇಡೀ ಶರೀರಕ್ಕೆ ಕಳಸಪ್ರಾಯವಾಗಿರೋ ಈ ಬೊಗಸೆಯಗಲದ ಮುಖದ ಮೇಲೇ ಹೊರ್ತು ಬೆನ್ನ ಹಿಂದಲ್ಲವಲ್ಲ! ಇಷ್ಟಗಲ, ಅಷ್ಟುದ್ದದ ಈ ಮನುಷ್ಯನ ಶರೀರದೊಳಗೆ ಇದೇ ಈ ಕಿವಿ-ಮೂಗು ಬಾಯಿಗಳು ಎಲ್ಲೋ ಹುಡುಕಿ ತಡಕಿ ಪ್ರಯಾಸಪಟ್ಟು ಮುಟ್ಟಿಕೊಳ್ಳುವ ಹಾಗೆ ಅಲ್ಲೊಂದಿಲ್ಲೊಂದು ಇರಬಹುದಾಗಿತ್ತಲ್ಲ...! ಊಹೂಂ. ಹಾಗಿಲ್ಲ. ಎಲ್ಲ ಕಟ್ಟುನಿಟ್ಟಾಗಿ, ಅಚ್ಚುಕಟ್ಟಾಗಿ ಸುಲಭಕ್ಕೆ ಕೈಗೆಟಕುವ ಹಾಗೆ ನಿರ್ದಿಷ್ಟ ಸ್ಥಳದಲ್ಲೇ ಇರುವದರಿಂದಲೇ ಮುಖಕ್ಕೊಂದು ಚಂದ., ಹಾಗಿಲ್ಲದೆ ಇವೆಲ್ಲ ಬೆನ್ನಹಿಂದ್ದಿದ್ದರೆ...! ಅಬ್ಬಾ! ಆ ಕಲ್ಪನೆಯೇ ಘೋರ! ಸೀತ ಮೂಗು ಒರೆಸಿಕೊಳ್ಳಲು, ಮುಖ ಕೈಯಾಡಿಸಲು ಕಣ್ಣಿಗೆ ಕಾಡಿಗೆ ತೀಡಲು ಎಲ್ಲಾ... ಎಲ್ಲಾ ಏನು ಕಷ್ಟ!

ನಮ್ಮ ಭ್ರಾಮಕ ಕವಿಗಳ ಅತಿರೇಕದ ವರ್ಣನೆಗಷ್ಟೇ ಈ ಮುಖ ಮೀಸಲಾಗಿಲ್ಲ. ವೈಜ್ಞಾನಿಕ ದೃಷ್ಟಿಯೊಳಗೂ ಮುಖಕ್ಕೆ ಸಾಕಷ್ಟು ಮಹತ್ವವಿದೆ. ಅಂತೆಯೇ ಮನುಷ್ಯನ ಮುಖವನ್ನು ರುಂಡ-ಮುಂಡ-ಕೈಕಾಲುಗಳು ಅಂತ ಭಾಗ ಮಾಡಿ ವಿವರವಾಗಿ ಸರಳವಾಗಿ ಅಭ್ಯಸಿಸಬಹುದು. ಇದು ಶರೀರವಿಜ್ಞಾನದೊಳಗೆ ಎಲ್ಲರೂ ಕಲಿಯುವ ಮೊದಲ ಪಾಠ.

ಇಂಥ ಮೌಲ್ಯಯುತ ಮುಖವನ್ನು, ನಾವು ಮನಬಂದಂತೆಲ್ಲಾ ಯಾವ ಯಾವುದಕ್ಕೋ ಹೀನಾಯವಾಗಿ ಬಳಸ್ಕೊಬಹುದೆ? ನಮ್ಮ ಬಗ್ಗೆ ನಮಗೇ ಅನುಕಂಪ ಮೂಡಬೇಕು. ಆದರೂ ಅದು ಮೂಡುವದಿಲ್ಲ... ಯಾಕೆ? ನಾವು ನಮ್ಮ ಮುಖವನ್ನು ಮರೆತು ಇನ್ನೊಬ್ಬರ ಮುಖವನ್ನಷ್ಟೇ ಸೂಕ್ಷ್ಮವಾಗಿ ಗಮನಿಸೋದು. ಕೊಂಕು-ಕೊರತೆ ಹುಡುಕೋದು. ಈ ಮುಖಕ್ಕೆ ಸಂಬಂಧಿಸಿದ ಹಾಗೆ ಒಂದು ತೀರ ಅಸಹ್ಯ ಹೋಲಿಕೆ ನೆನಪಾಗುತ್ತದೆ.

'ಏನಂತ ನೋಡಿ ಮೆಚ್ಚಿಮಳ್ಳಾಗಿ ಮಾಡ್ಕೊಂಡೈತೋ ನನ್ನ ಮಗಾ... ಅದರ ಮೋತಿ ನೆಪ್ಪ ಆದ್ರ ಸಂಡಾಸ ಸತೆ ಬರಂಗಿಲ್ಲಾ' ಇಂಥ ಅಪ್ರತಿಮ ಅತಿಶಯೋಕ್ತಿಯ ಅತ್ತೆಯೊಬ್ಬಳು ಇಲ್ಲೇ ಕಣ್ಣೆದುರಲ್ಲೇ ಇದ್ದಾಳೇ! ಅಂದರೆ.. ಆ ಅನಿವಾರ್ಯ ಕರ್ಮದ ಸ್ಫೂರ್ತಿಗೂ ಒಂದು ಚಂದದ ಮುಖವೇ ಬೇಕು!? ಅದೆಷ್ಟು ಹೀನಾಯವಾಗಿ ಒಂದು ಹೆಣ್ಣು ಮುಖ, ಇನ್ನೊಂದು ಹೆಣ್ಣು ಮುಖವನ್ನು ಹೀಗಳೆಯ ಬಹುದು ಎನ್ನುವುದಕ್ಕೆ ಇದೊಂದು ಸಣ್ಣ ಉದಾಹರಣೆ ಮಾತ್ರ.

'ಮೋತೆಟ್ಟ ಬೆಳಾಗ ಬೆಳ್ಳಕ್ಕಿಯಂಗ ಇದ್ರ ಆತೇನ್ರಿ... ಬಲೇ ದರಿದ್ರ ಮಾರ್ದೇಶ್ರೀsss ಅದೂ!

ಇಂತಹ ಅದ್ಭುತ ಪ್ರಶಸ್ತಿಗಿಟ್ಟಿಸಿಕೊಂಡ ಮುಖವೇ, ಹೊಸಿಲುಮೆಟ್ಟಿ ಮನೆಯೊಳ ಗಡಿಯಿಟ್ಟ ನಂತರದ ಯಾವುದೇ ಅನಾಹುತ, ಸಾವು-ನೋವುಗಳಿಗೆ ಹೊಣೆ. ಮುಖಲಕ್ಷಣದ ಜೊತೆಗೇ ಕಾಲ್ಗುಣವೂ ಶಾಮೀಲು! ಅದೇ, ಹುಡುಗನ ಮುಖದೊಳಗೆ ದೊಣ್ಣೆಮೂಗು, ತಿರುಚುಗಣ್ಣು, ಅರಚುಕಂಠ, ಹಣೆಗ್ಹನ್ನೆರಡು ಗಂಟು.. ಇನ್ನೂ ಏನೇನೋ ಅವಲಕ್ಷಣಗಳೇ ತುಂಬಿದ್ದರೂ, ಅಂತಹ ಮಾರ್ದೇಶಿಯಿಂದ ಯಾರಿಗೇನೂ ಆಗದು. ಅದು ಗಂಡುಮುಖ! ಪುರುಷಸಿಂಹ! ಸಿಂಹದ ಕೇಸರಗಳೇ ಮೈ-ಮುಖವೆಲ್ಲ ಮುಚ್ಚಿಕೊಂಡಿದ್ದರೂ ಸೈ. ಆತ ಸರ್ವಾಂಗ ಸುಂದರ! ಶುಭದಾಯಕ ಲಕ್ಷಣದವ!!

ಈ ಮುಖದ ಕಿಮ್ಮತ್ತನ್ನು ಎತ್ತಿಹಿಡಿಯವಂತಹ, ಮತ್ತೆ ಪಾತಾಳಕ್ಕೆ ಎತ್ತಿ ಕುಕ್ಕುವಂತಹ ಸಂದರ್ಭ, ಸನ್ನಿವೇಶ ನಂಬುಗೆಗಳ ಬಗೆಗೆ ಗೊತ್ತಿಲ್ಲದವರೇ ಇಲ್ಲ ಎನ್ನಬಹುದು. ಸಹಜವಾಗೇ, ಅನಿಷ್ಟ, ಅರಿಷ್ಟ ದುರಂತ ಸೂಚಕಗಳೆಲ್ಲಾ ಹೆಣ್ಣಿನ ಮುಖಕ್ಕೇ ಮೀಸಲು. ಮುಖದ ಬೆಲೆ ಹೆಚ್ಚಿಸುವಂತಹ ಮಾಪನಸತ್ವದ ಸಂದರ್ಭವೆಲ್ಲ ಗಂಡಿನ ಮುಖಕ್ಕೆ ಕವಿಪುಂಗವರ, ಇಂದ್ರಮುಖಿ, ಚಂದ್ರಮುಖಿ, ಕಮಲಮುಖಿ ಅನ್ನುವಂತಹ ಬಣ್ಣನೆ ಪದಗಳಿಗೆ ಮುಸುಗಿಕ್ಕಿ ಮಲಗಿಸಿ ಶೋಕಗೀತೆ ಹಾಡುವ ಸಂಪ್ರದಾಯದ ಹಕ್ಕಿಗೆ ಹೆಣ್ಣಿನ ಮುಖ ಕಾಯ್ದಿರಿಸಿಯಾಗಿದೆ, ಎಂದೂ.

ಚಿಕ್ಕ ವಯಸ್ಸಿನಲ್ಲಿ ಗಂಡನ್ನ ಕಳೆದುಕೊಂಡ ದಿಕ್ಕೆಟ್ಟ ಹೆಣ್ಣಿಗೆ ಸಮಾಧಾನದ ಸುರಿಮಳೆ ಎಂತದು? ಮುಂದೆ ಅಷ್ಟಿಷ್ಟು ಉಳಿದ ಬದುಕನ್ನೂ ಸುಟ್ಟು ಬೂದಿ ಮಾಡುವಂತಹ ಬೆಂಕೀಮಳೆ!

'ಅವ್ವsss ಉಳದು... ನಿಂಗ ಬರಬಾರ್ದಿತ್ತೇನsss ಅಳಗಲಾ... ಜಟ್ಟೀಯಂತಾ ಗಂಡನ್ನ ನುಂಗಿ ನೀರಕುಡದ ಕುಂತೆಲ್ಲಾ..... ಇನ್ನೇನ

ಸುರ್‍ಯೋಳಾಕ್ಯದೀ ಭಾಗ್ಯಾ! ನಿಂದೇನ್ ಐತಿನ್ನ ಇದ್ದೂ ಸತ್ತಂಗ.. ಇದ್ದದ್ದೆಲ್ಲಾ ಅವನ ಹಿಂದss ಹೋತು..'

ಏನಾದರೂ ಇತ್ತೇ ಹಾಗಾದರೆ... ಅವನ ಹಿಂದೆ ಹೋಗುವಂತದು!?

ಸಾಯೂತನಾ ಕೂಸಿನ ಮೋತಿ ನೋಡಿ ಕಾಲ ಕಳೀಬೇಕಾದ ಮೋತಿ...

ಇದ್ದೂ ಸತ್ತಂಗಿರಬೇಕಾದ ಮೋತಿ...

ಈಗಿಂದಲೇ ನೆಲದಾಳಕ್ಕೆ ಹುಗಿದಂಗಿರಬೇಕು. ಸುಟ್ಟು ಕರಕಾದಂಗಿರಬೇಕು ಪ್ರೇತಕಳೆ ಕುಣೀತಿರಬೇಕು.. ಒಟ್ಟಾರೆ ಕಣ್ಣೆತ್ತಿ ಯಾರೂ ನೋಡವಂಗಿರಬೇಕು. ಆ ಮುಖ ಗಂಡ ಸತ್ತ ಹೆಣ್ಣಿನ ಮುಖಾ, ಅದೂ,ಇದೂ ಬಿಚ್ಚಿಟ್ಟು ಬೋಳಬೋಳಾಗಿ ಬಣಗುಡ್ತಿರಬೇಕು ಅಂತೇನಿಲ್ಲ. ಅವೆಲ್ಲಾ ಇದ್ದೂ... ರಸಹೀನ ಹಣ್ಣಿನ ಹಾಗೆ, ಬತ್ತಿದ ಹೂವಿನ ಹಾಗೆ ಅಂತೂ ಸಪ್ಪಗೆ, ಕಪ್ಪಗೆ ಇದ್ದರಾಯ್ತು. ಇದು ಅವಳ ಮುಖಬೆಲೆ

ಅದೇ ಆಕೆಯೇ ತೀರಿಹೋಗಿ, ಆತ ಬದುಕುಳಿದ ಶುಭಸಂದರ್ಭದೊಳಗೆ ಆ...ಆ... ಮುಖಕ್ಕೆ ಕೇಳಿಬರುವ ಉಪದೇಶ ಎಂತಾವು?

'ರಾಣೀಗತೇ ಇಟ್ಗೊಂಡಿದ್ದಾಪಾ.... ಯಾತಕೂ ಕೊರತಿಲ್ದಂಗ.. ಏನ್ ಮಾಡೂದೈತಿ ಆಕೀಗೇ ನಸೀಬಿಲ್ಲಾ. ಮುಂದಿನ ಹಾದೀ ಈ ಆಟ ನೋಡಾಕಬೇಕಲಾ. ಬದುಕಿ ಬಾಳೂದೈತೆಪಾ ನೀನ್ನsss! ನಿಂಗೇನೀಗ ಆಗಬಾರದ ವಯಸ್ಸಾ ಗೇತಿ? ಚಿಳ್ಳಿ-ಮಿಳ್ಳಿ ಮೂರ ಮಕ್ಕಳಾದವು. ಮಕ್ಕಳಿಗೊಂದ ತಾಯಿ ಬೇಕೋ ಬ್ಯಾಡೋ? ನಿನ್ನ ಹೊಟ್ಟೀ ನೆತ್ತೀ ನೋಡಕರss ಒಂದು ಹೆಣ್ಣಜೀವ ಬೇಕss ಬೇಕು. ಹುಡುಗೀ ನಾವ್ ಹುಡುಕಿತರ್‍ತೀವಿ, ಒಲ್ಲೆನಬ್ಯಾಡಾ' ಇದು ಗಂಡಿನ ಮುಖಬೆಲೆ! ಹ್ಯಾಗಂತೀರಿ?

ಅರೆ, ಯಥಾವತ್ ಇದೆ ಘಟನೆ ಆಕೆಯ ಬದುಕಿನಲ್ಲಾದಾಗ ಆ ಮುಖಕ್ಕೆ ಈ ಯಾವ ಹೊಟ್ಟೀ-ನೆತ್ತಿ ಇರ್‍ಲೇ ಇಲ್ಲೇನೋ!

ಮೊನ್ನೆ ನಮ್ಮ ಕುಟುಂಬ ವೈದ್ಯರ ಜೊತೆಗೆ ಕುಳಿತಿದ್ದೆ. ರೋಗಿಗಳನ್ನು ತಪಾಸಿಸುತ್ತಲೇ ಆಗೀಗ ಬಿಡುವಿನಲ್ಲಿ ಮಾತಾಡುತ್ತಿದ್ದರು.

ಓರ್ವ ನಡುವಯಸ್ಸಿನ ವ್ಯಕ್ತಿ ಹೆಂಡತಿ ಯೊಡನೆ ಒಳಗೆ ಬಂದ. ರೋಗದ ವಿವರ ಕೇಳಿದರು ವೈದ್ಯರು. ಆಕೆಯಿಂದ ಯಾವುದಕ್ಕೂ ಉತ್ತರವೇ ಇಲ್ಲ.

'ಏನ್ ತ್ರಾಸಂತ ಹ್ಯಾಂಗ ತಿಳೀಬೇಕು ಹಿಂಗ ಸುಮ್ನಕುಂತ್ರ? ವೈದ್ಯರು ಒತ್ತಿ ಕೇಳಿದಾಗ ಈ ಮನುಷ್ಯ ಬಾಯ್ತೆರೆದ, ರೋಗದ ಲಕ್ಷಣ ಒಂದು ಬಿಟ್ಟು ಬೇರೆಲ್ಲಾ ತಕರಾರು ಸರಪಳಿ ಹೆಣೆದಂತೆ ಒದರಿದ.

'ಹಿಂಗss ನೋಡ್ರಿ ಬಾಯಾರ... ಒಬ್ಬ ಗಪ್ ಕುಂಡೂದು. ಹಾಂ ಇಲ್ಲಾ ಹೂಂ ಇಲ್ಲಾ. ಪಟಾಪಟಾ ನಾಕರೊಟ್ಟಿ ಬಡಿಯೋದೈತಿ, ಮುಸಕಹಾಕಿ ಮಲಗೂದೈತಿ, ಉಣ್ಣೋಳಂದ್ರೂ ಇಲ್ಲಾ... ತಿನ್ನೋಳಂದ್ರೂ ಇಲ್ಲಾ. ಗಂಡನ ಖಬರೂ ಇಲ್ಲಾ, ಮಕ್ಕಳ ಖಬರೂ ಇಲ್ಲಾ. ಒಟ್ಟ... ಸತ್ತವ್ರಗತೆ ಬೀಳೂದೊಂದss ಸೊನ್ನಿ! ಅಮಾಸಿ-ಹುಣಿಮಿ ಬಂದ್ರಾತು. ಇದss ಪರೀ ನೋಡ್ರಿ. ನಾವರ ಎಟ್ಟಂತ ಸಂಭಾಳ್ಸೂಣು? ದೇವ್ರಾ-ದಿಂಡ್ರಾ, ಮಂತ್ರಾ-ತಂತ್ರಾ, ಚೀಟಿ-ಚಿಪ್ಪಾಟಿ ತ ಮsssಸ್ತ ರೊಕ್ಕಾಹಾಕ್ಷಿ ಈsss ಕೇss ಕಿ ಹಾಸ್ಗೀಬಿಟ್ಟ ಏಳುವಾಳೂ ಏss ನಂತ ಹೇಳೂss ವಾಳು!

ಅವಳ ನಾಡಿಹಿಡಿದ ವೈದ್ಯರು ಮುಟ್ಟಿನ ಬಗ್ಗೆ ವಿಚಾರಿಸಿದರು.

'ಹದನ್‌ದಿನಗಟ್ಲೆ ಹೋಕ್ಕತ್ರಿ' ಕೇವಲ ಒಂದೇ ವಾಕ್ಯ ಆಕೆ ಉಸುರಿದ್ದು. ವಿಪರೀತ ಸುಸ್ತು ನಿತ್ರಾಣ ಒಡದು ಕಾಣ್ತೇತ್ತು ಮುಖದ ಮೇಲೆ.

'ಬರೇ ಮಕ್ಕೋತಾಳಾ, ಮಕ್ಕೋತಾಳ, ಅಂತೀರೆಲಾ.... ಯಾಕ ಮಕ್ಕೋತಾಳಾಂತ ಒಮ್ಮೆರss ವಿಚಾರಾ ಮಾಡೀರ್‍ಯಾ? ಗಂಡನನ್ನು ಕೇಳಿದಾಗ, ಆತ ಮೆತ್ತಗಾಗೋ ಬದಲು ಇನ್ನೂ ಒಂದಿಷ್ಟು ಗಡಸು ಆದ.

'ಇಚಾರಾ ಏನ್ ಮಾಡ್ತೀರಿ ಮಣ್ಣೂ? ಬಾಯ್ಬಿಟ್ಟ ಹೇಳ್ಬೇಕ್ರೆಲ್ಲಾ... ಹಿಂಗ. ಹೀssssಂಗಂತ?

'ನಿಮಗ ಇದಷ್ಟ ಗೊತ್ತಾಗೋದು. ಗಂಡ ಮಕ್ಕಳ ಖಬರಿಲ್ಲಕೀಗೆ ಅಂತ. ಒಂದss ಒಂದ್ಸರೇ ಆರ ಹೇಣ್ತೇಮಕಾ ನೋಡೀರೇನ್ ನೆಟ್ಗ? ಆಕಿ ಮೈಯಾಗ ಹನೀ ರಕ್ತ ಇಲ್ಲಾ. ತುಟೀ-ಉಗರೂ-ಕಣ್ಣು ಬೆಳ್ಗ ಬಿಳಿಚಿ ಹೋಗ್ಯಾವು.ಹೇಣ್ತಿ ಮೋತಿನ್ನ ನೋಡಂಗಿಲ್ಲಂದ್ರ.. ಹ್ಯಾಂಗ ಬಾಳೇ ಮಾಡ್ತೀರಿ? ಸಹಜವಾಗೇ ಕೇಳಿದರವರು.

'ಒಳೇ ಹೇಳ್ತೀರಿ ಬಿಡ್ರಿಬಾಯಾರ.. ಮಕ್ಕೂ-ಮರೀ ಆದ ಬಳಕೂ ಹೇಣ್ತಿ ಮೋತಿ ಏನ್ ನೋಡೂದೈತಿ? ನಾಚಿಕೊಂಡ ಆ ರಸಿಕೋತ್ತಮ.

'ಮೋತೀ ಏನ್ ನೋಡಬ್ಯಾಡ್ರಿ. ಸಾsss ಲಕ ಹಿಂಡಮಕ್ಳಾ ಮಾತ್ರ ಹಡೀರಿ. ಹಿಂಗ ಬಿಟ್ರ, ತಿಂಗಳೊಪ್ಪತ್ತ್ಯಾಗ ಆಕಿ ಸತ್ತss ಹೋಕ್ಕಾಳಾ, ಆವಾಗ ಇನ್ನೊಂದ ಮಾಡ್ಕೊಂಡ ಆಕಿ ಮೋತಿ ನೋಡ್ಕೋತ ಕೂಡೂದಟ್ಟ ಉಳಿಯೂದಿನ್ನ. ವೈದ್ಯರಿಗೆ ತುಂಬ ಕೋಪ ಬಂದಿತ್ತು.

ಈಗಾತ ತಣ್ಣಗಾಗಿದ್ದ. ಹೆಂಡತಿಯ ಕಡೆ ತಿರುಗಿದ. ಆಕೆ ಗೋಡೆ ಕಡೆ ತಿರುಗಿದ್ದಳು.

ಅವ್ರೇನಿದ್ರೂ, ಪಾsಪ ಮುಗ್ಧಹಳ್ಳೀಜನ. ಹೀಗಂತ ಈ ಪ್ರಸಂಗ ಹಂಚಿಕೊಂಡರೆ, ನನ್ನ ಸುಶಿಕ್ಷಿತ ನಾಗರಿಕ ಗೆಳತಿಯ ಕೊಂಕುರಾಗವೇ ಬೇರೆ.

'ಭಾರೀ ಸಂಶೋಧನೇನss ಮಾಡೀಬಿಡೂ ಏನಂದ್ರೂ, ಕಲ್ತವ್ರೋ ಕಲೀದವ್ರೋ, ಯಾರ ನೋಡ್ತಾರ ಹೇಣ್ತಮೋತಿ? ಅವ್ರು ಆ ಮೋತೀ ನೋಡೂದು ಒಂದss ಸರೇ. ಮದಿವೀಕಿಂತ ಮದ್ಲ ಹುಡಿಗೀ ನೋಡಾಕ ಬಂದಾಗಷ್ಟಕಿ. 'ಮದಿವಿ' ಅಂತ ಒಂದು ಮುಗದು..., ಹುಡಿಗಿ,



ಈ ರೀತಿ ಬಹಿರಂಗವಾಗಿ ಹಿಯ್ಯುವವನ್ನು ನೋಡಿದ್ರೆ ಗೊತ್ತಾಗಲ್ವೆ... ಸರ್ಕಾರದ 'ಪಾರದರ್ಶಕತೆ'!?

ಕನಸು

ನಾನೊಂದು
ಹುಡುಗಿಯ
ಮೆಚ್ಚಿದೆ.:.
ಅವಳಿಗೂ-ನನಗೂ
ಏಳು ಜನುಮದ
ಋಣಾನುಬಂಧ....
ಆದರೆ...?
ನನ್ನ ಅವಳ ಭೇಟಿ
ದಿನವಿಡೀ ಕನಸಿನಲಿ ಮಾತ್ರ!

-ರಾಮು ಡಿ. ಚಲುವಾದಿ

'ಹೆಂಡ್ತಿ' ಅಂತ ಆಗಿ ಮನೀಗ್ ಬಂದ್ಮೋ ಮುಗೀತು. ಹೆಂಡ್ತಿ ಒಬ್ಬಾಕಿನ್ನ ಬಿಟ್ಟು ಬ್ಯಾರೇ ಎಲ್ಲಾ ನೋಡಾಕ ಸುರು.

ಒಂದss ಮನ್ಯಾಗ ಇದ್ದು, ಮೋತಿ ಮುಂದss ಇದ್ದೂ. ಆಗೀಗ ತಪ್ಪರ ಹೆಂಡ್ತೀ ಮೋತಿ ನೋಡೂ ಗಂಡಸರು ಎಷ್ಟಮಂದಿ ಸಿಕ್ಕಾರಂತೀ? ಹ್ಯಾಂಗೂ ಬರಿಯಾಕಿ ನೀ, ಅಂಕೀ ಸಂಖ್ಯಾ ಸಂಗ್ರಹಾ ಮಾಡ್ಯರೇ ಬರೀ'. ಬರೀ ಸಲಹೆ ಕೊಡಲಿಲ್ಲ. ದಿನದಿನದ ಬಣ್ಣದ ಚಿತ್ರವನ್ನೇ ಬಿಚ್ಚಿಟ್ಟಳು ನನ್ನೆದುರು.

'ಮುಂಜಾನೆ ಏಳುತ್ಲೇ, ಚಹಾಕಪ್ಪು ಇಸ್ಕೋಳಿಕ್ಕೆ ಇಷ್ಟುದ್ದ ಚಾಚಿದ ಒಂದು ಕೈಯಾದ್ರ ಸಾಕು. ಮುಖಾ ಯಾತಕ ಬೇಕು? ಮುಂದ? ಕಸಾ-ಮುಸರಿ, ಜಳಾಕಾ-ಪೂಜಾ, ಅಡಿಗೀ ಗಡಿಗೀ ಅಂತ ಮುಗಿಯೂತನಾ.. ಅವತ್ತಿನ ನ್ಯೂಜ್‌ಪೇಪರು, ಇಷ್ಟಗಲಾ ಆಗಿ, 'ಗಂಡಾ' ಅನಿಸ್ಕೊಂಡ ಯಜಮಾನ್ರ ಮುಖಾ ಪೂರಾ ಮುಚ್ಚೇ ಇರ್ತದ. ಮುಂಜಾನೆ ಆಫೀಸು, ಸಂಜೀಕ ಟೀವಿ, ಆ ಮೋತೀನ ತಮ್ಮ ಕಡೀಗೇ ಪೂರ್ತಿ ತಿರಗಸಿಕೊಂಡಿರ್‍ತಾವು. ನಿದ್ದಿ ಬಂತೂ ಅಂದ್ರ ಆತು. ರಾತ್ರಿ ಒಂದ ಚಾದರ ಮುಸುಕು, ಮುಗೀತು ಒಂದಿನದ ಕತೀ. ಮತ್ತ ಮರದಿನಾ ಇದss ದಿನಚರೀನss ಚಾಚೂ ತಪ್ಪದಂಗ ರಿಪೀಟು. ಇನ್ನ... ಮಡದೀ ಮುಖಾನೋಡೂ ಹೋತ್ತಾಗ್ಲೀ, ಪುರಸೊತ್ತಾಗ್ಲೀ, ಅವಕಾಶಾ, ಸಂದರ್ಭಾಗ್ಲೀ ಯಾವಾಗ ಸಿಕ್ಕೀತ ಹೇಳ್ಲಾ?

ಸುದೀರ್ಘ ಲೆಕ್ಚರ್ ಕೊಟ್ಟಳು ಗೆಳತಿ.

'ಹೋಗಲಿ ಬಿಡು. ವಾರಕ್ಕೊಂದು ರವಿವಾರವಾದರೂ ಇರುತ್ತದಲ್ಲಾ? ಮಾತ್ತಿ ಗೆಳ್ದೀ. ಟಿಫಿನ್ನು, ಅಡಿಗೀ, ಫ್ರೆಂಡ್ಸು, ಗೆಸ್ಟು ಅಂತ.. ಎಲ್ಲಾ ಎಲ್ಲಾ ಸ್ಪೆಶಲ್ಲss! ಅವತ್ತಿನ ನ್ಯೂಜ್‌ಪೇಪರ ಸೈತ ದೊಡ್ಡು. ಆಕಿ ಮುಖದೊಳಗ ಸಂಡೇರೂಪದ ಚಂಡಿ ಅವತಾರ ಆಗಿಬಿಟ್ರ. ಅದಕ್ಕ ಯಾರ ಹೊಣಿ ಹೇಳು.

ಮಾತಿಗೆ ಪೂರ್ಣವಿರಾಮಹಾಕಿ ದೀರ್ಘ ಉಸಿರುಬಿಟ್ಟಳು. ನಂಗೆ ಮತ್ತೆ ನೆನಪಾಯ್ತು.

'ಮಾಡ್ಕೊಂಡ ಹೆಣ್ತೀ ಮೋತೀನss ನೋಡೋದಿಲ್ಲss ಹ್ಯಾಂಗ ನೀವು? ವೈದ್ಯರ ಎಚ್ಚರಿಕೆ ಎಂಥ ನಿಚ್ಚಳ ಸತ್ಯ ಅಂತ.

ಗಂಡೋ ಹೆಣ್ಣೋ ಈ ಮನುಷ್ಯರ ಮುಖ ಆ ಕಡೆಗಿರಲಿ, ಯಾರ ಮುಖವಾದ್ರೂ, ಅಷ್ಟೇ. ಒಟ್ಟಿನಲ್ಲಿ ಮುಖವಾಡದ ಮನುಷ್ಯನ ಬಣ್ಣವೇ ಇಷ್ಟು ಕೃತಕ, ಎಂದು ಸ್ವತಃ ಬೇಸರವಾದ್ರೂ ಈ ನಿರುಪದ್ರವಿ ಪ್ರಾಣಿ-ಪಕ್ಷಿಗಳನ್ನು ಕೂಡ ನಾವು ಬಿಟ್ಟಿಲ್ಲವಲ್ಲ ಅವುಗಳ ಪಾಡಿಗೆ! ಎಂಥ ಅಸಹ್ಯಮುಖ ನಮ್ಮದು! ಈ ಮೂಕ ಪ್ರಾಣಿಗಳು, ನಮಗೇ ಉಪಕರಿಸಿಯೂ, ತಮ್ಮ ಮುಖಕ್ಕೆ ಉಗಿಸಿಕೊಳ್ಳುತ್ತ ನಮ್ಮ ಕೃತಘ್ನತೆಯ ಪರಿಚಯ ಕೂಡ ಇಲ್ಲದೆ ದೀನವಾಗಿ ನಮ್ಮ ಮುಖವನ್ನೇ ದಿಟ್ಟಿಸುತ್ತಿವೆ ಪಾssಪ. ಆದರೂ ಅವು ನಮ್ಮಮುಖಕ್ಕೆ ಮಂಗಳಾರತಿ ಎತ್ತೇ ಇಲ್ಲ ಅಂತ ಹ್ಯಾಗೆ ಹೇಳ್ತೀರಿ? ಅವುಗಳ ಭಾಷೆ ತಿಳಿಯಲಾರದ ನಾವು, ನಮ್ಮ ಮುಖ ಮೇಲೆತ್ತಿಯೇ ತಿರುಗಾಡೋದು. ನಮ್ಮ ನಮ್ಮ ಮನೆಗಳ ಸಣ್ಣಮಿತಿಯೊಳಗೇ ಊಹಿಸೋದಾದರೆ... ಹೀಗಿರಬಹುದು....

'ಸಂದೀ-ಗೊಂದೀ ಹೊಕ್ಕು ಮೂಲಿ-ಮುಂಗಾಟೀ ಹುಡುಕಿ, ಎಷ್ಟಕಷ್ಟಾಪಟ್ಟು, ಇಲೀ-ಹೆಗ್ಣಾ, ಹಾವು-ಹಲ್ಲಿ, ಹುಳಾ-ಹುಪ್ಪಡಿ ಅಂತ ಬಡಬಡದ ಹಿಡದು, ಬಾಯಿಕೆಟ್ಟು ಒಂದ್ಸನೀ ಹಾಲ ಬೇಡಿದ್ರ... ಹಾರಾಕ ಹಿಂದಮುಂದ ನೋಡ್ತಾವು.. ಒಟಾ ಒಟಾ ಅಂತಾವು... ಒಳೀ ಉಪಕಾರಗೇಡಿ ಮನಾಶ್ಯಾರ ಮೋತೀ ನಂಬಿಕೆಟ್ಟೆ' ಎಂದು ಅನ್ನುತ್ತಿರಲಿಕ್ಕಿಲ್ಲವೇ ನಮ್ಮ 'ಸುಂದ್ರಿ' ತನ್ನ ಮಿಯಾಂವ್.... ಮಿಯಾಂವ್.. ರಾಗದೆಳೆತದಲ್ಲಿ?!

'ಬೀಸ್ಯಾಡೂಗದ ತುಕಡೀರೊಟ್ಟೀ ತಿಂದು, ಹಗಲರಾತ್ರೀ ಅನ್ನದೇ ಬ್ಯಾಸ್ರಿಲ್ದss ಮನೀ ಬಾಗ್ಲಾ ಕಾಯ್ತೀನಿ, ಕಾಲ ಸಪ್ಲ ಅಗ್ಲೆಂತ ಒಂದಿssಟ ಅತ್ತಾಗಿತ್ತಾಗ ತಿರಗ್ಯಾಡಿ ಬಂದ್ರ, ನಂಗಿಂತ ಕೆಟ್ಟದನ್ಯಾಗ ಬೊಗಳ್ತಾವಲ್ಲಾ... ಎಂತಾ ಕುಲಗೇಡಿ ಮೋತಿ ಇವೂ?! ಎಂಬಂತಹ ವಾಕ್ಯಗಳನ್ನೇ ಉಗುಳುತ್ತಿರಬೇಕು... ನಮ್ಮ 'ಮೋತಿ' ತನ್ನ ಬೌ ಬೌ ಬೊಗಳಿಕೆಯೊಳಗೆ!

'ತಿನ್ನುತನಾ ತಿಂದು, ಉಣ್ಣುತನಾ ಉಂಡು, ಹೈನದಾಗss ಕೈತೊಳದೂ ನನ್ನ ಕೂಸ್ಗೆ ಹನೀಹಾಲ ಇಲ್ದಂಗ ಮಾಡಿ, ಜಗ್ಗಿ ಹಿಂಡ್ಕೊಂಡ್ರೂ, ಹ್ಯಾಂಗೋ ಮಾಡಿ ಒಂದ ಸ್ವಲ್ಪ ಮುಚ್ಚಿಟ್ಕೊಂಡು ತೊರೂಬಿಟ್ಟ ಕುಡಿಸಿ, ದೊಡ್ಡಾವನ ಮಾಡಿದ ಜಟ್ಟಿಯಂತಾ ನನ್ನ ಗಂಡಸಮಗನ್ನss ನನ್ನಿಂದ ಅಗಲಿಸಿ, ಕಟಗರ್‍ಗೆ ಮಾರಿ, ಅದರ ಜೀವಾನೂ ನುಂಗಿ ರೊಕ್ಕಾನೂ ನುಂಗಿ ನೀರಕುಡದ ಈ ನೀಚ ಮನಶ್ಯಾರ ಮೋತೀ ನೋಡೂಕಿಂತ ಕಾಡ್ಯಾಗರನ ಹುಟ್ಟಿದ್ರ... ನನ್ನ ಮಕ್ಕೂ-ಮರೀ, ಬಂಧೂ ಬಳಗದಗುಡೇ ಚಂದಗೆ ಇರ್‍ತಿದ್ದೆ. ಯಾ ಬಾಯ್ಲೆ ದುಕ್ಕಾ ತೋಡ್ಕೊಂಡ್ರ ತಿಳದೀತು... ಈ ಹೊಲಸ ಮೋತಿಗೋಳ್ಗೆ?!

ನಮ್ಮ ಚೌಡಿ ಎಮ್ಮೆ, 'ಅಂಬಾ' ಎಂದರಚುವ ಆರ್ತ ಸ್ವರದೊಳಗೆ, ನಮ್ಮಿಡೀ ಮನುಷ್ಯ ಕುಲವನ್ನೇ ಘೋರವಾಗಿ ಶಪಿಸುತ್ತಿರಲಿಕ್ಕಿಲ್ಲ ಅಂತ ಹೇಗೆ ಹೇಳ್ತೀರಿ? ಅವುಗಳ ಭಾಷಾರ್ಥ ಬಹುಶಃ ಹೀಗೇ ಇದ್ದೀತು. ಈ ಸಾಕು ಪ್ರಾಣಿಗಳು ನಮ್ಮನ್ನು ಬಹಿಷ್ಕರಿಸಿರಲೇಬೇಕು. ನಾವು ಏನೂ ಗೊತ್ತಿಲ್ಲದ ಹಾಗೆ ಇರುತ್ತೀವಷ್ಟೇ?

ಕಾಡನ್ನು, ಕಾಡಿನ ಪ್ರಾಣಿಗಳನ್ನು ಇಡಿಯಾಗಿ ನುಂಗುವ ನಮ್ಮ ಮುಖಕ್ಕೆ ನಾಡಿನ ಪ್ರಾಣಿಗಳು ಎಲ್ಲಿ ಈಡು? ಇಡೀ ಇಷ್ಟಗಲ ಮುಖಕ್ಕೆ ಒಂದೇ ಒಂದು ಬಾಯಿ ಕೊಟ್ಟನಲ್ಲಾ ಆ ಭಗವಂತ! ಇಲ್ಲದಿದ್ದರೆ ಇನ್ನೂ ಏನೇನಾಗುತ್ತಿತ್ತೋ.

ನಮ್ಮ ಮಾತಿನ ರೂಢಿಯೊಳಗೆ, ಮುಖ, ಮೋತಿ, ಮೋರೆ, ಮಾರಿ ಅಂತೆಲ್ಲಾ ಒಂದೇ ಅರ್ಥಕೊಡುವ ಶಬ್ದಗಳುಂಟು. ಅದ್ರಲ್ಲಿ ಈ 'ಮೋತಿ' ಎಂಬ ಶಬ್ದಕ್ಕಂತೂ ಹಿಂದಿಯಲ್ಲಿ ಬೆಲೆಯುಳ್ಳ ಅರ್ಥ.

'ಮುತ್ತು' ಅಮೂಲ್ಯ ಮುತ್ತು!. ಎಂಥ ಅಪರೂಪದ ಅರ್ಥ! ಹೌದು. ಮನುಷ್ಯರಿಗೆ ಮುಖ, ಮುತ್ತಿಗಿಂತಲೂ ಅಮೂಲ್ಯ, ಅರ್ಥಪೂರ್ಣ.

'ಹೊತ್ತು ಕಳೆದರೆ ಹೋಯ್ತು... ಮುತ್ತು ಒಡೆದರೆ ಹೋಯ್ತು' ಅನ್ನೊ ಹಾಗೆ, ಅಸಭ್ಯ, ಅಸಹನೀಯ, ಅವಹೇಳನಕಾರೀ ಮಾತುಗಳಿಂದ, ಮುತ್ತಿನಂಥ ಮುಖದ ಸೌಂದರ್ಯವೂ ಹೋಯ್ತು. ಗೌರವವೂ ಹೋಯ್ತ. ಹೊಳಪೂ ಹೋಯ್ತು. ಮುತ್ತಿನ ಬೆಲೆಯೂ ಹೋಯ್ತು.

ಗಾಂಭೀರ್ಯದ ಜೊತೆಗೇ ಸತ್ವಪೂರ್ಣ, ಅರ್ಥಪೂರ್ಣ ಮಾತಿನಿಂದ ಹೊಳೆಯೋ ಈ ಮುತ್ತಿನ (ಮುಖದ) ತೇಜಸ್ಸು ಅಮೋಘ! ಅಪ್ರತಿಮ! ಇದನ್ನು ಅರಿತುಕೊಂಡಷ್ಟೂ ನಮ್ಮ ಮುಖಕ್ಕೆ ಕ್ಷೇಮ... ಏನಂತೀರಿ?

ವೈಕಂ ಕತೆಗಳು

(ಕತೆಗಳು)

ಲೇ : **ಎಸ್. ಗಂಗಾಧರಯ್ಯ**
ಪ್ರ : ನಮ್ಮ ಪ್ರಕಾಶನ, ತಿಪಟೂರು-೫೭೨ ೨೦೨.
ಮುದ್ರಣ : ೧೯೯೬ ಪುಟ : ೧೭೩ ಬೆಲೆ : ರೂ. ೭೦/-

ವೈಕಂ ಮಹಮ್ಮದ್ ಬಷೀರ್ ಮಲೆಯಾಳಂ ಭಾಷೆಯ ಮಹತ್ವದ ಕಥೆಗಾರ. ಮನುಷ್ಯನ ದೌರ್ಬಲ್ಯದ ಹಲವು ಮುಖಗಳು, ಆಂತರಿಕ ತೊಳಲಾಟ, ಹಿಂಸೆ, ಜೀವನ ಸಂತೋಷ ಬಷೀರ್ ಅವರ ಕಥೆಗಳ ಮುಖ್ಯ ಕೇಂದ್ರ. ವ್ಯಕ್ತಿಯ ಅಂತರಂಗದಲ್ಲಿ ಪ್ರಪಂಚವನ್ನು, ಅದರ ವೈವಿಧ್ಯತೆಗಳನ್ನು ಸೂಕ್ಷ್ಮವಾಗಿ ಬಿಡಿಸಿ ಅದರ ತಾತ್ವಿಕತೆಯನ್ನು ಹೊಳೆಸುವ ಕೌಶಲ್ಯ ಅವರ ಕಥೆಗಳ ವೈಶಿಷ್ಟ್ಯವಾಗಿದೆ. ಅಂತರಂಗದ ಭಾವ ವಲಯವನ್ನು, ಅದರ ನಿಗೂಢಗಳನ್ನು ಮಾರ್ಮಿಕವಾಗಿ ಮುಕ್ತವಾಗಿ, ಪಾರದರ್ಶಕವಾಗಿ ಕಥನಗೊಳಿಸುವುದು ಇವರ ಕಥೆಗಳ ರೀತಿ. ಸೂಕ್ಷ್ಮವಾದ ಹಾಸ್ಯಪ್ರಜ್ಞೆ, ಮೌನ, ನಾಟಕೀಯತೆಗಳು ಕಥೆಯ ಗಾಂಭೀರ್ಯಕ್ಕೆ ಒದಗಿಬರುವುದನ್ನು ಈ ಸಂಕಲನದ ಕಥೆಗಳಲ್ಲಿ ಕಾಣಬಹುದು.

- ಕಿ.ರಂ. ನಾಗರಾಜ್

ಜಮಖಂಡಿ ಜಿಲ್ಲೆ: ಏಕೆ? ಹೇಗೆ!

ಲೇಖಕರು : **ಡಾ. ತಾತಾಸಾಹೇಬ ಬಾಂಗಿ**
ಪ್ರ : ಕಾಯಕ ಪ್ರಕಾಶನ, ಜಮಖಂಡಿ-೫೮೭೩೦೧
ಪುಟ : ೧೫೩ ಬೆಲೆ : ರೂ.೪೫/-

ರಾಜಕಾರಣಿಗಳಿಗೆ ಆಸಕ್ತಿ ಇಲ್ಲವೆಂದರೆ ಪ್ರಜ್ಞಾವಂತ ನಾಗರೀಕರು ನಿದ್ದೆ ಹೋಗುವುದು ಅಪರಾಧ. ಇನ್ನಾದರೂ ಈ ಭಾಗದ ವಿದ್ಯಾವಂತ, ಪ್ರಜ್ಞಾವಂತ ಜನರು ಪಕ್ಷಬೇಧ ಮರೆತು ಜಮಖಂಡಿ ಜಿಲ್ಲೆಯಾಗುವಂತೆ ಆಲೋಚಿಸಬೇಕು. ಅಷ್ಟೇ ಅಲ್ಲ ಜನಪರ ಹೋರಾಟಗಳನ್ನು ಹುಟ್ಟುಹಾಕಿ ಆಳುವ ಪಕ್ಷಗಳಿಗೆ ಎಚ್ಚರಿಕೆಯ ಗಂಟೆಯೂ ಆಗಬೇಕಾದ ಅನಿವಾರ್ಯತೆಯನ್ನು ಮನಗಾಣಬೇಕಾಗಿದೆ. ಜಮಖಂಡಿ ಜಿಲ್ಲೆಯಾಗಬೇಕೆಂಬ ಬೇಡಿಕೆಗೆ ಚಾರಿತ್ರ್ಯಕ, ಐತಿಹಾಸಿಕ ದಾಖಲೆಗಳನ್ನು ಒದಗಿಸಿರುವ ಡಾ. ತಾತಾಸಾಹೇಬ ಬಾಂಗಿಯವರನ್ನು ಈ ಭಾಗದ ಜನರು ಕೃತಜ್ಞತೆಯಿಂದ ನೆನೆಯುವುದಷ್ಟೆ ಅಲ್ಲ, ಅವರು ರೂಪಿಸುವ ಜನಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ಕಳಕಳಿಯ ವಿನಂತಿ ನನ್ನದು.

- ಡಾ. ಮಲ್ಲಿಕಾ ಘಂಟಿ

ಮೆಹಂದಿ

(ಕವನ)

ಲೇ : **ರಜಿಯಾ ಬಳಬಟ್ಟಿ**
ಪ್ರ : ನ್ಯಾಶನಲ್ ಪ್ರಕಾಶನ,
ಬಾಗಲಕೋಟೆ-೫೮೭೧೦೧ ಮುದ್ರಣ : ೧೯೯೮
ಪುಟ : ೫೮ ಬೆಲೆ : ರೂ.೩೫/-

ಪ್ರೀತಿ, ವ್ಯಥೆ, ಬದುಕು, ಸಮಾಜದ ಸಮಾನ ದುಃಖಗಳು ಇತ್ಯಾದಿಯ ಸುತ್ತ ತನ್ನ ನೋವುಗಳನ್ನು ಕವಿತೆಯಲ್ಲಿ ಬಾಚಿಕೊಳ್ಳುವ ರಜಿಯಾಳ ಈ ಸಂಕಲನದ 'ನಮ್ಮದೇ ದುರಂತ, ನಿರೀಕ್ಷೆ, ಕಲ್ಲು ಕುಟ್ಟುವಳು, ಪ್ರಸ್ತ, ಆರಂಭ, ತಲ್ಲಾಕು, ವಸಂತ, ಅಸ್ತಿತ್ವಹೀನೆ, ಹೆಣ್ಣು, ಕಾಲಚಕ್ರ, ನಾವು ಸದಾ ಬಸುರಿಯರು, ವಿರಹ, ಪ್ರಗತಿವಾದಿಗಳು ಮುಂತಾದ ಕವನಗಳು ಅವಳ ಕಾವ್ಯಶಕ್ತಿಯನ್ನು ದ್ಯೋತಿಸುವ ಬೆಳಕಿನ ಕಿಡಿಗಳಂತಿವೆ.

ಇನ್ನಷ್ಟು ಸಂಯಮ, ಪ್ರಯತ್ನಗಳನ್ನು



ಮುನ್ನುಡಿಯಿಂದ

ಆವಾಹಿಸಿಕೊಂಡು ತನ್ನ ಮುಂದಿನ ಕವನಗಳನ್ನು ರಜಿಯಾ ಇನ್ನೂ ಸುಂದರಗೊಳಿಸಿಕೊಳ್ಳಲಿ.

- ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ

ಮಾದರ ಚನ್ನಯ್ಯನ ನಾಡಿನಲ್ಲಿ

(ಲೇಖನ ಸಂಗ್ರಹ)


ಲೇ : **ಎಸ್.ಎಸ್. ಹಿರೇಮಠ**
ಪ್ರ : ಸಮತಾ ಪ್ರಕಾಶನ,
ಹರಪನಹಳ್ಳಿ-೫೮೩೧೩೧ ಮುದ್ರಣ : ೧೯೯೭
ಪುಟ : ೧೦೦ ಬೆಲೆ : ರೂ. ೪೦/-


ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಇಲ್ಲಿಯ ಲೇಖನಗಳಿಗೆ ಮೇಲೆ ಕೇಳಲಾಗಿರುವ ಸಮೀಚೀನ ಪ್ರಶ್ನೆಗಳ ಹಿನ್ನೆಲೆಯಿದೆ. ಉತ್ತರಿಸುವದಕ್ಕೆ ಅಲ್ಪ ಮಟ್ಟಿನ ಪ್ರಯತ್ನವಿದೆ. ಎಡವಿರುವಲ್ಲಿ ಕೈ ಹಿಡಿದೆತ್ತಿಕೊಳ್ಳುವ ಸಹೃದಯರಿಗೆ ಕೃತಜ್ಞನಾಗಿರುತ್ತೇನೆ. ಛೀ, ಥೂ ಅನ್ನುವವರಿಗೆ ಸಹಸ್ರ ನಮನಗಳು. ಎಲ್ಲಕ್ಕೂ ಕಾಲದ ಪರೀಕ್ಷೆ ಇದೆ; ನಿರಂತರವಾಗಿ ಚಲಿಸುತ್ತಿರುವ ಜನತೆಯ ಜೀವನವಿದೆ.

- ಲೇಖಕ









ಅರಿವು

(ಸಂಸ್ಮರಣ ಸಂಪುಟ)

ಸಂ: ಎಚ್.ಆರ್.ರಘುನಾಥ ಭಟ್

ಪ್ರ: ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩. ಮುದ್ರಣ : ೧೯೯೬ ಪುಟ: ೧೪೦ ಬೆಲೆ: ರೂ. ೪೦/-

ಬಗೆದಷ್ಟೂ ಮುಗಿಯದ ಇತಿಹಾಸ ಸಾಮಗ್ರಿ ನಮ್ಮೆದುರಿರುವಾಗ, ಸತ್ಯಾನ್ವೇಷಣೆಯೇ ಇತಿಹಾಸಕಾರರ ಪರಮ ಗುರಿಯನ್ನಾಗಿಸಿಕೊಂಡು, ಶಾಸ್ತ್ರೀಯವಾಗಿ ಚರಿತ್ರೆಯ ಅಧ್ಯಯನ, ಸಂಶೋಧನ ಮತ್ತು ಶುದ್ಧ ಚಾರಿತ್ರಿಕ ಸಂಗತಿಗಳ ಸಂವಹನ ಇಂದಿನ ಅಗತ್ಯವಾಗಿದೆ. ಈ ಅಗತ್ಯವನ್ನು ಪೂರೈಸುವಲ್ಲಿ ಈ ಪುಟ್ಟ ಕೃತಿ ಪ್ರಯೋಜನಕಾರಿಯಾಗುತ್ತದೆ. ಇದರ ಪ್ರಕಟಣೆಯ ಕಾರ್ಯದಲ್ಲಿ ಸಹಕರಿಸಿದ ಸಕಲರಿಗೂ ಕೃತಜ್ಞತೆಗಳು.

- ಎಚ್.ಆರ್. ರಘುನಾಥ ಭಟ್

ವೃತ್ತಿ ಜೀವನದ ನೆನಪುಗಳು

ಲೇ: ಎಂ.ಟಿ. ವಿಶ್ವನಾಥಯ್ಯ

ಪ್ರ: ಸರ್ವಮಂಗಳ ಪ್ರಕಾಶನ, ೭೫೬, ಇ ಮತ್ತು ಎಫ್ ಬ್ಲಾಕ್, ಮನುಜಪಥ, ೩ನೇ ಅಡ್ಡ ರಸ್ತೆ, ಕುವೆಂಪು ನಗರ, ಮೈಸೂರು-೫೭೦ ೦೨೩. ಮುದ್ರಣ : ೧೯೯೭ ಪುಟ : ೧೧೧ ಬೆಲೆ : ರೂ. ೨೫/-

ಶ್ರೀಯುತ ವಿಶ್ವನಾಥಯ್ಯನವರು ಬರೆದ ''ವೃತ್ತಿ ಜೀವನದ ನೆನಪುಗಳು'' ಪುಸ್ತಕವು ಅವರ ವೃತ್ತಿ ಜೀವನದ ಸಂಗತಿಗಳನ್ನು ಎಳೆ ಎಳೆಯಾಗಿ ಓದುಗರ ಮುಂದಿಡುತ್ತದೆ. ಶ್ರೀಯುತರು ಮೂರು ದಶಕಗಳಿಗೂ ಹೆಚ್ಚು ಕಾಲ ಲೋಕೋಪಯೋಗಿ ಇಲಾಖೆಯಲ್ಲಿ ಅವಿರತ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತಾರೆ. ಇವರು ತಮ್ಮ ಬರವಣಿಗೆಯಲ್ಲಿ ಲೋಕೋಪಯೋಗಿ ಇಲಾಖೆಯು ಹಂತ ಹಂತವಾಗಿ ಬೆಳೆದ ಬಗ್ಗೆ ಹಾಗೂ ಇಲಾಖೆಯ ಹಲವು ರಂಗಗಳಲ್ಲಿ ಇವರಿಗಾದ ಅನುಭವಗಳನ್ನು ಸವಿಸ್ತಾರವಾಗಿ ವರ್ಣಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲೂ ಕೂಡ ಅಲ್ಲಲ್ಲಿ, ಆಗಾಗ್ಗೆ ಇಂತಹ ಅಪರೂಪದ ಪ್ರಾಮಾಣಿಕ ವ್ಯಕ್ತಿಗಳಿರುತ್ತಾರೆ ಎಂಬುದನ್ನು ತಿಳಿಸಲು ಹರ್ಷಿಸುತ್ತೇನೆ.

- ಡಾ. ಬಿ.ಎಸ್.ಬಸವರಾಜಯ್ಯ

ಲೇಖಕರ/ಪ್ರಕಾಶಕರ ಗಮನಕ್ಕೆ

ಈ ಅಂಕಣದಲ್ಲಿ ಹೊಸ ಪ್ರಕಟಣೆಗಳ ವಿವರ ಪ್ರಕಟಿಸಲಾಗುವುದು. ಇದಕ್ಕಾಗಿ ತಮ್ಮ ಇತ್ತೀಚಿನ ಪ್ರಕಟಣೆಗಳ ಒಂದು ಪ್ರತಿ ಕಳಿಸಿ.

ಕೋಗಿಲೆಗೆ ಕಲಿಸಲಾರೆ

(ಕವನ)

ಲೇ: ಮೀನಾ ಸದಾಶಿವ

ಪ್ರ : ಸಂಕ್ರಮಣ ಪ್ರಕಾಶನ, ೧೮೪/೧, ೩೧ನೇ ಕ್ರಾಸ್, ೨ನೇ ಹಂತ, ಬನಶಂಕರಿ, ಬೆಂಗಳೂರು-೭೦. ಪ್ರಥಮ ಮುದ್ರಣ : ೧೯೯೭ ಪುಟ : ೬೦ ಬೆಲೆ: ರೂ. ೨೫/-

ಅರವತ್ತು ಕವನಗಳ ಈ ಸಂಕಲನದ ಸಾಲುಗಳ ನಡುವೆ ಹರಿಯುತ್ತಿರುವುದು, ನಮ್ಮ ಪರಿಸರದ ಅನಿವಾರ್ಯ ಅಂಗವೇನೋ ಎಂಬಂತಿರುವ 'ವಿನಾಕಾರಣ'ದ 'ಹುಚ್ಚು ನಾಯಿ'ಯಂಥ ಕ್ರೌರ್ಯ (ಕೋಗಿಲೆಯ ಕೂಹೂ ಉಡುಗುತ್ತದೆ/ಹದ್ದುಗಳ ಹಾಹಾಕಾರದಿಂದ) ಹಾಗೂ ಅದರ ನಡುವೆಯೂ ನಳನಳಿಸುತ್ತಿರುವ ಬದುಕು.

- ಚಂದ್ರಶೇಖರ ಪಾಟೀಲ

ಹೆದ್ದಾರಿಗುಂಟ


(ಲಲಿತ ಪ್ರಬಂಧಗಳು)


ಲೇ: ಈರಪ್ಪ ಎಂ. ಕಂಬಳಿ

ಪ್ರ : ಚಾರ್ವಾಕ ಪ್ರಕಾಶನ, ಜೀವನ್ ಬಿಮಾ ನಗರ, ಬೆಂಗಳೂರು-೭೫. ಪ್ರಥಮ ಮುದ್ರಣ : ೧೯೯೭ ಪುಟ : ೧೦೩ ಬೆಲೆ: ರೂ. ೪೫/-


ಈರಪ್ಪ ಎಂ. ಕಂಬಳಿಯವರ 'ಹೆದ್ದಾರಿಗುಂಟ' ಲಲಿತ ಪ್ರಬಂಧಗಳ ಸಂಕಲನ ಸಹೃದಯರ ಮನಸ್ಸನ್ನು ಗೆಲ್ಲುವಲ್ಲಿ ಸಫಲವಾಗುತ್ತದೆ. ಇಲ್ಲಿನ ಹಾಸ್ಯಕ್ಕೆ ವೈಚಾರಿಕತೆಯ ಚೌಕಟ್ಟಿದೆ. ಗ್ರಾಂಥಿಕ ಭಾಷೆಗೆ ಆಡು ಭಾಷೆಯ ಶೃಂಗಾರವಿದೆ. ಆಧುನಿಕ ಅನುಭವದ ಹಿನ್ನೆಲೆಯಲ್ಲಿ ಇಲ್ಲಿನ ಅನೇಕ ಗಾದೆ ಮಾತುಗಳು ಹೊಸ ರೂಪ ತಾಳುತ್ತವೆ. ಯಾವುದೇ ಪ್ರಸಂಗದ ವರ್ಣನೆ ಕಣ್ಣಿಗೆ ಕಟ್ಟುವಂತಿದೆ.

- ರಂಜಾನ್ ದರ್ಗಾ









ಕ್ರೆಡಿಟ್ ಕಾರ್ಡುಗಳು

ಕಾಸಿಲ್ಲದ ಪಾವತಿ ಮಾರ್ಗ

ಮಹಾದೇವಪ್ಪ ಆವಿನ

ಕ್ರೆಡಿಟ್ ಕಾರ್ಡ್ ಎಂದೇರನು?

ಕ್ರೆಡಿಟ್ ಕಾರ್ಡ್ ಒಂದು ಪ್ಲಾಸ್ಟಿಕ್ ಕಾರ್ಡು. ಅದನ್ನು ಹೊಂದಿದಾತ ತನಗವಶ್ಯವಿರುವ ಗ್ರಾಹಕ ವಸ್ತುಗಳನ್ನು ಹಾಗೂ ಕೆಲವೊಮ್ಮೆ ನಗದು ಹಣವನ್ನು ಸಾಲ ರೂಪದಲ್ಲಿ ತೆಗೆದುಕೊಳ್ಳಬಹುದು. ಈ ಕಾರ್ಡುಗಳನ್ನು ಬಹುಪಾಲು ಎಲ್ಲೆಡೆ ಮಾನ್ಯ ಮಾಡುತ್ತಾರೆ. ಕಾರ್ಡುದಾರರಿಗೆ ತಿಂಗಳಿಗೊಮ್ಮೆ ಖರ್ಚು ಪಟ್ಟಿಯನ್ನು ಕಾರ್ಡು ನೀಡಿದ ಬ್ಯಾಂಕಿನವರು ಕಳಿಸುತ್ತಾರೆ. ಅದರಂತೆ ನಿಗದಿ ಪಡಿಸಿದ ಅವಧಿಯೊಳಗೆ ಕಾರ್ಡುದಾರ ಹಣ ಪಾವತಿ ಮಾಡಬೇಕು. ಕಾರ್ಡುದಾರ ಹಣವನ್ನು ಕಂತುಗಳಲ್ಲಿ ಕಟ್ಟಿದರೆ, ಇಲ್ಲವೇ ನಿಗದಿತ ಸಮಯದೊಳಗೆ ಹಣ ಕಟ್ಟದಿದ್ದಲ್ಲಿ, ಅದಕ್ಕೆ ಬಡ್ಡಿ ತೆರಬೇಕಾಗುತ್ತದೆ.

ಪ್ರತೀ ಕ್ರೆಡಿಟ್ ಕಾರ್ಡಿನ ಮೇಲೆ ಕಾರ್ಡುದಾರನ ಹೆಸರು, ಅವರ ಖಾತೆ ನಂಬರು ಹಾಗೂ ಕಾರ್ಡಿನ ಕಾಲಾವಧಿಯನ್ನು ಉಬ್ಬಚ್ಚು ಮಾಡಿರುತ್ತಾರೆ. ಕಾರ್ಡನ್ನು ಅಗತ್ಯ ವಸ್ತುಗಳ ಕೊಳ್ಳುವಿಕೆಗಳಲ್ಲದೆ, ಪ್ರವಾಸ ಹೋಗುವವರು ಅದನ್ನಿರಿಸಿಕೊಂಡು ಎಲ್ಲೆಡೆ ಸುತ್ತಿ ಬರಬಹುದು. ಇದರಿಂದಾಗಿ ಜೇಬಿನ ತುಂಬ ಹಣ ಇರಿಸಿಕೊಂಡು, ಅದನ್ನು ರಕ್ಷಿಸಿಕೊಳ್ಳಲು ಪರದಾಡುವುದು ತಪ್ಪುತ್ತದೆ. ಒಂದು ವೇಳೆ ಕಾರ್ಡು ಕಳೆದುಹೋದಲ್ಲಿ, ಬ್ಯಾಂಕಿಗೆ ತಿಳಿಸಿದರೆ ಸಾಕು, ಬ್ಯಾಂಕ್ ಕಾರ್ಡಿನ ಚಲಾವಣೆಯನ್ನು ನಿಲ್ಲಿಸಿ, ಕನಿಷ್ಠ ಅವಧಿಯಲ್ಲಿ ಮತ್ತೊಂದು ಕಾರ್ಡನ್ನು ಕೊಡುತ್ತದೆ. ಅಲ್ಲದೆ ಅಪರಿಚಿತ ಸ್ಥಳಗಳಲ್ಲಿ 'ಕಾರ್ಡನ್ನು ಗುರುತಿನ ಕಾರ್ಡ್' ಆಗಿಯೂ ಬಳಸಬಹುದು. ಇತ್ತೀಚಿಗೆ ತಾಂತ್ರಿಕತೆಯ ಅಭಿವೃದ್ಧಿಯಿಂದಾಗಿ, ಕಾರ್ಡಿನ ಮೇಲೆ ಕಾರ್ಡುದಾರರ ಚಿತ್ರವನ್ನು ಮುದ್ರಿಸುವ ವ್ಯವಸ್ಥೆ ಬಂದಿದ್ದು, ಇದಕ್ಕಾಗಿ ಕಾರ್ಡುದಾರ ಚಿಕ್ಕ ಮೊತ್ತವನ್ನು ಶುಲ್ಕವನ್ನಾಗಿ ನೀಡಬೇಕು.



ಕಾರ್ಡುಗಳ ಬಳಕೆಯು ವ್ಯಾಪಾರಿಗಳಿಗೂ ಲಾಭ ಕರ. ಗ್ರಾಹಕ ವಿತರಿಸಿದ ಮೊತ್ತವನ್ನು ಬ್ಯಾಂಕ್ ತಕ್ಷಣ ವ್ಯಾಪಾರಿಗೆ ಕೊಡುತ್ತದೆ. ಈ ವ್ಯಾಪಾರದಲ್ಲಿ ಸುರಕ್ಷತೆ ಹೆಚ್ಚಿ ಕಾರ್ಡುಗಳು ದೇಶ-ವಿದೇಶಗಳ ಗ್ರಾಹಕರನ್ನು ಆಕರ್ಷಿಸುತ್ತದೆ. ವ್ಯಾಪಾರಿಗಳು ಬ್ಯಾಂಕಿನ ಸಹಯೋಗದೊಂದಿಗೆ ತಮ್ಮ ಬಗ್ಗೆ ಜಾಹೀರಾತು / ಪ್ರಚಾರ ಮಾಡುವ ಅನುಕೂಲಗಳಿವೆ.

ಕ್ರೆಡಿಟ್ ಕಾರ್ಡುಗಳ ಬಹುಪಯೋಗ ಹಾಗೂ ಅವು ನೀಡುವ ಸವಲತ್ತುಗಳಿಂದ ಅವುಗಳಿಗೆ ಬೇಡಿಕೆ ಹೆಚ್ಚಿದೆ. ಕಾರ್ಡುದಾರರ ಸಂಖ್ಯೆ ಹೆಚ್ಚುತ್ತಲಿದೆ. ಬ್ಯಾಂಕುಗಳು ಬಳಕೆದಾರರ ಸಂಖ್ಯೆಯನ್ನು ಹೆಚ್ಚಿಸಲು ವಿಶೇಷ ಸವಲತ್ತುಗಳನ್ನು ಅಂದರೆ ಕಾರ್ಡುದಾರರ ಅಪಘಾತ ವಿಮೆ, ಕೆಲವು ಅಂಗಡಿಗಳಲ್ಲಿ ಸೋಡಿ ಕೊಡಿಸುವುದು... ಇತ್ಯಾದಿಗಳನ್ನು ಒದಗಿಸುತ್ತಿದೆ.

ಕ್ರೆಡಿಟ್ ಕಾರ್ಡಿನ ವಿಕಾಸ

ಅನಾದಿ ಕಾಲದಿಂದ ಮನುಷ್ಯನು ವ್ಯಾಪಾರ ಹಾಗೂ ವಿನಿಮಯ ಮಾಡುತ್ತ ಬಂದಿದ್ದಾನೆ. ಒಂದು ವ್ಯವಹಾರಿಕ ಚಟುವಟಿಕೆಯು ಸರಕುಗಳ ಉತ್ಪಾದನೆ ಮತ್ತು ಸೇವೆಗಳು ಹಾಗೂ ಸರಕಿನ ವಿತರಣೆ ಮತ್ತು ಸೇವೆಗಳು ಎರಡನ್ನೂ ಒಳಗೊಳ್ಳುತ್ತದೆ. ಮೊದಲಿನವರು ಔದ್ಯಮಿಕ ಚಟುವಟಿಕೆಯಾದರೆ, ನಂತರದ್ದು ವಾಣಿಜ್ಯ ಚಟುವಟಿಕೆಗೆ ಸಂಬಂಧಿಸಿದೆ.

ಕೌಟುಂಬಿಕ ಆರ್ಥಿಕತೆಯು ಕೆಲಸದ ಹಂಚಿಕೆಯ ಮೂಲಕ ರಚಿತವಾದದ್ದಾಗಿತ್ತು. ಬೆಳವಣಿಗೆಯ ಮೊದಲ ಹಂತದಲ್ಲಿ ಆಹಾರ ಸಂಗ್ರಹ ಶೇಖರಣೆ ಮತ್ತು ವಿತರಣೆ ಮುಖ್ಯವಾದ ಕೆಲಸವಾಗಿತ್ತು. ದೀರ್ಘಕಾಲೀನ ಆಹಾರದ ಅವಶ್ಯಕತೆಗಾಗಿ ಪ್ರಾಣಿಗಳ ಸಾಕುವಿಕೆ ಪ್ರಾರಂಭವಾಗಿತ್ತು. ಆಹಾರ ಮತ್ತು ಆಶ್ರಯಕ್ಕಾಗಿ ಮನುಷ್ಯ ನಿರಂತರವಾಗಿ ಚಲಿಸುತ್ತಿದ್ದ. ಭೂ ಸಾಗುವಳಿ ಪ್ರಾರಂಭಿಸಿದ ನಂತರ ಮನುಷ್ಯ ಒಂದೆಡೆ ನೆಲೆಯೂರಿದ, ಮನೆ ಕಟ್ಟಿದ. ಮನುಷ್ಯ ಸಾಮೂಹಿಕ ಜೀವನ ಪ್ರಾರಂಭವಾಗಿ, ಹಳ್ಳಿಗಳು/ ಸಮುದಾಯಗಳು ಹುಟ್ಟಿಕೊಂಡವು. ತಮ್ಮ ಅಗತ್ಯಕ್ಕಿಂತ ಹೆಚ್ಚು ಇದ್ದದ್ದನ್ನು ಮನುಷ್ಯ ವಿನಿಮಯ ಮಾಡಿಕೊಳ್ಳಲು ಪ್ರಾರಂಭಿಸಿದ. ಇದು ಆಧುನಿಕ ವಾಣಿಜ್ಯದ ಅಡಿಪಾಯವನ್ನು ಹಾಕಿತು. ಇದು ವ್ಯಾಪಾರ, ದುಡಿಮೆಯ ವಿಭಜನೆ, ಗುಲಾಮರ ನೇಮಕವೇ ಮೊದಲಾದ ಚಟುವಟಿಕೆಗಳ ಹೆಚ್ಚಳಕ್ಕೆ ಕಾರಣವಾಯಿತು.

ವಿನಿಮಯ ಪದ್ಧತಿಯಲ್ಲಿದ್ದ ದೋಷಗಳಿಂದಾಗಿ ಅದು ನಿಂತುಹೋಯಿತು. ಹೆಚ್ಚುವರಿ ಉತ್ಪನ್ನವುಳ್ಳ ವ್ಯಕ್ತಿಗೆ ಅದನ್ನು ವಿನಿಮಯ ಮಾಡಿಕೊಳ್ಳಲು ಇನ್ನೊಬ್ಬ ವ್ಯಕ್ತಿ ಸಿಗುವುದು ಕಷ್ಟವಾಯಿತು. ರೈತನೊಬ್ಬನಿಗೆ ಕ್ಷೌರಿಕನ ಸೇವೆಯ ಅಗತ್ಯವಿಲ್ಲದಿರಬಹುದು, ಆದರೆ ಕ್ಷೌರಿಕನಿಗೆ ಆಹಾರದ ಅಗತ್ಯವಿದೆ. ಆತ ಸೂಕ್ತ

ತುಂಬಾ ಪ್ರಸಿದ್ಧವಾದ ಕಾರ್ಡ್‌ಗಳು

೧. ವೀಸಾ ಇಂಟರ್ ನ್ಯಾಷನಲ್
೨. ಮಾಸ್ಟರ್ ಕಾರ್ಡ್ ಇಂಟರ್‌ನ್ಯಾಷನಲ್
೩. ಜಪಾನ್ ಕ್ರೆಡಿಟ್ ಬ್ಯೂರೋ
೪. ಅಮೆರಿಕನ್ ಎಕ್ಸ್‌ಪ್ರೆಸ್
೫. ಡೈನರ್ಸ್ ಕ್ಲಬ್

ವಿನಿಮಯ ಉತ್ಪನ್ನವನ್ನು ನೀಡಲು ಅಸಮರ್ಥನಾಗಬಹುದು. ವಿನಿಮಯ ವಸ್ತುಗಳಿಗೆ ಅಳತೆಯ ಸಾಮಾನ್ಯ ಮೌಲ್ಯದ ನಿಗದಿ ಸಾಧ್ಯವಿಲ್ಲ. ಹೆಚ್ಚುವರಿ ಉತ್ಪನ್ನವನ್ನು ಶೇಖರಿಸಿಡಲು ಶೇಖರಣಾ ಸೌಲಭ್ಯವಿರಬೇಕು. ಕಾಲಾನಂತರದಲ್ಲಿ ಅವುಗಳ ಮೌಲ್ಯ ನಷ್ಟವನ್ನು ತಡೆಯುವುದು ಸಾಧ್ಯವಿಲ್ಲ. ಕೆಲವು ಉತ್ಪನ್ನಗಳ ಉಪವಿಭಾಗ ಸಾಧ್ಯವಿಲ್ಲ. ವಿನಿಮಯ ಪದ್ಧತಿಯ ಈ ಎಲ್ಲ ದೋಷಗಳಿಂದಾಗಿ, ಸಾಮಾನ್ಯ ವಿನಿಮಯ ಮಾಧ್ಯಮವಾಗಿ ಹಣದ ಪರಿಚಯವು ಅಗತ್ಯವಾಯಿತು. ಕೆಲವು ಬೆಲೆ ಬಾಳುವ ವಸ್ತುಗಳು ಉದಾ: ಚರ್ಮದ ವಸ್ತುಗಳು, ತಿಮಿಂಗಲದ ದಂತಗಳು, ಕವಡೆಗಳು, ಹಣವಾಗಿ ಬಳಸಲ್ಪಟ್ಟವು. ಸಂಸ್ಕೃತಿ ಬೆಳೆದಂತೆ ಲೋಹಗಳು ವಿನಿಮಯ ಮಾಧ್ಯಮಗಳಾದವು. ನಂತರ ಲೋಹಗಳನ್ನು ನಿರ್ದಿಷ್ಟ ಅಳತೆ, ತೂಕ ಮತ್ತು ಆಕಾರದಲ್ಲಿ ಬಳಸಲು ಪ್ರಾರಂಭಿಸಿದರು. ಲೋಹದ ಮೇಲೆ ಮುದ್ರೆ ಒತ್ತುವುದು ಶುರುವಾಯಿತು. ಅದೇ ನಾಣ್ಯದ ಉಗಮ. ನಾಣ್ಯದ ಮೊದಲ ಉಪಯೋಗವು ಕ್ರಿ.ಪೂ. ೬೫೦ರ ಸುಮಾರಿನಲ್ಲಿ ಗ್ರೀಕ್ ನಗರದಲ್ಲಿ ಇದ್ದಿತ್ತು ಎಂದು ತಿಳಿದುಬಂದಿದೆ. ಈ ನಾಣ್ಯಗಳು ಸ್ಥಳೀಯ ಅಗತ್ಯಗಳನ್ನು ಪೂರೈಸುತ್ತಿತ್ತೇ ವಿನಹ, ಅಂತರಾಷ್ಟ್ರೀಯ ವ್ಯವಹಾರದಲ್ಲಿ ಅದರದ್ದೇ ಆದ ತೊಂದರೆಗಳಿದ್ದವು. ಒಂದು ದೇಶದ ನಾಣ್ಯವನ್ನು ಇನ್ನೊಂದು ದೇಶದವರು ಮನ್ನಿಸುತ್ತಿರಲಿಲ್ಲ. ೧೯ನೇ ಶತಮಾನದಲ್ಲಿ ಜಾವಾ, ಮಲಕ್ಕಾ, ಪೆನಾಂಗ್‌ಗಳಲ್ಲಿ ಜಾರಿಯಲ್ಲಿದ್ದ ಭಾರತದ ರೂಪಾಯಿಯನ್ನು ಬಹುಪಾಲು ವ್ಯಾಪಾರಸ್ಥರು ಸ್ವೀಕರಿಸುತ್ತಿರಲಿಲ್ಲ. ಅವರು ಬೆಳ್ಳಿಯ ಡಾಲರ್‌ಗಳನ್ನು ಅಪೇಕ್ಷಿಸುತ್ತಿದ್ದರು. ಇದರಿಂದಾಗಿ ನಿಜವಾದ ಪಾವತಿ ಬೆಳ್ಳಿಯ ಡಾಲರ್‌ನಲ್ಲಿ ನಡೆದು, ಸ್ಥಳೀಯ ಕಂಪನಿಗಳು ತಮ್ಮ ಲೆಕ್ಕಪತ್ರಗಳಲ್ಲಿ ರೂಪಾಯಿ ನಾಣ್ಯದ ರೂಪದಲ್ಲಿ ತರ್ಜುಮೆ ಮಾಡಿ ಇಡಬೇಕಾಗುತ್ತಿತ್ತು. ಆಗ ಮಧ್ಯವರ್ತಿಗಳಾಗಿ ಬ್ಯಾಂಕುಗಳು ಹುಟ್ಟಿಕೊಂಡವು. ಕಾಗದದ ಹಣವು ವ್ಯಾಪಕವಾಗಿ ಬಳಕೆಗೆ ಬಂದಿತು. ಮಧ್ಯಕಾಲದ ಅಂತ್ಯದ

ಕ್ರೆಡಿಟ್ ಕಾರ್ಡ್ ಯಾರು ಪಡೆಯಬಹುದು?

ಕ್ರೆಡಿಟ್ ಕಾರ್ಡ್ ಕೊಡಲು ಬೇರೆ ಬೇರೆ ಬ್ಯಾಂಕುಗಳು ಬೇರೆ ಬೇರೆ ನಿಯಮಗಳನ್ನು ಅನುಸರಿಸುತ್ತವೆ. ಆ ನಿಯಮಗಳಲ್ಲಿ ಕಾರ್ಡು ಪಡೆಯುವ ವ್ಯಕ್ತಿಯ ಆರ್ಥಿಕ ಸ್ಥಿರತೆ ಹಾಗೂ ಆತನಿಗಿರುವ ಸಾಲ ತೀರಿಸುವ ಶಕ್ತಿ ಮುಖ್ಯವಾದದ್ದು. ಆ ವ್ಯಕ್ತಿ ಭಾರತದ ಪ್ರಜೆಯಾಗಿದ್ದು, ಇಲ್ಲಿಯೇ ವಾಸಿಸುತ್ತಿರಬೇಕು. ವ್ಯಕ್ತಿ ನೌಕರಿ ಮಾಡುತ್ತಿದ್ದರೆ ನಿಯಮಿತವಾಗಿ ವೇತನ ಪಡೆಯುತ್ತಿರಬೇಕು.

ಕೆಲವು ಬ್ಯಾಂಕುಗಳು ವ್ಯಕ್ತಿಯ ನಿಯಮಿತ ವಾರ್ಷಿಕ ಆದಾಯ ೬೦,೦೦೦ ರೂಪಾಯಿಗಳಿಗಿಂತ ಜಾಸ್ತಿ ಇರಬೇಕೆಂದು ಬಯಸುತ್ತವೆ. ಸ್ವರ್ಣ ಕಾರ್ಡಿ (Gold Card) ಗಾದರೆ ವಾರ್ಷಿಕ ರೂ. ೧,೨೦೦೦೦ ದ ಮೇಲೆ ಆದಾಯವಿರಬೇಕು. ಕೆಲವು ಬ್ಯಾಂಕುಗಳಲ್ಲಿ ವ್ಯಕ್ತಿಯ ವಾರ್ಷಿಕ ಆದಾಯ ಮಿತಿಯಲ್ಲಿ ವ್ಯತ್ಯಾಸವಾಗಬಹುದು.

ಆದಾಯದ ರುಜುವಾತಿಗೆ ಅರ್ಜಿಯೊಡನೆ ಈ ಕೆಳಗಿನ ದಾಖಲೆಗಳನ್ನು ಒದಗಿಸಬೇಕು.

೧. ಇತ್ತೀಚಿನ ತಿಂಗಳ ವೇತನದ ಪಾವತಿ ಪಟ್ಟಿ (Pay Slip). ಈ ಪಟ್ಟಿಯಲ್ಲಿ ಮೂಲ ವೇತನ, ತುಟ್ಟಿ ಬತ್ಯೆ ಮೊದಲಾದ ವಿವರಗಳನ್ನು ಪ್ರತ್ಯೇಕವಾಗಿ ನಮೂದಿಸಿರಬೇಕು. ಅಲ್ಲದೆ ವೇತನದಲ್ಲಿ ಕಡಿತಗಳು ಇದ್ದರೆ ಅವುಗಳ ವಿವರವನ್ನು ಸಹ ತಿಳಿಸಬೇಕು.

೨. ಆದಾಯ ತೆರಿಗೆ ಕಟ್ಟುವವರು, ತಾವು ಇತ್ತೀಚೆಗೆ ವರಮಾನ ತೆರಿಗೆ ಕಟ್ಟಿದ ವರದಿ ಪ್ರತಿಯನ್ನು ಒದಗಿಸಬೇಕು. ಇಲ್ಲವೇ ಇತ್ತೀಚಿನ TDS Form 16 (Tax Deducted at aource form 16) Sನ್ನು ಒದಗಿಸಬೇಕು.

೩. ಸ್ವಯಂ ವೃತ್ತಿಯಲ್ಲಿ ತೊಡಗಿರುವ ಡಾಕ್ಟರ್‌ಗಳು, ಇಂಜನೀಯರಗಳು, ವಕೀಲರು ಮುಂತಾದವರು ಇತ್ತೀಚೆಗೆ ತಾವು ಕಟ್ಟಿದ ವರಮಾನ ತೆರಿಗೆಯ ವರದಿ ಪ್ರತಿಯನ್ನು ಒದಗಿಸಬೇಕು.

ಕ್ರೆಡಿಟ್ ಕಾರ್ಡ್ ಬಯಸುವ ಇನ್ನು ಕೆಲವರಿಗೆ ಸಾಲ ತೀರಿಸುವ ಶಕ್ತಿಯಿರುತ್ತದೆ. ಆದರೆ ತಮ್ಮ ಆದಾಯ ರುಜುವಾತು ಪಡಿಸುವ ದಾಖಲೆಗಳನ್ನು ಹೊಂದಿರುವುದಿಲ್ಲ. ಉದಾ: ನಿವೃತ್ತಿ ಹೊಂದಿದವರು, ರೈತರು, ಮುಂತಾದವರು. ಬ್ಯಾಂಕುಗಳು ಅಂಥವರಿಂದ ಠೇವಣಿ ಪಡೆದು ಕ್ರೆಡಿಟ್ ಕಾರ್ಡ್ ಸೌಲಭ್ಯ ನೀಡುತ್ತವೆ.

ಇನ್ನೂ ಕೆಲವು ಬ್ಯಾಂಕುಗಳು ಅರ್ಜಿಯ ಜೊತೆಗೆ ವ್ಯಕ್ತಿಯ ವಿಳಾಸದ ರುಜುವಾತಿಗಾಗಿ, ವಿಜಿಟಿಂಗ್‌ಕಾರ್ಡ್, ಮನೆ ದಾಖಲೆ, ಅಥವಾ ಎಲ್.ಐ. ಸಿ. ಹಾಗೂ ಎನ್. ಎಸ್.ಸಿ. ಮುಂತಾದ ಹೂಡಿಕೆ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ಅಪೇಕ್ಷಿಸುತ್ತವೆ. ಬೇರೆ ಬ್ಯಾಂಕುಗಳ ಕ್ರೆಡಿಟ್ ಕಾರ್ಡ್ ಹೊಂದಿದ್ದರೆ ಅದರ ಬಿಲ್ಲಿನ ಇತ್ತೀಚಿನ ಪ್ರತಿ ಅರ್ಜಿಯೊಂದಿಗೆ ಲಗತ್ತಿಸಬೇಕಾಗಬಹುದು.

ಯಾವುದೇ ಕಾಲಂನ್ನು ಖಾಲಿ ಬಿಡದೆ ಅರ್ಜಿಯನ್ನು ಪೂರ್ಣವಾಗಿ ತುಂಬಬೇಕು. ತಮಗೆ ಅನ್ವಯಿಸದ ಕಾಲಂನಲ್ಲಿ 'ಇಲ್ಲ' ಅಥವಾ ಅನ್ವಯಿಸುವುದಿಲ್ಲ' ಎಂದು ಬರೆಯಬೇಕು. ಮರೆಯದೆ ಸಹಿ ಮಾಡಿ ಅದರ ಜೊತೆಗೆ ತಪ್ಪದೆ ತಾರೀಖನ್ನು ಬರೆಯಬೇಕು. ಇಂಥ ಕೆಲವು ಚಿಕ್ಕ ತಪ್ಪುಗಳಿಂದ ಅರ್ಜಿ ತಿರಸ್ಕರಿಸಲಾಗುವುದು. ಜಾಗ್ರತೆವಹಿಸುವುದು ಅಗತ್ಯ.

ಬ್ಯಾಂಕುಗಳ ಶಾಖೆಗಳಲ್ಲಿ ಅರ್ಜಿ ದೊರೆಯುತ್ತವೆ. ಅಲ್ಲದೆ ಕೆಲವು ವಿದೇಶಿ ಬ್ಯಾಂಕುಗಳು ಕಾರ್ಡುದಾರರನ್ನು ಹೆಚ್ಚಿಸಲು ಕೆಲವು ಏಜೆಂಟ್‌ಗಳನ್ನು ನೇಮಿಸಿದ್ದಾರೆ. ಅಂಥವರಿಂದಲೂ ಅರ್ಜಿ ಪಡೆಯಬಹುದಾಗಿದೆ.

ಕೆಲವು ಬ್ಯಾಂಕುಗಳು ಫಲಕದಲ್ಲಿ ತಾವು ಕೊಡುವ ಕಾರ್ಡುಗಳು, ಅವುಗಳಿಂದ ದೊರೆಯುವ ಸೌಲಭ್ಯಗಳು, ಅವುಗಳಿಗೆ ತಗಲುವ ಖರ್ಚುಗಳು, ಅನುಸರಿಸಬೇಕಾದ ನಿಯಮಗಳು ಮುಂತಾದ ವಿಷಯಗಳನ್ನು ತಿಳುವಳಿಕೆಗಾಗಿ ಕೊಟ್ಟಿರುತ್ತಾರೆ. ನಿಯಮಗಳು ಕಾಲಕಾಲಕ್ಕೆ ಬದಲಾಗುತ್ತಲೂ ಇರುತ್ತವೆ.

ಹೊತ್ತಿಗೆ ಯುರೋಪಿನಲ್ಲಿ ಹುಂಡಿಗಳ ಉಪಯೋಗವು ಕಾಣಿಸಿಕೊಂಡಿತು. ಹುಂಡಿಯು ಬರವಣಿಗೆಯಲ್ಲಿ ಮಾಡಿಕೊಂಡ ಕರಾರು. ಅದರಲ್ಲಿ ಸಾಲಗಾರನು ಸಾಲವನ್ನು ನಿರ್ದಿಷ್ಟ ಸಮಯ ಹಾಗೂ ಸ್ಥಳದಲ್ಲಿ ಪಾವತಿ ಮಾಡಲು ಒಪ್ಪಿ ಬರೆದುಕೊಟ್ಟಿರುತ್ತಾನೆ. ಅವು ಹಣ ದೊರೆಯುವಿಕೆಯನ್ನು ಹಾಗೂ ಸಾಲ ಪಡೆಯುವಿಕೆಯನ್ನು ಸರಳಗೊಳಿಸಿದವು. ಬ್ಯಾಂಕುಗಳ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದವು. ನಂತರ ಬ್ಯಾಂಕ್ ನೋಟುಗಳು ಬಂದವು. ಇದನ್ನು ಮೊದಲು ಜಾರಿಗೆ ತಂದಿದ್ದು ಬ್ಯಾಂಕ್ ಆಫ್ ಆಮ್‌ಸ್ಟರ್‌ಡಾಂ. ಈಗ ಚಾಲ್ತಿಯಲ್ಲಿರುವ ಕಾಗದದ ಹಣವನ್ನು ಪರಿಚಯಿಸಿದ್ದು ಬ್ಯಾಂಕ್ ಆಫ್ ಸ್ಟಾಕ್ ಹೋಂ.

ಬ್ಯಾಂಕ್ ವ್ಯವಸ್ಥೆಯು ಕ್ಲಿಷ್ಟವಾಗುತ್ತ ಹೋದಂತೆ, ಅವುಗಳ ನಿಯಂತ್ರಣ ಹಾಗೂ ಬ್ಯಾಂಕು/ಗ್ರಾಹಕರನ್ನು ರಕ್ಷಿಸಲು ಸರ್ಕಾರ ಮಧ್ಯಪ್ರವೇಶಿಸಿತು. ನಗದು ನೋಟುಗಳ ಬಿಡುಗಡೆ ಹಾಗೂ ಹಣಕಾಸಿನ ನಿಯಂತ್ರಣಕ್ಕಾಗಿ ಕೇಂದ್ರ ಬ್ಯಾಂಕ್‌ಗಳು (ರಿಸರ್ವ್ ಬ್ಯಾಂಕ್ ತರಹದವು) ಸ್ಥಾಪನೆಯಾದವು. ನಾಣ್ಯ ಮತ್ತು ನೋಟಿನ ರೂಪದ ನಗದು ಪಾವತಿಯ ಮೊದಲನೇ ಮಾರ್ಗದವಾದರೆ. ೨ನೇ ಮಾರ್ಗವು ಕಾಗದದ ಮೇಲೆ ಕೊಡುವ ಸೂಚನೆಗಳು (ಚೆಕ್‌ಗಳು) ಹಾಗೂ ಜಮಾ ವರ್ಗಾವಣೆಗಳು (ಕ್ರೆಡಿಟ್ ವರ್ಗಾವಣೆ) ನಂತರ ಬಂದದ್ದು ಎಲೆಕ್ಟ್ರಾನಿಕ್ ಪಾವತಿ ಮಾರ್ಗ. ಅದರಲ್ಲಿ ಮುಖ್ಯವಾದದ್ದು ಪ್ಲಾಸ್ಟಿಕ್ ಕಾರ್ಡುಗಳು.

೨೦ ನೇ ಶತಮಾನದ ಮೊದಲ ವರ್ಷಗಳಲ್ಲಿ ಕ್ರೆಡಿಟ್ ಕಾರ್ಡುಗಳು ಮೊದಲು ಬಳಕೆಗೆ ಬಂದದ್ದು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ. ಶತಮಾನಗಳಿಂದ ಜಾರಿಯಲ್ಲಿದ್ದ ಉದ್ದರಿ ಪದ್ಧತಿಯು ಕ್ರೆಡಿಟ್ ಕಾರ್ಡಿನ ಮೂಲ. ಮೊದಲ ಕ್ರೆಡಿಟ್ ಕಾರ್ಡ್ ಉದ್ದರಿ ದಾಖಲೆ ಬರೆದಿದ್ದ ರಟ್ಟಿನ ತುಂಡು. ೧೯೧೪ರಲ್ಲಿ ಹಣದ

ಕ್ರೆಡಿಟ್ ಕಾರ್ಡ್ ಸೇವೆ :

	ಅಮೆರಿಕನ್ ಎಕ್ಸ್‌ಪ್ರೆಸ್ ಕಾರ್ಡ್	ಆಂದ್ರ ಕ್ಲಾಸಿಕ್	ಆಂಧ್ರ ಗೋಲ್ಡ	ಬಾಬ್ ಕಾರ್ಡ್	ಬಾಬ್ ಸಿಲ್ವರ್ ಕಾರ್ಡ್	ಕ್ಯಾನ್‌ಕಾರ್ಡ್ ಪ್ರೊಪ್.
ಆದಾಯ ಅರ್ಹತೆ	೭೫೦೦೦++	೬೦,೦೦೦	೧೨೦,೦೦೦	೭೫,೦೦೦	೭೫,೦೦೦	೬೦,೦೦೦
ಹೆಚ್ಚುವರಿ ಕಾರ್ಡ್	ಮಿತಿ ಇಲ್ಲ	೨	೨	ಮಿತಿಯಿಲ್ಲ	ಮಿತಿಯಿಲ್ಲ	೩
ಪ್ರವೇಶ ಶುಲ್ಕ	೧,೨೦೦	೬೦೦	೧,೫೦೦	ಶುಲ್ಕವಿಲ್ಲ	ಶುಲ್ಕವಿಲ್ಲ	೨೦೦
ವಾರ್ಷಿಕ ಶುಲ್ಕ	೧,೮೦೦	೩೦೦	೫೦೦	೧೦೦	೨೫೦	೨೦೦
ನವೀಕರಣ ಶುಲ್ಕ	೧,೮೦೦	೩೦೦	೫೦೦	೧೦೦	೨೫೦	೨೦೦
ಹೆಚ್ಚುವರಿ ಕಾರ್ಡ್ ಶುಲ್ಕ	೪೫೦	೪೫೦	೧೦೦೦	೧೦೦	೨೫೦	೧೫೦
ಕ್ರೆಡಿಟ್ ಮಿತಿ	ಇಲ್ಲ	೧೫,೦೦೦	೫೦,೦೦೦	ಇಲ್ಲ	ಇಲ್ಲ	ಇಲ್ಲ
ಬಡ್ಡಿ	೨.೫%	೨.೫%	೨.೫%	✓	✓	೨.೫%
ಪ್ರಾಥಮಿಕ ಕಾರ್ಡ್‌ಗೆ ಮುಂಗಡ ಹಣದ ಮಿತಿ	೨.೫೦೦	೫೦೦೦**	೧೦,೦೦೦	೫,೦೦೦	೧೦,೦೦೦	೨೫,೦೦೦
ಹೆಚ್ಚುವರಿ ಕಾರ್ಡ್‌ಗೆ ಮು. ಹ. ಮಿತಿ	೨೫೦೦೦	೫,೦೦೦	೧೦,೦೦೦	ಸೌಲಭ್ಯವಿಲ್ಲ	ಸೌಲಭ್ಯವಿಲ್ಲ	೫,೦೦೦
ಮುಂಗಡ ಹಣದ ಸೇವಾ ಶುಲ್ಕ	೦.%	೩.೦%	೩.೦%	೩.೦%	೩.೦%	೩.೦%
ಎ.ಟಿ. ಎಂ.. ಹಣ ಮಿತಿ	ಅನ್ವಯವಿಲ್ಲ	ಅನ್ವಯವಿಲ್ಲ	ಅನ್ವಯವಿಲ್ಲ	ಅನ್ವಯವಿಲ್ಲ	ಅನ್ವಯವಿಲ್ಲ	೩,೦೦೦**
ವೈಮಾನಿಕ ವಿಮೆ (ಲಕ್ಷ ರೂಗಳಲ್ಲಿ)	೧೫-೩೦	೧	೩	ಇಲ್ಲ	೪	೧
ವಿಮಾನೇತರ ವಿಮೆ (ಲಕ್ಷ ರೂಗಳಲ್ಲಿ)	೩.೩೦	೧	೩	ಇಲ್ಲ	೨	೧
ಮಡದಿಗೆ ವಿಮೆ	ಸೌಲಭ್ಯವಿಲ್ಲ	ಸೌಲಭ್ಯವಿಲ್ಲ	ಸೌಲಭ್ಯವಿಲ್ಲ	ಸೌಲಭ್ಯವಿಲ್ಲ	ಸೌಲಭ್ಯವಿಲ್ಲ	ಸೌಲಭ್ಯವಿಲ್ಲ
ಬದಲಿ ಕಾರ್ಡ್ ಕೊಡುವ ಸಮಯ (ಗಂಟೆಗಳಲ್ಲಿ)	೪೮	೪೮	೪೮	೪೮	೪೮	೨೪೦
ನಷ್ಟದ ಬಾದ್ಯತೆ	೧,೦೦೦	೧,೦೦೦	೧,೦೦೦	೧,೦೦೦	೧,೦೦೦	೧,೦೦೦

ವರ್ಗಾವಣೆಗಾಗಿ ವೆಸ್ಟರ್ನ್ ಯೂನಿಯನ್ ಸಂಸ್ಥೆ ತನ್ನ ಸದಸ್ಯರಿಗೆ ಲೋಹದ ತುಂಡುಗಳ ಮೇಲೆ ಉಬ್ಬಚ್ಚು ಮಾಡಿ ಕೊಟ್ಟಿತು. ಒಬ್ಬ ವ್ಯಾಪಾರಿಕೊಟ್ಟ ಬಿಲ್ಲೆಯನ್ನು ಮತ್ತೊಬ್ಬ ಮನ್ನಿಸುವುದು ಪ್ರಾರಂಭವಾಯಿತು. ೧೯೨೪ರಲ್ಲಿ ಅಮೆರಿಕಾದ ಜನರಲ್ ಪೆಟ್ರೋಲಿಯಂ ಸಂಸ್ಥೆ ಪೆಟ್ರೋಲಿಯಂ ಕಾರ್ಡನ್ನು ಬಿಡುಗಡೆ ಮಾಡಿತು. ಗ್ರಾಹಕರಿಗಾಗಿ ಮೊದಲು ಕಾರ್ಡ್ ತಂದವರು ಪ್ಲಾಟ್ ಬುಷ್ ನ್ಯಾಷನಲ್ ಬ್ಯಾಂಕ್. ಪ್ರಾಂಕ್ಲಿನ್ ನ್ಯಾಷನಲ್ ಬ್ಯಾಂಕ್ ತನ್ನ ಗಿರಾಕಿಗಳಲ್ಲದವರಿಗೆ ಹಾಗೂ ಹೊರಗಿನವರಿಗೆ ಸಹ ಕಾರ್ಡುಗಳನ್ನು ನೀಡಿತು. ಇದನ್ನು ಬೇರೆ ಬ್ಯಾಂಕುಗಳು ಅನುಸರಿಸಿದವು.

೧೯೫೦ರಲ್ಲಿ ಡೈನರ್ಸ್ ಕ್ಲಬ್‌ನ ಸಂಸ್ಥಾಪಕರಾದ ಫ್ರಾಂಕ್ ಮೆಕ್ನಮಾರಾ ಕಂಡುಹಿಡಿದ ಸರಳ ಪಾವತಿ ಮಾರ್ಗ ಡೈನರ್ಸ್‌ಕ್ಲಬ್ ಕಾರ್ಡ್. ಈ ಕಾರ್ಡ್ ಬೇಕಾದ ವ್ಯಕ್ತಿ ವಾರ್ಷಿಕ ಸದಸ್ಯತ್ವದ ಫೀ ತುಂಬಿ ಕ್ಲಬ್ಬಿನ ಸದಸ್ಯನಾಗಬೇಕು. ಆ ಸದಸ್ಯ ಏನನ್ನಾದರೂ ಖರೀದಿಸಿದಲ್ಲಿ ವ್ಯಾಪಾರ ಸಂಸ್ಥೆಯು ಕ್ಲಬ್ಬಿಗೆ ನಿಗದಿತ ಕಮಿಷನ್ ಕೊಡಬೇಕು. ಇದರಿಂದಾಗಿ ಗ್ರಾಹಕರಿಗೆ ಸಾಲದ ವ್ಯವಸ್ಥೆ ಹಾಗೂ ವ್ಯಾಪಾರ ಸಂಸ್ಥೆಗಳಿಗೆ ಸಮರ್ಥ ಗಿರಾಕಿಗಳು ದೊರೆತಂತಾಯ್ತು. ೧೯೫೮ರಲ್ಲಿ ಅಮೆರಿಕನ್ ಎಕ್ಸ್‌ಪ್ರೆಸ್ ಸಂಸ್ಥೆಯು ತನ್ನ ಕಾರ್ಡನ್ನು ಬಿಡುಗಡೆ ಮಾಡಿತು. ಅದರ ಗುರಿ ಪ್ರಯಾಣ ಮತ್ತು ಅತಿಥಿ ಸತ್ಕಾರದ ವೆಚ್ಚದ ಭರಿಸುವಿಕೆ. ವೈಯಕ್ತಿಕ ಓವರ್‌ಡ್ರಾಫ್ಟ್ ಸೌಲಭ್ಯವನ್ನು ಕಾರ್ಡುದಾರರಿಗೆ ಕಾಲಾನಂತರ ಲಭ್ಯವಾಯಿತು. ೧೯೬೬ರಲ್ಲಿ ಬ್ಯಾಂಕ್ ಆಫ್ ಅಮೆರಿಕಾವು ತನ್ನ 'ಬ್ಯಾಂಕಮೇರಿಕಾ' ಕಾರ್ಡ್‌ಗಳನ್ನು ಹೊರತರಲು ಪ್ರಪಂಚದ ಇತರೆ ಬ್ಯಾಂಕ್‌ಗಳಿಗೆ ಅನುಮತಿ ನೀಡಿತು. ೧೯೭೭ರಲ್ಲಿ ಬ್ಯಾಂಕ್ ಆಫ್ ಅಮೆರಿಕಾದ ಅನುಮತಿ ಪಡೆದು ಕಾರ್ಡುಗಳನ್ನು ಕೊಡುತ್ತಿರುವ ಎಲ್ಲ ಬ್ಯಾಂಕುಗಳೂ ಒಟ್ಟಿಗೆ ಸೇರಿ ವೀಸಾ (VISA) ಸಂಸ್ಥೆ ಹುಟ್ಟಿಕೊಂಡಿತು. ಇವು ಯಾವುದೇ ಬ್ಯಾಂಕ್

ಒಂದು ಪಕ್ಷಿ ನೋಟ

ಕ್ಯಾನ್‌ಕಾರ್ಡ್ ವೀಸಾ	ಸಿಟಿಬ್ಯಾಂಕ್ ಡೈನರ್ಸ್	ಕ್ಯಾನ್‌ಕಾರ್ಡ್ ಮಾಸ್ಟರ್	ಸಿಟಿಬ್ಯಾಂಕ್ ಕ್ಲಾಸಿಕ್	ಸ್ಟಾಂಚಾರ್ಟ್ ಕ್ಲಾಸಿಕ್	ಸ್ಟಾಂಚಾರ್ಟ್ ಎಕ್ಸಿಕ್ಯೂಟಿವ್	ಸ್ಟಾಂಚಾರ್ಟ್ ಗೋಲ್ಡ
೬೦,೦೦೦	೯೬,೦೦೦	೬೦,೦೦೦	೫೦,೦೦೦	೬೦,೦೦೦	೯೦,೦೦೦	೧೨೦,೦೦೦
೨	೩	೨	೨	೧	೧	೨
೨೫೦	ಶುಲ್ಕವಿಲ್ಲ	೨೫೦	೨೦೦	೧೦೦	೪೦೦	೧,೦೦೦
೪೦೦	೩,೫೦೦೦	೪೦೦	೭೫೦	೭೦೦	೧,೧೦೦	೨,೦೦೦
೪೦೦	೨,೫೦೦	೪೦೦	೭೫೦	೭೦೦	೧,೧೦೦	೨,೦೦೦
೩೦೦	೧,೫೦೦	೩೦೦	೩೫೦	೪೦೦	೫೭೫	೧,೫೦೦
ಇಲ್ಲ	ಇಲ್ಲ	೧೦,೦೦೦	೩೦,೦೦೦	೧೨,೦೦೦	೨೦,೦೦೦	೩೦,೦೦೦
೨.೫%	೨.೫- ೪.೫%	೨.೫%	೨.೯೫%	೨.೯೫%	೨.೯೫%	೨.೯೫%
೨೫,೦೦೦	೧೦,೦೦೦	೨೫,೦೦೦	೧೮,೦೦೦	೪,೮೦೦	೮,೦೦೦	೧೨,೦೦೦
೫,೦೦೦	೫,೦೦೦	ಸೌಲಭ್ಯವಿಲ್ಲ	ಕಂಬೈನ್ಡ್	ಕಂಬೈನ್ಡ್	ಕಂಬೈನ್ಡ್	ಕಂಬೈನ್ಡ್
೩.೦%	೩.೦%	೩.೦%	೨.೫%	೧.೫%	೧.೫%	೧.೫%
೩,೦೦೦^{೦೦}	೧೦,೦೦೦	೩,೦೦೦^{೦೦}	೧೮,೦೦೦	೪,೮೦೦	೮,೦೦೦	೧೨,೦೦೦
೪	೧೫	೪	೫	೪	೮	೧೦
೨	೨	೨	೧	೨	೪	೫
೨	ಸೌಲಭ್ಯವಿಲ್ಲ	೨	ಸೌಲಭ್ಯವಿಲ್ಲ	೨.೫	೨.೫	೨.೫
೨೪೦	೨೪	೨೪೦	೨೪	೭೨	೭೨	೭೨
೧,೦೦೦	೦	೧,೦೦೦	೦	೦	೦	೦

ಕಾರ್ಡು ನೀಡುವ ಭಾರತದ ಬ್ಯಾಂಕ್‌ಗಳು

೧. ಆಂಧ್ರಾ ಬ್ಯಾಂಕ್ ೨. ಗ್ರಿಂಡ್ಲೇಸ್ ಬ್ಯಾಂಕ್ ೩. ಬಾಬ್ ಕಾರ್ಡ್ ೪. ಬ್ಯಾಂಕ್ ಆಫ್ ಇಂಡಿಯಾ ೫. ಕೆನರಾ ಬ್ಯಾಂಕ್ ೬. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ೭. ಸಿಟಿ ಬ್ಯಾಂಕ್ ೮. ಹಾಂಗ್‌ಕಾಂಗ್ ಬ್ಯಾಂಕ್ ೯. ಮರ್ಕ್ಯಾರ್ಡ್ ೧೦. ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ೧೧. ಬ್ಯಾಂಕ್ ಆಫ್ ಅಮೆರಿಕಾ ೧೨. ಅಮೆರಿಕನ್ ಎಕ್ಸ್‌ಪ್ರೆಸ್ ೧೩. ವಿಜಯಾ ಬ್ಯಾಂಕ್ ೧೪. ವೈಶ್ಯ ಬ್ಯಾಂಕ್ ೧೫. ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ೧೬. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ೧೭. ಬ್ಯಾಂಕ್ ಆಫ್ ಮಹಾರಾಷ್ಟ್ರ ೧೮. ಒರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ೧೯. ಪಂಜಾಬ್ ಅಂಡ್ ಸಿಂಧ್ ಬ್ಯಾಂಕ್

ನೀಡಿದ್ದರೂ ಎಲ್ಲ ಸ್ವೀಕಾರಾರ್ಹವಾದವು. ಬ್ಯಾಂಕ್ ಆಫ್ ಅಮೆರಿಕಾದ ಪ್ರತಿಸ್ಪರ್ಧಿಗಳು ಸೇರಿ ಸ್ಥಾಪಿಸಿದ 'ಇಂಟರ್‌ಬ್ಯಾಂಕ್' ನಂತರ 'ಮಾಸ್ಟರ್ ಕಾರ್ಡ್' ಆಗಿ ಪರಿವರ್ತನೆಯಾಯಿತು.

ಏಷ್ಯಾ ಫೆಸಿಫಿಕ್ ದೇಶಗಳಲ್ಲಿ ಮೊದಲ ಕ್ರೆಡಿಟ್ ಕಾರ್ಡ್ ಸೃಷ್ಟಿಸಿದ ಕೀರ್ತಿ ಜಪಾನ್ ಕ್ರೆಡಿಟ್ ಬ್ಯೂರೋಗೆ ಸಲ್ಲುತ್ತದೆ. ಮೊದ ಮೊದಲು ಜಪಾನ್‌ಗೆ ಮಾತ್ರ ಸೀಮಿತವಾಗಿದ್ದ ಇದು ೧೯೮೧ರಲ್ಲಿ ಅಂತರಾಷ್ಟ್ರೀಯ ರಂಗವನ್ನು ಪ್ರವೇಶಿಸಿತು. ವೀಸಾ ಸಂಸ್ಥೆಯ ಸದಸ್ಯತ್ವ ಪಡೆದಿರುವ ಹಣಕಾಸು ಸಂಸ್ಥೆಗಳು ಸುಮಾರು ೧೮,೦೦೦ ಇದ್ದು, ಅಷ್ಟೇ ಸಂಖ್ಯೆಯ ಸಂಸ್ಥೆಗಳು ಮಾಸ್ಟರ್ ಕಾರ್ಡ್‌ನ ಸದಸ್ಯರಾಗಿವೆ. ವೀಸಾವು ಪ್ರಪಂಚದ ೨೪೭ ದೇಶಗಳಲ್ಲಿ, ಮಾಸ್ಟರ್ ಕಾರ್ಡ್ ಪ್ರಪಂಚದ ೨೨೦ ದೇಶಗಳಲ್ಲಿ ನೆಲೆಯೂರಿವೆ. ಪ್ರಪಂಚದಲ್ಲಿರುವ ೧೦೦ ಕೋಟಿ ಕಾರ್ಡುದಾರರಲ್ಲಿ ವೀಸಾ ಕಾರ್ಡಿನ ಪಾಲು ಶೇ.೫೪, ಮಾಸ್ಟರ್‌ಕಾರ್ಡು ಶೇ.೩೭, ಅಮೆಕ್ಸ್ ಶೇ.೪, ಜೆ.ಸಿ.ಬಿ. ಶೇ.೩.೫ ಪಾಲನ್ನು ಹೊಂದಿವೆ. ೧.೫ ಕೋಟಿ ವ್ಯಾಪಾರಿಗಳು ಕ್ರೆಡಿಟ್ ಕಾರ್ಡನ್ನು ಮನ್ನಿಸುತ್ತಿದ್ದು, ಇದರಿಂದಾಗಿ ಆಗುತ್ತಿರುವ ಜಾಗತಿಕ ವಹಿವಾಟು ಸುಮಾರು ೧,೬೫,೦೦೦ ಕೋಟಿ ಡಾಲರ್ (ಸುಮಾರು ೬೬ ಲಕ್ಷ ಕೋಟಿ ರೂಪಾಯಿ).

ಭಾರತದಲ್ಲಿ ಪ್ಲಾಸ್ಟಿಕ್ ಹಣ

ಭಾರತದಲ್ಲಿ ೧೯೬೯ರಲ್ಲಿ ಡೈನರ್ಸ್ ಕ್ಲಬ್ ಕ್ರೆಡಿಟ್ ಕಾರ್ಡನ್ನು ಪರಿಚಯಿಸಿತು. ಪ್ರವಾಸ ಮತ್ತು ಮನರಂಜನೆಗಾಗಿ ಬಳಸುತ್ತಿದ್ದ ಅದರ ಬಳಕೆ ಸೀಮಿತವಾದದ್ದಾಗಿತ್ತು. ಭಾರತಕ್ಕೆ ಎಲ್ಲರೂ ಬಳಸಬಹುದಾದ ಕಾರ್ಡನ್ನು ಪರಿಚಯಿಸಿದ ಶ್ರೇಯಸ್ಸು ಆಂಧ್ರ ಬ್ಯಾಂಕ್ ಹಾಗೂ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ ಸೇರಬೇಕು. ೧೯೮೧ರಲ್ಲಿ ಆಂಧ್ರಬ್ಯಾಂಕ್ ವೀಸಾದ ಸಹಯೋಗದೊಂದಿಗೆ, ಸೆಂಟ್ರಲ್ ಬ್ಯಾಂಕ್ ಮಾಸ್ಟರ್ ಕಾರ್ಡ್ ಸಹಯೋಗದೊಂದಿಗೆ ಕಾರ್ಡ್‌ಗಳ ವಿತರಣೆ ಪ್ರಾರಂಭಿಸಿದವು. ನಂತರ ಉಳಿದ ಬ್ಯಾಂಕುಗಳು ಅವುಗಳನ್ನು ಅನುಸರಿಸಿದವು. ಈ ಮಾರುಕಟ್ಟೆಯ ವೈಶಾಲ್ಯವನ್ನು ಮನಗಂಡ ಅನೇಕ ದೇಶೀ, ವಿದೇಶೀ ಬ್ಯಾಂಕುಗಳು ಕಣಕ್ಕೆ ಧುಮುಕಿದವು.

ರಿಸರ್ವ್ ಬ್ಯಾಂಕಿನ ವಿದೇಶೀ ವಿನಿಮಯ ನಿಬಂಧನೆಗಳಿಂದಾಗಿ, ನಮ್ಮ ಬ್ಯಾಂಕುಗಳ ಕಾರ್ಡುಗಳನ್ನು ನಮ್ಮ ದೇಶದಲ್ಲಿ ಹಾಗೂ ನೇಪಾಳದಲ್ಲಿ ಮಾತ್ರ ಬಳಸಬಹುದಿತ್ತು. ೧೯೮೭ರಲ್ಲಿ ಆಂಧ್ರಬ್ಯಾಂಕ್ ಮೊದಲ ಅಂತರಾಷ್ಟ್ರೀಯ ಕಾರ್ಡನ್ನು ಮಾರುಕಟ್ಟೆಗೆ ಬಿಟ್ಟಿತು. ಈಗ ಅನೇಕ ಬ್ಯಾಂಕು ಅಂತರಾಷ್ಟ್ರೀಯ ಕಾರ್ಡುಗಳನ್ನು ನೀಡುತ್ತಿವೆ. ಇಂದು ನಮ್ಮ ದೇಶದಲ್ಲಿ ಸುಮಾರು ೨೦ ಲಕ್ಷಕ್ಕೂ ಹೆಚ್ಚು ಕಾರ್ಡುದಾರರಿದ್ದು, ಸುಮಾರು ೯೫೦೦೦ ಸಂಸ್ಥೆಗಳು ಅವನ್ನು ಮನ್ನಿಸುತ್ತಿವೆ. ಕಾರ್ಡುಗಳಿಂದಾಗುವ ವಾರ್ಷಿಕ ವಹಿವಾಟು ರೂ. ೬೦೦೦ ಕೋಟಿ ಎಂದು ಅಂದಾಜು ಮಾಡಲಾಗಿದೆ.

ಇಂದು ಭಾರತದಲ್ಲಿ ೧೯ ಬ್ಯಾಂಕುಗಳು ಕಾರ್ಡ್‌ಗಳನ್ನು ನೀಡುತ್ತಿದ್ದು, ಅವುಗಳಲ್ಲಿ ೧೨ ವೀಸಾ ಹಾಗೂ ಮಾಸ್ಟರ್ ಕಾರ್ಡ್‌ನ ಸದಸ್ಯರುಗಳಾಗಿವೆ. ಇತ್ತೀಚೆಗೆ ಭಾರತೀಯ ಸ್ಟೇಟ್ ಬ್ಯಾಂಕ್ ಕಾರ್ಡ್ ವ್ಯವಹಾರ ನಡೆಸಲು ತಾನು ಒಂದು ಅಧೀನ ಸಂಸ್ಥೆಯನ್ನು ಪ್ರಾರಂಭಿಸುವುದಾಗಿ ಪ್ರಕಟಿಸಿದೆ. ಇದಲ್ಲದೆ ಖಾಸಗಿ ಬ್ಯಾಂಕುಗಳಾದ ಇಂಡಸ್ ಇಂಡ್ ಬ್ಯಾಂಕ್, ಎಚ್.ಡಿ.ಎಫ್.ಸಿ. ಬ್ಯಾಂಕ್ ಮುಂತಾದವು ತಾವೂ ಕಾರ್ಡ್ ಮಾರುಕಟ್ಟೆಗೆ ಇಳಿಯುವುದಾಗಿ ಹೇಳಿಕೊಂಡಿವೆ.

ಭಾರತದಲ್ಲಿ ಆರ್ಥಿಕ ಉದಾರೀಕರಣದಿಂದ, ಜನರಲ್ಲಿ ಸರಕು ಬಳಕೆಯ ಪ್ರವೃತ್ತಿ ಹೆಚ್ಚಿರುವುದರಿಂದ ಕ್ರೆಡಿಟ್ ಕಾರ್ಡ್‌ನ ಬಳಕೆ ಹೆಚ್ಚುತ್ತಿದೆ. ಈ ಶತಮಾನದ ಕೊನೆಗೆ ಕ್ರೆಡಿಟ್ ಕಾರ್ಡ್ ಬಳಕೆಯಲ್ಲಿ ಪ್ರಪಂಚದಲ್ಲಿ ಭಾರತವು ೨ನೇ ಸ್ಥಾನವನ್ನು ಪಡೆಯುವ ನಿರೀಕ್ಷೆ ಇದೆ. ನಮ್ಮ ದೇಶದಲ್ಲಿ ರೂ. ೧ ಲಕ್ಷಕ್ಕೂ ಹೆಚ್ಚು ಆದಾಯ ಇರುವವರ ಸಂಖ್ಯೆ ಸುಮಾರು ೪ ಕೋಟಿ ಇದೆ. ಅಲ್ಲದೆ ವಾಣಿಜ್ಯ ಸಂಸ್ಥೆಗಳು ಪ್ರವಾಸ ಹಾಗೂ ಮನೋರಂಜನೆಗೆ ಮಾಡುತ್ತಿರುವ ವಾರ್ಷಿಕ ಖರ್ಚಿನ ಪ್ರಮಾಣ ರೂ. ೭,೦೦೦ ಕೋಟಿ ಇದ್ದು, ಅದು ಈ ಶತಮಾನದ ಕೊನೆಗೆ ರೂ.೧೦,೫೦೦ ಕೋಟಿಯನ್ನು ದಾಟುವ ಅಂದಾಜಿದೆ. ಈಗ ಸುಮಾರು ೧೭೫ ಇರುವ ಸ್ವಯಂಚಾಲಿತ ಟೆಲ್ಲರ್ ಯಂತ್ರಗಳು (ಎ.ಟಿ.ಎಂ. ೫೦೦ ದಾಟುವ ನಿರೀಕ್ಷೆ ಇದೆ. ಕಾರ್ಡುಗಳನ್ನು ಎಟಿಎಂಗಳಲ್ಲಿ ಬಳಸಬಹುದಾದ್ದರಿಂದ, ಎಟಿಎಂ ಹೆಚ್ಚಿದಂತೆ, ಕಾರ್ಡುಗಳೂ ಹೆಚ್ಚುತ್ತವೆ.

ಪಾವತಿ ಪದ್ಧತಿ

೨೦-೨೫ ವರ್ಷಗಳ ಹಿಂದೆ ಎಲೆಕ್ಟ್ರಾನಿಕ್ ಪದ್ಧತಿಯು ಹೆಚ್ಚು ಬಳಕೆಯಲ್ಲಿಲ್ಲದ್ದರಿಂದ, ನಗದು ಹಣವು ಮುಖ್ಯವಾದ ಪಾವತಿ ಮಾರ್ಗವಾಗಿತ್ತು. ವ್ಯವಹಾರ ಬೆಳೆದಂತೆ ಬೇರೆ ಬೇರೆ ಪದ್ಧತಿಗಳು ಬೆಳೆದವು.

೧. ನಗದು (Cash) ಪಾವತಿ ಪದ್ಧತಿಯಲ್ಲಿ ಮೊದಲಿನ ಸ್ಥಾನ ನಗದಿನದ್ದು. ವ್ಯವಹಾರದ ಮೊತ್ತ ಹೆಚ್ಚಿದ್ದರೆ, ನಗದು ಸೂಕ್ತವಾದ ಪಾವತಿ ಪದ್ಧತಿಯಲ್ಲ.

೨. ಬ್ಯಾಂಕ್ ಚೆಕ್ಕುಗಳು : ಚೆಕ್ಕುಗಳದ್ದು ೨ನೇ ಸ್ಥಾನ. ದೊಡ್ಡ ಮೊತ್ತದ ಎಲ್ಲ ವ್ಯವಹಾರಗಳಲ್ಲಿ ಸೂಕ್ತ ಪದ್ಧತಿಯಿದು. ಇದರ ನಿರ್ವಹಣೆ ದುಬಾರಿಯಾಗುತ್ತದೆ. ಏಕೆಂದರೆ ಚೆಕ್‌ಗಳ ನಿರ್ವಹಣೆಗೆ ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆಯಿದೆ. ಇದರಿಂದಾಗಿ ಸರ್ಕಾರ ಎಲೆಕ್ಟ್ರಾನಿಕ್ ಪದ್ಧತಿಗಳನ್ನು ಉತ್ತೇಜಿಸುತ್ತಿದೆ.

೩. ಸ್ಥಿರ ಆದೇಶಗಳು (Standing Orders) ಇದರಲ್ಲಿ ಬ್ಯಾಂಕಿನ ಗ್ರಾಹಕರು ಬ್ಯಾಂಕಿಗೆ ನಿಗದಿತ ಹಣವನ್ನು ಗೊತ್ತುಪಡಿಸಿದ ಕಾಲದಲ್ಲಿ ನಿಯತವಾಗಿ ಪಾವತಿ ಮಾಡುವ ಇಲ್ಲವೇ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾಯಿಸಲು ಆದೇಶ ನೀಡುತ್ತಾರೆ. ಅದರಂತೆ ಬ್ಯಾಂಕು ಆದೇಶಿತ ಮೊತ್ತವನ್ನು ಪಾವತಿಸುತ್ತದೆ ಇಲ್ಲವೇ ವರ್ಗಾಯಿಸುತ್ತದೆ. ಗ್ರಾಹಕರಿಗೆ ಆದೇಶವನ್ನು ಬದಲಿಸುವ ಸ್ವಾತಂತ್ರವಿದೆ.

೪. ಗೈರೊ ಜಮ ವರ್ಗಾವಣೆ (Giro credit transfer) ಈ ಪದ್ಧತಿಯಲ್ಲಿ ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿಗೆ ಸ್ಥಳೀಯ ಕ್ಲಿಯರಿಂಗ್ ಪದ್ಧತಿಯ ಮೂಲಕ ವರ್ಗಾವಣೆ ಮಾಡುತ್ತಾರೆ. ಗ್ರಾಹಕ ಪ್ರತೀ ವ್ಯವಹಾರಕ್ಕೂ ಪ್ರತ್ಯೇಕ ಆದೇಶ ನೀಡಬೇಕಾಗುತ್ತದೆ.

೫. ನೇರ ಖರ್ಚು ಹಾಕುವುದು (Direct Debit) ಇದರಲ್ಲಿ ಬ್ಯಾಂಕ್ ಕರಾರು ಪ್ರಕಾರ

ಗ್ರಾಹಕರ ಖಾತೆಯಿಂದ ನಿಗದಿತ ಮೊತ್ತವನ್ನು ಬ್ಯಾಂಕ್‌ನ ಖಾತೆಗೆ ವರ್ಗಾಯಿಸುತ್ತಾರೆ.

೬. ಡೆಬಿಟ್ ಕಾರ್ಡ್ : ಈ ಪದ್ಧತಿಯಲ್ಲಿ ಕಾರ್ಡುದಾರರು ತಮ್ಮ ಖಾತೆಗೆ ಮೊದಲು ಹಣವನ್ನು ಜಮೆ ಮಾಡಬೇಕು. ಕಾರ್ಡನ್ನು ಬಳಸಿದಂತೆ, ಖಾತೆಗೆ ಖರ್ಚು ಬೀಳುತ್ತಾ ಹೋಗುತ್ತದೆ. ಖಾತೆಯಲ್ಲಿ ಹಣ ಮುಗಿದಾಗ ಮತ್ತೆ ಹಣ ತುಂಬಬೇಕಾಗುತ್ತದೆ.

ಕೆಲವು ಕಾರ್ಡುದಾರರು ತಮ್ಮ ಕ್ರೆಡಿಟ್ ಕಾರ್ಡನ್ನು ಮುಂದುವರಿದ ಡೆಬಿಟ್ ಕಾರ್ಡಿನಂತೆ ಬಳಸುತ್ತಾರೆ. ಹಣವನ್ನು ಪ್ರತಿ ತಿಂಗಳೂ ಚೆಕ್ ಮೂಲಕ ಇಲ್ಲವೇ ನಗದು ಹಣ ಕಟ್ಟಿ ಮುಗಿಸುತ್ತಾರೆ. ಇದಕ್ಕೆ ಬಡ್ಡಿ ಅಥವಾ ಸೇವಾ ಶುಲ್ಕ ತೆರಬೇಕಾಗಿಲ್ಲ.

೭. ಅಫಿನಿಟಿ ಕಾರ್ಡ್ (Affinity Card) ಈ ಕಾರ್ಡುಗಳನ್ನು ಕೆಲವು ನಿರ್ದಿಷ್ಟ ಗುಂಪಿನ ಇಲ್ಲವೇ ಸಂಸ್ಥೆಯ ಸದಸ್ಯರಿಗೆ ಕೊಡಲಾಗುತ್ತದೆ. ಬ್ಯಾಂಕ್ ಮತ್ತು ಸಂಸ್ಥೆಯ ನಡುವಣ ಸಹಕಾರದ ಫಲವೇ ಅಫಿನಿಟಿ ಕಾರ್ಡ್. ಇದರಲ್ಲಿ ಬೇರೆ ಕ್ರೆಡಿಟ್ ಕಾರ್ಡ್‌ಗಳಂತೆ ಪಾವತಿ ಮಾಡಬಹುದು. ಈ ಕಾರ್ಡುದಾರರಿಗೆ ಕೆಲವು ಖರೀದಿಗಳಲ್ಲಿ ಸೋಡಿ, ಉಚಿತ ಕೊಡುಗೆಯೇ ಮೊದಲಾದ ಪ್ರಯೋಜನ ಗಳಿವೆ.

೮. ಸ್ವಯಂಚಾಲಿತ ಟೆಲ್ಲರ್ ಯಂತ್ರಗಳ ಕಾರ್ಡ್‌ಗಳು

ಈ ಕಾರ್ಡುದಾರರು ಬೇರೆಯವರಂತೆ ಬ್ಯಾಂಕಿನಲ್ಲಿ ಸರದಿ ಸಾಲಿನಲ್ಲಿ ನಿಲ್ಲಬೇಕಾಗಿಲ್ಲ, ಅವರು ನೇರವಾಗಿ ಯಂತ್ರದ ಬಳಿ ಹೋಗಿ, ತಮ್ಮ ಕಾರ್ಡನ್ನು ಯಂತ್ರದಲ್ಲಿ ತೂರಿಸಿ, ತಮ್ಮ ಗುಪ್ತ ಸಂಖ್ಯೆಯನ್ನು (pin-ಪಿನ್) ಒತ್ತಿ, ತಮಗೆ ಅಗತ್ಯವಿದ್ದಷ್ಟು ಹಣವನ್ನು ಪಡೆಯಬಹುದು.

ವೀಸಾ ಹಾಗೂ ಮಾಸ್ಟರ್ ಕಾರ್ಡ್ ಬಳಸಿ, ಎಟಿಎಂನಲ್ಲಿ ಬಳಸಿ ಹಣ ಪಡೆಯುವ ಪದ್ಧತಿ ಈಗ ಜಾರಿಗೆ ಬಂದಿದೆ.

೯. ಬ್ಯಾಂಕ್ ಕಾರ್ಡ್ : ಇದು ಎಲ್ಲ ಬ್ಯಾಂಕುಗಳು ನೀಡುವ, ಈ ದೇಶದಲ್ಲಿ ಮಾತ್ರ ಬಳಸಬಹುದಾದ ಕಾರ್ಡ್‌ಗಳು.


೧೦. ಛಾರ್ಜ್ ಕಾರ್ಡ್(Charge Cards) : ಕ್ರೆಡಿಟ್ ಕಾರ್ಡನ್ನು ಹೋಲುವ ಇದರಲ್ಲಿ, ಪ್ರತಿ ತಿಂಗಳು ಬ್ಯಾಂಕಿನವರು ತಿಳಿಸಿದ ತಾರೀಖಿನೊಳಗೆ ಪ್ರತೀ ತಿಂಗಳ ಖರ್ಚಿನ ಮೊತ್ತವನ್ನು ಕಟ್ಟಬೇಕು. ವಾರ್ಷಿಕ ಶುಲ್ಕ ಕ್ರೆಡಿಟ್ ಕಾರ್ಡಿಗಿಂತ ಹೆಚ್ಚಾಗಿ ಇರುವ ಇದರಲ್ಲಿ ಕಂತುಗಳಲ್ಲಿ ಕಟ್ಟುವ ಸೌಲಭ್ಯ ಇರುವುದಿಲ್ಲ. ಈ ಕಾರ್ಡುದಾರರು ಖರ್ಚು ಮಾಡಬಹುದಾದ ಮೊತ್ತಕ್ಕೆ ಮಿತಿಯಿಲ್ಲ, ಆದರೆ ನಿಗದಿತ ಮೊತ್ತಕ್ಕಿಂತ ಹೆಚ್ಚಿನ ವ್ಯವಹಾರವನ್ನು ಬ್ಯಾಂಕು ಪ್ರಮಾಣೀಕರಿಸಬೇಕಾಗುತ್ತದೆ.

೧೧. ಕಾರ್ಪೊರೇಟ್/ಬಿಸಿನೆಸ್ ಕಾರ್ಡ್ : ಈ ಕಾರ್ಡುಗಳನ್ನು ಸಂಸ್ಥೆಗಳು ತಮ್ಮ ಉನ್ನತ ಮಟ್ಟದ ಉದ್ಯೋಗಿಗಳಿಗೆ ನೀಡುತ್ತವೆ. ಈ ಕಾರ್ಡಿನ ಮೇಲೆ ಸಂಸ್ಥೆಯ ಹೆಸರು ಹಾಗೂ ಕಾರ್ಡುದಾರರ ಹೆಸರನ್ನು ಉಬ್ಬಚ್ಚು ಮಾಡಿರುತ್ತಾರೆ. ಕಾರ್ಡುಗಳಿಗೆ ಬ್ಯಾಂಕ್ ವಿಧಿಸುವ ಶುಲ್ಕ ಹಾಗೂ ತಿಂಗಳ ಪಟ್ಟಿಯ ಮೊತ್ತವನ್ನು ಸಂಸ್ಥೆಗಳೇ ನೀಡುತ್ತವೆ.

ಕವನ

ಬಂಧಿ

ಉಪ್ಪರಿಗೆ ಉಪ್ಪರಿಗೆ
ಉಪ್ಪರಿಗೆ ಮೇಲೊಂದುಪ್ಪರಿಗೆ. ಲೆಕ್ಕ
ತಪ್ಪುತ್ತದೆ ಒಂದೇ ಎಣಿಕೆಗೆ
ಬೆಪ್ಪಾಗಿ ಕುಳಿತಿದ್ದಾಳೆ ಷೋಡಶಿ
ರೂಪಸಿ ಭಾರಿ ಮಹಲ ಮಧ್ಯ
ದುಪ್ಪರಿಗೆಯಲ್ಲಿ ಚಿತ್ತ ಚಿತ್ತಾಗಿಸಿಕೊಂಡು
ಮೇಲುಪ್ಪರಿಗೆಯ ಅಸ್ಪಷ್ಟ ಸದ್ದುಗಳಿಗೆ
ತಲ್ಲಣಗೊಳ್ಳುತ್ತಾಳೆ ಎದೆ ಹಿಡಿಯಾಗಿಸಿಕೊಂಡು
ನೆಲಕ್ಕೆ ಕಿವಿಕೊಟ್ಟು ಒಮ್ಮನದಿಂದ
ಆಲಿಸುತ್ತಾಳೆ ಹುದುಗಿಹೋದ ಸದ್ದು ಕುರಿತು
ಕೀಲಿಕೊಟ್ಟ ರೈಲು ಹಳಿತಪ್ಪದಂತೆ ಸಾಗುವ ಕೌತುಕಕ್ಕೆ
ಕೀಲಿಸಿ ಹೋಗುತ್ತಾಳೆ ಗದ್ದಕೆ ಕೈಕೊಟ್ಟು



ನಸುಕಿನಲ್ಲಿ ಅಂಗಳದ ತುಂಬ ರಂಗೋಲಿಯಿಡುವ
ಆಸೆಯ ಬಲವಂತದಿ ಹತ್ತಿಕ್ಕಿಕೊಳ್ಳುತ್ತಾಳೆ
ಬಿಸಿಲ ಪಸೆಯೂ ಕಾಣದೆ ಕುಡಿಯೊಡೆದ ಕುಂಡದ
ಸಸಿಗೆ ಹನಿಹನಿಯಾಗಿ ನೀರುಣಿಸುತ್ತಾಳೆ
ರಸ್ತೆಯ ಮೇಲೆ ಸಾಗುವ ನಾನಾ ಮುಖಗಳಲ್ಲಿ
ಮಾಸಿದ್ಯಾವುದೊ ಮುಖವರಸಿ ನಿಟ್ಟುಸಿರುಡುತ್ತಾಳೆ.

ಗುರಿತಪ್ಪಿ ಬಂದ ಗಾಳಿಪಟವ ತಡವಿ ಮುತ್ತಿಟ್ಟು
ಮರಳಿ ಗಾಳಿಗೆ ದೂಡಿ ಚಪ್ಪಾಳೆ ತಟ್ಟುತ್ತಾಳೆ
ದಾರ ಹಿಡಿವವರಿಲ್ಲದೆ ನೆಲ ಸೇರಿದ ಪಟದವಸ್ಥೆಗೆ ಪೆಚ್ಚಾಗಿ
ಅರಳಿದ ಹೂಕಿತ್ತು ಹಿಚುಕಿ ಚೆಲ್ಲುತ್ತಾಳೆ
ಇರುಳಿನಲವಳೂ ಅರಳುತ್ತಾಳೆ ಹೂವಾಗಿ
ಕೊರಗುತ್ತಾಳೆ ಅರ್ಪಣೆ ಒಮ್ಮುಖವಾದ ಕುರಿತು

ದಿನರಾತ್ರಿ ಕನಸಿನಲಿ ವಲಸೆ ಬಂದ ಹಕ್ಕಿ
ನೆನಪು ತಪ್ಪಿದ ತವರ ಹಾದಿಗೆ ಪರಿತಪಿಸುತ್ತದೆ
ಮನಕುದಿಗೆ ದನಿಯೊದಗದೆ ದಿನದಿನ ಇಷ್ಟಿಷ್ಟು ಸಾವು.
ಕನಸಿಗೆಚ್ಚತ್ತು ಕುಳಿತರೆ ಅಜ್ಜ ಹೇಳಿದ್ಯಾವುದೊ
ದಿನದ ಕಥೆಯಲ್ಲಿನ ಹುಣಸೆಮರಕೆ ನೇತುಬಿದ್ದ ಪಿಶಾಚಿಯ
ನೆನಪು ಬಂದು ಥರಥರ ನಡುಗುತ್ತಾಳೆ.

- ರಘುನಾಥ್ ಚ.ಹ.



೧೨. ಇಂಧನ ಕಾರ್ಡ್ (Fuel cards) : ದೊಡ್ಡ ಪೆಟ್ರೋಲ್ ಸ್ಟೇಷನ್‌ಗಳ ಸರಣಿಯಿರುವವರು ಈ ಕಾರ್ಡುಗಳನ್ನು ವಿತರಿಸುತ್ತಾರೆ. ದೂರ ಪ್ರಯಾಣಿಸುವ ವಾಹನ ಚಾಲಕರು ಈ ಕಾರ್ಡು ಇದ್ದರೆ ನಗದು ಹಣವನ್ನು ತೆಗೆದುಕೊಂಡು ಹೋಗುವ ಹಾಗೂ ಅದನ್ನು ಸುರಕ್ಷಿತವಾಗಿಡುವ ಶ್ರಮ ತಪ್ಪುತ್ತದೆ.

೧೩. ಮುಂಗಡ ಕಟ್ಟಿದ ಕಾರ್ಡ್ (Prepaid Card): ಎಲೆಕ್ಟ್ರಾನಿಕ್ ಚಿಪ್ ಹೊಂದಿರುವ ಈ ಕಾರ್ಡುಗಳಲ್ಲಿ ಮುಂಗಡ ಮೊತ್ತವನ್ನು ಪ್ರೋಗ್ರಾಮ್ ಮಾಡಿರುತ್ತಾರೆ. ಕಾರ್ಡ್ ಬಳಸಿದಂತೆ ಹಣದ ಮೊತ್ತ ಕಡಿಮೆಯಾಗುತ್ತದೆ. ಹಣದ ಪ್ರಮಾಣ ತುಂಬಾ ಕಡಿಮೆಯಾದಾಗ, ಮತ್ತೆ ಹಣವನ್ನು ತುಂಬಬೇಕು.

ಇವು ವಿದೇಶಗಳಲ್ಲಿ ತುಂಬಾ ಪ್ರಸಿದ್ಧವಾಗಿದ್ದು, ಈಗ ಭಾರತಕ್ಕೆ ಕಾಲಿಕ್ಕಿವೆ.

ಪಾವತಿ ಮಾರ್ಗ

ನಾವು ಕೊಳ್ಳುವ ಸಾಮಗ್ರಿಗಳಿಗೆ ಮತ್ತು ಸೇವೆಗಳಿಗೆ ಹಣ ಪಾವತಿಸುವುದು ಪ್ರತಿದಿನ ನಡೆಯುವ ಕ್ರಿಯೆ. ಹಣವನ್ನು ಬ್ಯಾಂಕ್‌ನಲ್ಲಿ ಇಲ್ಲವೇ ಸ್ನೇಹಿತರಿಂದ ಪಡೆಕೊಳ್ಳಬಹುದು. ಆದರೆ ಪರದೇಶದಲ್ಲಿ ಕೊಂಡ ವಸ್ತುಗಳಿಗೆ, ಪಡೆದ ಸೇವೆಗಳಿಗೆ ಅಲ್ಲಿನ ಕರೆನ್ಸಿಯಲ್ಲಿಯೇ ಪಾವತಿ ಮಾಡಬೇಕು. ಅಲ್ಲಿ ಇಲ್ಲಿನ ಚೆಕ್ಕುಗಳನ್ನು ಮನ್ನಿಸುವುದಿಲ್ಲ. ಮನ್ನಿಸಲು ಅಲ್ಲಿನವರು ನಮಗೆ ಗುರುತಿರಬೇಕು. ಇಂತಹ ಸಂದಿಗ್ಧ ಸಮಯದಲ್ಲಿ ಪ್ರವಾಸಿ ಚೆಕ್ ಹಾಗೂ ಕ್ರೆಡಿಟ್ ಕಾರ್ಡುಗಳು ಸಹಕಾರಿಯಾಗುತ್ತವೆ. ಪ್ರವಾಸಿ ಚೆಕ್‌ಗಳನ್ನು ಎಲ್ಲ ಕಡೆ ನಗದಿನಂತೆ ಬಳಸಬಹುದು. ಕ್ರೆಡಿಟ್ ಕಾರ್ಡ್‌ಗಳನ್ನು ದೊಡ್ಡ ಮೊತ್ತದ ಪಾವತಿಗಾಗಿ ಬಳಸಬಹುದು. ಸಣ್ಣ ಮೊತ್ತಗಳನ್ನು, ಚಿಲ್ಲರೆ ಬೇಕಿದ್ದಲ್ಲಿ ಪ್ರವಾಸಿ ಚೆಕ್‌ಗಳು ಸೂಕ್ತ.

ಕ್ರೆಡಿಟ್ ಕಾರ್ಡ್‌ಗಳು : ಖೋಟಾ ಮತ್ತು ಕಳ್ಳತನ ಹೇಗೆ ಮಾಡುತ್ತಾರೆ?

ಅಪರಾಧಗಳು ಅನಾದಿ ಕಾಲದಿಂದಲೂ ನಡೆದುಬಂದಂತವು. ಕದಿಯಲು ಯೋಗ್ಯವಾದ ವಸ್ತುಗಳಿದ್ದರೆ ಜನರು ಅವುಗಳನ್ನು ಕದ್ದಿದ್ದಾರೆ ಇಲ್ಲವೇ ಕದಿಯಲು ಪ್ರಯತ್ನಿಸಿದ್ದಾರೆ. ಹಣದ ಚಲಾವಣೆಯಿಲ್ಲದ ಕಾಲದಲ್ಲಿ ಸರಕುಗಳನ್ನು ಕದ್ದರೂ ಅವುಗಳನ್ನು ಮುಚ್ಚಿಡುವುದು ಕಷ್ಟವಾದ್ದರಿಂದ, ಕಳ್ಳತನವು ಮಿತಿಯಲ್ಲಿತ್ತು.

ಲೋಹದ ನಾಣ್ಯಗಳು ಚಲಾವಣೆಗೆ ಬಂದಂತೆ, ಅವುಗಳನ್ನು ಅಡಗಿಸಿಡುವುದು ಸುಲಭವಾದಾಗ, ಕಳ್ಳತನ ಹೆಚ್ಚಿತು. ಕಾಗದದ ನೋಟುಗಳು ಪ್ರಾರಂಭವಾದಂತೆ ಅವುಗಳನ್ನು ನಕಲು ಮಾಡುವುದು ಪ್ರಾರಂಭವಾಯಿತು. ಈಗಿನ ನೋಟುಗಳಲ್ಲಿ ಕ್ಲಿಷ್ಟವಾದ ಜಲಚಿಹ್ನೆಗಳು (Water mark) ರಕ್ಷಣೆ ಎಳೆಗಳು (security thread) ಇರುವುದರಿಂದ, ಅವುಗಳ ಮುದ್ರಣವು ಸೂಕ್ಷ್ಮವಾಗಿರುವುದರಿಂದ ಖೋಟಾ ನೋಟಿನ ಮುದ್ರಣ ಕಷ್ಟವಾಗುತ್ತಿದೆ.

ಬ್ಯಾಂಕ್ ಚೆಕ್ಕುಗಳ ಬಳಕೆ ಪ್ರಾರಂಭವಾದಂತೆ ಅವುಗಳ ದುರುಪಯೋಗ/ಕಳ್ಳತನ ಪ್ರಾರಂಭವಾಯಿತು. ಖಾತೆದಾರನ ಸಹಿ, ಕ್ರಮಸಂಖ್ಯೆಗಳನ್ನು ಪರಿಶೀಲಿಸಿದರೂ, ಅಪರಾಧಗಳ ಪ್ರಮಾಣ ಕಡಿಮೆಯಾಗಿಲ್ಲ. ಇದೇ ಮಾತು ಕ್ರೆಡಿಟ್ ಕಾರ್ಡಿಗೂ ಅನ್ವಯಿಸುತ್ತದೆ. ನಾಣ್ಯ ಮತ್ತು ನೋಟುಗಳಲ್ಲಿ ಯಾವುದೇ ವೈಯಕ್ತಿಕ ವಿವರಗಳಿರುವುದಿಲ್ಲ. ಅವುಗಳ ಕಳ್ಳತನ ಹಾಗೂ ಬಳಕೆ ಸುಲಭ. ಆದರೆ ವೈಯಕ್ತಿಕ ವಿವರಗಳಿರುವ ಕ್ರೆಡಿಟ್ ಕಾರ್ಡಿನ ದುರುಪಯೋಗವು ಬೇರೆ ತರದ್ದು. ಕಾರ್ಡಿನಲ್ಲಿ ಇರುವ ವಿವರಗಳು :

೧. ಕಾರ್ಡನ್ನು ನೀಡಿದ ಬ್ಯಾಂಕಿನ ಹೆಸರು
೨. ಕಾರ್ಡಿನ ಕ್ರಮ ಸಂಖ್ಯೆ
೩. ಕಾರ್ಡಿನ ಅವಧಿ ಮುಗಿಯುವ ತಾರೀಖು
೪. ಕಾರ್ಡುದಾರನ ಹೆಸರು
೫. ಮುಖ್ಯ ಕಾರ್ಡು ಸಂಸ್ಥೆಯ (ವೀಸಾ/ಮಾಸ್ಟರ್ ಇತ್ಯಾದಿ) ಮುದ್ರೆ
೬. ಹೊಲೋಗ್ರಾಮ್
೭. ಕಾರ್ಡಿನ ಹಿಂಭಾಗದಲ್ಲಿ ಕಾರ್ಡುದಾರನ ಸಹಿಗಾಗಿ ಒಂದು ಪಟ್ಟಿ
೮. ಕಾಂತತ್ವದ ಪಟ್ಟಿ

ಕ್ರೆಡಿಟ್ ಕಾರ್ಡಿನ ದುರುಪಯೋಗದಲ್ಲಿ ಕಾರ್ಡಿನ ಕಳವು ಅಥವಾ ಕಳೆದ ಕಾರ್ಡಿನ ಬಳಕೆ ಮೊದಲನೆಯದು. ಕಾರ್ಡನ್ನು ಕದ್ದಾತ ಬಳಸದಂತೆ ಮಾಡಲು ಬ್ಯಾಂಕುಗಳು ಅನೇಕ ಮುಂಜಾಗ್ರತೆಗಳನ್ನು ವಹಿಸುತ್ತವೆ. ಕಾರ್ಡುದಾರರನ್ನು ದುರುಪಯೋಗದಿಂದ ರಕ್ಷಿಸಲು ವಿಮೆ, ಕಾರ್ಡು ಕಳವಾದಲ್ಲಿ ಅದನ್ನು ಎಚ್ಚರಿಕೆ ಪತ್ರದಲ್ಲಿ ಪ್ರಕಟಿಸಿ ಅದನ್ನು ಅಂಗೀಕರಿಸದಂತೆ ನೋಡಿಕೊಳ್ಳಲಾಗುತ್ತದೆ. ಕಾರ್ಡಿನ ಮೇಲೆ ಕಾರ್ಡುದಾರನ ಛಾಯಾಚಿತ್ರವನ್ನು ಅಂಟಿಸುವ ಪದ್ಧತಿ ಈಗ ಜಾರಿಗೆ ಬಂದಿದೆ.

ಇನ್ನೊಂದು ವಿಧದ ದುರುಪಯೋಗ-ಖೋಟಾ ಕಾರ್ಡಿನ ಮುದ್ರಣ. ಇದರಿಂದಾದ ನಷ್ಟವನ್ನು ವ್ಯಾಪಾರಿಗಳ ಮೇಲೆ ಬೀಳದಂತೆ ನೋಡಿಕೊಳ್ಳಲಾಗುತ್ತದೆ. ಆದರೆ ಆತನೇ ಅದರಲ್ಲಿ ಭಾಗಿಯಾಗಿದ್ದರೆ, ಅಲಕ್ಷ್ಯದಿಂದ ವರ್ತಿಸಿದ್ದರೆ ನಷ್ಟವನ್ನು ಆತನೇ ಭರಿಸಬೇಕಾಗುತ್ತದೆ. ಕಾರ್ಡುದಾರನೇ ದುರ್ಬಳಕೆ ಮಾಡುತ್ತಿದ್ದಲ್ಲಿ, ಆತನ ಕಾರ್ಡನ್ನು ಹಿಂದಕ್ಕೆ ಪಡೆದು, ಬೇರೆಲ್ಲೂ ಆತನಿಗೆ ಕಾರ್ಡು ದೊರೆಯದಂತೆ ನೋಡಿಕೊಳ್ಳಲಾಗುತ್ತದೆ.

ಪ್ರತೀ ವ್ಯಾಪಾರಿಗೂ ಕಾರ್ಡ್ ಅಂಗೀಕರಿಸಲು ನಿಗದಿತ ಮೊತ್ತವನ್ನು ಗೊತ್ತುಪಡಿಸಿದ್ದು ಅದಕ್ಕಿಂತ ಹೆಚ್ಚಿನ ವ್ಯಾಪಾರ ಮಾಡಲು ಆತ ಬ್ಯಾಂಕಿನಿಂದ ಅನುಮತಿ ಪಡೆಯಬೇಕು. ಇದಕ್ಕಾಗಿ ದೊಡ್ಡ ನಗರಗಳಲ್ಲಿ ೨೪ ಗಂಟೆ ಕಾರ್ಯ ನಿರ್ವಹಿಸುವ ಕೇಂದ್ರಗಳನ್ನು ತೆರೆದಿರುತ್ತಾರೆ. ಇತ್ತೀಚೆಗೆ ಕಾರ್ಡು ನೀಡುವ ಬ್ಯಾಂಕುಗಳೊಡನೆ, ಅದನ್ನು ಅಂಗೀಕರಿಸುವ ದೊಡ್ಡ ವ್ಯಾಪಾರಿಯು ಸಂಪರ್ಕ ಹೊಂದಿರುತ್ತಾನೆ. ಈ ಇ.ಡಿ.ಸಿ. (ಎಲೆಕ್ಟ್ರಾನಿಕ್ ಡ್ರಾಫ್ಟ್ ಕ್ಯಾಪ್ಚರಿಂಗ್) ಯಂತ್ರಗಳು ಟೆಲಿಫೋನ್ ಮೂಲಕ ಕಾರ್ಡು ನೀಡಿದ ಬ್ಯಾಂಕ್‌ನೊಡನೆ ಸಂಪರ್ಕ ಹೊಂದಿರುತ್ತವೆ. ವ್ಯಾಪಾರಿಯು ಕಾರ್ಡನ್ನು ಯಂತ್ರದೊಳಗೆ ತೂರಿಸಿದಾಗ ಕಾರ್ಡಿನ ಹಿಂಭಾಗದಲ್ಲಿರುವ ಕಾಂತತ್ವದ ಪಟ್ಟಿಯಲ್ಲಿರುವ ಕಾರ್ಡುದಾರನ ವಿವರಗಳು ಕಂಪ್ಯೂಟರ್‌ಗೆ ವರ್ಗಾವಣೆಯಾಗುತ್ತದೆ. ಗಣಕ ಯಂತ್ರವೇನಾದರೂ ಕಾರ್ಡನ್ನು ಪ್ರಮಾಣೀಕರಿಸದಿದ್ದಲ್ಲಿ ಆ ಕಾರ್ಡ್ ಖೋಟಾ ಎಂದು ಅರ್ಥ.

ಇದಲ್ಲದೆ ಕಾಂತತ್ವದ ಪಟ್ಟಿಯಲ್ಲಿ ಕಾರ್ಡುದಾರನ ವಿವರಗಳೊಂದಿಗೆ ಗುಪ್ತ ಕೋಡ್ ನಂಬರ್ ಒಂದನ್ನು ದಾಖಲಿಸುವ ಪದ್ಧತಿಯು ಇತ್ತೀಚೆಗೆ ಪ್ರಾರಂಭವಾಗಿದೆ. ಈ ಗುಪ್ತ ಸಂಖ್ಯೆಗಳನ್ನು ಖೋಟಾ ಕಾರ್ಡ್‌ನಲ್ಲಿ ದಾಖಲಿಸುವುದು ಸಾಧ್ಯವಿಲ್ಲ. ಮೋಸ ಹಾಗೂ ದುರುಪಯೋಗದ ಬಗ್ಗೆ ವ್ಯಾಪಾರಿಗಳಿಗೆ ಸೂಕ್ತ ಶಿಕ್ಷಣ ಕೊಡುವುದು ಕೂಡಾ ಭರದಿಂದ ನಡೆದಿದೆ. ●

ನಮ್ಮೂರು

ಬಲಿ ಕೊಡುವ ಮಾರಿಕಾಂಬ ಜಾತ್ರೆ

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ವಾಣಿ ವಿಲಾಸ ಸಾಗರ ಭಾರತದ ಎಲ್ಲ ಹಳ್ಳಿಗಳ ಲಕ್ಷಣಗಳನ್ನು ಪಡೆದ ಹಳ್ಳಿ, ಅದನ್ನು ಕುರಿತು ಇಲ್ಲಿ ವಿವರಿಸಲಾರೆ. ಇಲ್ಲಿಯ ವಿಶೇಷವಾದ ಜಾತ್ರೆ ಬಗ್ಗೆ ನಾಲ್ಕು ಸಾಲು ಬರೆಯುತ್ತಿದ್ದೇನೆ. ತುಂಬಾ ಕುತೂಹಲದ ಜಾತ್ರೆ ಇದು. ಪ್ರತಿ ವರ್ಷದ ಮೇ ತಿಂಗಳಲ್ಲಿ ನಡೆಯುವ ಮಾರಿಕಾಂಬ ಜಾತ್ರೆಗೆ ಸುತ್ತಲಿನ ಹತ್ತಾರು ಹಳ್ಳಿ ಹಾಗೂ ಪಟ್ಟಣಗಳಿಂದ ಅಧಿಕ ಸಂಖ್ಯೆಯ ಜನರು ಬಂದು ನೆರೆಯುತ್ತಾರೆ. ಈ ಜಾತ್ರೆಯಲ್ಲಿ 'ಅಮ್ಮನವರಿಗೆ' ಬೇವಿನ ಸೀರೆ ಉಟ್ಟು ಆರತಿ ಹೊರುವ ಹರಕೆ ಹೊತ್ತು ಬರುವ ಭಕ್ತಾಧಿಗಳ ಪಡೆಯೇ ಇರುತ್ತದೆ. ಇದರಿಂದ ತಮಗೆ ಒಳ್ಳೆಯದಾಗುತ್ತದೆ ಎಂದು ಅವರ ನಂಬಿಕೆ. ಇನ್ನೂ ಕೆಲವರು ಮುಂದುವರಿದು ಕುರಿ, ಕೋಣ, ಮೇಕೆ ಹಾಗೂ ಕೋಳಿಗಳನ್ನು ಬಲಿಕೊಡುವ ಹರಕೆ ಹೊತ್ತವರೂ ಇರುತ್ತಾರೆ. ಕೋಣ 'ಬಲಿ' ಕೊಡುವ ರೀತಿ ವಿಚಿತ್ರವಾದುದು. ಬಲಿಯಾದ ತಕ್ಷಣ, ಕೋಣದ ತಲೆಯನ್ನು ಮತ್ತು ಮುಂದಿನ ಎರಡು ಕಾಲುಗಳನ್ನು ಬೇರ್ಪಡಿಸಿ ಆ ಕಾಲುಗಳನ್ನು ಬಾಯಲ್ಲಿ ತುರುಕಿ ಬೇವಿನ ಮರದ ಮೇಲೆ ಇಡುತ್ತಾರೆ. ಈ ಆಚರಣೆ ಬೆಳಗಾಗುವುದರೊಳಗೆ ಮುಗಿಯಬೇಕು!

ಈ ಹಳ್ಳಿಯ ವಿಶೇಷವೇನೆಂದರೆ, ಇಲ್ಲಿಯ 'ವೇದಾವತಿ ಅಣೆಕಟ್ಟು', ಇದು ಅಪಾರ ಪ್ರವಾಸಿಗರನ್ನು ಆಕರ್ಷಿಸುತ್ತದೆ. ನೀವೂ ಬನ್ನಿ.

– ಕೆ. ಮೂಡಲಗಿರಿ, ಗೌನಹಳ್ಳಿ

ಮಾಟಗಾರ ದಶಮಾಪುರ

ನನ್ನ ಊರಿನ ಹೆಸರು ದಶಮಾಪುರ. ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ಬರುವ ಒಂದು ಪ್ರಮುಖ ಗ್ರಾಮ. ಇದು ನಾಯಕ, ಲಿಂಗಾಯತ, ಕಮ್ಮಾರ, ಕೊರವ, ಹರಿಜನ, ವಡ್ಡರ, ಬ್ರಾಹ್ಮಣ ಜನಾಂಗದಿಂದ ಕೂಡಿದ್ದರೂ ಕುರುಬ ಮತ್ತು ಮುಸ್ಲಿಂ ಜನಾಂಗ ಇಲ್ಲದೊಂದು ವಿಶೇಷ. ಒಂದು ವೇಳೆ ದಾರವಾಢ, ರಾಯಚೂರು, ಚಿತ್ರದುರ್ಗ ಅಂದರೆ ಬಳ್ಳಾರಿಯ ಗಡಿ ಜಿಲ್ಲಾ ಪ್ರದೇಶಗಳಲ್ಲಿ ವೇಷಗಾರರು, ಮೋಡಿಗಾರರು, ಸುಡಗಾಡು ಸಿದ್ಧರು, ಕಂಡು ಬಂದರೆ ಅವರನ್ನು ಯಾವೂರೆಂದು ಕೇಳಿದರೆ 'ದಶಮಾಪುರವೆಂದೇ ಹೇಳುತ್ತಾರೆ. ಆದರೆ ಅವರ ಮೂಲ ನಮ್ಮೂರಾದರೂ ಅವರ ಮನೆ ನಮ್ಮೂರಲ್ಲಿ ಒಂದೂ ಇಲ್ಲ. ನಮ್ಮೂರು ಸುಮಾರು ೬೦೦ ಮನೆಗಳನ್ನೊಂದಿದ್ದು ಶಾಂತಿಯುತ ಗ್ರಾಮವಾಗಿದೆ. ನಮ್ಮ ಊರಿನ ಬಗ್ಗೆ ಸುತ್ತ ಮುತ್ತಲಿನ ಹಳ್ಳಿಯ ಜನರಿಗೆ ಒಂದು ರೀತಿಯ ಭಯಮಿಶ್ರಿತ ತಾತ್ಸರ ದೃಷ್ಟಿ ಏಕೆಂದರೆ ಮೊದಲಿಂದಲೂ ನಮ್ಮೂರು ಮಾಟಗಾರರಿಗೆ ಹೆಸರಾಗಿದೆಯಂತೆ. ಇವತ್ತಿಗೂ ಕೆಲವೊಂದು ಮಾಟಗಾರರಲ್ಲಿ ಪರ ಊರಿಂದ ಜನ ಬರುತ್ತಿರುತ್ತಾರೆ. ಆದರೆ ಮೊದಲಿನಷ್ಟು ಒರಿಜಿನಲ್ ಮಾಟಗಾರರು ಇವತ್ತಿಲ್ಲ ಎಂದೆಲ್ಲಾ ಮಾತಾಡುವುದನ್ನು ಕೇಳಿದ್ದೇನೆ. ನಮ್ಮೂರಿನ ಹುಡುಗರಿಗೆ ಬೇರೆ ಊರಿನವರು ಹೆಣ್ಣು ಕೊಡಲಿಕ್ಕೆ ಮುಂದೆ ಬರೊಲ್ಲ ಹಾಗೂ ಹೆಣ್ಣನ್ನು ಮಾಡಿಕೊಳ್ಳಲ್ಲ. ಅದಿರಲಿ ಯಾವೂರು ಎಂದು ಕೇಳಿದಾಗ ದಶಮಾಪುರ ಎಂದರೆ ಸಾಕು ದೂರ ಸರಿದು ನಿಲ್ಲುತ್ತಾರೆ. ನಮ್ಮೂರಿನವರನ್ನು ಮುಟ್ಟಿಸಿಕೊಳ್ಳೊಲ್ಲ. ಚಹ ಕುಡಿಯೊಲ್ಲ, ಮಾತಾಡೊಲ್ಲ. ಆದರೆ ಇತ್ತೀಚೆಗೆ ಅದೆಲ್ಲ ಕಡಿಮೆ ಎಂದೆಲ್ಲಾ ಹೇಳುತ್ತಾರೆ. ನಮ್ಮೂರಿನಲ್ಲಿ ಕಳುವಿಗೆ ಬಂದ ಕಳ್ಳ ಅಗಸಿ ಮೂಲಕ ಹಾದು ಹೋಗಲು ಸಾಧ್ಯವಿಲ್ಲ ಯಾಕೆಂದರೆ ಊರಿನ ಕರಿಗಲ್ಲು ಹಾಕುವಾಗ ಕಟ್ಟ ಮಾಡಿದ್ದಾರಂತೆ, ಒಂದು ವೇಳೆ ಬಂದರೆ ಅವನಿಗೆ ಕಣ್ಣು ಕಾಣದೆ ಅಲ್ಲಿಯೇ ಬೆಳಗಿನವರಿಗೂ ನಿಂತಿರುತ್ತಾನಂತೆ. ಇದು ಹಿರಿಯರು ನಮಗ್ಹೇಳುವ ವಿಚಾರ. ಕೃಷಿಯೇ ನಮ್ಮೂರಿನ ಮೂಲ ವೃತ್ತಿ. ಭಾರತಹುಣ್ಣಿಮೆ ದಿನ ಹೊಸಕೆರಿ ವೀರಣ್ಣನ ಜಾತ್ರೆ ಹಾಗೂ ಊರಿನ ದುರುಗಮ್ಮ, ಮಧ್ಯಾಹ್ನ ಮಾರೆಮ್ಮ, ರಂಗಪ್ಪ, ರಾಮಸ್ವಾಮಿ, ಜಾತ್ರೆಗಳು ನೋಡಲಿಕ್ಕೆ ತುಂಬಾ ಚೆಂದ. ಎಲ್ಲಾ ಜನಾಂಗದವರೂ ಸೇರಿಕೊಂಡು ಮಾಡುವ ದಸರಾ, ಉಗಾದಿ, ಹಬ್ಬವಂತೂ ತುಂಬಾ ರಮ್ಯ. ದಸರಾ ಬೇಟೆಗೆ ಹೋಗುವ ನಮ್ಮೂರಿನ ಬೇಡರ ದೃಶ್ಯ, ಕೈಯಲ್ಲಿ ಭರ್ಚಿ, ಬಂದೂಕು, ಕೊಡಲಿ, ಕೋಲು, ಮುಂದೆ ಹಲಗೆಗಳ ಝಣ, ಝಣ ನಾದ ನೆನೆಸಿಕೊಂಡರೆ ಛೇ! ಹುಚ್ಚೆದ್ದು ಕುಣಿಯಬೇಕೆನ್ನುತ್ತದೆ. ಬೇಟೆಗೆ ಹೋಗಿ ಬರುವವರನ್ನು ಊರಿನ ಸ್ತ್ರೀಯರು ಕಳಸ ಬೆಳಗಿ ಸ್ವಾಗತಿಸುವ ದೃಶ್ಯ ಹಾಗೂ ಉಗಾದಿ ಚಂದಿರ ದರ್ಶನ ಮಾಡಿ ನಮಸ್ಕಾರಗಳ ವಿನಿಮಯ, ದಸರಾ ಹಬ್ಬದ ಬನ್ನಿ ವಿನಿಮಯ ದೃಶ್ಯವಂತೂ ಇಂದಿಗೂ ಮರೆಯಲಾಗದು. ಒಟ್ಟಿನಲ್ಲಿ ಹಳ್ಳಿಯ ಮೌಲ್ಯಯುತ ಬದುಕು ನನ್ನೂರಿನಲ್ಲಿದೆ.

– ಡಿ.ಕೆ. ಮಾಳಿದಶಮಾಪುರ, ಕನಕಗಿರಿ

ಮಲೆನಾಡಿನ ಮೂಲೆಯ ಬಾಸೂರು

ಒಂದು ಕಡೆ ಕೆರೆ, ಮತ್ತೊಂದು ಕಡೆ ಗದ್ದೆ, ಇನ್ನೊಂದು ಕಡೆ ಕಾಡು, ಮತ್ತೊಂದು ಕಡೆ ತೋಟ ನಡುವೆ ಬಾಸೂರು. ಶಿವಮೊಗ್ಗೆಯ ಸೊರಬ ತಾಲ್ಲೂಕಿನ ಮಲೆನಾಡಿನ ಮೂಲೆಯಲ್ಲಿರುವ ಊರು. ಕೇವಲ ನೂರು ಮನೆಗಳ ಬಾಸೂರು ಬ್ರಾಹ್ಮಣ, ಲಿಂಗಾಯತ, ಈಡಿಗ, ಮುಸ್ಲಿಂ, ಹರಿಜನ ಮೊದಲಾದವರನ್ನು ತನ್ನೊಳಗೆ ಇಟ್ಟುಕೊಂಡಿರುವ ಊರು. ಅಡಿಕೆ, ತೆಂಗು, ಏಲಕ್ಕಿ, ಕಾಳುಮೆಣಸು, ಬಾಳೆ, ಭತ್ತ ಇಲ್ಲಿನ ಪ್ರಮುಖ ಬೆಳೆಗಳು. ಪ್ರತಿ ವರ್ಷ ೪೦ ಟನ್ ಅಡಿಕೆ ಬೆಳೆಯುತ್ತಾರೆ. ಈ ಎಲ್ಲ ತೋಟ ಗದ್ದೆಗಳಿಗೆ ಸುಮಾರು ನೂರು ಎಕರೆ ವಿಸ್ತಾರದಲ್ಲಿ ಹರಡಿರುವ ಕೆರೆ ನೀರು ಒದಗಿಸುತ್ತದೆ. ತಾಲ್ಲೂಕಿನ ದೊಡ್ಡಕೆರೆಯಾಗಿ ಪ್ರಸಿದ್ಧವಾಗಿರುವ ಈ ಕೆರೆ ಬಾಸೂರಿನ ಸೌಂದರ್ಯಕ್ಕೂ ಕಾರಣವಾಗಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಮಂತ ವರ್ಗದವರು ನೆಲೆಸಿರುವ ಊರಿನಲ್ಲಿ ಕಡು ಬಡವರೂ, ಕೂಲಿಕಾರರೂ ಇದ್ದಾರೆ. ಶೇಕಡಾ ೯೦ರಷ್ಟು ಅಕ್ಷರಸ್ಥರು ಈ ಊರಿನ ಹೆಗ್ಗಳಿಕೆ. ಬಸ್ಸಿನ ಸೌಕರ್ಯವಿಲ್ಲದಿದ್ದರೂ ಇತ್ತೀಚೆಗೆ ಎಸ್. ಟಿ. ಡಿ. ಫೋನಿನ ಸೌಲಭ್ಯ ಹೊಂದಿದೆ. ಇಷ್ಟೇ ಚಿಕ್ಕ ಹಳ್ಳಿಯಲ್ಲಿ ಚೌಡೇಶ್ವರಿ, ರಾಮೇಶ್ವರ ಮೊದಲಾದ ಐದು ದೇವಸ್ಥಾನಗಳಿರುವುದು ಕುತೂಹಲವಾಗಿದೆ. ಇಲ್ಲಿನ ಮುಖ್ಯ ಉದ್ಯೋಗ ಬೇಸಾಯ.

ಚಿಕ್ಕ ಚೊಕ್ಕ ಊರು ಬಾಸೂರು.

– ವೀರಭದ್ರಸ್ವಾಮಿ, ಬಾಸೂರು.

ಅಂಬಿಗರ ಚೌಡಯ್ಯ ಐಕ್ಯವಾದ ಊರು

ದಕ್ಷಿಣ ಕಾಶಿ ಚೌಡಯ್ಯದಾನಪುರ ಮೊದಲು ಶಿವಪುರ, ಪುರ ಮೊದಲಾದ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಿತ್ತು. ಈ ಊರಿನ ಪೂರ್ವದಿಂದ ಪಶ್ಚಿಮಕ್ಕೆ ತುಂಗಭದ್ರಾ ನದಿ ಹರಿಯುತ್ತದೆ. ತುಂಗೆಯ ದಡದ ಮೇಲೆ ವಚನಕಾರ ಅಂಬಿಗರ ಚೌಡಯ್ಯ ಐಕ್ಯನಾಗಿರುವನೆಂದು ಪ್ರಾಚೀನ ಕಾಲದ ಲಿಖಿತ ಸಾಕ್ಷಿ ಪುರಾವೆಗಳಿವೆ. ಜಕಣಾಚಾರ್ಯರು ಕಟ್ಟಿದ ಮುಕ್ತೇಶ್ವರ ದೇವಾಲಯವೂ ಇಲ್ಲಿದೆ. ಚೌಡಯ್ಯದಾನಪುರ ಹೀಗೆ ಸಹಜವಾಗಿ ಪುಣ್ಯ ಕ್ಷೇತ್ರವೆಂದು ಹೆಸರು ಗಳಿಸಿದೆ.

ನಮ್ಮೂರು

ರಾಣೇಬೆನ್ನೂರ ತಾಲ್ಲೂಕಿನ ಈ ಪುಟ್ಟ ಗ್ರಾಮದಲ್ಲಿ ಯುವಕರು ಮಾಡಿಕೊಂಡ 'ಗೆಳೆಯರ ಬಳಗ'ವಿದ್ದು, ಅನಕ್ಷರತೆ, ಪರಿಸರ ಮಾಲಿನ್ಯ ಮೊದಲಾದ ಸಾಮಾಜಿಕ ಸಂಗತಿಗಳ ಕುರಿತು ಕ್ರಿಯಾಶೀಲವಾಗಿದೆ. ಚಿತ್ರಶೇಖರ ಸ್ವಾಮೀಜಿಯವರ ಸಾಮಾಜಿಕ ಕಾಳಜಿ ಅವರ ಜನಪ್ರಿಯತೆಗೆ ಕಾರಣವಾಗಿದೆ.

ಬಂದು ನೋಡು ತುಂಗಾ ಕಡೆಗೆ
ತಂಗಿ ನೋಡು ಗುಡಿಯೊಳಗೆ
ಗುಡಿಯೊಳಗೆ ಶರಣರ ಅಡಿಯೊಳಗೆ

– ಮಾಲತೇಶ್ ವಿ. ಭತ್ತದ, ಚೌಡಯ್ಯದಾನಪುರ.

ಗುರುಮಠಕಲ್

ನನ್ನ ಊರು ಗುರುಮಠಕಲ್. ಇದು ಯಾದಗಿರಿ ತಾಲ್ಲೂಕಿನ ಎರಡನೇ ಪುರಸಭೆ ಹೊಂದಿರುವ ಪಟ್ಟಣ. ಸಮೀಪದ ಕಾಕಲವಾರ ಸಂಸ್ಥಾನಾಧೀಶರು ಇಲ್ಲಿ ಕೋಟೆಯೊಂದನ್ನು ಕಟ್ಟಿದ್ದಾರೆ. ಅದಲ್ಲದೆ ಚಿತ್ರದುರ್ಗದ ಶ್ರೀಗಳ ಅಪ್ಪಣೆಯ ಮೇರೆಗೆ ಗುರುವಿಗಾಗಿ ಕಲ್ಲಿನಲ್ಲಿ ದೊಡ್ಡ ಮಠವೊಂದನ್ನು ಕಟ್ಟಿಸಿದ ಕಾರಣ ಮೊದಲಿನ ''ನಾರಾಯಣಪುರ' ಎಂಬ ಹೆಸರು ಹೋಗಿ ಗುರುಮಠಕಲ್ ಎಂಬ ಹೆಸರು ಬಂತು. ಇಲ್ಲಿ ಸರಕಾರ ಹಾಲೆಂಡ್ ದೇಶದ ನೆರವಿನಿಂದ ೧೫೦ ಮನೆಗಳ ನೇಕಾರರ ಒಂದು ಬಡಾವಣೆಯನ್ನು ನಿರ್ಮಿಸಿದೆ. ನಮ್ಮ ಊರಿಂದ ಸುಮಾರು ೩ ಕೀ.ಮೀ. ದೂರದಲ್ಲಿ ನಜರಾಪುರ ಹಳ್ಳಿಯ ಹತ್ತಿರ ಜಲಪಾತವೊಂದಿದ್ದು, ೬೦-೭೦ ಅಡಿಗಳಿಂದ ನೀರು ಕೆಳಕ್ಕೆ ಧುಮ್ಮಿಕ್ಕುತ್ತದೆ. ಮಳೆಗಾಲದಲ್ಲಿ ರಭಸವಾಗಿ ಬೀಳುವ ನೀರಿನಿಂದಾಗಿ ಈ ಜಲಪಾತ 'ಧಬಧಭೆ' ಎಂದೇ ಹೆಸರು ಪಡೆದಿದೆ. ಕೋಟೆಯೊಳಗಿದ್ದ ತೋಪನ್ನ ಬಸ್ ನಿಲ್ದಾಣದ ಮುಂದೆ ಕಟ್ಟೆಯನ್ನು ಕಟ್ಟಿ, ಅದರ ಮೇಲೆ ಇಡಲಾಗಿದೆ. ಕೋಟೆ ಮೇಲೇರಿ ನೋಡಿದರೆ ಊರಿನ ಮನೋಹರವಾದ ದೃಶ್ಯ ಎದುರಾಗುತ್ತದೆ.

– ಜಯತೀರ್ಥ ಶರ್ಮಾ, ಗುರುಮಠಕಲ್.

ಸಾಲುಂಚಿ ಮರ

ನನ್ನೂರು ಇದಲ್ಲ. ಆದರೆ ಈ ಊರಿನ ಬಗ್ಗೆ ನನಗೇಕೊ ಪ್ರೀತಿ. ನನ್ನೂರಾದ ಯರಡೋಣದಿಂದ ೩ ಕಿ.ಮೀ. ದೂರದ ಈ ಮರ್ಲಾನಹಳ್ಳಿ ಅಥವಾ ಸಾಲುಂಚಿಮರ ಗಂಗಾವತಿಯಿಂದ ರಾಯಚೂರಿಗೆ ಹೋಗುವ ಮುಖ್ಯ ರಸ್ತೆಯಲ್ಲಿದೆ.

'ಸಾಲುಂಚಿ' ಎಂದರೆ ಸಾಲು ಹುಣಿಸೆಮರ ಎಂದರ್ಥ. ಮರ್ಲಾನಹಳ್ಳಿ ಎಂದರೂ ಮರಗಳ ಲೈನ್ (ಇಂಗ್ಲಿಷಿನಿಂದ ಬಂದಿರಬಹುದು?) ಹಳ್ಳಿ ಎಂದೇ. ಹಿಂದೆ ಹುಣಸೆ ಮರಗಳ ಸಾಲೇ ಇಲ್ಲಿದ್ದವು. ಈಗ ಕಡಿಮೆಯಾಗುತ್ತಿವೆ. ಅರ್ಥ ಪೂರ್ಣವಾದ ಹೆಸರಿನ ಈ ಹಳ್ಳಿಯ ಜನ ಶ್ರಮ ಜೀವಿಗಳು. ಹೊಲಸು ರಾಜಕೀಯದಿಂದ ದೂರವಿರುವ ಈ ಊರಿನವರು ಅನ್ಯೋನ್ಯವಾಗಿ ಬಾಳುತ್ತಿದ್ದಾರೆ. ಮರ್ಯಾದೆಯಿಂದ ದುಡಿದು ತಿಂದು ನೆಮ್ಮದಿಯಿಂದಿರಲು ಈ ಊರಿನ ಹಾಗೆ ಬೇರೊಂದಿಲ್ಲ. ಈ ಊರಿನ ಸೌಂದರ್ಯಕ್ಕೆ ಕಾರಣವಾಗಿರುವ ಮರಗಳನ್ನು ನಾಶ ಮಾಡದಂತೆ ನೋಡಿಕೊಳ್ಳುವುದು ಅಲ್ಲಿನ ವಾಸಿಗಳೆಲ್ಲರ ಕರ್ತವ್ಯವಾಗಿದೆ.

– ಎಚ್. ಜಗದೀಶ್

ಕುಂದಾಪುರ

ನೀವು ಬಸ್ಸಿಳಿದಾಗ 'ಹೋಯ್ ನಮಸ್ಕಾರ ಏನ್ ಮತ್ ವಿಷ್ಯ ಹುಷಾರಿದ್ರ್ಯೇ' ಎಂದು ನಿಮ್ಮನ್ನು ಸ್ವಾಗತಿಸಿದವರು ವಿಚಾರಿಸಿದರು ಅನ್ನಿ, ಆಗ ನೀವು ಕುಂದಾಪುರದಲ್ಲಿ ಇದ್ದೀರಿ ಎಂದು ಅರ್ಥ. ಮೀನುಗಾರಿಕೆ, ಬೇಸಾಯ, ತೆಂಗಿನ ಮರದಿಂದ ಸೇಂದಿ ತೆಗೆಯುವುದು-ಇವು ಇಲ್ಲಿಯ ಪ್ರಮುಖ ಕಸುಬುಗಳು. ಜಾತ್ಯಾಧರಿತ ಉದ್ಯೋಗಿಗಳೂ, ಸ್ವಯಂ ಉದ್ಯೋಗಿಗಳೂ ಇದ್ದಾರೆ. ತಲೆಗೊಂದು ರಕ್ಷಾ ಕವಚ ಹಾಕಿಕೊಂಡು (ಹಾಳೆ) ಮೈಗೆ ಪ್ಲಾಸ್ಟಿಕ್ ಹೊದ್ದುಕೊಂಡು ಜಡಿಮಳೆಯಲ್ಲಿ ನಗುನಗುತ್ತಾ ನೋವನ್ನು ಮರೆತು ನೆಟ್ಟಿ ನೆಡುವ ದೃಶ್ಯ, ಮತ್ತೊಂದು ಕಡೆ ತಲೆಗೆ ಕಂಬಳಿ ಹೊದ್ದು ಅದೇ ಮಳೆಯಲ್ಲಿ ಉಳುವ ಯೋಗಿ. ಇದನ್ನೆಲ್ಲಾ ನೋಡುವುದೇ ಒಂದು ಆನಂದ. ಪುರುಷರು ಲುಂಗಿ, ಅಂಗಿಯನ್ನು ತೊಟ್ಟು ಮೇಲೊಂದು ಶಾಲು ಹಾಕಿಕೊಳ್ಳುವುದು ಸಾಮಾನ್ಯ. ಸ್ತ್ರೀಯರದು ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಉಡುಗೆ. ಹದಿಹರಯದವರು ಇಂದಿನ ಆಧುನಿಕ ಗಾಳಿಗೆ, ಬಿಸಿಲಿಗೆ, ಬೆಳಕಿಗೆ ಕಾತರ ಪಡುವರು. ಯಾರಿಗಾದರೂ ಆರೋಗ್ಯ ಕೆಟ್ಟರೆ ದೇವರಿಗೆ 'ಹಣ್ಣು ಕಾಯಿ ಅರ್ಪಿಸುತ್ತೇವೆ' ಎಂದು ಮೊದಲು ಹರಕೆ ಹೊತ್ತೇ ನಂತರ ಆಸ್ಪತ್ರೆಗೆ ಹೋಗವಷ್ಟು ದೇವರಲ್ಲಿ ನಂಬಿಕೆ. ತಾವು ನಂಬಿದ ದೇವರ ಮೇಳದ ಯಕ್ಷಗಾನ ಆಡಿಸುವುದು ಸಾಮಾನ್ಯ. ಗೆಂಡ ಸೇವೆ, ಬೇವು ಕಟ್ಟುವುದು, ತುಲಾಭಾರ ಮೊದಲಾದ ಹರಕೆ ರೂಪಗಳೂ ಉಂಟು. ಯಕ್ಷಗಾನ ಇಲ್ಲಿಯ ಪ್ರಮುಖ ಮನರಂಜನೆ. ಕಾರಂತರು ಇಷ್ಟೊತ್ತು ಯಕ್ಷಗಾನವಾಡಿ ಕುಣಿದು 'ಎಲ್ಲಿಗೊ ಹೋಗಿ ಬರುತ್ತೇನೆಂದು' ಹೋದವರ ದಾರಿ ಕಾಯುತ್ತಿರುವಂತೆ ಕಾರಂತರ ಮೇಲಿನ ಪ್ರೀತಿ. ಅನ್ನ, ಹುಳಿ, ಪಲ್ಯ ಊಟಕ್ಕಾದರೆ ಇಡ್ಲಿ, ದೋಸೆ ಉಪಹಾರಕ್ಕೆ. ಮಾಂಸಹಾರಿಗಳಿಗೆ ಮೀನು.

ಕುಂದಾಪುರಕ್ಕೆ ಕೊಂಕಣ ರೈಲು ಬರುತ್ತಿದೆ. ಏನೇನೊ ಹೊತ್ತು. ನಿಸರ್ಗದ ಮಗುವಿಗೆ ಯಾಕೊ ಆತಂಕ!

ಬಿಚ್ಚಿದಷ್ಟು ತೆರೆದುಕೊಳ್ಳುವ ಕುಂದಾಪುರ.

– ಲಕ್ಷ್ಮಣ ಎ. ಬಾಳಿಮಕ್ಕಿ

ಬೀದರ

ಇಲ್ಲಿನಷ್ಟು ಔಷಧಿ ಗುಣವುಳ್ಳ ನೀರು ಬೇರೆಲ್ಲೂ ಸಿಗೊಲ್ಲ ಅಂದರೆ ಆಶ್ಚರ್ಯವಾಗಬಹುದು. ಬೀದರ ಎಂಬ ಹೆಸರು ಶಾಸನದ ಪ್ರಕಾರ 'ಬಿದರೂರ'ನಿಂದ ಬಂದಿದೆ. ಶೇಕಡ ೭೬ರಷ್ಟು ಜನ ವ್ಯವಸಾಯದ ಅವಲಂಬಿಗಳು. ಜೋಳ, ಗೋಧಿ, ಸಜ್ಜೆ, ಹತ್ತಿ, ಕಬ್ಬು, ತೊಗರಿ ಜಿಲ್ಲೆಯ ಪ್ರಮುಖ ಬೆಳೆಗಳು.

ಮಾಂಜರಿ, ಮುಳ್ಳುವರಿ ಎಂಬ ಉಪ ನದಿಗಳು ಹಾಗೂ ಮಾಣಿಕನಗರ, ಚೌಕಿ, ಮಧುರ, ಹಳ್ಳಿಖೇಡ್ ನಾಲೆಗಳು ಇಲ್ಲಿನ ನೀರಾವರಿ ಮೂಲಗಳು. 'ಬಿದರಿ ಕಲೆ' ಬೀದರನ ವಿಶಿಷ್ಟ ಕಲೆ. ಬೀದರ ಸಿಖ್ಖರ ಪ್ರಮುಖ ಸ್ಥಳವಾಗಿದೆ. ಬಸವಕಲ್ಯಾಣ ವಚನಕಾರರನ್ನು ನೆನಪಿಸುತ್ತದೆ. ಇಲ್ಲಿಯ ಭಾಷೆ ಪ್ರತ್ಯೇಕ ಉಪಭಾಷೆಯಾಗುವಷ್ಟು ವಿಶಿಷ್ಟವಾಗಿದೆ.

ಐದು ತಾಲ್ಲೂಕುಗಳ ಬೀದರ ಅನೇಕ ಕೋಟೆ ಮತ್ತು ವಾಸ್ತು ಶಿಲ್ಪಕ್ಕೆ

ನಮ್ಮೂರು

ಹೆಸರಾದ ಜಿಲ್ಲೆ. ಇಲ್ಲಿ ವರ್ಷವಿಡೀ ಜಾತ್ರೆ ಉರುಸುಗಳು ನಡೆಯುತ್ತಲೇ ಇರುತ್ತವೆ. ೧೯೪೮ರ ವರೆಗೂ ಹೈದ್ರಾಬಾದ್‌ನ ನಿಜಾಮನ ಆಳ್ವಿಕೆಯಲ್ಲಿದ್ದ ಬೀದರ ಏಕೀಕರಣದ ಸಂದರ್ಭದಲ್ಲಿ ವಿಶಾಲ ಕರ್ನಾಟಕಕ್ಕೆ ಸೇರಿತು.

- ಕಲ್ಲೇಶ್ ಕುಂಬಾರ

ಮಾಸೂರು

ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನಲ್ಲಿ ಬರುವ ತ್ರಿಪದಿ ಕವಿ ಸರ್ವಜ್ಞ ಬೆಳೆದ ಊರು. ೧೬ನೇ ಶತಮಾನದಲ್ಲಿದ್ದ ಸರ್ವಜ್ಞ ತನ್ನ ತ್ರಿಪದಿಗಳಲ್ಲಿ ಹೇಳದ ವಿಷಯಗಳಿಲ್ಲ. ಮದಗರ ಕೆಂಚಮ್ಮ ಎಂಬ ಹೆಣ್ಣು ಊರಿನ ಹಿತಕ್ಕಾಗಿ ಬಲಿಯಾದ 'ಕೆರೆಗೆ ಹಾರ' ದಂತಹ ಕಥೆಯೂ ಈ ಊರಿನ ಐತಿಹ್ಯದೊಂದಿಗೆ ಬೆಸದುಕೊಂಡಿದೆ. ಕೆಂಚಮ್ಮ ಮದಗದ ಕೆರೆಯ ಒಳಗೆ ಇರುವ ಗುಡಿಯಲ್ಲಿ ಇಂದಿಗೂ ಸಜೀವವಾಗಿ ಇರುವುದಾಗಿ ಜನ ನಂಬುತ್ತಾರೆ. ಮಾಸೂರಿನ ಪಶ್ಚಿಮಕ್ಕೆ ಕುಮದ್ವತಿ ನದಿ ದಂಡೆಯ ಮೇಲೆ ಮೂಕಪ್ಪ ಶಿವಯೋಗಿಗಳ ಗದ್ದುಗೆ ಇದೆ. ಇದೊಂದು ಯಾತ್ರ ಸ್ಥಳವಾಗಿದೆ. ಮಾಸೂರಿನ ದುರ್ಗಾದೇವಿಯ ಜಾತ್ರೆ ಮೂರು ವರ್ಷಗಳಿಗೊಮ್ಮೆ ನಡೆಯುತ್ತದೆ. ಮದಗದ ಕೆರೆಯ ಮೇಲೆ ಇರುವ ಗುಡ್ಡದಲ್ಲಿ ಒಂದು ಕಲ್ಲಿನ ಕೋಟೆ ಇದ್ದು, ಒಳಗೆ ಮುಸ್ಲಿಂ ಗೋರಿಯಿದೆ. ಇದನ್ನು ಆದಿಲ್‌ಶಾಹ ಕಟ್ಟಿರುವನೆಂದು ಹೇಳುತ್ತಾರೆ. ಕೋಟೆಯ ಕೆಳಗೆ ಮದಗದ ಕೆಂಚಮ್ಮನ ದೇವಾಲಯವಿದೆ.

- ಮೋಹನ ಡಿ.ಡಿ. ಮಾಸೂರು.

ಕೃಷ್ಣಾ ತೀರದ ಧನ್ನೂರು

ನೂತನವಾಗಿ ರಚಿತವಾಗಿರುವ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಪುಟ್ಟಗ್ರಾಮ ಧನ್ನೂರು. ಇಲ್ಲಿ ಕೃಷ್ಣೆಗೆ ಕಟ್ಟಿದ ಬೃಹತ್ ಸೇತುವೆ ಇದೆ. ನಮ್ಮ ಕಡೆ 'ಕೃಷಿಕರನ್ನು ಮೇಯ್ದ ಯೋಜನೆ' ಎಂದೇ ಕರೆಯಲಾಗುವ 'ಕೃಷ್ಣಾ ಮೇಲ್ದಂಡೆ ಯೋಜನೆ'ಯ ಫಲ ಪಡೆದವರಿಗಿಂತ ಜಮೀನು ಕಳೆದುಕೊಂಡು ನೆಲ ತಪ್ಪಿದವರೇ ಹೆಚ್ಚು. ೧೪ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರಿಂದ ಮುಂಬಯಿ, ಮದ್ರಾಸಗಳ ನಡುವೆ ಭೂಮಾರ್ಗದ ಅಂಚೆ ವ್ಯವಸ್ಥೆ ಶುರುವಾದಾಗ ಮುಂಬಯಿ, ಮದ್ರಾಸ್‌ಗಳ ಟಪಾಲುಗಳು ಧನ್ನೂರಿನಲ್ಲೇ ವಿನಿಮಯವಾಗುತ್ತಿದ್ದವು. ಆಗಿನ ಪೋಸ್ಟ್ ಮಾಸ್ಟರ್ ಆಗಿದ್ದ ತಿರುಚನಾಪಳ್ಳಿಯ ಕೃಷ್ಣಾ ಪಿಳ್ಳೆಯನ್ನು ಆತನ ಶ್ರದ್ಧೆ, ಪ್ರಾಮಾಣಿಕತೆ, ಸಾಮಾಜಿಕ ಚಟುವಟಿಕೆಗಳನ್ನು ಊರು ಈಗಲೂ ನೆನಪು ಮಾಡುತ್ತದೆ. ೧೯೮೨ರಲ್ಲಿಯೇ 'ಧನೇಶ್ವರ ವಾಚನಾಲಯ', ೧೯೧೮ರಲ್ಲಿ 'ಗ್ರಾಮ ಸೇವಾ ಸಹಕಾರಿ' ಸಂಘ ಪಡೆದ ಊರು ಇದು. ಧನೇಶ್ವರ ಪ್ರಸಾದ ನಿಲಯ ಸುತ್ತ ಮುತ್ತ ಹೆಸರು ಮಾಡಿದೆ. ಸ್ವತಂತ್ರ ಪೂರ್ವದಲ್ಲಿ ನನ್ನಜ್ಜ ಕನ್ನಡ ಪತ್ರಿಕೆ ತರಿಸಿಕೊಳ್ಳುತ್ತಿದ್ದರಂತೆ. ಸ್ವತಂತ್ರ ಸಂಗ್ರಾಮದ ಬಿಸಿ ಧನ್ನೂರಿಗೆ ತಟ್ಟದಿದ್ದರೂ ೧೯೩೬ರಲ್ಲಿ ರಾಜೇಂದ್ರ ಪ್ರಸಾದರು ಬೆಳಗಾವಿಯಿಂದ ಪುಣೆಗೆ ಹೋಗುವ ಮಾರ್ಗದಲ್ಲಿ ಇಲ್ಲಿ ಸ್ವಲ್ಪ ತಂಗಿದ್ದು ಹಿರಿಯರು ಮರೆತಿಲ್ಲ. ಗ್ರಾಮೀಣ ಬ್ಯಾಂಕ್, ಕನ್ನಡ ಸಂಘ ರಚನಾತ್ಮಕ ಕೆಲಸ ಮಾಡುತ್ತಿವೆ.

- ಸಿದ್ದಬಸಪ್ಪ ಜಿ. ರಾಂಪೂರ

ಎಲ್ಲಿ ಹೋದವು ಆ ದಿನಗಳು?

ಪದ್ಮಾ ಶ್ರೀರಾಮ

ಕಳೆದ ವರ್ಷ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ಹೃದಯ ಚಿಕಿತ್ಸೆಗೊಳಗ್ಹಾಗಿದ್ದ ನನ್ನ ಪರಿಚಿತ ಯುವಕರೊಬ್ಬರನ್ನು ನೋಡಲು ಹೋಗಿದ್ದೆ. ಅವರಿದ್ದ ವಾರ್ಡಿನಲ್ಲಿ ಹೃದಯ ಚಿಕಿತ್ಸೆ ಮಾಡಿಸಿಕೊಂಡವರು, ಇನ್ನೂ ಆಪರೇಷನ್‌ಗೆ ಒಳಗಾಗಬೇಕಾದ ಪೇಷಂಟುಗಳು ಒಂದೇ ಸಂಸಾರದ ಸದಸ್ಯರಂತೆ ಅಲ್ಲಿದ್ದರು. ನಾನು ನೋಡಬಂದಿದ್ದ ಯುವಕನೊಡನೆ ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದಾಗ ಸುಮಾರು ಹತ್ತು ವರ್ಷಗಳ ಹುಡುಗಿ ಅಲ್ಲಿಗೆ ಬಂದಳು. ಅವಳನ್ನೇ ಬೊಟ್ಟು ಮಾಡಿ ತೋರಿಸಿದ ಯುವಕ 'ನೋಡಿ, ಇನ್ನು ಒಂದೆರಡು ದಿನಗಳಲ್ಲಿ ಈ ಹುಡುಗಿಗೂ ಹೃದಯ ಶಸ್ತ್ರ ಚಿಕಿತ್ಸೆ ಆಗಲಿದೆ, ಎಂದು ಹೇಳಿದ.

ಹುಡುಗಿ ಅಡ್ಡಾಡಿಕೊಂಡು ಮುಂದೆ ಹೋಗಿ ಬಿಟ್ಟರೂ ಅವಳ ಮುಖ ನನ್ನ ಹೃದಯದಲ್ಲಿ ನೆಲಸಿಬಿಟ್ಟಿತು. ಯೋಚನೆಗಳು ಮುತ್ತಿಗೆ ಹಾಕಿದವು. ಇಷ್ಟು ಚಿಕ್ಕ ಮಗುವಿನ ಎದೆಪಂಜರವನ್ನು ಸೀಳಬೇಕೆ? ಇಷ್ಟು ಪುಟ್ಟ ಹೃದಯದಲ್ಲಿ ನ್ಯೂನತೆಯೇ ಎಂಬೊಂದು ವಿಷಾದ ನನ್ನನ್ನು ಆವರಿಸಿದರೂ, ಒಡನೆಯೇ ಇಂದಿನ ವೈದ್ಯಕೀಯ ಪ್ರಪಂಚದ ಮಹತ್ತರ ಸಾಧನೆಗಳ ಸಾಧ್ಯತೆಗಳಿಂದ ಆಶ್ಚರ್ಯಚಕಿತಳೂ ಆದೆ. ಈಗಾದರೆ ವೈದ್ಯಕೀಯ ಜ್ಞಾನ, ಸೌಲ್ಯಭಗಳಿಂದ ಹುಡುಗಿ ಉಳಿಯುತ್ತಾಳೆ. ಆದರೆ ಹೃದಯವೆನ್ನುವ ಅಂಗವೊಂದಿದೆ ಎಂಬುದನ್ನು ಗುಂಡಿಗೆ ಬಡಿತ ಮಾತ್ರದಿಂದ ತಿಳಿದಿದ್ದಿ ನನ್ನ ಬಾಲ್ಯಕಾಲದಲ್ಲಾಗಿದ್ದರೆ ಏನಿತ್ತು ಮದ್ದು?

ಮನಸ್ಸು ಕೀಲಿ ಕೊಟ್ಟಂತೆ ನೆನಪಿನಾಳಕ್ಕೆ ಇಳಿಯಿತು. ಅಲ್ಲಿ ನಾನು ಬಾಲ್ಯದ ಅಂಗಳದಲ್ಲಿದ್ದೆ.

ಹಲವು ದಶಕಗಳ ಹಿಂದಿನ ನನ್ನ ಬಾಲ್ಯ ಕಾಲದಲ್ಲಿ ಮಕ್ಕಳನ್ನು ಕಾಡಿಸುತ್ತಿದ್ದ ಬಾಧೆಗಳು, ಅವುಗಳ ಉಪಶಮನ ಎಷ್ಟೊ ಮನೆ ಮದ್ದುಗಳಲ್ಲೇ ಪರಿಹಾರವಾಗಿಬಿಡುತ್ತಿತ್ತು. ಮಿತಿಮೀರಿದ ಕಾಯಿಲೆ ಬಂದರೆ ಮಾತ್ರ ರಿಟರ್ನ್ ಟಿಕೆಟ್ ಇರುತ್ತಿರಲಿಲ್ಲ ಅಷ್ಟೆ. ಮಕ್ಕಳಿಂದ ಮುದುಕರವರೆಗೆ ಆಂಟಿಬಯಾಟಿಕ್‌ಗಳೇ ರಾಮಬಾಣವಾಗಿರುವ ಇಂದಿನ ದಿನಗಳಲ್ಲಿ ಕ್ಷಣಕಾಲ ಯೋಚಿಸಿದರೆ ನಮ್ಮ ಬಾಲ್ಯದಲ್ಲಿ ಮಕ್ಕಳ ಸಣ್ಣಪುಟ್ಟ ಆರೋಗ್ಯಕ್ಕೆ ಸಂಬಂಧಪಟ್ಟ ತೊಂದರೆಗಳು, ಸಾಧಾರಣ ಜ್ವರಗಳಿಗೆ ಕೊಡುತ್ತಿದ್ದ ಔಷಧಗಳು ಅದೆಷ್ಟು ಸರಳವಾಗಿದ್ದವು. ಎಷ್ಟೋ ವೇಳೆ ಅಂದಿನ ಚಿಕಿತ್ಸೆಗಳು ಮಾಯಾಮಂತ್ರಗಳಂತೆ ಇದ್ದವು. ಈಗ ನೆನಸಿಕೊಂಡರೆ ನಗೆ ಉಕ್ಕುತ್ತದೆ. ನಮ್ಮದು ಹಾಗಿರಲಿ, ನಮ್ಮ ಅಜ್ಜ ಅಜ್ಜಿಯರು ತಾವು ಸೇವಿಸಿದ್ದ ಮದ್ದುಗಳ ಬಗ್ಗೆ ಹೇಳಿದ್ದನ್ನು ನೆನೆದು ಈಗಿನ ಔಷದೋಪಚಾರಗಳೊಡನೆ ಹೋಲಿಕೆ ಮಾಡಿದಾಗ ಅಂದಿನ ಮದ್ದುಗಳು, ಅವುಗಳ ಪ್ರಯೋಗ ಒಂಥರಾ ಒರಟು, ವಿಚಿತ್ರ ಎನ್ನಿಸಿದರೂ ಅವುಗಳ ಗುಣಕಾರಿ ಪರಿಣಾಮಗಳು ಮಾತ್ರ ನಮ್ಮನ್ನು ಆಶ್ಚರ್ಯದಿಂದ ಅವಾಕ್ಕಾಗಿಸದೆ ಬಿಡುವುದಿಲ್ಲ.

> ದಿನದ ಯಾವುದೇ ಹೊತ್ತಿನಲ್ಲಿ
> ಟಿ.ವಿ. ಹಾಕಿ. ಒಂದಿಲ್ಲೊಂದು
> ಜಾಹೀರಾತು ನಿಮಗೆ
> ಏನಾದರೊಂದು ಆದೇಶವನ್ನು
> ಕೊಡುತ್ತಲೇ ಇರುತ್ತದೆ.
> ತಲೆನೋವಿಗೆ ಇದೇ ಬಾಮ್
> ಉಪಯೋಗಿಸಿ, ಇದೇ ಮಾತ್ರೆ ನುಂಗಿ
> ಹಸನ್ಮುಖಿಗಳಾಗಿ, ಕೆಮ್ಮಿಗೆ ಸಿರಪ್,
> ಗಂಟಲಿನ ಕಿಚ್‌ಕಿಚ್‌ಗೆ ಮತ್ತೊಂದು!

'ಅಂದು-ಇಂದು' ಎಂದು ಯಾವುದೇ ವಿಷಯವನ್ನು ತೆಗೆದುಕೊಂಡರೂ ಇಂದಿನ ಎಲ್ಲ ಸೌಲಭ್ಯಗಳನ್ನು ತಾನು ಅನುಭವಿಸುತ್ತಿದ್ದರೂ ಈ ಮನವೆಂಬ ಮರ್ಕಟ ತಾನೆಂದೋ ಸವಿದ ಸವಿಯನ್ನು ನೆನೆದು ಬಾಯಿ ಚಪ್ಪರಿಸುತ್ತದೆ. ಆದರಿಂದ ಬಾಲ್ಯವನ್ನು ನೆನೆಯುವುದು ನನಗೆ ಅನಿವಾರ್ಯ. ಈ ಕನವರಿಕೆಯನ್ನು ಮಕ್ಕಳಾಟದಿಂದ ಪ್ರಾರಂಭಿಸೋಣ. ಮಗು ಆಟವಾಡುತ್ತ ಬಿದ್ದು ಪೆಟ್ಟು ಮಾಡಿಕೊಂಡು ಗಾಯವಾದರೆ, ಈಗ ತಡಮಾಡುವಂತಿಲ್ಲ. ತಕ್ಷಣ ವೈದ್ಯರಲ್ಲಿಗೆ ಓಡಬೇಕು, 'ಟೆಟ್‌ವ್ಯಾಕ್' ಇಂಜೆಕ್ಷನ್ ಕೊಡಿಸಲೇ ಬೇಕು. ಇಲ್ಲದಿದ್ದರೆ ಒಂದಲ್ಲಾ ಒಂದು ವೈರಸ್‌ನ ಪ್ರಾಣಾಂತಿಕ ಧಾಳಿಯನ್ನು ಎದುರಿಸಬೇಕಾಗುತ್ತದೆ. ಆದರೆ ನಮ್ಮ ಚಿಕ್ಕಂದಿನ ದಿನಗಳಲ್ಲಿ ನಾವು ಆಟಗಳ ಸಮಯದಲ್ಲಿ ಬಿದ್ದು ಮಂಡಿ ತರಚಿ ರಕ್ತ ಬರುವುದು, ಗಾಜು ತುಳಿದು ಗಾಯ ಮಾಡಿಕೊಳ್ಳುವುದು ಇತ್ಯಾದಿ ಬಾಲ್ಯದ ಉಪಟಳಗಳನ್ನು ಮೆತ್ತಗೆ ಮುಚ್ಚಿಹಾಕಲು ಪ್ರಯತ್ನಿಸುತ್ತಿದ್ದೆವು. ಅಕಸ್ಮಾತ್ ಹಿರಿಯರಿಗೆ ಗೊತ್ತಾದರೆ ಒಂದೆರಡು ಬೈಗಳದೊಡನೆ ಮನೆಯಲ್ಲಿದ್ದ ಟಿಂಕ್ಚರ್ ಅಯೋಡಿನ್ ಲೇಪನ ಅಥವಾ ಗಂಧಕದ ಪುಡಿ ಬೆರಸಿದ ವ್ಯಾಸಲೈನ್ ಹಚ್ಚಿ, ನವೆ ಕಿರಿಚಾಟದೊಡನೆ ಚಿಕಿತ್ಸೆ ಮುಗಿದು ಹೋಗುತ್ತಿತ್ತು, ಗಾಯ ವಾಸಿಯೂ ಆಗುತ್ತಿತ್ತು.

ದಿನದ ಯಾವುದೇ ಹೊತ್ತಿನಲ್ಲಿ ಟಿ.ವಿ. ಹಾಕಿ. ಒಂದಿಲ್ಲೊಂದು ಜಾಹೀರಾತು ನಿಮಗೆ ಏನಾದರೊಂದು ಆದೇಶವನ್ನು ಕೊಡುತ್ತಲೇ ಇರುತ್ತದೆ. ತಲೆನೋವಿಗೆ ಇದೇ ಬಾಮ್ ಉಪಯೋಗಿಸಿ, ಇದೇ ಮಾತ್ರೆ ನುಂಗಿ ಹಸನ್ಮುಖಿಗಳಾಗಿ, ಕೆಮ್ಮಿಗೆ ಸಿರಪ್, ಗಂಟಲಿನ ಕಿಚ್‌ಕಿಚ್‌ಗೆ ಮತ್ತೊಂದು! ಇಷ್ಟೆಲ್ಲಾ ಮದ್ದುಗಳ ಮಾಯಾಬಜಾರು ನಮ್ಮ ಪ್ರಪಂಚ! ಬಾಲ್ಯದಲ್ಲಿ ನಾನೆಂದೂ ಕೆಮ್ಮಿನ ಸಿರಪ್ ಕುಡಿದಿರಲಿಲ್ಲ. ಆದರೂ ಮನುಷ್ಯ ಮಾತ್ರಳಾದ ನಾನು ಒಮ್ಮೆ ಕೆಮ್ಮಿನ ದಾಳಿಗೀಡಾದೆ, ನಾಯಿಕೆಮ್ಮಿನಿಂದ 'ದೊಯ್ ದೊಯ್' ಎಂದು ಕೆಮ್ಮುತ್ತಾ ಡಾಕ್ಟರ್ ಕೊಟ್ಟ ಔಷಧಿ ಕುಡಿದು ಪುನಃ ಕೆಮ್ಮಿಕೊಂಡೇ ಇರುತ್ತಿದ್ದೆ. ಇದರ ಜೊತೆಗೆ ನಮ್ಮ ತಾಯಿಯ ಆಪ್ತಸಖಿ ಕಾಳಿ ಕೆಮ್ಮಿನಿಂದ ಪಾರಾಗುವ ರಕ್ಷೆಯಾಗಿ ಒಂದು ತಾಮ್ರದ ತಾಲಿಯನ್ನು 'ನಾಯಿ ತಾಲಿ' ಎಂದು ನನ್ನ ಕುತ್ತಿಗೆಗೆ ಕಟ್ಟಿದ್ದಳು. ಈ ಉಪಚಾರಗಳೇ ನನ್ನ ಕಾಲದ ಟ್ರಿಪಲ್ ಆಂಟಿಜೆನ್ ಔಷಧಿಗಿಂತ ಉಸಿರು ಕಟ್ಟುವಂತೆ ಕೆಮ್ಮುತ್ತಾ ತಾಲಿ ಸರಿಪಡಿಸಿಕೊಳ್ಳುತ್ತ ತಿರುಗುವುದೇ ದೊಡ್ಡಸ್ಥಿಕೆಯಾಗಿತ್ತು ನನಗೆ.

ನಮ್ಮ ಎಳೆತನದಲ್ಲಿ ಮಕ್ಕಳಿಗೆ ಸಾಮಾನ್ಯವಾದ ದಡಾರ ಬಂದಿತೆಂದಿಟ್ಟುಕೊಳ್ಳಿ. ಆಗ ರೋಗ ಚಿಕಿತ್ಸೆ ಏನಾಗಿತ್ತು ಗೊತ್ತೆ? ದಡಾರ ಬಂದರೆ ಸುಮ್ಮನೆ ಮಲಗಿಕೊ, ಕಾರ ತಿನ್ನಬೇಡ, ಮೊಸರನ್ನ ರಸಬಾಳೆ ತಿನ್ನು, ಮೈಮೇಲೆ ಎದ್ದಿರುವ ದಡಾರದ ಗುಳ್ಳೆಗಳು ತುರಿಸುವುದೆ? ಹಾಗಿದ್ದರೆ ಬೇವಿನ ಸೊಪ್ಪಿನಿಂದ ಮೈಮೇಲೆ ನೀವಳಸಿಕೊ, ದಡಾರ ತನ್ನ ಅವಧಿ ಕಳೆದು ಗುಣವಾದ ಮೇಲೆ ಬೇವಿನ ಸೊಪ್ಪು ಮತ್ತು ಅರಿಶಿನ ಅರೆದು ಮೈಗೆ ಲೇಪಿಸು, ಸ್ನಾನ ಮಾಡು! ಇಂತಹ ಅತ್ಯುತ್ತಮ ಔಷಧೀಯ ಗುಣಗಳ ಗಣಿಯಾದ ನಮ್ಮದೇ ಆದ ಬೇವಿನ ಸೊಪ್ಪಿನಿಂದ ಈಗ ಮೈ ನೀವಳಿಸಿಕೊಳ್ಳಬೇಕಾದರೆ

ಅಮೆರಿಕದ ಅಪ್ಪಣೆಗಾಗಿ ಕಾಯಬೇಕಾಗಿದೆ. ನಮ್ಮ ಈಗಿನ ಸ್ಥಿತಿಯಿಂದ ಪಂಪ ಮಹಾಕವಿಯ 'ಅಕ್ಕಿಗೊಟ್ಟು ಮೆಡಗೂಳ್ ಉಣ್ಣಂದಮಮ್ ಪೋಲದೆ' ಎಂಬ ಉಕ್ತಿ ನೆನಪಾಗುವುದಿಲ್ಲವೇ?

ಚಳಿಗಾಲದಿಂದ ಬೇಸಿಗೆಗೆ, ಬೇಸಿಗೆಯಿಂದ ಮಳೆಗಾಲಕ್ಕೆ ಹೀಗೆ ಋತುಮಾನ ಬದಲಾದರೆ ಸಾಕು. ಎಲ್ಲೆಲ್ಲೂ ಶೀತ ನೆಗಡಿ, ಹೈಫೀವರ್, ಸೀಸನ್ ಬದಲಾಯಿತು ನೋಡಿ! ಎಂಬ ಉದ್ಗಾರದೊಡನೆ ವೈದ್ಯರಲ್ಲಿಗೆ ಹೋಗುತ್ತೇವೆ. ಹೇಳಿಕೇಳಿ ಇದು ವೈರಸ್ ಜ್ವರದ ಸೀಸನ್, ಅದರಿಂದ ಮಾತ್ರೆ, ಕ್ಯಾಪ್ಸೂಲ್‌ಗಳು ಅವುಗಳ ಅಡ್ಡ ಪರಿಣಾಮವನ್ನೇ ತಹಬಂದಿಗೆ ತರಲು ಮಲ್ಟಿವಿಟಮಿನ್ ಮಾತ್ರೆ, ಟಾನಿಕ್, ಸಿರಪ್‌ಗಳ ಪಟ್ಟಿ ಸಿದ್ಧವಾಗುತ್ತದೆ. ಏನು ಇಷ್ಟೊಂದು ಔಷಧಿ ಮಾತ್ರೆಗಳ ಸೇವನೆಗೆ ಕಾರಣ ಈಗಿನ ಕಾಲದ ರೋಗಗಳ ಮಹಿಮೆ ಎಂದು ಸುಲಭವಾಗಿ ಕಾಲದ ಮೇಲೆ ದೋಷಾರೋಪಣೆ ಮಾಡಿಬಿಡುವುದೇ, ಹಿಂದೆಂದೂ ಯಾವ ರೋಗರುಜಿನಗಳು ಇರಲಿಲ್ಲವೇ ಎಂದು ಕೇಳುವಿರಾ? ಆಗಲೂ ಇತ್ತು. ಆದರೆ ಜ್ವರ, ಭೇದಿ, ಅಜೀರ್ಣ ಇತ್ಯಾದಿಗಳು ಅತ್ಯಲ್ಪ ಪ್ರಮಾಣದಲ್ಲಿ ಕಾಡಿಸಿದ್ದ ಬಾಧೆಗಳೆಂದು ಅವುಗಳಿಗೆ ನಾನು ಕೃತಜ್ಞಳಾಗಿರಬೇಕು. ನಾವು ಹುಡುಗುತನದಲ್ಲಿ ಗಂಟಲು ನೋವಾದಾಗ ಏನ್ಮಾಡುತ್ತಿದ್ದೆವು ಗೊತ್ತಾ? ಮನೆ ಡಾಕ್ಟರ್‌ರ ದವಾಖಾನೆಗೆ ಹೋಗಿ ನಾಲಗೆ ಹಿರಿದು ನಿಲ್ಲುತ್ತಿದ್ದೆವು! ಡಾಕ್ಟರ್ ಅಪ್ಪಣೆಯ ಮೇರೆಗೆ ಕಾಂಪೌಂಡರ್ ಹಂಚಿಕಡ್ಡಿಗೆ ಸುತ್ತಿದ್ದ ಹತ್ತಿಯನ್ನು ಒಂಥರಾ ಔಷಧಿಯಲ್ಲಿ ಅದ್ದಿ ಗಂಟಲಿಗೆ ಹಚ್ಚಿದರೆ ಗಂಟಲಲ್ಲಿ ಕಪ್ಪೆ ಹೊಕ್ಕಂತಾಗುತ್ತಿತ್ತು! ಗಂಟಲಲ್ಲಿ ಉರಿ, ಕಣ್ಣಲ್ಲಿ ನೀರು, ಬಾಯಿ ಮುಚ್ಚುವ ಹಾಗಿಲ್ಲ ತಲೆ ಅಲ್ಲಾಡಿಸುವ ಹಾಗಿಲ್ಲ. ಕಾಂಪೌಂಡರ್ ತಲೆ ಹಿಡಿದಿರುತ್ತಿದ್ದ. ಕೊನೆಗೆ ಸಿಹಿಕಾರದ ರುಚಿಯ ಆ ಔಷಧಿಯನ್ನು ನಾವು ಅರ್ಧನುಂಗಿ, ಅರ್ಧ ಉಗಿದ ಮೇಲೆ 'ಗಂಟಲು ಟಚ್' ಮಾಡಿ ಯಾಯ್ತು ಎಂದು ಕಾಂಪೌಂಡರ್ ನಮ್ಮನ್ನು ಬಿಡುಗಡೆ ಮಾಡುತ್ತಿದ್ದ. ಹೀಗೆ ಮೂರು ನಾಲ್ಕು ಸಲ 'ಗಂಟಲು ಟಚ್' ಆದರೆ ಸಾಕು, ಗಂಟಲು ನೋವು ಹೇಳ ಹೆಸರಿಲ್ಲದೆ ಪರಾರಿ!

ಆಸ್ಪತ್ರೆಗಳಲ್ಲಿ ದೊಡ್ಡ, ಚಿಕ್ಕ ಗಾಜಿನ ಬುದ್ದಲಿಗಳಲ್ಲಿ ತುಂಬಿರುತ್ತಿದ್ದ ಕೆಂಪು ಹಳದಿ, ಗುಲಾಬಿ ಬಣ್ಣದ ಸಿಹಿಕಹಿ ನೀರೌಷಧಿಗಳು ಅದೆಲ್ಲಿಗೆ ಮಾಯವಾಗಿ ಹೋದವು?

ವೇಷಭೂಷಣಗಳು, ಒಡವೆ ವಸ್ತ್ರಗಳು, ಆಹಾರ ವಿಹಾರಗಳು ಕಾಲಾನುಕ್ರಮದಲ್ಲಿ ಬದಲಾವಣೆಗೊಳ್ಳುವುದು ಯುಗಧರ್ಮ ಎಂದು ಕಾಣುತ್ತದೆ. ಕಾಲಚಕ್ರದ ಉರುಳಿನಲ್ಲಿ ಎಷ್ಟೋ ಹೇಳ ಹೆಸರಿಲ್ಲದೆ ಹೋಗಿಬಿಡಬಹುದು. ಇದೇ ಮಾತು ಕಾಯಿಲೆಗಳಿಗೂ ಅನ್ವಯಿಸುತ್ತದೋ ಏನೋ. ಏಕೆಂದರೆ ಈಚಿನ ದಿನಗಳಲ್ಲಿ ಯಾವ ಮಕ್ಕಳೂ ಕಣ್ಣು ನೋವಿನಿಂದ ಪೀಡಿತರಾಗಿರುವುದನ್ನು ಕಂಡೇ ಇಲ್ಲವಲ್ಲಾ! ಬಾಲ್ಯದಲ್ಲಿ ಮಕ್ಕಳಿಗೆ ತಗಲುವ ಕಣ್ಣು ನೋವನ್ನು ಅನುಭವಿಸುವುದೂ ತಮಾಷೆಯಾಗಿರುತ್ತಿತ್ತು. ಮಾವಿನ ಹಣ್ಣಿನ



ಕಾಲದಲ್ಲಿ ಕಣ್ಣು ನೋವು ತಗುಲಿದ ಮಕ್ಕಳಿಗೆ ಬೆಳಿಗ್ಗೆ ಎದ್ದಾಗ ಕಣ್ಣಿನಿಂದ ಜಿನುಗಿದ ಜಿಬರೆಯಿಂದ ಎರಡೂ ರೆಪ್ಪೆಗಳು ಗೋಂದು ಹಾಕಿ ಅಂಟಿಸಿದಂತೆ ಅಂಟಿಕೊಂಡು ಬಿಡುತ್ತಿದ್ದವು. ಆಗ ಹಿರಿಯರು ಬಿಸಿ ನೀರಿನಲ್ಲಿ ಮಕ್ಕಳ ಕಣ್ಣು ತೊಳೆದು ರೆಪ್ಪೆ ಬಿಡಿಸುತ್ತಿದ್ದರು. ರಾತ್ರಿ ಮಲಗುವಾಗ ಕಣ್ಣಿಗೆ ಎದೆ ಹಾಲು ಬಿಟ್ಟು, ಬಿಳಿನಾಮವನ್ನು ನೀರಿನಲ್ಲಿ ತೇಯ್ದು ರೆಪ್ಪೆ ಮೇಲೆ ಹಚ್ಚುತ್ತಿದ್ದರು. ಬೆಳಿಗ್ಗೆ ಏಳುವಾಗ ಜಿಬರೆಯಿಂದ ಕಣ್ಣು ಕಟ್ಟಿಕೊಂಡು ಕಣ್ಣು ಕಾಣದವರಂತೆ ಅರೆಗಣ್ಣು ಬಿಟ್ಟುಕೊಂಡು ತಡವರಿಸುತ್ತಾ, ಬೇಕೆಂದು ಅಂಬೆಗಾಲಿಟ್ಟುಕೊಂಡು ಅಮ್ಮ ಚಿಕ್ಕಮ್ಮಂದಿರ ಹತ್ತಿರ ಹೋಗಿ ಕಣ್ಣು ತೊಳೆಸಿಕೊಳ್ಳುವುದು ಎಂತಹ ಮೋಜಿನ ಆಟವಾಗಿತ್ತು ನಮಗೆ!

ಕಣ್ಣು ನೋವು ಎಂದಾಗ ನನ್ನ ಮುತ್ತಜ್ಜಿ ನೆನಪಿಗೆ ಬರುತ್ತಾರೆ. ಏಕೆಂದರೆ ಅವರೂ ಕಣ್ಣು ನೋವಿಗೆ ಔಷಧಿ ಕೊಡುತ್ತಿದ್ದವರೇ. ಅವರು ಕೊಡುತ್ತಿದ್ದುದು ಯಾವ ಘನ ಔಷಧ ಎಂದು ಕೊಂಡಿರುವಿರಿ? ನೀರು ಕಾಯಿಸುವ ಹಂಡೆಯ ತಳದಲ್ಲಿ ಬೆಂಕಿಯಿಂದ ಕಾಯ್ದುಕಾಯ್ದು ಕಟ್ಟಿಕೊಂಡಿರುತ್ತಿದ್ದ ಕಿಟ್ಟವೇ ಅವರು ಬಳಸುತ್ತಿದ್ದ ದಿವ್ಯೌಷಧ. ಹಂಡೆ ತಳದಿಂದ ಕೆರೆದ ಕಿಟ್ಟವನ್ನೇ ವಸ್ತ್ರಗಳಿತ ಮಾಡಿ ಇಟ್ಟುಕೊಂಡಿರುತ್ತಿದ್ದರು. ಕಣ್ಣು ನೋವಿನಿಂದ ಬಳಲುವ ವ್ಯಕ್ತಿ ಔಷಧಿಗಾಗಿ ತಾನೇ ಒಂದು ನಿಂಬೆಹಣ್ಣು ತರಬೇಕಿತ್ತು. ಅಜ್ಜಿ ನಿಂಬೆ ಹಣ್ಣನ್ನು ಕೊಯ್ದು ಹೋಳುಗಳಿಗೆ ಕಪ್ಪುಕಿಟ್ಟವನ್ನು ಉದುರಿಸಿ ಸೂಜಿಯಿಂದ ಚುಚ್ಚಿ ಕಿಟ್ಟವನ್ನು ಹೋಳಿನೊಳಕ್ಕೆ ಸೇರಿಸಿ ಕೊಡುತ್ತಿದ್ದರು. ನಿಂಬೆ

ಹೋಳುಗಳನ್ನು ತೆಳ್ಳನೆಯ ಬಿಳಿ ಬಟ್ಟೆಯಲ್ಲಿ ಸುತ್ತಿ ಕಣ್ಣಿಗೆ ಒತ್ತಿಕೊಂಡರೆ ಕಣ್ಣು ನೋವು ಮಂಗಮಾಯ! ವೈದ್ಯರ ಶುಲ್ಕ ಏನೂ ಇಲ್ಲ!

ಯಾವುದೋ ಸೊಪ್ಪಿನರಸ, ಸುಣ್ಣ, ಜೇನು ಇಂಥ ದಿನ ಬಳಕೆಯ ವಸ್ತುಗಳೇ ಗುಣಕಾರಿ ಔಷಧಗಳ ಆಗರ. ನಡೆದಾಡುವೆಡೆಗಳಲ್ಲಿ ಕಾಲಿಗೆ ತೊಡರಿಕೊಳ್ಳುತ್ತಿದ್ದ ಔಷಧೀಯ ಸಸ್ಯಗಳಾದ ನೆಲನಲ್ಲಿ, ತುಂಬೆ ಮುಂತಾದ ಸೊಪ್ಪುಸದೆಗಳನ್ನು ಈಗ ಅರಸಿಕೊಂಡು ಹೋಗಬೇಕು. ಹೀಗಾಗಲು ಕಾರಣವೇನು? ನಮ್ಮ ನೆಲ ಹೊಲಗಳೆಲ್ಲಾ ಮಾಯವಾಗಿ ನಗರಗಳು ತಲೆಯೆತ್ತುತ್ತಿವೆ. ಕೆರೆಕಟ್ಟೆಗಳು ಇಂಗಿ ಹೋಗಿ ಸೈಟುಗಳಾಗುತ್ತಿವೆ. ಜನಸಂಖ್ಯಾಸ್ಫೋಟ, ಪರಿಸರ ಮಾಲಿನ್ಯಗಳಿಂದಾ ಗುತ್ತಿರುವ ದುಷ್ಪರಿಣಾಮಗಳು ಹೇಳಲು ಅಸದಳ. ಈಗಿನ ಧಾವಂತರದ ಯುಗದಲ್ಲಿ ಇದ್ದುದನ್ನು ಕಳೆದುಕೊಂಡು ಯಾವುದನ್ನೊ ಹಿಡಿಯುವ ಪಡೆಯುವ ಆತುರ, ಉದ್ವೇಗ ನಮ್ಮದಾಗಿದೆ. ಇವೆಲ್ಲದರ ಪರಿಣಾಮ ಹೊಸ ಹೊಸ ವೇಷ ಧರಿಸಿದ ರೋಗರುಜಿನಗಳು.

ಕೆಲವು ಶಬ್ದಗಳು, ವಾಸನೆಗಳು ಮನದ ಮೂಲೆಯಲ್ಲಿ ಸುಪ್ತವಾಗಿದ್ದು ಯಾವುದೋ ಕ್ಷಣದಲ್ಲಿ ಚಕ್ಕನೆ ನೆನಪಿನ ಬುತ್ತಿಯನ್ನು ಬಿಚ್ಚಿ ಸವಿಯೂಟ ಉಣಿಸುವುದು ಎಲ್ಲರಿಗೂ ಅನುಭವವೇದ್ಯವಲ್ಲವೇ?

ಅಂತೆಯೇ ಒಂದು ನೆನಪು. ಮಧ್ಯಾಹ್ನ ಮೂರು ಗಂಟೆಯ ಸಮಯ. ಮನೆಯಲ್ಲಿ ದೊಡ್ಡವರು ಸಣ್ಣ ನಿದ್ದೆ ತೆಗೆಯುವ ಸಮಯ. ಆಗ ಮಕ್ಕಳು ಮನೆಯಲ್ಲಿ ಕಮಕ್ ಕಿಮೆಕ್ ಅನ್ನದೆ ಮೌನವಾಗಿರಬೇಕಾದ ಕಾಲ. ಅಂತ ಹೊತ್ತಿನಲ್ಲಿ ಗಿಡಗಳ ನಡುವೆ ಸಂಪಿಗೆ ಎಸಳನ್ನು ಆರಿಸುತ್ತಲೋ, ಚಿಟ್ಟೆ ಹಿಡಿಯಲು ಪ್ರಯತ್ನಿಸುತ್ತಲೋ ನಾನು ಸುತ್ತಾಡಿಕೊಂಡಿರುತ್ತಿದ್ದೆ. ಎಲ್ಲೆಲ್ಲೂ ನಿಶ್ಯಬ್ದ. ಕಾಗೆ ಸಹ 'ಕರ್' ಎನ್ನಲು ಮರೆತಿರುವಂತಹ ಮಟಮಟ ಮಧ್ಯಾಹ್ನ. ಇದ್ದಕಿದ್ದ ಹಾಗೆ ಹಿಂದಿನ ಬೀದಿಯಲ್ಲಿ 'ಉತ್ತದ್ ಉಳಾಯ್, ಉತ್ತದ್ ಉಳಾಯ್' ಎಂಬ ಲಯಬದ್ಧವಾದ ಕೂಗು ಹೊರಡುತ್ತಿತ್ತು. ಆ ಕೂಗು ನನ್ನ ಚಿಕ್ಕ ಹೃದಯದ ಬಡಿತ ಹೆಚ್ಚಿಸಿದರೂ ಕೂಗುವವನಿಗಾಗಿ ನಾನು ಗೇಟಿನ ಹತ್ತಿರ ಕಾದೇ ಇರುತ್ತಿದ್ದೆ. ಹೆಗಲ ಮೇಲೊಂದು ಪಿಕಾಸಿ ಏರಿಸಿ, ತೆಂಗಿನ ಕರಟದಲ್ಲಿ ಒಂದು ಬಗೆಯ ಹುಳುಗಳನ್ನು ಅವನು ಮುಚ್ಚಿ ಹಿಡಿದಿರುತ್ತಿದ್ದ. ಆ ಹುಳುಗಳನ್ನು ಅವನು ಹುತ್ತ ಅಗೆದು ತರುತ್ತಿದ್ದ. ನಾಲ್ಕಾಣೆಗೊಂದು ಹುಳ! ಅದನ್ನು ಬಾಳೆ ಹಣ್ಣಿನಲ್ಲಿ ಸೇರಿಸಿ ಅಶಕ್ತ ಮಕ್ಕಳಿಗೆ ತಿನ್ನಿಸಿದರೆ ಅವರು ದಷ್ಟಪುಷ್ಟರಾಗುತ್ತಾರೆಂಬ ನಂಬಿಕೆಯಿಂದ ಜನ ತಿನ್ನಿಸುತ್ತಿದ್ದರು. ಇದು ನಮ್ಮ ಕಾಲದ ಟಾನಿಕ್ಕು

ಇನ್ನು ಶಸ್ತ್ರ ಚಿಕಿತ್ಸೆಗಳ ಕಡೆ ಒಂದು ನೋಟ ಹಾಯಿಸೋಣ. ನಮ್ಮ ಆಧುನಿಕ ಚರಕ, ಸುಶ್ರುತರು ಅಡಿಯಿಂದ ಮುಡಿಯವರೆಗೆ ಯಾವ ಅಂಗಾಂಗಗಳನ್ನಾದರೂ ಸರಿ ಛೇದಿಸಿ, ಜೋಡಿಸಿ ಹಾಕುತ್ತಾರೆ. ಎದೆಯನ್ನು ಸೀಳಿ ಗುಂಡಿಗೆಗೆ ಕೈ ಹಾಕಬಲ್ಲರು, ರೋಗಗ್ರಸ್ತ ಮೂತ್ರಪಿಂಡವನ್ನೇ ಕಿತ್ತು ಇನ್ನೊಂದನ್ನೇ ಜೋಡಿಸಬಲ್ಲರು. ಈಗಿನ ದಿನಮಾನಗಳಲ್ಲಿ ಹುಟ್ಟುವ ಮಗು ದೇವರು ಕೊಡುವ ಅನಿರೀಕ್ಷಿತ ಉಡುಗೊರೆ ಅಲ್ಲ! ಮೊದಲೇ ಹುಟ್ಟುವ ಶಿಶು ಹೆಣ್ಣೊ, ಗಂಡೋ ತಿಳಿದುಕೊಳ್ಳಬಹುದು, ಬೇಕಾದರೆ ಇಟ್ಟುಕೊಳ್ಳಬಹುದು, ಬೇಡವೆನಿಸಿದರೆ ನಿವಾರಿಸಿಕೊಳ್ಳಬಹುದು. ಏನೆಲ್ಲಾ ಅದ್ಭುತಗಳು!

ಇಂತಹ ದಿಗ್ಭ್ರಮೆಗೊಳಿಸುವ ಸಂಶೋಧನೆಗಳ ಕಾಲದಲ್ಲಿ ಬದುಕುತ್ತಿರುವ ನನಗೆ ನನ್ನ ಅಜ್ಜಿಯ ಶಸ್ತ್ರ ಚಿಕಿತ್ಸೆಯೂ ಒಂದು ಅದ್ಭುತವೇ ಹೌದು. ಸುಮಾರು ತೊಂಬತ್ತು ವರ್ಷಗಳ ಹಿಂದಿನ ಮಾತು. ನಮ್ಮ ಅಜ್ಜಿ ಪುಟ್ಟ ಹುಡುಗಿಯಾಗಿದ್ದಾಗಿನ ಕಥೆ. ಅಜ್ಜಿ ಚಿಕ್ಕ ಹುಡುಗಿಯಾಗಿದ್ದಾಗ ಆಗಾಗ್ಗೆ ಗಂಟಲು ನೋವಿನಿಂದ ಬಳಲುತ್ತಿದ್ದರಂತೆ. ಒಮ್ಮೆ ಗಂಟಲು ನೋವು ತೀರಾ ಉಲ್ಬಣವಾದಾಗ ಶಸ್ತ್ರ ಚಿಕಿತ್ಸಾ ನಿಪ್ರಣಳಾದ ವೈದ್ಯೆ ಬಂದಳು. ಅವಳು ಎಡಗೈ ಹೆಬ್ಬೆರಳಿನ ಉಗುರನ್ನು ಚೂಪಾಗಿ ಉದ್ದ ಬೆಳೆಸಿಕೊಂಡಿದ್ದಳು. ಗಂಟಲು ನೋವಿನ ಹುಡುಗಿಯ ಬಾಯಿ ತೆರೆಸಿದರು. ವೈದ್ಯೆ ತನ್ನ ಎಡಗೈ ಹೆಬ್ಬೆರಳಿನ ಚೂಪಾದ ಉಗುರಿನಿಂದ ಗಂಟಲಿನ ಎರಡೂ ಪಾರ್ಶ್ವದ ಗೆಡ್ಡೆಗಳಿಗೆ ಬಲವಾಗಿ ತಿವಿದಳು. ರಕ್ತ ಬಳಬಳ ಸುರಿಯಿತು. ವೈದ್ಯೆ ಮೆಣಸು, ಬೆಳ್ಳುಳ್ಳಿ, ಮೆಣಸಿನಕಾಯಿ ಸೇರಿಸಿ ಅರೆದ ಕಾರವನ್ನು ಗಂಟಲಿಗೆ ಹಚ್ಚಿದಳು. ಮೂರುದಿನಗಳವರೆಗೆ ನಮ್ಮ ಅಜ್ಜಿಯ ಡಯಟ್ ಅದೇ ಮೆಣಸು ಬೆಳ್ಳುಳ್ಳಿ ಕಾರ ಮತ್ತು ರಾಗಿ ರೊಟ್ಟಿ! ಇಂಥ ರಣವೈದ್ಯ ಮಾಡಿಸಿಕೊಂಡ ಅಜ್ಜಿ ತುಂಬ ಬಾಳನ್ನೇ ಬಾಳಿದರು. ಇಂದಿನ ಇನ್‌ಫೆಕ್ಷನ್ ಯುಗದಲ್ಲಿ ಇಂತಹ ಅಡ್ಡಾದಿಡ್ಡಿ ರೂಕ್ಷ ಚಿಕಿತ್ಸೆಯನ್ನು ಯಾರೂ ಊಹಿಸಲಾರರು.

ಅಂದು ಇಂದು, ಒಳ್ಳೆಯದು ಕೆಟ್ಟದು.. ಹೀಗೆ ಹೋಲಿಸುತ್ತಾ ಹೋಗುವುದು ಮಾನವ ಮನಸ್ಸಿನ ಸಹಜಕ್ರಿಯೆ, ನೆನಯುತ್ತಾ ಹೋದಂತೆ ಇದೊಂದು ಮುಗಿಯದ ಕಥೆ. ಅದರಿಂದ ಓದುಗರ ಮನದಲ್ಲಿ ಅವರವರ ಸವಿಬುತ್ತಿ ಬಿಚ್ಚಿಕೊಳ್ಳಲಿ ಎಂದುಕೊಳ್ಳುತ್ತ ಇಲ್ಲಿಗೆ ವಿಶ್ರಮಿಸುತ್ತೇನೆ.

●

ಕ್ವಿಜ್-೯ ಬಹುಮಾನ ವಿಜೇತರು

ಪ್ರಥಮ ಬಹುಮಾನ
ರೂ. ೫೦೦-೦೦



ಕೆ.ಎಸ್. ಲಕ್ಷ್ಮಿ
C/o ಶೀಲಾ ಏಜೆನ್ಸಿ,
ನಂ. ೩೩, ಇಂಡಸ್ಟ್ರೀಯಲ್ ಸ್ಟೆಟ್,
ಜೆ.ಪಿ. ನಗರ, ೩ನೇ ಹಂತ
ಬೆಂಗಳೂರು - ೫೬೦ ೦೭೮

ದ್ವಿತಿಯ ಬಹುಮಾನ
ರೂ. ೨೦೦-೦೦

ರಮೇಶ ಹೂಗಾರ
ಸರಕಾರಿ ಪ್ರೌಢಶಾಲೆ
ಅಂಚೆ : ಗಾಣಧಾಳ್ - ೫೮೪ ೧೨೧
ಮಾರ್ಗ ; ಕುಷ್ಟಗಿ
ತಾ. ಯಲಬುರ್ಗಾ ಕೊಪ್ಪಳ ಜಿಲ್ಲೆ

ಸಮಾಧಾನಕರ ಬಹುಮಾನ
ತಲಾ ರೂ. ೧೦೦/-

ಆರ್. ಯಶೋಧಮ್ಮ (ಸಹ ಶಿಕ್ಷಕಿ)
ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ
ಅಂಚೆ : ಕುರುಗೋಡು - ೫೮೩ ೧೧೬
ತಾ./ಜಿ. ಬಳ್ಳಾರಿ

ರಾಧಾ ಶ್ರೀರಾಮ ಪಾಟೀಲ್
C/o ಬಾಲಪ್ಪ ಪಾಟೀಲ್ (ಮಾಜಿ ಪ್ರಧಾನರು)
ಮು./ಅಂಚೆ : ಲೋಳಸೂರ - ೫೯೧ ೩೦೭
ತಾ. ಗೋಕಾಕ್ ಬೆಳಗಾವಿ ಜಿಲ್ಲೆ

ಮಂಗಳಗೌರಿ
W/o ಕೆ. ರವಿಶಂಕರ್
(ರೇಡಿಯೋ ಶಾಪ್)
ಕೊಪ್ಪ - ೫೭೧ ೪೨೫
ತಾ. ಮದ್ದೂರ್
ಮಂಡ್ಯ ಜಿಲ್ಲೆ

ಕ್ವಿಜ್ - ೯ರ ಸರಿಯುತ್ತರ

೧. ಪಿ.ವಿ. ನರಸಿಂಹರಾವ್ ೩. ನಾಗಾಭರಣ
೨. ಬೀದರ ೪. ಕ್ರಿಕೇಟ್
೫. ಕೆಂಗಲ್ ಹನುಮಂತಯ್ಯ

ಕ್ವಿಜ್ ೧೦ರಲ್ಲಿ ಭಾಗವಹಿಸುವಿರಾ?

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ-ದ್ವಿತಿಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **೧೫-೪-೧೯೯೮**

ಕ್ವಿಜ್ - ೧೦

೧. ಈ ಬಾರಿ ಪ್ರಬಂಧ ಪ್ರಕಾರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವರು ಯಾರು?

....

೨. ಇತ್ತೀಚೆಗೆ ಕರ್ನಾಟಕ ವಿಧಾನ ಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾದ ಬಿ.ಜೆ.ಪಿ. ನಾಯಕ ಯಾರು?

....

೩. ಆಲಮಟ್ಟಿ ಅಣೆಕಟ್ಟನ್ನು ಯಾವ ನದಿಗೆ ಕಟ್ಟಲಾಗಿದೆ?

....

೪. 'ಕಿತ್ತಳೆ ನಾಡು' ಎಂದು ಕರೆಸಿಕೊಳ್ಳುವ ಜಿಲ್ಲೆ ಯಾವುದು?

....

೫. ಭಾರತ ಪ್ರವಾಸದಲ್ಲಿರುವ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕನ ಹೆಸರೇನು?

....

ಹೆಸರು..
ವಿಳಾಸ..
....
....
ಪಿನ್ ಕೋಡ್.............................. ದೂರವಾಣಿ..............................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.

ಚಂದ್ರಶೇಖರ ಪಾಟೀಲ

ಚಂಪಾ ಕಂಡಂತೆ, ಚಂಪಾಗೆ ಕಂಡಷ್ಟು

[ಪ್ರೊಫೆಸರರು ತಮ್ಮ ಚೇಂಬರಿನಲ್ಲಿ ಆಸೀನರಾಗಿದ್ದಾರೆ. ಸುತ್ತಲೂ ಫೈಲುಗಳು ಚೆಲ್ಲಾಪಿಲ್ಲಿ ಹರಡಿವೆ. ಕೂದಲಲ್ಲಿ ಕೈಯಾಡಿಸುತ್ತ ಶೂನ್ಯದಲ್ಲಿ ಏನೋ ಹುಡುಕುತ್ತಿರುವಂತಿದೆ. ಏನೋ ಸಪ್ಪಳ. ಪ್ಲೀಜ್ ಕಮ್ ಇನ್ ಅನ್ನುತ್ತಾರೆ. ಯಾರೂ ಇಲ್ಲ. ಪ್ಲೀಜ್ ಕಮ್ ಔಟ್ - ಅನ್ನುತ್ತಿರುವಂತೆಯೇ....]

ಚಂಪಾ : ತಾವು ಡಾಕ್ಟರ್ ಚಂದ್ರಶೇಖರ ಪಾಟೀಲರು ಅಲ್ಲವೇ ಸಾರ್?

ಪ್ರೊಫೆಸರ್ : ನಾನು ಡಾಕ್ಟರ್ ಅಲ್ಲ. ನಾನು ಪ್ರೊಫೆಸರ್.

ಚಂಪಾ : ಸಾರೀ, ಸರ್. ಆದರ ಎಲ್ಲಾರೂ ತಮಗ ಡಾಕ್ಟರ್ ಡಾಕ್ಟರ್ ಅಂತಾರಲ್ರೀ....

ಪ್ರೊಫೆಸರ್ : ಅವರು ಅಂತಾರಂತ ನಾ ಡಾಕ್ಟರ್ ಆಗಬೇಕೇನು? ನಾಳೆ ಎಲ್ಲಾರೂ ನನಗ ಪ್ರಧಾನಿ, ಪ್ರಧಾನಿ ಅಂದ್ರ ಪ್ರಧಾನಿ ಆಗ್ತಿನೇನು? ಇದರಿಂದ ಒಂದು ದೊಡ್ಡ ಕುತಂತ್ರ ಐತಿ. ಆ ಮೇಲೆ ಹೇಳ್ತನಿ. ಯಾರು ನೀವು? ಯಾಕೆ ಬಂದಿದ್ರಿ?

ಚಂಪಾ : ನಾನು 'ಚಂಪಾ' ಅಂತ. ತಮ್ಮನ್ನ....

ಪ್ರೊಫೆಸರ್ : ಓಹೋ! (ವ್ಯಂಗ್ಯದಿಂದ) ತಾವs ಏನು ಚಂಪಾ ಅಂದ್ರ? ಯು ಆರ್ ಎ ನೊಟೋರಿಯಸ್ ಫೆಲೋ. ಪ್ಲೀಜ್ ಗೆಟ್ ಔಟ್.

ಚಂಪಾ : ಸಾಹೇಬ್ರ, ಒಳಗಿನಿಂದ ಬಂದೋರು ಹೊರಗ ಹೇಗ ಹೋಗ್ತಾರ್ರಿ?

ಪ್ರೊಫೆಸರ್ : ಏನು ಹಂಗಂದ್ರಾ? ವಾಟ್ ಡು ಯು ಮೀನ್? ಏನು ಮರ್ಮದ ಮಾತು ಆಡ್ತೀರೆಲ್ಲ!

ಚಂಪಾ : ಮರ್ಮದ ಮಾತು ಅಲ್ರೀ.... ಇದು ಕರ್ಮದ ಮಾತು... ನಾನೀಗ ತಮ್ಮ some ದರ್ಶನಕ್ಕೆ ಬಂದೇನ್ರಿ. ಕೆಲವು ಪ್ರಶ್ನಾ ಕೇಳ್ತನ್ರಿ.

ಪ್ರೊಫೆಸರ್ : ಕೇಳಪಾ ಕೇಳು. ನೀ ಮಹಾ ಕಿಡಿಕೇಡಿ ಅದೀ.


◇

ಚಂಪಾ : ತಮ್ಮ ಜಾತಿ ಯಾವುದು?

ಪ್ರೊಫೆಸರ್ : ಎಂಥಾ ಸಂದರ್ಶಕನೋ ನೀನು? ಜಾತಿ, ಮತ, ಧರ್ಮಾ ಮೀರಿ ನಾವು ಬೆಳೀಬೇಕು....

ಚಂಪಾ : ಅದೆಲ್ಲಾ ಉಪದೇಶ ಇರಲಿ ಸಾರ್? ಲಂಕೇಶರು ನಿಮ್ಮನ್ನು 'ಜಂಗಮ' ಅಂತಾರ. ನಾರಾಯಣಕುಮಾರರು ನಿಮ್ಮನ್ನು ಜೆ.ಎಚ್.ಪಟೇಲರ ಸಂಬಂಧಿ ಅಂತಾರ....

ಪ್ರೊಫೆಸರ್ : ಹಂಗ ನೋಡಿದ್ರ, ನೊಣದ ಜಾತಿಯ ಲಂಕೇಶ ಆಗಲಿ, ಪಿಂಜಾರ ಜಾತಿಯ ನಾರಾಯಣಕುಮಾರ ಆಗಲಿ, ಬ್ರಾಹ್ಮಣ ಜಾತಿಯ



ಗಿರಡ್ಡಿ ಆಗಲಿ, ಒಡ್ಡರ ಜಾತಿಯ ಪಾಟೀಲ ಪುಟ್ಟಪ್ಪ ಆಗಲಿ - ಎಲ್ಲರೂ ನನಗೆ 'ಸಂಬಂಧಿ'ಗಳೇ ಆಗಬೇಕು.

ಚಂಪಾ : ಅಧೆಂಗ್ರೀ ಪ್ರೊಫೆಸರ್?

ಪ್ರೊಫೆಸರ್ : ಅವರೆಲ್ಲಾ 'ಮನುಷ್ಯ'ರೇ ಅಲ್ಲವೇ?

ಚಂಪಾ : ಅಷ್ಟು ಖಾತ್ರಿ ಹೆಂಗ ಹೇಳ್ತೀರೀ ಸಾಹೇಬ್ರ?

ಪ್ರೊಫೆಸರ್ : ಹೋಗಲಿ ಬಿಡು.. ನಾನು ಸದಾ ತಿರುಗಾಟದಲ್ಲಿ ಇರೋದರಿಂದ ನಾನು 'ಜಂಗಮ' ಅಂತನs ತಿಳಕೊಂಡೀನಿ

ಚಂಪಾ : ಜಂಗಮೋ ಜಗದ್‌ಘಾತಕಃ ಬ್ರಾಹ್ಮಣೋ ಬ್ರಹ್ಮಾಂಡಘಾತಕ...

(ಇಬ್ಬರೂ ಸಾಮೂಹಿಕವಾಗಿ ನಗುವರು)

◇

ಚಂಪಾ : ನೀವು ಇಂಗ್ಲೆಂಡಿಗೆ ಹೋಗಿದ್ರೆಲ್ಲ... ಅಲ್ಲಿ ಏನೇನು ಮಾಡಿದಿರಿ?

ಪ್ರೊಫೆಸರ್ : ಅಲ್ಲಿ ಎಂ.ಎ. ಮಾಡಿದೆ. ನಾಟಕಾ ನೋಡಿದೆ. ದೇಶಾ ಎಲ್ಲಾ ತಿರುಗಿದೆ. ಒಂದಿಷ್ಟು ನಾಟಕಾ ಬರೆದೆ.

ಚಂಪಾ : ಅಲ್ರೀ.....ಫಾರೆನ್‌ಗೆ ಹೋದವರು ಏನೇನೋ ಮಾಡ್ತಾರಲ್ಲ!

ಪ್ರೊಫೆಸರ್ : ಫಾರೆನ್‌ಗೆ ಹೋಗಿ ಬಂದೋರು ಹಂಗೆಲ್ಲಾ ಏನೇನೋ ಹೇಳಿಕೊಳ್ತಾರ. ಅದನ್ನೇನೂ ಪ್ರೂವ್ ಮಾಡಬೇಕಾಗಿಲ್ಲ. ನಮ್ಮ ಕೆಲವು ವೃದ್ಧರು ಆತ್ಮ ಚರಿತ್ರೆ ಬರೀತಾರಲ್ಲ, ಅದೂ ಹಂಗs ಏನಪಾ.

ಚಂಪಾ : ಹಂಗಾರ ನೀವೂ ಮುದುಕರಾದ ಮ್ಯಾಲ ಆತ್ಮಚರಿತ್ರೆ ಬರೀತೀರಿ ಅಂಧಂಗಾತು.

ಪ್ರೊಫೆಸರ್ : ಆತ್ಮಾ, ಚರಿತ್ರಾ... ಇಂಥಾದ್ರಾಗೆಲ್ಲ ನನಗೆ ನಂಬಿಗಿ ಇಲ್ಲಪಾ.

ಚಂಪಾ : ನಿಮ್ಮ ಆತ್ಮಚರಿತ್ರೆ ನಾನs ಬರೀತೇನಿ ಬಿಡ್ರಿ... ಅಂಧಾಂಗ ಎಮರ್ಜನ್ಸಿಯೊಳಗ ಜೇಲಿಗೆ ಹೋಗಿದ್ರೆಲ್ಲ. ನೌಕರಿ ಬ್ಯಾಡಾಗಿತ್ತೇನು?

ಪ್ರೊಫೆಸರ್ : ಏನ ಮಾಡಲ್ಯೋ ಚಂಪಾ. ನನಗ ಜೇಲಿನಿಂದ ಬಿಡುಗಡೆ ಆತು. ಆದ್ರ ನೌಕರಿಯಿಂದ ಬಿಡುಗಡೆ ಆಗ್ಲಿಲ್ಲಪಾ.

ಚಂಪಾ : ಹಂಗ್ಯಾಕ ಅಂತೀರೀ ಸಾರ್?

ಪ್ರೊಫೆಸರ್ : ಅವಾಗs ನೌಕರಿ ಹೋಗಿದ್ರ ಇಷ್ಟೊತ್ತಿಗೆ ನಾನು ರಾಜಕೀಯ ಸೇರಿ ಈ ದೇಶದ ಪ್ರಧಾನಿ ಆಗ್ತಿದ್ದೆ.

ಚಂಪಾ : ಹೋಗಲಿ ಬಿಡ್ರಿ. ದೇಶಕ್ಕೆ ಒಂದು ಗಂಡಾಂತರ ತಪ್ಪಿದಂಗಾತು... ಆದ್ರ ಗೋಕಾಕ ಚಳವಳಿಯೊಳಗ ಮಾತ್ರ ನೀವು ಜೇಲಿಗೆ ಹೋಗಲಿಲ್ಲ!

ಪ್ರೊಫೆಸರ್ : ಹೌದಪಾ. ಅವಾಗ ನಮ್ಮ ದೊಡ್ಡ ದೊಡ್ಡ ಸಾಹಿತಿಗಳಿಗೂ ಅನುಭವ ಬರಲಿ ಅಂತ ಅವರ್ನೆಲ್ಲ ಜೇಲಿಗೆ ಕಳಿಸೋ ಜವಾಬ್ದಾರಿ ನನ್ನ ಮ್ಯಾಲೆ ಇತ್ತು. ಹಿಂಗಾಗಿ ಅವರ ಬಾಯೋಡೇಟಾದೊಳಗ ಒಂದು ಹೊಸಾ ಐಟೆಮ್ ಸೇರಲಿಕ್ಕೆ ಅನುಕೂಲ ಆಯ್ತು.

ಚಂಪಾ : ನೀವು ಇಂಗ್ಲಿಷ್ ಪ್ರೊಫೆಸರ್ ಆದ್ರೂ ಕನ್ನಡಾ ಕನ್ನಡಾ ಅಂತ ಯಾಕ ಬಡದಾಡ್ತೀರಿ?

ಪ್ರೊಫೆಸರ್ : ನೋಡು ಚಂಪಾ, ಈ ಆದರೂ ಅನ್ನೋದು ಬಾಳ ತಪ್ಪು. ಅಂವಾ ಬ್ರಾಹ್ಮಣನಾದರೂ ಪ್ರಾಮಾಣಿಕ, ಅಂವಾ ದಲಿತ ಆದರೂ ಬಹಳ ಸೊಕ್ಕಿನ ಮನುಷ್ಯ... ಅಂಧಾಂಗ ಈ ಮಾತು. ಅದಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಇಂಗ್ಲಿಷ್ ಒಂದು ಜನ ಭಾಷೆ. ಅದರ ಬಗ್ಗೆ ಪ್ರೀತಿ. ಇದ್ದೋರು ಎಲ್ಲಾ ಜನಭಾಷೆಗಳ ಬಗ್ಗೆಯೂ ಪ್ರೀತಿ ಇಟಗೊಂಡಿರ್ತಾರ ಏನಪಾ....

ಚಂಪಾ : ಈ ಲೆಕ್ಚರ್ ಈಗೇನೂ ಬ್ಯಾಡಬಿಡ್ರಿ. ಇನ್ನ ಒಂದು ತಾಸು ನೀವು ಹೊಡಿಯೋರು. ಈಗ ಇನ್ನೊಂದು ಪ್ರಶ್ನಾ : ನಿಮಗ 'ಡಾಕ್ಟರ್' ಅನ್ನೋದರ ಹಿಂದ ಏನೋ ಕುತಂತ್ರ ಐತಿ ಅಂದ್ರೆಲ್ಲ!

ಪ್ರೊಫೆಸರ್ : ನೋಡಪಾ... ಮುಂದ ಯಾವುದಾದರೂ ವಿಶ್ವವಿದ್ಯಾಲಯದವರು ನನ್ನ ಕನ್ನಡ ಸೇವಾ ಸಮಾಜ ಸೇವಾ ನೋಡಿ ಡಾಕ್ಟರೇಟ್ ಪದವೀ ಕೊಡಬಾರದೂ ಅಂತ ಈಗಿನಿಂದನs ಡಾಕ್ಟರ್, ಡಾಕ್ಟರ್ ಅಂತ ಪುಕಾರು ಹಬ್ಬಿಸಿ ಅದನ್ನ ತಪ್ಪಿಸಬೇಕೂ ಅಂತ...

ಚಂಪಾ : ಗೊತ್ತಾತು ಬಿಡ್ರಿ ನಿಮ್ಮದು ಭಾಳ ದೂರದೃಷ್ಟಿ ಐತಿ. ಅಂಧಾಂಗ ಪಾಪು ಅವರು 'ಮಾನವ ಕುಲವೇ ನನ್ನ ಕುಟುಂಬ' ಅಂತಾರ್ರೀ. ಅದಕ್ಕ ನಿಮ್ಮ ಪ್ರತಿಕ್ರಿಯಾ ಏನು?

ಪ್ರೊಫೆಸರ್ : ನೋಡಪಾ, ನಮ್ಮ ಕಡೀಗೆ 'ಹೆಂಡತಿ'ಗೆ 'ಕುಟುಂಬ' ಅಂತಾರ. ಪಾಪು ಅವರಿಗೆ ಇಡೀ ಮಾನವ ಕುಲಾನs ಕುಟುಂಬ ಆಗಿರಬಹುದು. ಅಥವಾ 'ಆಗಲಿ' ಅಂತ ಅವರು ಆಶಾ ಮಾಡ್ತಿರಬಹುದು. ನನ್ನ ಮಟ್ಟಿಗೆ ಮಾತ್ರ ಮಾವನ ಕುಲವೇ ನನ್ನ ಕುಟುಂಬ!

ಚಂಪಾ : ಅಂದರ?

ಪ್ರೊಫೆಸರ್ : ಅಂದರ, ನಮ್ಮ ಮಾವನ ಮಗಳೇ ನನ್ನ ಹೆಂಡತಿ!

ಚಂಪಾ : ಮಜಾ ಐತ್ರಪಾ. 'ಚಂದ್ರಶೇಖರ ಪಾಟೀಲ'ರಾಗಿ ನೀವು ಇಷ್ಟು ಸಾದಾ ಅದೀರಿ. ಅದರ 'ಚಂಪಾ' ಆಗಿ....

ಪ್ರೊಫೆಸರ್ : ಯಾಕ 'ಸೀದಾ' ಇಲ್ಲ - ಅಂತೀ ಏನು? ಏ ಕಿಡಿಗೇಡಿ, ಯಾರು ನೀನು? ಗೆಟ್ ಔಟ್!

ಚಂಪಾ : 'ಗೆಟ್ ಔಟ್' ಅಲ್ಲರೀ. 'ಗೆಟ್ ಇನ್' ಅನ್ರಿ.

ನನ್ನ ಕನಡ್ಯಾಗ ನಾನು, ನೀನು....
ನಿನ್ನ ಕನಡ್ಯಾಗ ನೀನು, ನಾನು...

[ಎನ್ನುತ್ತ ಚಂದ್ರಶೇಖರ ಪಾಟೀಲರಲ್ಲಿ ಲಿಂಗೈಕ್ಯನಾಗುವನು]

●

ಸಮಯ ಪ್ರಜ್ಞೆ


ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಒಮ್ಮೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಓರ್ವ ಮಹಿಳೆ ಒಳಗೆ ನುಗ್ಗಿದಳು. ಇವರು ನಿರ್ಲಿಪ್ತವಾಗಿ ಕುಳಿತಿದ್ದರು. 'ನಿಮ್ಮಲ್ಲಿರುವ ಹಣವನ್ನೆಲ್ಲ ಕೊಡಿ' ಎಂದು ಆಕೆ ಹೆದರಿಸಿದಳು. ಇವರು ತಮಗೆ ಕಿವಿ ಕೇಳಿಸುವುದಿಲ್ಲ ಎಂಬಂತೆ ಸನ್ನೆ ಮಾಡಿ ತೋರಿಸಿದರು. ಅವಳೂ ಕೂಡ ಸನ್ನೆಯ ಮೂಲಕ ತೆಗೆದುಕೊಡುವಂತೆಯೇ ಬೆದರಿಕೆ ಹಾಕಿದಳು. ಸರ್, ಎಂ.ವಿ. ತಮಗೇನೂ ಗೊತ್ತಾಗದವರಂತೆ ಸುಮ್ಮನೆ ಕುಳಿತೇ ಇದ್ದರು. ಹಣ ಕೊಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಸಿದಳು. 'ಗೊತ್ತಾಗಲಿಲ್ಲ, ಬರೆದು ಕೊಡಿ' ಎಂದು ಮತ್ತೆ ಸನ್ನೆ ಮಾಡಿದರು, ಎಂ. ವಿ. ಅವರು. ಅವಳು ಬರೆದು ಕೊಟ್ಟಳು. ಚೀಟಿಯನ್ನು ಕಿಸೆಗೆ ಇಳಿಸಿಕೊಂಡು ಏನೂ ಗೊತ್ತಿಲ್ಲದವರಂತೆ ಮತ್ತೆ ಸುಮ್ಮನೆ ಕುಳಿತರು. ಈಗ ಆ ಮಹಿಳೆಯ ಸಹನೆ ಮಿತಿ ಮೀರಿತು. ತಿವಿಯಲು ಮುಂದಾದಳು, ಸರ್. ಎಂ. ವಿ. ತಪ್ಪಿಸಿಕೊಂಡು ಸರಪಳಿ ಎಳೆದರು. ಅಧಿಕಾರಿಗಳು ಬಂದರು. ವಿಚಾರಣೆಯು ಆರಂಭವಾಯಿತು.

'ಈ ಮುದುಕ ನನ್ನನ್ನು ಹೆದರಿಸಿ, ಮಾನಭಂಗ ಮಾಡಲು ಹವಣಿಸಿದ' ಎಂದು ಕಥೆ ಬದಲಾಯಿಸಿದಳು. ಈಗ ಅಧಿಕಾರಿಗಳ ಕಣ್ಣು ಸರ್. ಎಂ. ವಿ. ಮೇಲೆ ತಿರುಗಿತು. ಅವರು ತಮ್ಮ ಕಿಸೆಯಲ್ಲಿದ್ದ ಚೀಟಿಯನ್ನು ತೆಗೆದು ಅಧಿಕಾರಿಗಳಿಗೆ ಕೊಟ್ಟರು. ಆ ಹೆಂಗಸಿನ ಮುಖ ಬೆವರೊಡೆಯಿತು. ಮುಂದೆ ಹೀಗೇ ನಡೆಯುತ್ತದೆಂದು ಸರ್. ಎಂ. ವಿಯವರು ಆಗಲೇ ಊಹಿಸಿದ್ದರು.

-ಸಂಗ್ರಹ: **ಶಂಕರಗೌಡ ವೈ. ಪಾಟೀಲ**

ಕುಂ. ವೀರಭದ್ರಪ್ಪ

'ಕುಂವೀ' ಕಂಡಂತೆ



ಮೈಕ್ ಟೆಸ್ಟಿಂಗ್ ಒನ್‌ಟೂತ್ರೀ.... ಹಲೋ ಹ್ಹಾ...

ಕಳೆದ ಇಪ್ಪತ್ತೈದು ವರ್ಷಗಳಿಂದ ಕಥೆ ಕಾದಂಬರಿ ಬರ್ದು ಕನ್ನಡ ಸಾಹಿತ್ಯವನ್ನು ಕಲುಷಿತಗೊಳಿಸುತ್ತಿರುವ ಅನೇಕರ ಪೈಕಿ ಕುಂ. ವೀರಭದ್ರಪ್ಪ ಒಬ್ಬರು. 'ಕುಂ' ಎಂಬುದನ್ನು 'ಕುಮಾರಿ' ಎಂದು ನಿಸ್ಸಂಕೋಚವಾಗಿ ಪರಿಭಾವಿಸುವುದರಲ್ಲಿ ಕೆಲವು ಕನ್ನಡಿಗರಂತೆ ಉತ್ತರ ಭಾರತದವರೂ ಹಿಂದೆ ಬಿದ್ದಿಲ್ಲ. ಭೂಪಾಲದ ಕೃಷ್ಣ ಬಲದೇವ ವೈದ್ಯರೆಂಬೊಬ್ರು 'ಕುಮಾರಿ ವೀರಾ D/o ಬಹದ್ದೂರಪಾ' ಎಂದು ಪರಪಾಟಿಲೆ ಪತ್ರ ಬರೆದದುಂಟು. ಎರಡು ದಶಕಗಳ ಹಿಂದೆ ಸಖತ್ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್‌ನಿಂದ ಬಳಲುತ್ತಿದ್ದ ಈ 'ಲಂಬೂ' ಕುಂಬಾರ ಎಂಬುದನ್ನು 'ಕುಂ' ಎಂದಿಟ್ಟು ಕೊಂಡಿದ್ದೇ ಈ ಪೀಕಲಾಟಕ್ಕೆಲ್ಲ ಕಾರಣ. ಹೈಸ್ಕೂಲು ಪೂರ್ವಾಶ್ರಮದಲ್ಲಿ ಸೆಕ್ಸೂ, ಡಿಟೆಕ್ಟಿವ್ವೂ ನಾವಲ್ಸು ಓದುತ್ತಿದ್ದುದರ ಪರಿಣಾಮವಾಗಿ ಎಸ್ಸೆಸ್ಸೆಲ್ಸಿಯನ್ನು ಥರ್ಡ್‌ಕ್ಲಾಸಿನಲ್ಲಿ ಪಾಸಾಗಿ ಒಂದು ವರ್ಷ ರೇಲ್ವೆ ಡಿಪಾರ್ಟ್‌ಮೆಂಟ್ನಲ್ಲಿ ಗುದ್ದಲಿ ಸಲಿಕಿಗಳ ಲೆಕ್ಕ ಬರಕೊಂಡ, ಆಮೇಲೆ ಟಿಸಿಹೆಚ್ ಮಾಡ್ಲಿಕ್ಕೇಂತ ಸಿದ್ದಗಂಗಾಮಠ ಸೇರ್‍ಕೊಂಡ. ಅಲ್ಲಿ ಮಲ್ಲೇಪುರಂರಂಥೋರ ಸಾವಾಸ ಮಾಡಿ ಭಾಮಿನಿ ಷಟ್ಪದೀಲಿ ಪದ್ಯ ಬರಿಲಿಕ್ಕೆ ಹಲ್ಲತ್ತಿದ. ಅಲ್ಲಿಂದ ಕೊಟ್ಟೂರಿಗೆ ವಾಪಾಸಾದ ಮೇಲೆ ಪತ್ರಿಕೆಗಳ ವಾಚಕರವಾಣಿ ಕಾಲಂಗಳಿಗೆ ಪತ್ರಗಳನ್ನು ಬರೆಯೋದ್ರ ಮೂಲಕ ಗದ್ಯ ಸುಧಾರಿಸಿಕೊಂಡ. ಪತ್ರಿಕೆಗಳಿಗೆ ವ್ಯಂಗ್ಯ ಚಿತ್ರಗಳನ್ನು ಕಳಿಸುತ್ತಿದ್ದ. ಹೊ. ಮ. ಪಂಡಿತಾರಾಧ್ಯರೆಂಬ 'ಪೊಟ್ಟಪ್ಲೀಡರ್' ಸಾವಾಸದಿಂದ ಕ್ರಾಂತಿಗೀಂತಿ ಅಂದ್ಕೊಂಡ. ನಲವತ್ತೂರೋ, ನಲವತ್ನಾಲ್ಕೋ ವರ್ಷಗಳಿಂದ ಅಚಾನಕ್ಕಾಗಿ ಹುಟ್ಟಿದಂಥ ಈ ಮನುಷ್ಯ ಆಂಧ್ರದ ಕಡೆ ಓಡಿ ಹೋಗಿ ಅಲ್ಲೆಲ್ಲೋ ಮೇಸ್ಟ್ರುಗಿರಿ ಚಲಾಯಿಸ್ತ ದೈಹಿಕವಾಗಿ ತಲೆಮರೆಸಿಕೊಂಡಿಲ್ಲಿಗೆ ಇಪ್ಪತ್ತೂರು ವರ್ಷಗಳಾದ್ವು... ನೂರಾರು ಕಥಿ, ಹತ್ತಾರು ಕಾದಂಬರಿ ಬರ್ದು ತಾನೊಬ್ಬ ಮಹಾನ್ ಸಾಹಿತ್ಥರ ಪೋಜು ಕೊಡ್ತಿರೋ ಈ ಲೇಖಕ ಅಕಸ್ಮಾತ್ ಕೈಗೆ ಸಿಕ್ಕಾಕ್ಕೊಂಡು ಬಿಟ್ಟಿದ್ದಾನೆ. ಈತನನ್ನು ಸಂದರ್ಶಿಸಿ ಜೀವ ತಿನ್ನೋ ಅದೃಷ್ಟ ನನಗೊದಗಿದ. ಹೆದರ್ಕೋಬೇಡಿ... ಮುಲಾಜಿಲ್ದೆ ಕೇಳೋ ಪ್ರಶ್ನೆಗಳೆಲ್ಲ ನನ್ನ ಬತ್ತಳಿಕೇಲಿವೆ. ಇದೊಂದೊಳ್ಳೆ ಎಂಟರ್ಟೇನ್ಮೆಂಟಾಗ್ತಿದೆ. ನಿಮ್ಗೆ..ಹ್ಹಾಂ!..

'ಹಲೋ... ಕುಂವೀ.. ಕುಂ. ವೀರಭದ್ರಪ್ಪಾ .. ಸಾಹಿತಿಗಳೇ... ನಿಂತ್ಕೊಳ್ರೀ... ಏನ್ ಕಿವೀಗೆ ಗೂಟಾ ಬಡ್ಕೊಂಡಿರೋ ಹೆಂಗೆ!' ಎಂಬ ಧ್ವನಿ ಕೇಳಿಬರುತ್ತಲೆ ಗುಟ್ಟಾಗಿ ಪ್ರೀತಿಸಿದ್ದೋರ್ವಳ ನೆನಪಿನಲ್ಲಿ ಮೈಮರೆತು ಒಂದು ಲಹರಿಯಲ್ಲಿ ಮೈಮೆರತು ಹೋಗುತ್ತಿದ್ದ ನಾನು ದಿಗ್ಗನೆ ನಿಂತುಕೊಂಡೆ.

ಈ ಧ್ವನೀನ ಎಲ್ಲೋ ಕೇಳ್ದಂಗಿದೆಯಲ್ಲಾ.. ಎಂದಾಲೋಚಿಸಿ ತಿರುಗಿನೋಡ್ತೇನೆ.. ಅರೆ! ಥೇಟ್ ನನ್ನಹಾಗಿದ್ದಾನಲ್ಲಾ ಈ ವ್ಯಕ್ತಿ ಎಂದು ತಿಬ್ಬಳಿಸಿ ನೋಡ್ದೆ. ಹೌದು! ಥೇಟ್ ನನ್ನ ಪ್ರತಿಕೃತಿಯೇ!... ನಾನೇ ಅವನೋ? ಅವನೇ ನಾನೋ!. ಒಂದು ಕ್ಷಣ ಅರ್ಥವಾಗಲಿಲ್ಲ.

'ಏನ್ರೀ.. ಅಷ್ಟೊತ್ತಿಂದ ಕೂಗ್ತಿದ್ದೀನಿ.. ಕೇಳಿಸ್ಕೊಳ್ದೋರ ಹಾಗೆ ನಿಮ್ ಪಾಡಿಗೆ ನೀವು ಹೋಗ್ತಿದ್ದೀರಲ್ರೀ. ಒಳ್ಳೆ ಕೆಪ್ಪರಂಗೆ' ಎಂದಾ ವ್ಯಕ್ತಿ ಹತ್ತಿರ ಬಂದ. ಅವ್ನು ನನ್‌ಕಡೇಗೆ ಮಿಕಿ ಮಿಕಿ, ನಾನೂ ಅವ್ನಕಡೆ ಮಿಕಿ ಮಿಕಿ.. ಅವ್ನೂ ತಲೆ ಕೆರ್ಕೊಂಡ, ನಾನೂ ಬೋಳಾಗಿರುವ ನೆತ್ತಿಕೆರೆದುಕೊಂಡೆ, ನನ್ನ ಆಕೃತಿಯ ಹಕ್ಕಿನ ಉಲ್ಲಂಘನೆ ಆಗಿದೆ ಎಂದು ಸಿಟ್ಟು ಬಂತು.

'ನನ್ನ ಹಂಗೆ ಇರೋಕೆ ನಿಮ್ಗ ಹಕ್ಕೇನುಂಟು!' ಎಂದೆ.

'ನಾನೂ ಅದ್ನೆ ಕೇಳ್ಬೇಕಂತಿದ್ದೆ!' ಎಂದು ಆತ ಪಕ ಪಕ ನಗಾಡಿ ಮುಂದುವರಿದು ಹೇಳಿದ 'ನೋಡ್ ಕುಮ್ಮೀ.. ನಿಮ್‌ಕರ್ಮವೋ ನನ್ ಕರ್ಮವೋ.. ನಾವಿಬ್ರು ಒಂದೇ ಥರ ಅದೀವಿ... ನಾವಿಬ್ರು ಅವ್ಳೀಜವ್ಳೀ ಅಂದ್ಕೊಂಡ್ರೆ ತಪ್ಪೇನೀಗ? ಹೌದಲ್ಲೋ'.

ಅವನ ಮಾತು ಬರೋಬ್ಬರಿ ಅನ್ನಿಸಿ ಸಮಾಧಾನದ ಉಸಿರುಬಿಟ್ಟೆ.

'ಇರ್ಲಿ ನೀನು ಇದ್ದಕ್ಕಿದ್ದಂತೆ ವಕ್ಕರಿಸಿದ ಕಾರಣವಾದ್ರು ಏನು!' ಎಂದೆ.

'ನಾನು ವಕ್ಕರಿಸಿರುವ ಕಾರಣ ಕೇಳ್ತಿದೀಯಾ. ಹೇಳ್ತಿನಿ ಕೇಳು... ಸದ್ರೀ ಬಳ್ಳಾರಿ ಜಿಲ್ಲೆಯ ನಾರಿ ಹಳ್ಳದ ದಂಡೆಮೇಲಿರೋ ವಡ್ಡು ಎಂಬ ಕುಗ್ರಾಮದಿಂದ ಬೆಂಗ್ಳೂರಿಗೆ ಹೋಗಿ ಬಿಸಿಲ ಬದುಕು ಅಂಬೊಂದು ವಿಚಿತ್ರ ಮಾಸಪತ್ರಿಕೆ ಶುರುಮಾಡಿರೋ ಚಂದ್ರಕಾಂತ ನೆಂಬ ಗಡ್ಡದ ಹುಡುಗನ ಪರಿಚಯ ನಿನಗಿರಬೇಕಲ್ಲ ?'

'ಹೌದು ಮದುವೆಯಾದ ಹೊಸತರದಲ್ಲಿ ಮನೆಗೆ ಕರ್ಕೋಂಡೋಗಿ ನಾಲ್ಕಾರು ಚಪಾತಿ ಊಟಕ್ಕೆ ಹಾಕಿದ್ದೆ..ಕಣಪ್ಪಾ... ಅವ್ನು ನಂ ಹುಡ್ಗಾ.. ಅದಿರ್ಲಿ ಏನು ವಿಷ್ಯಾ ಹೇಳು'

'ಅವ್ನು ತಾನ್ತರ್ತಿರೋ ವಿಶೇಷಾಂಕಕ್ಕೆ ನಿಂದೊಂದು ಸಂದರ್ಶನ ಮಾಡಿ ಕಳಿಸೂಂತ ಗಂಟು ಬಿದ್ದಿದ್ದಾನೆ.. ಅದ್ಕೆ.. ನಿನ್ತಲೀಗೆ ನಾನು ಗಂಟು ಬಿದ್ದಿದ್ದೀನಿ'.

'ಹೋ.. ಹಾಗೋ ಸಮಾಚಾರ.. ನಾನು ಸಂದರ್ಶನ ಗಿಂದರ್ಶನ ಮಾಡಿಸ್ಕೊಳ್ಳೋದಿಲ್ವಲ್ಲಪ್ಪಾ.. ಏನು ಮಾಡೋದೀಗ...'

'ನನ್ನತ್ರ ಇಂಥ ಪೋಜುಗೀಜು ಕೊಡಬೇಡ ಸೀನಿಯರ್ರೂ.. ನೀನು ಒಂದ್ನಮೂನಿ ನಸುಗುನ್ನಿ ಕಾಯಿ ಇದ್ದಂಗಂತ ನಂಗೊತ್ತು.... ಒಳಗೊಳ್ಗೆ ಪ್ರಚಾರಕ್ಕ ಆಸೆ ಪಡ್ತೀ ಅಂತಾನೂ ಗೊತ್ತು...ಸಂದರ್ಶನ ಮಾಡ್ತೀವಂತ ಬಂದ್ರೆ ಗುಜರಾಲ್ತರ ಹಿಂಜರಿತಿದ್ದೀಯಾ...

ಎಲಾ ಇವ್ನ! ಅಂತರಂಗ ಹೊಕ್ಕು ಎಲ್ಲಾ ಬೆದಕಾಡಿ ಬಿಟ್ಟಿದಾನಲ್ಲೀ ಬೇವಕೂಫ?.

'ಹಂಗಲ್ಲಪ್ಪಾ ಜ್ಯೂನಿಯರ್ರೂ... ನನಬಾಯಿ ಸೊಲುಪ ದೊಡ್ಡು...ಜವಾರಿ ಭಾಷೇಲಿ ನಾನೊಂದು ಮಾತಾಡೋದು ಜನ ವಂದ್ನ ಮೂನಿ ಅರ್ಥ ಮಾಡ್ಕೊಳ್ಳೋದು.. ಹಂಗಾಗಿ ಎಡವಟ್ಟಾಗಿಬಿಡತೈತಿ. ಅದ್ಕ ಮಾತುಕಥಿಯಿಂದ ದೂರ ಉಳಕೊಂಡು ಬಿಟ್ಟಿದ್ದೀನಿ ಮಾರ್‍ರಾಯ...'


'ಓಹೋ ಹಾಗೋ ಸಮಾಚಾರ.. ಬದ್ಕೋಕಲೆ ನಿಂಗೊತ್ತಿಲ್ಲಂದಂಗಾಯ್ತು... ಅದ್ಕೆ ನೀನು ಆಂಧ್ರದ ಮೂಲೆ ಬಿಟ್ಟು ಮ್ಯಾಕ ಬರ್‍ತಾ ಇಲ್ಲ... ಸಾಹಿತ್ತಿಕ ಪರಿಭಾಷೆ, ಮಸ್ಕಾ ಹೊಡ್ಯೋದು ಗೊತ್ತಿಲ್ದೋರು ಹಣೆಬರಾನೇ ಇಷ್ಟು. ಇದೂ ಒಂದ್ರೀತಿ ಒಳ್ಳೇದೇ ಆಯ್ತು ಬಿಡು ಸೀನಿಯರ್ರು... ಅದ್ಕೆ ವಡ್ಡು ಮಾಶಯ ನನ್ನಂಥ ಉಡಾಫಿ (ಕರ್ನಲ್‌ಗಡಾಫಿಯ ಕಝಿನ್ನು)ಯ ಕೊಳ್ಳಿಗೆ ಸಂದರ್ಶಕತ್ವದ ಘಂಟೇನ ಕಟ್ಟಿ 'ಛೂ' ಬಿಟ್ಟಿರೋದು... ಯಾವತ್ತು ಬಂದು ಸುರುವು ಮಾಡ್ಲೇಳು ಸಂದರ್ಶನಾನ!'.

ಸಣಮಾತ್ಮ ಇಕ್ಕರಮಾರ್ಕನನ್ನು ಕೇಳಿದಂತೆ ಕೇಳಿದ. ಇಂಥ ದಿನ ಇಷ್ಟೊತ್ತಿಗೆ ಬಂದು ತಲೆತಿನ್ನು ಅಂತ ಹೇಳಿ ಕಳಿಸಿದೆ.

ಮಹಾ ಚಕ್ರಾಲಿಯಾದ ನಾನು ಈ ಜ್ಯೂನಿಯರನ ಕೈಯಿಗೆ ಜಪ್ಪಯ್ಯಾಂದ್ರು ಸಿಗಬಾರದೆಂದುಕೊಂಡು... ಏಳು ಸಮುದ್ದರ ದಾಚೆ ಕಡೆ ಕೀಳು ಸಮುದ್ದರದ ನಡುಗಡ್ಡೆ ಅಂತಾ ಹೇಳ್ತಾರಲ್ಲ... ಅಂತ... ಆಂಧರ ಪರದೇಶದ ಮೂಲೆ ಮುರುಕಟ್ಟನಲ್ಲಿರೋ ಗೂಳೆಮ್ಮಿ ನಾಗಿರೋ.. ಕೆಮ್ಮಿದರೆ ಪುತುಪುತು ಮಣ್ಣಿನ ಅಕ್ಷತೆ ಸುರಿಸೋ ಮಣ್ಣಿನ ಮನೆಯೊಳಗೆ ಕಿಟಕೀ ಬಾಕಲಾ ಮುಚ್ಚಿಕೊಂಡು ಕೂಕಂಡು ನೆಮ್ಮದಿಯ ಉಸುರು ಬಿಟ್ಟುಬಿಟ್ಟೆ... ಜ್ಯೂನಿಯರಿಷ್ಟು ದೂರ ಹುಡುಕ್ಕೊಂಡು ವಕ್ಕರಿಸಲಾರನೆಂಬ ಖಾತರಿಯಿಂದ ಗಡಿಯಾರ ಲಟಗೂ ಪುಟಗೂ ನಡೀತಿತ್ತು. ಇನ್ನೊಂದೈದು ಮಿನಟು ದಾಟಿದರೆ ಬಚಾವಾದೆ ಎಂದುಕೊಂಡೆ... ಅಯಿದನೇ ಮಿನಟು ದಾಟುತ್ತಲೆ-

'ಹಲ್ಲೋ ಸೀನಿಯರ್ರೂ!!...' ಎಂಬೊಂದು ಧ್ವನಿ ಕೇಳಿಸಲು ಹ್ಹಾಂ! ಅಂತ ಬೆಚ್ಚಿ ಬಿದ್ದೆ. ಆಗ್ಲೆ ಮೂರ್ಕಾಲಿನ ಕುರುಚಿ ಮ್ಯಾಲ ಕೂತುಕ್ಕೊಂಡು ಮುಖದ ಮೂರುಪಾವು ಮಾವುಸವನ್ನು ಕುಣಿಸುತ್ತಿರುವನು, ಎಲಾ ಇವ್ನ!? ನನಗಿಂತ ಇವನು ಏನು ಕಡಿಮೆ ಇಲ್ಲವೆಂದುಕೊಂಡೆ.

ಉಭಯಕುಶಲೋಪರಿ ಆಡಿ ಒಂದು ಗ್ಲಾಸು ತುಂಗಭದ್ರೆ ಕುಡಿಸಿದೆ. ನಾನು ಕೊರೆಯುತ್ತಿದ್ದ ಬೈಸನ್ ಬ್ರಾಂಡಿನ ಮೇಲೆ ಕಣ್ಣಾಡಿಸಿ - ಹೊಹೋ ಹಾಹ್ಹಾ ಎಂದು ಉದ್ಗರಿಸಿದ. ಇನ್ನು ಇವನನ್ನು ಜಲ್ದಿ ಇಲ್ಲಿಂದ ಸಾಗಹಾಕಬೇಕೆಂದು ನಿರ್ಧರಿಸಿ-



ವರ

ಸಂ-
ಸಾರಿಯೊಬ್ಬ
ಸಂ-
ನ್ಯಾಸಿಯಾಗಿ
ಘೋರ ತಪಗೈದ.
ದೇವ ದರ್ಶನ ನೀಡಿ
ವರವ ಬೇಡೆನಲು
'ವರ ನನಗಲ್ಲ
ನನ್ನ ಮಗಳಿಗೆ
ನೀಡು' ಎಂದ.

- ಕೈ.ರಾ. ಸುಬ್ಬರಾವ್

'ಅದೇನೇನನ್ನು ಕೇಳ್ಬೆಕಂತಿದ್ದೀಯೋ ಕೇಳ್ಬಿಡು ಪುಣ್ಯಾತ್ಮ' ಎಂದೆ.

ಅವನು ಸುರುವು ಮಾಡಿದ.

ಜ್ಯೂ: ನೋಡು ಸೀನಿಯರ್ರು.. ಹಿಂಗ ಕೇಳ್ತಿದ್ದೀನಿ... ಅಥವಾ ಹೇಳ್ತಿದ್ದೀನಂತ ತಪ್ಪು ತಿಳ್ಕೋಬೇಡ.. ನೀನು ಬೆಂಗ್ಳೂರ್ಕಡೆ ಬಂದಾಗ್ಲೆಲ್ಲ ನೋಡ್ದೋರು ಇವ್ನೇನಪ್ಪಾ ದೊಡ್ ಫ್ಯೂಡಲ್ ಲಾರ್ಡ್ ಇದ್ದಂಗೆವ್ನಲ್ಲಾ ಅಂತಾಡ್ಕೊತಿರ್ತಾರೆ! ಕೊಳ್ಳಾಗ ಚೈನೇನು! ಕೈಯಾಗ ಉಂಗ್ರೇನು! ತೊಟ್ಕೊಳ್ಳೋ ಬಟ್ಟೆ ಬರೆ ಏನು! ಭಲೆ ಸ್ಟೈಲ್ನಿಂದ ಠಾಕುಠೀಕಾಗಿ ನಡೀತಿರ್‍ತೀಯಾ! ಠಸ್ಸಾಪುಸ್ಸಾಂತ ಇಂಗ್ಲಿಷು ಪೋಣಿಸಿಮಾತಾಡ್ತಿರ್‍ತೀಯಾ! ಆದ್ರೆ



ನಿನ್ನಲ್ಲಿ ನೋಡಿದ್ರೆ ಒಳ್ಳೆ ಹಳ್ಳಿ ಗಮಾರ್ನಂಗಿದ್ದೀಯಾ.. ಇದ್ರ ಬಗ್ಗೆ ಒಂಚೂರು ಹೇಳೋದಾದ್ರೆ!....

ಸೀ: ಹ್ಹ.. ಹ್ಹ.. ಹ್ಹ(ನಕ್ಕು) ಮಾತುಕಥೆ ನಡೆ ನುಡಿ ಎಲ್ಲ ಒಂಥರಾ ಕಾಂಪ್ಲೆಕ್ಸುಗಳು ಕಣಪ್ಪಾ... ನಾನೇನು ಫ್ಯೂಡಲ್ ಲಾರ್ಡೂ ಅಲ್ಲ ಏನೂ ಅಲ್ಲ.... ಬಾಲ್ಯದೊಳಗ ಏನೇನೋ ಕೊರತೆ ಅನುಭೋಸಿದ್ನೋ ಅದ್ನೆಲ್ಲ ಬೆಂಗ್ಳೂರಿಗೋದಾಗ ತೀರಿಸ್ಕೋತಿನಿ ಅಷ್ಟೆ. ಮಜಾ ಉಡಾಯಿಸಿ ಜೇಬ್ನಲ್ಲಿರೋ ದುಡ್ಡು ಖಾಲಿಯಾದಾಗ ಅಡವುಗಿಡುವು ಇಡ್ಲಿಕ್ಕರ್ಲಿ ಅಂತ ಕೊಳ್ಳಾಗ, ಬೆಳ್ಳಾಗೊಂಚೂರು ಬಂಗಾರ ಹಾಕ್ಕೊಂಡಿರ್ತೀನಿ ಅಷ್ಟೆ.. ನನ್ಗೆ ಇಂಗ್ಲಿಷು ಬಂದಿದ್ರ್ಯಾಕೆ ಇಂಗ್ಲಿಷು ಪೊಣಿಸ್ತಿದ್ನೇಳು.. ವಸ್ತುಸ್ಥಿತೀಲಿ ಏನೇನು ಕೊರತೆ, ಬರಗಳಿರ್ತಾವೊ ಅದ್ನೆಲ್ಲ ಮೇಲ್ಮೈ ಲಕ್ಷಣದಲ್ಲಿ ಪ್ರಕಟಿಸ್ತಿರ್ತೀವಿ ಅಷ್ಟೆ. ನಿಜ ಹೇಳಬೇಕಂದ್ರೆ ಇಂಗ್ಲಿಷು ಅಂದ್ರೆ, ಇಂಗ್ಲೀಷು ಮಾತಾಡೋರಂದ್ರೆ, ನಂಗೋಥರಾ ಭಯ... ಅವ್ರಕಂಡ್ರೆ ಗಾವುದ ದೂರ ಇದ್ದು ಬಿಡ್ತಿದ್ದೆ ಅಷ್ಟೆ, ಗೊರ್ಬಛೇವ್ಗೂಗೆ, ಚಾಎನ್‌ಲಾಯಿಗೆ ಇಂಗ್ಲೀಷು ಬರೋದಿಲ್ಲಾಂತ ಗೊತ್ತಾದ್ಮೇಲೇನೆ ನಾನು ಮೈ ಸಡ್ಲ ಬಿಟ್ಟು ಅಡ್ಡಾಡ್ತಿರೋದು.

ಜ್ಯೂ: ಓಹೋ ಹಾಗೋ ಸಮಾಚಾರ. ಸರಿ... ಎರಡು ದಶಕಗಳ ಹಿಂದೆ ನೋಡ್ದೋರ್ಯಾರು ಈಗ ನಿನ್ನ ನೋಡಿದ್ರೆ ಗುರ್ತೇ ಹಿಡಿಯೊಲ್ಲ ನೋಡು. ಆಗ ಚಾಳೇಸ ಹಾಕ್ಕೊಂತಿದ್ದೀ.. ಪಾಯಿಜಾಮ ಜುಬ್ಬಾ ಹಾಕ್ಕೊಂತಿದ್ದಿ... ಮೈ ಎಲ್ಲ ಎಲುಬು ಬಿಟ್ಕೊಂಟು ಒಳ್ಳೆ ಪ್ರೌಢಲೇಖಕನಂಗಿದ್ದಿ, ಈಗ್ನೋಡಿದ್ರೆ ಒಳ್ಳೆ ಉದಯೋನ್ಮುಖ ಲೇಖಕನಂಗಿರ್‍ವಿ. ಹಿಂಗ್ಯಾಕ ವ್ಯತ್ಯಾಸ ಬದ್ಲಾವಣೆ ಆಯ್ತಾಂತ!

ಸೀ: ಆಗ ಚಳವಳಿಗಳ್ನ : ಅದ್ರಲ್ಲಿ ಭಾಗವಹಿಸದ ಮಂದೀನೆಲ್ಲ ನೋಡ್ತಿದ್ವೆಲ್ಲಾ.. ಚಾಳೇಸು; ಜುಬ್ಬಾ ಪಾಯಿಜಾಮ ಅಸ್ತವ್ಯಸ್ತ ಆಗಿದ್ರೇನೆ ಲೇಖಕ ಎಂಬ ಅಭಿಪ್ರಾಯ ಚಾಲ್ತೀಲಿತ್ತು ಕಣಪ್ಪಾ. ಅದ್ಕೆ ನಾನೂ ಸೈಟೂ ಗೀಟೂ ಇಲ್ದಿದ್ರೂನೂ ಒಂದೈವತ್ರುಪ್ಯಾ ಕೊಟ್ಟು ಚಾಳೇಸುಕೊಂಡ್ಕಂಡಿದ್ದೆ. ಹಾಗೆ ಜುಬ್ಬಾ ಪಾಯಿಜಾಮಾನೂ, ಆಗ ಗಡ್ಡಾನೂ ಸಾಹಿತ್ತಿಕ ವಲಯದೊಳಗೆ ತುಂಬ ಪಾಪುಲರ್ರಾಗಿತ್ತು. ನಾನೂ ಬಿಡೋಣಂದ್ರೆ ಮೀಸೇನೆ ಬಂದಿರ್ಲಿಲ್ಲ ಇನ್ನು ಗಡ್ಡಾನೆಂಗೆ ಬಿಡೋದು. ನಿಜ ಹೇಳಿದ್ರೆ ಕೇಳ್ತಿ ಸುಳ್ ಹೇಳಿದ್ರು ಕೇಳ್ತಿ.. ಆಗ ಕೆಲವು ಲೇಖಕ್ರ ಬಗ್ಗೆ ಕೆಲವು ಗಾಸಿಪ್ಪುಗಳಿದ್ವಪ್ಪಾ... ಉದಾಹರಣೆಗೆ ದೇವನೂರು ಮಾದೇವು ಸರ್‍ಯಾಗಿ ಹಲ್ಲುಜ್ಜೋದಿಲ್ಲ... ಸಾನಾ ಮಾಡೋದಿಲ್ಲ. ತಲೆ ಬಾಚ್ಕೋದಿಲ್ಲ ಅಂತ ಮಾತಾಡ್ಕಂತಿದ್ರು. ನಾನು ಒಂದು ಸಮ್ಮೇಳನಕ್ಕೋಗಿ ಸಾನಾ ಮಾಡಿದ್ದಾರೋ ಇಲ್ವೋ ಹಲ್ಲುಜ್ಜಿದ್ದಾರೋ ಇಲ್ವೋ.. ತಲೇಲಿ ಹೇನು ಅದಾವೋ ಇಲ್ವೋ ಅಂತ ಪ್ರತಿಯೊಬ್ಬ ಲೇಖಕ್ರ ಸನೀಕೆ ಹೋಗಿ ಗುಟ್ಟಾಗಿ ಮೂಸಿನೋಡ್ತಿದ್ದೆ. ಕೆಲವು ಲೇಖಕ್ರು ನಾನಂದ್ಕೊಂಡಂಗೆ ಇರ್ತಿದ್ರು... ಅದ್ರಿಂದ ನಾನು ಅವರಂಗೆ ಅನುಕರಣೆ ಮಾಡೋಕೆ ಪ್ರಯತ್ನ ಪಟ್ಟೆ ನೋಡು.. ಸಿಗರೇಟು ಸೇದೋದೂ ಕಲ್ತೆ.. ಏನೀ ಕುಂವೀ ಲಂಕೇಶ್ತರ ಸಿಗರೇಟು ಸೇದ್ತಾ ಇದ್ದಾನಲ್ಲ ಎಂದವ್ರಿವ್ರು ನೋಡಿ ಆಶ್ಚರ್ಯ ಸಂತೋಷ ಪಟ್ಟಿದ್ದುಂಟು. ಅದ್ಕೆ ಕೆಲವು ವರ್ಷದಿನಮಾನ ಲೆಟ್ರಿನ್ಗೆ ಹೋದ್ರೂ ಚಾಳೇಸ ಹಾಕ್ಕೊಂತಿದ್ದೇ ನೋಡು.

ಜ್ಯೂ: ಮತ್ತೆ ಈಗ್ಯಾಕ ಚಾಳೇಸೋಯ್ತು... ಜುಬ್ಬಾ ಪಾಯಿಜಾಮ ಹೋಗಿ ಪ್ಯಾಂಟೂ ಷರ್ಟು ಬಂತು ಢುಂಢುಂ

ಸೀ: ಆ ಡ್ರೆಸ್ಸಿನಾಗಿದ್ರೆ ಯಾವ ಹುಡುಗಿ ಮೂಸಿ ನೋಡೊಲ್ಲಾಂತ ಗೊತ್ತಾಯ್ತು ಅಂಭೋದು ಒಂದು ಕಾರಣ. ಹೊಸ ಹೊಸ ಡ್ರೆಸ್ಸು ಹೊಲಿಸ್ಕೊಳ್ಳೋಕೆ ಹಣ ಬೇರೆ ಇರ್ತಿರ್ಲಿಲ್ಲ... ಸಾಹಿತ್ಯದ ಸೋಗಿನಿಂದಾಗಿ ಅನೇಕ ವರ್ಷಗಳು ಜುಬ್ಬಾ ಪಾಯಿಜಾಮ ತೊಟ್ಕೊಂತಿದ್ದೆ. ಮದ್ವೆ ಆದ್ಮೇಲೆ ನನ್ನೆಂಡ್ತಿ ಜುಬ್ಬಾ ಪಾಯಿಜಾಮ ನೂಕಾಚೆ ದೂರ, ಪ್ಯಾಂಟು ಬುಷರ್ಟು ತೊಟ್ಕೊಳ್ಳೋಬಾರ ಅಂತ ಒತ್ತಡ ಹೇರಿದ್ಲು. ನಾನು ಇನ್‌ಸರ್ಟ್ ಮಾಡೋಕೆ ಕಲ್ತಿದ್ದೂ ಆ ಪುಣ್ಣಾತ್ಗಿತ್ತಿಯಿಂದಾಗಿಯೇ.

ಜೂ: ವೆರ್‍ರಿಗುಡ್ ವೆರ್‍ರಿಗುಡ್. ಅಂತೂ ಅಷ್ಟೊಂದು ಹೋಂಸಿಕ್ಕೂ ಅನ್ನು, ಅಂತೂ ಹೆಂಡ್ತಿಯಿಂದ ಇನ್‌ಸರ್ಟ್ ಮಾಡೋದಾದ್ರು ಕಲ್ತಿರಲ್ಲ! ಅಷ್ಟೇ ಸಾಕು.

ಸೀ: ಇನ್ನೊಂದು ಮಾತು ಹೇಳೋದು ಮರ್ತಿದ್ದೆ. ನನ್ಗೆ ಮೊನ್ನೆಮೊನ್ನೆವರ್ಗೆ ಇನ್‌ಸರ್ಟ್ ಮತ್ತು ಇನ್‌ಸಲ್ಟ್ ಎಂಬೆರಡು ಇಂಗ್ಲಿಷ್ ಶಬ್ದಗಳ ನಡುವಿನ ವ್ಯತ್ಯಾಸವೇ ಗೊತ್ತಿರ್ಲಿಲ್ಲ ಮಾರ್‍ರಾಯಾ! ಎಷ್ಟೋ ಸಾರಿ ಇನ್‌ಸರ್ಟ್ ಎಂದು ಬಳ್ಸೋಕಡೆ ಇನ್‌ಸಲ್ಟ್ ಎಂದು ಬಳಸ್ತಿದ್ದೆ. ಇನ್‌ಸಲ್ಟ್ ಎಂದು ಬಳ್ಸೋಕಡೆ ಇನ್‌ಸರ್ಟ್ ಎಂದು ಬಳಸ್ತಿದ್ದೆ. ಹೇಗಿದೆ ನೋಡು ನನ್ನ ಇಂಗ್ಲಿಷು ಗ್ಯಾನ..

ಜೂ: ಬಂಬಾಟಾಗೈತೆ.. ಇಷ್ಟೊಂದು ಹೋಂ ಸಿಕ್ಕಾಗಿರೋ ನಿನ್ನ ಅನೇಕರು 'ವುಮೆನೈಜರ್' ಅಂತ ತಿಳ್ಕೊಂಡಿದ್ದಾರಲ್ಲಪ್ಪಾ! ಇದ್ಕೇನು ಹೇಳ್ತಿ...?.

ಸೀ: ಹ್ಹ..ಹ್ಹ.. ಹ್ಹ (ನಗು) ಈ ಶಬ್ದದ ಅರ್ಥಗೊತ್ತಿರ್ಲಿಲ್ಲೋ ನನ್ಗೆ....ಧಾರವಾಡದಕಡೆ ಒಬ್ಬ ಇದ್ನೇನನ್ನೂಗ್ಗ ಕೇಳ್ದ. ಅದ್ರ ಅರ್ಥಗೊತ್ತಿಲ್ದೆ ನಾನು ಹೌದೌದು ಎಂದು ತಲೆ ಅಲ್ಲಾಡಿಸಿದ್ದೆ. ಆಮೇಲೆ ಅದ್ರ ಅರ್ಥ ಡಿಕ್ಷ್ನರಿಯಿಂದ ತಿಳ್ಕೊಂಡು ಈ ಮಂದಿ ಕಂಣಿಗೆ ನಾನು ವಿಟ ಪುರುಷನಂತೆ ಕಾಣ್ತಿದ್ದೀನಾ ಅಂತ ಆಶ್ಚರ್ಯವಾಯಿತು. ಒಂದೆರಡು ವರ್ಷದ ಹಿಂದೆ ಮೈಸೂರು ಕಡೆ ಕಥೆಗಾರನೊಬ್ಬ 'ಏನ್ ಕುಂವೀ ಎಷ್ಟು ಹುಡುಗೀರ್ನ ಮಾಡ್ದಿ' ಎಂದು ಕೇಳಿದ. ನಾನವನ ಕಪಾಳಕ್ಕೆ ಹೊಡೆವಷ್ಟು ಸಿಟ್ಟು ಬಂತು. ನಿಜ ಹೇಳಬೇಕೆಂದ್ರೆ ನನ್ಗೆ ಆ ಚಾಳಿ ಇಲ್ಲ. ಭಯ, ಸಂಕೋಚದಿಂದಾಗಿ ಪ್ರೀತಿಸೋ ಹುಡುಗಿಯರ ಮನಸ್ಸನ್ನು ಅರ್ಥಮಾಡಿಕೊಳ್ಳಕ್ಕಾಗ್ದೆ; ಅರ್ಥ ಮಾಡಿಕೊಂಡ್ರು ದೂರ ಸರ್ಕೊಂಡಿದ್ದೀನಿ. ಇನ್ನೊಂದು ವಿಷಯ ಅಂದ್ರೆ ಒಬ್ರು ನಾನು ಸಿಗರೇಟು ಸೇದೋದ್ನ ನೋಡಿ ನೀವೊಳ್ಳೆ 'ಚೈನ್ ಸ್ಮೋಕರ್‍ರಿದ್ದಂಗಿದ್ದೀರಿ' ಎಂದು ಕೇಳಿದ್ದಕ್ಕೆ ನಾನು ಅದೊಂದು ರಿಗಾರ್ಡಂದ್ಕೊಂಡು ಹೌದೆಂಬಂತೆ ತಲೆ ಅಲ್ಲಾಡಿಸಿದ್ದೆ. ಆಮೇಲೆ ಗೊತ್ತಾಯ್ತು ಅದ್ರ ಅರ್ಥ ಏನಂತ.

ಜ್ಯೂ: ಓಹ್! ಎಂಥ ಪೀಕಲಾಟ ಅನುಭೋಸಿದ್ದೀಯಲ್ಲಪ್ಪಾ.... ಅದಿರ್ಲಿ ಸಾಹಿತ್ಯದ ಬಗ್ಗೆ ತಿಳ್ದೋನಂಗೆ ದನಿ ಎತ್ತರಿಸಿ ಮಾತಾಡ್ತಿದ್ದೀ,,, ಬರೀತ್ತಿದ್ದೀ.. ನಾನು ತಿಳ್ದಂಗೆ ಯಾ ಯೂನಿವಾರ್ಸಿಟಿಗೂ ಹೋದೋನಲ್ಲ' ಹೆಂಗ ಬರೆಯೋದ್ನಕಲ್ತೀ ಅಂತ! ನಿಮ್ಮಪ್ಪ, ನಿಮ್ತಾತಂದಿ ರೇನಾದ್ರು ಸಾಹಿತಿಗಳೇನಾದ್ರು ಆಗಿದ್ರೇನು!

ಸೀ: ಎಲ್ಲಿ ತರ್ತಿಮಾರಾಯ, ಗಡಿಗೆ ಬಡೀತಿದ್ದಮಂದಿ ಅದು. ನಮಪ್ಪ ತುಂಬಾ ರೋಮಾಂಟಿಕ್ಕಾಗಿ ಫ್ಯೂಡಲ್ ಥರ ವರ್ತಿಸ್ತಿದ್ದ..

ಕಡಿಮೆ ಓದಿದ್ರು, ಆಕರ್ಷಕವಾಗಿ ಕಾವ್ಯಮಯವಾಗಿ ಮಾತಾಡ್ತಿದ್ದ ಆಲೋಚಿಸ್ತಿದ್ದ. ಆಂಧ್ರ ಮೂಲದವನಾದ ನಮ್ಮಪ್ಪ ಆ ಕಡೆಯ ಫ್ಯೂಡಲ್ ಲಾರ್ಡ್‌ಗಳ ಬಗ್ಗೆ ಹೇಳುತ್ತಿದ್ದ ವದಂತಿಗಳನ್ನು ಕೇಳುತ್ತ ಬಾಲ್ಯದಾಟಿದವನು ನಾನು. ನಾನು ಹೇಗೆ ಬರೆಯೋದ್ನ ಕಲಿತೆ ಎಂಬುದ ನನ್ಗೂ ಆಶ್ಚರ್ಯದ ಸಂಗತಿಯೇ. ಒಂದು ಖರೇ ಸಂಗತಿ ಹೇಳಬೇಕೆಂದ್ರೆ ನಾನು ಬರೆಯೋದ್ನ ಕಲಿತದ್ದೆ ಕದಿಯೋದ್ರಿಂದ್ರ. ಅಲ್ಲಲ್ಲಿ ಚೂರುಪಾರುಕದ್ದು ಬರೆಯೋದ್ನ ಕಲಿತು ಇಪ್ಪತ್ತನೆ ವಯಸ್ಸಿನಿಂದ ಸ್ವಸಾಮಾರ್ಥ್ಯದಿಂದ ಬರೆಯಲು ಶುರುಮಾಡ್ದೆ.

ಜ್ಯೂ: ಅಂತೂ ಕದಿಯೋದ್ರಿಂದ ಬರೆಯೋದ್ನ ಕಲ್ತೆ ಅಂತ ಹೇಳ್ತಿದ್ದೀಯ! ನಿನ್ನ ಧೈರ್ಯ ಮೆಚ್ಚಬೇಕಾದ್ದೆ. ಒಟ್ಟು ಎಷ್ಟು ಕಥಿ ಕಾದಂಬ್ರಿ ಬರ್ದು ಸಾಹಿತ್ಯಲೋಕವನ್ನು ಗಲೀಜು ಮಾಡಿದ್ದೀಯಾ.

ಸೀ: ಒಟ್ಟು ಇನ್ನೂರು ಕಥೆ ಬರೆದಿರಬೌದು ನೋಡು, ಕಾದಂಬ್ರಿ ಹತ್ತನ್ನೆಲ್ಡು...

ಜ್ಯೂ: ಅದ್ರ ಪೈಕಿ ನಿನ್ಗೆ ಸಂತೋಷ ಕೊಟ್ಟೋವು.

ಸೀ: ಒಂದೂ ಇಲ್ಲ...

ಜ್ಯೂ: ಅಷ್ಟೊಂದು ಹೆಂಗ್ ಬರೆದ್ಯೋ ಮಾರಾಯಾ;

ಸೀ: ಕೈಯಿಂದ

ಜ್ಯೂ: ಥೂ ನಿನ್ನ. ಕೈಯಿಂದ ಬರೆಯದೆ ಯಾರಾದ್ರು ಕಾಲ್ನಿಂದ ಬರೀತಾರೇನು! ಹಂಗಲ್ಲ ನಾನು ಕೇಳಿದ್ದು ಕಥೆಗೆ ವಸ್ತುಪಸ್ತು ಇತ್ಯಾದಿ...

ಸೀ: ನಮ್ಮ ಸುತ್ತಲಮಂದಿ ಪ್ರದೇಶಾನೆ ಹಂಗೈತಪ್ಪಾ... ಅಬ್ಜರ್ವೇಶನ್ನು ಮುಖ್ಯ. ಇದ್ಕೊಂದು ಉದಾಹರಣೆ ಕೊಡ್ತೀನಿ ನೋಡು.. ಹತ್ತು ವರ್ಷದ ಹಿಂದಿನ ಮಾತು. ಕೆಲವು ಹೆಣ್ಣುಗಂಡು ಮಂದಿ ಮಾತಾಡ್ತಿದ್ರು. ಅವ್ರ ಮಾತುಕಥಿ ಹಾವ ಭಾವ ನೋಡ್ತಾ ಮೈಮರೆತಿದ್ದೆ. ಆಗ ಒಬ್ಬ ಹೆಣ್ಮಗ್ಳು ಇದ್ಕಿದ್ದಂಗೆ ಏನೋ ಹಂಗ ನೋಡ್ತಿ ತಿನ್ನೋರಂಗೆ... ನಿಂಗೆ ಅಕ್ಕತಂಗೇರಿಲ್ಲೇನಂತ ಗಲಾಟೆ ಮಾಡಿ ಬಿಟ್ಳು ಮಾರಾಯಾ...

ಜ್ಯೂ: ಆಕೆ ಗಲಾಟೆ ಮಾಡಿದ್ದು ಚಲೋ ಆಯ್ತು ಬಿಡು.. ಆಕೆ ಮೊಲೆ ಉಣ್ಣಿಸುತ್ತಿದ್ದ ಮಗು ನೀನೇ ಆಗಿದ್ರೆ ಅಂತ ಯೋಚಿಸುತ್ತಿದ್ದುದರಿಂದ್ಲೇ ಈ ಪರಪಾಟಾಗಿದ್ದಿರಬೇಕು.

ಸೀ: ಏನೋ

ಜ್ಯೂ:ಕನ್ನಡ ಚಿತ್ರರಂಗದಲ್ಲಿ ಅಚಂದ್ರಾರ್ಕವಾಗಿ ಉಳಿಯಬೇಕೂಂತ ಏನೇನೋ ಸರ್ಕಸ್ಸು ಮಾಡ್ತಿದ್ದಿಯಂತೆ.

ಸೀ: ನಾನ್ಯಾವಾಗ ಅಂಥ ಸರ್ಕಸ್ಸು ಮಾಡಿದ್ನೋ ಪುಣ್ಣಾತ್ಮ....

ಜ್ಯೂ: ನೀನು ಗಾಂಧಿನಗರದಲ್ಲಿ ಅಡ್ಡಾಡ್ತಿದ್ದುದನ್ನು ನಾನ್ನೋಡಿಲ್ಲಾಂದ್ಕೊಂಡೀಯಾ.

ಸೀ:ಅನ್ನಪೂರ್ಣ ಹೋಟ್ಲು ಚಿಕನ್ ಬಿರಿಯಾನಿ ಹುಡ್ಕೊಂಡು ಆಕಡೆ ಹೋಗಿದ್ದುಂಟು ಮಾರಾಯ.

ಜ್ಯೂ: ವಜ್ರೇಶ್ವರಿ ಆಫೀಸಿನಲ್ಲಿ ಹ್ಯಾಪ್‌ಮೋರೆ ಹಾಕ್ಕೊಂಡು ಕೂತಿದ್ನ ನಾನೂ ನೋಡಿದ್ದೀನಪ್ಪಾ...

ಸೀ: ಏನು ಮಾಡೋದಪ್ಪಾ... ಸಿನಿಮಾ ಮಾಡ್ತಿವಂತ ಕಾದಂಬರಿ ರೈಟ್ಸ್ ತಗೊಂಡಿದ್ರು ಕಣಪ್ಪಾ. ಬಾಕಿವಸೂಲು ಮಾಡೋಕೆ ಹೋಗಿ ಪಾಂಡುರಂಗ ಪ್ರಸಾದ ತಿಂದು ಹೊಟ್ಟೆ ಮತ್ತು ತಲೆಕೆಡಿಸ್ಕೊಂಡಿದ್ದುಂಟು.

ಜ್ಯೂ: ನಿನ್ನ ಬದುಕಿನ ವಾಕರಿಕೆ ದಿವಸಗಳು ಅಂದ್ರೆ ಯಾವುವು?.

ಸೀ: ರಾಜಕಾರಣಿಗಳ ಹಿಂದೆ ಮುಂದೆ ಸುತ್ತಾಡಿದ ದಿನಗಳು.

ಜ್ಯೂ: ಈಗ್ಲೂ ಸುತ್ತಾಡೋದಿದೆಯಾ!

ಸೀ: ಇಲ್ಲಾ ಮೇರಿ ತಿಂಗ್ಳಿಂದ ಯಾವ ರಾಜಕಾರಣಿ ಹತ್ರ ಹೋಗಿಲ್ಲ.

ಜ್ಯೂ: ಬೆಂಗ್ಳೂರು ಕಡೆಗೇನಾದ್ರು.

ಸೀ: ಇಲ್ಲಪ್ಪ, ಬೆಂಗಳೂರ ಕಡೆಗೆ ಹೋಗಬಾರ್ದಂತ ತೀರ್ಮಾನಿಸಿದ್ದೀನಿ. ಅಂಥ ಕೆಲಸ ಇದ್ದಲ್ಲಿ ಬೆಂಗ್ಳೂರೇ ಯಾಕೆ ಗೂಳ್ಯಂ ಕಡೆ ಬರಬಾರ್ದೂಂತ.

ಜ್ಯೂ: ನಿನ್ಗೆ ಯಾರ ಬಗ್ಗೆ ಅಯ್ಯೋ ಅಂತ ಅನ್ನಿಸುತ್ತೆ!


ಸೀ: ನನ್ನ ಕಥಾಸಂಕಲನ ಕಾದಂಬರಿ ಪ್ರಕಟಿಸೋ ಪ್ರಕಾಶಕರನ್ನು ಕಂಡಾಗ.

ಜ್ಯೂ: ನಿನ್ನ ಬದುಕಿನಲ್ಲಿ ವಿಶೇಷ ಸುಖದ ಕ್ಷಣಗಳೇನಾದ್ರು..

ಸೀ: ಸುಂದರವಾದ ಹೆಂಗಸರು ಕಣ್ಣು ಮಿಟುಕಿಸಿದಾಗ ಅಂತ ಹೇಳಬಹುದೂಂತ ತಿಳ್ಕೊಂಡು ನೀನೀ ಪ್ರಶ್ನೆ ಕೇಳಿದ್ದೀ ಅಂತ ನನ್ಗೊತ್ತು. ಮಿ.ಜೂನಿಯರ್...... ಇನ್ನು ನೀನು ಸಂದರ್ಶನ ಸಾಕುಮಾಡಿ ಇಲ್ಲಿಂದ ಹೊರಟ್ರೆ ಅದೇ ಸುಖದ ಕ್ಷಣ.

ಜ್ಯೂ: ಆಯ್ತು ಮಾರಾಯಾ. ಈ ಸಂದರ್ಶನ ಪ್ರಕಟಾದ್ಮೆಲೆ ನಿನ್ಗೆ ಗತಿ ಕಾದಿದೆ... ನೋಡ್ತಿರು ಬರ್ತೀನಿ.

- ಎಂದು ಹೇಳಿ ಜ್ಯೂನಿಯರ್ ಅಲ್ಲಿಂದ ಹೊರಟುಹೋಗುತ್ತಲೆ ಸೀನಿಯರ್ ಕುಂವೀ ಆದ ನಾನು ನೆಮ್ಮದಿಯ ಉಸಿರು ಬಿಟ್ಟೆ.



ಏಕೆ?

ನಮ್ಮ ದೇಶದ ರೈತ
ಉದ್ಧಾರವಾಗಿಲ್ಲವೇಕೆ?
ಬೀಜದಿಂದ ಬೆಳೆಯುವರಗೆ
ಮಾತ್ರ ಅವನ ಜವಾಬ್ದಾರಿ.
ನಂತರದ್ದೆಲ್ಲಾ ವ್ಯಾಪಾರಿ

-ಚಿನ್ನವೀರ ನಾಲ್ವಾಡ

FORM IV

Statement about ownership and other particulars about newspaper "BISILA BADUKU" as required to be published under Section 19-D(b) of the Press and Registration of Books Act, read with Rule 8 of the registration of Newspapers (Central) Rules, 1956.

1. **Place of Publication** : Bangalore
2. **Periodicity of Publication** : Monthly
3. **Printer** : Chandrakanta Vaddu, Citizen of India, 473, I Cross, I Block, III Stage, Near Water Tank Bus Stop, Basaveshwarnagar, Bangalore-79.
4. **Publisher** : Chandrakanta Vaddu, Citizen of India, 473, I Cross, I Block, III Stage, Near Water Tank Bus Stop, Basaveshwarnagar, Bangalore-79.
5. **Editor** : Chandrakanta Vaddu, Citizen of India, 473, I Cross, I Block, III Stage, Near Water Tank Bus Stop, Basaveshwarnagar, Bangalore-79.
6. **Printing** : M.N.S. Enterprises, Bhattarahalli, Old Madras Road, Bangalore - 49.

I, Chandrakanta Vaddu, hereby declare that the particulars given above are true to the best of my knowledge and belief.


Sd/-
(Chandrakanta Vaddu)
Publisher.

Date : 28.2.98

ಬಹುಮಾನಿತ ಕಥೆ

ಯು. ಆರ್. ಲಲಿತಾ





ರಾತ್ರಿಯೆಲ್ಲಾ ಮಳೆ ಸುರಿದುದು ಸಾಲದೆಂಬಂತೆ ಬೆಳಗಾದರೂ ಮಳೆ ಸಣ್ಣಗೆ ಹನಿಯುತ್ತಲೇ ಇತ್ತು. ಸೂರ್ಯನಿಗೂ ಮೋಡದ ಮುಸುಕು ಸರಿಸಿ ಹೊರಬರುವ ಇಚ್ಛೆ ಇರದೆ ವಸುಂದರೆ ಕತ್ತಲಲ್ಲೆ ಮುಳುಗಿತ್ತು. ನಗರದ ಅಡ್ಡಾದಿಡ್ಡಿ ಬೆಳೆದ ಒಂದು ಗಲ್ಲಿಯಲ್ಲಿ ಮೂರು ಕೋಣೆಯ ಸಾಕಷ್ಟು ದೊಡ್ಡದಾದ ಹಳೆಯ ಮನೆ. ಅದರಲ್ಲಿ ಒಂದು ಕೋಣೆಯ ಅರ್ಧಭಾಗವೆಲ್ಲ ಅಕ್ಕಿ ಬೇಳೆಕಾಳುಗಳ ಮೂಟೆಗಳಿಂದ ತುಂಬಿ ಹೋಗಿದ್ದರೂ ಇನ್ನರ್ಧ ಭಾಗ ಸ್ವಚ್ಛವಾಗಿತ್ತು. ಮೂಲೆಯಲ್ಲಿ ಮುದುರಿ ಮಲಗಿದ ಪುಟ್ಮಾಣಿಗೆ ಎಂತೆಂಥದೊ ಭೀಕರ ಕನಸುಗಳು. ಹೊದಿಕೆಯೊಳಗೆ ನಡುಗುತ್ತಿದ್ದ. 'ಅಯ್ಯೋ ಬಿದ್ರೂ' ಅಂದ, 'ಎಲ್ಲ ಸೇರಿ ಹೊತ್ತಾಕಿಯೋ' ಎಂದ, 'ನಾ ಬತ್ತೆ ತಾಳಿ ದೊಡ್ಡಪ್ಪಯ್ಯ' ಎಂದವನೆ ಹೊದಿಕೆ ಕಿತ್ತೆಸೆದು ಒಮ್ಮೆಲೆ ಕೂತ. ಪುಟ್ಮಾಣಿ ಬೆಳಗಿನ, ಮಳೆಯ ಥಂಡಿ ಹವೆಯಲ್ಲೂ ಪೂರ ಬೆವತಿದ್ದ, ಏಳಬೇಕು ಎನ್ನುವುದರೊಳಗೆ ನಾಗಮ್ಮ ಬಾಗಿಲಿಗೆ ಬಂದಾಯಿತ್ತು.

'ಏ ಮಾಣಿ ಇನ್ನೂ ಎದ್ದಿಲ್ಯನಾ? ಒಳ್ಳೆ ಕುಂಭಕರ್ಣನ ಸಂತತಿಕಾಣ್' ಎನ್ನುತ್ತ ಮತ್ತೂ ಒಳ ಬಂದರು. ಪುಟ್ಮಾಣಿ ಬಿರುಗಣ್ಣು ಮಾಡಿ ಕೂತೇ ಇದ್ದ ಕನಸಿನ ಭಯ ಹೋಗಿರಲಿಲ್ಲ. 'ಎಂಥಾಯ್ತು ಮಾಣಿ ಹೀಂಗ್ ಕೂತಿದ್ದಿ? ಕನಸ್ ಕಂಡ್ಯ?' ಎಂದರು ಸೆರಗಿಗೆ ಕೈ ಒರಸಿಕೊಳ್ಳುತ್ತಾ.

ದೊಡ್ಡಮ್ಮನ ಸ್ವರ ಮೆದುಳಿನ ಆಳಕ್ಕೆ ಇಳಿದದ್ದೆ ಪುಟ್ಮಾಣಿ ಕುಂಡಿಗೆ ಬಿಸಿ ಮಗಚುಕೈ ತಾಕಿದಂತೆ ಚುರುಕಾದ. ''ಎಂತಿಲ್ಲೆ ದೊಡ್ಡಮ್ಮ ಕೆಟ್ಟ ಕನಸ್ ಬಿದ್ದಿತ್ತ್ ದೊಡ್ಡಪ್ಪಯ್ಯನ್ನ ಯಾರೋ ಕೆಸರಲ್ಲಿ ಹೊತ್ತಾಕಿ ಓಡ್ಹೋತ್ರು. ನಾನ್ ಹೋಯಿ ಕಾಪಾಡ್ಕು ಎಂಬಷ್ಟಿಕೆ ಎಚ್ಚರಾಯಿ ಹೋಯ್ತ್.'' ಎಂದ ಹಾಸಿಗೆ ಮಡಚುತ್ತಾ.

'ಹ್ಞಾಂ ಕಾಪಾಡ್ತೆ, ಕಾಪಾಡ್ತೆ, ಕಾಪಾಡೂಕೆ ನೀನಲ್ದೆ ಇನ್ಯಾರಿದ್ದೊ ಈ ಮನೀಲಿ, ನೀನೇ ಸೈ' ಎಂದು ವ್ಯಂಗ್ಯವಾಡಿ ನಾಗಮ್ಮ ಅಡಿಗೆ ಮನೆ ಕಡೆ ಹೆಜ್ಜೆ ಹಾಕಿದರು.

ಪುಟ್ಮಾಣಿ ಬಚ್ಚಲಿಗೆ ಬಂದವನೆ ಬಾಯಿ ಹಿಸಿದು ಹೋಗುವ ಹಾಗೆ ಹಲ್ಲನ್ನು ಗಸಗಸ ಉಜ್ಜಿ ಮುಖ ತೊಳೆದು ಹೊರಬಂದ. ಹೊರಗೆ ಇನ್ನೂ ಕತ್ತಲಿದ್ದರೂ ಕಾಲ ನಿಲ್ಲುತ್ತದೆಯೇ, ಸರ್ಕಾರಿ

ನರಸಿಂಹ ಐತಾಳರೂ ಪುಟ್ಮಾಣಿಯೂ



ಶಾಲೆಯಾದರೂ ಅವನಿಗಾಗಿ ಕಾಯುತ್ತದೆಯೆ. ಬೇಗ ಕೆಲಸ ಮುಗಿಸಿ ಶಾಲೆಗೆ ಹೊರಡಬೇಕು. ಮಾಡುವ ಕೆಲಸ ಹಾಗೆ ಬಿಟ್ಟು ಹೋದರೆ ದೊಡ್ಡಮ್ಮನಿಂದ ಸಹಸ್ರನಾಮ. ಅವರು ಬಾಯಿ ತೆಗೆದರೆ ಮುಗಿಯಿತು ಸ್ವತಃ ನರಸಿಂಹ ಐತಾಳರ ಮೈಯೆ ಅದುರಿ ಕೆಳಗುದುರಬೇಕು! ಅಂಥ ಜೋರು.

ಬಾವಿ ಕಟ್ಟೆಯ ಬಳಿ ರಾಶಿ ಬಿದ್ದಿದ್ದ ಪಾತ್ರೆಗಳನ್ನು ದಡಬಡಾಂತ ತೊಳೆದು ಬುಟ್ಟಿಗೆ ಹಾಕಿದ. ದೇವರ ಕೋಣೆಯನ್ನು ಸ್ವಚ್ಛಮಾಡಿ ಅಲ್ಲಿದ್ದ ಎಲ್ಲಾ ದೇವರುಗಳನ್ನು ಫಳಫಳ ಹೊಳೆಯುವ ಹಾಗೆ ತೊಳೆದಿಟ್ಟು ಪೂಜೆಗೆ ಹೂ ಕೊಯ್ಯಲು ಹೊರಬಂದ. ಅಷ್ಟರಲ್ಲಿ ಕತ್ತಲು ಕಳೆದು ಬೆಳಕು ಗಿಡಮರಗಳನ್ನು ತೋರತೊಡಗಿತ್ತು. ಐತಾಳರು 'ಮಾಣಿ, ಮಳೆ ಹನೀತಿತ್ತ್ ಮಂಡೆ ಒದ್ದೆ ಆತ್ತು ಒಂದರವಿ ಹಾಯ್ಕೊ'

ಮುತ್ತು

ನೀ
ನನ್ನಧರ
ಬ್ಯಾಂಕಲ್ಲಿ
ಎಷ್ಟು ಲೂಟಿ
ಮಾಡಿದರೂ
ಖಾಲಿಯಾಗದಂತಿರುವ
ಬ್ಯಾಲನ್ಸ್

-ನಾಗರಾಜ ಚಕ್ರಮನಿ

ಎಂದರು. ಇನ್ನೆಂಥ ಹಾಕಿಕ್ಕೊಳ್ಳೋದು ಪಾತ್ರೆ ತೊಳೆಯುವಾಗಲೆ ಅದು ಒದ್ದೆಯಾಗಿದೆ. ಆದರೆ ದೊಡ್ಡಪ್ಪಯ್ಯ ಪ್ರೀತಿಯಿಂದ ಅಷ್ಟಾದರೂ ಹೇಳಿದರಲ್ಲ ಎಂದು ಪುಟ್ಮಾಣಿ ಖುಷಿಯಾದ. ತುಳಸಿ ಕೊಯ್ದು ಮಲ್ಲಿಗೆ ಚಪ್ಪರದ ಹತ್ತಿರ ಬಂದ. ಹೂವಿನ ದಳಗಳು ಮಳೆಯ ಹೊಡೆತದಿಂದ ದುರ್ಬಲಗೊಂಡಿದ್ದವು. ಆದಷ್ಟು ಚೆನ್ನಾಗಿರುವುದನ್ನು ಹುಡುಕಿ ಕೊಯ್ದ, ನರಸಿಂಹ ಐತಾಳರು ಮಿಂದು ಹಬೆಯಾಡುತ್ತಾ ಹೊರಬಂದರು. ನಾಗಮ್ಮನವರು ಸ್ನಾನಕ್ಕೆ ಹೊರಡುವುದರಲ್ಲಿ ಪುಟ್ಮಾಣಿ ಬಚ್ಚಲಿಗಿಳಿದಾಗಿತ್ತು. ನಾಗಮ್ಮನವರ ಮನಸ್ಸು ಬಚ್ಚಲ ಹಂಡೆಯಷ್ಟೆ ಕುದಿಯ ತೊಡಗಿತು.

'ಹಿಂಗ್ಯಾಕೆ ಮಾಡ್ತೆ ಮಾಣಿ? ಏಗ್ಳಿಗೂ ನಾ ಮಿಯೋ ಕೋಪಷ್ಷಿರೆ ನೀನ್ ಹೋಯಿ ಕೂಕಣ್ತೆ, ಬೇಗ್ ಬಪ್ಪದೂ ಇಲ್ಲೆ. ಹಂಗಾರೆ ಚಟ್ನಿಗೆ ಅರೆಯೋದು ನೀನೇಯ' ನಾಗಮ್ಮ ಕೋಪದ ನೆಪದಲ್ಲಿ ಒಂದು ಹೆಚ್ಚಿಗೆ ಕೆಲಸವನ್ನು ಹಚ್ಚಿದರು.

ಪುಟ್ಮಾಣಿ ಬಟ್ಟೆ ತೆಗೆದು ಉರಿಯುತ್ತಿರುವ ಹಂಡೆಯ ಒಲೆ ಮುಂದೆ ಕುಳಿತು ಚಳಿಕಾಸ್ಕೊತಿದ್ದ. ಅವನಿಗೆ ಬಯ್ಗಳು ಹೊಸದಲ್ಲ. ಹೈಸ್ಕೂಲಿನ ಕೊನೆಯ ತರಗತಿಗೆ ಬಂದಾಗಿದೆ. ಈವರೆಗೆ ಎಷ್ಟೇ ಚೆನ್ನಾಗಿ ಕೆಲಸ ಮಾಡಿದರೂ ಬಯ್ಗಳಿಲ್ಲದ ದಿನವಿಲ್ಲ. ನಾಗಮ್ಮ ಸಂತೋಷವಾಗಿ ಮಾತನಾಡಿಸಿದ್ದು ಅವನಿಗೆ ನೆನಪೇ ಇಲ್ಲ. ಅವನಿಗೆ ದೊಡ್ಡಪ್ಪಯ್ಯ ಅಂದರೆ ಪಂಚಪ್ರಾಣ, ಸಲುಗೆ, ಪ್ರೀತಿ, ಗೌರವ. ಅವರ ಮಕ್ಕಳು, ಹೊಟೇಲು ಕೆಲಸದವರು ಅವರನ್ನು ಜಿಪುಣಾಗ್ರೇಸರ ಎಂದು ಆಡಿಕೊಂಡರೂ ಅವನಿಗೆ ಮಾತ್ರ ಅವರು ಬಹಳ ಹುಷಾರಿ ಎಂದೇ ಕಂಡಿದೆ. ಅವರ ಅಚ್ಚುಕಟ್ಟುತನ ಅವನಿಗೆ ಮೆಚ್ಚುಗೆಯೇ. ಹೊಟೇಲಿನ ಕೆಲಸದಲ್ಲಿ ಅವರಿಗೆ ಎಷ್ಟು ನಿಷ್ಠೆಯೊ ಅವನಿಗೂ ಅಷ್ಟೆ ಅಕ್ಕರೆ. ಬಿಡುವಿರುವಾಗಲೆಲ್ಲಾ ಅವನು ಅವರ ಹಿಂದೆ ಮುಂದೆ ಸುತ್ತುತ್ತಾ 'ಅದು ಹಾಂಗ, ಇದು ಹೀಂಗ' ಎಂದು ಕೇಳಿ ಮಾಡುವ ವಿಧಾನವನ್ನು ಕಲಿಯಲು ಆಸಕ್ತಿ ತೋರುತ್ತಿದ್ದ. 'ಮಾಣಿ ಈ ಕೆಲ್ಸದವರ್ ಮೇಲ್ ಒಂದು ಕಣ್ ಇಡದಿದ್ರೆ ಮಾಡಿದೆಲ್ಲಾ ಅವೇ ತಿಂತೊ' ಎಂದು ಐತಾಳರು ಸ್ನಾನ ಮಾಡಿ ಹೊಟೇಲಿಗೆ ಬೇಗ ಹೋಗುವುದನ್ನು ಕಾಣುವಾಗೆಲ್ಲ ಅವನಿಗೆ ಖುಷಿ. 'ದೊಡ್ಡಪ್ಪಯ್ಯ ಹೀಂಗ್ ಇರೂಕೆ ಅವೆಲ್ಲ ಕಂಟ್ರೋಲಲ್ಲಿಪ್ಪದ್' ಎಂದು ತಾನೂ ದೊಡ್ಡವನಾದ ಮೇಲೆ ಆಳು ಕಾಳುಗಳನ್ನು ಇಟ್ಟುಕೊಂಡು ಆಳೋದನ್ನು ಕಲ್ಪಿಸಿಕೊಳ್ಳುತ್ತಾನೆ. ತನ್ನಂತಹವನಿಗೆ ಅದು ಅಸಾಧ್ಯ ಎಂದು ಅನ್ನಿಸಿ ತನ್ನ ದುರ್ಬಲತೆಯನ್ನು ಹಳಿದುಕೊಳ್ಳುತ್ತಿದ್ದ.

'ಏ ಮಾಣಿ, ಎಂಥ ಮಾಡ್ತಿದ್ದೆ? ಮೀಯೊ ಸದ್ದೆ ಕೇಳ್ತಿಲ್ಯಲೆ? ಎಲ್ರಿಗೂ ಇಪ್ಪದೆ ನಿಂಗೂ ಇತ್ತ್. ಅದನೆಂಥ ಕಾಂಬುದು? ಬೇಗ ಮಿಂದ್ಕಂಡು ಬಪ್ಪಕಾತಿಲ್ಯಾ?' ದೊಡ್ಡಮ್ಮ ಒಂದು ಕೂಗು ಹಾಕಿದ್ದೆ ಪುಟ್ಮಾಣಿ ಸ್ನಾನದ ಜೋರು ಸದ್ದು ಮಾಡತೊಡಗಿದ. ಇವತ್ತು ಅವನು ಸ್ನಾನ ಮಾಡಿ ಹೊರಬರುವುದರೊಳಗೆ ಐತಾಳರ ಪೂಜೆ ಮುಗಿದಿತ್ತು. ಕಂಡು ಅವನು ವಿಸ್ಮಿತನಾದ.

ಐತಾಳರು ಒದ್ದೆ ಪಾಣಿಪಂಚೆಯಲ್ಲೆ ಅತ್ತಿಂದಿತ್ತ ಇತ್ತಿಂದತ್ತ ತಿರುಗುತ್ತಿದ್ದರು. ಇದ್ದಕ್ಕಿದ್ದ ಹಾಗೆ, 'ಅಲ್ಲೇ ಇರ್ಕು ಇನ್ ಎಲ್ಲಿಗ್ಹೋತ್' ಅಂದವರೆ ಕಕ್ಕಸ್ಸಿನ ಕಡೆಗೆ ಹೊರಟರು. ಪುಟ್ಮಾಣಿಯೂ ಅವರ ಹಿಂದೆ ಹೊರಟ.

ಪಾಯಖಾನೆ ಒಳಗೆ ಬಗ್ಗಿ ನೋಡಿದ ಐತಾಳರು 'ಇಲ್ಲಿ ಇಲ್ಯಲೆ, ಹಂಗಾರೆ ಅದು ಹೋದ್ದೆಲ್ಲಿಗೆ? ಕೊಳಕಾತ್ತೆಂದು ಇಲ್ಲೇ ಬದೀಲಿ ಟ್ಟಾಂಗೆ ನೆನಪು. ಸೀದಾ ಗುಂಡೀಗೇ ಹೋಯಿ ಬಿತ್ತಾ' ಎಂದು ಬಗ್ಗಿ ನೋಡಿದರು.

ಪುಟ್ಮಾಣಿಯೂ 'ಎಂಥದ್ದು ದೊಡ್ಡಪ್ಪಯ್ಯ ಬಿದ್ದಿದ್?' ಎಂದು ತಾನೂ ಬಗ್ಗಿ ನೋಡಿದ. ಒಂದಷ್ಟು ಮಲ ಬಿಟ್ಟು ಮತ್ತೇನು ಕಾಣಲಿಲ್ಲ. 'ವಜ್ರದ್ ಉಂಗ್ರ ಮಾಣಿ, ಅದ್, ಜತೀಗೇ ಆ ರಾಘವೇಂದ್ರಸ್ವಾಮಿ ಬೆಳ್ಳಿ ಉಂಗ್ರವೂ ಹೋಯ್ತ್ ಕಾಣ್' ಎಂದರು ಅತೀವ ದುಃಖದಲ್ಲಿ. ತುಪ್ಪದ ಬಿಂದಿಗೆ ತಿಪ್ಪೆಯ ಮೇಲೆ ಬಿದ್ದಂತೆ ತಳಮಳಿಸಿದರು. ಬಾಳಿನಲ್ಲಿ ಎಂದೂ ಅವರು ಇಷ್ಟು ಬೆಲೆಯುಳ್ಳದ್ದನ್ನು ಕಳೆದುಕೊಂಡಿರಲಿಲ್ಲ. ಹತ್ತು ರೂಪಾಯಿ ಬರಬೇಕಿದ್ದರೆ ಅಲ್ಲಿಗೆ ಇಪ್ಪತ್ತು ಬಾರಿ ಹೋಗಿ ಬರೋವರಿಗೆ, ಆ ಉಂಗುರ ಕಳೆದೆ ಹೋಗಿ ಬಿಟ್ಟರೆ ಅವರು ಎದೆಯೊಡೆದು ಸತ್ತಾರೆಂದು ಪುಟ್ಮಾಣಿ ಕಳವಳಿಸಿದ. ದೊಡ್ಡ ಹರಳಿನ ಆ ವಜ್ರದುಂಗರಕ್ಕೂ ಐತಾಳರಿಗೂ ಇರುವ ಸಂಬಂಧ ಐತಾಳರಿಗಷ್ಟೆ ಗೊತ್ತು. ಶಿವಮೊಗ್ಗಾದಲ್ಲಿ ಇದ್ದಾಗ ಆ ಉಂಗುರ ಗೆಳೆಯರೊಬ್ಬರು ಕೊಟ್ಟದ್ದು, ಅದರೊಳಗೆ ಅವರ ಒಳ್ಳೆಯತನ ಪ್ರೀತಿ, ವಿಶ್ವಾಸ ಎಲ್ಲ ಅಡಗಿದೆ ಎಂಬುದು ಮಾತ್ರ ಪುಟ್ಮಾಣಿಗೆ ತಿಳಿದಿತ್ತು. ಐತಾಳರಿಗೆ ಮಗ ರಾಘವೇಂದ್ರನೊಬ್ಬನನ್ನು ಕೇಳುವುದು ಒಂದು ಮಾತ್ರ ಬಾಕಿ ಇತ್ತು. ಹೆಂಡತಿ ಕೊಟ್ಟ ತಿಂಡಿ ತಿಂದು ಅವರು ಹೊಟೇಲಿಗೆ ಹೊರಟರು. ಅಷ್ಟರಲ್ಲಿ ಅವನೇ ಬಂದ. ಗಲ್ಲ ಬಿಟ್ಟು ಬಂದ ಅವನನ್ನು ಕಂಡು ಕೋಪ ಬರುವ ಬದಲು, ಉಂಗುರವನ್ನೆ ಕಂಡಷ್ಟು ಖುಷಿಯಾಯಿತು.

'ಮಾಣಿ ರಾಘು ನನ್ ಉಂಗ್ರ ತಾಯಿಲ್ಲೆ' ಎಂದರು ಹಾಕಿಕೊಂಡ ಚಪ್ಪಲಿಯನ್ನು ಕಳಚಿಡುತ್ತಾ. ರಾಘು ' ನಿಮ್ಮುಂಗ್ರ ನಾ ತಗಂಡಿಲ್ಲೆ, ನಂಗೆಂತಕ್ಕೆ' ಎಂದವನೆ ಸೀದಾ ಕೋಣೆಗೆ ಹೋಗಿ ಬೀರು ತೆಗೆದು ಒಳಗೇನೊ ಇಟ್ಟು ಬಾಗಿಲು ಹಾಕಿದ. ಬೆಳಿಗ್ಗೆ ತಮ್ಮ ನಂತರ ರಾಘುವೇ ಪಾಯಖಾನೆಗೆ ಹೋದದ್ದು. ಅವ ತಗ್ಗಂಡಿಲ್ಲೆ ಅಂದ್ರೆ ಉಂಗುರ ಹೋಯಿತೆಲ್ಲಿಗೆ ಎಂದು ಐತಾಳರು ಚಿಂತಿಸಿದರು. ಕುಸಿದು ಕುಳಿತವರೆ, 'ಮಾಣಿ ಹಂಗಾರೆ ಆ ಗುಂಡೀಗೆ ಹೋಯ್ ಬಿತ್ತಂತ ಕಾಣತ್ ಹೋಯಿ ಒಂದ್ ಚೂರ್ ಕಾಣ್ಮಾಣಿ' ಎಂದರು ಒಣಗಿದ ಗಂಟಲಲ್ಲಿ.

'ಅಪ್ಪಯ್ಯ ನಿಮ್ಗೆ ಮಂಡೆ ಸಮ ಇತ್ತ? ಆ ಗುಂಡೀಗ್ ಕೈ ಹಾಕಿ ಕಾಂಬ್ಯಾತ್ತ ಕಾಸಿನ್ ಆಸಿ ಇಪ್ಪೋರ್ ಹೇಲ್ಮೇಲ್ ಬಿದ್ರೂ ಹೆಕ್ಕಂತ್ರ್ ಎಂಬುದು ನಿಜಕಾಣಿ. ಒಂದ್ ಹೋದ್ರೆ ಇನ್ನೊಂದ್ ತಗೊಂಬ್ಯಾತ್ತಿಲ್ಯ? ನಂಗ್ ಕಾಲೇಜಿಗೆ ಹೊತ್ತಾತು. ನಾ ಹೋತೆ' ಎಂದು ರಾಘು ಸಿಟ್ಟಿನಲ್ಲಿ ಆಡಿದವನೆ ಸ್ನಾನವನ್ನು ಮಾಡದೆ, ಸಿಗರೇಟು ತೆಗೆದು ಹಚ್ಚುತ್ತಾ ಕೆದರಿದ ತಲೆಯಲ್ಲಿ ಹೋಗಿಯೆ ಬಿಟ್ಟ. ನೋಡುವುದಕ್ಕೆ ಮಾತ್ರವಲ್ಲ ಗುಣವೂ ತಾಯಿಯ ಹಾಗೆಯೇ ಎಂದುಕೊಂಡ ಪುಟ್ಮಾಣಿ. ವಜ್ರದ ಉಂಗುರ ಕಳೆದರೆ ಮತ್ತೊಂದು ತಗೊಳ್ಳಿ ಅಂತಾನಲ್ಲ ಎಂಥಾ ತಂದೆಗೆ ಎಂಥಾ ಮಗ. ಶೀನಣ್ಣ, ಶೀಲಕ್ಕ, ರಾಘಣ್ಣ ಯಾರಿಗೂ ತಂದೆಯ ಗುಣ ಬರಲೇ ಇಲ್ಲ. ಎಲ್ಲರೂ ಹಣವನ್ನು ನೀರಿನ ಹಾಗೆ ಖರ್ಚುಮಾಡುವವರೆ. ತಾನು ಹಾಗಲ್ಲ, ಅದಕ್ಕೆ ನನ್ನ ಕಂಡರೆ ದೊಡ್ಡಪ್ಪಯ್ಯಂಗೆ ತುಂಬಾ ಪ್ರೀತಿ ಎಂದು ತನ್ನ ಬೆನ್ನು ತಾನೆ ತಟ್ಟಿಕೊಂಡ.

ಐತಾಳರು ಪಂಚೆ ಕಿತ್ತಿಟ್ಟು ಉಂಗುರ ಹುಡುಕಲು ಹೊರಟರು. ಪುಟ್ಮಾಣಿಯೂ ಜತೆಗೆ ನಿಂತ. ಚೇಂಬರನ್ನು ತೆಗೆದು ಕೊನೆಗೆ ಅಡ್ಡಗಟ್ಟೆಯನ್ನು ಕಟ್ಟಿ ಈ ತುದಿಯಿಂದ ನೀರು ಹರಿಯಿಸಿ ನೋಡಿದರು ಪ್ರಯೋಜನವಾಗಲಿಲ್ಲ. ಐತಾಳರ ಮುಖ ಕಪ್ಪಿಡತೊಡಗಿತು. 'ಧರ್ಮಸ್ಥಳದ ಮಂಜುನಾಥ ನೀನೇ ಕಾಪಾಡ್ಕ್,

ನಿಂಗೆ ಐದು ರೂಪಾಯಿ ಕಳಿಸಿಕೊಡ್ತೆ' ಎಂದರು. ಪುಟ್ಮಾಣಿಗೆ ಮೆಲ್ಲ ನಗು ಬಂತು ' ಅಯ್ಯ ದೊಡ್ಡಪ್ಪಯ್ಯನ ಚೌಕಾಸಿಯೇ! ವಜ್ರಕ್ಕೆಲ್ಲ ಸಾವಿರಗಟ್ಟಲೆ ದುಡ್ಡು ಅಂಬ್ರಲೆ ಇವ್, ಕಂಡ್ರೆ, ಐದ್ರೂಪಾಯಿ ಕಳಿಸಿಕೊಡ್ತೆ ಅಂತ್ರು. ದೊಡ್ಡಪ್ಪಯ್ಯ ಎಲ್ಲ ಕಡೆ ದುಡ್ಡು ಉಳಸತ್ರು' ಎಂದು ಮನದೊಳಗೆ ಅನ್ನುತ್ತಲೆ ತಾನೂ ದೇವರಿಗೆ ಎರಡು ಹೆಚ್ಚು ನಮಸ್ಕಾರ ಹಾಕುವು ದಾಗಿ ಹರಸಿಕೊಂಡ. ಐತಾಳರು ಮತ್ತೆ ಸ್ನಾನಕ್ಕೆ ಹೋದರು.

ಪುಟ್ಮಾಣಿ ಶಾಲೆಗೆ ಹೋಗುವುದಕ್ಕಾಗಿ ಪುಸ್ತಕ ಜೋಡಿಸಿಕೊಳ್ಳತೊಡಗಿದ. ಅಲ್ಲೆ ಗೂಡಿನ ಮೂಲೆಯಲ್ಲಿ ಎರಡು ಉಂಗುರಗಳು ವಿರಮಿಸಿವೆ. ಖುಷಿಯನ್ನು ತಡೆದುಕೊಳ್ಳದಾದ 'ದೊಡ್ಡಪ್ಪಯ್ಯ ಇಲ್ಯಾಣಿ ನಿಮ್ಮುಂಗ್ರ ಇಲ್ಲಿತ್ತ್ ನನ್ ಗೂಡೊಳಗೆ' ಎಂದು ಮುಗ್ಧನಾಗಿ ಕೂಗಿದ. ಕಣ್ಣುಗಳು ಸಂತೋಷದಿಂದ ಮಿಂಚುತ್ತಿದ್ದವು. ಸ್ನಾನದ ಕೋಣೆಯಿಂದ ಹೊರಬಂದ ಐತಾಳರು ಹೋದ ಪ್ರಾಣವನ್ನು ಮಾಣಿ ತಂದುಕೊಟ್ಟ ನೇನೊ ಎನ್ನುವ ಹಾಗೆ ಬೊಗಸೆಯೊಡ್ಡಿ ಉಂಗುರಗಳನ್ನು ತೆಗೆದುಕೊಂಡರು. ಅದನ್ನೆ ಮತ್ತೆ ಮತ್ತೆ ನೋಡುತ್ತಾ, ಆನಂದಾತಿರೇಕದಲ್ಲಿ ಪುಟ್ಮಾಣಿಯನ್ನು ತಬ್ಬಿಕೊಳ್ಳುತ್ತಾ 'ಎಲ್ಲಿತ್ತಾ ಮಾಣಿ'? ಎಂದರು. 'ನನ್ ಗೂಡೊಳಗಿತ್ತ್ ದೊಡ್ಡಪ್ಪಯ್ಯ ಶಾಲೆಗ್ ಹೋಪಕೆ ಪುಸ್ತಕ ಜೋಡಿಸ್ಕೊಂಬಕೆ ಹೋದ್ದೆಸ್ವೆ ಅಲ್ಲೆ ಬದೀಲಿತ್ತ್, ನೀವ್ ಇಲ್ಲೆ ಹುಡುಕ್ಲಿಲ್ಯ?' ಪುಟ್ಮಾಣಿ ಎಂದವನೆ ಶಾಲೆಗೆ ಹೊರಡಲು ಸಿದ್ಧನಾದ. ದೊಡ್ಡಪ್ಪಯ್ಯನ ವಾಸನೆ ಅವನ ಮೂಗೊಳಗೇ ಇತ್ತು. ಅಷ್ಟರಲ್ಲಿ ಅಲ್ಲಿಗೆ ಬಂದ ನಾಗಮ್ಮ'

'ಕಂಡ್ರಿಯಾ ಪುಟ್ಮಾಣೀನ, ಒಳ್ಳೆ ಮಿಣ್ಣಗಿರ್ತ, ಮಾಡಿದೊಂದೂ ಕಾಣತ್ತಿಲ್ಲೆ. ಉಂಗ್ರ ಕದಿಯೂದ್ ಕದ್ದ, ನಿಮ್ ಪರದಾಟ ಕಾಂಬುಕಾಗ್ದೆ ತಂದ್ ಕೊಟ್ಟು ತಾನೇ ಹುಡುಕಿ ಕೊಟ್ಟಾಂಗಾಡ್ತ. ರಾಘು ಹೋಟ್ಲಲ್ಲಿ ದುಡ್ಡು ಕದೀತಾ ಅಂತ್ರಿ. ಈಗ ಇವ ಮಾಡಿದೆಂತಾ?' ಕಂಚಿನ ಕಂಠದಲ್ಲಿ ಕೈ ಬಾಯಿ ಹಾರಿಸುತ್ತಾ ನುಡಿದರು.

ಪುಟ್ಮಾಣಿಯ ಬೆನ್ನಿಗೆ ಮಾತಿನ ಬಾಣ ಚುಚ್ಚಿತು. 'ಅಯ್ಯೋ ಅಮ್ಮಾ! ಇದೆಂಥಾ ಅಪವಾದ! ಈ ನೆಲ ನನ್ನನ್ನು ನುಂಗಬಾರದ. ದೊಡ್ಡಮ್ಮ ನಾನು ಹೋದ ಮೇಲೆ ಈ ಮಾತು ಆಡಬಾರದಿತ್ತೆ' ಎಂದು ನರಳಿದ.

'ನಾನು, ಸುಮ್ನಾಯ್ಕೊ. ರಾಘು ಎಂಥವ ಅಂತಾ ದಿನಾ ಕಂಡಿದ್ದೇಯ. ಏಗಳಿಗೂ ನಿಂಗೆ ಪುಟ್ಮಾಣಿ ಕಂಡ್ರೆ ಆಗಿದ್ದೇ ಇಲ್ಲೆ. ಉಂಗ್ರ ತಗಂಡ್ ಅವ ಎಂಥ ಮಾಡ್ತ? ನಾನೆ ಅಲ್ಲಿಟ್ಟಿದ್ದು ನೆನಪೇ ಆಯ್ಲಿಲ್ಲೆ.' ಪುಟ್ಮಾಣಿಯ ಕಣ್ಣುಗಳಿಂದ ಜಾರ ಬೇಕಾಗಿದ್ದ ನೀರು ಹಾಗೆ ಇಂಗಿತು. ದೊಡ್ಡಪ್ಪಯ್ಯ ನಿಗೆ ಕೈ ಬೀಸಿ ಶಾಲೆಗೆ ಹೊರಟ.

ಐತಾಳರ ಜನ್ಮವನ್ನೇ ಜಾಲಾಡಿಸಿ, ಅವರ ಅದುವರೆಗಿನ ಗುಣಶೀಲಗಳನ್ನು ಚೂರು ಚೂರಾಗಿ ಕೊಯ್ದಿಟ್ಟು ಬಾಯಿ ಬತ್ತುವವರೆಗೂ ಬಯ್ದು ನಾಗಮ್ಮ ಅಡಿಗೆಗೆ ತರಕಾರಿ ಹೆಚ್ಚ ತೊಡಗಿದರು.

ಅಂದು ನಸುಕಿನಲ್ಲೆ ಎದ್ದ ಐತಾಳರಿಗೆ ತಲೆ ಏಕೊ ಒಣಗಿದ ಹಾಗೆ ಅನ್ನಿಸಿ ಎಣ್ಣೆ ಹಾಕಿಕೊಳ್ಳೋಣವೆಂದು ಉಂಗುರಗಳನ್ನು ಬಿಚ್ಚಿಟ್ಟಿದ್ದರು. ಮತ್ತೆ ಪೂರ ಅವರಿಗೆ ಮರವೆಯೇ ಆವರಿಸಿತ್ತು. ಆದರೆ ತಾವು ತೆಗೆದಿಟ್ಟದ್ದು ತಮ್ಮ ಕೋಣೆಯಲ್ಲಿ. ಅದು ಪುಟ್ಮಾಣಿಯ ಗೂಡಿಗೆ ಹೇಗೆ ಹೋಯಿತು ಎಂದು ಚಿಂತಿಸಿದರು. ಇದರಲ್ಲಿ ರಾಘುವಿನ ಕೈವಾಡವಿರಬೇಕು ಎಂಬ ಅನಿಸಿಕೆಯನ್ನು ಬೆಳಗ್ಗೆಯ ಅವನ ಮುಖಭಾವ ಮಾತುಕತೆ ನೆನಪಾಗಿ ಖಚಿತಪಡಿಸಿತು. ಅವರು ಯೌವನದಲ್ಲಿ ಕಂಡ ಅನೇಕ ಕನಸುಗಳು ಅವರ ಕಣ್ಣೆದುರಿನಲ್ಲೆ ಹೆಣವಾಗುವುದನ್ನು ಕಾಣುತ್ತಾ ಕಾಣುತ್ತಾ ಮಕ್ಕಳ ವಿಷಯದಲ್ಲಿ ಮನಸ್ಸು ಮತ್ತಷ್ಟು ವಿಷವಾಯಿತು. ಇದೆಲ್ಲ ಸದಾಶಿವನ ಶಾಪವೇ? ಇಲ್ಲ ನಾನು ಮಾಡಿದ ಪಾಪವೇ? ಅವರು ಊಹಿಸದಾದರು. ಹೇಳಿಕೊಳ್ಳಲಾಗದ ಸಂಕಟಕ್ಕೆ ಸಿಕ್ಕಿ ಒದ್ದಾಡಿದರು.

ಪುಟ್ಮಾಣಿ ಎಂದೂ ಶಾಲೆ ತಪ್ಪಿಸಿದವನಲ್ಲ. ಆದರೆ ಇವತ್ತು ಹೋಗೋಕೆ ಮನಸ್ಸು ಬಾರದೆ ಸೀದಾ ಪಾರ್ಕಿಗೆ ಬಂದು ಮರವೊಂದರ ಉಬ್ಬಿದ ಬೇರಿನ ಮೇಲೆ ಕುಳಿತ. ಮಳೆ ನಿಂತಿತ್ತು ಆದರೆ ಅವನೊಳಗೆ ಜಡಿಮಳೆ ಸುರುವಾಗಿತ್ತು...'

'ತಾಯಿ ಎಂದರೆ ಮಮತಾಮೂರ್ತಿ ಅಂತಾರೆ. ಆದರೆ ನನ್ನ ಪಾಲಿಗೆ ಆ ತಾಯೆ ಇಲ್ಲ. ನನ್ನ ತಂದೆ ತಾಯಿ ನಾನು ಚಿಕ್ಕವನಾಗಿದ್ದಾಗಲೆ ಸತ್ತರಂತೆ. ದೊಡ್ಡಪ್ಪಯ್ಯ ನನ್ನನ್ನು ಸಾಕಿದರಂತೆ ಎಂದು ಅವರೇ ಹೇಳಿದ್ದು. ದೊಡ್ಡಮ್ಮ ಮಾತ್ರ ಬಯ್ಯೋಕೆ ಕಾಯ್ತ ಇರ್ತಾರೆ. ದೊಡ್ಡಪ್ಪಯ್ಯ ನನ್ನನ್ನು ಇಲ್ಲಿಗೆ ತಂದದ್ದು ಯಾರಿಗೂ ಇಷ್ಟವಿಲ್ಲ. ದೊಡ್ಡಪ್ಪಯ್ಯನ ನೋಡಿದರೆ ಎಲ್ಲಿಗೆ ಓಡಿ ಹೋಗೋಕು ಮನಸ್ಸು ಬರಲ್ಲ. ಇಷ್ಟು ದೊಡ್ಡವನಾದರೂ ರಾಘಣ್ಣಂಗೆ ದೊಡ್ಡಮ್ಮ ಎಣ್ಣೆ ಹಚ್ಚಿ ಒಮ್ಮೊಮ್ಮೆ ಸ್ನಾನ ಮಾಡಿಸುವುದನ್ನು ಕಾಂಬವಾಗ ನನಗೂ ಒಂದು ಅಮ್ಮ ಇದ್ದು ಹೀಗೆಲ್ಲ ಮಾಡುವಂತಿದ್ದರೆ ಎಷ್ಟು ಚಂದವಿತ್ತು' ಎಂದು ಕೂತಲ್ಲೆ ಕೊರಗಿದ. ಅಲ್ಲಿಂದೆದ್ದು ಖಾಲಿಯಿದ್ದ ಕಲ್ಲು ಬೆಂಚಿನ ಮೇಲೆ ಅಂಗಾತ ಮಲಗಿ ಒಂದಷ್ಟು ಹಗಲುಗನಸು ಕಂಡ. ಇದ್ದಕ್ಕಿದ್ದ ಹಾಗೆ ಅವನಿಗೆ ಚಿಕ್ಕಂದಿನಲ್ಲಿ ರಾಘಣ್ಣನೊಡನೆ ಜಗಳವಾಡಿದ ದೃಶ್ಯವೊಂದು ನೆನಪಾಯಿತು.

ದೊಡ್ಡಪ್ಪಯ್ಯ ರಾಘಣ್ಣನಿಗಿಂತ ತನ್ನನ್ನೇ ಹೆಚ್ಚು ಇಷ್ಟಪಡುವುದು ಎಂದಾಗ ರಾಘು ಕೂಗಾಡಿದ್ದ. ನಂಗೆ ಅಮ್ಮ ಇದ್ದಾರೆ, ನನ್ನನ್ನು ಮುದ್ದು ಮಾಡುತ್ತಾರೆ. ನಿಂಗಿಲ್ಲ, ನಿನ್ನನ್ನು ಅಕ್ಕಿ ಕೊಟ್ಟು ಕೊಂಡದ್ದು, ನಿನ್ನಮ್ಮ ಹುಚ್ಚಿ ಹಾಗೆ, ಹೀಗೆ' ಎಂದು ಅಣಕಿಸಿದ್ದ. ತುಂಬಾ ಹೊತ್ತು ಅತ್ತ ಪುಟ್ಮಾಣಿ ಅಂದು ದೊಡ್ಡಪ್ಪಯ್ಯನ ಹತ್ತಿರ ಹೋಗಿ 'ಹೌದ' ಎಂದು ಕೇಳಿದಾಗ 'ಮಾಣಿ ಮರ್‍ಕಾಗ ನೀ ಸುಮ್ನಾಯ್ಕೊ ಅವ ತಮಾಷೆಗೆ ಹೇಳ್ತ' ಎಂದು ಸಮಾಧಾನ ಮಾಡಿದ್ದರು. ಆದರೆ ಅವತ್ತು ರಾಘುವಿಗೆ ಹೊಡೆದಷ್ಟು ಬೇರೆ ಎಂದೂ ಹೊಡೆದಿರಲಿಲ್ಲ, ಮತ್ತೆಂದೂ ಅವನು ಪುಟ್ಮಾಣಿಯನ್ನು ಛೇಡಿಸಲಿಲ್ಲ. ಪುಟ್ಮಾಣಿಯೂ ಅದನ್ನು ಮರೆತಿದ್ದ. ಈಗ ಮತ್ತೆ ನೆನಪು ಬೂದಿಯನ್ನು ಕೆದಕಿ ಅದರಲ್ಲಿ ಕೆಂಡ ಉಂಟೇ ಎಂದು ಚಿಂತಿಸಿದ. ಇರಲಿ, ಯಾವತ್ತಾದರೂ ಬಿಡುವಾದಾಗ, ಮನೆಯಲ್ಲಿ ಯಾರೂ ಇಲ್ಲದಾಗ ದೊಡ್ಡಪ್ಪಯ್ಯನ ಕೇಳಬೇಕು ತನ್ನಪ್ಪ, ಅಮ್ಮ ಯಾಕೆ ಸತ್ತರೆಂದು, ಹೇಗಿದ್ದರೆಂದು ಅಂದುಕೊಳ್ಳುತ್ತಲೇ ಎದ್ದು ಕೂತ.

ಉಂಗುರದ ಪ್ರಕರಣ ನಡೆದು ಒಂದು ವರ್ಷವಾಗಿತ್ತೇನೊ, ಪುಟ್ಮಾಣಿ ಕಾಲೇಜಿಗೆ ಸೇರಿದ್ದ. ಆದರೂ ಅವನನ್ನು ನಡೆಸಿಕೊಳ್ಳುವ ರೀತಿಯಲ್ಲೇನೂ ವ್ಯತ್ಯಾಸವಾಗಲಿಲ್ಲ. 'ಮಗನಿಗೆ ಉಪನಯನ ಮಾಡಬೇಕು. ಈಗ ಬಿಟ್ರೆ ಮತ್ತೆ ಗುರುಬಲವಿಲ್ಲ. ಆದರೆ ನನ್ನ ಹತ್ತಿರ ಹಣವಿಲ್ಲ ಒಂದು ಹತ್ತು ಸಾವಿರ ಕಳಿಸಿಕೊಡಿ' ಎಂದು ಶೀನ ತಂದೆಗೆ ಪತ್ರ ಹಾಕಿದ್ದ. ಐತಾಳರು ಕುದಿಯ ತೊಡಗಿದ್ದರು. ಬ್ಯಾಂಕಿನ ನೌಕರಿ ಇದೆ. ಇರೋದು ಎರಡೇ ಮಕ್ಕಳು. ಇನ್ನೆಂಥ



ತಾಪತ್ರಯ. ಹಾಸಿಗೆ ಇದ್ದಷ್ಟು ಕಾಲ್ ಚಾಚೂಕೆ ಇವರೆಲ್ಲ ಯಾಕ್ ಬತ್ತಿಲ್ಲೆ ಎಂದು ಸಿಡಿಮಿಡಿ ಗುಟ್ಟಿದರು. ತನ್ನ ಅಭಿಪ್ರಾಯಕ್ಕೆ ಪುಷ್ಟಿಕೊಡುತ್ತಾಳೆ ನಾಗಮ್ಮ ಎಂದೇ ಎಣಿಸಿ ಊಟಕ್ಕೆ ಕೂತಾಗ ಪತ್ರದ ವಿಷಯ ಎತ್ತಿದರು.

'ನಾಗು, ಶೀನ ಪತ್ರಹಾಕಿದ್ದ. ಕಿರಣಂಗೆ ಉಪನಯನ ಮಾಡ್ತ್ನಂಬ್ರು ಹತ್ತುಸಾವಿರ ಕೇಳಿದ್ದ, ಇಲ್ಲೇನ್ ದುಡ್ಡಿನ ಗಿಡ ಬೆಳೆಸಿದ್ನ? ನಮ್ ತಾಪತ್ರಯ ನಮ್ಗೆ ಅವ್ನಿಗೆ ಅವನದ್ದೆ. ಇವರ್ಗೆಲ್ಲ ಏಗಳಿಗೆ ಬುದ್ದಿ ಬತ್ತೊ ಕಾಣೆ.'

'ಇದೇನ್ ಮಾತಂತ ಆಡತ್ರಿ. ಕಿರಣ ನಮ್ಗೆ ಮೊಮ್ಮಗನಲ್ವ? ನಿಮಗೆಂತ ತಾಪತ್ರಯ. ಕಂಡವ್ರಿಗೆ ಖರ್ಚು ಮಾಡುಕಾತ್ತು ನಮ್ಮಕ್ಕಳಿಗೆ ಮಾಡುಕಾತಿಲ್ಯ ಶೀಲನ ಮಗಳ ನಾಮಕರಣ ಆದ್ದೆ ಸೈ ಮತ್ತೆಂತ ಮಾಡಲಿಲ್ಯಲೆ'.

ಐತಾಳರ ಬಾಯಿ ಮುಚ್ಚಿತು. ಅವರನ್ನು ಬೆಂಬಲಿಸುವವರು ಯಾರೂ ಅಲ್ಲಿರಲಿಲ್ಲ. ರಾಘು ಏನೋ ಹೇಳಲು ಪ್ರಯತ್ನಿಸಿದ. ತಾಯಿ ಕಣ್ಸನ್ನೆಯಿಂದ ಸುಮ್ಮನಾದ. ಪುಟ್ಮಾಣಿಗೆ ಮುಜುಗರವಾಯಿತು. 'ಕಂಡವರು ಅಂದರೆ ಯಾರು, ನಾನೇಯ, ಇವರು ನನಗೆಂಥ ಖರ್ಚು ಮಾಡಿದ್ದು? ಓದಿದ್ದೆಲ್ಲ ಸರ್ಕಾರಿ ಶಾಲೆ. ರಾಘಣ್ಣನ ಹಾಗೆ ನನ್ನನ್ನು ಕಾನ್ವೆಂಟಿಗೆ ಸೇರಿಸಲಿಲ್ಲ. ಅನಾಥ ಅಂತ ಫೀಸೂ ಮಾಫಿಯಾಯಿತು. ಸಾಮೂಹಿಕ ಉಪನಯನದಲ್ಲಿ ಉಪನಯನ ವಾಯಿತು.[?] ಇನ್ನು ಊಟ ತಿಂಡಿ ಬಟ್ಟೆಬರೆಗೆ ಖರ್ಚು ಮಾಡಿದ್ದಾರೆ. ಆದರೆ ನಾನು ಬುದ್ಧಿ ಬಂದಾಗಿನಿಂದ ನನ್ನ ಕೈಯಲ್ಲಾದ ಕೆಲಸ ಮಾಡುತ್ತಲೇ ಬಂದಿದ್ದೇನೆ. ಕೆಲಸಕ್ಕೆ ಸೇರಿದ ಮೇಲೆ ಆ ಋಣವನ್ನೂ ತೀರಿಸಿಬಿಡಬೇಕು. ನಾನು ಇರುವ ವಿಷಯದಲ್ಲಿ ದೊಡ್ಡಪ್ಪಯ್ಯ ಏನೂ ಅಂದಿಲ್ಲ. ದೊಡ್ಡಮ್ಮನ ಮಾತಿಗೆ ಬೇಸರವೇಕೆ?' ಎಂದು ಆ ಮಾತಿಗೂ ತನಗೂ ಸಂಬಂಧ ವಿಲ್ಲವೇನೊ ಅನ್ನುವ ಹಾಗೆ ತಲೆ ತಗ್ಗಿಸಿ ಉಣ್ಣ ತೊಡಿಗಿದ.

ಐತಾಳರು ಹನಿಹನಿಯಾಗಿ ಕೂಡಿಟ್ಟ ಹಣವೆಲ್ಲ ಮಕ್ಕಳ ಒಂದಲ್ಲ ಒಂದು ಖರ್ಚಿಗಾಗಿ ವ್ಯಯವಾಗತೊಡಗಿತು. ರಾಘು ಬಿ.ಇ. ಮುಗಿಸಿ ತಾನು ಯಾರ ಕೆಳಗೂ ನೌಕರಿ ಮಾಡುವುದಿಲ್ಲ ವೆಂದು ಸ್ವಂತ ಫ್ಯಾಕ್ಟರಿ ಇಟ್ಟ. ಅನುಭವವಿಲ್ಲದೆ ಫ್ಯಾಕ್ಟರಿ ಇಡೋದು ತಪ್ಪೆಂದು ಐತಾಳರಿಗೆ ಅನ್ನಿಸಿದರೂ ಲಾಭದ ಆಸೆ ತೋರಿಸಿದ್ದರಿಂದ ಸುಮ್ಮನಾಗಿ ಬಿಟ್ಟರು. ಅವರ ಪ್ರೀತಿಯ ಆಸರೆಯಲ್ಲಿಯೇ ಪುಟ್ಮಾಣಿ ಬೇರೆಲ್ಲ ಅವಮಾನ, ನೋವುಗಳನ್ನು ಸಹಿಸಿಕೊಂಡು ಅಂತಿಮ ಬಿ.ಕಾಂ ತರಗತಿಗೆ ಬಂದ. ನಾಗಮ್ಮ ಹಾಗು ರಾಘು ಅವನನ್ನು ಮನೆಯಿಂದ ಓಡಿಸಲು ಏನೆಲ್ಲ ಉಪಾಯ ಮಾಡಿದರೂ ಒಂದೂ ಫಲಿಸಲಿಲ್ಲ. ಈಗ ರಾಘು ಅವನನ್ನು ಕಾಡುವುದು ಕಡಿಮೆಯಾಯಿತು. ಕಾರಣ ಅವನು ಒಳ್ಳೆಯವ ನಾದನೆಂದಲ್ಲ ಬಯ್ಸಿಕೊಳ್ಳೋಕ್ಕೆ ಹೆಂಡತಿ ಬಂದಳೆಂದು. ರಮ್ಯ ಅವನ ಬಯ್ಗಳನ್ನು ನುಂಗುವ ಕಸದ ಬುಟ್ಟಿಯಾದಳು. ದಿನಾ ಅತ್ತಿಗೆ ಕಣ್ಣೀರಿಡುವುದು ಪುಟ್ಮಾಣಿಗೆ ಇಷ್ಟವಿಲ್ಲದಿದ್ದರೂ ಅವನೇನೂ ಮಾಡುವಂತಿರಲಿಲ್ಲ. ಕೊನೆ ಕೊನೆಗೆ ಅದೂ ಅಭ್ಯಾಸವಾಗಿ ಹೋಯಿತು.

ಐತಾಳರಿಗೆ ಮಾತ್ರ ಸದಾ ರಾಘುವಿನದೆ ಚಿಂತೆಯಾಯಿತು. ಲಾಭದ ಹಣ ತಂದುಕೊಡು ವುದು ಬೇಡ ಮತ್ತೆ ಹಣ ಕೇಳದಿದ್ದರೆ ಸಾಕು ಎಂದು ಅವರು ನಿತ್ಯ ಪ್ರಾರ್ಥಿಸುವ ಹಾಗಾಯಿತು. ಇರುವುದರಲ್ಲೆ ನೆಮ್ಮದಿ ಎಂದರೆ ಪುಟ್ಮಾಣಿಯ ಆಸರೆ. ಅವನಿಲ್ಲದೆ ಹೊಟೇಲು ಸುಗಮವಾಗಿ ನಡೆಯುವುದು ಕಷ್ಟ ಎಂದೆನಿಸಿದಾಗ ಅವನು ಅವರಿಗೆ ಮತ್ತಷ್ಟು ಹತ್ತಿರವಾದ. ಅವನು ಬೌದ್ಧಿಕವಾಗಿ ಬೆಳೆದಿದ್ದಾನೆ ಇವನೊಡನೆ ನನ್ನೆಲ್ಲ ನೋವುಗಳನ್ನು ಹೇಳಿಕೊಳ್ಳಬಹುದು ಎಂದು ಐತಾಳರು ನಿರ್ಧರಿಸುವ ವೇಳೆಯಲ್ಲೆ ಆ ಒಂದು ಪತ್ರ ಬಂದು ಅವರು ಊರಿಗೆ ಹೊರಡಬೇಕಾ ಯಿತು. ಆದದ್ದಾಗಲಿ ಈ ಬಾರಿ ಪುಟ್ಮಾಣಿಯನ್ನು ಕರೆದುಕೊಂಡು ಹೋಗುವುದೆಂದು ತೀರ್ಮಾನಿ ಸಿದರು.

'ಮಗಾ, ನಿಂಗೊಂದ್ 'ವಿಷಯ ಹೇಳ್ತೆ ಬ್ಯಾಸರ ಮಾಡ್ಕೊಂಬುದ ಬ್ಯಾಡ್ದ ನಿನ್ನಮ್ಮ ಇನ್ನೂ ಬದುಕಿದ್ಲು'.

'ಹೌದಾ ದೊಡ್ಡಪ್ಪಯ್ಯ, ಹಂಗಾರೆ ನನ್ನತ್ರ ಸುಳ್ಳ್ ಹೇಳಿದ್ ಎಂತಕೆ? ಎಲ್ಲಿದ್ಲು? ನಾ ಕಾಣಕಲ್ದ' ಪುಟ್ಮಾಣಿಗೆ ಆಶ್ಚರ್ಯ, ಸಮಾಧಿ ಯಿಂದ ಎದ್ದು ಬಂದ ಹೆಣ ಓಡಾಡಿದ ಹಾಗಾಯಿತು ಅವನ ಪಾಲಿಗೆ ತಾಯ ಸುದ್ದಿ.

'ಅದೆಲ್ಲ ದೊಡ್ಡ ಕತಿ, ಇನ್ನೊಮ್ಮೆ ಹೇಳ್ತೆ. ನಾಳೆ ರಾತ್ರಿ ನಿನ್ನಬ್ಬೆ ಇಪ್ಪಲ್ಲಿಗೆ ನಿನ್ನ ಕರ್ಕೊಂಡ್ ಹೋತೆ, ಈಗ ಸುಮ್ನಾಯ್ಕೊ'.

ಆಯ್ತಲ್ಲ, ದೊಡ್ಡಪ್ಪಯ್ಯ ಹೇಳಿದ ಮೇಲೆ ಮುಗಿಯಿತು. ಪುಟ್ಮಾಣಿ ಸುಮ್ಮನಾದ. ಮನಸ್ಸು ಮಾತ್ರ ಚಿಂತೆಯ ಗೂಡಾಯಿತು. ನಂಗೂ ಒಂದು ಅಮ್ಮ ಇದ್ದಿದ್ರೆ, ಎಂದು ಇಷ್ಟು ದಿನ ಕೊರಗಿದ. ಈಗ ಇದಕ್ಕಿದ್ದ ಹಾಗೆ ದೊಡ್ಡಪ್ಪಯ್ಯ ಅಮ್ಮ ಬದುಕಿದ್ದಾಳೆ ಅಂತ ಇದ್ದಾರೆ. ಅವಳನ್ನು ಹೇಗೆ ಕಲ್ಪಿಸಿಕೊಳ್ಳುವುದು? ಇದುವರೆಗೂ ಯಾಕೆ ನನ್ನಿಂದ ಆ ವಿಷಯವನ್ನು ಮುಚ್ಚಿಟ್ಟರು? ಮಕ್ಕಳು ಎಂದರೆ ತಾಯಂದಿರಿಗೆ ಪ್ರಾಣ ಎನ್ನುತ್ತಾರೆ. ಹಾಗಿದ್ದರೆ ನನ್ನನ್ನು ಒಮ್ಮೆಯಾದರೂ ನೋಡಲು ಯಾಕೆ ಬರಲಿಲ್ಲ? ಎಲ್ಲಿದ್ದಾಳೆ? ಏನ್ಮಾಡುತ್ತಿದ್ದಾಳೆ? ಸತ್ತೇ ಹೋದಳು ಅಂತ ಇಷ್ಟು ಒಳ್ಳೆಯ ದೊಡ್ಡಪ್ಪಯ್ಯ ಏಕೆ ಸುಳ್ಳು ಹೇಳಿದರು? ಎಂದು ಅವನು ಒದ್ದಾಡಿದ. ದೊಡ್ಡಮ್ಮನ ಹತ್ತಿರ ಈ ವಿಷಯವನ್ನು ಪ್ರಸ್ತಾಪಿಸಿದ. ಒಂದು ಕ್ಷಣ ಅವರ ಕಣ್ಣು ಮಿಂಚಿತಷ್ಟೆ. ಮತ್ತೆ ನಿರ್ಲಿಪ್ತತೆಯ ಮುಖವಾಡ ತೊಟ್ಟರು. ವಿಷಯ ಎಲ್ಲರಿಗೂ ಗೊತ್ತಿದ್ದು ತನಗೆ ಮಾತ್ರ ಯಾರು ಹೇಳಿಲ್ಲ ಎಂಬ ಅರಿವು ಒಮ್ಮೆ ಆಯಿತು. ನಾಳೆ ರಾತ್ರಿ ಯಾವಾಗ ಆಗುತ್ತದೆ ಎಂದು ಕಾಯತೊಡಗಿದ.

ಮಾರನೆಯ ದಿನ ಕಾಲೇಜಿಗೆ ಎಂದಿನಂತೆ ಹೋದರೂ ಪುಟ್ಮಾಣಿಗೆ ಪಾಠ ತಲೆಗೆ ಹತ್ತಲಿಲ್ಲ. ಅಂತರಂಗದ ಗೆಳೆಯನನ್ನು ತರಗತಿಯಿಂದ ಆಚೆ ಎಳೆದುಕೊಂಡು ಬಂದು ತನ್ನ ಕತೆಯನ್ನು ಹೇಳಿ ತನ್ನ ಉದ್ವೇಗವನ್ನು ಕಡಿಮೆಮಾಡಿಕೊಂಡ.

'ನೋಡೋ ಶೇಷು, ನಿನ್ನೆ ಸಂಜೆ ಮನೇಲಿ ಯಾರಿರಲಿಲ್ಲ. ದೊಡ್ಡಪ್ಪನ ಟ್ರಂಕಲ್ಲಿ ನಮ್ಮಮ್ಮನ ಫೋಟೋ ಏನಾದರೂ ಇದ್ದೆಯೊ ಏನೋ ಅಂತ ತೆಗೆದು ನೋಡಿದೆ. ಮೂರ್‍ನಾಲ್ಕು ಫೋಟೋ ಗಳೇನೊ ಇದ್ದವು' ಅದರಲ್ಲಿದ್ದ ಇಬ್ಬರು ಮಾತ್ರ ಯಾರೂಂತ ಗೊತ್ತಾಗಲಿಲ್ಲ. ಒಂದು ದೊಡ್ಡಪ್ಪಯ್ಯ ಯಾರದೊ ಗಂಡಸಿನ ಭುಜದ ಮೇಲೆ ಕೈ ಹಾಕಿ ನಿಂತಿದ್ದಾರೆ. ಅವರನ್ನು ಕಂಡ ಹಾಗೆ ನೆನಪಿಲ್ಲ. ಇನ್ನೊಂದು, ಅದೇ ಗಂಡಸಿನ ಜತೆ ಇನ್ನೊಬ್ಬಳು ಹೆಂಗಸಿದ್ದಾಳೆ, ಆಕೆ ಕೂಡ ಎಂದೂ ನಮ್ಮಲ್ಲಿಗೆ ಬಂದಿಲ್ಲ. ನೋಡೋಕೆ ತುಂಬಾ ಚೆನ್ನಾಗಿದ್ದಾಳೆ. ಅವಳೇ ನನ್ನಮ್ಮನಿರಬಹುದು'.

'ಶಂಕರಾ, ನಿನ್ನಮ್ಮ ಅವಳೆ ಆಗಿದ್ದರೂ ಈಗ, ಇಷ್ಟು ವರ್ಷಗಳ ನಂತರವೂ ಹಾಗೆ ಇರ್ತಾಳ?' ಹೋಗ್ಲಿ ಬಿಡು ಅವಳು ಹೇಗೇ ಇದ್ದರೂ ನಿನ್ನಮ್ಮ. ಇನ್ನೊಂದು ದಿನ ಕಳೆದರೆ ನೀನೇ ಸ್ವತಃ ನೋಡುತ್ತೀಯ.'

'ಹೌದೊ, ನೋಡುವವರೆಗೂ ನನಗೆ ಸಮಾಧಾನವಿಲ್ಲ. ಇವತ್ತು ರಾತ್ರಿ ಬಸ್ಸಿನಲ್ಲಿ

ಕಡಿತ

ಸೊಳ್ಳೆ ಕಡಿತ
ತಿಗಣೆ ಕಡಿತದ
ಜೊತೆಗಿನ
ಇತ್ತೀಚಿನ ಸೇರ್ಪಡೆ
ವಿದ್ಯುತ್ ಕಡಿತ!

- ಮೇಟಿ ಕೊಟ್ರಪ್ಪ

ಹೋಗುತ್ತಿದ್ದೇವೆ. ನಾನು ದೊಡ್ಡಪ್ಪಯ್ಯ ಇಬ್ಬರೇ'


'ಆಯ್ತು ಹೋಗಿ ಬಾ, ಬೆಸ್ಟ್ ಆಫ್ ಲಕ್' ಮನೆಗೆ ಬಂದರೂ ಪುಟ್ಮಾಣಿ ಫೋಟೋ ವಿಷಯವನ್ನು ಐತಾಳರಲ್ಲಿ ಪ್ರಸ್ತಾಪಿಸಲಿಲ್ಲ. ಐತಾಳರು ಕೋರ್ಟಿನ ಕೆಲಸವೆಂದು ಊರಿಗೆ ಹೊರಟರು. ಪುಟ್ಮಾಣಿ ನೀಟಾಗಿ ಡ್ರೆಸ್ಸು ಮಾಡಿಕೊಂಡು ಬಂದು ನಿಂತ. ಐತಾಳರು ಈವರೆಗೂ ಅವನನ್ನು ನೋಡಿಯೇ ಇಲ್ಲ ವೆಂಬಂತೆ ನಖಶಿಖಾಂತ ದೃಷ್ಟಿಸಿದರು. ಥೇಟ್ ಶಾಲಿನಿಯೇ. ಅದೇ ರೂಪು, ಅದೇ ಕಪ್ಪು ಕಣ್ಣು, ಕೆಂಪು ಬಣ್ಣ, ಅದೇ ಸೌಮ್ಯಭಾವ ಮನೆಗೆ ಕರೆತಂದಾಗ ಎರಡು ವರ್ಷದ ಮಗು. ಈಗ ಚಿಗುರು ಮೀಸೆಯ ತರುಣನಾಗಿ ತಮ್ಮ ಮುಂದೆ ನಿಂತಿದ್ದಾನೆ. ಶಾಲಿನಿಗೆ ಮಗನ ಗುರುತು ಹತ್ತೀತೆ? ಅವಳನ್ನು ಅಮ್ಮ ಎಂದು ಒಪ್ಪಿಕೊಳ್ಳುವನೆ? ಎಂದು ಯೋಚಿಸಿದರು.

ರಾತ್ರಿ ಬಸ್ಸಿನಲ್ಲಿ ಕುಳಿತ ಪುಟ್ಮಾಣಿಗೆ ದೊಡ್ಡಪ್ಪಯ್ಯನಲ್ಲಿ ಕೇಳುವುದು ತುಂಬ ಇದೆ. ಅವರಾದರೋ ಕಣ್ಮುಚ್ಚಿದ್ದಾರೆ. ಅವರು ಜಿಡ್ಡು ಜಿಡ್ಡಾದ ಸುಕ್ಕು ಮುಖದಲ್ಲಿ ಬದುಕಿನ ಆಯಾಸ ಹೊಡೆದು ಕಾಣುತ್ತಿದೆ. ಅವರು ಚಿಂತಿಸುತ್ತಿ ದ್ದಾರೋ, ಮಲಗಿಯೆ ಬಿಟ್ಟರೋ ತಿಳಿಯಲಿಲ್ಲ. ಮೆಲ್ಲ ಪುಟ್ಮಾಣಿ 'ದೊಡ್ಡಪ್ಪಯ್ಯ' ಅಂದ. ಸುಮ್ಮನಿದ್ದರು. ಇನ್ನೊಮ್ಮೆ ಸ್ವಲ್ಪ ಜೋರಾಗಿ ಕರೆದ. ಕಣ್ಣನ್ನು ಅರೆತೆರೆದು 'ಎಂಥ ಮಾಣಿ' ಎಂದರು. 'ದೊಡ್ಡಪ್ಪಯ್ಯ ನಿಮ್ ಟ್ರಂಕ್ ತೆಗೆದ್‌ಕಂಡೆ. ಅದರೊಳಗೆ ಒಂದ್ ಜೋಡಿ ಪಟ ಇತ್ತಲ್ವ ಅದ್ ಯಾರದ್ದು?' ಒಂದೊಂದೆ ಪದವನ್ನು ಹೆದರುತ್ತಾ ನಿಧಾನವಾಗಿ ಹೇಳುತ್ತಾ ಬಂದ. ಐತಾಳರಿಗೆ ಪುಟ್ಮಾಣಿಯ ಅಧಿಕ ಪ್ರಸಂಗತನಕ್ಕೆ ಕೋಪವೇನೂ ಬರಲಿಲ್ಲ. ' ನಿನ್ನ ಅಪ್ಪಯ್ಯ, ಅಮ್ಮಂದು' ಎಂದು ಮುಂದಿನ ಮಾತಿಗೆ ಅವಕಾಶ ಕೊಡದೆ ಮೌನಧಾರಿಗಳಾ ದರು. ಪುಟ್ಮಾಣಿ ಪೇಚಾಡಿಕೊಂಡ. ಅವಳೇ ನನ್ನಮ್ಮ ಅಂತ ತಿಳಿದಿದ್ದರೆ ಇನ್ನಷ್ಟು ನೋಡುತ್ತಿದ್ದೆನಲ್ಲ. ಇನ್ನೊಂದು ನನ್ನಪ್ಪಯ್ಯ. ನನ್ನ ಸಮಯವೆಲ್ಲ ಅಮ್ಮ ಅಮ್ಮ ಅಂತ ಇದ್ದುದರಿಂದ ಪಕ್ಕದ ಗಂಡಸಿನ ಮುಖವನ್ನೆ ನೋಡಲಿಲ್ಲವಲ್ಲ. ಆ ಹೆಂಗಸಿನ ಮುಖವಾದರೂ ಅಲ್ಪಸ್ವಲ್ಪ ನೆನಪಾಗುತ್ತಿದೆ. ಆತ ಹೇಗಿದ್ದನೋ ಚೂರು ನೆನಪಾಗುತ್ತಿಲ್ಲ ಎಂದು ತನ್ನ ನೆನಪನ್ನು ಮಸೆಯಲು ಯತ್ನಿಸಿದ. ಪ್ರಯೋಜನವೇನೂ ಆಗಲಿಲ್ಲ. ಯೋಚನೆಯ ಜಾಲದಲ್ಲಿ ಸಿಕ್ಕಿ ಬಿದ್ದವನಿಗೆ ಬಂದುದು ನಿದ್ದೆಯೊ ಮಂಪರೋ ಎಂದು ತಿಳಿಯುವಷ್ಟರಲ್ಲಿ ಅವರು ಇಳಿಯುವ ಜಾಗ ಬಂದು ಬಿಟ್ಟಿತು.

ಕೆಳಗೆ ಇಳಿದ ಐತಾಳರು ಪುಟ್ಮಾಣಿಯನ್ನು ಕರೆದುಕೊಂಡು ಒಂದು ಒಳಹಾದಿಯನ್ನು ಹಿಡಿದರು. ಮುಂದೆ ಅವರು ಹಿಂದೆ ಅವನು. ತಮ್ಮ ಕತೆಯನ್ನು ಹೇಳುತ್ತಾ ಹೊರಟರು. ತಾವು ಮೂರು ಮಕ್ಕಳ ತಂದೆಯಾಗಿ, ಸಂಸಾರವನ್ನು ತೂಗಿಸಲಾಗದೆ ನಿರುದ್ಯೋಗಿಯಾಗಿ ಊರಲ್ಲಿ ಒದ್ದಾಡುತ್ತಿದ್ದಾಗ ಶಿವಮೊಗ್ಗದಲ್ಲಿದ್ದ ಸದಾಶಿವ ತಮ್ಮ ಹೊಟೇಲಿನ ಪಕ್ಕದ ಅಂಗಡಿಯನ್ನು ನೋಡಿಕೊಳ್ಳಲು ಕರೆದು ಉಪಕಾರ ಮಾಡಿ ದುದು. ತಾವೂ ಅವರ ಸಂಸಾರದಲ್ಲಿ ಒಬ್ಬನಾಗಿ ಅವರ ಮನೆಯಲ್ಲಿ ಇದ್ದುದು, ಯಾವುದೋ ಕಾರಣಕ್ಕೆ ಸದಾಶಿವ ಮೈಗೆ ಬೆಂಕಿ ಹಚ್ಚಿಕೊಂಡು ಸಾಯಲು ಪ್ರಯತ್ನಿಸಿ ಒದ್ದಾಡುತ್ತಿದ್ದಾಗ ತಾವೇ ಅವನನ್ನು ಆಸ್ಪತ್ರೆಗೆ ಸೇರಿಸಿದುದೂ ಅಲ್ಲಿ ಆತ ಸಾವು ಬದುಕಿನ ನಡುವೆ ಹೋರಾಡುತ್ತಾ ಆ ವಜ್ರದುಂಗುರವನ್ನು ಕೊಟ್ಟು ತನ್ನ ವಹಿವಾಟನ್ನು ಹೆಂಡತಿಯನ್ನೂ ನೋಡಿಕೊಳ್ಳುವ ಭರವಸೆ ಪಡೆದು ಪ್ರಾಣಬಿಟ್ಟುದೂ. ಗಂಡ ಬೆಂಕಿ ಹಚ್ಚಿಕೊಂಡುದನ್ನು ಕಂಡು ಶಾಲಿನಿ ಹುಚ್ಚಿಯಾ ದುದು ಎಲ್ಲವನ್ನೂ ವಿವರಿಸಿದರು. ತನ್ನಮ್ಮ ಹುಚ್ಚಿ ಎಂಬುದನ್ನು ತಂದೆ ಬೆಂಕಿ ಹಚ್ಚಿಕೊಂಡು ಸತ್ತರು ಎಂಬುದನ್ನು ಕೇಳಿ ಪುಟ್ಮಾಣಿ ಬೆದರಿದ. ವ್ಯಕ್ತಿಗಳನ್ನು ಕಾಣಲಾಗದಿದ್ದರೂ ದೃಶ್ಯ ಕಣ್ಣೆದುರಿಗೆ ಕಂಡಂತಾಗಿ ನಖಶಿಖಾಂತ ನಡುಗಿದ. ಹಿಂದೆ ರಾಘಣ್ಣ ಹೇಳಿದುದು ಸತ್ಯ. ತನ್ನಮ್ಮ ಹುಚ್ಚಿ ಹಾಗಿದ್ದರೆ ತನ್ನನ್ನು ಗುರುತಿಸುವಳೇ. ಅಯ್ಯೋ! ಒಂದು ವೇಳೆ ಹುಚ್ಚು ಬಿಟ್ಟಿದ್ದರೂ ಗುರುತಿಸುವುದು ಹೇಗೆ? ತಾನಾಗ ತುಂಬಾ ಪುಟ್ಟಮಗು. ಯೋಚಿಸುತ್ತಲೆ ಅವನು ಒಂದು ಸಣ್ಣ ಮನೆಯ ಮುಂದೆ ನಿಂತಿದ್ದ. ಐತಾಳರು ಒಳಗೆ ಹೋಗಿದ್ದರು.

ತನ್ನ ತಾಯಿ ಎಂದು ತೋರಿಸಿದವಳನ್ನು ಅಮ್ಮ ಎಂದು ಒಪ್ಪಿಕೊಳ್ಳಲು ಪುಟ್ಮಾಣಿಗೆ ಆಗಲೇ ಇಲ್ಲ. ಹಿಂದಿನ ಸೌಂದರ್ಯದ ಕುರುಹೂ ಇಲ್ಲದೆ ಒಣಗಿದ ಕಟಿಗೆಯಂತಿದ್ದಳು, ಯಾರನ್ನೂ ಗುರುತಿಸುವ ಸ್ಥಿತಿಯಲ್ಲಿ ಅವಳಿರಲಿಲ್ಲ. ಈಗವಳಿಗೆ ಹುಚ್ಚಿಲ್ಲ ಎಂದು ಡಾಕ್ಟರು ಸರ್ಟಿಫಿಕೇಟೇನೊ ಕೊಟ್ಟಿದ್ದರು. ಅವಳು ಕಿರಿಚೋಲ್ಲ, ಬಟ್ಟೆ ಹರಿಯೋಲ್ಲ, ಯಾರ ಮೈಯ್ಯೂ ಪರಚೋಲ್ಲ. ಈಗವಳು ಮಾತೇ ಆಡೋಲ್ಲ, ಮಲಗಿದಲ್ಲೆ ಮಲಗಿರುತ್ತಾಳೆ. ಯಮ ಕೂಡ ಇನ್ನೂ ನಿಷ್ಕರುಣಿಯಾಗೇ ಇದ್ದಾನೆ.


ಪುಟ್ಮಾಣಿಗೆ ಅಲ್ಲಿನ ವಾಸನೆಗೆ ವಾಕರಿಕೆ ಬರುವಂತಾಯಿತು. ದೊಡ್ಡಪ್ಪಯ್ಯನನ್ನು ಬಯ್ದು ಕೊಂಡ. 'ನನಗೆ ಆ ಫೋಟೊ ತೋರಿಸಿ ನಿನ್ನಬ್ಬೆ ಅಂದರೆ ಸಾಕಾಗಿರಲಿಲ್ಲವೆ. ಏಕೆ ನನ್ನನ್ನು ಇಲ್ಲಿ ಕರೆತಂದರು. ಸಾಯುವವರೆಗೂ ಈ ದೃಶ್ಯ



ಮರೆಯುತ್ತದೆಯೇ? ಇನ್ನು ಅಮ್ಮಾ ಅಂತ ಎಂದಿಗೂ ನೆನಸಿಕೊಳ್ಳುವ ಹಾಗಿಲ್ಲ' ಎಂದು ನಿಟ್ಟುಸಿರು ಬಿಟ್ಟ. ಆದರೆ ಅವನು ನೋಡುತ್ತಲೇ ಇರುವಾಗಲೇ ಐತಾಳರು ಶಾಲಿನಿಯನ್ನು ಮಗುವಿನಂತೆ ಎತ್ತಿ ಬಚ್ಚಲಿಗೆ ತಂದು ಸ್ನಾನ ಮಾಡಿಸಿದ್ದು ಆಶ್ಚರ್ಯ ಹುಟ್ಟಿಸಿತು. ಐದು ದಿನ ಜ್ವರಬಿದ್ದು ನರಳಿ ಸ್ನಾನವಿಲ್ಲದೆ ವಾಸನೆ ಬರುತ್ತಿದ್ದ ನಾಗಮ್ಮನವರನ್ನು ಐತಾಳರು ಒಂದು ದಿನವೂ ಒದ್ದೆ ಬಟ್ಟೆಯಲ್ಲಿ ಒರೆಸಿದ ನೆನಪು ಅವನಿಗಾಗಲಿಲ್ಲ.

ನರಸಿಂಹ, ಎಂಥ ಮಾಡ್ಲೂ ನನ್ನಿಂದ ಎಡೀತಿಲ್ಲೆ. ಇನ್ ಇವಳನ್ ಕಾಂಬಕೆ ನನ್ನಿಂದ ಆತಿಲ್ಲ ಮಗಾ, ಆ ಗಂಗಿ ವಾರಕ್ಕೊಮ್ಮೆ ಬಂದು ಇವಳನ್ ಮೀಸತ್ಲು ಆ ಶ್ರೀಧರ ಯಾವಗಾರು ಒಮ್ಮೆ ಬತ್ತ ಒಂದಿಷ್ಟು ಮದ್ದ್ ತಂದುಕೊಟ್ಟ್ ಹೋತ'. ಐತಾಳರಿಗಿಂತ ದೊಡ್ಡವರಾದ ಲಚ್ಚಕ್ಕ ನುಡಿದರು.

ಸ್ನಾನಮಾಡಿ ಮಲಗಿದ ತಾಯನ್ನು ಪುಟ್ಮಾಣಿ ದೂರದಿಂದಲೇ ನೋಡಿದ, ಆತ್ಮೀಯತೆ ಮೂಡಲೊಲ್ಲದು. ಗಟ್ಟಿ ಮನಸ್ಸು ಮಾಡಿ ಮಂಚದ ತುದಿಯಲ್ಲಿ ಕುಳಿತ. ಶಾಲಿನಿ ಈಗ ತೆರೆದ ಕಣ್ಣುಗಳಿಂದ ಅವನನ್ನೆ ನೋಡುತ್ತಿದ್ದಳು. ತಾಯ ತಲೆಯನ್ನು ಮೆಲ್ಲ ಸವರಿದ, ಅವಳ ಕೈಯನ್ನು ಹಿಡಿದುಕೊಂಡ. ಆ ಸ್ಪರ್ಶ ಒಳಗೆಲ್ಲೋ ಅಡಗಿದ ತಾಯ ಅಂತರಾಳಕ್ಕೆ ಮುಟ್ಟಿತು ಎಂಬಂತೆ ಕ್ಷಣ ಅವಳ ಕಣ್ಣುಗಳು ಒದ್ದೆಯಾದವು. ಮತ್ತೆ ಅದೇ ನಿರ್ಲಿಪ್ತತೆ. ದೂರ ನಿಂತು ಐತಾಳರು ಈ ದೃಶ್ಯವನ್ನೇ ನೋಡುತ್ತಿದ್ದರು. 'ಅವನನ್ನು ಮೊದಲೇ ಕರೆದುಕೊಂಡು ಬಂದಿದ್ದರೆ ಅವಳ ಹುಚ್ಚು ಪೂರ ವಾಸಿಯಾಗುತ್ತಿತ್ತೊ ಏನೊ ತಡಮಾಡಿ ತಪ್ಪು ಮಾಡಿದೆ' ಎಂದು ಮನದಲ್ಲೆ



ದೀಪ

ತನ್ನನು ತಾನು
ಸುಟ್ಟುಕೊಂಡು
ಇತರರಿಗೆ ಬೆಳಕು ನೀಡುವ
ಪರೋಪಕಾರಿ

-ದೇವದುರ್ಗ ರಂಗಯ್ಯ

ನೊಂದರು.

ಮನೆಗೆ ಹಿಂತಿರುಗಿದ ಮೇಲೆ ಪುಟ್ಮಾಣಿ ಹುಚ್ಚನಂತಾದ. ಓಡಿಸಿದಷ್ಟು ಹತ್ತಿರ ಬರುವ ಗೊದ್ದದ ಹಾಗೆ ಅದೇ ಅದೇ ಚಿತ್ರಗಳು ಮೂಡುತ್ತಿದ್ದವು. ತನ್ನ ತಂದೆ ಬೆಂಕಿ ಹಚ್ಚಿಕೊಂಡದ್ದು ಯಾಕೆ ಎಂಬುದು ತಿಳಿಯಲೇ ಇಲ್ಲ. ಈ ಮಧ್ಯೆ ನಾಗಮ್ಮ ಅರ್ಧಾಂಗ ವಾಯುವಿನಿಂದ ಹಾಸಿಗೆ ಹಿಡಿದರು. ಐತಾಳರು ಏಕೊ ಹೆಂಡತಿಯನ್ನೆ ಮರೆತು ಬಿಟ್ಟ ಹಾಗೆ ವರ್ತಿಸತೊಡಗಿದರು. ಈಗ ಕರಗುವ ಸರದಿ ಪುಟ್ಮಾಣಿಯದು, ತನ್ನ ತಾಯಿಯನ್ನು ಕಂಡು ಬಂದ ಮೇಲೆ ನಾಗಮ್ಮನವರ ಹಳೆಯ ಎಲ್ಲ ವರ್ತನೆಗೆ ಹೊಸ ಬಣ್ಣ ಬಂತು. ಅವರ ಜಾಗದಲ್ಲಿ ಬೇರೆ ಯಾವುದೇ ಹೆಂಗಸಿದ್ದರೂ ಹಾಗೆಯೆ ಮಾಡುತ್ತಿದ್ದರೇನೊ ಎಂದು ಅವರು ಕೊಟ್ಟ ಕಷ್ಟಗಳನ್ನು ಮುಕ್ಕಾಲು ಕ್ಷಮಿಸಿಯೆ ಬಿಟ್ಟ, ಈಗ ನಾಗಮ್ಮನವರ ಸೇವೆಗೆ ನಿಂತವರು ಪುಟ್ಮಾಣಿ ಹಾಗೂ ರಮ್ಯ. ಉಳಿದವರು ಒಮ್ಮೆ ಬಂದು ನೋಡಿದವರು ಮತ್ತೆ ಆ ಕಡೆ ತಲೆ ಹಾಕಲಿಲ್ಲ. ನಾಗಮ್ಮನವರೂ ಮೃದುವಾಗಿದ್ದರು. ಈಗ ಅವರ ಕಣ್ಣಲ್ಲಿ ಸದಾ ನೀರು. ಪುಟ್ಮಾಣಿಗೆ ಏನೇನೊ ಹೇಳಬೇಕು ಅಂತ ಆಸೆ. ಆದರೆ ನಾಲಗೆ ಹೊರಳದು. ತಮ್ಮಕೈಯ ಚಿನ್ನದ ಎರಡು ಬಳೆಗಳನ್ನು ಬಿಚ್ಚುವುದಕ್ಕೆ ಹೇಳಿ ಅದನ್ನು ಪುಟ್ಮಾಣಿಗೆ ಕೊಟ್ಟರು. ನಿನ್ನ ಹೆಂಡತಿ ಬಂದಾಗ ಎಂದು ನೆಗಾಡಿದರು. ಉಂಗುರವನ್ನು ಆಗಲೇ ರಮ್ಯಳಿಗೆ ಕೊಟ್ಟಾಗಿತ್ತು. ಐತಾಳರಿಗೆ ಯಾವುದು ಆಶ್ಚರ್ಯ ತರಲಿಲ್ಲ.

ನಾಗಮ್ಮ ಒಂದು ದಿನ ಇಲ್ಲವಾದರು. ಬದುಕಿನುದ್ದಕ್ಕೂ ತಮ್ಮನ್ನು ತಿರಸ್ಕಾರದಿಂದಲೇ ಕಂಡ ನಾಗಮ್ಮ ಸತ್ತು ತನ್ನ ಮಹತ್ವವನ್ನು ಸ್ಥಾಪಿಸಿದಳೊ ಎಂಬಂತೆ ಐತಾಳರು ಕೊರಗತೊಡಗಿದರು. ತಾಯಿ ಸತ್ತಮೇಲೆ ಮಕ್ಕಳು ಅವಳ ಮೇಲಿನ ಚಿನ್ನಕ್ಕಾಗಿ ಜಗಳವಾಡಿದ್ದನ್ನು ಕಂಡಾಗ ತಮ್ಮನ್ನು ತಾವೇ ತಿವಿದುಕೊಂಡ ಹಾಗೆ ಘಾಸಿಗೊಂಡರು. ಶೀಲಕ್ಕ ಲೆಕ್ಕ ಹಾಕಿ ಪುಟ್ಮಾಣಿಗೆ ನಾಗಮ್ಮ ಕೊಟ್ಟ ಬಳೆಯನ್ನು ಕಸಿದುಕೊಂಡಾಗ ಅವನಿಗೆ ಕ್ಷಣ ನೋವಾಯಿತು. 'ಇದರಿಂದಲೇ ನಾನು ದೊಡ್ಡಮ್ಮನನ್ನು ನೆನಪಿಟ್ಟುಕೊಳ್ಳಬೇಕೆ? ಅವರ ಚಿತ್ರವೆ ಮನದೊಳಗೆ ಅಚ್ಚೊತ್ತಿದೆಯೆಲ್ಲ' ಎಂದು ನೆಮ್ಮದಿಯಾಗಿರಲು ಯತ್ನಿಸಿದ. ಮನುಷ್ಯ ಸಂಬಂಧಗಳು ಹಣದ ಮುಂದೆ ನುಚ್ಚು ನೂರಾಗುವುದನ್ನು ಕಾಣುವಾಗ ಐತಾಳರಿಗೆ ತಮ್ಮ ತಪ್ಪಿನ ಅರಿವಾಯಿತು.

ವೈಕುಂಠ ಸಮಾರಾಧನೆ ಮುಗಿದು ತಿಂಗಳೂ ಕಳೆದಿಲ್ಲ ಗಾಯದ ಮೇಲೆ ಬರೆ ಎಳೆದಂತೆ ಜೀವವಿರುವಾಗಲೇ ಹಿಸಿದ ಹುಣ್ಣಿಗೆ ಹದ್ದು ಕುಕ್ಕಿದಂತೆ ರಾಘು ತನ್ನ ಬೇಹುಷಾರಿಯಿಂದ ಐತಾಳರ ಕುತ್ತಿಗೇಗೆ ತಂದಿಟ್ಟ, ವ್ಯಾಪಾರದ ನಷ್ಟಕ್ಕೆ ಅಡವಿಟ್ಟ ಮನೆಯನ್ನು ಮಾರಬೇಕಾದ ಪ್ರಸಂಗ ಒದಗಿ ಬಂತು. ಹೊಟೇಲೊಳಗಿನ ವಸ್ತುಗಳು ಬಿಟ್ಟು ಬೇರೆಲ್ಲ ಕಳೆದುಕೊಂಡಿದ್ದರು. ಐತಾಳರ ಬದುಕು ಹದಿನೆಂಟು ವರ್ಷಗಳಷ್ಟು ಹಿಂದಕ್ಕೆ ಸರಿದಾಗ ಅವರು ಮಾತ್ರ ಹಣ್ಣುಹಣ್ಣಾಗಿ ಕುಳಿತಿದ್ದರು.

ರಾತ್ರಿ ಕುಡಿದು ಮನೆಗೆ ಬಂದ ರಾಘು ಜತೆಯಲ್ಲಿ ಒಂದು ಬಣ್ಣದ ಚಿಟ್ಟೆಯನ್ನು ಕರೆತಂದಿದ್ದ. ಅವತ್ತು ಆದಷ್ಟು ಜಗಳವನ್ನು ಪುಟ್ಮಾಣಿ ತನ್ನ ಜೀವಮಾನದಲ್ಲೆ ಕಂಡಿರಲಿಲ್ಲ. ಆ ಬೀದಿಯವರೆಲ್ಲರ ಮುಂದೆ ಐತಾಳರ ಮಾನ ಹರಾಜಾಗಿ ಹೋಯಿತು. ಸೂಳೆಯನ್ನೆ ಮನೆಗೆ ಕರೆತರುವುದೆ ಛೀ! ಎಂದು ಜನ ಉಗಿದರು. ರಾಘು ಎಷ್ಟೇ ಕೆಟ್ಟವನಾದರೂ ಹೀಗೆ ಮಾಡಿಯಾನು ಎಂದು ಅವನಪ್ಪನಾಗಲಿ, ಪುಟ್ಮಾಣಿಯಾಗಲಿ ಎಣಿಸಿರಲಿಲ್ಲ. ಬದುಕಿನಲ್ಲಿ ಈವರೆಗೆ ಮಾಡಿದ ಪಾಪವೆಲ್ಲ ಮೊತ್ತವಾಗಿ ರಕ್ಕಸಾಕಾರಾತಾಳಿ ಐತಾಳರ ಮುಖಕ್ಕೆ ರಾಚಿದಂತೆ ಥರಥರಗುಟ್ಟಿದರು. ಹೇಸಿಗೆಯಲ್ಲಿ ಹೊರಳಾಡಿದಂತೆ ಅಸಹ್ಯಸಿದರು.

'ರಾಘವೇಂದ್ರನಿಗೆ ಮಂಡೆ ಸಮ ಇತ್ತ, ಚಿನ್ನದಂಥ ಹೆಣ್ತಿ ಇರ್‍ಕಾದ್ರೆ ಇವಳನ್ ಎಂತಕ್ ಕರ್‍ಕಂಬಂದೆ' ರಾಘು ಕುಡಿದ ಮತ್ತಿನಲ್ಲೆ 'ನಾ ಏನಾರು ಮಾಡ್ತೆ ಕೇಂಬುಕೆ ನೀವ್ಯಾರು?' ಎಂದು ಹುಡುಗಿಯನ್ನು ಕರೆದುಕೊಂಡ ರೂಮಿಗ್ಹೋದ.

ಐತಾಳರು ಉರಿದು ಬೆಂಕಿಯಾದರು. ಇರುವ ಶಕ್ತಿಯನ್ನೆಲ್ಲಾ ಬಿಟ್ಟು ಮಗನನ್ನು ಎಳತಂದು ಹೊರ ಹಾಕಿದರು. ಇಡೀ ಮನೆ ಹೆಂಡದ ವಾಸನೆಯಿಂದ ತುಂಬಿತು. ಕೆಳಗೆ ಬಿದ್ದ ರಾಘು ಎದ್ದು ತೂರಾಡುತ್ತಾ, ' ನನ್ನನ್ ನೀವು ಹೊರಗೆ ಅಟ್ಟತ್ರಿ, ನಿಮ್ಮನ್ ನೀವು ಕಂಡ್ಕಂಡ್ರಿದ್ರಿಯಾ? ಅಮ್ಮ ಚಂದ ಇದ್ದಾಂಗೆ ಇನ್ನೊಂದ್ ಇಟ್ಕಂಡಿದ್ರಿ? ಮುದಿಯಾದ್ರೂ ಚಟ ಬಿಡ್ಲಿಲ್ಲೆ ನನ್ಗ್ ಹೇಳೂಕ್ ಬತ್ರಿ' ಎಂದು ಹಂಗಿಸಿದವನೆ ಆ ಹುಡುಗಿಯೊಂದಿಗೆ ಎತ್ತಲೋ ಹೋದ. ಪುಟ್ಮಾಣಿ ಮಾತು ಕೇಳಿದವನೆ ಓಡಿ ಬಂದು ಹಾಸಿಗೆಯಲ್ಲಿ ಮುಚ್ಚಾಕಿ ಮಲಗಿದ. ಮನಸ್ಸು ಜ್ವಾಲಾಮುಖಿಯಾಗಿತ್ತು.

ಬೆಳಿಗ್ಗೆ ಎದ್ದವನೆ ನೋಡುತ್ತಾನೆ. ದೊಡ್ಡಪ್ಪಯ್ಯ ನೇಣು ಹಾಕಿಕೊಂಡಿದ್ದಾರೆ. ಗೂಡು ತೆಗೆದಾಗ ಅಲ್ಲಿ ಒಂದು ಪತ್ರ ಹಾಗೂ ಅವರು ಹಾಕಿಕೊಳ್ಳುತ್ತಿದ್ದ ವಜ್ರದುಂಗರ ಕಂಡಿತು. ಪತ್ರ ಅವನಿಗೇ ಸಂಬೋಧಿಸಿತ್ತು.

ಇಷ್ಟು ದಿನ ಮುಚ್ಚಿಟ್ಟದ್ದನ್ನು ಈಗ ಹೇಳ್ತಾ ಇದ್ದೇನೆ. ನಿನ್ನ ಅಪ್ಪನನ್ನು ಕೊಂದದ್ದು ನಾನೆ. ಸದಾಶಿವ ನನ್ನನ್ನು ಕರೆಸಿಕೊಂಡಿದ್ದೇನೊ ಹೌದು. ನನ್ನ ಬಡತನ, ದುರಾಸೆ ಅಪರಾಧ ಎಸಗುವಂತೆ ಮಾಡಿತು. ಅವನಲ್ಲಿರುವ ಹಣವೆಲ್ಲ ನನ್ನದಾಗಬೇಕೆಂದು ಬಯಸಿದೆ. ಅವನಿಗೆ ಬಹಳ ವರ್ಷಗಳಿಂದ ಮಕ್ಕಳಿರಲಿಲ್ಲ. ಕೊನೆಗೆ ಹುಟ್ಟಿದವನು ನೀನು. ಬರ್‍ತಾ ಬರ್‍ತಾ ಅವನಿಗೆ ಅನುಮಾನ ಬರೋಕೆ ಸುರುವಾಯಿತು. ನಿನ್ನಮ್ಮನ ಹತ್ತಿರ ಮಾತಾಡಿದರೆ ರೇಗ್ತಾ ಇದ್ದ. ನನ್ನನ್ನು ಅವನು ಕಳಿಸಿಬಿಡಬಹುದು ಎನ್ನುವಾಗ ನಾನೇ ಅವನನ್ನು ಕೊಂದೆ. ಎಲ್ಲಿದ್ದಳೋ ನಿನ್ನಮ್ಮ ಅದನ್ನುನೋಡಿದ್ದೆ ಹುಚ್ಚಿಯಾಗಿ ಬಿಟ್ಟಳು. ನಾನು ಹಣವನ್ನು ಪಡೆದುಕೊಂಡೆ. ಆದರೆ ನೆಮ್ಮದಿಯನ್ನು ಕಳೆದುಕೊಂಡೆ. ನನ್ನ ಆಸೆಯೆಲ್ಲ ಸುಟ್ಟು ಹೋಯಿತು. ನಾನು ಮಾಡಿದ ಪಾಪದ ಫಲವನ್ನು ನೀನೇ ಕಂಡೆಯಲ್ಲ. ಮಗೂ ನಾನು ಬದುಕಲು ಯೋಗ್ಯನಲ್ಲ. ನನ್ನನ್ನು ಸಾಧ್ಯವಾದರೆ ಕ್ಷಮಿಸು. ಇದರೊಂದಿಗೆ ನಿನ್ನಪ್ಪನ ಉಂಗುರವನ್ನು ಇಟ್ಟಿದ್ದೇನೆ. ಇದನ್ನು ಬಿಟ್ಟು ಕೊಡಲೇನೂ ನನ್ನ ಬಳಿಯಿಲ್ಲ.

ಪುಟ್ಮಾಣಿ 'ಅಯ್ಯೋ ದೊಡ್ಡಪ್ಪಯ್ಯ ಹೀಂಗ್ಯಾಕೆ ಮಾಡಿದ್ರಿ?' ಎಂದು ತಲೆ ಹಿಡಿದುಕೊಂಡ. ಕಣ್ಣಲ್ಲಿ ನೀರಿರಲಿಲ್ಲ. ಬೃಹದಾಕಾರದ ಮೂರ್ತಿಯೊಂದು ಕಣ್ಣೆದುರಿನಲ್ಲೆ ಪುಡಿ ಪುಡಿಯಾಗಿತ್ತು.

ಮುಚ್ಚಿಟ್ಟ ಪ್ರಸಂಗ

ವಿದ್ಯಾರ್ಥಿನಿಯ ಒಡನಾಟ

ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ ನಾನು ಪ್ರೌಢಶಾಲಾ ಸಹ ಶಿಕ್ಷಕನಾಗಿ ನೇಮಕ ಹೊಂದಿದಾಗ ಅವಿವಾಹಿತನಾಗಿದ್ದೆ. ಯೌವ್ವನದ ಬಿಸಿಯಲ್ಲಿ ಒಬ್ಬ ವಿದ್ಯಾರ್ಥಿನಿಯ ಜೊತೆ ಪ್ರೇಮದಲ್ಲಿ ಸಿಲುಕಿ, ಲಘುವಾಗಿ ಬಾಹ್ಯಕ್ರೀಡೆಯವರಿಗೂ ಮುಂದುವರಿದಿದ್ದೆ. ಯಾವುದೋ ಒಂದು ಸಂದರ್ಭದಲ್ಲಿ ಊರಿನ ಹಿರಿಯರೊಬ್ಬರು 'ನಿಮ್ಮ ಮುಖಗಳನ್ನು ನೋಡಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತೇವೆ' ಎಂದು ನುಡಿದಾಗ ನನಗೆ ಕಸಿವಿಸಿಯಾಯಿತು. ಅಲ್ಲಿಂದಲೇ ನನ್ನ ಮನ ಪರಿವರ್ತನೆಯಾಗಿ ಆ ವಿದ್ಯಾರ್ಥಿನಿಯ 'ಶೀಲಕ್ಕೆ' ಚ್ಯುತಿಯುಂಟಾಗದಂತೆ ನೋಡಿಕೊಂಡು, ಇನ್ನು ಮುಂದೆ ಇಂತಹ ಯಾವುದೇ ಅಹಿತಕರ ಘಟನೆಗಳಿಗೆ ಮನಸೆಳೆಯದಂತೆ ನಿರ್ಬಂಧ ನನಗೆ ನಾನೇ ಹೇರಿಕೊಂಡೆ. ಇಂದು ಈ ವಿದ್ಯಾರ್ಥಿನಿ ಉತ್ತಮ ಗೃಹಿಣಿಯಾಗಿ ತನ್ನ ಮಗು ಗಂಡನೊಂದಿಗೆ ಅತ್ಯಂತ ಸುಖಕರ ಜೀವನ ನಡೆಸುತ್ತಿದ್ದಾಳೆ. ನಾನೂ ನನ್ನ ವೃತ್ತಿಯಲ್ಲಿ ಉತ್ತಮ ಶಿಕ್ಷಕ ಎನ್ನುವಷ್ಟರ ಮಟ್ಟಿಗೆ ಬೆಳೆದಿದ್ದೇನೆ. ವಿದ್ಯಾರ್ಥಿಗಳ 'ಪವಿತ್ರ ಪ್ರೀತಿಗೆ' ಪಾತ್ರನಾಗಿದ್ದೇನೆ. ವಿವಿಧ ಸಮಾರಂಭಗಳಲ್ಲಿ 'ಆದರ್ಶದ' ಭಾಷಣ ಬಿತ್ತರಿಸುತ್ತಿದ್ದೇನೆ.

-ಕೆ. ಎಸ್. ವಿವೇಕ, ಎಲ್ಲಾ ಊರು, ಎಲ್ಲಾ ಕೇರಿ.

ಫೋನಿನಲ್ಲಿ ಮಾತಾಡಿದ್ದು ಯಾರು?

'ಹಲೋ'..... ದೂರವಾಣಿ ಕರೆ.

'ಯಾರು ಬೇಕಿತ್ತು?' ಅಂದೆ.

'ನೀವೇ. ಏನ್ರಿ ದೀಪಾವಳಿ ಹಬ್ಬ ಸಡಗರದಿಂದ ಮಾಡಿರಬೇಕು. ನಿಮ್ಮ ಮನೆಯವರು ಹೇಗಿದ್ದಾರೆ?' ಹೆಣ್ಣೊಂದರ ಧ್ವನಿ.

'ರ್ರೀ ದೀಪಾವಳಿ ಹಬ್ಬ ಆಚರಿಸಲಿಕ್ಕೆ ನಾನಿನ್ನೂ ಬ್ಯಾಚುಲರ್' ಅಂದೆ.

'ನಿಮ್ಮ ಮನೆಯವ್ರು ಅಂದ್ರೆ ನಿಮ್ಮ ಹೆಂಡ್ತಿಯಲ್ಲರ್ರಿ. ನಿಮ್ಮ ತಾಯಿ, ತಂಗಿ, ತಮ್ಮ ಇತ್ಯಾದಿ. ನಿನ್ನೆ ರಾತ್ರಿ ಜಾಸ್ತಿ ಪಟಾಕಿ ಬಿಟ್ಟಿರಬೇಕು!'

'ಹಬ್ಬ ಮಾತ್ರ ಮಾಡಿದೀವಿ. ಆದ್ರೆ ಪಟಾಕಿ ಮಾತ್ರ ಬಿಡಲಾಗಲಿಲ್ಲ.' ನೀವು' ಅಂದೆ.



'ಓಹ್! ಸಕತ್ತಾಗಿ ಪಟಾಕಿ ಬಿಡುವುದರ ಜೊತೆಗೆ ಮನೆ ತುಂಬೆಲ್ಲಾ ದೀಪ ಬೆಳಗಿದೆವು'

'ತುಂಬಾ ಥ್ಯಾಂಕ್ಸ್. ಹೌದು ನೀವು ಯಾರೆಂದು ಹೇಳಲೇ ಇಲ್ಲ'.

'ನಾನು ರ್ರೀ ನಿಮ್ಮನ್ನು ತುಂಬಾ ತುಂಬಾ ಹತ್ತಿರದಿಂದ ಪ್ರೀತಿ ಮಾಡುತ್ತಿರೋಳು'

'ಯಾಕ್ರಿ ಸುಮ್ಮನೆ ನನ್ನ ತಲೇನಾ ಮುಂಜಾನೇ ತಿಂತಿದ್ದೀರಿ. ದಯಮಾಡಿ ಯಾರಂತ ಹೇಳಿ, ಇಲ್ಲಂದ್ರೆ ನಾನು ಫೋನ್ ಕೆಳಗಿಡುವೆ'.

'ಪ್ಲೀಜ್ ಆ ಕೆಲಸ ಮಾಡ್ಬೇಡಿ. ಇನ್ನು ನಿಮ್ಮ ಜೊತೆ ಸಾಕಷ್ಟು ವೇಳೆ ಹೃದಯ ತುಂಬಾ ಮಾತಾಡಬೇಕೆಂದಿರುವೆ'

'ಹಾಗಿದ್ರೆ, ಸಂಜೆ ಫ್ರೀಯಾಗಿರುತ್ತೀನಿ. ಫೋನ್ ಮಾಡಿ ಅಂದೆ. ಇಲ್ಲ ನನಗೆ ಡ್ಯೂಟಿ ಇದೆ, ನೀವೇ ನಾನು ಯಾರಂತ ಪತ್ತೆ ಹಚ್ಚಿ ಫೋನ್ ಮಾಡಿ ನಿಮ್ಮ ಚಾಣಾಕ್ಷತನವನ್ನು ತೋರಿಸಿಕೊಳ್ಳಿ' ಅಂದಳು.

ಅಂದು ಮುಂಜಾನೆಯಿಂದ ಮಧ್ಯಾಹ್ನದವರೆಗೆ ತಲೆಕೆಡಿಸಿಕೊಂಡು ಫೋನ್ ಮಾಡಿದ ಅಪರಿಚಿತ ಹುಡುಗಿ ಯಾರಿರಬಹುದು? ಎಂದು ಯೋಚನೆಯಲ್ಲಿ ಮುಳುಗಿದ್ದವನಿಗೆ ದಿಢೀರ್ ನೆನಪಾದದ್ದು ಕೆಲ ದಿನಗಳ ಹಿಂದೆ ಸಂಗಾತಿಯನ್ನಾಗಿ ಮಾಡಿಕೊಳ್ಳಬೇಕೆಂದಿದ್ದ ಹುಡುಗಿ ಈ ಕಾರ್ಯ ಮಾಡಿರಬೇಕೆಂದು ಅನಿಸಿ ಗೆಳೆಯನಿಂದ ಆ ಹುಡುಗಿ ಕೆಲಸ ಮಾಡುವ ಆಫೀಸಿನ ಫೋನ್ ನಂಬರ್ ಹುಡುಕಿ ಅವಳಿಗೆ ಫೋನ್ ಮಾಡಿದಾಗ ನಿರುತ್ತರ. ಈ ಕೆಲಸ ನಿರಂತರವಾಗಿ ಹಲವು ದಿನ ಮುಂದುವರಿದಾಗ 'ಯಾಕ್ರಿ ನೀವ್ ನನಗೆ ಫೋನ್ ಮಾಡುವುದರ ಮೂಲಕ ಬೇಸರ ಮಾಡ್ತೀರಿ. ನೀವು ನನ್ನ ಲೈಫ್‌ಪಾರ್ಟನರ್ ಆಗಿ ಮಾಡ್ಕೋಬೇಕೆಂದಿದ್ರೆ ಧೈರ್ಯವಾಗಿ ನಮ್ಮ ಮನೆಯವರ ಮುಂದೆ ವಿಷಯ ಹಿಡಿದು ಮಾತಾಡಿ' ಅಂದು ಫೋನ್ ಕೆಳಗಿಟ್ಟಳು. ಮಾತಿಗೆ ಮಾತು ಬೆಳೆದು ಹಿರಿಯರ ಸಮ್ಮುಖದಲ್ಲಿ ಮದ್ವೆ ಜರುಗಿತು. ಆದ್ರೆ ಅವಳಿಗೆ ಸಮಾಧಾನವೆಂಬುದು ಇಲ್ಲದಿರುವಾಗ ಯಾಕೆ? ಏನಂತ? ಕೇಳಿದೆ. 'ಆವತ್ತು ನಮ್ಮ ಮನೆ ಹಿರಿಯರ ಮುಂದೆ ನಾನು ನಿಮಗೆ ಫೋನ್ ಮಾಡಿದೀನಂತ ಹೇಳಿದ್ದೀರಿ. ಎಷ್ಟು ರಾದ್ಧಾಂತ ನಡೀತು ಗೊತ್ತಾ, ಸಂಸ್ಕೃತಿ, ಸಂಪ್ರದಾಯ, ಎಲ್ಲಾ ತಿಳಿದು ಹಲವರಿಗೆ ಬುದ್ಧಿ ಹೇಳುವ ನಾನೇ ಇಂಥ ಕೆಲಸ ಮಾಡಿದೆಂದ ಮೇಲೆ ನನಗೆ ಅಲ್ಲಿ ಬೆಲೆಯೆಂಬುದು ಏನು ಉಳೀತು. ಇಲ್ಲರ್ರೀ ನಾನು ನಿಮಗೆ ಆವತ್ತು ಫೋನ್ ಮಾಡಿಲ್ಲ. ಅದನ್ನ ಬೇರೆಯವರು ಯಾರೋ ಬೇಕಂತಲೆ ಮಾಡಿ ನಿಮ್ಮ ತಲೆ ಕೆಡಿಸಿದ್ದಾರೆ' ಅಂದಾಗ ನನ್ನವಳ ಮೇಲೆ ಸಂಪೂರ್ಣ ಪ್ರೀತಿ, ವಿಶ್ವಾಸ ಮೂಡಿತು. ನಾನು ನನ್ನವಳನ್ನು ಬಾಳಸಂಗಾತಿಯನ್ನಾಗಿ ಮಾಡಿಕೊಳ್ಳುವುದರಲ್ಲಿ ಮನ ನೋಯಿಸಿದರೂ ಈಗವಳು ಸಂತಸ ಜೀವನದಲ್ಲಿದ್ದಾಳೆ. ನಾನು ಬೇಕೆಂದು ಸುಳ್ಳು ಹೇಳಿರಬೇಕೆಂದು ನಂಬಿದ ಅವಳು ನನಗೆ ಪ್ರಪ್ರಥಮ ಬಾರಿಗೆ ಫೋನ್ ಮಾಡಿ ನಿನ್ನನ್ನು ಪ್ರೀತಿಸುತ್ತೇನೆಂದು ಹೇಳಿದ ಆ ಹುಡುಗಿಯ ಮೇಲೆ ಕಿಂಚಿತ್ ಕೋಪ ಮಾಡಿಕೊಳ್ಳುವುದಿಲ್ಲ.

- ಯುವೀ, ಬಳ್ಳಾರಿ

ಅಪಹರಿಸಿ ತಿಂದ ಬಿಸ್ಕೇಟು

ಅಂದು ನಾನು ಐದನೇ ತರಗತಿಯಲ್ಲಿದ್ದಾಗ ನಮ್ಮ ಶಾಲೆಯಿಂದ ಎಂಟು ಮಂದಿ ಹುಡುಗಿಯರು ಮತ್ತು ಆರು ಮಂದಿ ಹುಡುಗರು ಇಬ್ಬರು ಉಪಾಧ್ಯಾಯರ ಜೊತೆ ಮೈಸೂರಿಗೆ ಪ್ರವಾಸ ಕೈಗೊಂಡಿದ್ದೆವು. ವಿದ್ಯಾರ್ಥಿಗಳ

ಸಂಖ್ಯೆ ಕಡಿಮೆಯಿದ್ದುದರಿಂದ ಪ್ರಯಾಣಕ್ಕೆ ನಾವು ಸರಕಾರಿ ಬಸ್ಸನ್ನೇ ಆಯ್ದುಕೊಂಡೆವು. ಅಂತೆಯೇ ಮೈಸೂರಿಗೆ ಹೋಗುವ ಬಸ್ಸಿನಲ್ಲಿ ಕುಳಿತ ನಾವು ಅದೇ ಮೊದಲ ಬಾರಿಗೆ ಬಲು ದೂರದ ಊರಿಗೆ ಪ್ರಯಾಣಿಸುತ್ತಿದ್ದುದರಿಂದ ಬಹಳಷ್ಟು ಸಂತೋಷದಿಂದ ಒಬ್ಬೊಬ್ಬರಾಗಿ ಕಿಟಕಿ ಬದಿಯಲ್ಲಿ ಕುಳಿತುಕೊಂಡು ಹೊರಗಿನ ದೃಶ್ಯಗಳನ್ನು ನೋಡುತ್ತಿದ್ದೆವು.

ನಾವು ಕುಳಿತ ಎದುರಿನ ಸೀಟಿನಲ್ಲಿ ಮೂರು ಮಂದಿ ಸಣ್ಣಸಣ್ಣ ಮಕ್ಕಳನ್ನು ತನ್ನ ಅಕ್ಕಪಕ್ಕ, ತೊಡೆಯ ಮೇಲೆ ಕೂರಿಸಿಕೊಂಡು ಒಬ್ಬಾಕೆ ಹೆಂಗಸು ಕುಳಿತಿದ್ದಳು. ಆಕೆಯ ಕಾಲ ಬುಡದಲ್ಲಿ ಒಂದು ಚೀಲವೂ ಇತ್ತು. ಬಸ್ಸಿನ ಕುಲುಕಾಟಕ್ಕೆ ಆ ಚೀಲ ಮಗುಚಿ ಅದರೊಳಗಿದ್ದ ಬಿಸ್ಕೇಟ್ ಪೊಟ್ಟಣ ಕೆಳಗೆ ಬಿತ್ತು. ಆ ಪೊಟ್ಟಣವನ್ನು ನಾನು ನೋಡಿ, ನನ್ನ ಗೆಳತಿಯರಿಗೂ ತೋರಿಸಿದೆ. ಆಗ ಒಬ್ಬಾಕೆ ಅದನ್ನು ತೆಗೆಯುವುದಕ್ಕೋಸರ ಕಾಲಿನಿಂದ ಒಂದೇ ಸಮನೆ ಅದನ್ನು ಮೆಟ್ಟಿ ತನ್ನತ್ತ ಜಾರಿಸಿಕೊಂಡು ಮೆಲ್ಲನೆ ಕೈಯಲ್ಲಿ ಎತ್ತಿ ಆ ಹೆಂಗಸಿಗೆ ಗೊತ್ತಾಗದ ಹಾಗೆ ನಮಗೆಲ್ಲರಿಗೂ ಹಂಚಿದಳು. ಸ್ವಲ್ಪ ಹೊತ್ತು ಕಳೆದಾಗ ಆಕೆ ತಾನು ಇಳಿಯುವ ಸ್ಥಳ ಸಮೀಪಿಸಿತೆಂದು ಮಕ್ಕಳನ್ನು ಎಬ್ಬಿಸಿ ಚೀಲವನ್ನು ಎತ್ತಿಕೊಳ್ಳತೊಡಗಿದಾಗ ಮಕ್ಕಳು, 'ಅಮ್ಮಾ... ನನಗೆ ಬಿಸ್ಕೇಟ್ ಕೊಡು' ಎಂದು ಪೀಡಿಸತೊಡಗಿದಾಗ ಆಕೆ ಚೀಲದಲ್ಲಿ ಬಿಸ್ಕೇಟ್‌ನ್ನು ಬಹಳಷ್ಟು ಹುಡುಕಾಡಿದಳು. ತಾಯಿಯ ಜೊತೆಗೆ ಮಕ್ಕಳೂ ಹುಡುಕತೊಡಗಿದವು. ಆಗ ನಾವು ಏನನ್ನೊ ಸಾಧಿಸಿದವರಂತೆ ಬಹಳ ಹೆಮ್ಮೆಯಿಂದ ಹಿಂದಿನ ಸೀಟಿನಲ್ಲಿ ಕುಳಿತಿದ್ದೆವು. ಅಷ್ಟು ಹೊತ್ತಿಗೆ ಆಕೆ ತಾನು ಇಳಿಯುವ ಸ್ಥಳ ಬಂತೆಂದು ಆ ಮಕ್ಕಳನ್ನು ಎತ್ತಿಕೊಂಡು, ಚೀಲವನ್ನು ಏರಿಸಿಕೊಂಡು ಕೆಳಗಿಳಿದಳು. ಆಗ ನಾವೆಲ್ಲರೂ ಸೀಟಿನಿಂದ ಎದ್ದು ನಿಂತು, ಬಸ್ಸಿನಿಂದಿಳಿದು ರಸ್ತೆಯ ಬದಿಯಲ್ಲಿ ನಿಂತುಕೊಂಡಿದ್ದ ಆಕೆಯನ್ನು ಒಮ್ಮೆ ಹಿಂತಿರುಗಿ ನೋಡಿದೆವು. ಆಗ ಮಕ್ಕಳು ಒಂದೇ ಸಮನೆ ಚೀಲದಲ್ಲಿದ್ದ ವಸ್ತುಗಳನ್ನೆಲ್ಲ ಕೆಳಗೆ ಎಸೆಯುತ್ತಾ ಬಿಸ್ಕೇಟ್ ಹುಡುಕುತ್ತಿದ್ದುದು ಕಾಣಿಸಿತು.

ಪಾಪ, ಬಡಹೆಂಗಸೇ ಇರಬಹುದು. ತನ್ನ ಹೆತ್ತ ಕರುಳ ಕುಡಿಗಳಿಗಾಗಿ ಹಣತೆತ್ತು ಕೊಂಡುಕೊಂಡ ಬಿಸ್ಕೇಟನ್ನು ನಾವು ಅಪಹರಿಸಿ ನಮ್ಮ ಹೊಟ್ಟೆಗೆ ಸೇರಿಸಿಕೊಂಡೆವು. ಆ ಮಕ್ಕಳೆಷ್ಟು ರಂಪಾಟ ಮಾಡಿರಬಹುದು? ಆಗ ಆ ಹೆಂಗಸು ಯಾವ ರೀತಿ ಸಮಾಧಾನ ಪಡಿಸಬೇಕು. 'ಛೆ! ಇದಕ್ಕೆಲ್ಲಾ ನಾನೇ ಕಾರಣ ಅಲ್ಲವೇ? ನಾನು Biscuite ಪೊಟ್ಟಣ ಯಾರಿಗೂ ತೋರಿಸದೇ ಇರುತ್ತಿದ್ದರೆ ಈ ಒಂದು ನೋವಿನ ಪ್ರಸಂಗ ನಡೆಯುತ್ತಲೇ ಇರಲಿಲ್ಲವಲ್ಲ!'

- ನಿವೇದಿತಾ ಕುದ್ಪಾಜೆ, ಕಾಯತೋರ್ಡಿ, ಸುಳ್ಯ ದ.ಕ.

ಮನೆಯವರಿಗೆ ಬಗೆದ ದ್ರೋಹ

೧೯೮೭ನೇ ಇಸ್ವಿ, ಆಗ ನಾನು ತೃತೀಯ ವರ್ಷದ ಡಿಪ್ಲೋಮ ಅಭ್ಯಾಸ ಮಾಡುತ್ತಿದ್ದೆ. ಆಗ ನನ್ನ ಹತ್ತಿರ ಒಂದು ರೂಪಾಯಿ ಕೂಡಾ ಇರುತ್ತಿದ್ದಿಲ್ಲ. ನನ್ನ ಗೆಳೆಯರು ೨೦-೩೦ ರೂಪಾಯಿಗಳಷ್ಟು ಹಣವನ್ನು ನೀರಿನಂತೆ ಖರ್ಚು ಮಾಡುತ್ತಿರುವುದನ್ನು ನೋಡಿ ಅವರು ಕುಬೇರನ ಮಕ್ಕಳೇನೊ ಎಂಬ ಅನುಮಾನ ಬರುತ್ತಿತ್ತು. ಆ ನನ್ನ ಕುಬೇರನ ಮಕ್ಕಳು(!) ಆಗಾಗ್ಗೆ ನನಗೆ ಟೀ, ಟಿಫಿನ್ ಕೊಡಿಸುತ್ತಿದ್ದರು. ಒಮ್ಮೆಯಾದರೂ ಅವರಿಗೆ ಟೀ ಕುಡಿಸಬೇಕೆಂಬ ಆಸೆ ಮನದಲ್ಲಿ ಕೊರೆಯುತ್ತಿತ್ತು.

ಆಗ ಪರೀಕ್ಷಾ ಫೀ ತುಂಬುವ ಸಮಯ ಬಂತು. ೪೭/- ರೂ. ಪರೀಕ್ಷಾ ಫೀ ಇತ್ತು. ನಮ್ಮ ತಂದೆಯವರಿಗೆ ೫೦/- ರೂ. ಕೊಡಲು ಕೇಳಿದೆ. ಪಾಪ ಎಷ್ಟು ಒದ್ದಾಡಿದರೂ ಅವರಿಗೆ ೫೦/- ರೂ. ಸಿಗಲಿಲ್ಲ. ಪರೀಕ್ಷಾ ಫೀ ತುಂಬಲು ಇನ್ನು ಕೇವಲ ಒಂದೆರಡು ದಿವಸಗಳು ಬಾಕಿ ಇದ್ದವು. ನನ್ನ ಪರಿಸ್ಥಿತಿ ನೋಡಿ ನನ್ನ ಗೆಳೆಯರು ಆದಾಯ ಪತ್ರ (Income certificate) ಮಾಡಿಸಲು ಹೇಳಿದರು. Income ೩೬೦೦/- ಒಳಗಿದ್ದರೆ ಕೇವಲ ೨/- ರೂ. ಮಾತ್ರ ಕಟ್ಟಬಹುದಿತ್ತು. ಫಾರಂ-೩ ತುಂಬಿ, ನನ್ನ ತಂದೆಯ ಸಹಿಯನ್ನು ನಾನೇ ಮಾಡಿ



ತಹಶೀಲ್ದಾರರಿಂದ ಆದಾಯ ಸರ್ಟಿಫಿಕೇಟ್ ತಂದೇ ಬಿಟ್ಟೆ. ಅವತ್ತೆ ಫೀ ತುಂಬಲು ಕಡೆಯ ದಿನ. ನಮ್ಮ ತಂದೆಯವರು ನನ್ನ ಕೈಗೆ ೫೦/- ರೂ. ಕೊಟ್ಟು, ಬೇಗ ಹೋಗು ಫೀ ತುಂಬು ಎಂದು ಕಳಿಸಿದರು. ನಾನು ಆದಾಯ ಪತ್ರ ಹಾಗೂ ೨/- ರೂ. ಕೊಟ್ಟು ಪರೀಕ್ಷೆ ಫೀ ತುಂಬಿ ಉಳಿದ ೪೮/- ರೂ. ದಲ್ಲಿ ನನ್ನ ಗೆಳೆಯರಿಗೆಲ್ಲಾ ಟಿಫಿನ್, ಟೀ ಕೊಡಿಸಿ ಸಂತೃಪ್ತಿಯಿಂದ ರಾತ್ರಿ ಮನೆಗೆ ಬಂದೆ. ಮನೆಯಲ್ಲಿ ಎಲ್ಲರೂ ಖಾಲಿ ಮಂಡಕ್ಕಿ ತಿನ್ನುತ್ತಿದ್ದರು. ಏಕೆ ಅಡಿಗೆ ಮಾಡಿಲ್ಲವೇ ಎಂದು ಕೇಳಿದೆ. ನಮ್ಮ ಅಕ್ಕ 'ಇಲ್ಲ, ಸ್ವಲ್ಪ ಜೋಳ ಇದ್ದವು. ನಿನ್ನ ಪರೀಕ್ಷೆ ಫೀ ತುಂಬಲು ಅಪ್ಪ ಅವನ್ನೇ ಮಾರಿ ನಿನಗೆ ದುಡ್ಡು ಕೊಟ್ಟರು' ಎಂದಾಗ, ಛೇ ನಾನೆಂತಹ ತಪ್ಪು ಮಾಡಿಬಿಟ್ಟೆ. ಗೆಳೆಯರಿಗಾಗಿ ಮನೆಯವರೆಲ್ಲರನ್ನು ಉಪವಾಸ ಕೆಡವಿ ಬಿಟ್ಟೆನಲ್ಲ, ಎಂತಹ ಒಳ್ಳೆಯ ತಂದೆಗೆ ದ್ರೋಹ ಮಾಡಿದೆ ಎಂದು ನನ್ನ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಬರತೊಡಗಿದವು. ೧೦-೧೧ ವರ್ಷ ಗತಿಸಿ ಹೋದರೂ ಆ ವಿಷಯವನ್ನು ಮನೆಯವರಿಗೆ ತಿಳಿಸಿರಲಿಲ್ಲ. ಈಗ ಅಂಕಣದಲ್ಲಿ ಬರೆದು ನನ್ನ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದೇನೆ.

-ಹಾರ್ಕನಾಳ್ ಶಿವಕುಮಾರ್‌ಗೌಡ್, ಹಗರಿಬೊಮ್ಮನಹಳ್ಳಿ

ಆ ಮುಖ ಈ ಮುಖ

ನಮ್ಮ ಮನೆಯಲ್ಲಿ ಆ ದಂಪತಿಗಳು ಐದಾರು ವರ್ಷಗಳ ಕಾಲ ಬಾಡಿಗೆಯಿಂದ ಇದ್ದರೂ ಬಾಡಿಗೆಯವರಂತೆ ಇರಲಿಲ್ಲ. ತುಂಬಾ ಅನ್ಯೋನ್ಯವಾಗಿದ್ದರು. ಗಂಡ ಕೆ.ಇ.ಬಿ.ಯಲ್ಲಿ ಕೆಲಸ ಮಾಡುತ್ತಿದ್ದರು. ಸಾಕಷ್ಟು ಸಂಬಳ ಬರುತ್ತಿದ್ದರೂ ಸರಳ ಜೀವನ ವಿಧಾನ ಆರಿಸಿಕೊಂಡಿದ್ದರು. ಅವರಿಗೆ ಒಂದು ಒಂದೂವರೆ ವರ್ಷದ ಮಗುವಿತ್ತು. ಮುದ್ದು ಮುದ್ದಾದ ಹಾಲುಗಲ್ಲದ ಮಗು. ಆಗಷ್ಟೇ ತನ್ನ ತೊದಲು ಮಾತುಗಳಿಂದ ಜಗತ್ತಿನೊಡನೆ ಸಂವಾದಕ್ಕಿಳಿಯಲು ಪ್ರಯತ್ನಿಸುತ್ತಿದ್ದ ಮುಗ್ಧ ಮಗು. ನನ್ನ ಕಂಡರೆ ಅದಕ್ಕೆ ತುಂಬಾ ಅಕ್ಕರೆ. ನಾನು ಊಟಕ್ಕೆ ಕೂತಾಗಲೆಲ್ಲಾ ಬಂದು ತಟ್ಟೆಗೆ ಕೈ ಹಾಕುತ್ತಿತ್ತು. ಎರಡು ಮನೆಗಳನ್ನು ಒಂದು ಮಾಡುತ್ತಿದ್ದ ಆ ಮಗುವನ್ನು ಪ್ರೀತಿಯಿಂದ ಆಡಿಸುತ್ತಿದ್ದೆ. ಹೀಗೆ ಒಂದು ದಿನ ಮಗುವನ್ನು ಮೇಲೆ ಎಸೆದು ಹಿಡಿದುಕೊಳ್ಳುತ್ತಾ ಇದ್ದೆ. ಯಾಕೊ ಆಯ ತಪ್ಪಿ, ಮಗು ಕೆಳಗೆ ಬಿದ್ದಾಗ ಒಂದೇ ಸಮನೆ ರಕ್ತ ಬರುತ್ತಿತ್ತು. ಹಲ್ಲು, ತುಟಿ, ಮುಸಡಿಗಳಿಗೆ ತೀವ್ರ ಗಾಯವಾಗಿತ್ತು. ಮಗುವಿನ ತಾಯಿ ಬಟ್ಟೆ ಒಗೆಯಲು ಹೋಗಿದ್ದರು. ನೀರಿನಿಂದ ಮುಖ ತೊಳೆದು, ತಿಂಡಿ ಕೊಟ್ಟು ಸಮಾಧಾನ ಮಾಡಿ ಮಲಗಿಸಿದೆ. ನನ್ನ ಅಚಾತುರ್ಯ ಅವರಿಗೆ ತಿಳಿದರೆ ನಾವು

ಊರಲ್ಲೇ ಇರುವ ಹಾಗಿಲ್ಲ. ಭಯವಾಯಿತು. ಮಗುವಿನ ತಂದೆ ತಾಯಿ ಸೌಮ್ಯ ಸ್ವಭಾವದವರಾದರೂ ಅಷ್ಟೇ ಕೋಪಿಷ್ಠರು. ಅವರು ಬಂದಾಗ 'ನಿಮ್ಮ ಮಗು ಮೆಟ್ಟಿಲು ಮೇಲಿಂದ ಬಿದ್ದು ತುಂಬಾ ನೋವಾಗಿದೆ. ನಾನೇ ಔಷಧಿ ಸವರಿದೆ' ಎಂದು ಹೇಳಿ ಸತ್ಯ ಮುಚ್ಚಿಟ್ಟೆ. ಆತ ಬೆಳೆದು ಈಗ ಎಸ್. ಎಸ್. ಎಲ್. ಸಿ. ಓದುತ್ತಿದ್ದಾನೆ. ಆದರೆ ಮುಖದ ಮೇಲೆ ಆ ಗಾಯ ಹಾಗೇ ಇದೆ. ಅದನ್ನು ಕಂಡಾಗ ಆ ಘಟನೆ ಈಗಷ್ಟೇ ನಡೆದಂತೆ ಭಾಸವಾಗುತ್ತದೆ. ಸತ್ಯ ಹೇಳಿದ್ದರೆ ಏನು ಅನಾಹುತ ಕಾದಿತ್ತೊ? ಮುಚ್ಚಿಟ್ಟಿದ್ದೇ ಒಳ್ಳೆಯದೊ? ಗೊತ್ತಿಲ್ಲ. ಆದರೆ ಮಗುವಿನ ಆ ಮುಖ, ಅದೇ ಮಗುವಿನ ಗಾಯದ ಈ ಮುಖ ಎರಡೂ ನೆನಪಾಗಿ ಕಾಡುತ್ತಿವೆ.

-ಎಸ್. ರಮೇಶ್, ಮದ್ದೂರು.

ಅವರು ಬರೆದರು ನಾನು ಹರಿದೆ!

ಅವರು ಆತ್ಮೀಯ ಸ್ನೇಹಿತರು. ಬೇರೆ ಊರಿನಲ್ಲಿ ಓದುತ್ತಿದ್ದರು. ಆಗಾಗ ಪತ್ರ ಬರೆಯಬೇಕು ಎಂದು ಆಸೆಯಾಗಿತ್ತು. ಬರೆದೆ. ಅವರೂ ಬರೆದರು. ಮತ್ತೂ ಬರೆದೆ. ಅವರು ಮತ್ತೂ ಬರೆದರು. ಕೆಲ ದಿನಗಳಲ್ಲಿ ನಮ್ಮ ಪತ್ರಗಳಲ್ಲಿಯ ಅಕ್ಷರಗಳು ಅಕ್ಷರಗಳಾಗಿ ಉಳಿಯಲಿಲ್ಲ. ಯೌವನದ ಬಿಸಿಯುಸಿರುಗಳ, ಕನಸುಗಳ ಕನವರಿಕೆಗಳ, ಕೆಂಡದಂತಹ ಪತ್ರಗಳು ವಿನಿಮಯವಾಗತೊಡಗಿದವು. ಮನೆಯಲ್ಲಿ ಗೊತ್ತಾಗುತ್ತೆ ಅಂತ ಹೆದರಿದೆ. ನಾನು ಪುಕ್ಕಲು ಅನ್ನಿಸಿ ಯಾರೂ ಇಲ್ಲದಾಗ ಬಿಕ್ಕಿ ಬಿಕ್ಕಿ ಅತ್ತೆ. ಅವರಿಗೆ ಪತ್ರ ಬರೆಯಲಿಲ್ಲ. ಆದರೆ ಅವರು ಪತ್ರ ಬರೆಯುತ್ತಲೇ ಹೋದರು. ನಾನು ಹರಿದು ಹಾಕುತ್ತಲೇ ಹೋದೆ. ಆದರೆ ಅವರು ಊರಿಗೆ ಬಂದಾಗ ಅಲ್ಲಲ್ಲಿ ಕದ್ದು ಭೇಟಿಯಾಗಿ ಮಾತಾಡುತ್ತಿದ್ದೆ. ಆಗ ಪತ್ರ ಬರೆಯಲು ಪದೇ ಪದೇ ಹೇಳಿದರು. ನಾನು ಬರೆಯಲಿಲ್ಲ. ಈಗ ಅವರು ಶಿಕ್ಷಕರಾಗಿ ಆಯ್ಕೆಯಾಗಿ ಬೇರೆ ಊರಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 'ನನಗೆ ಬಾಳಾಗು ಬೆಳಕಾಗು' ಎಂದು ಬರೆಯುತ್ತಲೇ ಇದ್ದಾರೆ. ನಾನು ಬ್ರಾಹ್ಮಣ. ಅವರು ವಾಲ್ಮೀಕಿ. ಮನದ ಬಯಕೆ, ಮನೆಯ ಬಂಧನ, ಸಮಾಜದ ಕ್ರೂರತೆ ಈ ಬೇಲಿಗಳನ್ನು ಹೇಗೆ ಅಳಿಸಲಿ. ಮನಸ್ಸು ಬಳಲಿದೆ.

-ನೊಂದ ಅನಾಮಿಕರು.

ಪಕ್ಕದ ಮನೆಯ ಆಂಟಿ

ಆಗ ನಾನು ಹತ್ತನೆ ಕ್ಲಾಸಿನಲ್ಲಿ ಓದುತ್ತಿದ್ದೆ. ಪಕ್ಕದ ಮನೆಯ ಆಂಟಿ ಮತ್ತು ಅಂಕಲ್‌ರು ನನ್ನನ್ನು ತುಂಬಾ ಹಚ್ಚಿಕೊಂಡಿದ್ದರು. ನಾನೂ ಅವರ ಸಣ್ಣ ಪುಟ್ಟ ಕೆಲಸಗಳಲ್ಲಿ ಕೈ ಕೂಡಿಸುತ್ತಿದ್ದೆ. ಅಂಕಲ್ ಅವರು ಅಂಗಡಿ ನಡೆಸುತ್ತಿದ್ದರು. ಅಂಕಲ್ ಅಂಗಡಿಯಲ್ಲಿದ್ದಾಗ ನಾನು ಅವರ ಮನೆಗೆ ಹೋದರೆ ಆಂಟಿ-ನನ್ನನ್ನು ಕಾಮುಕ ದೃಷ್ಟಿಯಿಂದ ನೋಡಲಾರಂಭಿಸಿದಳು. ಏನೇನೊ ಸೂಚನೆ ಮತ್ತು ಕ್ರಿಯೆಗಳಿಗೆ ನಾನು ಒಳಗಾಗುತ್ತಿದ್ದೇನೋ. 'ಅದೆಲ್ಲ' ಆಗ ನನಗೆ ಗೊತ್ತಾಗುತ್ತಿರಲಿಲ್ಲ. ಆ ಆಂಟಿ ನಡತೆ ಕುರಿತು ನಮ್ಮ ಮನೆಯವರಿಗೆ ಯಾರೋ ಹೇಳಿರಬೇಕು. 'ಇನ್ನು ಮುಂದೆ ಅವರ ಮನೆಗೆ ಹೋಗಬಾರದೆಂದು' ನಿಷ್ಠೂರವಾಗಿ ಹೇಳಿದರು. ಆದರೆ ಆ ಆಂಟಿ ತುಂಬಾ ಒಳ್ಳೆಯವಳು ಅನ್ನಿಸಿತ್ತು. ಅವಳ ಮಾತು ಕೇಳಿ ನಾನು ನಮ್ಮ ಮನೆಯಲ್ಲಿ ಜಗಳವಾಡುತ್ತಿದ್ದೆ. ಆಗಾಗ ಊರು ಬಿಟ್ಟು ಹೋಗುತ್ತಿದ್ದೆ. ಬೇಸರಗೊಂಡ ಮನೆಯವರು ನನಗೆ ಏನೇನೊ ಬುದ್ಧಿವಾದ ಹೇಳಿ ಶಿಕ್ಷೆ ವಿಧಿಸಿ ಬೇರೆ ಊರಲ್ಲಿ ಐ.ಟಿ.ಐ. ಕಾಲೇಜಿಗೆ ಸೇರಿಸಿದರು. ಪ್ರೀತಿಯ ಆಂಟಿಯಿಂದ ನನ್ನನ್ನು ದೂರ ಮಾಡಿದ್ದಾರೆ ಅನ್ನಿಸ್ತಿತ್ತು. ಮತ್ತೆ ಮತ್ತೆ ಆಂಟಿ ನೆನಪಾಗುತ್ತಿದ್ದರು. ಮನೆಯವರು ಸರಿಯಿಲ್ಲ ಅಂತ ತೀರ್ಮಾನಿಸಿದೆ.

ಒಮ್ಮೆ ಊರಿಗೆ ಹೋದಾಗ ಆಘಾತವಾಯಿತು 'ಸಿಸ್ಟರ್, ಸಿಸ್ಟರ್' ಎಂದು ಕರೆಸಿಕೊಳ್ಳುತ್ತಿದ್ದ, ನನ್ನ ಮನಸ್ಸಿನಲ್ಲಿ ಪೂಜ್ಯಳಾಗಿದ್ದ ಆಂಟಿ ಯಾರೊ ಬೇರೆಯವರ ಜೊತೆ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದು ಗೊತ್ತಾಗಿ ಛೆ! ಛೆ!



ಅಂದುಕೊಂಡೆ. ಎಳೆಯವನಾಗಿದ್ದ ನನ್ನನ್ನು ಆಂಟಿಯಿಂದ ಬಿಡಿಸಿದ ನಮ್ಮ ಮನೆಯವರಿಗೆ ಎಷ್ಟು ಕೃತಜ್ಞತೆ ಹೇಳಬೇಕೊ ಗೊತ್ತಿಲ್ಲ. ಮನೆಯವರ ಮನ ನೋಯಿಸಿದ್ದೆನಲ್ಲಾ ಅಂತ ಪಶ್ಚಾತ್ತಾಪವಾಗಿದೆ. ಈಗ ಪ್ರಬುದ್ಧನಾಗಿರುವ ನನ್ನಲ್ಲಿ ಆ ಆಂಟಿಯ ಕುರಿತು ಹೇಸಿಗೆ ಮತ್ತು ಕರುಣೆ ಒಮ್ಮೆಲೆ ಉಂಟಾಗುತ್ತದೆ.

-ಹೆಸರು, ಊರು ಬೇಡ.

ಅಪಾರ್ಥ ಮಾಡಿಕೊಂಡಾಗ

ಕ್ಷುಲಕ ಕಾರಣ ಅಷ್ಟೇ ಬೇಕಾಗಿತ್ತೇನೊ, ನಮ್ಮ ಹಾಗೂ ದೊಡ್ಡಮ್ಮನ ಕೌಟುಂಬಿಕ ಬಾಂದವ್ಯ ನುಚ್ಚು ನೂರಾಗಲು ಮನಸ್ಸು ಕತ್ತಲಿಂದ ತುಂಬಿತು. ಈ ಸಂಬಂಧಗಳ ಕುರಿತು ನಿರಾಶೆ ಭಾವನೆ ಮೊಳೆಯ ತೊಡಗಿತು. ಆದರೆ ದೊಡ್ಡಮ್ಮಳ ಮಗಳಾದ 'ಶಾಂತ' ನನ್ನ ಬಾಳಿಗೆ ಪ್ರವೇಶಿಸಿದ ರೀತಿ ಮತ್ತೆ ಬದುಕಿನ ಕುರಿತು ಕನಸು ಕಾಣುವಂತೆ ಮಾಡಿತು. ವೈಧವ್ಯದ ಬದುಕು ಲವಲವಿಕೆಗೊಂಡರೆ ಹೇಗೊ ಹಾಗೆ.

ಉದ್ಯೋಗದ ಬೇಟೆಗೆ ಬೆಂಗಳೂರಿಗೆ ಹೋಗಿ ಸುತ್ತಿ 'ನೆಲೆ ತಪ್ಪಿದ ಹಕ್ಕಿ'ಯಂತಾದಾಗ ಅಲ್ಲಿಯೇ ಇದ್ದ ಶಾಂತ ಹೃತ್ಪೂರ್ವಕವಾಗಿ ಸ್ವಾಗತಿಸಿ, ಆಶ್ರಯದ ನೆರಳು ನೀಡಿದಳು. ಆ ದೊಡ್ಡಮ್ಮ ಈ ಶಾಂತ ಎಲ್ಲಿಂದೆಲ್ಲಿ ಅಂತರ! ಆದರೆ ತಾಯಿ ಮಗಳು. ಶಾಂತಳ ಪ್ರೀತಿಗೆ ಮೂಕಾದೆ. ಅವಳ ಮಾತು, ಅತಿಶಯವಾದ ಮುಗ್ಧ ಸಲಿಗೆಯಲ್ಲಿ ನನ್ನ ನೋವು ಕರಗತೊಡಗಿತು. ಪರಸ್ಪರರಲ್ಲಿ ಒಂದೇ ಭಾವನೆ, ಒಂದೇ ಅಭಿಪ್ರಾಯ, ಒಂದೇ ಮನಸ್ಸು, ಭಿನ್ನತೆ ನುಸುಳದಂತೆ ಅರ್ಥಮಾಡಿಕೊಂಡಿದ್ದೆವು. ಆದರೆ ನಮ್ಮನ್ನು ನೋಡುವವರ ಕಣ್ಣಿಗೆ ಹೇಗೆ ಅರ್ಥೈಸಬೇಕು. ತಂಗಿ ಶಾಂತಳ 'ಒರಗಿತ್ತಿ' ಯರು ಮತ್ತು ಅತ್ತಿಗೆ ಲಕ್ಷ್ಮಿ ಅಸೂಯೆಯಿಂದ ನೋಡಲಾರಂಭಿಸಿದರು. ಬಸವಳಿದು ಹೋದೆ. ಭಾವಜಿ ಕುಡಿಯುವುದು, ಅವಾಚ್ಯವಾಗಿ ಬಯ್ಯುವುದು ಶುರುಮಾಡಿದರು. ಎಲ್ಲರ ಸಂಶಯದ ಕರಿ ಛಾಯೆ ನಮ್ಮ ಮೇಲೆ ಹರಿದಾಡತೊಡಗಿತು. ಅಲ್ಲಿ ಇರುವುದು ಹೇಗೆ? ಹೊರಟೆ. ಹೊರಟಾಗ ತಂಗಿ ತಡೆದರೂ, ಹೃದಯ ಹೊರಬರುವಂತಾದರೂ ಭಾರವಾದ ಹೆಜ್ಜೆಗಳನ್ನಿಡುತ್ತಾ ಹೊರಟು ಬಂದೆ.

ಮುರಿದ ಸೇತುವೆ ಕಟ್ಟಬಹುದು, ಹರಿದ ಮನಸ್ಸು ಹೊಲೆಯಲಾದೀತೆ? ಇದು ಬದುಕಿನ ಮೂಲ ಪ್ರಶ್ನೆಯಂತೆ ಉಳಿದು ಬಿಟ್ಟಿದೆ. ನೋವು ಪಥ್ಯವಾಗಿದೆ. ಯಾರಿಗೆ ಹೇಳಲಿ?

- ಚಾ. ಮ. ಮಲ್ಲೇಶ್, ತೊರೆಚಾಕನ ಹಳ್ಳಿ

ಚೌ ಚೌ ಪಾರ್ಟಿಗಳು

'ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಎಂಬ ಹಾಡು ರೇಡಿಯೋದಲ್ಲಿ ಬಂದಾಗ ವಿಶ್ವ ಬೆಚ್ಚಿದ. ಬೆವರಿದ. ಥಟ್ಟನೆ ರೇಡಿಯೋ ಆರಿಸಿದ.

'ಯಾಕ್ರೀ? ಏನಾಯ್ತು?

'ಈ ಹಾಡು ಕೇಳೋದು ಕಷ್ಟ ಕಣೆ.

ನನಗೆ 'ಮರಳಿ ಮರಳಿ ಬರುತಿದೆ' ಸಾಲು ಕಿವಿಗೆ ಬಿದ್ದರೆ ಚುನಾವಣೆ ನೆನಪಾಗುತ್ತೆ. ಐದು ವರ್ಷಕ್ಕೊಮ್ಮೆ ನಡೆಯಬೇಕಾದ ಚುನಾವಣೆ ವಾರ್ಷಿಕ ತಿಥಿಯ ಹಾಗೆ ಪ್ರತಿವರ್ಷ ನಡೆದರೆ ಹೇಗೆ?'

'ಏನಾಗುತ್ತೆ? ವಡೆ, ಕಜ್ಜಾಯ ಸಿಗುತ್ತೆ'

'ಆದರೆ ಒಂದು ಚುನಾವಣೆ ಅಂದರೆ ಐದು ಸಾವಿರ ಕೋಟಿ ರೂಪಾಯಿಗಳ ಖರ್ಚು ಆಗುತ್ತಲ್ಲ? ಭಾರತದಂತಹ ಬಡ ರಾಷ್ಟ್ರ ಇಷ್ಟು ಹಣದ ಪೋಲು ಮಾಡೋಕೆ ಸಾಧ್ಯಾನಾ?

'ನಮ್ಮ ತಪ್ಪಂತೂ ಇದರಲ್ಲಿ ಇಲ್ಲ' ಎಂದು ತೀರ್ಪಿತ್ತಳು ವಿಶಾಲೂ.

ವಿಶ್ವ ಹರಿಕತೆ ದಾಸನಂತೆ ಕೆಮ್ಮಿ ಗಂಟಲು ಸರಿಮಾಡಿಕೊಂಡು ಮಡದಿಯನ್ನೆ ಶ್ರೋತವಾಗಿಸಿಕೊಂಡು ಶುರುಮಾಡಿದ.

'ಎಲೈ ಭಾರತರತ್ನವೇ, ನೀತಿಚಿಂತಾಮಣಿಯೇ, ಭಾಮಾ ಕರ್ಲಾನ್ ಪ್ಯಾಟರಸ್ಸೇ, ಭರತವರ್ಷವೆಂಬ ದೇಶದಲ್ಲಿ ಹದಿನಾರು ಮಂದಿ ದರೋಡೆಗಾರರು ಒಟ್ಟಾಗಿ, ಒಗ್ಗಟ್ಟಾಗಿ ದೇವೇಂದ್ರನ ತಿಜೋರಿಯನ್ನು ದೋಚಿದರು.'

'ದೇವೇಂದ್ರ ಎಲ್ಲಿಂದ ಬರ್‍ತಾನೆ?' ವಿಶಾಲೂಗೆ ಆಶ್ಚರ್ಯ.

'ಹಣವಿದ್ದವನೇ ದೇವೆಂದ್ರ. ದೋಚಿದ ಮೇಲೆ ಅದನ್ನು ಹಂಚಿಕೊಳ್ಳುವ ಕೆಲಸ ಶುರುವಾಯಿತು. ಪ್ರತಿಯೊಬ್ಬನೂ ಸಿಂಹಪಾಲು ಕೇಳಿದ'

'ಅದ್ಯಾಕೆ?'

'ತಿಜೋರಿನ ಕದಲಿಸೋಕೆ, ಅದರ ಚಕ್ರ ತಿರಿಗಿಸೋಕೆ, ಅದನ್ನೆ ಮರ ಮಾಡಿಕೊಂಡು ಹತ್ತಿ ಒಳಗಿದ್ದ ಹಣದ ಬುತ್ತಿ ಈಚೆ ಎಳೆಯೋಕೆ ೧೬ ಮಂದಿಯಿಂದ ಆಗಲಿಲ್ಲ. ಆಗ ೧೭ನೆಯವ ಕೈ ಹಾಕಿದ. ಕೆಲಸ ಸಲೀಸಾಯಿತು. ನಾನು ಕೈ ಹಾಕಿದ್ದರಿಂದ ಈ ನಿಧಿ ದೊರತಿದೆ ಎಂದು ಪ್ರತಿಯೊಬ್ಬನೂ ಹೇಳಲು ಶುರು ಮಾಡಿದ. ಪ್ರತಿಯೊಬ್ಬನೂ ತನಗೆ ಸಿಂಹಪಾಲು ಬೇಕೆಂದ. ಪ್ರತಿಯೊಬ್ಬನೂ ೧೭ನೆಯವನಾದ'.

'ರೀ, ಚುನಾವಣೆ ನೆನಪಾಗ್ತಾ ಇದೆ ನನಗೆ'

'ರೇಡಿಯೋ ಆರಿಸಿದಂತೆ ನಿನ್ನೂ ಆರಿಸಿ ಬಿಡುತ್ತೇನೆ.' ಎಂದು ವಿಶ್ವ ಸಿಡುಕಿದ.

'ಕಡೆಗೇ?'

'ಚಂದ್ರಲೋಕದ ಬಾಬು ಎಂಬ ಬೆಕ್ಕು ಒಂದು ಅಡ್ಡ ಗೋಡೆಯ ಮೇಲೆ ಕುಳಿತಿತ್ತು.'

"CAT ON THE WALL?"

'ಹೌದು ಭಾಮಾ. TODAY IN PARLIMENT ನೀನು ನೋಡಿರಬೇಕು'

'ಅಲ್ಲಾರೀ, Parlimentನಲ್ಲಿ 'Today'ಗೆ ಏನು ಕೆಲಸ? ಅದು ಫ್ಯಾಮಿಲಿ ಪ್ಲಾನಿಂಗ್ ಮಾತ್ರೆ ಅಲ್ಲವಾ?'

'ವಿಶಾಲೂ, ಕತೆಯ ಮಧ್ಯೆ ಮೂಗು ತೂರಿಸಿದರೆ ನಿನಗೆ ಗೌರವ ನರಕ ಪ್ರಾಪ್ತಿಯಾಗಿ ಮುಂದೆ ಜನತಾದಳದ ಮುಖ್ಯಮಂತ್ರಿಯಾಗಿ ಹುಟ್ಟುತ್ತೀಯ, ಜೋಕೆ. ನಮ್ಮ ಪಕ್ಷ ೧೦ ಸೀಟು ಪಡೆಯದಿದ್ದರೆ ಮೀಸೆ ಬೋಳಿಸುವೆ ಎಂದು ಹೇಳಿ, ಕಡೆಗೆ ಸೀಟು ನೀಟಾಗಿ, ಚೀಟಾಗಿ, ಓಟಾಗಿ ಕೆಸರಿನಲ್ಲಿನ ಫೀಟಾದಾಗ ನನಗೆ ಮೀಸೆಯೇ ಇಲ್ಲ, ಬೋಳಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳುವ ರಾಜಕಾರಣಿ ನೀನಾಗುವುದು ಬೇಡ' ಎಂದು ವಿಶ್ವ ಎಚ್ಚರಿಸಿದ.

'ಸ್ಸಾರಿ ಕಣ್ರೀ. ಈಗ ಬೆಕ್ಕನ್ನು ಮಡಿಲಲ್ಲಿ ಇಟ್ಕೊಂಡು ರಾಜ್ಯಭಾರ ಮಾಡೋಕೆ ಸಾಧ್ಯಾನಾ? ಅದು ಯಾವ ಕಡೆ ನೆಗೆಯುತ್ತೋ ಯಾರು ಬಲ್ಲರು?

'ಎಲೈ ವನಿತಾಶಿರೋಮಣಿಯೇ, ನನ್ನ ಹೈದರಾಬಾದ್ ಮುತ್ತೇ....'

'ಥೂ, ನಿಮ್ಮ... ಆಂಧ್ರಪ್ರದೇಶಕ್ಕೆ ನನ್ನ ಕರ್‍ಕೊಂಡ ಹೋಗಬೇಡಿ. ಅದು ಡೂಪ್ಲಿಕೇಟು'

'ಕತೆ ಕೇಳಿಲ್ಲ. ಯಾವ ರೀತಿಯಲ್ಲಿ ಆ ೧೬ ಮಂದಿಗೆ ಹಣ ಹಂಚಿಕೊಳ್ಳುವುದು ಕಷ್ಟ ಆಯಿತೋ ಅದೇ ಪ್ರಕಾರ ಈ ನಮ್ಮ ರಾಜಕಾರಣಿಗಳಿಗೆ ಅಧಿಕಾರ ಹಂಚಿಕೊಳ್ಳುವುದು ಸಮಸ್ಯೆ ಆಗಿ, ಆ ಸಮಸ್ಯೆ ಒಂದು ಪ್ರಾಬ್ಲಮ್ ಆಗಿ, ಆ ಪ್ರಾಬ್ಲಮ್‌ನಿಂದ ಇಷ್ಯೂ ಶುರುವಾಗಿ...'

'ಇಷ್ಯೂ ಅಂದರೆ ಮಕ್ಕಳು ತಾನೆ?'

'ಹೌದು, ಅಯೋಗ್ಯ ನನ್ನ ಮಕ್ಕಳು'

'ಈಗ ಸರ್ಕಾರ ಇದೆ ಯಲ್ಲ? ಯಾರೋ, ಹ್ಯಾ... ಶುರು ಮಾಡಿದ್ದರೆಲ್ಲ?'

'ಎಲೈ ನನ್ನ ಪಾಲಿನ ಸುಶ್ಮಿತಾಸೇನಳೇ, ಐಶ್ವರ್ಯವಿಲ್ಲದ ರೈಯೋ, ನೋಡಲ್ಲಿ, ಸರ್ಕಾರವನ್ನು ಬೀಳಿಸಲು ಕೆಲಮಂದಿ ಯಜ್ಞಯಾಗಾದಿಗಳನ್ನು ಮಾಡಿಸುತ್ತಿದ್ದಾರೆ.' ಎಂದು ವಿಶ್ವ ಮಂತ್ರದ ಗೋಲವನ್ನು ತೋರಿಸಿದ. ಅಲ್ಲಿ ಕೋರೆ ಹಲ್ಲು, ಕೋಡುಗಳು ಇರುವ ಮಂದಿ ಇದ್ದರು. ಕೈಬೆರಳುಗಳನ್ನು ಜಜ್ಜುತ್ತಾ ಕೆಲವರು, ಮರವನ್ನು ಕಡಿಯುತ್ತಾ ಹಲವರು, ಚಕ್ರದ ಕಡಾಣಿಯನ್ನು ಕೀಳುತ್ತಾ ಇತರರು, ಕಮಲದ ಪಕಳೆಗಳನ್ನು ಕಿತ್ತೆಸೆಯಲು ಇನ್ನಷ್ಟು ಮಂದಿ ನಿರತರಾಗಿರುವುದು ಕಾಣಿಸಿದಾಗ ವಿಶ್ವನನ್ನು ವಿಶಾಲೂ ಅಪ್ಪಿದಳು.

'ರೀ, ಭಯ ಆಗ್ತಾ ಇದೆ'

ಮತದಾರ ನಾನಿರುವಾಗ ಭಯವೇತಕೆ?'

'ಯಾರು ಸರ್ಕಾರ ಹಿಡಿದರೂ ಮತ್ತೊಬ್ಬರು ಕಾಲು ಎಳೀತಾ ಇರ್‍ತಾರಲ್ಲ, ಮುಂದೆ ಈ ದೇಶದ ಗತಿ?'

'ಜನಕ್ಕೆ ತಲೆತಾಕಬೇಕು'

'ತಲೆ ಇದ್ದರೆ ತಾಕುತ್ತದೆ. ಇಲ್ಲವಾದರೆ?'



'ಇದೇ ರೀತಿ ಆಗಾಗ ಚುನಾವಣೆ ಮುಂದು ವರೆಯುತ್ತದೆ. ಒಂದು ಪಾರ್ಟಿಗೆ ಮಾತ್ರ ಬೆಂಬಲ ನೀಡಿದಾಗ ಸ್ಥಿರ ಸರ್ಕಾರ ಬರಲು ಸಾಧ್ಯ.'

'ಇದು ಜನರ ತಪ್ಪಲ್ಲ. ಲೀಡರುಗಳು ಒಂದಾಗಬೇಕು. ನಮ್ಮನ್ನ ಒಡೆದು ಆಳ್ತಾ ಇರೋದು ನಮ್ಮ ಲೀಡರುಗಳು ಕಣ್ರೀ. ಪ್ರತಿಯೊಬ್ಬನಿಗೂ ಅವನ ಪಾರ್ಟಿಯೇ ಮುಖ್ಯ.'

'ದೇಶದ ಶಾಂತೀನ ತೊಟ್ಟೀಗೆ ಎಸೆದು ಅವನ ಕಾಂತಿಯನ್ನು ಬೆಳಗಿಸಿಕೊಳ್ಳಲು ಪ್ರಯತ್ನಿಸೋ ಮಹಾನುಭಾವ ಮನೆಮುಂದೆ ಬಂದರೆ.....'

'ಆರತಿ ಮಾಡಬೇಕು'

'ಹೌದು. ಕಾಲಿನ ಮೇಲೆ ತೆಂಗಿನ ಕಾಯಿ ಚೆಚ್ಚಿ ಮುಖಕ್ಕೆ ಮಂಗಳಾರತಿ ಮಾಡಬೇಕು.'

'ಆಗಲೂ ಅವರಿಗೆ ಬುದ್ಧಿ ಬಾರದೆ ಹೋದರೆ?'

'ತಲೆಯ ಮೇಲೆ ತೆಂಗಿನಕಾಯಿ ಚೆಚ್ಚಿ ಕಾಲಿಗೆ ಮಂಗಳಾರತಿ ಮಾಡಬೇಕು'

ವಿಶಾಲೂ ಏನೋ ಯೋಚಿಸಿ ನಿರ್ಧಾರಕ್ಕೆ ಬಂದಳು. ಫಾರಿನ್‌ನಲ್ಲಿ ಇರೋ ಹಾಗೆ ರೂಲಿಂಗ್ ಪಾರ್ಟಿ ಮತ್ತು ಅಪೋಸಿಷನ್ ಪಾರ್ಟಿ ಇದ್ದರೆ ಚೆನ್ನ. ಚೌ ಚೌ ಪಾರ್ಟಿಗಳಾದರೆ ಉಪಯೋಗವಿಲ್ಲ ಎಂದುಕೊಂಡಳು.

ಪಕ್ಕದ ಮನೆಯ ರೇಡಿಯೋದಲ್ಲಿ 'ಯುಗಯುಗಾದಿ ಕಳೆದರೂ' ಹಾಡು ನಿಂತಿತು. ರಾಜಕಾರಣಿಯೊಬ್ಬರ ಭಾಷಣ ಶುರುವಾಯಿತು.

'ನಾವು ಭವ್ಯ ಭಾರತವನ್ನು ಕಟ್ಟೋಣ. ಜಾತಿ ಮತಗಳನ್ನು ತೊರೆದು ಒಂದಾಗಿ ದುಡಿಯೋಣ. ಏಳಿ. ಎದ್ದೇಳಿ'

ವಿಶಾಲೂ ಎದ್ದಳು. ಪಕ್ಕದ ಮನೆಗೂ ಹೋಗಿ ರೇಡಿಯೋ ಆರಿಸಿ ಬಂದಳು.

ಎಂ. ಎಸ್. ನರಸಿಂಹಮೂರ್ತಿ

ಮಹಿಳಾ ಸಾಧಕಿಯರ ಕೂಟ ಸ್ಥಾಪಿಸಿದ

ಛಾಯಾ ಶ್ರೀವತ್ಸ

ಉದ್ಯಮರಂಗದಲ್ಲಿ ತಮ್ಮದೇ ಆದ ಛಾಪು ಒತ್ತುವುದರಲ್ಲಿ ಯಶಸ್ವಿಯಾದ ಹಲವು ಮಹಿಳಾ ಉದ್ಯಮಿಗಳ ಪರಿಚಯವನ್ನಿಲ್ಲಿ ಮಾಡುತ್ತಿದ್ದೇವೆ. ಈ ಉದ್ಯಮಿಗಳ ಯಶೋಗಾಥೆ ಉತ್ಸಾಹಿ ಮಹಿಳೆಯರಿಗೆ ಸ್ಫೂರ್ತಿ ಮತ್ತು ಮಾಹಿತಿ ಒದಗಿಸುತ್ತದೆ.

ಸುಭಾಷಿಣಿ

ತಮ್ಮ ವೃತ್ತಿ ಜೀವನದಲ್ಲಿ ಹಲವಾರು ಏರುಪೇರುಗಳನ್ನು ನೋಡಿದ ಸ್ಥಾಪಕಿ ಛಾಯಾ ಶ್ರೀವತ್ಸ ಅವರ ಅನುಭವಗಳೂ ಈ ಸಂಘದ ಸ್ಥಾಪನೆಗೆ ಬಹಳಷ್ಟು ಮಟ್ಟಿಗೆ ಕಾರಣವಾಗಿದೆ. ಈ ಸಂಸ್ಥೆಯಲ್ಲಿ ಸದಸ್ಯರಾಗಿರುವವರ ಸಂಖ್ಯೆ ತಿಂಗಳಿಂದ ತಿಂಗಳಿಗೆ ಹೆಚ್ಚುತ್ತಲೇ ಇದ್ದು ನೂರರ ಗಡಿ ದಾಟಿದೆ. ಹದಿನೆಂಟು ವಯಸ್ಸಿನ ಮೇಲ್ಪಟ್ಟ ಹೆಣ್ಣು ಮಕ್ಕಳು ಇಲ್ಲಿ ಸದಸ್ಯರಾಗಬಹುದಾಗಿದೆ. ಸಂಘದ ಉಪಯುಕ್ತ ಯೋಜನೆಗಳ ಅರಿವಾಗಿ ಇತರ ಸಂಘದ ಸದಸ್ಯರೂ ಇದರ ಕಾರ್ಯ ಚಟುವಟಿಕೆಗಳಲ್ಲಿ ಕೈ ಮಿಲಾಯಿಸುತ್ತಿರುವುದು ಕಂಡು ಬರುತ್ತದೆ.

ಕೆಲವರು ಸಮಾಜ ಸೇವೆ ಮಾಡಬೇಕೆಂಬ ಉದ್ದೇಶದಿಂದ ಸೇರಿದರೆ ಮತ್ತೆ ಕೆಲವರು ಸಂಘದ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸ್ವಾವಲಂಬಿಗಳಾಗಿರುವುದನ್ನು ಕಲಿಯುವುದು ಉದ್ದೇಶವಾಗಿರುತ್ತದೆ. ಇನ್ನಿತರರಿಗೆ ತಮ್ಮ ಕಾನ್‌ಟ್ಯಾಕ್ಟ್ ಬೆಳೆಸಿ ಏನಾದರೊಂದು ಸಾಧಿಸಬೇಕೆಂಬ ಗುರಿ ಹೊಂದಿದವರು. ಒಬ್ಬರು ವಕೀಲರಾದರೆ, ಮತ್ತೊಬ್ಬರು ಸಾರ್ವಜನಿಕ ಸಂಪರ್ಕಾಧಿಕಾರಿ, ಮಗದೊಬ್ಬರು ಕಂಪ್ಯೂಟರ್ ಶಾಲೆ ನಡೆಸುವವರು... ಹೀಗೇ ವಿವಿಧ ಕ್ಷೇತ್ರದ ಮಹಿಳೆಯರ ವಿಚಾರಗಳ ಸಮ್ಮಿಲನಕ್ಕೆ ವೇದಿಕೆಯಾಗಿದೆ 'ಮಹಿಳಾ ಸಾಧಕಿಯರ ಸಂಘ'. ಇದರಲ್ಲಿ ಗೃಹಿಣಿಯರೂ ಸೇರಿದ್ದಾರೆ. ಈ ಮಹಿಳೆಯರು ಈ ಸಂಘದ ಉಪಯೋಗವನ್ನು ನೋಡುವ ದೃಷ್ಟಿಯೂ ವೈವಿಧ್ಯಮಯ. ಮಹಿಳೆಯರಿಗೆ ಸ್ವಯಂ ಉದ್ಯೋಗವಕಾಶ ಕಲಿಸುವುದಲ್ಲದೆ ಇನ್ನಿತರ ಕಾರ್ಯಗಳಿಂದಲೂ ಈ ಸಂಸ್ಥೆ ಬೆಳಕಿಗೆ ಬರಲು ಕಾರಣವಾಗಿದೆ. ಅದರಲ್ಲಿ ೯೬ರಲ್ಲಿ ಶುರು ಮಾಡಿದ 'ಒಳ್ಳೆಯ ಅತ್ತೆಗೆ' ಪ್ರಶಸ್ತಿ, ಸಹಾಯಕ ಪತಿಗೆ ಪ್ರಶಸ್ತಿ, ೯೭ರಲ್ಲಿ ಪ್ರಾರಂಭವಾದ 'ಮಹಿಳಾ ಸಾಧಕಿ' ಪ್ರಶಸ್ತಿ ಮತ್ತು ಈ ವರ್ಷದಿಂದ ನೀಡುವ 'ಆತ್ಮವಿಶ್ವಾಸದ ಪ್ರತೀಕವಾದ ಮಹಿಳೆ ಪ್ರಶಸ್ತಿ' ಸಂಸಾರ ಮತ್ತು ಸಾಧನೆಯ ನಡುವೆ ಕೊಂಡಿ ಬೆಸೆದಂತಾಗಿದೆ.

ಛಾಯಾ ಅವರನ್ನು ಭೇಟಿಯಾದಾಗ ಹಲವಾರು ಏರಳಿತಗಳನ್ನು ನೋಡಿ ಪಕ್ವವಾದ ಆತ್ಮವಿಶ್ವಾಸದ ಪ್ರತೀಕವಾದ ಮಹಿಳೆಯನ್ನು ನೋಡಿದಂತಾಗುತ್ತದೆ. ಇಂಗ್ಲೀಷಿನಲ್ಲಿ ಈಗಾಗಲೇ ಕೆಲವು ಪುಸ್ತಕಗಳನ್ನು ಬರೆದಿರುವ ಛಾಯಾ ಅವರಿಗೆ ಬದುಕು ಹಲವಾರು ವಿವಾದಗಳನ್ನು ಒಡ್ಡಿ ಮುಳ್ಳಿನ ಹಾದಿಯನ್ನು ಎರಕ ಹೊಯ್ದಿತ್ತು. ವಿಚಿತ್ರವೆಂದರೆ ಯಾರೇ ಮಹಿಳಾ ಸಾಧಕಿಯನ್ನು ತೆಗೆದುಕೊಂಡರೂ; ಅದು ಕಿರಣ್ ಬೇಡಿ ಅಥವಾ ಬಾಂಗ್ಲಾದೇಶದ ಬರಹಗಾರ್ತಿ ತಸ್ಲಿಮಾ ಆಗಲಿ, ವಿವಾದಗಳಲ್ಲಿ ಸಿಲುಕಿ ತಮ್ಮ ಸಾಮರ್ಥ್ಯವನ್ನು ತೋರಿಸುವಂತಾಗಿದೆ. ಆದರೂ ಈ ಮಹಿಳೆ ಸಾವರಿಸಿಕೊಂಡು ತಮ್ಮ ಪ್ರತಿಭೆ ನಿಂತ ನೀರಾಗಬಾರದೆಂದು ಹಲವಾರು ಕ್ಷೇತ್ರಗಳಲ್ಲಿ ಕೈಯಾಡಿಸಿದ್ದಾರೆ.

ಬೆಂಗಳೂರಿನ ಒಂದು ಪತ್ರಿಕೆಗೆ ಸಂಪಾದಕಿಯಾಗಿ ದುಡಿದುದು ಮತ್ತು ಎಚ್. ಎಂ. ಟಿ. ಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿದ್ದ ಅನುಭವ ಅವರು ಈ ಮಟ್ಟ ತಲುಪಲು ಸಹಾಯಕವಾಗಿದೆ. ಈ 'ವರ್ಕೊಹಾಲಿಕ್' ಮಹಿಳೆಯನ್ನು ಭೇಟಿಯಾದಾಗ ಅವರು ತಮ್ಮ ಎರಡು ವರ್ಷದ 'ಕೂಸಾದ' 'ಮಹಿಳಾ ಸಾಧಕಿಯರ ಸಂಘ'ದ ಕಾರ್ಯ ಚಟುವಟಿಕೆಗಳು ಮತ್ತು ತಮ್ಮ ವಿಚಾರಗಳನ್ನು ಈ ಲೇಖಕಿಯೊಂದಿಗೆ ಹಂಚಿಕೊಂಡಿದ್ದಾರೆ.

ಪ್ರ : ಈ ಸಂಘವನ್ನು ಸ್ಥಾಪಿಸಲು ನಿಮಗೆ ಪ್ರೇರಣೆ ಹೇಗೆ ಸಿಕ್ಕಿತು?

ಛಾ : ಜನ ಮಹಿಳೆಯರು ಆತ್ಮ ವಿಶ್ವಾಸದಿಂದ ಶಕ್ತಿವಂತಳಾಗಿರುವುದನ್ನು ಇಷ್ಟಪಡಲಾರರು. ನನ್ನ ಅನುಭವ ನನಗೆ ಮಹಿಳೆಯರ ಸಮಸ್ಯೆಗಳ ಕಡೆ ಕೇಂದ್ರೀಕರಿಸಲು ಕಲಿಸಿದೆ. ಪ್ರತ್ಯೇಕ ಸಮಸ್ಯೆಗಳಿಗೆ ಸ್ಪಂದಿಸುವಂಥ ಸಂಸ್ಥೆಗಳಿವೆ, ಜಾತಿಯನ್ನಾಧರಿಸಿದ ಸಂಘಗಳಿವೆ. ಆದರೆ ಈ ಸಂಸ್ಥೆಗಳು ಸಹಾಯ ಹಸ್ತವನ್ನು ನೀಡಲಾಗದ ಇತರ ವಿಷಯಗಳೂ ಇವೆ. ಆದ್ದರಿಂದ ಎಲ್ಲರಿಗೂ ಒಂದೇ ಸೂರಿನಡಿ ಸಾಂತ್ವನ ನೀಡುವ ಕೈ ಇಲ್ಲಿದೆ.

ಪ್ರ : ನಿಮ್ಮ ಸಂಸ್ಥೆಯ ಹೆಸರು 'ಮಹಿಳಾ ಸಾಧಕಿಯರ ಸಂಘ' ಎಂದಿದ್ದರೂ ಅದರಲ್ಲಿ ಗೃಹಿಣಿಯರೂ ಸೇರಿದ್ದಾರಲ್ಲಾ.

ಛಾ : ಗೃಹಿಣಿರೂ ಸಾಧಕಿಯರಲ್ಲವೆ. ಎವೆರೆಸ್ಟ್ ಶಿಖರ ಏರುವುದಷ್ಟೇ ಸಾಧನೆಯಾಗ


ಲಾರದು. ಪರೀಕ್ಷೆಯಲ್ಲಿ ತೇರ್ಗಡೆಯಾಗುವುದೂ ಒಂದು ಸಾಧನೆ. ಆದರೆ ನಾವು ವಿದ್ಯಾರ್ಥಿಗಳು ಮತ್ತು ಗೃಹಿಣಿಯರ ಕೆಲಸವನ್ನು ಪರಿಗಣಿಸುತ್ತಿಲ್ಲವಷ್ಟೆ. ಹಾಗೆಯೇ ಸಾಮಾನ್ಯವಾಗಿ ಮಹಿಳೆಯರ ಸಹಾಯಕ್ಕೆ ಮುಂಬರುವ ಸಂಸ್ಥೆಗಳನ್ನು ತೆಗೆದುಕೊಂಡಾಗ ಒಂದು ರೀತಿಯಲ್ಲಿ ದುರ್ಬಲರ ಆಶ್ರಯಕ್ಕೆ ನೆರವಾಗುವಂತೆ ತೋರುತ್ತದೆ. ಅಬಲೆಯರ ಸೇವಾ ಸಂಘ ಎಂದೋ, ದುರ್ಬಲರ ನೆರವಿನ ಸಂಸ್ಥೆ ಎಂದೋ, ಶೋಷಣೆಗೊಳಗಾದವರಿಗೆ ಆಶ್ರಯಧಾಮ ಹೀಗೆ. ಆದರೆ ಈ ಮಧ್ಯೆ 'ಮಹಿಳಾ ಸಾಧಕಿಯರ ಸಂಘ' ಎಂಬ ಶಕ್ತಿಯುತ ಹೆಸರಿನ ಸಂಘ ತನ್ನ ಛಾಪನ್ನು ಒತ್ತುತ್ತಿದೆ.

ಪ್ರ : ಈ ಸಂಘದಿಂದ ಇದುವರೆಗೆ ಏನೇನು ಕಾರ್ಯಗಳನ್ನು ಹಮ್ಮಿಕೊಂಡಿದ್ದೀರಿ?

ಛಾ : ನಾವು ಮಹಿಳೆಯರಿಗೆ ಸ್ವಯಂ ಉದ್ಯೋಗ ಕುರಿತು ಕಾರ್ಯಾಗಾರಗಳನ್ನು ನಡೆಸಿ ಕೊಟ್ಟಿದ್ದೇವೆ. ಇದು ತಮ್ಮ ಜೀವನದಲ್ಲಿ ಏನಾದರೊಂದು ಮಾಡಬೇಕೆಂಬ ಇಚ್ಛೆಯುಳ್ಳವರಿಗಾಗಿದೆ. ನಾವು ನಾಲ್ಕೈದು ವಿಚಾರಗಳೊಂದಿಗೆ ಪ್ರಾರಂಭಿಸಿ ಗುಂಪನ್ನು ಅವರ ಆಯ್ಕೆಯ ವಿಷಯದಡಿ ವಿಭಜಿಸಿ ಅರಿವನ್ನುಂಟು ಮಾಡಲಾಗಿದೆ. ಹೀಗೆ ಎರಡು ಮೂರು ದಿನದ ಕಾರ್ಯಾಗಾರಗಳನ್ನು ನಡೆಸಿಕೊಡಲಾಗಿದೆ.

ಪ್ರ : ಇದರಲ್ಲಿ ಮಾರಾಟದ ಬಗ್ಗೆ ಮಾತ್ರ ಅರಿವನ್ನುಂಟು ಮಾಡಲಾಗುತ್ತದೆಯೇ?

ಛಾ : ಮಾರುಕಟ್ಟೆ ಎಂದರೆ ಗ್ರಾಹಕರನ್ನು ಅರಿತು ಅವರ ಅವಶ್ಯಕತೆಗಳನ್ನು ಪೂರೈಸುವುದು. ನಾವಿಲ್ಲಿ ವೃತ್ತಿಪರರಾಗಲು ಸಜ್ಜುಗೊಳಿಸುತ್ತೇವೆ. ನಂತರ ಆ ವ್ಯಕ್ತಿ ಇಷ್ಟಪಟ್ಟರೆ ಕೌಶಲ್ಯ ತರಬೇತಿ ನೀಡಲಾಗುತ್ತದೆ. ಅದು ಅವರಿಗೆ ಬಿಟ್ಟಿದ್ದು. ವಿಪರ್ಯಾಸವೆಂದರೆ ಬಹಳಷ್ಟು ಮಂದಿ ಅರ್ಧದಲ್ಲಿಯೇ ಬಿಟ್ಟು ಬಿಡುತ್ತಾರೆ. ಅವರ ಇತರ ಕೆಲಸ ಕಾರ್ಯಗಳು ಪ್ರಾಮುಖ್ಯ ಪಡೆದು ಈ ತರಬೇತಿಗೆ ಬರುವುದನ್ನು ಮುಂದೂಡುತ್ತಾರೆ. ಸಣ್ಣ ಪಾರ್ಟಿಗಳು, ಅಂಗಡಿ ವೆಚ್ಚಗಳನ್ನು ನೋಡಿದರೆ ನಿಜಕ್ಕೂ ಭಾರತ ಬಡ ದೇಶವಾಗಿದೆಯೇ ಎಂದು ಯೋಚಿಸುವಂತಾಗುತ್ತೆ. ವರದಕ್ಷಿಣೆ ಮೂಲಕ ದುಡ್ಡು ಮಾಡುವುದನ್ನು ಮಹಿಳೆಯರು ಯೋಚಿಸುತ್ತಾರೆ. ಅವರ ಮನೋಭಾವ ದುಡ್ಡು ಮಾಡುವುದಾಗಿದ್ದು, ಸಾಧಿಸುವುದಲ್ಲ. ದೃಢ ಮನೋಭಾವವಿಲ್ಲ. ಆರ್ಥಿಕ ಸ್ವಾತಂತ್ರ್ಯದಿಂದ ಆತ್ಮವಿಶ್ವಾಸ ಮೂಡದು. ಯಾಕೆಂದರೆ ಚೆನ್ನಾಗಿ ದುಡ್ಡು ಸಂಪಾದಿಸುವ ಮಹಿಳೆಯರನ್ನೂ ಶೋಷಿಸಲಾಗುತ್ತಿದೆ. ಅವರಿಗೆ ಆತ್ಮವಿಶ್ವಾಸವಿದ್ದರೆ



ಸಾಧಕಿಯರು ಎಂದ ಒಡನೆ ಮನಸ್ಸಿನಲ್ಲಿ ಮೂಡುವ ವ್ಯಕ್ತಿಗಳು ಮದರ್ ಥೆರೇಸಾ, ಇಂದಿರಾ ಗಾಂಧಿ, ಮೇರಿ ಕ್ಯೂರಿ, ಫ್ಲಾರೆನ್ಸ್ ನೈಟಿಂಗೇಲ್, ಲತಾ ಮಂಗೇಶ್ಕರ್ ಹೀಗೇ... ಪ್ರಪಂಚದ ಪ್ರಖ್ಯಾತ ಮಹಿಳೆಯರ ಉದ್ದ ಸಾಲಿದೆ. ಈ ಸಾಲಿನ ಮಧ್ಯೆ ಸ್ಥಾನ ಗಿಟ್ಟಿಸುವುದು ಮೊದಲ ನೋಟಕ್ಕೆ ಗಗನ ಕುಸುಮವಾಗಿ ತೋರಬಹುದು. ಆದರೆ ಮುಗಿಲಿಗೂ ಕೈ ಚಾಚುವಂತೆ ಮಾಡಲು ಸರಿಯಾದ ಸಮಯಕ್ಕೆ ಸೂಕ್ತ ಪ್ರೇರಣೆ ಮಾರ್ಗದರ್ಶನ ಸಿಕ್ಕರೆ ಯಶಸ್ಸು ಖಂಡಿತ. 'ಅದರಲ್ಲೂ ಗೃಹಿಣಿಯರಿಗೆ ಮನೆ ಕೆಲಸದ ಜೊತೆಗೆ ಏನಾದರೊಂದು ಸಾಧನೆ ಮಾಡುವುದು ಮರೀಚಿಕೆಯಾಗಿದೆ. ಈ ಮಹಿಳೆಯರ ಜೀವನದಲ್ಲೂ ಹೊಸತನ್ನು ತರಬಹುದು.' ಎನ್ನುತ್ತಾರೆ ಬೆಂಗಳೂರಿನಲ್ಲಿ 'ಮಹಿಳಾ ಸಾಧಕಿಯರ ಕೂಟ'ವನ್ನು ಸ್ಥಾಪಿಸಿರುವ ಛಾಯಾ ಶ್ರೀವತ್ಸ ಅವರು.

ಮಾತ್ರ ಈ ಅಕ್ರಮಗಳು ಕಡಿಮೆಯಾಗುತ್ತದೆ. ನಾವು ಜಾತಿ ಭೇದವಿಲ್ಲದೆ ಶೋಷಿತರನ್ನು ಉತ್ತೇಜಿಸಿ ಮಾರ್ಗದರ್ಶನ ಮಾಡುತ್ತೇವೆ.

ಪ್ರ : ಈ ನಿಟ್ಟಿನಲ್ಲಿ ಇತರ ಸಂಸ್ಥೆಗಳಿಗೂ ನಿಮ್ಮ ಸಂಘಕ್ಕೂ ಇರುವ ವ್ಯತ್ಯಾಸವೇನು?

ಛಾ : ಈ ಸಂಘ ಕಾರ್ಯ ಚಟುವಟಿಕೆಯ ಒಂದು ಭಾಗ ದೌರ್ಜನ್ಯಕ್ಕೊಳಗಾದ, ಸಂಕಷ್ಟಕ್ಕೀಡಾದ ಮಹಿಳೆಯರಿಗೆ ಸಹಾಯಹಸ್ತ ನೀಡುವುದು. 'ಕೋಸಿ ಕಾರ್ನರ್' ಎಂಬ ಒಂದು ಕೋಣೆಯನ್ನು ಈ ಕಾರ್ಯಕ್ಕಾಗಿಯೇ ಸ್ಥಾಪಿಸಿ ಬಳಸಲಾಗುತ್ತಿದೆ. ಎಥ್ನಿಕ್ ಮಾದರಿಯಲ್ಲಿ ಅಲಂಕರಿಸಲಾದ ಈ ಕೋಣೆ ಒತ್ತಡಕ್ಕೊಳಗಾದವರ ಮನಸ್ಸಿನ ಕ್ಷೋಭೆಯನ್ನು ಶಮನಗೊಳಿಸಲು ಉಪಯೋಗಿಸಲಾಗುತ್ತಿದೆ. ಇಲ್ಲಿ ಒಂದೆಡೆ ಪುಸ್ತಕವನ್ನು ಕಾಣುವಿರಿ. ಜೀವನದಲ್ಲಿ ಬೇಸತ್ತು ಈ ಪ್ರಪಂಚವೇ ನಿಸ್ಸಾರವಾಗಿ ಕಂಡು

ವಿಳಾಸ:

ಛಾಯಾ ಶ್ರೀವತ್ಸ

ಏ ೮/೬೭, ೧ನೇ ಬ್ಲಾಕ್,

ವಾದ ಪ್ಯಾರಲೆಲ್ ರೋಡ್,

ದಿತ್ತು. 'ಟೆಕ್ಸ್ ಪಾರ್ಕ್ ಪಶ್ಚಿಮ,

ನಗಳವರೆಗೆ ಮೈರು-೫೬೦ ೦೨೦

ದಾರಿ ತೋರದವರಿಗೆ ತಮ್ಮ ಬೇಗುದಿಯನ್ನು ಹೊರ ಹೊಮ್ಮಿಸಲು ಇಲ್ಲಿ ಸಹಜವಾದ ಮಾರ್ಗ ಕಾಣುತ್ತದೆ. ಈ ಪುಸ್ತಕದಲ್ಲಿ ತಮಗೆ ಇಷ್ಟವಾಗದವರ ಮೇಲೆ ಏನು ಹೇಳಬೇಕೋ ಎಲ್ಲವನ್ನೂ ಗೀಚಬಹುದು. ಪಕ್ಕದಲ್ಲೇ ಬೊಂಬೆಗಳನ್ನು ಕಾಣುವಿರಿ. ತಾವು ದ್ವೇಷಿಸುವವರನ್ನು ನೆನೆಸಿಕೊಂಡು ಅದನ್ನು ಎಷ್ಟು ಬೇಕಾದರೂ ಮನಸ್ಸೇಚ್ಛೆ ಗುದ್ದುವಿರಿ. ಅದರ ಬದಿಯಲ್ಲಿನ ಕಸದ ಬುಟ್ಟಿಯಲ್ಲಿ ಆ ವ್ಯಕ್ತಿಗಳ ಕುರಿತು ಬರೆದುದನ್ನು ಹಾಕಿ ಮತ್ತೊಂದು ಬದಿಗಿರುವ ಪುಸ್ತಕದಲ್ಲಿ ಅದೇ ವ್ಯಕ್ತಿಗಳ ಒಳ್ಳೆಯ ಗುಣಗಳ ಬಗ್ಗೆ ಬರೆದು ಮನಸ್ಸಿಗೆ ಸ್ವಯಂ ಸಾಂತ್ವನ ನೀಡುವ ವಿಧಾನವಿದೆ. ಮನಶ್ಶಾಸ್ತ್ರದ ನೆಲೆಗಟ್ಟಿನ ಮೇಲೆ ಕೆಲವೊಂದು ವಿಧಾನಗಳನ್ನು ಅಳವಡಿಸಲಾಗಿದೆ.

ಪ್ರ : ನಿಮಗೆ 'ಒಳ್ಳೆಯ ಅತ್ತೆಗೆ' ಪ್ರಶಸ್ತಿ ಮತ್ತು 'ಸತಿ ಸಹಾಯಕ ಪತಿ' ಪ್ರಶಸ್ತಿಯನ್ನು ಸ್ಥಾಪಿಸುವ ವಿಚಾರ ಹೇಗೆ ಬಂತು?

ಛಾ : ನನಗೆ ಚಿಕ್ಕಂದಿನಿಂದಲೂ ಸಂಬಂಧಗಳು ಮುಖ್ಯವಾಗಿದ್ದವು. ನನ್ನನ್ನು ಬೆಳೆಸಿದ ನನ್ನ ಅಜ್ಜಿ ಅವಿದ್ಯಾವಂತೆಯಾದರೂ ಒಬ್ಬ ಧೈರ್ಯವಂತ ಮಹಿಳೆ. ಅಂತೆಯೇ ಒಳಗಿನ ಶಕ್ತಿಯೊಂದಿಗೆ ಬೆಳೆದೆ. ಈ ಶಕ್ತಿಯಿಂದ ನನ್ನ ಕೌಶಲ್ಯವನ್ನು

ಉತ್ತಮಪಡಿಸಿಕೊಳ್ಳುವುದರ ಮೂಲಕ ಪಡೆದೆ. ಈಗ ಮಧ್ಯಮ ವಯಸ್ಸಿನ ಮಹಿಳೆಯಾಗಿ ನಾನೀಗ ಸೊಸೆಯಾಗಿಯೂ ಅತ್ತೆಯಾಗಿಯೂ ಅನುಭವವಾಗಿದೆ. ಎರಡು ಕೋನಗಳಿಂದಲೂ ನೋಡಬಲ್ಲೆ. ಈ ಎರಡರ ಮಧ್ಯೆ ಬಹಳಷ್ಟು ಸೈರಿಸಿಕೊಂಡು ಹೋಗುವ ಅಗತ್ಯವಿದೆ. ಆದರೆ ದುರಂತವೆಂದರೆ ಒಬ್ಬರೂ ಇದನ್ನು ಅರ್ಥ ಮಾಡಿಕೊಂಡಿಲ್ಲ. ಹೀಗಾಗಿ ಅತ್ತೆ ಹಾಗೂ ಸೊಸೆಯ ನಡುವಿನ ಒಳ್ಳೆಯ ಸಂಬಂಧವನ್ನು ಉತ್ತೇಜಿಸಲಿಕ್ಕಾಗಿ ಈ ಪ್ರಶಸ್ತಿಯ ಬಗ್ಗೆ ಆಲೋಚನೆ ಮಾಡಿ ಕಾರ್ಯ ರೂಪಕ್ಕೆ ತರಲಾಯಿತು. ಹಾಗೆಯೇ ಗಂಡ ಹೆಂಡಿರ ಸಂಬಂಧವನ್ನು ಉತ್ತಮಪಡಿಸಲು 'ಒಳ್ಳೆಯ ಗಂಡ'ನಿಗೆ ಪ್ರಶಸ್ತಿಯನ್ನು ಸ್ಥಾಪಿಸಲಾಯಿತು. ಹೋದ ವರ್ಷದಿಂದ ಪ್ರತಿ ತಿಂಗಳು 'ಮಹಿಳಾ ಸಾಧಕಿ' ಪ್ರಶಸ್ತಿಯನ್ನು ನೀಡಲಾಗ್ತಿದೆ.

ಪ್ರ : ಪ್ರಶಸ್ತಿಗಾಗಿ ಆಯ್ಕೆ ಹೇಗೆ ಮಾಡುವಿರಿ.

ಛಾ : ಸೆಪ್ಟೆಂಬರ್ ೨೧ನ್ನು 'ಅತ್ತೆಯ ದಿನ'ವೆಂದು ಘೋಷಿಸಿದ್ದೇವೆ. ಇದಕ್ಕೆ ಮುನ್ನ ಪತ್ರಿಕೆಯಲ್ಲಿ ಪ್ರಕಟಣೆ ನೀಡಿ ಅರ್ಜಿಗಳನ್ನು ಆಹ್ವಾನಿಸುತ್ತೇವೆ. ಇದರಲ್ಲಿನ ವಿಶೇಷವೆಂದರೆ ಸೊಸೆಯಂದಿರೇ ತಮ್ಮ ಅತ್ತೆಯ ಗುಣಗಳನ್ನು ಮೆಚ್ಚಿ ೨೦೦ ಪದಗಳೊಳಗೆ 'ಯಾವ ಕಾರಣಕ್ಕೆ ತಮ್ಮ ಅತ್ತೆ ಈ ಪ್ರಶಸ್ತಿ ಗಳಿಸಲು ಅರ್ಹರು' ಎಂಬುದನ್ನು ಬರೆದು ಕಳುಹಿಸಬೇಕಾಗುತ್ತದೆ. ಇದಕ್ಕೆ ಪ್ರತಿಕ್ರಿಯೆಯಾಗಿ ರಾಶಿಗಟ್ಟಲೆ ಪತ್ರಗಳು ಸಂಘದ ಬಾಗಿಲಿಗೆ ಬಂದಿದ್ದವು. ನಾನು ಅದರಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿ ವಿವಿಧ ಕ್ಷೇತ್ರಗಳಿಂದ ಬಂದ ನಮ್ಮ ಸಲಹಾ ಮಂಡಳಿಗೆ ನಿರ್ಧಾರ ಮಾಡಲು ಬಿಡುವೆ. ಹೃದಯದ ಕದ ತಟ್ಟಿ ಮನ ಮಿಡಿವ ಪತ್ರಗಳನ್ನು ಓದಿದರೆ ಈ ಪ್ರಪಂಚದಲ್ಲಿ ಕೆಟ್ಟ ಅತ್ತೆಯಂದಿರಷ್ಟೇ ಇರಲಾರರು. ಅವರಲ್ಲಿ ಇಷ್ಟು ಹೃದಯವಂತಿಕೆ ಉಳ್ಳವರೂ ಇರುವರೇ ಎಂದು ಆಶ್ಚರ್ಯ ಮೂಡಿಸುತ್ತದೆ. ಈ ಪತ್ರಗಳಲ್ಲಿ ಸೊಸೆಯಂದಿರು ಹಲವು ಪ್ರಕರಣಗಳನ್ನು ಉದ್ಧರಿಸಿ ತಮಗಾದ ಅನುಭವವನ್ನು ಅಭಿವ್ಯಕ್ತಿಸಿದ್ದಾರೆ. ಸೊಸೆಯಂದಿರ ತೀರ್ಪಿನಲ್ಲಿ ಒಂದು ಎಳೆ ಸಾಮಾನ್ಯವಾಗಿ ಕಂಡು ಬರುತ್ತದೆ. ಅದು ತನ್ನ ಅತ್ತೆ ತಾನು ನಿರೀಕ್ಷಿಸಿದ್ದನ್ನು ಮಾಡದಿರುವುದು ದೊಡ್ಡದೆನಿಸಿರುತ್ತದೆ. ಉದಾಹರಣೆಗೆ ವರದಕ್ಷಿಣೆ ಕೇಳದಿರುವುದು. ತನ್ನ ಅತ್ತೆ ತಾನು ಇರುವ ರೀತಿಯಲ್ಲೇ ಸ್ವೀಕರಿಸಿರುವುದು. ಹಾಗೆಯೇ 'ಸತಿ ಸಹಾಯಕ ಪತಿ' ಪ್ರಶಸ್ತಿಗಾಗಿ ಹೆಂಡತಿಯರು 'ತಮ್ಮ ಗಂಡ ಈ ಪ್ರಶಸ್ತಿ ಗಳಿಸಲು ಹೇಗೆ ಅರ್ಹರು' ಎಂಬುದನ್ನು ಬರೆದು ಕಳುಹಿಸಬೇಕಾಗುತ್ತದೆ. ಇದಕ್ಕೆ ಮಾರ್ಚ್ ೮ ರಂದು ಪ್ರಶಸ್ತಿ ಪ್ರಧಾನ ಮಾಡಲಾಗುತ್ತೆ. ಒಟ್ಟಾರೆಯಾಗಿ ಆರೋಗ್ಯಕರ ಸಂಬಂಧವನ್ನು ಪ್ರೋತ್ಸಾಹಿಸಲಿಕ್ಕಾಗಿ ಹೀಗೆ ರಾಷ್ಟ್ರಮಟ್ಟದ ಪ್ರಶಸ್ತಿ ಸ್ಥಾಪಿಸಲಾಗಿದೆ.

ಕೇವಲ ಪ್ರಶಸ್ತಿ ನೀಡುವುದರಲ್ಲೇ ಇತಿಶ್ರೀ ಹಾಡುವುದು ಈ ಸಂಘಕ್ಕೂ ಇಚ್ಛೆ ಇಲ್ಲವೇನೋ. ಹೆಸರಾಂತ ಖಾಸಗಿ ಕಂಪನಿಯೊಂದರ ಸಹಾಯ ಕೋರಿ ಒಂದು ವ್ಯಾನ್‌ನ್ನು ದಾನವಾಗಿ ಪಡೆದು ಅದರಲ್ಲಿ ಹಳ್ಳಿಗಳಿಗೆ ಹೋಗಿ ಗ್ರಾಮೀಣ ಮಹಿಳೆಯರ ಕಷ್ಟ ಪರಿಹರಿಸಿ ಆತ್ಮ ವಿಶ್ವಾಸ ತುಂಬಿಸುವ ಯೋಜನೆಯನ್ನು ಹಾಕಲಾಗಿದೆ. ಮಹಿಳೆಗೆ ವೃತ್ತಿಗೆ ಸಂಬಂಧಿಸಿದಂತೆ ಮತ್ತು ವೈಯಕ್ತಿಕ ಸ್ತರದಲ್ಲೂ ಉಚಿತ ಸಲಹಾ ಕಾರ್ಯಕ್ರಮಗಳಿವೆ. "ಕೇವಲ ಚರ್ಚೆ ಸಮಾರಂಭಗಳನ್ನು ಮಾಡಿ ಹೆಚ್ಚು ಮಾತನಾಡುವುದು, ಕಡಿಮೆ ಸೇವೆ ಎಂಬುದು ನನಗಿಷ್ಟವಿಲ್ಲ. ಪ್ರೋತ್ಸಾಹಿಸುವ ನಾಯಕಿಯಾಗಲು ನನಗಿಷ್ಟ" ಎನ್ನುತ್ತಾರೆ ಛಾಯ.

ಹೀಗೆ ವಿಚಾರಗಳು ಹಲವಾರಿವೆ. ಸಮಾಜ ಸೇವೆ ಮಾಡಲು ಯಾವುದೇ ಕಮಿಟಿಯ ನಿರ್ಧಾರಕ್ಕೆ ಕಾಯುವ ಅವಶ್ಯಕತೆಯಿಲ್ಲ. ಛಾಯ ಅವರ ಮೆದುಳಿಗೆ ಹೊಳೆದ ಈ ಅಣಿಮುತ್ತುಗಳನ್ನು ಕೂಡಲೇ ಕಾರ್ಯರೂಪಕ್ಕೆ ಇಳಿಸಲಾಗುತ್ತದೆ. ಇವು ಕತ್ತಲಲ್ಲಿ ದಾರಿ ಹುಡುಕುವವರಿಗೆ ಮಿನುಗು ತಾರೆಗಳಾಗಿವೆ ಎಂದರೆ ತಪ್ಪಾಗಲಾರದು. ●



ಯಶಸ್ಸಿನ ಬೆನ್ನೇರಿದ ಚರ್ಮ ಉದ್ಯಮಿ **ಶಕುಂತಲಾ ಭಟ್**

ಇಂದಿನ ಆಧುನಿಕ ಯುಗದಲ್ಲಿ ಮಹಿಳೆ ಬರೀ ನಾಲ್ಕು ಗೋಡೆಗಳ ನಡುವೆ ಮಾತ್ರ ಬದುಕಲು ಅರ್ಹಳು ಎಂಬ ಮಾತು ಸಿನಿಕತನದ ಪರಮಾವಧಿಯಾಗುತ್ತದೆ. ಮಹಿಳೆಯರು ಇಂದು ತಮ್ಮ ಸುತ್ತಲಿನ ಪುರಾತನ ಕವಚದಿಂದ ಹೊರಬಂದು ಉನ್ನತ ಆಶೋತ್ತರ, ಧ್ಯೇಯಗಳೊಂದಿಗೆ ಸಮಾಜದ ವಿವಿಧ ಹುದ್ದೆಗಳನ್ನು ಅಲಂಕರಿಸಿಕೊಂಡು ಮಂಚೂಣಿಯಲ್ಲಿದ್ದಾರೆ. ಜೀವನವೆಂದರೆ ಬರೀ ಗಂಡ, ಮನೆ, ಮಕ್ಕಳು ಅನ್ನುವುದಕ್ಕೆ ಮಾತ್ರ ತಮ್ಮ ಬದುಕನ್ನು ಸೀಮಿತಗೊಳಿಸದೆ ಈ ಪುರುಷ ಪ್ರಧಾನ ಸಮಾಜದಲ್ಲಿ ಸಾಧನೆಗೈದ ನಾರಿಯರು ಈಗ ನಮ್ಮಲ್ಲಿ ಕಾಣ ಸಿಗುತ್ತಿದ್ದಾರೆ.

ಅವರಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಚರ್ಮ ಉದ್ಯಮಿ ಶ್ರೀಮತಿ ಶಕುಂತಲಾ ಕೆ. ಭಟ್ ಅವರನ್ನು ಹೆಸರಿಸಬಹುದು. ಲವಲವಿಕೆಯಿಂದ ಕೂಡಿದ ಉತ್ಸಾಹಶೀಲೆ. ಮಾತಿನಲ್ಲಿ ದೃಢತೆ, ಆತ್ಮ ವಿಶ್ವಾಸವನ್ನು ಹೊರ ಸೂಸುವ ಶಕುಂತಲಾ ಅವರನ್ನು ಭೇಟಿ ಮಾಡಿದ ಮೊದಲ ಸಲವೇ ಅವರ ಬಗ್ಗೆ ಮೆಚ್ಚುಗೆ ಮೂಡುತ್ತದೆ.

ಮೂಲತಃ ಮಂಗಳೂರಿನವರಾದ ಇವರಿಗೆ ತಮ್ಮ ಜೀವನದಲ್ಲಿ ಏನಾದರೊಂದು ಮಹತ್ತರವಾದುದನ್ನು ಸಾಧಿಸಬೇಕೆಂಬ ಹಂಬಲ ಕಾಡುತ್ತಿತ್ತು. ಈ ಉತ್ಕಟ ಅಭೀಪ್ಸೆಯ ಕೂಸೇ ಈಗ ಹಳೆಯ ಮದ್ರಾಸ್ ರಸ್ತೆಯಲ್ಲಿರುವ ವಿವಿಧ ಚರ್ಮದ ವಸ್ತುಗಳನ್ನು ತಯಾರಿಸುವ ಅವರ 'ವಿಭವ ಲೆದರ್ಸ್' ಸಂಸ್ಥೆ.

ಪತಿ ಪಿ.ಕೆ. ಭಟ್ ಅವರು ರಕ್ಷಣಾ ಇಲಾಖೆಯಲ್ಲಿ ಹಿರಿಯ ವಿಜ್ಞಾನಿಯಾಗಿರುವುದರಿಂದ ಶಕುಂತಲಾ ಅವರಿಗೆ ಭಾರತದ ವಿವಿಧ ಜನರೊಂದಿಗೆ ಬೆರೆಯುವ ಅವಕಾಶ ಸಿಕ್ಕಿತ್ತು. ಹಾಗೆಯೆ ಸಂಪರ್ಕವೂ ಬೆಳೆದಿತ್ತು. ಇದು ಅವರ ವ್ಯಕ್ತಿತ್ವದೊಳಗಿನ ಉದ್ಯಮಶೀಲತೆಯನ್ನು ಹೊರತರಲು ಅನುಕೂಲಕರ ವಾತಾವರಣವನ್ನು ನಿರ್ಮಿಸಿತ್ತು.

ಬೆಂಗಳೂರಿಗೆ ಬಂದು ಸುಮಾರು ಎಂಟು ವರ್ಷಗಳಷ್ಟೇ ಆಗಿದ್ದರೂ ಅವರ ಸಂಪರ್ಕ ಜಾಲ ವಿಸ್ತಾರವಾಗಿದೆ. ಮೊದಲೆರಡು ವರ್ಷಗಳಲ್ಲಿ ಮಹಿಳೆಯರಿಗೆ ತಮ್ಮ ಮನೆಯಲ್ಲೇ ಚಿತ್ರಕಲೆ, ಉಬ್ಬು-ಚಿತ್ರ ರಚನೆ ಮುಂತಾದವನ್ನು ಕಲಿಸುತ್ತಿದ್ದರು. ಈ ಕಲೆ ದಕ್ಷಿಣ ಕನ್ನಡ ಜಿಲ್ಲೆಯ ದಿನಪತ್ರಿಕೆಗಳಲ್ಲಿ ಪ್ರಖ್ಯಾತ ವ್ಯಂಗ್ಯ ಚಿತ್ರಕಾರರಾಗಿರುವ ತಮ್ಮ ತಂದೆ 'ಶಿಂಗಣ್ಣ' ಅವರಿಂದ ಬಂದ ಬಳವಳಿಯಾಗಿತ್ತು. ಆದರೆ ಈ ಕಲಾಪ್ರಯೋಗದಿಂದ ಚರ್ಮದ ವಸ್ತುಗಳ ತಯಾರಿಕೆಯ ಉದ್ದಿಮೆಗೆ ಧುಮುಕಲು ಮುಖ್ಯ ಕಾರಣ ಅವರಲ್ಲಿದ್ದ ಹಂಬಲ. 'ನನ್ನಿಂದ ನಾಲ್ಕಾರು ಜನರಿಗೆ ಜೀವನೋಪಾಯ ಒದಗಿಸಿ ಕೊಡಬೇಕೆಂಬ ಉದ್ದೇಶ' ಎಂದು ವಿನಮ್ರವಾಗಿ ನುಡಿಯುತ್ತಾರೆ ಎರಡು ಮಕ್ಕಳ ತಾಯಾಗಿರುವ ಶಕುಂತಲಾ ಅವರು.

ಮಹಿಳೆಯರು ತಮ್ಮ ಕೌಶಲ್ಯವನ್ನು ಬರೀ ಅಡಿಗೆ ಮನೆಯಲ್ಲಿ ಮಾತ್ರ ತೋರಿಸದೆ ಸಮಾಜದ ಮುಖ್ಯ ವಾಹಿನಿಯಲ್ಲಿ ತಮ್ಮದೂ ಒಂದು ಪಾತ್ರವಿದೆ ಎಂದು ತಿಳಿಸಲು ಸಣ್ಣ ಕೈಗಾರಿಕೋದ್ಯಮ ಒಂದು ವರವಾಗಿದೆ. ಅಂತೆಯೇ ಅಂದೊಂದು ದಿನ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತೊಂದು ಅವರ ಗಮನ ಸೆಳೆದಿತ್ತು. 'ಟೆಕ್ಸಾಕ್' ಎಂಬ ಸಂಸ್ಥೆ ನಲವತ್ತೈದು ದಿನಗಳವರೆಗೆ ಮಹಿಳೆಯರಿಗೆ ವಿವಿಧ ವಸ್ತುಗಳ ತಯಾರಿಕೆಯಲ್ಲಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದ್ದರು. ಅದಕ್ಕೆ ಅರ್ಜಿ ಹಾಕಿದೊಡನೆಯೆ ಶಕುಂತಲಾ ಅವರ ಅದೃಷ್ಟ ಖುಲಾಯಿಸಿತ್ತು. ಅಲ್ಲಿ ಪಡೆದ ತರಬೇತಿಯಿಂದಾಗಿ ಮಹಿಳಾ ಉದ್ಯಮಿಗಳಿಗಿರುವ ಸೌಕರ್ಯ, ಉದ್ಯಮ ನಡೆಸಬೇಕಾದ ರೀತಿ, ವಿಧಾನ, ಮಾರುಕಟ್ಟೆ ಇತ್ಯಾದಿಗಳ ಪರಿಚಯವಾಗಿತ್ತು. ಚರ್ಮದ ವಸ್ತುಗಳಿಗೆ ಬೇಡಿಕೆ ಇರುವ ವಿಷಯ ತಿಳಿದಿದ್ದೇ ತಡ ಆ ಉದ್ದಿಮೆಯನ್ನು ನಡೆಸಲು ತೀರ್ಮಾನಿಸಿದರು.

ಉದ್ಯಮ ಶುರು ಮಾಡುವ ಮುನ್ನ ಅವರಿಗೆ ವಿದೇಶಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡಿದ ಅನುಭವವಿದ್ದುದರಿಂದ ವಿದೇಶಕ್ಕೆ ವಸ್ತುಗಳನ್ನು ರಫ್ತು ಮಾಡುವ ಕಾರ್ಯ ವಿಧಾನ, ಸಂಪರ್ಕಗಳ ಜ್ಞಾನ ಉಪಯೋಗಕ್ಕೆ ಬಂತು.

'ವಿಭವಾ ಲೆದರ್ಸ್'ನ್ನು ಪ್ರಾರಂಭಿಸಿದ ಸ್ವಲ್ಪ ದಿನಗಳಲ್ಲೇ ಅವರಿಗೆ ಬೇಡಿಕೆಗಳು ಬರತೊಡಗಿದ್ದವು. ಆ ಬೇಡಿಕೆಗಳನ್ನು ಪೂರೈಸಿದ ಕೂಡಲೆ ಬಂದ ಹಣವನ್ನೇ ಮತ್ತೆ ಬಂಡವಾಳವನ್ನಾಗಿ ಉಪಯೋಗಿಸತೊಡಗಿದ್ದರು. ಇದರಿಂದಾಗಿ ಬಂಡವಾಳಕ್ಕೇನೂ ತೊಂದರೆಯಾಗಿರಲಿಲ್ಲ. ಈ ಸಂಸ್ಥೆ ತಯಾರಿಸಿದ ವಸ್ತುಗಳ ಗುಣಮಟ್ಟವನ್ನು ನೋಡಿಯೇ ಕೆಲವು ವಾಣಿಜ್ಯ ಸಂಸ್ಥೆಗಳು, ಕೆ. ಎಸ್. ಎಫ್. ಸಿ. ಮತ್ತು ಇತರ ಬ್ಯಾಂಕುಗಳು ಆರ್ಥಿಕ ಸಹಾಯ ಒದಗಿಸಲು ಮುಂದೆ ಬಂದಿದ್ದು ಇವರ ವಸ್ತುಗಳ ಗುಣಮಟ್ಟಕ್ಕೊಂದು ಪುಕ್ಕವಿಟ್ಟಂತಾಗಿತ್ತು.

ಅರಸಿ ಬಂದ ಬೇಡಿಕೆಗಳನ್ನು ಪೂರೈಸಲು ಈಗಿರುವ ಜಾಗ ಸಾಲದಾಗಿ ಇನ್ನೊಂದು ಫ್ಯಾಕ್ಟರಿಯನ್ನೂ ಲೀಸ್‌ನಲ್ಲಿ ತೆಗೆದುಕೊಂಡು ಅಲ್ಲೂ ಕೆಲಸ ನಡೆಸಬೇಕಾಗಿ ಬಂದಿದೆ. ಪ್ರಸ್ತುತ ಪರ್ಸ್,

ಬೆಲ್ಟ್, ಕೈಚೀಲಗಳ ತಯಾರಿಕೆಗೆ ಸೀಮಿತವಾಗಿರುವ ತಮ್ಮ ಉದ್ಯಮವನ್ನು ಇನ್ನೂ ವಿಸ್ತರಿಸಬೇಕೆಂಬ ಯೋಜನೆಗಳಿವೆ.

ವಿಶ್ವಯೋಜನೆಯಡಿಯಲ್ಲಿ ಮಾರಾಟ ಮಾಡಲೂ ಸಹ ಅವರಿಗೆ ಅನುಮತಿ ಸಿಕ್ಕಿದೆ. ಈಗ ಐರೋಪ್ಯ ರಾಷ್ಟ್ರಗಳಲ್ಲದೆ ಕೊಲ್ಲಿ ದೇಶಗಳಿಂದಲೂ ಅವರು ತಯಾರಿಸಿದ ವಸ್ತುಗಳಿಗೆ ಬೇಡಿಕೆ ಬರತೊಡಗಿರುವುದು ಹೆಮ್ಮೆಯ ವಿಷಯವಾಗಿದೆ. ಈ ಸಣ್ಣ ಕೈಗಾರಿಕೋದ್ಯಮವನ್ನು ಸ್ಥಾಪಿಸಿದ ಅಲ್ಪ ಸಮಯದಲ್ಲೇ ವಿದೇಶಕ್ಕೂ ರಫ್ತು ಮಾಡುವಷ್ಟರ ಮಟ್ಟಿಗೆ ಬಂದಿದ್ದು ಶ್ಲಾಘನೀಯ ಕಾರ್ಯವಾಗಿದೆ. ಇದಕ್ಕೆ ಕಾರಣಗಳು ಹಲವಾರು:

ಇದಕ್ಕೆ ತಮ್ಮ ಪತಿಯಿಂದ ದೊರೆತ ನೆರವು, ಪ್ರೋತ್ಸಾಹವನ್ನು ಅಪಾರವಾಗಿ ನೆನಸಿಕೊಳ್ಳುತ್ತಾರೆ. ಅವರ ಸಹಾಯವಿರದಿದ್ದರೆ ತಾನು ಈ ಹಂತ ತಲುಪುತ್ತಿರಲಿಲ್ಲವೇನೋ. ಅವರೇ ಮೊದಲು ಈ ಉದ್ಯಮ ಪ್ರಾರಂಭಿಸಲು ಬಂಡವಾಳವನ್ನು ನೀಡಿದ್ದು ಎಂದು ಹೇಳುವಾಗ ಅವರ ಕಣ್ಣುಗಳು ಹೊಳೆಯುತ್ತವೆ. ಕೆಲಸಗಾರರನ್ನು ತಮ್ಮ ಮನೆಯವರಂತೆಯೆ ಕಾಣಬೇಕಂಬ ಸಹೃದಯತೆ ಇಲ್ಲಿ ಬಹಳ ಮುಖ್ಯ ಪಾತ್ರ ನಿರ್ವಹಿಸಿತ್ತು. ಅದಕ್ಕಾಗಿ ಕೆಲಸಗಾರರಿಗೆ ವೈದ್ಯಕೀಯ, ಬಸ್ ಸೌಲಭ್ಯ ಇತ್ಯಾದಿ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ಇದರಿಂದಾಗಿ ಕೆಲಸಗಾರರ ವಿಧೇಯತೆಯನ್ನು ಗಳಿಸಲು ಸಾಧ್ಯವಾಗಿದೆ. ಈ ಯಶಸ್ಸಿನ ಹಿಂದೆ ಇನ್ನೂ ಹಲವಾರು ಸೂತ್ರಗಳಿವೆ. 'ಸತತ ಪರಿಶ್ರಮ, ಶ್ರದ್ಧೆ, ಇಟ್ಟ ಗುರಿಯನ್ನು ತಲುಪಬೇಕೆಂಬ ಛಲ ಮತ್ತು ಎಲ್ಲಾ ಕಡೆಯಿಂದ ಪ್ರೋತ್ಸಾಹ. ಈ ಎಲ್ಲಾ ಮೂಲ ಕಚ್ಚಾ ವಸ್ತು'ಗಳಿದ್ದರೆ ಉನ್ನತ ವಿದ್ಯಾರ್ಹತೆ ಇರಬೇಕೆಂಬ ಅಗತ್ಯವಿಲ್ಲ' ಎನ್ನುತ್ತಾರೆ. ಬಿ.ಎ. ಪದವೀಧರೆಯಾಗಿರುವ ಶಕುಂತಲಾ ಅವರು. ಅವರ ನಡೆ, ನುಡಿ, ವ್ಯಕ್ತಿತ್ವ ಅವರ ಇಂದಿನ ಯಶಸ್ಸಿಗೆ ಪ್ಲಸ್ ಪಾಯಿಂಟ್ ಆಗಿರಬಹುದೆಂದೂ ಅನ್ನಿಸದಿರದು. ಅವರ ಈ ಸಾಧನೆ ಉನ್ನತಿಯನ್ನರಸುವ ಇನ್ನಿತರ ಮಹಿಳೆಯರಿಗೆ ಸ್ಫೂರ್ತಿದಾಯಕವಾಗಿದೆ.

ವಿಳಾಸ:
ಶಕುಂತಲಾ ಕೆ. ಭಟ್
ಡಿ. ೧೪/೧೧, ಡಿ. ಆರ್. ಡಿ. ಓ. ಟೌನ್ ಷಿಪ್,
ಸಿ.ವಿ. ರಾಮನ್‌ನಗರ,
ಬೆಂಗಳೂರು - ೯೩.



ಉಡುಪು ಉತ್ಪಾದಕಿ ಉಷಾ ವೆಂಕಟೇಶ್ವರನ್

ಒಮ್ಮೆ ಗ್ರಾಹಕರನ್ನು ಕಳೆದುಕೊಂಡರೆ ಕಡೆಯವರೆಗೂ ಅವರನ್ನು ಕಳೆದುಕೊಂಡಂತೆಯೇ ಎನ್ನಲಾಗುತ್ತದೆ. ಅಂಥದ್ದರಲ್ಲಿ ಗುಣಮಟ್ಟವನ್ನು ಕಾಪಾಡಿಕೊಂಡು ಗ್ರಾಹಕರ ಇಷ್ಟಾಗಳಿಗನುಗುಣವಾಗಿ ವಸ್ತ್ರಗಳನ್ನು ತಯಾರಿಸಿ ಯಶಸ್ವಿಯಾಗಿ ವ್ಯಾಪಾರ ನಡೆಸುವುದೂ ಒಂದು ಕಲೆ. ಈ ಕಲೆಯಲ್ಲಿ ಸ್ವಂತ ಅನುಭವ, ಪರಿಣತಿ, ತಾಂತ್ರಿಕ ಜ್ಞಾನ, ಮಾತುಗಾರಿಕೆ ಪ್ರಮುಖ ಪಾತ್ರ ವಹಿಸುತ್ತವೆ. ''ಮೊದಲು ತಮ್ಮ ಆತ್ಮವಿಶ್ವಾಸವನ್ನು ಧೃತಿಗೆಡಿಸುತ್ತಾ ತಾಳ್ಮೆಯನ್ನು ಪರೀಕ್ಷಿಸಿದ ಈ ಕ್ಷೇತ್ರ ಈಗ ಕೈಗೆಟುಕಿದೆ''. ಎನ್ನುತ್ತಾರೆ ಬೆಂಗಳೂರಿನ ರೋಟರಿ ಸಂಸ್ಥೆಯ ಅಂಗ ಸಂಸ್ಥೆಯಾದ 'ಇನ್ನರ್ ವೀಲ್' ಪಶ್ಚಿಮದಿಂದ ೧೯೯೭ರ ಅತ್ಯುತ್ತಮ ಮಹಿಳಾ ಉದ್ಯಮಿ ಪ್ರಶಸ್ತಿ ಗಳಿಸಿರುವ ಉಷಾ ವೆಂಕಟೇಶ್ವರನ್ ಅವರು.

ವಸ್ತ್ರಗಳ ತಯಾರಿಕೆಗೆ ಕೈಹಾಕಿ ಈಗ ಯಶಸ್ವಿಯಾಗಿ 'ಸುರದ್ ಕ್ರಿಯೇಷನ್ಸ್' ಎಂಬ ಸಂಸ್ಥೆಯನ್ನು ನಡೆಸುತ್ತಿರುವ ಉಷಾ ಅವರಿಗೀಗ ನಲವತ್ತೆರಡರ ಮಧ್ಯ ವಯಸ್ಸು. ಆದರೂ ದೈಹಿಕ ತ್ರಾಸನ್ನು ಮರೆತು ದಿನವಿಡೀ ಲವಲವಿಕೆಯಿಂದ ಓಡಾಡುತ್ತಾ ದಿನಕ್ಕೆ ಸುಮಾರು 20-25 ಉಡುಪುಗಳನ್ನು ಮಾರಾಟಮಾಡಬಲ್ಲವರಾಗಿದ್ದಾರೆ.

ಮೊದ ಮೊದಲು 'ಉದ್ಯಮಿಗಳ ಲರ್ನಿಂಗ್ ನೆಟ್‌ವರ್ಕ್ ಕಾರ್ಯಕ್ರಮ'ದಡಿ ಈ ವ್ಯಾಪಾರದ ಬಗ್ಗೆ ತಿಳಿದು ಸಂಸ್ಥೆ ಶುರು ಮಾಡಿದಾಗ ಮಾರುಕಟ್ಟೆಯದೇ ದೊಡ್ಡ ಸಮಸ್ಯೆಯಾಗಿ ಕಾಡಿತ್ತು. ತಮ್ಮ ಗೆಳತಿ ಸುವಾಸಿನಿ ರಾವ್ ಅವರೊಂದಿಗೆ ಜಂಟಿಯಾಗಿ ಈ ಸಂಸ್ಥೆಯನ್ನು ತೆರೆದಿದ್ದರು. ಇಬ್ಬರೂ ತಲಾ ಹದಿನೈದು ಸಾವಿರ ರೂಪಾಯಿ ಬಂಡವಾಳ ಹೂಡಿ ಪ್ರಾರಂಭಿಕ ಅಗತ್ಯಗಳನ್ನು ಖರೀದಿಸಿದ್ದರು. ಎರಡು ಹೊಲಿಯುವ ಯಂತ್ರ ಹಾಗೂ ಇಬ್ಬರು ಕೆಲಸಗಾರರೊಂದಿಗೆ ಈ ಸಂಸ್ಥೆ ಉಷಾ ಅವರ ಮನೆಯ ಮಹಡಿಯಲ್ಲಿ ಪ್ರಾರಂಭವಾಗಿತ್ತು.

ಉಡುಪುಗಳು ತಯಾರಾದರೂ ಖರೀದಿಸುವವರಿಂದ ಒಂದಿಲ್ಲೊಂದು ತಕರಾರು. ಗುಣಮಟ್ಟದ ಬಗ್ಗೆ ದೂರುಗಳು ಬೇರೆ. ಆಗ ಸ್ಥಳೀಯ ಅಂಗಡಿಯೊಂದು ಧೈರ್ಯ ತೋರಿ ಮೊದಲು ಹನ್ನೆರಡು ಮಹಿಳೆಯರ ರಾತ್ರಿ ಉಡುಪು (ನೈಟಿ)ಗಳನ್ನು ಖರೀದಿಸಿತ್ತು. ಅದು ಒಂದು ವಾರದಲ್ಲೇ ಮಾರಾಟವಾಗಿ ಅವರ ವ್ಯಾಪಾರಕ್ಕೊಂದು ಬ್ರೇಕ್ ಸಿಕ್ಕಿತ್ತು. ಹಾಗೆಯೇ ಸ್ಥಳೀಯ ಅಂಗಡಿಗಳು, ಮನೆಗಳು ಇವರಿಂದಲೇ ಉಡುಪುಗಳನ್ನು ಖಾಯಂ ಆಗಿ ಖರೀದಿಸುವವರಾಗಿದ್ದಾರೆ. ಒಂದು ವರ್ಷ ಮಾರುಕಟ್ಟೆಯನ್ನು ಉತ್ತಮ ಪಡಸಿಕೊಳ್ಳಲು ಶ್ರಮಿಸಿದ್ದು ಈಗ ವ್ಯಾಪಾರದ ವರಮಾನ ತಿಂಗಳಿಗೆ ೩೦-೪೦ ಸಾವಿರ ರೂಪಾಯಿ ತಲುಪಿದ್ದು ಸಂಸ್ಥೆಯ ಯಶಸ್ಸಿನ ಸಂಕೇತವಾಗಿದೆ.

ಅಸಹಾಯಕ ಮಹಿಳೆಯರಿಗೊಂದು ಆಧಾರವಾಗಿರಲೆಂದು ಉಷಾ ಅವರು ತಮ್ಮ ಹೊಲಿಗೆ ಕೆಲಸಕ್ಕೆ ಅವರುಗಳನ್ನು ನೇಮಿಸುವಲ್ಲಿ ಒಲವು ತೋರಿರುವುದು ಕಂಡು ಬರುತ್ತದೆ. ಹೀಗೆ ಅಂಗವಿಕಲ, ಬುದ್ಧಿಮಾಂದ್ಯ ಹಾಗೂ ವಿಧವೆಯರೂ ತಮ್ಮ ಸ್ವಂತ ಕಾಲ ಮೇಲೆ ನಿಲ್ಲುವಂತಾಗಿದೆ. ಕೆಲಸಗಾರರನ್ನು ತಮ್ಮ ಮನೆಮಂದಿಯಂತೆ ನಡೆಸಿಕೊಳ್ಳುವಂತೆಯೇ ಅವರೂ ಸಹ ಉಷಾ ಅವರ ಅಗತ್ಯಗಳಿಗನುಸಾರವಾಗಿ ಉಡುಪುಗಳನ್ನು ಹೊಲಿಯುವಲ್ಲಿ ಸಿದ್ಧಹಸ್ತರು.

ಎಂಟು ಜನ ಕೆಲಸಗಾರರಲ್ಲಿ ಇಬ್ಬರಿಗೆ ತಿಂಗಳಿಗೆ ಸಂಬಳ ನಿಗದಿಯಾಗಿದ್ದರೆ, ಮಿಕ್ಕವರಿಗೆ ಪೀಸ್ ವರ್ಕ್ ಪ್ರಕಾರ ಸಂಬಳ. ಅಂದರೆ ಒಂದು ಉಡುಪು ಹೊಲಿದಂತೆ ದುಡ್ಡನ್ನು ಲೆಕ್ಕ ಹಾಕಿ ನೀಡಲಾಗುವುದು. ಇದರಿಂದ ಅಧಿಕ ಉಡುಪುಗಳನ್ನು ಹೊಲಿದರೆ ಜಾಸ್ತಿ ದುಡ್ಡು ಸಿಗುವುದೆಂಬ ಆಸೆಯಿಂದ ಬೇಗನೆ ಕೆಲಸವಾಗುತ್ತದೆ ಎಂಬ ಅಂದಾಜು.

ಇಲ್ಲಿ ಮಹಿಳೆಯರು ಹಾಗೂ ಮಕ್ಕಳ ನೈಟಿ ಮತ್ತು ಹುಡುಗರ ಶರ್ಟ್‌ಗಳನ್ನು ಹೊಲಿಯುವುದಕ್ಕಷ್ಟೇ ಸೀಮಿತಗೊಳಿಸಲಾಗಿದ್ದು ಅದನ್ನು

ಸುಲಭವಾಗಿ ಹೊಲಿಯಬಹುದೆಂಬುದೇ ಕಾರಣವಾಗಿದೆ. ಚೂಡಿದಾರ್‌ಗಳಾದರೆ ವಿವಿಧ ಮಾದರಿಗಳು ಮತ್ತು ಬದಲಾಗುತ್ತಿರುವ ಫ್ಯಾಶನ್‌ಗೆ ತಕ್ಕಂತೆ ಬದಲಾವಣೆಗಳನ್ನು ಮಾಡಿ ಹೊಲಿಯುವುದು ಸೇರಿ ಹೆಚ್ಚು ಶ್ರಮದಾಯಕ. ಹಾಗೆಯೇ ಟಿ-ಶರ್ಟ್, ಬನಿಯನ್‌ಗಳನ್ನು ಹೊಲಿಯಬೇಕೆಂದರೆ ಅದನ್ನು ಹೊಲಿಯಲಿಕ್ಕೆ ಬೇಕಾದ ಹೊಲಿಗೆ ಯಂತ್ರ ತೀರಾ ದುಬಾರಿ. ಒಂದನ್ನು ಖರೀದಿಸಬೇಕಾದರೆ ಸುಮಾರು ೪-೫ ಸಾವಿರ ರೂಪಾಯಿ ಖರ್ಚು ಬೀಳುತ್ತದೆ. ಆದರೆ ಸಾಧಾರಣ ಬಟ್ಟೆಗಳ ಹೊಲಿಗೆ ಯಂತ್ರ ದುಬಾರಿಯಾಗಿಲ್ಲದೆ ಕಡಿಮೆ ಬಂಡವಾಳದಿಂದ ಶುರು ಮಾಡುವವರಿಗೆ ಮೊದಲ ಆದ್ಯತೆಯಾಗುತ್ತದೆ.

ಉಷಾ ಅವರು ತಮ್ಮ ಸಂಸ್ಥೆ ಹಾಗು ವ್ಯಾಪಾರ ವಹಿವಾಟಿನ ಬಗ್ಗೆ ಅನುಭವವನ್ನು ಹಂಚಿಕೊಳ್ಳುತ್ತಿರುವಾಗಲೇ ವಿಜಯನಗರದಲ್ಲಿನ ಅವರ ಸಂಸ್ಥೆಗೆ ಹಲವಾರು ಮಂದಿ ಭೇಟಿ ನೀಡುತ್ತಾ ಅಲ್ಲೇ ಹ್ಯಾಂಗರ್‌ನಲ್ಲಿ ನೇತು ಹಾಕಿದ್ದ ನೈಟಿಗಳನ್ನು ನೋಡುತ್ತಾ ಕೊಂಡು ಹೋಗುತ್ತಿರುವುದು ಕಾಣುತ್ತದೆ. ಉಷಾ ನಡು ನಡುವೆ ಎದ್ದು ಬಟ್ಟೆಗಳ ಬಗ್ಗೆ ವಿವರಿಸುತ್ತಾ ಗ್ರಾಹಕರಿಗಿನ್ನೂ ಇಷ್ಟವಾಗದಿದ್ದರೆ ಮತ್ತೊಂದು ಕೋಣೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಅಂಗಡಿಯಿಂದ ಕೊಂಡಿದ್ದ ವಿವಿಧ ಬಟ್ಟೆಗಳನ್ನು ತೋರಿಸುತ್ತಾರೆ. ಗ್ರಾಹಕರು ಅದರಲ್ಲಿ ತಮಗಿಷ್ಟವಾದುದನ್ನು ಆಯ್ಕೆ ಮಾಡಿ ಪ್ಯಾಟರ್ನ್ ಪುಸ್ತಕದಲ್ಲಿ ಕಣ್ಣಾಡಿಸುವರು. ತಮಗೆ ಸೂಕ್ತವೆನಿಸಿದ ವಿನ್ಯಾಸದಲ್ಲಿ ಅದನ್ನು ಹೊಲಿಯಲು ಹೇಳಿ ತೆರಳುತ್ತಿದ್ದಂತೆ ಉಷಾ ಮತ್ತೆ ತಮ್ಮ ಸ್ಥಾನಕ್ಕೆ ಮರಳಿ ಮಾತಿನ ನಡುವೆ ಹೊರಟಿದ್ದಕ್ಕೆ ಕ್ಷಮೆಯಾಚಿಸಿ ಮುಂದುವರಿಯುತ್ತಾರೆ. 'ಸಾಧಾರಣವಾಗಿ ಇಲ್ಲಿ ನಾನು ಇಲ್ಲವೇ ನನ್ನ ಮಗಳಲ್ಲಿ ಯಾರಾದರೊಬ್ಬರು ಕೆಲಸವನ್ನು ನೋಡಿಕೊಳ್ಳಬೇಕಾಗುತ್ತೆ. ಇಬ್ಬರೂ ಒಟ್ಟಿಗೇ ಹೊರಗಡೆ ಹೋಗುವುದಿಲ್ಲ' ಎನ್ನುತ್ತಾ ತಮ್ಮ ಮನೆಮಂದಿಯಿಂದ ದೊರೆಯುವ ಪ್ರೋತ್ಸಾಹದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಹಾಗೆಯೇ ಅವೇಕ್ ಸಂಸ್ಥೆಯ ಕುರಿತೂ ಕೃತಜ್ಞತೆ ವ್ಯಕ್ತ ಪಡಿಸುತ್ತಾರೆ. ಅವೇಕ್‌ನ ಮಾಜಿ ಅಧ್ಯಕ್ಷೆ ವತ್ಸಲಾ ಇವರ ಗೆಳತಿಯಾದ್ದರಿಂದ ಸಂಸ್ಥೆಯ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಅದಕ್ಕೆ ಸೇರಿಕೊಳ್ಳಲು ಪ್ರೇರೇಪಿಸಿದ್ದರು. ಆ ಮೂಲಕ ಅವರಿಗೆ ಇತರೆಡೆ ನಡೆಯುವ ಪ್ರದರ್ಶನಗಳ ಬಗ್ಗೆ ಗೊತ್ತಾಗುತ್ತಿದ್ದು ತಮ್ಮ ವಸ್ತ್ರಗಳನ್ನು ಅಲ್ಲಿ ಪ್ರದರ್ಶಿಸಿದಾಗ ಉತ್ತಮ ಪ್ರತಿಕ್ರಿಯೆ ಕಂಡು ಬಂದಿತೆನ್ನುತ್ತಾರೆ.



ಮೊದಲು ತಮ್ಮ ಗೆಳತಿ ಸುವಾಸಿನಿರಾವ್ ಅವರೊಂದಿಗೆ ಈ ಸಂಸ್ಥೆಯನ್ನು ಪ್ರಾರಂಭಿಸಿದ್ದರೂ ನಡುವೆ ಅವರ ಪತಿಗೆ ಬೇರೆ ಊರಿಗೆ ವರ್ಗಾವಣೆಯಾದ್ದರಿಂದ ತಾವೂ ತೆರಳಬೇಕಾಗಿ ಈ ವ್ಯಾಪಾರ ನಡೆಸಬೇಕೆಂಬ ಹುಮ್ಮಸ್ಸು ನೆನೆಗುದಿಗೆ ಬಿದ್ದಿತ್ತು. ಈಗ ಉಷಾ ಮಾತ್ರ ಈ ಸಂಸ್ಥೆಯನ್ನು ನಡೆಸುತ್ತಿದ್ದರೂ ಹಿಂದಿಗಿಂತ ಅಧಿಕ ಸಂಪರ್ಕಗಳು ಇರುವುದರಿಂದ ಜನರು ಇಲ್ಲಿಗೇ ಬಂದು ಕೊಳ್ಳುವುದರಿಂದ ಸುಲಭವಾಗಿದೆ. ಅವೇಕ್‌ಗೆ ಸೇರಿದ ಮೇಲೆ ಬೆಲೆಯನ್ನು ನಿಗದಿಪಡಿಸುವ ಬಗ್ಗೆ, ಮಾರುಕಟ್ಟೆ ನೀತಿ, ನಿಯಮ, ಗುಣಮಟ್ಟದ ಮಾನದಂಡ ಇತ್ಯಾದಿ ಕುರಿತು ಅರಿವಾಗಿ ಅವರ ಇಡೀ ಉದ್ಯಮದ ಶೈಲಿಯನ್ನು ಬದಲಾಯಿಸಿತ್ತು. ಪ್ರಸ್ತುತ ಇವರು ಅವೇಕ್‌ನ ಪ್ರದರ್ಶನ ಸಮಿತಿಯ ಸದಸ್ಯೆಯಾಗಿದ್ದಾರೆ.

ತಮಗಾದರೋ ಸ್ವಂತ ಮನೆಯಲ್ಲಿ ಜಾಗವಿದ್ದುದರಿಂದ ಈ ವ್ಯಾಪಾರ ನಡೆಸಲು ಸುಲಭವಾಯಿತು. ಆದರೆ ಇತರರಿಗೆ ಕಷ್ಟವಾಗದೇ ಎಂದು ಕೇಳಿದಾಗ, ಉಷಾ, 'ಸ್ವಲ್ಪ ಮಟ್ಟಿಗೆ ಕಷ್ಟ. ಆದರೆ ಹಣಕಾಸಿನ ಬಗ್ಗೆ ಅವೇಕ್‌ನವರು ತಿಳಿಸಿಕೊಡುತ್ತಾರೆ. ತಾವು ನಡೆಸಲಿರುವ ವ್ಯಾಪಾರದ ಬಗ್ಗೆ ಪ್ರಾಥಮಿಕ ಅರಿವಾದರೂ ಇರಬೇಕು. ಆಗಲೇ ಕೆಲಸಗಾರರಿಗೆ ಹೇಳಿಕೊಡಲು ಸಾಧ್ಯವಾಗುತ್ತೆ. ಇಲ್ಲದಿದ್ದರೆ ಕೆಲಸಗಾರರು ಇದರ ದುರ್ಬಳಕೆ ಮಾಡಬಹುದು. ನಾನು ಈ ಸಂಸ್ಥೆ ಪ್ರಾರಂಭಿಸುವ ಮುನ್ನ ಹೊಲಿಗೆಯಲ್ಲಿ ಡಿಪ್ಲೋಮ ಮಾಡಿದ್ದು ಉಪಯೋಗಕ್ಕೆ ಬಂದಿದೆ' ಎಂದರು.

ಹಾಗೆಯೇ ವ್ಯಾಪಾರ ಯಶಸ್ವಿಯಾಗಲು ಒಂದು ಕಿವಿ ಮಾತನ್ನು ಹೇಳುತ್ತಾರೆ. 'ಅವೇಕ್ ಸಂಸ್ಥೆ ಮಾರುಕಟ್ಟೆಯ ವಿಷಯದಲ್ಲಿ ಸುಳಿವನ್ನು ನೀಡಿದರೂ ನಿಮ್ಮ ಸ್ವಂತ ಪರಿಶ್ರಮ ಬಹಳ ಅಗತ್ಯ. ಸ್ಥಳೀಯ ಸಂಪರ್ಕಗಳನ್ನು ಹೆಚ್ಚಿಸಿಕೊಂಡು ವ್ಯಾಪಾರವನ್ನು ವೃದ್ಧಿಸಬೇಕು' ಎನ್ನುತ್ತಾರೆ. ●



ಗಾಳಿ ಪಟ

ನಿನ್ನ ನೆನಪಿನ
ಬಿರುಗಾಳಿಯಲ್ಲಿ
ಸೂತ್ರ ಹರಿದ
ಗಾಳಿಪಟ
ನಾನು

-ಸಿದ್ಧರಾಜ ಸೊನ್ನದ

ಕರ್ನಾಟಕ ಉದ್ಯಮಶೀಲ ಮಹಿಳೆಯರ ಸಂಘ

ಗುರುವಾರದ ಒಂದು ಮಧ್ಯಾಹ್ನ. ಕೆಲವು ಮಹಿಳೆಯರು ಸಲಹಾ ಶಿಬಿರವೊಂದರಲ್ಲಿ ಭಾಗವಹಿಸಿ ತಾವು ಯಾವ ಕ್ಷೇತ್ರದಲ್ಲಿ ಮುಂದುವರಿಯಬಹುದೆಂಬುದರ ಬಗ್ಗೆ ಸ್ಥೂಲ ಮಾಹಿತಿ ಪಡೆಯುತ್ತಿರುವ ದೃಶ್ಯ ಕಾಣುತ್ತದೆ.

ಕಮಲ ಅವರಿಗೆ ಮನೆಯಲ್ಲಿ ಬಿಡುವಿದ್ದಾಗ ಏನಾದರೂ ಮಾಡಬೇಕೆಂಬ ಆಸೆ. ಆದರೆ ಏನು ಎಂಬುದರ ಬಗ್ಗೆ ಖಚಿತ ಅಭಿಪ್ರಾಯ ಮೂಡಿರುವುದಿಲ್ಲ. ಆಕೆ ಡಿಗ್ರಿ ಮಾಡಿದ ಬಳಿಕ ಮದುವೆಯಾಗಿ ಈಗ ಎರಡು ಮಕ್ಕಳ ತಾಯಿಯಾಗಿದ್ದಾಳೆ. ಈಗಿನ ಕಾಲದಲ್ಲಿ ಒಂದು ಒಳ್ಳೆಯ ಕೆಲಸ ಸಿಗುವುದು ಕಷ್ಟವಾಗಿರುವಾಗ ತಾನು ಏನು ಸಂಪಾದನೆ ಮಾಡಬಹುದೆಂಬ ಖಿನ್ನತೆ ಆಕೆಯಲ್ಲಿ ಮೂಡಿದೆ.

ಇನ್ನು ಪ್ರಮೀಳ ಮೂವತ್ತು ವರ್ಷದ ಅವಿವಾಹಿತೆ. ನಿರುದ್ಯೋಗಿ ಬೇರೆ. ಮನೆಯಲ್ಲಿ ಕಿತ್ತು ತಿನ್ನುವ ಏಕಾಂಗಿತನಕ್ಕೆ ರೋಸಿ ಹೋಗಿ ತನ್ನ ಜೀವನೋಪಾಯಕ್ಕಾಗಿ ಯಾವುದಾದರೊಂದು ಕೆಲಸಕ್ಕೆ ಸೇರಬೇಕೆಂಬ ಅಭಿಲಾಷೆ ಮೂಡಿದೆ.

ಹೀಗೆ ಒಬ್ಬೊಬ್ಬರೂ ಒಂದೊಂದು ಹಿನ್ನೆಲೆಯಿಂದ ಬಂದವರಾಗಿ ಒಂದೆಡೆ ಸೇರಿ ಪರಿಣತ ಮಹಿಳೆಯರಿಂದ ಸಲಹೆಯನ್ನು ಪಡೆಯುತ್ತಿದ್ದಾರೆ. ಹೊಸದಾಗಿ ಬಂದ ಮಹಿಳೆಯರು ತಮ್ಮ ಸೃಜನಶೀಲತೆ, ಆಸಕ್ತಿ, ಅನುಭವ ಮತ್ತು ಸಮಯದ ಬಗ್ಗೆ ಒಂದು ಖಚಿತ ನಿಲುವು ತಳೆದಾಗ ಅವರ ಅಭಿಲಾಷೆ ಕುರಿತು ಕೂಲಂಕಷವಾಗಿ ತಿಳಿದುಕೊಂಡ ನಂತರ ಆ ದಿಕ್ಕಿನಲ್ಲಿ ತರಬೇತಿಗೆ ಹಸಿರು ನಿಶಾನೆಯನ್ನು ತೋರಿಸಲಾಗುತ್ತದೆ.


ಹೀಗೆ ಅನೇಕ ಮಹಿಳೆಯರ ಜೀವನದಲ್ಲಿ ಆಶಾಕಿರಣವಾಗಿ ಮೂಡಿ ಅವರು ಆರ್ಥಿಕವಾಗಿ ಸ್ವಾವಲಂಬಿಯಾಗಲು ಅವಿರತವಾಗಿ ಶ್ರಮಿಸುತ್ತಿರುವ ಸಂಸ್ಥೆ ಕರ್ನಾಟಕ ಉದ್ಯಮಶೀಲ ಮಹಿಳೆಯರ ಸಂಘ (ಅವೇಕ್). ಇದನ್ನು ಒಂದೂವರೆ ದಶಕದ ಹಿಂದೆ ಶುರು ಮಾಡುವಾಗ ಇದನ್ನು ಸ್ಥಾಪಿಸಿದ ಅಧ್ಯಕ್ಷೆ ಮಧುರಾ ತ್ರಪತಿ ಮತ್ತು ಇನ್ನೂ ಆರು ಮಂದಿ ಮಹಿಳಾ ಸ್ಥಾಪಕಿಯರಿಗೆ ತಾವು ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಬಹುದಾದಂಥ ಸ್ವಯಂ ಸೇವಾ ಸಂಸ್ಥೆಗೆ ಹುಟ್ಟು ಹಾಕುತ್ತಿದ್ದೇವೆ ಎಂಬುದರ ಕಲ್ಪನೆಯೂ ಇರಲಿಲ್ಲವೇನೊ! ಸ್ಥಳೀಯ ರೋಟರಿ ಸಂಸ್ಥೆ ಈ ಮಹಿಳೆಯರಿಗೆ ಅವರ ಕ್ಷೇತ್ರದಲ್ಲಿನ ಕಾರ್ಯದಕ್ಷತೆಗಾಗಿ ಪ್ರಶಸ್ತಿ ನೀಡಿದಾಗ. ಹೀಗೆ ಇನ್ನಷ್ಟು ಮಹಿಳೆಯರು ತಮ್ಮ ಹಾಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸಬೇಕೆಂದು ಯೋಚಿಸಿ ಅವೇಕ್ ಸಂಸ್ಥೆಯನ್ನು ಶುರು ಮಾಡಿದ್ದರು. ವರ್ಷದಿಂದ ವರ್ಷಕ್ಕೆ ಬೆಳೆಯುತ್ತಾ ಈ ಸಂಸ್ಥೆ ಜಾಗೃತಿಯನ್ನು ಮೂಡಿಸಿ ಈಗ ಐನೂರಕ್ಕೂ ಹೆಚ್ಚು ಮಹಿಳೆಯರನ್ನು ಸದಸ್ಯರಾಗಿ ಹೊಂದಿದೆ. ಸದಸ್ಯರಾಗಲು ಇರುವ ಅರ್ಹತೆ ಒಂದೇ. ಅವರು ಸ್ವಂತ ಉದ್ಯಮವೊಂದನ್ನು ನಡೆಸುತ್ತಿರಬೇಕು. ಈ ಸಂಸ್ಥೆಯಿಂದ ತರಬೇತಿ ಪಡೆದವರೂ ಇಲ್ಲಿ ಸದಸ್ಯರಾಗಿದ್ದಾರೆ. ಎರಡು ವರ್ಷಕ್ಕೊಮ್ಮೆ ಬದಲಾಗುವ ಕಾರ್ಯಕಾರಿ ಸಮಿತಿ ಸಂಸ್ಥೆಯ ಯಶಸ್ಸಿಗೆ ನಾಂದಿ ಹಾಡಿದ್ದಾರೆ. ಪ್ರಸ್ತುತ ಬೆಂಗಳೂರಿನ ರಾಜಾಜಿನಗರ ಆರನೆಯ ಬ್ಲಾಕ್‌ನಲ್ಲಿ ತನ್ನ ಕೇಂದ್ರ ಕಛೇರಿಯನ್ನು ಹೊಂದಿದ್ದು ಇದರಲ್ಲಿ ಎಂಟು ಹತ್ತು ಮಂದಿ ಉದ್ಯೋಗಿಗಳನ್ನು ಪಡೆದಿದೆ.

೯೦ರ ಮುಂಚೆ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದ ಅವೇಕ್‌ನ ತರಬೇತಿ ಕಾರ್ಯಕ್ರಮಗಳು ಅನಂತರ ಮೈಸೂರು, ಬೀದರ್, ಮಂಡ್ಯ, ಗುಲ್ಬರ್ಗಾ, ಬಿಜಾಪುರ, ಉಡುಪಿ, ಬಾಗಲಕೋಟೆಗೂ ವಿಸ್ತರಿಸಲಾಗಿದೆ. ಬಿಜಾಪುರದಲ್ಲಿ ಕರ್ನಾಟಕ ಸರ್ಕಾರದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಮತ್ತು ಭಾರತ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ (SIDBI) ಇವುಗಳ ಸಂಯುಕ್ತ ಆಶ್ರಯದಲ್ಲಿ ಅವೇಕ್ ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮವನ್ನು ವಹಿಸಿಕೊಂಡಿರುವ ಏಕೈಕ ಸ್ವಯಂ ಸಂಸ್ಥೆ ಎಂಬ ಹೆಗ್ಗಳಿಕೆ ಪಡೆದಿದೆ. ಎರಡು ವರ್ಷಗಳಲ್ಲಿ ನೂರು ಕೈಗಾರಿಕೆಗಳನ್ನು ಪ್ರಾರಂಭಿಸಬೇಕೆಂದು ಗುರಿ ಹೊಂದಿದ್ದ ಈ ಸಂಸ್ಥೆ ಈಗ ಒಂದೂವರೆ ವರ್ಷಗಳಲ್ಲಿ ತೊಂಬತ್ತು ಕೈಗಾರಿಕೆಗಳಿಗೆ ನಾಂದಿ ಹಾಡಿರುವುದು ಇದರ ಯಶಸ್ಸಿಗೆ ಇನ್ನೊಂದು ಗರಿ ಮೂಡಿಸಿದೆ.

ಈಗ ಅಖಿಲ ಭಾರತ ಮಟ್ಟದಲ್ಲಿ ಶೇಕಡ ಎಂಟರಷ್ಟು ಮಂದಿ ಮಹಿಳಾ ಉದ್ಯಮಿಗಳಿರುವಾಗ ಇಂಥ ಸಂಸ್ಥೆಗಳು ನಗರ ಮತ್ತು ಗ್ರಾಮೀಣ ಮಹಿಳೆಯರಲ್ಲಿ ಭೇದ ಮಾಡದೆ, ಒಟ್ಟಾರೆಯಾಗಿ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ದೇಶದ ಆರ್ಥಿಕ ಅಭಿವೃದ್ಧಿಗೆ ಅವಳೂ ಕಾರಣ ಕರ್ತಳಾಗುವಂತೆ ಮಾಡುತ್ತಿರುವುದು ಸುತ್ತ್ಯಾರ್ಹ.

ತರಬೇತಿಯ ವಿವಿಧ ಹಂತಗಳು

ಮೊದಲು ನಡೆಯುವ ಸಲಹಾ ಶಿಬಿರದಲ್ಲಿ ಅಭ್ಯರ್ಥಿಗಳು ಇದನ್ನು ಗಂಭೀರವಾಗಿ



ಪರಿಗಣಿಸಿದ್ದಾರೆಯೇ ಎಂಬುದನ್ನು ಅವರ ಉತ್ಸುಕತೆಯಿಂದ ಕಂಡು ಹಿಡಿಯಲಾಗುವುದು. ಅನಂತರ ಅವರು ಕಸೂತಿ ಕೆಲಸ, ಕರಕುಶಲ ವಸ್ತು ತಯಾರಿಕೆ, ಆಹಾರ ಪದಾರ್ಥಗಳ ತಯಾರಿಕೆ ಅಥವಾ ಟೈಲರಿಂಗ್ ಮುಂತಾದ ಕ್ಷೇತ್ರಗಳಲ್ಲಿನ ಅವರ ಆಸಕ್ತಿ ಗಮನಿಸಿ ಆಯ್ಕೆಯ ಕ್ಷೇತ್ರದ ಬಗ್ಗೆ ತಿಳಿಸಲಾಗುತ್ತದೆ. ಬಳಿಕ ಒಂದು ದಿನದ ಜಾಗೃತಿ ಶಿಬಿರ ಏರ್ಪಡಿಸಲಾಗಿ ಆ ಮೂಲಕ ವ್ಯಾಪಾರದ ನಿಜ ಅರ್ಥ ಇತ್ಯಾದಿ ಬಗ್ಗೆ ಹೇಳಿಕೊಡಲಾಗುವುದು. ನೂರರಿಂದ ಮುನ್ನೂರು ಸದಸ್ಯರು ಭಾಗವಹಿಸುವ ಈ ಶಿಬಿರದಲ್ಲಿ ಪರಿಣತರು ತಮ್ಮ ಯಶಸ್ವಿ ಕತೆಗಳನ್ನು ಹೇಳಿ ಸದಸ್ಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದಿದೆ.

ಇದಕ್ಕೂ ಮುಂಚೆ ಒಂದು ಪ್ರಶ್ನೋತ್ತರವನ್ನು ಸಿದ್ಧಪಡಿಸಿ ಇದಕ್ಕೆ ಶಿಬಿರದ ಸದಸ್ಯರ ಪ್ರತಿಕ್ರಿಯೆಯನ್ನು ಗಮನಿಸಿ ಆಯ್ಕೆಯನ್ನು ಮಾಡಲಾಗುತ್ತದೆ. ಈ ಸಂದರ್ಶನದ ಮೂಲಕ ಮುಂದಿನ ವಿಸ್ತಾರ ತರಬೇತಿ ಕಾರ್ಯಕ್ರಮಕ್ಕೆ ೩೦-೩೫ ಸದಸ್ಯರು ಪ್ರವೇಶ ಪಡೆಯುವಂತಾಗುತ್ತದೆ. ಈ ಕಾರ್ಯಕ್ರಮವನ್ನು ಒಂದೂವರೆ ವಾರದಿಂದ ಆರು ವಾರಗಳವರೆಗೆ ನಡೆಸಿ ಸದಸ್ಯರ ಅನುಭವವನ್ನು ಹೊರಗೆಳೆಯಲಾಗುತ್ತದೆ.

ಆ ಸದಸ್ಯರು ತಮ್ಮ ಆಯ್ಕೆಯ ಕ್ಷೇತ್ರದಲ್ಲಿ ಉದ್ಯಮ ಸ್ಥಾಪಿಸಲು ಯಾವ ಸವಲತ್ತು ಬೇಕಾಗಬಹುದು, ಮಾರುಕಟ್ಟೆಯ ವ್ಯವಸ್ಥೆ, ಉದ್ಯಮ ಸ್ಥಾಪಿಸಲು ಪರವಾನಿಗಿ ಪಡೆಯುವ ಬಗೆ, ಇದಕ್ಕೆ ಬೇಕಾಗುವ ಕಚ್ಚಾಪದಾರ್ಥಗಳು ಲಭ್ಯವಿರುವ ಜಾಗ, ಹಣಕಾಸು, ಸಂಚಾರ ಸೌಲಭ್ಯ, ಕೆಲಸಗಾರರು ಮತ್ತು ತಾನೆಷ್ಟು ಬಂಡವಾಳ ಹಾಕಬೇಕು ಎಂಬುದೆಲ್ಲದರ ಕುರಿತು ಪರಿಪೂರ್ಣ ಮಾಹಿತಿ ನೀಡಲಾಗುತ್ತದೆ. ಇದಲ್ಲದೆ ತನ್ನ ಸಾಮರ್ಥ್ಯ ಕುರಿತು ನಂಬಿಕೆ ಬರುವಂತೆ ಮಾಡಲು ಎರಡು ದಿನ ಮೀಸಲು. ಆಗ ಆಟ ಪಾಠಗಳ ಮೂಲಕ ಕಸರತ್ತಿನ ಮೂಲಕ ಶಿಕ್ಷಣ ನೀಡುವುದುಂಟು. ಕಡೆಗೆ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುವುದು.

ಈ ತರಬೇತಿಯಲ್ಲಿ ಶಿಕ್ಷಣ ನೀಡುವವರು ಆಯಾ ಕ್ಷೇತ್ರದಲ್ಲಿ ಪರಿಣತಿ ಪಡೆದವರಲ್ಲದೆ ಬ್ಯಾಂಕ್ ಅಧಿಕಾರಿಗಳು, ಮಹಿಳಾ ಉದ್ಯಮಿಗಳೂ ಆಗಿರಬಹುದು.

ತರಬೇತಿಯ ನಂತರ ಸದಸ್ಯರು ಅದರ ಪ್ರಯೋಜನ ಪಡೆಯುವಂತೆ ಉತ್ತೇಜಿಸಲು ಒಂದು ತಿಂಗಳಿಗೊಮ್ಮೆ ಪರಿಶೀಲನೆ ಮಾಡಿ ಇದುವರೆಗೆ ಆದ ಪ್ರಗತಿ ಹಾಗೂ ಇನ್ನೆಷ್ಟು ಸಲಹೆ ಬೇಕಾದರೆ ಅವೇಕನ ಪರಿಣತ ಮಹಿಳೆಯರು ಮಾರ್ಗದರ್ಶನ ಮಾಡುವುದೂ ಇದೆ.

ಹೀಗೆ ಸಾರ್ವಜನಿಕರಲ್ಲದೆ ಸರ್ಕಾರೇತರ ಸಂಸ್ಥೆಗಳಿಗೆ, ಅಭಿವೃದ್ಧಿ ಬ್ಯಾಂಕ್‌ನ ಉದ್ಯೋಗಿಗಳಿಗೂ ಉದ್ಯಮದ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ನಡೆಸಿಕೊಡಲಾಗಿದೆ.

ತರಬೇತಿ ನೀಡುವುದು ಅವೇಕ್ ಸಂಸ್ಥೆಯ ಮುಖ್ಯ ಕಾರ್ಯಕ್ರಮವಾಗಿದ್ದರೆ ಇತರ ಅವಶ್ಯಕತೆಗಳನ್ನು ಪೂರೈಸಲು ಕೆಲವು ವ್ಯವಸ್ಥೆಗಳೂ ಇಲ್ಲಿ ಲಭ್ಯ. ಇದರಲ್ಲಿ ಆಹಾರ ಸಂಸ್ಕರಣೆಯ ಬಗ್ಗೆ ಒಂದು ಸಂಪುಟವಿದ್ದು, ಆಹಾರ ಪದಾರ್ಥಗಳು, ಪುಡಿ, ಹಪ್ಪಳ, ಮುಂತಾದುವುಗಳನ್ನು ತಯಾರಿಸಲು ಬೇಕಾಗುವ ಯಂತ್ರ ಇಲ್ಲಿದೆ. ಹೀಗೆ ತಯಾರಿಸಿದ ಪದಾರ್ಥಗಳನ್ನು ಇಲ್ಲಿನ FPO ಲೈಸನ್ಸ್ ಮೂಲಕ ಮಾರುಕಟ್ಟೆಗೆ ಬಿಡುಗಡೆ ಮಾಡಬಹುದು. ಒಂದು ವರ್ಷ ಅಥವಾ ಒಂದೂವರೆ ವರ್ಷಗಳ ಕಾಲ ತಮ್ಮ ಪದಾರ್ಥಗಳಿಗೆ ಮಾರುಕಟ್ಟೆ ಇದೆಯೆಂದು ಅರಿವಾದಾಗ ಸ್ವಂತ ಯಂತ್ರಗಳನ್ನು ಸ್ಥಾಪಿಸಿ ಉದ್ಯಮವನ್ನು ಮುಂದುವರಿಸಬಹುದು.

ಈ ಕ್ಷೇತ್ರದಲ್ಲಿ ಅವಶ್ಯವಿರುವ ಸಂಪನ್ಮೂಲ ಮತ್ತು ಸಂಶೋಧನೆ ಕುರಿತಾದ ಉಪಯುಕ್ತ ಮಾಹಿತಿಗಳನ್ನು ಒದಗಿಸುವುದು ಈ ಸಂಸ್ಥೆಯ ಇನ್ನೊಂದು ಕೆಲಸವಾಗಿದೆ. ಇದು ನವೀನ ರೀತಿಯ ತಂತ್ರಜ್ಞಾನ ಕುರಿತ ಮಾಹಿತಿಯಾಗಬಹುದು, ಗ್ರಂಥಗಳಿರಬಹುದು ಅಥವಾ ಬೇರೆ ವಿಶೇಷ ಪರಿಜ್ಞಾನದ ಅವಶ್ಯಕತೆ ಇದೆ ಎಂದು ತೋರಿದರೆ ಅದಕ್ಕೆ ಸಹಾಯ ಪಡೆಯಬಹುದಾಗಿದೆ.

ಸಿದ್ಧ ಉಡುಪುಗಳ ವಿಷಯ ತೆಗೆದುಕೊಂಡರೆ ಈ ಕೆಲಸಕ್ಕೆ ಮೊದಲ ಬಾರಿಗೆ ಕೈ ಹಾಕಿದವರಿಗೆ ಈಗಾಗಲೇ ೫-೧೦ ಯಂತ್ರಗಳನ್ನು ಹೊಂದಿರುವವರ ಬಳಿ ಸಂಪರ್ಕ ಕಲ್ಪಿಸಿ ವ್ಯಾವಹಾರಿಕ ಜ್ಞಾನ ಪಡೆಯುವಂತೆಯೂ ಆಗುತ್ತದೆ.

ಉಡುಪುಗಳನ್ನು ಅಥವಾ ವಸ್ತುಗಳನ್ನು ಹೇಗೆ ತಯಾರಿಸಬೇಕು, ಕರಕುಶಲ ವಸ್ತುಗಳು, ಸಾಮರ್ಥ್ಯ ಹೆಚ್ಚಿಸುವ ಬಗೆ, ನ್ಯೂನತೆಯನ್ನು ಕಂಡು ಹಿಡಿದು ಮುಂದೆ ಗುಣಮಟ್ಟವನ್ನು ಕಾಪಾಡಿಕೊಳ್ಳುವುದರ ಕುರಿತು ಪರಿಣತರ ಬಳಿ ಕಾರ್ಯಾಗಾರ ಏರ್ಪಡಿಸುವುದಿದೆ. ಆ ಮೂಲಕ ಅಭಿವೃದ್ಧಿಗೆ ದಾರಿ ತೋರಿಸಿ ರಫ್ತು ಮಾರಾಟದ ಬಗ್ಗೆಯೂ ಕಾರ್ಯ ಶಿಬಿರಗಳನ್ನು ಎರಡು ಮೂರು ದಿನಗಳವರೆಗೆ ನಡೆಸಿಕೊಡಲಾಗುತ್ತದೆ. ಅವೇಕ್ ಸಂಸ್ಥೆ ಹೀಗೆ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಅಭಿವೃದ್ಧಿಗೊಳಿಸಲು ಬದ್ಧವಾದ ದೇಶದ ಪ್ರಥಮ ಸಂಸ್ಥೆಯಾಗಿದೆ.

> ಹೆಚ್ಚಿನ ಮಾಹಿತಿಗೆ
> ಸಂಪರ್ಕಿಸಬೇಕಾದ ವಿಳಾಸ:
> ಅವೇಕ್, ಬಿ-೭೬, ಕೆ. ಎಸ್. ಎಸ್. ಐ. ಡಿ. ಸಿ. ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿ ನಗರ, ಬೆಂಗಳೂರು - ೫೬೦ ೦೪೪.


> **ಲತೆ**
>
> ಕೊನರಿದಾಗ
> ಪ್ರೀತಿ
> ನಾರಿ
> ಚಾರು-
> ಲತೆ
> ಕಮರಿದಾಗ
> ವ್ಯಾಕು
> ಲತೆ!!
>
> -ಎಂ.ಎಸ್. ಮುರಳಿಕೃಷ್ಣ

ವಿಶ್ವದಾದ್ಯಂತ ಖ್ಯಾತಿ

ಲಾಭಗಳಿಸುವ ಉದ್ದೇಶವಿಲ್ಲದ ಈ ಸರ್ಕಾರೇತರ ಸಂಸ್ಥೆ ವಿಮೆನ್ಸ್ ವರ್ಲ್ಡ್ ಬ್ಯಾಂಕಿಂಗ್‌ನ ಅಂಗ ಸಂಸ್ಥೆಯಾಗಿಯೂ ಸ್ಥಾನ ಪಡೆದಿದೆ. ಇದರ ಕಾರ್ಯಗಳೀಗ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳೂ ಗುರುತಿಸುವಂತಾಗಿದೆ.

'ಮಹಿಳೆಯರಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಹೊರ ತರುವುದರಲ್ಲಿ ಮತ್ತು ಹಿಂದಿನ ನಮ್ಮ ಸಂಪ್ರದಾಯ ಕಟ್ಟುಪಾಡುಗಳು ಹಾಗೂ ಆಚಾರಗಳನ್ನು ವಿಮರ್ಶಿಸುವ ವಿಚಾರದೆಡೆಗೆ ಕರೆದೊಯ್ಯುವ ಸಲುವಾಗಿ ಇದೇ ಏಪ್ರಿಲ್ ತಿಂಗಳ ೧೭-೧೮ರಂದು ಎರಡು ದಿನಗಳ ಮಹಿಳಾ ಉದ್ಯಮಿಗಳ ಮೂರನೆಯ ರಾಜ್ಯ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ' ಎಂದು ಪ್ರಸಕ್ತ ಅಧ್ಯಕ್ಷೆ ಪದ್ಮಾ ಶೇಷಾದ್ರಿಯವರು ಹೇಳುತ್ತಾರೆ.

ಹಾಗೆಯೇ ರಾಜ್ಯದ ಎಲ್ಲೆಡೆಗಳಲ್ಲಿರುವ ಮಹಿಳಾ ಉದ್ಯಮಿಗಳನ್ನು ಒಂದೇ ವೇದಿಕೆಯ ಮೇಲೆ ಸಮಾವೇಶಗೊಳಿಸುವ ಧ್ಯೇಯ ಹೊತ್ತಿದೆ. ತಾವು ಉತ್ಪಾದಿಸುವ ವಸ್ತುಗಳ ಮತ್ತು ಬಳಸಿದ ತಂತ್ರಜ್ಞಾನವನ್ನು ಪ್ರದರ್ಶಿಸಲೂ ಇದೊಂದು ಉತ್ತಮ ಅವಕಾಶವಾಗಿದೆ. ಇಲ್ಲಿ ಬರಬಹುದಾದಂಥ ಹೊಸ ಆಹ್ವಾನಗಳನ್ನು ಬಳಸಿಕೊಂಡು ೨೧ನೆಯ ಶತಮಾನದೆಡೆಗೆ ಸಿದ್ಧಗೊಳಿಸುವುದೂ ಸಮ್ಮೇಳನದ ಉದ್ದೇಶವಾಗಿದೆ. ●



ಹಣ್ಣು ಸಂಸ್ಕರಣೆಯಲ್ಲಿ ಯಶಸ್ಸು ಕಂಡ ಜ್ಯೋತಿ ಮೂರ್ತಿ

ಸಾಮಾನ್ಯವಾಗಿ ಮಹಿಳೆಯರಿಗೆ ಮದುವೆಯಾಗಿ ಮಕ್ಕಳಾಗಿ ನಂತರ ಮಕ್ಕಳು ಶಾಲೆಗೆ ಓದಲು ಹೋಗುವವರಂತಾದಾಗ ಯೋಚಿಸಲು ಸಮಯ ದೊರಕುತ್ತದೆ. ತಮ್ಮ ಜೀವನದಲ್ಲಿ ಏನಾದರೊಂದು ಮಾಡಬೇಕೆಂಬ ಅಭಿಲಾಷೆ ನಿಧಾನವಾಗಿ ಚಿಗುರಲಾರಂಭಿಸುತ್ತದೆ. ಆದರೆ ತಮ್ಮ ವಯಸ್ಸಿನಿಂದ ತಮಗಿಚ್ಛಾನುಸಾರವಾದ ನೌಕರಿ ದೊರೆಯುವ ಸಾಧ್ಯತೆಯೂ ಕಮ್ಮಿ.

ಈ ಹಂತದಲ್ಲಿ ಸ್ವಯಂ ಉದ್ಯೋಗದ ಕಡೆ ಗಮನಹರಿಸುವ ಸಾಧ್ಯತೆಗಳೇ ಹೆಚ್ಚು. ಆದರೆ ಇಂಥ ಮಹಿಳೆಯರು ಕೆಲಸಕ್ಕೆ ಕೈ ಹಾಕಿದೊಡನೆ ರಾತ್ರೋ ರಾತ್ರಿ ಯಶಸ್ಸನ್ನು ನಿರೀಕ್ಷಿಸುವುದಿದೆ. ಅದು ಎಂದಿದ್ದರೂ ಕಷ್ಟ ಸಾಧ್ಯ. ಮಧ್ಯ ವಯಸ್ಸು ತಲುಪಿದ್ದರಿಂದ ಬೇಗನೆ ಕೆಲಸವಾದರೆ ಮುಂದುವರಿಯುತ್ತಾರೆ. ಆದರೆ ಸಣ್ಣ ಕೈಗಾರಿಕೆಯಂಥ ಸ್ವಯಂ ಉದ್ಯೋಗಕ್ಕೆ ಕೈ ಹಾಕಿದರೆ ತಾಳ್ಮೆ ಅತ್ಯಗತ್ಯ. ಹೀಗೆಂದು ಹೇಳಿದವರು ಸ್ವತಃ ಹಣ್ಣುಗಳ ಸಂಸ್ಕರಣೆ ಕೆಲಸಕ್ಕೆ ಕೈಹಾಕಿರುವ ಮೂವತ್ತೇಳು ವರ್ಷದ ಜ್ಯೋತಿಮೂರ್ತಿ ಅವರು. ಸದ್ಯದಲ್ಲೇ 'ಜಿಮ್ ಹಣ್ಣು ಸಂಸ್ಕರಣೆ' ವಿಭಾಗವನ್ನು ನಾಗರಭಾವಿ ಎರಡನೆಯ ಹಂತದಲ್ಲಿ ತೆರೆಯಲಿರುವ ಜ್ಯೋತಿಯವರು ಇದಕ್ಕೂ ಮುಂಚೆ ಎರಡು ವರ್ಷ ಕಾಲ ಅವೇಕ್‌ನಲ್ಲಿ ಲಭ್ಯವಿದ್ದ ಆಹಾರ ಸಂಸ್ಕರಣೆ ಯಂತ್ರಗಳನ್ನು ಬಳಸುತ್ತಿದ್ದವರು.

ಮೊದಲೇ ಈ ಯಂತ್ರಗಳನ್ನು ಖರೀದಿಸಿ ವ್ಯಾಪಾರ ಶುರುಮಾಡಬೇಕಾದರೆ ಕಡಿಮೆ ಎಂದರೆ ಒಂದೂಕಾಲು ಲಕ್ಷ ಬಂಡವಾಳ ಹೂಡಬೇಕಾಗುವುದು. ಮಧ್ಯಮ ವರ್ಗದವರಿಗೆ ಪ್ರಾರಂಭದಲ್ಲೇ ಇಷ್ಟೊಂದು ದುಡ್ಡು ಹಾಕುವುದು ಕಷ್ಟವೇ. ಇದನ್ನು ಅರಿತೋ ಏನೋ ಅವೇಕ್‌ನವರು ತಮ್ಮ ಸಂಸ್ಥೆಯಲ್ಲೇ ಆಹಾರ ಸಂಸ್ಕರಣೆಗೆ ಬಳಸುವ ಯಂತ್ರಗಳನ್ನು ಸ್ಥಾಪಿಸಿ ಈ ಕ್ಷೇತ್ರಕ್ಕೆ ಕಾಲಿಟ್ಟವರು ಪ್ರಾರಂಭದಲ್ಲಿ ಮುಗ್ಗರಿಸದಂತೆ ಆಧಾರ ಸ್ತಂಭವಾಗಿದೆ. ಈ ಯಂತ್ರಗಳ ಬಳಕೆಗೆ ವರ್ಷಕ್ಕೆ ಹತ್ತು ಸಾವಿರ ರೂಪಾಯಿ ಬಾಡಿಗೆ ನೀಡುವುದರೊಂದಿಗೆ ಜ್ಯೋತಿ ಅವರು ಅಲ್ಲಿ ತಯಾರಿಸಿದ ತಲಾ ೧ ಕೆ.ಜಿ. ಜಾಮ್‌ಗೆ ಐದು ರೂಪಾಯಿ ತೆರಬೇಕಾಗಿತ್ತು. ನೇರವಾಗಿ ಯಂತ್ರೋಪಕರಣಗಳೊಂದಿಗೆ ವ್ಯಾಪಾರಕ್ಕಿಳಿಯುವುದಕ್ಕಿಂತ ವರ್ಷಕ್ಕೆ ಹತ್ತು ಸಾವಿರ ಬಾಡಿಗೆ ದುಡ್ಡು ಸುಲಭ ಮಾರ್ಗವಾಗಿತ್ತು. ಮೊದಲ ವರ್ಷ ಅವರು ತಿಂಗಳಿಗೆ ಐದು-ಹತ್ತು ಕೆ.ಜಿ. ಜಾಮ್ ತಯಾರಿಸುತ್ತಿದ್ದರು. ಲಾಭವೂ ಇಲ್ಲಾ ನಷ್ಟವೂ ಇಲ್ಲಾ ಎಂಬಂಥ ಸ್ಥಿತಿ.

ಅವರು ಹೆಚ್ಚಾಗಿ ಕೇಂದ್ರೀಕರಿಸಿದ್ದೂ ಜಾಮ್ ತಯಾರಿಕೆಗೇ. ಸ್ಕ್ವಾಷ್‌ಗಳಿಗೆ ಅಗತ್ಯವಾದ ಹಣ್ಣುಗಳು ನಿರ್ದಿಷ್ಟ ಸಮಯದಲ್ಲಿ ದೊರಕುತ್ತಿದ್ದುದರಿಂದ ಅದು ಕಾಲಕ್ಕನುಗುಣವಾಗಿ ತಯಾರಿಸುತ್ತಿದ್ದಾರೆ. ಟೊಮೆಟೋ ಸಾಸ್‌ನ್ನು ಬೇಡಿಕೆ ಬಂದಾಗ ಮಾತ್ರ ತಯಾರಿಸುತ್ತಾರೆ. ಏಕೆಂದರೆ ಸತತವಾಗಿ ತಯಾರಿಸಿ ಮಾರಾಟ ಮಾಡಬೇಕೆಂದರೂ ಟೊಮೆಟೋ ಬೆಲೆ ಎಲ್ಲಾ ಕಾಲಕ್ಕೂ ಒಂದೇ ರೀತಿಯಾಗಿಲ್ಲದೆ ಬೆಲೆಯನ್ನೂ ನಿಗದಿ ಪಡಿಸುವುದು ಕಷ್ಟವಾಗಬಹುದು. ಆದರೆ ತಮ್ಮ ಪಟ್ಟಿಯಲ್ಲಿ ಇನ್ನೊಂದು ಹೊಸ ಪದಾರ್ಥವನ್ನು ಸೇರಿಸಿದ್ದಾರೆ. ಅದುವೇ ರಾಗಿ ದೋಸೆ ಮಿಕ್ಸ್ . ತಮ್ಮ ಅತ್ತೆಯಿಂದ ಇದನ್ನು ಕಲಿತು ಈಗ ತಾವೇ ತಯಾರಿಸುತ್ತಿದ್ದು ಅದನ್ನು ಜನರೂ ಮೆಚ್ಚಿದ್ದಾರೆ ಎನ್ನುತ್ತಾರೆ.

ನಿಧಾನವಾಗಿ ಬೇಡಿಕೆ ಹೆಚ್ಚುತ್ತಿದ್ದಂತೆಯೇ ಎರಡು ವರ್ಷದಲ್ಲಿ ತಿಂಗಳಿಗೆ ಸಾವಿರದೈನೂರು ಕೆ.ಜಿ. ಜಾಮ್ ತಯಾರಿಸುವ ಮಟ್ಟಕ್ಕೆ ಬಂದೆ ಸ್ವಂತವಾಗಿ ಒಂದು ಪ್ರತ್ಯೇಕ ಆಹಾರ ಸಂಸ್ಕರಣಾ ಘಟಕವನ್ನು ತೆರೆಯುವ ಧೈರ್ಯ ಬಂದಿತ್ತು. ಅಂತೆಯೇ ಅದೂ ಮುಕ್ತಾಯ ಹಂತದಲ್ಲಿದ್ದು ಒಬ್ಬ ಸಹಾಯಕಿಯ ಜೊತೆ ಜ್ಯೋತಿಯವರೇ ಗಂಭೀರವಾಗಿ ಈ ವ್ಯಾಪಾರವನ್ನು ಪರಿಗಣಿಸಲು ನಿರ್ಧರಿಸಿದ್ದಾರೆ. ದಿನಕ್ಕೆ ನೂರು ಕೆ.ಜಿ. ಜಾಮ್ ತಯಾರಿಸುವ ಮಟ್ಟಕ್ಕೆ ತಲುಪಿದ್ದು ಅವರ ಬೆಳವಣಿಗೆಯ ಹಾದಿ ತೋರಿಸುತ್ತದೆ.

ತಾವು ಈ ವ್ಯಾಪಾರಕ್ಕೆ ಕೈ ಹಾಕಿದ ಒಂದು ವರ್ಷದ ಬಳಿಕ ತಿಂಗಳಿಗೆ ಸುಮಾರು ಮೂರು ಸಾವಿರ ರೂಪಾಯಿ ಸಂಪಾದಿಸತೊಡಗಿದ್ದು ಎಂದು ಹೇಳುತ್ತಾ ಜ್ಯೋತಿ ಅವರು ತಾಳ್ಮೆಯ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಕಡಿಮೆ ಎಂದರೆ ಒಂದು ವರ್ಷ ಧೃತಿಗೆಡದೆ ಮಾರುಕಟ್ಟೆ ಕಂಡುಕೊಳ್ಳಲು ಪ್ರಯತ್ನಿಸಬೇಕು ಎನ್ನುತ್ತಾರೆ.

ಅವರು ಈ ಹಿಂದೆ ೧೯೯೫ರಲ್ಲಿ ಹೆಬ್ಬಾಳದ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ನವರು ನಡೆಸಿಕೊಟ್ಟ ಹಣ್ಣು ಮತ್ತು ತರಕಾರಿ ಸಂಸ್ಕರಣೆ ಕಾರ್ಯಕ್ರಮದಡಿ ಎರಡೂವರೆ ತಿಂಗಳು ತರಬೇತಿ ಪಡೆದಿದ್ದು ಈ ದಾರಿಗೆ ಹೊರಳುವಂತಾಗಿತ್ತು. ಕಂಪ್ಯೂಟರ್ ಕೋರ್ಸ್ ಒಂದನ್ನು

ಮಾಡಿದ್ದರೂ ಸೂಕ್ತವಾದ ಕೆಲಸ ಸಿಗದಿದ್ದುದರಿಂದ ಪತ್ರಿಕೆಯಲ್ಲಿ ಈ ತರಬೇತಿ ಕಾರ್ಯಕ್ರಮ ಕುರಿತು ಜಾಹೀರಾತು ಪ್ರಕಟವಾದುದನ್ನು ಕಂಡು ಸೇರಿಕೊಂಡಿದ್ದರು. ಅದು ಅವರಿಗೆ ಬೇರೆಯೇ ದಾರಿ ತೋರಿಸಿದರೆ ಅವೇಕ್ ಸಂಸ್ಥೆಯ ಸಂಪರ್ಕದಿಂದ ತಮ್ಮವ್ಯಾಪಾರ ನಡೆಸಲು ಊರುಗೋಲು ಸಿಕ್ಕಿತ್ತು.

ಬೆಂಗಳೂರು ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ವಿಭಾಗದಲ್ಲಿ ರೀಡರ್ ಆಗಿರುವ ಅವರ ಪತಿ ಅನಂತಮೂರ್ತಿಯಿಂದ ಇವರ ಈ ಉದ್ಯೋಗಕ್ಕೆ ತುಂಬು ಪ್ರೋತ್ಸಾಹ ಇದ್ದೇ ಇದೆ. ಅದಲ್ಲದೆ ಇತರ ದೊಡ್ಡ ಸಂಸ್ಥೆಗಳು ತಯಾರಿಸುವ ಜಾಮ್‌ಗೂ ಇದಕ್ಕೂ ಇರುವ ವ್ಯತ್ಯಾಸದಿಂದ ಸ್ಥಳೀಯರು ಜ್ಯೋತಿ ಅವರು ತಯಾರಿಸಿದ ಜಾಮ್‌ನ್ನು ಇಷ್ಟಪಡುವಂತಾಗಿದೆ. ದೊಡ್ಡ ಸಂಸ್ಥೆಗಳು ಹಣ್ಣುಗಳಿಗೆ ಕೆಡದಂತೆ ಉಳಿಸುವ ಪದಾರ್ಥಗಳನ್ನು ಬಳಸಿ ಒಂದು ವರ್ಷ ಇಟ್ಟು ಅನಂತರ ಬಳಸುತ್ತಾರೆ. ಆದರೆ ಇವರ ತಯಾರಿಕೆಯ ವಿಧಾನದಲ್ಲಿ ಅಂದೇ ತರಿಸಿದ ಹಣ್ಣುಗಳನ್ನು ಬಳಸಿ ಜಾಮ್ ತಯಾರಿಸುತ್ತಾರೆ. ಅದು ಜನರಿಗೂ ಇಷ್ಟವಾಗಿ ಬಾಟಲಿಯಲ್ಲಿನ ಜಾಮ್ ಒಂದು ವರ್ಷದವರೆಗೆ ಬಳಕೆಗೆ ಬರುತ್ತದೆ. ಹೋಟೆಲ್ ಮುಂತಾದೆಡೆ ಸರಬರಾಜು ಮಾಡುವ ಕ್ಯಾನ್‌ಗಳಲ್ಲಿನ ಜಾಮ್‌ನ ಬಳಕೆಯ ಅವಧಿ ಮೂರು ತಿಂಗಳು.

ಈ ಕ್ಷೇತ್ರದಲ್ಲಿನ ಒಂದು ಮುಖ್ಯ ಸಮಸ್ಯೆ ಎಂದರೆ ಗುಣಮಟ್ಟವನ್ನು ಕಾಯ್ದುಕೊಂಡರೂ ವ್ಯಾಪಾರಿಗಳು ಕೇಳಿದ ಬೆಲೆಗಳಿಗೆ ಮಾರಾಟ ಮಾಡಬೇಕಾಗಿ ಬರುವ ಅನಿವಾರ್ಯತೆ ಇರುವುದು. ಬಹಳಷ್ಟು ಮಂದಿ ಈಗ ಈ ಕ್ಷೇತ್ರದಲ್ಲಿ ಕೈಯಾಡಿಸುತ್ತಿದ್ದು ಈ ಸ್ಪರ್ಧೆಯಲ್ಲಿ ಉಳಿಯಲು ಅತ್ಯಂತ ಕಡಿಮೆ ದರಗಳಿಗೆ ಮಾರಾಟ ಮಾಡುತ್ತಿದ್ದಾರೆ. ವ್ಯಾಪಾರಿಗಳೂ ಸಹ ಗುಣಮಟ್ಟದ ಕಡೆ ಗಮನ ಹರಿಸದೆ ತೀರಾ ಕಡಿಮೆ ಬೆಲೆಗೆ ಮಾರಾಟ ಮಾಡಲು ಒಪ್ಪುವುದಾದರೆ ಮಾತ್ರ ಪರಿಗಣಿಸುತ್ತಿದ್ದಾರೆ. ಇದು ಜ್ಯೋತಿ ಅವರ ಮುನ್ನಡೆಗೆ ಪೆಟ್ಟನ್ನು ನೀಡಿತ್ತು. ತೀರಾ ಕಡಿಮೆ ಬೆಲೆಗೆ ರಾಜಿಯಾದರೆ ನಷ್ಟವನ್ನ ಅನುಭವಿಸಬೇಕಾಗುತ್ತಿತ್ತು. ಅದೃಷ್ಟವಶಾತ್ ಒಬ್ಬ ವ್ಯಾಪಾರಿ ಜ್ಯೋತಿ ನೀಡಿದ ಬೆಲೆಗೆ ಒಪ್ಪಿಕೊಂಡಿದ್ದರು. ದಾವಣಗೆರೆಯಲ್ಲಿನ ಶ್ರಿತಾರಾ ಹೋಟೆಲ್‌ನವರು ಇವರು ತಯಾರಿಸುತ್ತಿದ್ದ ಜಾಮ್‌ನ್ನು ಮೆಚ್ಚಿ ಇದೀಗ ಇವರಿಂದ ಖರೀದಿಸತೊಡಗಿದ್ದಾರೆ.

ನಾಗರಬಾವಿಯಲ್ಲಿನ ಅವರ ಘಟಕ ಅನೇಕ ಸ್ಥಳೀಯರಿಗೆ ದೂರವಾಗಿರುವುದರಿಂದ ಪರಿಚಯದವರು ಅವೇಕ್ ಸಂಸ್ಥೆಯ ಮೂಲಕ ಅವರ ತಯಾರಿಕೆಗಳನ್ನು ಖರೀದಿಸುತ್ತಿದ್ದಾರೆ.

ಭಾರತದಲ್ಲಿ ಮಾರುಕಟ್ಟೆಗೆ ಬರುವ ಹಣ್ಣು ತರಕಾರಿಗಳಲ್ಲಿ ಶೇಖಡ ೭೦ ರಷ್ಟನ್ನು ಜನರು ಸೇವಿಸದೆ ನಾಶವಾಗುತ್ತಿರುವ ಸಂದರ್ಭದಲ್ಲಿ ಹಣ್ಣು ತರಕಾರಿಗಳ ಸಂಸ್ಕರಣೆಯನ್ನು ಈ ಕಾರಣಕ್ಕೆ ಉತ್ತೇಜಿಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ವೈವಿಧ್ಯಮಯ ವಸ್ತುಗಳಿಗೆ ಉತ್ತಮ ಅವಕಾಶಗಳಿವೆ. ಹಣ್ಣುಗಳ ಬೆಲೆಯ ಮೇಲೆ ಅದರಿಂದ ತಯಾರಿಸಿದ ಪದಾರ್ಥಗಳ ಬೆಲೆಯೂ ನಿಗದಿಯಾಗಿ ಮಧ್ಯಮ ವರ್ಗ ಅಥವಾ ಮೇಲ್ವರ್ಗದವರ ಕೈ ಗೆಟುಕುವಂತಾಗುತ್ತದೆ. ಈಗ ಮಧ್ಯಮ ವರ್ಗದವರಿಂದ ಜಾಸ್ತಿ ಬೇಡಿಕೆ ಇರುವ ಮಿಕ್ಸ್ಡ್ ಫ್ರೂಟ್ ಜಾಮ್ ತಯಾರಿಸುತ್ತಿರುವ ಜ್ಯೋತಿ ಇದಕ್ಕೆ ಬಾಳೆಹಣ್ಣು, ಪರಂಗಿ ಹಣ್ಣು ಹಾಗೂ ಅನಾನಸ್‌ನ್ನು ಬಳಸುತ್ತಾರೆ.

ಹಾಗೆಯೇ ದುಬಾರಿ ಬೆಲೆಯ ಸೇಬನ್ನು ಬಳಸಿ ಜಾಮ್‌ನ್ನು ತಯಾರಿಸಿ ಮೇಲ್ವರ್ಗದವರನ್ನು ಲಕ್ಷ್ಯವಾಗಿಡುವ ಆಸೆ ಇದೆ. ರಾಗಿ ದೋಸೆ ಮಿಕ್ಸ್ ಹಾಗೆ ಇನ್ನಿತರ ನವೀನ ಪದಾರ್ಥಗಳನ್ನು ತಯಾರಿಸುವ ಯೋಜನೆಗಳೂ ಇವೆ. ಅವರ ಈ ವಿಚಾರಗಳಿಗೆ ಯಾವುದೇ ಕಂಟಕ ಎದುರಾಗದೆ ಜಾರಿಗೆ ಬರುವಂತಾಗಲಿ ಎಂದು ಆಶಿಸೋಣವೇ. ●

ಕಲಾತ್ಮಕ ಶಾವಿಗೆ ಚತುರೆ - ಸ್ಮಿತಾ ಗಾಯ್‌ಗೋರೆ



ಚಿತ್ರ : ಈರಣ್ಣ ಕಾಡಪ್ಪನವರ್

ಉತ್ಸಾಹಿ ಮಹಿಳೆಯರು ಕ್ರಿಯಾಶೀಲತೆಯನ್ನು ಹೇಗೆಲ್ಲಾ ಬಿಂಬಿಸಲು ಸಾಧ್ಯ ಎಂಬುದಕ್ಕೆ ಉತ್ತರ ಕರ್ನಾಟಕದಲ್ಲಿ ಅರಳಿರುವ ಅನೇಕ ಉದ್ಯಮಗಳು ಪುರಾವೆ ಒದಗಿಸುತ್ತವೆ. ಹುಬ್ಬಳ್ಳಿ ವಿಜಯನಗರದ ಸ್ಮಿತಾ ಗಾಯ್‌ಗೋರೆಯವರ ಗೃಹೋದ್ಯಮವಾದ ಶಾವಿಗೆಯ ರುಚಿ ಚಪ್ಪರಿಸಿದ ನಾಲಿಗೆಗಳಿಗಷ್ಟೇ ಗೊತ್ತು!

ಯಂತ್ರಗಳ ಮೂಲಕ ಬಿಳಿನೂಲಿನಂಥ ಶಾವಿಗೆ ಸಿದ್ಧಪಡಿಸುವವರು ಅನೇಕರಿದ್ದಾರೆ. ಆದರೆ, ಇವರ ಕೈಶಾವಿಗೆಯ ರುಚಿ ಬೇರೆಯೇ ತೆರನಾದುದು. ಅತ್ತೆ ಕಮಲಾಬಾಯಿ ಗಾಯ್‌ಗೋರೆ, ಸೋದರಿ ಶೋಭಾ ಲಿಯಯೆ, ಮಕ್ಕಳಾದ ರೂಪಾ, ದೀಪಾರ ಸಹಕಾರದಿಂದ ಶಾವಿಗೆ ಉದ್ಯಮದಲ್ಲಿ ತೊಡಗಿರುವ ಸ್ಮಿತಾ ಗಾಯ್‌ಗೋರೆ ಕಳೆದೈದು ವರ್ಷಗಳಿಂದ ಬೃಹತ್ ಪ್ರಮಾಣದಲ್ಲಿ ರುಚಿಕಟ್ಟಾದ ಶಾವಿಗೆ ಸಿದ್ಧಪಡಿಸುತ್ತಿದ್ದಾರೆ. ಅವಲಕ್ಕಿ, ಉದ್ದುಹಾಗೂ ಬಟಾಟೆಯ ಹಪ್ಪಳ ತಯಾರಿಯೂ ನಡೆದಿದೆ.

ಅಮೃತ್‌ಗೋಧಿ (ಅದಲ್ಲವಾದರೆ ಕಲ್ಯಾಣಗೋಧಿ)ಯನ್ನು ನೀರಿನಲ್ಲಿ ನೆನೆಸಿ, ಬಸಿದು, ಬಟ್ಟೆಯಲ್ಲಿ ಕಟ್ಟಿ ಇಡಬೇಕು. ಮರುದಿನ ಗಿರಣಿಯಲ್ಲಿ ರವೆ ಹಾಕಿಸಿಕೊಂಡು ಬರುವುದು. ಬುಟ್ಟಿಗೆ ಬಟ್ಟೆ ಕಟ್ಟಿ, ರವೆಯನ್ನು ಮೂರು ಬಾರಿ ಸೋಸಿ, ಸಜ್ಜಿಗೆ ಪಿಟ್ಟೆ ತೆಗೆಯುವುದು ದಪ್ಪರವೆಯಿಂದ ಶಿರಾ, ಉಪ್ಪಿಟ್ಟು ತಯಾರಿಸಬಹುದಾಗಿದೆ. ಪಿಟ್ಟೆಯಿಂದ ಪೂರಿ ಚಪಾತಿ ತಯಾರಿ ಸಾಧ್ಯ. ಸಣ್ಣರವೆಗೆ ಹರಳುಪ್ಪು (೧ ಕಿಲೋಗೆ ೨೫ ಗ್ರಾಂ), ತುಪ್ಪ, ಎಣ್ಣೆ, ನೀರು ಹಾಕಿ ಕಲಿಸಿ ಒಂದು ತಾಸು ಕಳೆದ ಮೇಲೆ ಕುಟ್ಟಬೇಕು.

ನಂತರ ಉಳ್ಳಿ(ಉಂಡೆ ಗುಳಿಗೆ) ಹಾಕಿ ಕೈಯಿಂದ ಹೊಸೆದು ತಾಟಿನ ಮೇಲೆ ಸುರುಳಿ ಸುತ್ತಿ ಇಡಬೇಕು. ಅದೇ ಸುರುಳಿಯನ್ನು ಮತ್ತೊಮ್ಮೆ ತೆಳ್ಳಗೆ ಹೊಸೆದು ಸುರುಳಿ ಮಾಡಬೇಕು. ಮೂರನೇ ಹಂತದಲ್ಲಿ ಕೈಬೆರಳುಗಳ ನೆರವಿನಿಂದ ಜಿಗುಗು ಮಾಡಿಕೊಂಡು ಉದ್ದನೆಯ ಕೋಲಿಗೆ ಹಾಕಿ, ನಿಧಾನವಾಗಿ ಜಗ್ಗುತ್ತಾ ಎಳೆ ಬಿಡಿಸಬೇಕು. ಸುಮಾರು ೧೪ ಅಡಿಗಳಷ್ಟು ಉದ್ದದ ಶಾವಿಗೆ ಕೋಲಿನ ಇಕ್ಕೆಲಗಳಲ್ಲಿ ಗಾಳಿಗೆ ಒಣಗುತ್ತದೆ. ನಂತರ ಇದನ್ನು ಸುಮಾರು ೧೦-೧೨ ಇಂಚುಗಳ ಉದ್ದಕ್ಕೆ ಮುರಿದು, ಬಿಸಿಲಲ್ಲಿ ತುಸು ಸಮಯ ಒಣಗಿಸಬೇಕು. ಇದೋ! ಶಾವಿಗೆ ಮಾರಾಟಕ್ಕೆ ಸಿದ್ಧ!

ಪಾಯಸ, ಶಿರಾ, ಉಪ್ಪಿಟ್ಟು, ಶಾವಿಗೆ ಬಾತ್..ವೈವಿಧ್ಯಮಯ ತಿನಿಸುಗಳನ್ನು ಬಯಸುವವರು ವಿಜಯನಗರದ ಇವರ ಮನೆಯನ್ನು ಹುಡುಕಿಕೊಂಡು ಬರುತ್ತಾರೆ. ಇಷ್ಟೊಂದು ರುಚಿಕಟ್ಟಾದ ಶಾವಿಗೆ ಮಾಡುವವರು ಹುಬ್ಬಳ್ಳಿಯಲ್ಲಿ ಬೇರೆ ಇನ್ನಾರೂ ಇಲ್ಲ. ಶುಭ ಸಮಾರಂಭಗಳಿಗೆ, ಔತಣ ಕೂಟಗಳಿಗೆ ಕೆಜಿಗಟ್ಟಲೆ ಶಾವಿಗೆಯ ಬೇಡಿಕೆ ಬರುತ್ತದೆ. ಬಿಜಾಪುರ, ಬಾಗಲಕೋಟೆ, ಪೂನಾ, ಮುಂಬೈ... ಮುಂತಾದೆಡೆಗಳಲ್ಲಿರುವ ಸಂಬಂಧಿಕರು, ಪರಿಚಿತರು, ಭಾರೀ ಬೇಡಿಕೆ ತರುತ್ತಾರೆ. ಅಮೆರಿಕಾ, ದುಬೈಗಳಿಗ್ಗೂ ಇವರ ಶಾವಿಗೆ ರವಾನೆಯಾಗುತ್ತದೆ.

'ಇಷ್ಟೊಂದು ರುಚಿಕಟ್ಟಾಗಿ ಶಾವಿಗೆ ನಿರ್ಮಿಸಲು ಹೇಗೆ ಸಾಧ್ಯ?' ಎಂಬ ಪ್ರಶ್ನೆಗೆ.

ಚಿತ್ರ : ಈರಣ್ಣ ಕಾಡಪ್ಪನವರ್



'ಎಲ್ಲ ಗುಟ್ಟೂ ಬಿಚ್ಚಿಡಲಾರೆ. ಆದರೂ ತುಸು ಕೇಳಿ.. ಅಮೃತ್ ಗೋಧಿ ಬಳಸಬೇಕು. ಹರಳುಪ್ಪಿನ ಪ್ರಮಾಣ ಸಮರ್ಪಕವಾಗಿಲ್ಲದೇ ಹೋದರೆ ಎಳೆಗಳು ತುಂಡಾಗುತ್ತವೆ. ಏಳುಫೂಟ್ ಎತ್ತರದಲ್ಲಿ ಅಡ್ಡ ಇರಿಸಲಾದ ಕೋಲಿಗೆ ಹಾಕಿ ಎಳೆ ಬಿಡಿಸುವುದರಲ್ಲೇ ಕಲಾತ್ಮಕತೆ ಅಡಗಿದೆ. ಬಿಸಿಲಿಗೆ ಹಾಕಿ ಒಣಗಿಸಿದ್ರೆ ಹುಳಿ ಆಗುವುದಿಲ್ಲ. ಬಾಳಿಕೆಯೂ ಹೆಚ್ಚುತ್ತದೆ.

- ಸ್ಮಿತಾ ಮಂದಸ್ಮಿತರಾಗುತ್ತಾರೆ.

'ಈ ಗೃಹೋದ್ಯಮ ಬೆಳೆಸುವ ಯೋಜನೆ ಏನಾದರೂ ಇದೆಯೇ?' - ಕೇಳಿದೆ.

'ನೋಡಿ... ಮಳೆಗಾಲದಲ್ಲಿ ಶಾವಿಗೆ ತಯಾರಿ ಸಾಧ್ಯವಾಗುವುದಿಲ್ಲ. ದೀಪಾವಳಿಯಿಂದ ಜೂನ್ ತನಕ.. ಅಂದರೆ ಸುಮಾರು ಎಂಟು ತಿಂಗಳ ಕಾಲ ಮಾತ್ರ ನಾವೆಲ್ಲಾ ಹಗಲಿರುಳೆನ್ನದೆ ದುಡಿಯ ಬೇಕಾಗುತ್ತದೆ. ಬೇಸಿಗೆಯಲ್ಲಿ ಬೇಡಿಕೆ ಅಧಿಕ. ನಾವು ಮನೆಮಂದಿ ಮಾತ್ರವಲ್ಲದೆ ಓರಗೆಯ ಗೆಳತಿಯರೂ ಬಂದು ಸಹಕರಿಸುತ್ತಾರೆ. ಈ ಕಲೆಯನ್ನು ಕರಗತ ಮಾಡಿಕೊಂಡು ಎಂಟು ವರ್ಷಗಳನು ಜಾರಿವೆ. ಕಳೆದೈದು ವರ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ತಯಾರಿ ನಡೆಯುತ್ತಿದೆ. ಗುಣಮಟ್ಟ ಕಾಯ್ದುಕೊಳ್ಳುವ ಬಗೆಗೆ ನಾವು ಜಾಗರೂಕರಾಗಿದ್ದೇವೆ''

ಮೂರು ಕಿಲೋ ಗೋಧಿಯಲ್ಲಿ ಒಂದು ಕಿಲೋ ಶಾವಿಗೆ ಸಿದ್ಧವಾಗುತ್ತದೆ. ಲಾಭಕ್ಕಿಂತಲೂ ರುಚಿಗೆ ಪ್ರಾಧಾನ್ಯತೆ. ಸಮಯದ ಸದುಪಯೋಗದ ಜತೆಗೆ ಗೃಹೋದ್ಯಮವೊಂದನ್ನು ಬೆಳೆಸಿದ ಸಾರ್ಥಕತೆ. ಖಿನ್ನತೆ ನೀಗಿಸುವ ಖೀರು ಹೀರುವಾಗ.. ವ್ಹಾ..:... ಅದೆಂಥ ಪ್ರಸನ್ನತೆ: ... ರೋಚಕತೆ:....

ಆರೂರು ಲಕ್ಷ್ಮಣ್ ಶೇಟ್

ನೀನು

ಸಂಜೆ ಬೆಳಕಲ್ಲಿ ಹೊಳೆಯುತ್ತ
ಮೆಲ್ಲನೆ ನಡೆದು ಬಂದೆ ನೀನು,
ಜತೆಗಿತ್ತು ಬರಿ ಮೌನ-
ಭುಜ ಸವರಿದಾಗ
ಮಳೆ ಹನಿ ನೆಲ ಮುಟ್ಟಿತು ನಿಧಾನ.



ಹೊಳೆವ ದೀಪಗಳ ಬೀದಿ,
ಹಾದು ಕತ್ತಲಿನ ಹಾದಿ
ಏಕಾಂತ ಹುಡುಕುತ್ತ ಹೊರಟೆವು;
ಸಿಗಲಿಲ್ಲ ಅಂಥದೊಂದು ತಾವು.

ಕಳೆದ ಗಳಿಗೆಗಳ ತಬ್ಬುತ್ತ ನಡೆದ ನಿನ್ನ ನಗೆ
ಸಂಜೆಯಂತೆ ಮೋಹಕ, ಕರುಣಾಳು.

ಮಳೆಬಿದ್ದು ಕನ್ನಡಿಯಾದ ನೆಲ, ರೇಶ್ಮೆ ನಯದಲ್ಲಿ
ನಡೆದೆ ನಿಧಾನ. ಉಲ್ಲಾಸದ ಇರುಳು, ಸುರಿಯುತ್ತಿದೆ ಸೋನೆ,

ಕರೆದೊಯ್ಯುತಿರುವೆ ಕಂಡರಿಯದ ದಾರಿ-ದಂಡೆ,
ಹಾಗೇ, ಎದೆಗೊರಗಿ ಮೌನ, ಅನಿಶ್ಚಯ ತುಂಬಿದ
ಕಂಗಳಲ್ಲಿ- ಚುಂಬಿಸುತ್ತಿರುವೆ.

ಹನಿಯುವ ಮಳೆಯ ಶುಭ ಹಾರೈಕೆಯಲ್ಲಿ
ಮನೆಗೆ ನಡೆದೆವು.

ನಿನ್ನ ಕೂದಲ ರಾಶಿಯಲ್ಲಿ
ಮಳೆ ಹನಿಯ ಮುಕುಟ,
ಮುಖದಲ್ಲಿ ತುಂಬಿ ಕಾಂತಿ,
ಚಿಮ್ಮಿದವು ಲಕ್ಷ ಕನಸು.
-ಕಂಡ ನನ್ನ ಕಣ್ಣು ಹನಿದವು.
[ಆಫ್ರಿಕನ್ ಕವಿ ಬೆನ್ ಒಕ್ರಿಯ ಕವಿತೆಯೊಂದರ ಭಾವಾನುವಾದ]

- ಎಂ. ಆರ್. ಕಮಲ

ಹುಬ್ಬಳ್ಳಿಯಲ್ಲಿ ಗುಜರಾತ್ ಮಹಿಳೆಯರ ಉದ್ಯಮ

ಲಕ್ಷ್ಮಣ್ ಶೇಟ್




ಚಿತ್ರ : ಈರಣ್ಣ ಕಾಡಪ್ಪನವರ್

ಸಂಖ್ಯೆ ಸೀಮಿತ. ಉತ್ಸಾಹ ಅಪರಿಮಿತ. ಕಛ್ ಮಹಿಳೆಯರ ಕ್ರಿಯಾಶೀಲತೆಗೆ ಸರಿಸಾಟಿ ಇಲ್ಲ. ನಗುತ್ತಲೇ ಸವಿಯುತ್ತಾರೆ ಬೇವುಬೇಲ್ಲ. ಹುಬ್ಬಳ್ಳಿಯ 'ಕಛ್ ಮಹಿಳಾ ಹಿತವರ್ಧಕ ಮಂಡಳ'ದಲ್ಲಿ ವಿವಿಧ ಭಕ್ಷ್ಯಗಳು ಸಿದ್ಧಗೊಳ್ಳುವ ಪರಿ ಬೆರಗುಗೋಳಿಸುವಂಥದು. ಈ ಗೃಹ ಉದ್ಯೋಗ ಕೇಂದ್ರವನ್ನು ಮಹಿಳೆಯರೇ ಮುನ್ನಡೆಸುತ್ತಿದ್ದು ಇಲ್ಲಿನ ಶಿಸ್ತು, ಅಚ್ಚುಕಟ್ಟು ಇತರರಿಗೆ ಮಾದರಿಯಾದುದು.

ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳ ಜತೆಗೆ ಮಹಿಳಾ ಉದ್ಯಮ ಇಲ್ಲಿ ಅರಳಿದೆ. ಜೀವನ್ ಪ್ರಭಾತ್‌ಕೇಂದ್ರದಲ್ಲಿ ಮಹಿಳೆಯರ ಕೈ ಕಸರತ್ತು, ಪಾಕ ಪ್ರಾವೀಣ್ಯತೆ ವಿಜೃಂಭಿಸುತ್ತಿದೆ. ಜೀವನದ ಸಂಧ್ಯೆ ಸಹ್ಯವಾಗಿರಬೇಕೆಂಬ ಸದಾಶಯ. ಅನೇಕ ಅಸಾಹಯಕ ವೃದ್ಧ ಮಹಿಳೆಯರು ಇಲ್ಲಿ ದುಡಿಯುತ್ತಿದ್ದಾರೆ. ಮತ್ತೆ ಕೆಲವರು ಕ್ರಿಯಾಶೀಲತೆ ಉಳಿಸಿ, ಬೆಳೆಸುವ ಉತ್ಸಾಹದಿಂದ ಗೃಹ ಉದ್ಯೋಗ ಕೇಂದ್ರದಲ್ಲಿ ಸ್ವಯಂ ಸ್ಫೂರ್ತಿಯಿಂದ ಕಾರ್ಯತತ್ಪರರಾಗಿದ್ದಾರೆ.

ಇದು ಇಪ್ಪತ್ತೆರಡು ವರ್ಷಗಳಿಂದ ಚಟುವಟಿಕೆಯಿಂದಿದ್ದರೂ ಕಳೆದೆರಡು ವರ್ಷಗಳಿಂದ ಹುಬ್ಬಳ್ಳಿಯ ಜೆ.ಸಿ. ನಗರದ 'ಕಛಿ ಹೌಸ್'ನಲ್ಲಿ ಸುವ್ಯವಸ್ಥಿತವಾಗಿ ವಿಶಾಲವ್ಯಾಪ್ತಿಯಲ್ಲಿ ಕಾರ್ಯೋನ್ಮುಖವಾಗಿದೆ. ಸುಮಾರು ೧೦ ಮಂದಿ ಕಛ್ ಸಮಾಜದ ಮಹಿಳೆಯರು ಮಧ್ಯಾಹ್ನ ೩ ಗಂಟೆಯಿಂದ ೬ ರ ತನಕ ವಿವಿಧ ತಿನಿಸುಗಳನ್ನು ಮಾಡುತ್ತಾರೆ. ಇವರಿಗೆ ತಿಂಗಳ ಪಗಾರ ಸಿಗುತ್ತದೆ. ಕಛ್ ಸಮಾಜದವರು ಮಾತ್ರವಲ್ಲದೆ ಇತರೆಲ್ಲ ಸಮುದಾಯದವರಿಗೂ ಇಲ್ಲಿನ ತಿನಿಸುಗಳು ಪ್ರಿಯವೆನಿಸಿದ್ದು ಖರೀದಿಸಲು ಧಾವಿಸುತ್ತಾರೆ. ದೊಡ್ಡ ಪ್ರಮಾಣದಲ್ಲಿ ಬೇಕಿದ್ದರೆ ಪೂರ್ವ ಸೂಚನೆ ನೀಡಬೇಕು. ಯಾಕೆಂದರೆ ಇದು ಹೋಟೆಲ್ ಅಲ್ಲ. ಅಭಯಾಶ್ರಯ ಮಾದರಿಯ ಉದ್ಯೋಗ ಕೇಂದ್ರ.

ಚಿತ್ರ : ಈರಣ್ಣ ಕಾಡಪ್ಪನವರ್



ಗುಜರಾತಿಗಳು ಸವಿ ಮಾತಿಗೆ, ಸಿಹಿ ತಿನಿಸಿಗೆ ಪ್ರಸಿದ್ಧರು. ಈ ಗುಜರಾತಿ ಕಛೀ ಜೈನ್ ಸಮುದಾಯದವರು ನಡೆಸುವ ಗೃಹ ಉದ್ಯೋಗ ಕೇಂದ್ರದಲ್ಲಿ ಐದು ಬಗೆಯ ಚಿಕ್ಕಿ, ಮೈಸೂರು ಪಾಕ್, ಮೋಹನ್‌ಪಾಕ್, ಬೂಂದಿ ಲಾಡು, ಗುಲಾಬ್ ಜಾಮೂನ್, ಉಡದ್‌ಪಾಕ್, ಸ್ವೀಟ್ ಪುರಿ, ಜಿಲೇಬಿ... ಮುಂತಾದ ಸಿಹಿ ತಿನಿಸುಗಳಿಗೆ ಭಾರೀ ಬೇಡಿಕೆ ಇದೆ.

ಅಲ್ಲದೆ ಚೋರಾ ಫರಿ, ಐದು ಬಗೆಯ ಖಾಕ್ರಾ, ಗೋಬಾ ಪುರಿ, ಕಚೋರಿ, ಖಾರಪುರಿ, ಪಾನಿಪುರಿ, ಸೇವು....ಇತ್ಯಾದಿ ಖಾರ ತಿನಿಸುಗಳು ರುಚಿಯೇ ಬೇರೆ. ಉಪ್ಪಿನಕಾಯಿ, ಪಾಪಡ್, ಶೇಂಗಾ ಒಣ ಚಟ್ನಿ, ಚಹಾಕ್ಕೆ ಬಳಸುವ ಮಸಾಲಾ, ಅಡುಗೆಗೆ ಉಪಯೋಗಿಸುವ ಮಸಾಲಾ... ಮುಂತಾದವು ಬಲು ಜನಪ್ರಿಯ.

೮೨ ವರ್ಷಗಳ ವೃದ್ಧೆ ಸೋನ್‌ಬಾಯಿ ಮಾ ಇಲ್ಲಿನ ದುಡಿಮೆಯಲ್ಲೇ ಖುಷಿ ಕಾಣುತ್ತಿದ್ದಾರೆ. ಕೌಟುಂಬಿಕ ಸಮಸ್ಯೆಗಳಿಂದ ಬಳಲುತ್ತಿರುವ ಸಮಾಜದ ಮಹಿಳೆಯರು ಎಲ್ಲೆಲ್ಲೋ ಚಾಕರಿ, ನೌಕರಿ ಮಾಡುವ ಬದಲು ತಮ್ಮ ಮಂಡಳದಲ್ಲೇ ದುಡಿಯಲಿ ಎಂಬ ಮಾನವೀಯ ದೃಷ್ಟಿ, ಚೆಯರ್ ಪರ್ಸನ್ ಇಂದಿರಾ ಧರಮ್‌ಸಿ, ಅಧ್ಯಕ್ಷೆ ಕುಸುಮ್ ಬೆನ್ ಪಟೇಲ್, ಕಾರ್ಯದರ್ಶಿ ದೀಪ್ತಿಕೋನಾ, ಖಜಾಂಚಿ ದಮಯಂತಿ ಬೆನ್ ಧರಮ್‌ಸಿ ಈ ಗೃಹ ಉದ್ಯೋಗ ಕೇಂದ್ರವನ್ನು ಮುನ್ನಡೆಸಿ ಕೊಂಡು ಹೋಗುತ್ತಿದ್ದಾರೆ. ಮಾರಾಟ, ಲೆಕ್ಕಪತ್ರ, ಲಾಭ ನಷ್ಟದ ಲೆಕ್ಕಾಚಾರ, ದುಡಿಮೆಯ ಪಗಾರ...ಎಲ್ಲ ಉಸ್ತುವಾರಿಯನ್ನು ಮಹಿಳೆಯರೇ ನೋಡಿ ಕೊಳ್ಳುತ್ತಿದ್ದಾರೆ.

ನಮ್ಮ ಪ್ರಶ್ನೆಗಳಿಗೆ ಲವಲವಿಕೆಯಿಂದ ಉತ್ತರಿಸುತ್ತಾ, ಕೆಲವು ಚಿತ್ರಗಳನ್ನು ತೆಗೆಯಲು ಅನುವು ಮಾಡಿಕೊಟ್ಟ ಪ್ರಜ್ಞಾ ಚೆಡಾ ಹೇಳಿದರು:

"ನಾವು ದೂರದ ಗುಜರಾತ್ ರಾಜ್ಯದ ಕಛ್ ಜಿಲ್ಲೆಯಿಂದ ಬಂದವರು. ಆದರೂ ಅಲೆಮಾರಿ ಗಳು ಎಂಬ ಭಾವನೆ ನಮ್ಮಲ್ಲಿಲ್ಲ. ಸುಮಾರು ೧೫೦ ಕುಟುಂಬಗಳು ಇಲ್ಲಿದ್ದು ನಾವೆಲ್ಲ ಈ ನೆಲ, ಜಲ, ಜನರನ್ನು ಪ್ರೀತಿಸುತ್ತೇವೆ. ಕನ್ನಡವನ್ನು ಕೆಲ ಮಟ್ಟಿಗೆ ಕಲಿತಿದ್ದೇವೆ. ನಮ್ಮ ಸಾಂಸ್ಕೃತಿಕ ಸದಭಿರುಚಿ, ಉದ್ಯೋಗದಲ್ಲಿನ ಪರಿಣತಿ, ಬಗೆಬಗೆಯ ಭಕ್ಷ್ಯಗಳ ರುಚಿಯನ್ನು ಇಲ್ಲಿನ ಜನ ಮೆಚ್ಚಿಕೊಂಡಿದ್ದಾರೆ. ಅದೇ ನಮಗೆ ಸಂತೋಷ"

ಕನ್ನಾಡಿನಲ್ಲಿ ನೆಲೆಸಿರುವ ಕಛ್ ಮಹಿಳೆಯರ ಶಿಸ್ತು, ಶ್ರಮ, ಸಂಘಟನೆ ನಿಜಕ್ಕೂ ಅನುಕರಣೀಯ. ನಾವು ನಮ್ಮ ನಡುವಣ ಅಡ್ಡಗೋಡೆಗಳನ್ನು ಒಡೆದು, ಕೆಡಹುವುದು ಎಂದು....?

ವಂಚಿತ

ಶತಕದಿಂದ
ವಂಚಿತನಾಗುವ
ಬ್ಯಾಟ್ಸ್‌ಮನ್
ಪ್ರೇಮ ಪತ್ರ
ಕೊಡದೆ
ನಿರಾಶನಾಗಿ
ಬಂದ
ಪ್ರೇಮಿಯಂತೆ!

-ಲೀಲಾಧರ ಮಾ. ಭಂಡಾರಿ

ಹಣ ಉಳಿತಾಯದ ಉಪಾಯಗಳು

೧. ಸ್ವಲ್ಪವೇ ಹಣ ಖರ್ಚಾದರೂ ಎಚ್ಚರಿಕೆಯಿಂದಿರಿ. ಏಕೆಂದರೆ ಚಿಕ್ಕ ಚಿಕ್ಕ ತೂತುಗಳು ದೊಡ್ಡ ದೊಡ್ಡ ಹಡಗುಗಳನ್ನೇ ಮುಳುಗಿಸುತ್ತದೆ.

೨. ಅತಿಥಿಗಳಿಗೆ ಅತಿಯಾದ ಉಪಚಾರ ಮಾಡದಿರಿ. ಉಪಚಾರ ಹಿತಮಿತವಾಗಿರಲಿ. ಏಕೆಂದರೆ ಕೆಲವೊಮ್ಮೆ ಅವರಿಗೆ ಅವಶ್ಯವಿರದಿದ್ದರೂ ಒತ್ತಾಯ ಮಾಡಿದಾಗ ಅವರು ಸೌಜನ್ಯಕ್ಕೆ ಮಾತ್ರ ಆತಿಥ್ಯ ಸ್ವೀಕರಿಸುತ್ತಾರೆ. ಹೀಗೆ ಒತ್ತಾಯ ಮಾಡದಿದ್ದರೆ ಹಣವನ್ನೂ ಉಳಿಸಬಹುದು. ಅತಿಥಿಗಳೊಂದಿಗೆ ಸೌಹಾರ್ದಯುತವಾಗಿಯೂ ಇರಬಹುದು.

೩. ಸಾಮಾನ್ಯವಾಗಿ ಪಟ್ಟಣ ವಾಸಿಗಳು ಸಮೀಪದ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವಾಗ ಸಿಟಿ ಬಸ್‌ಗಳನ್ನು ಬಳಸುತ್ತಾರೆ. ಅದರ ಬದಲು ನಡೆದೇ ಹೋಗುವದರಿಂದ ಆರೋಗ್ಯವೂ ಸುಧಾರಿಸುತ್ತದೆ. ಜೊತೆಗೆ ಹಣವೂ ಉಳಿತಾಯವಾಗುತ್ತದೆ.

೪. ಎಲ್ಲಿಗಾದರೂ ಹೋಗುವದಿದ್ದರೆ ಸಾಮಾನ್ಯ ವೇಗದ ಬಸ್ಸುಗಳಲ್ಲೇ ಪ್ರಯಾಣಿಸಿ. ಸಾಮಾನ್ಯ ವೇಗದ ಬಸ್ಸುಗಳ ದರ ಕಡಿಮೆ ಇರುವದರಿಂದ ಹಣ ಉಳಿತಾಯ ಮಾಡಬಹುದು. ಅಲ್ಲದೇ ಸಾಮಾನ್ಯ ವೇಗದ ವಾಹನಗಳಿಂದ ಅಪಘಾತದ ಅಪಾಯ ಕಡಿಮೆಯಾಗಿರುತ್ತದೆ.

೫. ಕೆಲಸದ ಮ್ಯಾಲೆ ಬೇರೆ ಕಡೆಗೆ ಹೋದಾಗ ಊಟ ಅಥವಾ ತಿಂಡಿಯ ಸಮಯ ಹೊರಗೇ ಇರುವಂತಿದ್ದರೆ ಮನೆಯಿಂದಲೇ ಊಟ ಅಥವಾ ತಿಂಡಿ ಪದಾರ್ಥಗಳನ್ನು ಕೊಂಡೊಯ್ಯಿರಿ. ಇದರಿಂದ ಹೆಚ್ಚು ವ್ಯಯ ತಡೆಯಬಹುದಲ್ಲದೇ ಆರೋಗ್ಯಕ್ಕೂ ಹಿತಕರ.

೬. ಬೇರೆ ಊರುಗಳಲ್ಲಿ ಒಂದು ಅಥವಾ ಎರಡು ದಿನ ವಸತಿ (ತಂಗು) ಇರುವಂತಿದ್ದರೆ ಅಲ್ಲಿನ ಪರಿಚಿತರ ಅಥವಾ ಸಂಬಂಧಿಕರ ಮನೆಯಲ್ಲಿ ತಂಗಲು ವ್ಯವಸ್ಥೆ ಮಾಡಿಕೊಳ್ಳಿ. ಇದರಿಂದ ವಸತಿ ಗೃಹದ (lodging) ಬಾಡಿಗೆಯನ್ನು ಉಳಿಸಬಹುದು ಅಲ್ಲದೇ ಅವರೊಂದಿಗಿನ ನಂಟು ಹತ್ತಿರವಾಗುತ್ತದೆ.

೭. ಮನೆ ಬಿಟ್ಟು ಹೊರಗೆ ಇರುವಾಗ ಪದೇ ಪದೇ ಚಹಾ ಕುಡಿಯುವದು, ಉಪಹಾರ ಮಾಡುವದನ್ನು ನಿಲ್ಲಿಸಿ. ಊಟದ ಸಮಯವಿದ್ದರೆ ಊಟ ಮಾಡಿರಿ. ಇದರಿಂದ ಹೊಟ್ಟೆಯೂ ತುಂಬುತ್ತದೆ. ಉಪಹಾರಕ್ಕೆ ಖರ್ಚು ಮಾಡುವ ಹಣಕ್ಕಿಂತ ಕಡಿಮೆ ಹಣದಲ್ಲಿ ಊಟ ದೊರೆಯುತ್ತದೆ. ಹಣವೂ ಉಳಿತಾಯವಾಗುತ್ತದೆ. ಆರೋಗ್ಯವೂ ಸುಧಾರಿಸುತ್ತದೆ.

೮. ಯಾವಾಗಲೂ ಅತ್ಯವಶ್ಯಕ ವಸ್ತುಗಳನ್ನು ಮಾತ್ರ ಖರೀದಿಸಿ. ಅನವಶ್ಯಕ ಮತ್ತು ಕಡಿಮೆ ಉಪಯೋಗಿ ವಸ್ತುಗಳಿಂದ ಅಧಿಕ ಪ್ರಮಾಣದಲ್ಲಿ ಹಣ ವ್ಯಯವಾಗುತ್ತದೆ.

೯. ಹೊರಗೆ ಹೋಗುವಾಗ ಕೆಲಸಕ್ಕೆ ಅವಶ್ಯವಿದ್ದಷ್ಟು ಮಾತ್ರ ಹಣ ತೆಗೆದುಕೊಂಡು ಹೋಗಿರಿ. ಕೈಯ್ಯಲ್ಲಿ ಹಣ ಹೆಚ್ಚಿಗೆ ಇದ್ದರೆ ಖರ್ಚು ಮಾಡುವ ಸಂಭವ ಇದ್ದೇ ಇರುತ್ತದೆ.

೧೦. ಅತ್ಯವಶ್ಯಕ ವಸ್ತುಗಳಲ್ಲಿ ಯಾವಾಗಲೂ ಉತ್ತಮ ಗುಣ ಮಟ್ಟದ ವಸ್ತುಗಳನ್ನೇ ಕೊಳ್ಳಿರಿ. ಇದರಿಂದ ವಸ್ತುಗಳು ಹೆಚ್ಚಿಗೆ ಬಾಳಿಕೆ ಬರುವವಲ್ಲದೇ ಪದೆ ಪದೇ ರಿಪೇರಿಯ/ಖರೀದಿಸುವ ಅವಕಾಶವೇ ಇರುವದಿಲ್ಲ.

ಶಿವಕುಮಾರ ಎಸ್. ಪೂಜಾರ

ವಿದ್ಯೆ-ಉದ್ಯೋಗ

ಕೆ. ಎ. ಎಸ್. ಪರೀಕ್ಷೆಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ನಾಗರೀಕ ಸೇವೆಯ ಪತ್ರಾಂಕಿತ ಸಮೂಹ 'ಎ' ಮತ್ತು 'ಬಿ' ಹುದ್ದೆಗಳ ನೇಮಕಾತಿ ಕುರಿತಂತೆ ನಡೆಸಲಾಗುವ ಪೂರ್ವಭಾವಿ (ಪ್ರಿಲಿಮನರಿ) ಪರೀಕ್ಷೆಗೆ ಅರ್ಜಿಯನ್ನು ನಿಗದಿಪಡಿಸಿದ ನಮೂನೆಯಲ್ಲಿ ಆಹ್ವಾನಿಸಿದೆ.

ವಿಶೇಷ ಸೂಚನೆ

೧. ಭರ್ತಿ ಮಾಡಿದ ಅರ್ಜಿಯನ್ನು ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಛೇರಿಯಲ್ಲಿ ಮತ್ತು ಪ್ರಾಂತೀಯ ಕಛೇರಿಗಳಲ್ಲಿ ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: ೧೬.೦೪.೯೮

೨. ಸಕಾಲದಲ್ಲಿ ಆಯೋಗದ ಕಛೇರಿಗಳಲ್ಲಿ ತಲುಪುವುದನ್ನು ಸಾಧ್ಯಗೊಳಿಸಲು ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕದವರೆಗೆ ಕಾಯದೆ ಸಾಧ್ಯವಾದಷ್ಟು ಮೊದಲೇ ಆಯೋಗದ ಕಛೇರಿಗಳಿಗೆ ಅರ್ಜಿಗಳನ್ನು ಸಲ್ಲಿಸುವಂತೆ ಅಭ್ಯರ್ಥಿಗಳಿಗೆ ತಿಳಿಯಪಡಿಸಿದೆ. ಅಂಚೆ ರವಾನೆಯಲ್ಲಿ ಆಗುವ ವಿಳಂಬಕ್ಕೆ ಕರ್ನಾಟಕ ಲೋಕ ಸೇವಾ ಆಯೋಗ ಜವಾಬ್ದಾರಿ ಅಲ್ಲ. ಮೇಲೆ ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

೩. ಪೂರ್ವಭಾವಿ (ಪ್ರಿಲಿಮನರಿ ಎಕ್ಸಾಮಿನೇಷನ್) ಪರೀಕ್ಷೆಯನ್ನು ದಿನಾಂಕ: ೨೬.೭.೧೯೯೮ರಂದು ಮತ್ತು ಮುಖ್ಯ ಪರೀಕ್ಷೆ (ಮೈನ್ ಎಕ್ಸಾಮಿನೇಷನ್) ಯನ್ನು ಡಿಸೆಂಬರ್ ೧೯೯೮ರಲ್ಲಿನಡೆಸಲು ಉದ್ದೇಶಿಸಿದೆ. ಈ ಪರೀಕ್ಷಾ ದಿನಾಂಕಗಳು ಆಯೋಗದ ಯಕ್ತಾಯುಕ್ತ ವಿವೇಚನೆಯನುಸಾರ ಬದಲಾವಣೆಗೊಳಪಟ್ಟಿರುತ್ತವೆ.

ಸಮೂಹ 'ಎ'

ಕ್ರಮ ಸೇವೆಗಳು ಮತ್ತು ಉದ್ಯೋಗಿ ಸಂಖ್ಯೆ ವೃಂದ

೧. ಕರ್ನಾಟಕ ಆಡಳಿತ ಸೇವೆ (ಕಿರಿಯ ಶ್ರೇಣಿ)
ಸಹಾಯಕ ಆಯುಕ್ತರು

೨. ಕರ್ನಾಟಕ ರಾಜ್ಯ ಲೆಕ್ಕ ಪತ್ರ ಸೇವೆ ಸಹಾಯಕ ನಿಯಂತ್ರಕರು

೩. ಕರ್ನಾಟಕ ವಾಣಿಜ್ಯ ತೆರಿಗೆ ಸೇವೆ ವಾಣಿಜ್ಯ ತೆರಿಗೆ
ಸಹಾಯಕ ಆಯುಕ್ತರು

೪. ಕರ್ನಾಟಕ ಖಜಾನೆ ಸೇವೆ ಖಜಾನೆ ಅಧಿಕಾರಿ

೫. ಕರ್ನಾಟಕ ಕಾರ್ಮಿಕ ಸೇವೆ ಸಹಾಯಕ ಕಾರ್ಮಿಕ ಆಯುಕ್ತರು

೬. ಕರ್ನಾಟಕ ಸಾಮಾನ್ಯ ಸೇವೆ (ಸಮಾಜ ಕಲ್ಯಾಣ ಶಾಖೆ) ಜಿಲ್ಲಾ ಪ. ಜಾ. ಮತ್ತು ಪ.ಪಂ. ಕಲ್ಯಾಣಾಧಿಕಾರಿ

ಸಮೂಹ 'ಬಿ'

೧. ಕರ್ನಾಟಕ ಆಡಳಿತ ಸೇವೆ ತಹಶೀಲ್ದಾರ್

೨. ಕರ್ನಾಟಕ ವಾಣಿಜ್ಯ ತೆರಿಗೆ ಸೇವೆ ವಾಣಿಜ್ಯ ತೆರಿಗೆ ಅಧಿಕಾರಿಗಳು

೩. ಕರ್ನಾಟಕ ಕಾರ್ಮಿಕ ಸೇವೆ ಕಾರ್ಮಿಕ ಅಧಿಕಾರಿ

೪. ಕರ್ನಾಟಕ ಕಾನೂನು ಮಾಪನ ಶಾಸ್ತ್ರ ಸೇವೆ
ಕಾನೂನು ಮಾಪನಾ ಸಹಾಯಕ ನಿರ್ದೇಶಕರು

೫. ಕರ್ನಾಟಕ ಸಹಕಾರಿ ಸೇವೆ ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟ್ರಾರ್

೬. ಕರ್ನಾಟಕ ಅಬ್ಕಾರಿ ಸೇವೆ ಅಬ್ಕಾರಿ ಉಪ ಅಧೀಕ್ಷಕ

೭. ಕರ್ನಾಟಕ ಉದ್ಯೋಗ ಮತ್ತು ತರಬೇತಿ ಸೇವೆ ಉದ್ಯೋಗಾಧಿಕಾರಿ

೮. ಕರ್ನಾಟಕ ಸಾಮಾನ್ಯ ಸೇವೆ ಯುವಜನ ಸೇವೆಗಳ ನಿರ್ದೇಶನಾಲಯ) ಯುವಜನ ಸೇವಾ ಸಹಾಯಕ ನಿರ್ದೇಶಕ ಜಿಲ್ಲಾ ಯುವಜನ ಸೇವಾಧಿಕಾರಿ: ವ್ಯವಸ್ಥಾಪಕ, ರವೀಂದ್ರ ಕಲಾಕ್ಷೇತ್ರ

೯. ಕರ್ನಾಟಕ ಸಾಮಾನ್ಯ ಸೇವೆ ಭೂಮಾಪನ ಕಂದಾಯ ವ್ಯವಸ್ಥೆ ಭೂ ದಾಖಲೆಗಳು
ಭೂ ದಾಖಲೆಗಳ ಸಹಾಯಕ ನಿರ್ದೇಶಕರು

೧೦. ಕರ್ನಾಟಕ ಪೌರಾಡಳಿತ ಸೇವೆ
ಮುಖ್ಯಾಧಿಕಾರಿ ಶ್ರೇಣಿ -೧

೧೧. ಕರ್ನಾಟಕ ಖಜಾನೆ ಸೇವೆ ಸಹಾಯಕ ಖಜಾನೆ ಅಧಿಕಾರಿ

೧೨. ಕರ್ನಾಟಕ ಮಾರುಕಟ್ಟೆ ಸೇವೆ ಜಿಲ್ಲಾ ಮಾರುಕಟ್ಟೆ ಅಧಿಕಾರಿ

೧೩. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಸೇವೆ
ಆಹಾರ ಮತ್ತು ಸಾ.ಸ. ಸಹಾಯಕ ನಿರ್ದೇಶಕರು

೧೪. ಕರ್ನಾಟಕ ಸಹಕಾರಿ ಲೆಕ್ಕ ಪರಿಶೋಧನಾ ಸೇವೆ ಸಹಾಯಕ ಮುಖ್ಯ ಲೆಕ್ಕ ಪರಿಶೋಧಕರು

೧೫. ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಾನೀಯ ಸರ್ಕಾರ ಶಾಖೆ) ಕ್ಷೇತ್ರಾಭಿವೃದ್ಧಿ ಅಧಿಕಾರಿ

ಶೈಕ್ಷಣಿಕ ವಿದ್ಯಾರ್ಹತೆ: ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಆಗಿರಬೇಕು ಅಥವಾ ಸರ್ಕಾರವು ಅಂತಹ ಪರೀಕ್ಷೆಗೆ ಸಮಾನವೆಂದು ಅಂಗೀಕರಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು.

ವಯೋಮಿತಿ: ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕನಿಷ್ಠ ೨೧ ವರ್ಷ ವಯೋಮಿತಿಯನ್ನು ಪೂರೈಸಿರತಕ್ಕದ್ದು. ಹಾಗೂ ೧. ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ೩೩ ವರ್ಷಗಳನ್ನು ಮೀರಿರಕೂಡದು. ೨. ಪ್ರವರ್ಗ - IIಎ, IIಬಿ, IIIಎ ಮತ್ತು IIIಬಿ ಮೀಸಲಾತಿಯ ಅಭ್ಯರ್ಥಿಗಳು ೩೬ ವರ್ಷಗಳನ್ನು ಮೀರಿರಕೂಡದು. ೩. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-Iರ ಅಭ್ಯರ್ಥಿಗಳು ೩೮ ವರ್ಷಗಳನ್ನು ಮೀರಿರಬಾರದು. ೪. ಮಾಜಿ ಸೈನಿಕರಿಗೆ ಅವರು ಸೈನ್ಯದಲ್ಲಿ ಸೇವೆ ಸಲ್ಲಿಸಿರುವ ವರ್ಷಗಳಷ್ಟು ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

ಪರೀಕ್ಷಾ ಶುಲ್ಕ: ಪೂರ್ವಭಾವಿ ಪರೀಕ್ಷೆಯನ್ನು ತೆಗೆದುಕೊಳ್ಳಬಯಸುವ ಪ್ರತಿ ಅಭ್ಯರ್ಥಿಗಳು ೪೦-೦೦ (ನಲವತ್ತು) ರೂಪಾಯಿಗಳ ಪರೀಕ್ಷಾ ಶುಲ್ಕವನ್ನು ಆಯೋಗಕ್ಕೆ ಸಲ್ಲಿಸಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ- I ಮತ್ತು ಮಾಜಿ ಸೈನಿಕ ಗುಂಪಿಗೆ ಸೇರಿದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

ಸೂಚನೆ : ೧. ಪರೀಕ್ಷಾ ಶುಲ್ಕವನ್ನು ಕ್ರಾಸ್ ಮಾಡಿದ ಭಾರತೀಯ ಅಂಚೆ ಆದೇಶ ಅಥವಾ ಬ್ಯಾಂಕ್ ಡ್ರಾಫ್ಟ್‌ನ ಮುಖಾಂತರ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರಿಗೆ ಪಾವತಿಯಾಗುವಂತೆ ಪಡೆದಿರಬೇಕು. ಅಂಚೆ ಆದೇಶ ಮತ್ತು ಬ್ಯಾಂಕ್ ಡ್ರಾಫ್ಟ್‌ಗಳನ್ನು ದಿನಾಂಕ: ೦೯.೦೪.೯೮ ನಂತರ ಮತ್ತು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಿರುವಂತೆ ಪಡೆದಿರಬೇಕು. ಇವುಗಳನ್ನಲ್ಲದೆ ಇನ್ನಿತರ ರೀತಿಯಲ್ಲಿ ಪಾವತಿ ಮಾಡಿದ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ.

ಪರೀಕ್ಷಾ ವಿಧಾನ : ಈ ಸ್ಪರ್ಧಾತ್ಮಕ ಪರೀಕ್ಷೆಯು ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ) ನಿಯಮ ೧೯೯೭ರ ಷೆಡ್ಯೂಲ್-IIರಲ್ಲಿ ತಿಳಿಸಿರುವಂತೆ ೨ (ಎರಡು) ಹಂತಗಳನ್ನು ಒಳಗೊಂಡಿರುತ್ತದೆ. ೧. ಪೂರ್ವಭಾವಿ ಪರೀಕ್ಷೆ (ಪ್ರಿಲಿಮನರಿ ಎಕ್ಸಾಮಿನೇಷನ್) - ಪ್ರಧಾನ ಪರೀಕ್ಷೆಗೆ (ಮೈನ್ ಎಕ್ಸಾಮಿನೇಷನ್) ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ. ೨. ಪ್ರಧಾನ ಪರೀಕ್ಷೆ (ಮೈನ್ ಎಕ್ಸಾಮಿನೇಷನ್) (ಲಿಖಿತ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆ)- ಅಭ್ಯರ್ಥಿಗಳನ್ನು ವಿವಿಧ ಸೇವೆಗಳು ಮತ್ತು ಹುದ್ದೆಗಳಿಗೆ ಆಯ್ಕೆ ಮಾಡುವ ಸಲುವಾಗಿ,

ಪೂರ್ವಭಾವಿ ಪರೀಕ್ಷೆ (ಪ್ರಿಲಿಮನರಿ ಎಕ್ಸಾಮಿನೇಷನ್)

ಪೂರ್ವಭಾವಿ ಪರೀಕ್ಷೆಯು, ವಸ್ತುನಿಷ್ಠ ಮಾದರಿಯ ಎರಡು ಪತ್ರಿಕೆಗಳನ್ನು (ಬಹು ಆಯ್ಕೆ) (ಮಲ್ಟಿಪಲ್ ಚಾಯ್ಸ್) ಹೊಂದಿರುತ್ತದೆ.

ಪತ್ರಿಕೆ ೧- ಜನರಲ್ ಸ್ಟಡೀಸ್ : ೧೫೦ ಅಂಕಗಳು ೨ ಗಂಟೆಗಳ ಅವಧಿ

ಪತ್ರಿಕೆ ೨- ಒಂದು ಐಚ್ಛಿಕ ವಿಷಯ .. ೩೦೦ ಅಂಕಗಳು ೨ ಗಂಟೆಗಳ ಅವಧಿ

ಟಿಪ್ಪಣಿ : ೧. ಪ್ರಶ್ನೆಪತ್ರಿಕೆಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಹೀಗೆ ಎರಡು ಮಾಧ್ಯಮಗಳಲ್ಲಿ ಮುದ್ರಿಸಲಾಗಿರುತ್ತದೆ.

೨. ಅಭ್ಯರ್ಥಿಗಳು ಒಂದು ಪ್ರಶ್ನೆ ಪತ್ರಿಕೆಯನ್ನುಸಂಪೂರ್ಣವಾಗಿ ಕನ್ನಡದಲ್ಲಿಅಥವಾ ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ಉತ್ತರಿಸಬಹುದು.

ಪರೀಕ್ಷಾ ಕೇಂದ್ರ : ಪೂರ್ವಭಾವಿ (ಪ್ರಿಲಿಮನರಿ ಎಕ್ಸಾಮಿನೇಷನ್) ಪರೀಕ್ಷೆಯನ್ನು ಈ ಕೆಳಗೆ ನಮೂದಿಸಿರುವ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಯಾವುದಾದರೂ ಒಂದು ಪರೀಕ್ಷಾ ಕೇಂದ್ರವನ್ನು ಮಾತ್ರ ಆಯ್ಕೆ ಮಾಡಬೇಕು.

೧. ಬೆಂಗಳೂರು, ೨.ಧಾರವಾಡ:ಹುಬ್ಬಳ್ಳಿ, ೩. ಗುಲ್ಬರ್ಗಾ, ೪.ಮೈಸೂರು

ಮೀಸಲಾತಿ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ: I, IIಎ, IIಬಿ, IIIಎ, IIIಬಿ, ಮಾಜಿ ಸೈನಿಕರು ಮತ್ತು ಮಹಿಳೆಯರಿಗೆ ಜಾರಿಯಲ್ಲಿರುವ ಸರ್ಕಾರಿ ಆದೇಶಗಳಂತೆ ಹುದ್ದೆಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ.

ಅರ್ಜಿಗಳ ಲಭ್ಯತೆ

೧. ಪೂರ್ವಭಾವಿ (ಪ್ರಿಲಿಮನರಿ ಎಕ್ಸಾಮಿನೇಷನ್) ಪರೀಕ್ಷೆ ೧೯೯೮ರ ಪ್ರವೇಶ ಕೋರುವುದಕ್ಕಾಗಿ, ಕಿರು ಹೊತ್ತಿಗೆಗಳನ್ನೊಳಗೊಂಡ ಅರ್ಜಿಗಳನ್ನು ೨೫ ರೂ. ಬೆಲೆಗೆ ಈ ಕೆಳಕಂಡ ಸ್ಥಳಗಳಲ್ಲಿ ಪಡೆಯಬಹುದು.

೧. ಸರ್ಕಾರಿ ವಿಭಾಗೀಯ ಪುಸ್ತಕ ಮಳಿಗೆಗಳು

೨. ಸರ್ಕಾರಿ ಜಿಲ್ಲಾ ಪುಸಕ್ತ ಮಳಿಗೆಗಳು

೩. ಅಧಿಕೃತ ಪುಸ್ತಕ ಮಾರಾಟಗಾರರು / ಏಜೆಂಟರು

೪. ರಾಜ್ಯದ ಕೇಂದ್ರ ಪುಸ್ತಕ ಮಳಿಗೆ, ಬೆಂಗಳೂರು.

ಅರ್ಜಿ ಸಲ್ಲಿಸುವ ವಿಧಾನ :

I. ಪೂರ್ವಭಾವಿ (ಪ್ರಿಲಿಮನರಿ ಎಕ್ಸಾಮಿನೇಷನ್) ಪರೀಕ್ಷೆಗೆ ಖುದ್ದಾಗಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ಕಛೇರಿಗಳಲ್ಲಿ ತಮ್ಮ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

೧. ಕಾರ್ಯದರ್ಶಿ,ಕರ್ನಾಟಕ ಲೋಕ ಸೇವಾ ಆಯೋಗ, ಪಾರ್ಕ್ ಹೌಸ್, ಬೆಂಗಳೂರು - ೫೬೦ ೦೦೧. ಅಥವಾ

೨. ಸಹಾಯಕ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ,ವಿಭಾಗೀಯ ಕಛೇರಿ, ಸಿಟಿಎಸ್. ನಂ. ೭೩೧೩:೧೦, ಮಹಂತೇಶನಗರ, ಬೆಳಗಾವಿ - ೫೯೦ ೦೧೬. ಅಥವಾ

೩. ಸಹಾಯಕ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ವಿಭಾಗೀಯ ಕಛೇರಿ, ನಂ. ೧೮, ಬಿ, ಎರಡನೇ ಮಹಡಿ, ವಿಕಾಸ ಭವನ, ಮಿನಿ ವಿಧಾನಸೌಧ, ಗುಲ್ಬರ್ಗಾ- ೫೮೫ ೧೦೨. ಅಥವಾ

೪.ಸಹಾಯಕ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ವಿಭಾಗೀಯ ಕಛೇರಿ, ನಂ. ೯೦೫, ನ್ಯೂ ಕಾಂತರಾಜ್ ಅರಸ್ ರಸ್ತೆ, ಕುವೆಂಪು ನಗರ, ಮೈಸೂರು - ೫೭೦ ೦೨೩.

II. ಪೂರ್ವಭಾವಿ ಪರೀಕ್ಷೆಗೆ ಅರ್ಜಿಯನ್ನು ಅಂಚೆಯ ಮೂಲಕ ಸಲ್ಲಿಸಬಯಸುವ ಅಭ್ಯರ್ಥಿಗಳು ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಪಾರ್ಕ್ ಹೌಸ್, ಬೆಂಗಳೂರು- ೫೬೦ ೦೦೧, ಈ ವಿಳಾಸಕ್ಕೆ ಮಾತ್ರ ಕಳುಹಿಸತಕ್ಕದ್ದು. **ಆಯೋಗದ ವಿಭಾಗೀಯ ಕಛೇರಿಗಳಿಗೆ** ಅಂಚೆಯ ಮೂಲಕ ಅರ್ಜಿಗಳನ್ನು ಕಳುಹಿಸಬಾರದು.

ಸಿ. ಆರ್. ಮಲ್ಲಿಕಾರ್ಜುನ ಚಿಂತಾಮಣಿ

ನಾನು ಬಿ.ಕಾಂ ಮೊದಲ ವರ್ಷದ ವಿದ್ಯಾರ್ಥಿ. ಮುಂದಿನ ವ್ಯಾಸಂಗದಲ್ಲಿ ಆಸಕ್ತಿ ಇಲ್ಲ. ನನಗೆ ಯಾವುದಾದರೂ ಉದ್ಯೋಗಾವಾಕಾಶಗಳಿರುವ ಡಿಪ್ಲೊಮಾ ಕೋರ್ಸ್ ಅದರ ಅವಧಿ, ಪ್ರವೇಶಕ್ಕೆ ಶೇಕಡಾ ಅಂಕ ಮತ್ತು Associated Company Secretary exam (A.C.S) ಬಗ್ಗೆ ವಿವರಗಳನ್ನು ತಿಳಿಸಿ. ಇದಕ್ಕೆ ಅಂಚೆ ಶಿಕ್ಷಣ ಇದೆಯೇ ಮತ್ತು ಕಾಲೇಜು ವಿವರಗಳು ಹಾಗೂ ಅದರ ಸಂಪೂರ್ಣ ವಿಳಾಸ ತಿಳಿಸಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಹೆಚ್ಚಿನ ಉದ್ಯೋಗಾವಕಾಶಗಳಿರುವ ಡಿಪ್ಲೊಮಾ ಕೋರ್ಸ್‌ಗಳೆಂದರೆ, ಕಂಪ್ಯೂಟರ್ ಸೈನ್ಸ್ ಪ್ರಿಂಟಿಂಗ್ ಟೆಕ್ನಾಲಜಿ ಇನ್ನು ಮುಂತಾದವು. ಇವುಗಳ ಅವಧಿ ಮೂರು ವರ್ಷವಾಗಿರುತ್ತದೆ. ಇದಕ್ಕೆ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಬೇಕಿರುತ್ತದೆ. ಇವುಗಳ ಪ್ರವೇಶ ಸಾಮಾನ್ಯವಾಗಿ ಮೇ-ಜೂನ್ ತಿಂಗಳಲ್ಲಿ ನಡೆಯುತ್ತವೆ. ಇದರ ಬಗ್ಗೆ ಏಪ್ರಿಲ್ ತಿಂಗಳಲ್ಲಿ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಕೊಡಲಾಗುವುದು. ಅಂಕಗಳ ಆಧಾರದ ಮೇಲೆ ಸಂದರ್ಶನ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

Associated Company Secretary (ACS) ಪರೀಕ್ಷೆಗೆ ಕನಿಷ್ಠ ಪಿ.ಯು.ಸಿ. ಪಾಸಾಗಿರಬೇಕು. ಫೌಂಡೇಷನ್ ಕೋರ್ಸನ್ನು ಪಾಸ್ ಮಾಡಬೇಕಾಗುತ್ತದೆ. ನೀವು ಪದವೀಧರರಾಗಿದ್ದಲ್ಲಿ ಫೌಂಡೇಷನ್ ಕೋರ್ಸ್‌ನ್ನು ಮಾಡಬೇಕಾದ ಅವಶ್ಯಕತೆ ಇರುವುದಿಲ್ಲ. ಇದಕ್ಕೆ ಹೆಚ್ಚಿನ ವಿವರಗಳಿಗಾಗಿ ICSI ಇನ್‌ಸ್ಟಿಟ್ಯೂಟ್, ೩ನೇ ಮಹಡಿ, ಐ.ಸಿ.ಎಸ್.ಐ.ಹೌಸ್, ೨೨, ಇನ್‌ಸ್ಟಿಟ್ಯೂಶನಲ್ ಏರಿಯಾ, ಲೋದಿ ರೋಡ್, ಹೊಸದೆಹಲಿ-೧೧೦ ೦೦೩. ಇವರನ್ನು ಸಂಪರ್ಕಿಸಿ ಅಥವಾ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ, ಮೂರನೇ ಮಹಡಿ ಹಿಂಭಾಗ, ಷರೀಪ್ ಚೇಂಬರ್, ಕನ್ನಿಂಗ್ಯಾಮ್ ರೋಡ್, ಬೆಂಗಳೂರು.



ಮಾರ್ಗದರ್ಶಿ

○ ಡಾ. ಎಸ್.ಸಿ. ಶರ್ಮಾ
ಪ್ರಾಧ್ಯಾಪಕರು
ಆರ್.ವಿ. ಇಂಜನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - ೫೬೦ ೦೫೯

ಶಿವಪ್ಪ ಹುರುಳಿಹಾಳ್, ಕೊಟ್ಟೂರು

ನಾನು ಬಿ.ಎ. ಪದವಿಯೊಂದಿಗೆ ಗ್ರಂಥಾಲಯ ವಿಜ್ಞಾನ (B.Lib & I.Sc) ಪದವಿಯಲ್ಲೂ ದ್ವಿತೀಯ ದರ್ಜೆಯೊಂದಿಗೆ ಪಾಸಾಗಿರುತ್ತೇನೆ. ನಾನು ಅಂಗವಿಕಲನಾಗಿದ್ದು (ಶ್ರವಣದೋಷ) ಕೆ.ಎ.ಎಸ್. ಪರೀಕ್ಷೆ ತೆಗೆದುಕೊಳ್ಳುವ ಉತ್ಕಟೆಚ್ಛೆ ಇದೆ. ಆದರೆ ನನ್ನ ಅಂಗವೈಕಲ್ಯದಿಂದಾಗಿ ದಿಕ್ಕುದೋಚದಾಗಿದೆ. ಅಂಗವಿಕಲರೂ (ಶ್ರವಣಹೀನರೂ) ಕೆ.ಎ.ಎಸ್. ಪರೀಕ್ಷೆ ಕಟ್ಟಬಹುದೇ? ಬಿ.ಈಡಿ. ಮಾಡಿದರೆ ಉಪಾಧ್ಯಾಯ ವೃತ್ತಿ ಲಭಿಸೀತೆ? ಅಂಗವಿಕಲರು ಯಾವ ಯಾವ ಹುದ್ದೆಗಳಿಗೆ ಅರ್ಹರು? ಎಂಬುದನ್ನು ದಯಾಮಾಡಿ ತಾವು ಸವಿವರಗಳೊಂದಿಗೆ ತಿಳಿಸಿದರೆ ತಮಗೆ ಉಪಕೃತನಾಗಿರುತ್ತೇನೆ.

ನೀವು ಬಿ.ಎ. ಪದವಿಯೊಂದಿಗೆ ಗ್ರಂಥಾಲಯ ವಿಜ್ಞಾನದಲ್ಲಿ ಪದವಿಯನ್ನು ಪಡೆದಿರುವುದರಿಂದ ಗ್ರಂಥಪಾಲಕರ ಹುದ್ದೆಗೆ ಪ್ರಯತ್ನಿಸುವುದು ಒಳ್ಳೆಯದು. ನೀವು ಕೆ.ಎ.ಎಸ್. ಅಥವಾ ಐ.ಎ.ಎಸ್. ಪರೀಕ್ಷೆಗಳನ್ನು ಬರೆಯಲು ನಿಮ್ಮ ಶ್ರವಣದೋಷ ಅಡ್ಡಿಯಾಗುವುದಿಲ್ಲ. ನೀವು ಬಿ.ಈಡಿ ಮಾಡಿದರೆ ಉಪಾಧ್ಯಾಯ ವೃತ್ತಿ ಲಭಿಸುವ ಸಾಧ್ಯತೆ ಇರುತ್ತದೆ.

ಬಿ. ಗುರುರಾಜ್, ಹುಬ್ಬಳ್ಳಿ

ನಾನು ಪಿ.ಯು.ಸಿ. (ಪಿ.ಸಿ.ಎಂ.ಬಿ.) ಆದ ಮೇಲೆ Bachelor Degree in Physiotheraphy ಮಾಡಬೇಕೆಂದಿರುವೆ, ಈ ಕೋರ್ಸ್ ಮಾಡು ವುದರಿಂದ ಉಪಯೋಗಗಳೇನು ಮತ್ತು ಇದಕ್ಕೆ ಸೇರಲು ಪಿ.ಯು.ಸಿಯಲ್ಲಿ ಎಷ್ಟು ಅಂಕಗಳನ್ನು ಗಳಿಸಬೇಕು ದಯವಿಟ್ಟು ತಿಳಿಸಿ.

Physiotheraphy ಕೋರ್ಸ್‌ನ್ನು PUC (Physics, Chemistry & Biology) ವಿಭಾಗದಲ್ಲಿ ಶೇ. ೫೦ ಅಂಕಗಳೊಂದಿಗೆ ಪಾಸಾಗಿರಬೇಕು. ಇದಕ್ಕೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಈ ಕೋರ್ಸ್‌ನ ಅವಧಿ ೩ ವರ್ಷಗಳಾಗಿರುತ್ತದೆ. ನಂತರ ೬ ತಿಂಗಳ ತರಬೇತಿಯನ್ನು ಹೊಂದಬೇಕು. ಇದು ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಹೊಂದಿರುತ್ತದೆ. ಈ ಕೋರ್ಸ್ ಇರುವ ಕೆಲವು ವಿಳಾಸಗಳು ಈ ಕೆಳಗಿನಂತೆ ಇರುತ್ತವೆ.

The Rehabilitation Council of India, 4 Vishnu Digamber Marg, New Delhi-110 002.

University of Madras,

University of Bombay at the School of Physiotheaphy, pard Christian Medical College, Vellore.

ಯಶ್‌ಪಾಲ ಎಸ್.ಪಾಟೀಲ, ಬಿಜಾಪುರ

ನಾನು ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿ, ಹಿಂದಿನ ಎರಡು ವರ್ಷದ ಫಲಿತಾಂಶ ಸೇರಿ ೪೫% ಆಗಿರುತ್ತದೆ. ಮುಂದೆ ಕ್ರಿಮಿನಾಲಜಿ (Criminology) ಓದುವ ಮನಸ್ಸು. ಆ ಕೋರ್ಸ್ ಸೇರಲು ಎಷ್ಟು ಶೇಕಡ ಅಂಕಗಳು ಬೇಕು ಮತ್ತು ಇದನ್ನು ಓದಲು ಇರುವ ವಿಶ್ವವಿದ್ಯಾಲಯದ ಬಗ್ಗೆ ಮಾಹಿತಿ ತಿಳಿಸಿ. ಕ್ರಿಮಿನಾಲಜಿ ಮುಕ್ತ ವಿಶ್ವವಿದ್ಯಾಲಯದಲ್ಲಿ ಓದಬಹುದಾ ಅಥವಾ ಇಲ್ಲ ತಿಳಿಸಿ.

ನೀವು ಕ್ರಿಮಿನಾಲಜಿ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವುದರಿಂದ ಇದರ ಹೆಚ್ಚಿನ ವಿದ್ಯಾಭ್ಯಾಸದ ಬಗ್ಗೆ ಈ ಕೆಳಗಿನ ವಿಳಾಸದಿಂದ ಮಾಹಿತಿ ಪಡೆಯಬಹುದು.

Bureu of Police Research & Development (MHA)

(Ministry of Home Affairs)

Block No.XI, 4th Floor, CGO Complex, Lodhi Road, New Delhi - 3.

ಹುಸೇನ ದರವಾನ, ರಬಕವಿ

ನಾನು ಎಸ್. ಎಸ್. ಎಲ್. ಸಿ. ಮುಗಿಸಿ ಐ.ಟಿ.ಐ.ಮಾಡಬೇಕೆಂದಿರುವೆ ಐ.ಟಿ.ಐ.ಯ ಬಗ್ಗೆ ಸಂಪೂರ್ಣ ವಿವರ ತಿಳಿಸಿ.

ನೀವು ಅಗತ್ಯವಾಗಿ ಐ.ಟಿ.ಐ. ಮಾಡಬಹುದು. ಇದರ ಬಗ್ಗೆ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಅರ್ಜಿಗಳನ್ನು ಕರೆಯಲಾಗುತ್ತದೆ. ಇದಕ್ಕಾಗಿ ನೀವು ಪ್ರಮುಖ ದಿನ ಪತ್ರಿಕೆಗಳನ್ನು ಗಮನಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಐ.ಟಿ.ಐ. ಕಾಲೇಜನ್ನು ಸಂಪರ್ಕಿಸಿ.

ಎಂ. ಬಿ. ಇನಾಮತಿ ಬೆಳಥಡಿ - ಗದಗ

ನಾನು ಪಿ.ಯು.ಸಿ ದ್ವಿತೀಯ ವಿಜ್ಞಾನದಲ್ಲಿ ಪಾಸಾಗಿರುವೆ. ಹಣದ

ತೊಂದರೆಯಿಂದ ಬಿ.ಎ ಪ್ರಥಮ ವರ್ಷ ಓದುತ್ತಿದ್ದೇನೆ. ಈಗ ನನಗೆ ' ಡಿಪ್ಲೊಮಾ ಮಾಡುವ ಆಸೆ. ಆದ್ದರಿಂದ ಬಿ.ಎ ಮುಂದುವರಿಸುತ್ತ ಡಿಪ್ಲೊಮಾ ಕಲಿಯಬಹುದೆ? ದಯಮಾಡಿ ತಿಳಿಸಿ.

ನೀವು ಬಿ.ಎ. ಮುಂದುವರೆಸುತ್ತಾ ಡಿಪ್ಲೊಮಾ ಮಾಡಲು ಬರುವುದಿಲ್ಲ. ಡಿಪ್ಲೊಮಾ ಮಾಡುವ ಆಸೆ ನಿಮಗಿದ್ದಲ್ಲಿ ನೇರವಾಗಿ ಡಿಪ್ಲೋಮಾ ಮಾಡಬಹುದು.

ಸಂಗಣ್ಣ ಮೇಟಿ. ಗುಡಿಹಾಳ

ನಾನು ಬಿ.ಎ.ಯಲ್ಲಿ ಇತಿಹಾಸ, ರಾಜ್ಯಶಾಸ್ತ್ರ ಭೂಗೋಳಶಾಸ್ತ್ರ ತೆಗೆದುಕೊಂಡಿದ್ದೇನೆ. ಮುಂದೆ ಕೆ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷೆಗಳಿಗೆ ಅರ್ಹನಾಗಿರುತ್ತೇನೋ ಅಥವಾ ಇಲ್ಲ. ಇಲ್ಲವಾದರೆ ಅದಕ್ಕೆ ಯಾವ ಅರ್ಹತೆಗಳು ಇರಬೇಕು. ದಯವಿಟ್ಟು ಮಾಹಿತಿ ಕೊಡಿ.

ಕೆ.ಎ.ಎಸ್. ಅಥವಾ ಐ.ಪಿ.ಎಸ್. ಪರೀಕ್ಷೆಗೆ ಕೂರಲು ಕನಿಷ್ಠ ಯಾವುದೇ ಪದವಿಯನ್ನು ಪಡೆದಿರಬೇಕು. ನೀವು ಬಿ.ಎ.ಯಲ್ಲಿ ಇತಿಹಾಸ, ರಾಜ್ಯಶಾಸ್ತ್ರ ಭೂಗೋಳಶಾಸ್ತ್ರ ಅಧ್ಯಯನ ಮಾಡುತ್ತಿರುವುದರಿಂದ ಖಂಡಿತವಾಗಿಯೂ ನೀವು ಕೆ.ಎ.ಎಸ್.ನಲ್ಲಿ ನೀವು ಅಭ್ಯಾಸ ಮಾಡಿದ ವಿಷಯಗಳನ್ನೇ ತೆಗೆದುಕೊಳ್ಳಬಹುದು.

ಉಮೇಶ, ಚ. ಗೆದ್ದಪ್ಪನವರ ರಬಕವಿ

ನಾನು ಪಿ.ಯು.ಸಿ.ಯ ಪ್ರಥಮ ವರ್ಷದ ಕಲಾ ವಿದ್ಯಾರ್ಥಿ. ಓದಲು ಇಷ್ಟವಿಲ್ಲ. ಮಿಲಿಟರಿ ಸೇರಬೇಕೆಂದು ಆಸೆ. ಅದಕ್ಕೆ ಅರ್ಹತೆ ಮತ್ತು ವಿಳಾಸಗಳನ್ನು ತಿಳಿಸಿ.

ಮಿಲಿಟರಿ ಸೇರಬೇಕೆಂದರೆ ಕನಿಷ್ಠ ಪದವಿಯನ್ನು ಶೇ.೫೦ರ ಜೊತೆಗೆ ಎನ್.ಸಿ.ಸಿ.ಯ 'ಸಿ' ದರ್ಜೆಯ ಸರ್ಟಿಫಿಕೇಟ್ ಹೊಂದಿದ್ದರೆ ಉತ್ತಮ. ಇದಕ್ಕೆ ವಯಸ್ಸು ೧೯ ರಿಂದ ೨೫ ವರ್ಷಗಳು. ದೈಹಿಕ ಅರ್ಹತೆ ಕನಿಷ್ಠ ೪೫ ಕೆ.ಜಿ. ಹಾಗೂ ೧೫೭ ಸೆಂ.ಮೀ. ಎತ್ತರ ಇರಬೇಕು. ಇದಕ್ಕೆ ಸಂಬಂಧಪಟ್ಟಂತೆ ಜಾಹೀರಾತುಗಳನ್ನು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟವಾಗುವುದು.

ಕುಮಾರ ಕಿನ್ನಾಳ

ಸರ್, ನಾನು ಪಿ.ಯು.ಸಿ. ದ್ವಿತೀಯ ವರ್ಷ (ಶಿಕ್ಷಣ) ಓದಿದ್ದೇನೆ. ಮುಂದೆ ಓದಲು ಅನುಕೂಲವಿಲ್ಲ. ಮನೆಯಲ್ಲಿದ್ದೇ ಯಾವುದಾದರೂ ಕೋರ್ಸ್‌ಗಳನ್ನು ಮಾಡಬೇಕೆಂದಿರುವೆ. ಆ ರೀತಿಯಲ್ಲಿ ಯಾವುದ್ಯಾವುದು ಕೋರ್ಸ್‌ಗಳನ್ನು ಮಾಡಬಹುದು ಮತ್ತು ಬಿ.ಬಿ.ಎಂ. ಅಥವಾ ಬಿ.ಹೆಚ್.ಎಂ. ಕೋರ್ಸ್‌ಗಳನ್ನು ಮಾಡಬೇಕೆಂದಿದ್ದೇನೆ. ಇವುಗಳನ್ನು ಮಾಡಲು ಪಿ.ಯು.ಸಿ.ಯಲ್ಲಿ ಎಷ್ಟು ಅಂಕಗಳನ್ನು ತೆಗೆದುಕೊಂಡಿರಬೇಕು ಹಾಗೂ ಈ ಪರೀಕ್ಷೆಗಳು ಯಾವಾಗ ಇರುತ್ತವೆ? ಎಲ್ಲಿ ಇರುತ್ತವೆ? ಅರ್ಜಿಗಳು ಎಲ್ಲಿ ಸಿಗುತ್ತವೆ ಎಂಬುದನ್ನು ವಿವರಗಳೊಂದಿಗೆ ತಿಳಿಸುವಿರೆಂದು ನಂಬಿರುತ್ತೇನೆ.

ಪಿ.ಯು.ಸಿ.ಯ ನಂತರ ಬಿ.ಬಿ.ಎಂ. ಕೋರ್ಸ್‌ನ್ನು ಅಣ್ಣಾಮಲೈ ಯೂನಿವರ್ಸಿಟಿಯಿಂದ Distance Education ಮುಖಾಂತರ ಮಾಡಬಹುದು. ಇದಕ್ಕೆ ಪಿ.ಯು.ಸಿ. ಪಾಸ್ ಅರ್ಹತೆಯಾಗಿರುತ್ತದೆ. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಹೆಚ್ಚಿನ ವಿಷಯಕ್ಕೆ ಕೆಳಗಿನ ವಿಳಾಸವನ್ನು ಸಂಪರ್ಕಿಸಿ.

Directorate of Distance Education

Annamalai University, Annamalainager-608 002

ದೊಡ್ಡೇಶ, ಕುರುಮನಾಳ, ಬಳೂಟಗಿ

ಬಿ.ಎ. ಮೊದಲ ವರ್ಷದ ವಿದ್ಯಾರ್ಥಿಯಾದ ನಾನು ಹಿಂದಿ ಪ್ರಚಾರ ಸಮಿತಿಯು ನಡೆಸುವ ಪರೀಕ್ಷೆಗಳನ್ನು ಉತ್ತಮ ದರ್ಜೆಯಲ್ಲಿ ಪಾಸಾಗಿರುವೆ. ಹಿಂದಿ ಬಿ.ಈಡಿ. ಮಾಡಬೇಕಾದರೆ ಯಾವ ಕಾಲೇಜಿಗೆ ಸೇರಬೇಕು ಮತ್ತು ಇದು ಅನುಕೂಲವಾಗುತ್ತದೆಯೆ? ತಿಳಿಸಿ.

ನೀವು ಹಿಂದಿ ಪರೀಕ್ಷೆಗಳನ್ನು ಉತ್ತಮವಾಗಿ ಪಾಸಾಗಿರುವುದರಿಂದ, ಹಿಂದಿ ಬಿ.ಈಡಿ. ಮಾಡಬಹುದು. ಕರ್ನಾಟಕದಲ್ಲೇ ಅನೇಕ ಹಿಂದಿ ಬಿ.ಈಡಿ. ಕಾಲೇಜ್‌ಗಳಿವೆ. ಇವುಗಳಲ್ಲಿ ಯಾವ ಕಾಲೇಜ್ ತಮಗೆ ಅನುಕೂಲವೋ ಆ ಕಾಲೇಜ್‌ಗೆ ಸೇರಿಕೊಳ್ಳಬಹುದು. ಹಿಂದಿ ಬಿ.ಈಡಿ. ಮಾಡುವುದರಿಂದ ಹಿಂದಿ ಶಿಕ್ಷಕರ ಹುದ್ದೆ ದೊರೆಯುವ ಸಾಧ್ಯತೆ ಇರುತ್ತದೆ.

ಗೋಪಾಲ ಗಿ.ಬ.ರಾಠೋಡ್, ಬೋಡಬಂಡಾ

ನಾನು ಈಗ ಮಾಡುತ್ತಿರುವ J.O.C Automobileಮುಗಿಸಿ ಮುಂದೆ ಬಿ.ಇ. (ಸಿವಿಲ್) ಮಾಡುಬೇಕೆಂದು ಗುರಿ ಇದೆ. ನಾನು ಈ ಪದವಿಗೆ ಅರ್ಹನೋ ಅಥವಾ ನಾನು ಅರ್ಹನಾಗುವ ಇನ್ನಿತರ ಪದವಿಗಳಾವವು? ದಯಮಾಡಿ ಸೂಚಿಸಿ.

ನೀವು J.O.C. Automobile ಮುಗಿಸಿ ಬಿ.ಇ. (ಸಿವಿಲ್) ಮಾಡಲು ಬರುವುದಿಲ್ಲ. ನೀವು ಬಿ.ಇ. (ಸಿವಿಲ್) ಮಾಡಬೇಕಾದರೆ PUC (PCMS) or Diploma in Automobile ಮುಗಿಸಿದ್ದರೆ ಮಾತ್ರ ಬಿ.ಇ. (ಸಿವಿಲ್) ಮಾಡಲು ಅರ್ಹರು. JOC Automobile ನಂತರ ಬಿ.ಎ. ಪದವಿ ಮಾಡಬಹುದು.

ಹೆಸರಿಲ್ಲ, ಮುಂಡಗೋಡ

ಎನ್‌ಫೋರ್ಸಮೆಂಟ ಆಫೀಸರ್ಸ್ ಹಾಗೂ ಅಸಿಸ್ಟೆಂಟ ಅಕೌಂಟೆಂಟ್ಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ಒದಗಿಸಿ. ಸ್ಪೆಶಲ್ ರೈಲ್ವೆ ಅಪ್ರೆಂಟೀಸ್ ಪರೀಕ್ಷೆಗಳಿಗಾಗಿ ಅರ್ಜಿ ಎಲ್ಲಿ ದೊರೆಯುತ್ತವೆ. ದಯವಿಟ್ಟು ತಿಳಿಸಿ.

ಅಸಿಸ್ಟಂಟ್ ಅಕೌಂಟೆಂಟ್ ಪರೀಕ್ಷೆಗಳನ್ನು Staff Selation Commission ರವರು ನಡೆಸುತ್ತಾರೆ. ಇದನ್ನು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಇದು ಒಂದು ಸ್ಪರ್ಧಾತ್ಮಕ ಪರೀಕ್ಷೆಯಾಗಿರುತ್ತದೆ. ಇದರ ಸಂಬಂಧ ದಿನ ಪತ್ರಿಕೆಗಳನ್ನು ಗಮನಿಸಬೇಕು. ಸ್ಪೆಶಲ್ ರೈಲ್ವೆ ಅಪ್ರೆಂಟಿಸ್ ಪರೀಕ್ಷೆಗಳನ್ನು UPSCರವರು ನಡೆಸುತ್ತಾರೆ. ಇದರ ಬಗ್ಗೆ ತಿಳಿಯಲು ಪ್ರಮುಖ ದಿನಪತ್ರಿಕೆಗಳನ್ನು ಅಥವಾ Employment Newsನ್ನು ಗಮನಿಸತಕ್ಕದ್ದು.

ರಮೇಶ ಶಿವನಗೌಡರ, ಯಲಬುರ್ಗಾ

ನಾನು ಬಿ.ಇ. (ಮೆಕ್ಯಾನಿಕಲ್) ಮುಗಿಸಿದ್ದೇನೆ. ಮುಂದೆ ಎಂ.ಬಿ.ಎ. ಮಾಡಬೇಕಾಗಿದೆ. ಮೆರಿಟ್ ಸೀಟ್ ಸಿಗದಿದ್ದರೆ ಡೊನೇಷನ್ ಸೀಟು ಪಡೆಯಬೇಕೆಂದಿದ್ದೇನೆ. ಬೆಂಗಳೂರು ಹಾಗೂ ಪುಣೆಯಲ್ಲಿನ ಒಳ್ಳೆಯ ಕಾಲೇಜುಗಳ ವಿಳಾಸ-ವಿವರ ತಿಳಿಸಿ. ಎಂ.ಬಿ.ಎ.ಯನ್ನು ಯಾವ ಟ್ರೇಡ್‌ನಲ್ಲಿ ಮಾಡಿದರೆ ಉತ್ತಮ ಭವಿಷ್ಯವಿದೆ?

ನೀವು ಎಂ.ಬಿ.ಎ. ಕೋರ್ಸನ್ನು Production, Finance, Marketing ಮಾಡುವುದು ಉತ್ತಮ. ಇದಕ್ಕಾಗಿ ನೀವು ಬೆಂಗಳೂರು ವಿಶ್ವವಿದ್ಯಾಲಯವನ್ನು List of Collegesಗಾಗಿ ಸಂಪರ್ಕಿಸಿರಿ. ಇದು ಮುಗಿದ ನಂತರ ಒಳ್ಳೆಯ ಅವಕಾಶಗಳು ಇರುತ್ತವೆ. ಮುಂದುವರಿಸಿ.

ನಿತ್ಯಾನಂದ, ಇಂದಿರಾನಗರ

ನಾನು ಪಿ.ಯು.ಸಿ. (ಕಲೆ) ಉತ್ತೀರ್ಣನಾಗಿದ್ದೇನೆ. ನನಗೆ ಫಾರೆಸ್ಟರ್ ಆಗುವ ಆಸೆ. ಈ ಹುದ್ದೆಗೆ ಇರುವ ದೈಹಿಕ ಹಾಗೂ ಶೈಕ್ಷಣಿಕ ಅರ್ಹತೆಗಳನ್ನು ತಿಳಿಸಿ. ನೇಮಕಾತಿಗಾಗಿ ಯಾವಾಗ ಕರೆ ನೀಡುತ್ತಾರೆ ಎಂಬುದರ ಬಗ್ಗೆಯೂ ತಿಳಿಸಿ.

ನೀವು Forest Officer ಆಗಬೇಕಾದಲ್ಲಿ Civil services ರವರು ನಡೆಸುವ ಪರೀಕ್ಷೆಯನ್ನು ಎದುರಿಸಬೇಕಾಗುವುದು. ಈ ಪರೀಕ್ಷೆ ಪ್ರತಿ ವರ್ಷ ಆಗಸ್ಟ್ ತಿಂಗಳಲ್ಲಿ ನಡೆಯುತ್ತದೆ. ಇದಕ್ಕೆ ನೀವು ಪದವಿಯನ್ನು ಮುಗಿಸಿರಬೇಕು. ವಯೋಮಿತಿ ೨೧-೨೮ರವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ದಿನಪತ್ರಿಕೆಯನ್ನು ವೀಕ್ಷಿಸಿ.

ರಮೇಶ್ ಎಫ್. ಮುದ್ದೇರ, ಅರಳೀಕಟ್ಟಿ

ದ್ವಿತೀಯ ಪಿ.ಯು.ಸಿ. (ಕಲೆ)ಯಲ್ಲಿ ಶೇಕಡಾ ೫೯ ಅಂಕ ಗಳಿಸಿ ಈಗ ಟಿ.ಸಿ.ಎಚ್.ಸೇರಬೇಕಾಗಿದೆ. ಖಾಸಗಿ ಸಂಸ್ಥೆಯಲ್ಲಿ ಡೊನೇಷನ್ ಕೊಟ್ಟು ಟಿ.ಸಿ.ಎಚ್. ಮಾಡಬೇಕೆಂದಿದ್ದೇನೆ. ಇಂಥ ಖಾಸಗಿ ಸಂಸ್ಥೆಯಲ್ಲಿ ತರಬೇತಿ ಮುಗಿಸಿದರೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ಹುದ್ದೆ ಸಿಗುತ್ತದೆಯೋ?

ನೀವು ಟಿ.ಸಿ.ಹೆಚ್. ಕೋರ್ಸನ್ನು ಸರಕಾರದ ಅಂಗೀಕೃತ ಕಾಲೇಜಿನಲ್ಲಿ ಮಾಡಿದಲ್ಲಿ ನಿಮಗೂ ಕೂಡಾ ಸಮಾನವಾದ ಮಾನ್ಯತೆ ಕೊಡುತ್ತಾರೆ. ಇದಕ್ಕೆ ಯಾವ ರೀತಿಯ ಸಂದೇಹ ಬೇಡ, ಮುಂದುವರಿಸಿ.

ಸುಷ್ಮಾ ಹೂಗಾರ, ಊರಿಲ್ಲ

ವಾಣಿಜ್ಯ ಶಾಸ್ತ್ರದಲ್ಲಿ ಪಿ.ಯು.ಸಿ. ಮಾಡಿದ್ದೇನೆ. ಮುಂದೆ ಓದಬೇಕು ಎನ್ನುವಷ್ಟರಲ್ಲಿ ನನ್ನ ಮದುವೆಯಾಯಿತು. ನನಗೆ ಟೈಪಿಂಗ್ ಕೂಡ ಬರುತ್ತದೆ. ದುಡಿದು ಹಾಕದ ಪತಿ ನನ್ನಿಂದ ದೂರವಾಗಿದ್ದಾರೆ. ಅದಕ್ಕಾಗಿ ನಾನೀಗ ನೌಕರಿ ಮಾಡಬೇಕಾಗಿದೆ. ನನ್ನ ವಿದ್ಯಾರ್ಹತೆಗೆ ತಕ್ಕ ನೌಕರಿಗಾಗಿ ಏನು ಮಾಡಬೇಕು?

ನೀವು ಯಾವುದಾದರೂ ಕಂಪನಿ/ಆಫೀಸ್‌ಗಳಲ್ಲಿ ಟೈಪಿಸ್ಟ್ ಹುದ್ದೆಗಾಗಿ ಪ್ರಯತ್ನಿಸಿ ಹಾಗೂ ಅಂಚೆ ತೆರಪಿನ ಮೂಲಕ ಬಿ.ಎ. ಪದವಿಯನ್ನು ಮಾಡಿ. ಇದರ ಆಧಾರದ ಮೇಲೆ ನಿಮಗೆ ಒಳ್ಳೆಯ ಕೆಲಸ ಸಿಗಬಹುದು. ಪ್ರಯತ್ನಿಸಿ.

ಹೆಸರಿಲ್ಲ, ಬಾಗಲಕೋಟೆ

ಬಿ.ಎಫ್.ಎ. ಎಂದರೆ ಏನು? ಇದು ಎಷ್ಟು ವರ್ಷದ ಕೋರ್ಸು? ಪೂರ್ಣ ವಿಳಾಸ ತಿಳಿಸಿ.

B.F.A. ಎಂದರೆ Bachelor in Fine Arts. ಇದು ಸುಮಾರು ೫ ವರ್ಷದ ಕೋರ್ಸ್ ಆಗಿದ್ದು, ಇದು ಸುಮಾರು ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದ್ದು, ವಿವರಗಳಿಗಾಗಿ ನಿಮ್ಮ ಹತ್ತಿರದ Universityಯನ್ನು ಸಂಪರ್ಕಿಸಿರಿ.

ರಮೇಶ ಕಾಮಗೊಂಡ, ಬಿಜಾಪುರ

ನಾನೀಗ ಬಿ.ಎಸ್.ಸಿ. (ಫಿಜಿಕ್ಸ್, ಮ್ಯಾಥ್ಸ್, ಎಲೆಕ್ಟ್ರಾನಿಕ್ಸ್) ಓದುತ್ತಿದ್ದೇನೆ. ಪದವಿ ನಂತರ ಇಲೆಕ್ಟ್ರಾನಿಕ್ಸ್‌ನಲ್ಲಿ ಹೆಚ್ಚಿನ ವ್ಯಾಸಂಗ ಮಾಡಬೇಕೆಂಬ ಆಸೆ. ಒಳ್ಳೆಯ ಉದ್ಯೋಗಾವಕಾಶ ಕಲ್ಪಿಸುವ ಯಾವುದೇ ಎಲೆಕ್ಟ್ರಾನಿಕ್ಸ್ ಕೋರ್ಸುಗಳು (ಇಂಜಿನಿಯರಿಂಗ್ ಹೊರತಾಗಿ) ಇದ್ದರೆ ತಿಳಿಸಿ.

ನೀವು ಸ್ನಾತಕೋತ್ತರದಲ್ಲಿ ಎಲೆಕ್ಟ್ರಾನಿಕ್ಸ್‌ನ್ನು ಮೇಜರ್ ವಿಷಯವಾಗಿ ತೆಗೆದುಕೊಂಡು ಅಭ್ಯಾಸಿಸಿ. ಇದನ್ನು ಒಳ್ಳೆಯ ಅಂಕಗಳಲ್ಲಿ ಪೂರ್ಣಗೊಳಿಸಿದರೆ ಉದ್ಯೋಗವಕಾಶಗಳು ಹೆಚ್ಚುತ್ತವೆ. ಜಾಹೀರಾತಿನ ಮೇರೆಗೆ ನೀವು ಅರ್ಜಿ ಸಲ್ಲಿಸಬಹುದು. ಇದಕ್ಕಾಗಿ ನೀವು ದಿನ ಪತ್ರಿಕೆಗಳನ್ನು ವೀಕ್ಷಿಸುವುದು ಉಪಯೋಗಕಾರಿ.

ಎನ್.ಸಿ. ಮೋಹನ್, ಕೋಲಾರ

ನಾನು ತೃತೀಯ ಬಿ.ಎಸ್.ಸಿ. (ಸಿ.ಬಿ.ಝಡ್) ಓದುತ್ತಿದ್ದೇನೆ. ಎಂ.ಬಿ.ಬಿ.ಎಸ್. ಪದವಿ ಪಡೆದು ಎಂ.ಎಸ್. ಮಾಡಲು ಇಚ್ಛಿಸಿದ್ದೇನೆ. ಇದಕ್ಕೆ ನಾನು ಬಿ.ಎಸ್.ಸಿ. ಯಲ್ಲಿ ಎಷ್ಟು ಅಂಕ ಪಡೆದಿರಬೇಕು? ಪ್ರವೇಶ ಪರೀಕ್ಷೆ (like C.E.T.) ಇರುತ್ತದೆಯೋ?

ನೀವು ಅಗತ್ಯವಾಗಿ M.B.B.S. ಮಾಡಬಹುದು. ನೀವು M.B.B.S. ಕೋರ್ಸನ್ನು Arm Medical Forces, Pune ಯಲ್ಲಿ ಮಾಡಿದರೆ ಉಚಿತ ವಾಗಿ ವಿದ್ಯಾಭ್ಯಾಸ ನೀಡುತ್ತಾರೆ. ಕೆಲವು ನಿಬಂಧನೆಗಳಿಗೆ ಇದು ಒಳಪಟ್ಟಿರುತ್ತದೆ. ಇಲ್ಲವೆ Medical Council, Directorateರವರಿಗೆ ಅರ್ಜಿ ಸಲ್ಲಿಸಬೇಕು. ಶೇಕಡ ಅಂಕಗಳನ್ನು ಪರಿಗಣಿಸಿ ಸೀಟು ಕೊಡಲಾಗುವುದು.

ಎಂ. ನಾಗಭೂಷಣ, ಯಲವಾರ

ನನ್ನ ವಯಸ್ಸು ೨೨ ವರ್ಷ. ನಾನು ೧೯೯೨ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರತಿಶತ ೭೫ ಅಂಕ ಗಳಿಸಿ ತೇರ್ಗಡೆಯಾದೆ. ಆದರೆ ನನ್ನ ಕೌಟುಂಬಿಕ ಮತ್ತು ಆರ್ಥಿಕ ತೊಂದರೆಗಳಿಂದ ಪಿ.ಯು.ಸಿ. ಮಾಡದೆ ಮನೆಯಲ್ಲೇ ಇದ್ದುಬಿಟ್ಟೆ. ಈಗ ನನ್ನ ಸ್ನೇಹಿತರೆಲ್ಲ ಅವರವರ ಶಕ್ತ್ಯಾನುಸಾರ ಪದವಿ ಮಾಡುತ್ತಿದ್ದಾರೆ. ನಾನು ವಯಸ್ಸಿನ ಆಧಾರದ ಮೇಲೆ ಮೈಸೂರು ವಿಶ್ವವಿದ್ಯಾಲಯದ ಅಂಚೆ ಶಿಕ್ಷಣದ ಪ್ರಥಮ ಬಿ.ಎ. ಪರೀಕ್ಷೆ ತೆಗೆದುಕೊಂಡಿರುತ್ತೇನೆ. ೩ ವರ್ಷದಲ್ಲಿ ಮೂರು ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲೇ ತೇರ್ಗಡೆಯಾಗುತ್ತೇನೆಂಬ ಭರವಸೆ ನನಗಿದೆ.

೧. ನಾನು ಎಲ್ಲ ವಿದ್ಯಾರ್ಥಿಗಳಂತೆ ಸರ್ಕಾರಿ ಕೆಲಸ ಸೇರಲು ಅರ್ಹನಾಗಿರುತ್ತೇನೆಯೇ?

೨. ಪಿ.ಯು.ಸಿ. ಮಾಡದೆ ನೇರವಾಗಿ ವಯಸ್ಸಿನ ಆಧಾರದ ಮೇಲೆ ಡಿಗ್ರಿ ಮಾಡಿದರೆ ಮುಂದೆ ಪಿ.ಯು.ಸಿ. ಸರ್ಟಿಫಿಕೇಟ್ ತೊಂದರೆ ಕೊಡುವುದೇ?

೩. ನಾನು III A (C Group) ವಿದ್ಯಾರ್ಥಿ. ನನಗೆ ಪೋಲೀಸ್ ಡಿಪಾರ್ಟ್‌ಮೆಂಟ್ ಸೇರಬೇಕೆಂಬ ಹಂಬಲ.

ಹಾಗೆಯೇ ಐ.ಎ.ಎಸ್. ಪರೀಕ್ಷೆಯನ್ನು ಎದುರಿಸಬೇಕೆಂದಿರುವೆ.

೧. ಹೌದು, ನಿಮಗೆ ಸಮಾನವಾದ ಅವಕಾಶ ಕೊಡಲಾಗುತ್ತದೆ.

೨. ಇಲ್ಲ. ಇಂತಹ ಯಾವ ರೀತಿ ಸಂದೇಹ ಬರುವುದಿಲ್ಲ.


೩. ಅರ್ಜಿ ಆಹ್ವಾನಿಸಿದ್ದಲ್ಲಿ, ನೀವು ಅರ್ಜಿಯನ್ನು ಸಲ್ಲಿಸಬಹುದು. ಅಗತ್ಯವಾಗಿ ಐ.ಎ.ಎಸ್. ಪರೀಕ್ಷೆಯನ್ನು ಕೂಡಾ ಬರೆಯಬಹುದು.

ಮಾರ್ಗದರ್ಶಿ ವಿಭಾಗಕ್ಕೆ ಕಳುಹಿಸುವ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ :

ವಿಳಾಸ:
ಬಿಸಿಲ ಬದುಕು ಮಾಸಪತ್ರಿಕೆ
ಮಾರ್ಗದರ್ಶಿ ವಿಭಾಗ, ಅಂಚೆ ಪೆಟ್ಟಿಗೆ ೭೯೫೧
ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯

ಶ್ರೀ ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ.

ಲಕ್ಷ್ಮೇಶ್ವರ - ೫೮೨೧೧೬.



ಜಿಲ್ಲಾ: ಗದಗ, ರಾಜ್ಯ : ಕರ್ನಾಟಕ

ಶ್ರೀ ಗೂ. ಫ. ಉಪನಾಳ, ಮಾಜಿ ಶಾಸಕರು ಇವರಿಂದ ೧೯೮೧ರಲ್ಲಿ ಸ್ಥಾಪಿಸಲ್ಪಟ್ಟಿತು. ೧೯೯೪ರಲ್ಲಿ ರಾಷ್ಟ್ರಪತಿಗಳಿಂದ ಅಂಗವಿಕಲರಿಗೆ ಉದ್ಯೋಗ ಒದಗಿಸಿದ್ದಕ್ಕಾಗಿ ಅತ್ಯುತ್ತಮ ಉದ್ಯೋಗಪತಿ ಪ್ರಶಸ್ತಿ ಪಡೆದಿದೆ.

ಹತ್ತಿ ಬೆಳೆಗಾರರ ಹಾಗೂ ನೇಕಾರರ ಏಳ್ಗೆಯೇ ನಮ್ಮ ಮುಖ್ಯ ಗುರಿ. ಗ್ರಾಮಾಂತರ ಪ್ರದೇಶದ ಜನರಿಗೆ ನಿರಂತರ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಅತ್ಯಾಧುನಿಕ ಮಿಶನರಿಗಳನ್ನು ಹೊಂದಿದ್ದು, ಉತ್ತಮ ಮಟ್ಟದ ನೂಲು ಉತ್ಪಾದಿಸಲಾಗುತ್ತಿದೆ. ಈಚಲಕರಂಜಿ, ಬನಹಟ್ಟಿ, ಕಲಕತ್ತಾ, ಮಲಗಾಂವ್ ಮುಂತಾದ ಕಡೆಗೆ ಮಾರಾಟ ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಶ್ರೇಷ್ಠ ಮಟ್ಟದ ನೂಲು ಎಂದು ಹೆಸರಾಗಿದೆ. ವಿದೇಶಕ್ಕೆ ನೂಲು ರಫ್ತು ಮಾಡಲಾಗುತ್ತಿದೆ.

೨/೨೦s, ೨೦s, ೨, /೪೦s, ೪೦s, ೬೦ ಮತ್ತು ೨/೬೦s ನಂಬರಿನ ಕೋನ್ ಹಾಗೂ ಹ್ಯಾಂಕದಲ್ಲಿ
ಉತ್ತಮ ಮಟ್ಟದ ನೂಲಿಗಾಗಿ ಸಂಪರ್ಕಿಸಿರಿ :

ಶ್ರೀ ಸಿ.ಬಿ. ಬಳ್ಳಾರಿ, ಬಿ.ಕಾಂ
ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು.

ಶ್ರೀ ಎಮ್. ಎಫ್. ಪಾಟೀಲ
ವೈಸ್ ಚೇರಮನ್,
ಸಾ॥ ಯರಗುಪ್ಪಿ.

ಶ್ರೀ ಗೂ. ಫ. ಉಪನಾಳ
ಚೇರಮನ್/ಮಾಜಿ ಶಾಸಕರು,
ಸಾ॥ ಲಕ್ಷ್ಮೇಶ್ವರ.

ನಿರ್ದೇಶಕರು

1. ಶ್ರೀ ಬಿ.ಸಿ. ಕಲ್ಮಠ — ಸಾ॥ ಧಾರವಾಡ
2. ಶ್ರೀ ವಿ. ಬಿ. ಜೋಶಿ — ಸಾ॥ ಲಕ್ಷ್ಮೇಶ್ವರ
3. ಶ್ರೀ ಜಿ. ಎಸ್. ಪಾಟೀಲ — ಸಾ॥ ಲಕ್ಷ್ಮೇಶ್ವರ
4. ಶ್ರೀ ಎಮ್. ಸಿ. ಪಾಟೀಲ — ಸಾ॥ ಬಿಸ್ನಳ್ಳಿ
5. ಶ್ರೀ ಡಿ. ಬಿ. ಬಳಿಗಾರ — ಸಾ॥ ಲಕ್ಷ್ಮೇಶ್ವರ
6. ಶ್ರೀ ಬಿ. ವಿ. ಯರಗುಪ್ಪಿ — ಸಾ॥ ಮಾಡಳ್ಳಿ
7. ಶ್ರೀ ಎಸ್. ಎಮ್. ಕಾಳೆ — ಸಾ॥ ರಾಮಗೇರಿ
8. ಶ್ರೀ ಎಫ್. ಸಿ. ಹಿರೇಮಠ — ಸಾ॥ ಕುರಬರ ಮಲ್ಲೂರ
9. ಶ್ರೀ ಬಿ. ಎಸ್. ಮೆಣಸಿನಕಾಯಿ — ಸಾ॥ ತಿರ್ಲಾಪುರ
10. ಶ್ರೀ ಆರ್. ಆರ್. ಕುಡವಕ್ಕಲಿಗೇರ — ಸಾ॥ ಬಸವನಾಳ
11. ಶ್ರೀ ಎನ್. ಬಿ. ಪವಾರ — ಸಾ॥ ನದಿನೀರಲಗಿ
12. ಶ್ರೀ ಬಿ. ಟಿ. ಹಾವೇರಿ — ಸಾ॥ ಹೆಬ್ಬಾಳ
13. ಶ್ರೀಮತಿ ಲಕ್ಷ್ಮವ್ವ ಕೋಂ ರಾಮಣ್ಣ ಲಮಾಣಿ ಸಾ॥ ಶಿಗ್ಲಿ
14. ಶ್ರೀ ಎಫ್.ಸಿ. ಗುಡಗೇರಿ, ಕೆ. ಸಿ.ಸಿ ಬ್ಯಾಂಕ ಧಾರವಾಡ ಪ್ರತಿನಿಧಿ ಸಾ॥ ಹುಲಗೂರ

ಸರಕಾರಿ ಪ್ರತಿನಿಧಿಗಳು

1. ಶ್ರೀ ಎ. ಎ. ಪಠಾಣ — ಸಾ॥ ಶಿರಹಟ್ಟಿ
2. ಶ್ರೀ ಮಹಾದೇವಪ್ಪ ಬಡ್ನಿ — ಸಾ॥ ಸುಗ್ನಳ್ಳಿ
3. ಶ್ರೀ ಪುಟ್ಟಪ್ಪ ದೊ . ಕಟಗಿ — ಸಾ॥ ಪರುಸತಿಹಾಳ
4. ಶ್ರೀ ಬಿ. ಜಿ. ಗೌರಿಮನಿ — ಸಾ॥ ಚೆನ್ನೂರ
5. ಶ್ರೀ ಮಹದೇವಪ್ಪ ನಿಂ. ಮೆಣಸಿನಕಾಯಿ ಸಾ॥ ಉಣಕಲ್
6. ಶ್ರೀ ಶಿವಯೋಗಿ ಮಂಟೂರಶೆಟ್ಟರ — ಸಾ॥ ಮಂಟೂರ
7. ಶ್ರೀ ಶಂಕ್ರಪ್ಪ ಹ. ಪವಾರ — ಸಾ॥ ಗಳಗಿಹೂಲಿಕೊಪ್ಪ

ಉಪನ್ಯಾಸಕರಾಗಲು ಅರ್ಹತಾ ಪರೀಕ್ಷೆ (NET)

ಭಾರತೀಯ ಉನ್ನತ ಶಿಕ್ಷಣ ಪದ್ಧತಿಯು ದೇಶದಲ್ಲಿಯೇ ಮಹತ್ವದ ವ್ಯವಸ್ಥೆಗಳಲ್ಲಿ ಒಂದಾಗಿದೆ. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಅದು ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಾ ಬಾಗಿದೆ. ೧೯೫೦-೫೧ರ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತದಲ್ಲಿ ಕೇವಲ ೨೮ ವಿಶ್ವವಿದ್ಯಾಲಯಗಳು, ೬೯೫ ಪ್ರಥಮ ದರ್ಜೆಯ ಕಾಲೇಜುಗಳು ಹಾಗು ಅವುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಅಭ್ಯರ್ಥಿಗಳ ಸಂಖ್ಯೆಯು, ೧,೭೪,೦೦೦ದಷ್ಟು ಇದ್ದಿತು. ಇಂದು ಸುಮಾರು ೩೦೦ ಕ್ಕಿಂತ ಹೆಚ್ಚಿಗೆ ವಿಶ್ವವಿದ್ಯಾಲಯಗಳು, ೮೨೦೦ ಕಾಲೇಜುಗಳು ಹಾಗು ೫ ಮಿಲಿಯನ್ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ತೊಡಗಿದ್ದಾರೆ. ಆಯೋಗ (U.G.C)ದ ಚೇರ್‌ಮನ್‌ರಾಗಿದ್ದ ಡಾ. ಸಿ.ಡಿ. ದೇಶ್‌ಮುಖ್ ಈ ಬಗೆಯ ಬೆಳವಣಿಗೆಯನ್ನು ಹತ್ತಿಕ್ಕಲೇಬೇಕೆಂದು ಎಚ್ಚರಿಸಿ ದಾಗ್ಯೂ ಪ್ರತಿ ವರ್ಷ ದೇಶದಲ್ಲಿ ೨೦೦ ಹೊಸ ಕಾಲೇಜುಗಳು ಹುಟ್ಟುತ್ತಲೇ ಇವೆ. ವೈದ್ಯಕೀಯ ಮತ್ತು ತಂತ್ರಜ್ಞಾನ ವಿಷಯಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳ ಸಂಖ್ಯೆ ಶೇ.೩.೪ ರಿಂದ ೪.೯ ರಷ್ಟು ಇದ್ದರೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳ ಸಂಖ್ಯೆ ಶೇ.೮೦ರಷ್ಟಿದೆ. ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚಿದಷ್ಟು ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂಬುದು ನಿರ್ವಿವಾದ. ಸಂಸ್ಥೆಗಳಲ್ಲಿನ ಸೀಮಿತ ಸೌಲಭ್ಯಗಳಿಂದಾಗಿ ಶಿಕ್ಷಣ ಕ್ಷೇತ್ರಗಳಲ್ಲಿಯ ಎಲ್ಲ ಬಗೆಯ ಆದರ್ಶಗಳು ಅಧೋಗತಿಯ ದಾರಿಯನ್ನು ತುಳಿಯುತ್ತಿವೆ. ಸಿರಿವಂತ ಮಕ್ಕಳು ಓದುತ್ತಿರುವ ವಿದ್ಯಾಸಂಸ್ಥೆಗಳು ಸುಸಜ್ಜಿತ ಹಾಗು ದುಬಾರಿಗೆ ಪ್ರಸಿದ್ಧಿ ಪಡೆದ ಸಂಸ್ಥೆಗಳಾಗಿವೆ. ಬಡವರ ಮಕ್ಕಳು ಉಪನ್ಯಾಸಕರ ಕೊರತೆ ಇರುವ, ಕನಿಷ್ಠ ಸೌಲಭ್ಯಗಳೂ ಇಲ್ಲದ ಶಿಕ್ಷಣ ಸಂಸ್ಥೆಗಳಲ್ಲಿಯೇ ಓದಬೇಕಾದ ಪರಿಸ್ಥಿತಿ ಸ್ವಾತಂತ್ರ್ಯ ಸಿಕ್ಕು ೫೦ ವರ್ಷಗಳಾದರೂ ಹಾಗೆಯೇ ಇದೆ ಮತ್ತು ಈ ತಾರತಮ್ಯ ಹೆಚ್ಚುತ್ತಲೇ ಇದೆ. ಸಮಾಜದ ಬೆಳವಣಿಗೆಗೂ ಸಹಕಾರಿಯಾಗಬಲ್ಲ ಹಾಗೂ ವೈಯಕ್ತಿಕ ಜೀವನವೂ ತೃಪ್ತಿಕರವಾಗಬಲ್ಲ ಶಿಕ್ಷಣದ ಅವಶ್ಯಕತೆಯಿದೆ. ಬೌದ್ಧಿಕವಾಗಿ ಜಾಗೃತರಾಗಿರುವಂತಹ, ದೈಹಿಕವಾಗಿ ಬಲ ಶಾಲಿಯೂ ನೈತಿಕವಾಗಿ ಸರಿಯಾದ ಮಾರ್ಗದಲ್ಲಿಯೂ ಸೂಕ್ಷ್ಮವಾದ ಸೌಂದರ್ಯ ಪ್ರಜ್ಞೆಯನ್ನು ಹೊಂದಿದವರಾಗಿಯೂ ಸಾಮಾಜಿಕ ಬದ್ಧತೆ ಹಾಗೂ ಆರ್ಥಿಕ ಸ್ವಾವಲಂಬನೆಯನ್ನು ಹೊಂದುವಂತಹ ಶಿಕ್ಷಣ ನೀಡಬಲ್ಲ ವಿದ್ಯಾಸಂಸ್ಥೆಗಳ ಅವಶ್ಯಕತೆಯಿದೆ.

ಉನ್ನತ ಶಿಕ್ಷಣದ ಗುಣಮಟ್ಟ

ಶಿಕ್ಷಣದ ಗುಣಮಟ್ಟವು ಕೆಳಗಿನ ಅಂಶಗಳನ್ನು ಅವಲಂಬಿಸಿದೆ

೧. ಕಲಿಸಲಿರುವ ವಿಷಯದ ಗುಣಮಟ್ಟ ಮತ್ತು ಅದನ್ನು ವಿದ್ಯಾರ್ಥಿ ಸಮೂಹಕ್ಕೆ ತಲುಪಿಸುವ ತಾಂತ್ರಿಕತೆ.
೨. ಶಿಕ್ಷಕರ ಗುಣಮಟ್ಟ
೩. ಶಿಕ್ಷಣದ ಸ್ವರೂಪ
೪. ವಿದ್ಯಾರ್ಥಿಗಳ ಗುಣಮಟ್ಟ

ಶಿಕ್ಷಣದ ಗುಣಮಟ್ಟವು ಕೇವಲ ವ್ಯಾಸಂಗ ಕ್ರಮವನ್ನೂ ಮತ್ತು ಪಠ್ಯಕ್ರಮವನ್ನು ಅವಲಂಬಿಸಿಲ್ಲ, ಅದು ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿದೆ. ಶಿಕ್ಷಕರು ತಾವು ಕಲಿತಿದ್ದನ್ನು ಸಮರ್ಥವಾಗಿ ವಿದ್ಯಾರ್ಥಿಗಳಿಗೆ ಕಲಿಸುವವರಾಗಿರಬೇಕು, ಕಲಿಯುವ ಮತ್ತು ಕಲಿಸುವ ವಿಷಯದಲ್ಲಿ ಸ್ಪರ್ಧೆ ಒಡ್ಡುವಂತಿರಬೇಕು, ಉತ್ತಮ ಶಿಕ್ಷಕನು ತನ್ನ ಜೀವನದುದ್ದಕ್ಕೂ ಉತ್ತಮ ವಿದ್ಯಾರ್ಥಿಯಾಗಿರಬೇಕು, ಸಮರ್ಪಣಾಭಾವವನ್ನು ಹೊಂದಿರಬೇಕು. ಆಸಕ್ತಿ ಹುಟ್ಟುವಂತೆ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು. ಸಮೂಹದಲ್ಲೂ ವಿಷಯದ ಬಗ್ಗೆ ಬದ್ಧತೆ ಒಡಮೂಡುವಂತೆ ಶಿಕ್ಷಣ ಕ್ಷೇತ್ರದಲ್ಲಿ ಆಗಾಗ ಉಂಟಾಗುವ ಹೊಸ ಹೊಸ ತಂತ್ರಜ್ಞಾನಗಳನ್ನು ತಕ್ಷಣವೇ ಅಳವಡಿಸಿಕೊಳ್ಳುವವನಾಗಿರಬೇಕು. ವಿದ್ಯಾರ್ಥಿಗಳಿಗೆ ಬೋಧಿಸುವಾಗ, ಸಮಸ್ಯೆಗಳನ್ನು ಬಿಡಿಸುವಲ್ಲಿ ವೈಯಕ್ತಿಕ ಹಾಗೂ ಸಮೂಹ ಚರ್ಚೆಯಲ್ಲಿ, ಪ್ರಯೋಗಾಲಯಗಳಲ್ಲಿ, ಪ್ರಾಜೆಕ್ಟ್‌ಗಳನ್ನು ಸಿದ್ಧಪಡಿಸುವಲ್ಲಿ, ಗಣಕಯಂತ್ರ, ಎಲೆಕ್ಟ್ರಾನಿಕ್ ಕ್ಷೇತ್ರದ ಸಹಾಯವನ್ನು ಪಡೆಯಲು ಉತ್ಸುಕನಾಗಿರಬೇಕು. ಹಿಂದಿನ ಕಾಲದಲ್ಲಿ ಶಿಕ್ಷಕರು ಕಡಿಮೆ ಸಂಬಳವನ್ನು ಪಡೆಯುತ್ತಿದ್ದರೂ ವೃತ್ತಿ ಗೌರವವನ್ನು ಹೊಂದಿದವರಾಗಿದ್ದರು. ವೃತ್ತಿ ವಿಷಯ ಮತ್ತು ವಿದ್ಯಾರ್ಥಿಗಳ ಬಗ್ಗೆ ಬದ್ಧತೆ ಹೊಂದಿದ್ದರು. ಇಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಆಕರ್ಷಣೀಯ ವೇತನ ನೀಡುತ್ತಿದ್ದರೂ ವೃತ್ತಿ ಗೌರವದ ಅಭಾವ ಎದ್ದು ಕಾಣುತ್ತಿದೆ. ವೃತ್ತಿಯ ಪಾವಿತ್ರತೆಯನ್ನು, ಘನತೆಯನ್ನು ಕಾಯ್ದುಕೊಂಡು ಬರುತ್ತಿರುವ ಕೆಲವು ಅಪವಾದಾತ್ಮಕ ವ್ಯಕ್ತಿಗಳಿರಬಹುದು, ಆದರೂ ಬಹುಪಾಲು ಜನ ಮನೆಪಾಠ, ಕೋಚಿಂಗ್ ಕ್ಲಾಸಸ್, ಟ್ಯುಟೋರಿಯಲ್ಸ್.... ಇತ್ಯಾದಿ ಹೆಸರಿನ ಖಾಸಗಿ ತರಬೇತಿ ಕೇಂದ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

ಒಂದು ಸಂಸ್ಥೆಯಲ್ಲಿ ಶೈಕ್ಷಣಿಕ ವಾತಾವರಣ ಹಾಗು ಅರ್ಪಣಾ ಮನೋಭಾವದ ಉಪನ್ಯಾಸಕರ ಕೊರತೆ ಇದ್ದಲ್ಲಿ ಅಲ್ಲಿ ಹೇಗಾದರೂ ಮಾಡಿ ಪರೀಕ್ಷೆಯನ್ನು ಪಾಸುಮಾಡಿ ಡಿಗ್ರಿ ಪಡೆಯುವುದೊಂದೆ ವಿದ್ಯಾರ್ಥಿ ಸಮೂಹದ ಗುರಿಯಾಗಿ ಬಿಡುತ್ತದೆ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಕಾಲೇಜಿನ ಅವಧಿಯನ್ನು ಯಾವುದಾದರೊಂದು ಕೆಲಸಕ್ಕೆ ಸೇರುವವರೆಗೆ ಕಾಲಹರಣ ಮಾಡಿ ಯಾವುದೇ ವಿಧಾನದಿಂದ ಪದವಿ ಪಡೆಯುವ ಒಂದು ಸ್ಥಳವೆಂದು ಭಾವಿಸುತ್ತಾರೆ.

ಒಟ್ಟಿನಲ್ಲಿ ಉನ್ನತ ಶಿಕ್ಷಣ ಗುಣಮಟ್ಟವು ಶಿಕ್ಷಕನಾದವನ ಸ್ಪರ್ಧಾ ಮನೋಭಾವವನ್ನು ಅವಲಂಬಿಸಿದೆ. ಈ ಹಿನ್ನೆಲೆಯಲ್ಲಿ ಎಲ್ಲಿಯೂ ಸಲ್ಲದವರನ್ನು ಶಿಕ್ಷಣ ಕ್ಷೇತ್ರಕ್ಕೆ ಬರಮಾಡಿಕೊಳ್ಳುವುದರ ಬದಲಿಗೆ ನಿಜವಾಗಿಯೂ ಕಲಿಸುವಿಕೆಯಲ್ಲಿ ಕನಿಷ್ಠ ಆಸಕ್ತಿಯಾದರೂ ಇರುವವರನ್ನು ಗುರುತಿಸಲು ಭಾರತ ಸರ್ಕಾರವು ೧೯೮೭ರಲ್ಲಿ ಹೊಸ ವೇತನಶ್ರೇಣಿಯನ್ನು ಕೊಡಮಾಡುತ್ತಲೇ ಪ್ರಥಮ ದರ್ಜೆಯ ಕಾಲೇಜುಗಳಲ್ಲಿ ಉಪನ್ಯಾಸ ಬಯಸುವವರಿಗೆ 'ರಾಷ್ಟ್ರೀಯ ಅರ್ಹತಾ ಪರೀಕ್ಷೆ (N.E.T)ಯನ್ನು ಕಡ್ಡಾಯವಾಗಿ ಪಾಸುಮಾಡಲೇಬೇಕೆಂಬ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯ ನಿರ್ದಿಷ್ಟವಾದ ನೀತಿನಿಯಮಗಳೊಂದಿಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದವರಿಂದ ಸೆಪ್ಟೆಂಬರ್ ೧೯೯೧ರಲ್ಲಿ ಕಾರ್ಯರೂಪಕ್ಕೆ ಬಂದಿತು.

NET ...SET...GO

ಇದು ಯಾವುದೇ ಆಟದ ಮೈದಾನದಲ್ಲಿ ಕ್ರೀಡಾಪಟುವಿಗೆ ನೀಡುವ ಆದೇಶವಲ್ಲ ಇವು ಶಿಕ್ಷಣಕ್ಷೇತ್ರದ 'ಉಪನ್ಯಾಸಕ ವೃತ್ತಿ' ಮೈದಾನದಲ್ಲಿ ಕಡ್ಡಾಯವಾಗಿ ಪಾಸುಮಾಡಬೇಕಾಗಿರುವ ಪರೀಕ್ಷೆ

ನೆಟ್' (NET) ಎನ್ನುವುದೇನು?

NET ಇದರ ಪೂರ್ಣರೂಪ "NATIONAL ELIGIBILITY TEST" ಪ್ರಥಮ ದರ್ಜೆ ಕಾಲೇಜು ಇಲ್ಲವೇ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಕ ವೃತ್ತಿಯನ್ನು ಕೈಗೊಳ್ಳಬಯಸುವವರು ರಾಷ್ಟ್ರೀಯ ಅರ್ಹತಾ ಪರೀಕ್ಷೆಯನ್ನು ಕಡ್ಡಾಯವಾಗಿ ಪಾಸು ಮಾಡಲೇ ಬೇಕು.

ಪ್ರಾರಂಭದಲ್ಲಿ ಈ ನಿಯಮವನ್ನು ಕೆಲವು ವಿಶ್ವವಿದ್ಯಾಲಯದವರು ಅನುಸರಿಸಿದರೆ, ಕೆಲವರು ಅನುಸರಿಸಲಿಲ್ಲ. ಕೆಲವರು ನ್ಯಾಯಾಲಯದ ಮೊರೆ ಹೋದರು. ೧೯೯೪ ಸೆಪ್ಟೆಂಬರ್ ೮ ರಂದು ದೆಹಲಿಯ ಉಚ್ಚನ್ಯಾಯಾಲಯವು ಉಪನ್ಯಾಸಕರಾಗಬಯಸುವ ಎಲ್ಲರಿಗೂ ಈ ಪರೀಕ್ಷೆ ಕಡ್ಡಾಯವೆಂದು ತೀರ್ಪು ನೀಡಿತು. ಸ್ನಾತಕೋತ್ತರ ಪದವಿಯಲ್ಲಿ ಶೇ. ೫೫ ರಷ್ಟು ಅಂಕಗಳನ್ನು ಪಡೆದಾಗ್ಯೂ ಈ ಪರೀಕ್ಷೆ ಕಡ್ಡಾಯವೆಂದು ಸಾರಿತು.


NET ಪರೀಕ್ಷೆಯನ್ನು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದವರಿಂದ (U.G.C) ವರ್ಷದಲ್ಲಿ ಎರಡು ಬಾರಿ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ನಡೆಸಲಾಗುತ್ತಿದೆ. ಖಚಿತವಾದ ವಿವರಗಳಿಗೆ ವೃತ್ತ ಪತ್ರಿಕೆಗಳನ್ನು ಗಮನಿಸುತ್ತಿರಬೇಕು.

ಅರ್ಹತೆ : ಶೇ. ೫೫ ರಷ್ಟು ಅಂಕಗಳನ್ನು ಪಡೆದಿರಬೇಕು.

ಪರೀಕ್ಷೆಯ ಮಾಧ್ಯಮ : ಇಂಗ್ಲಿಷ್ ಅಥವಾ ಹಿಂದಿ.

ಪರೀಕ್ಷೆಯ ವಿಧಾನ : NET ಪರೀಕ್ಷೆಯಲ್ಲಿ ಒಟ್ಟು ಮೂರು ಪೇಪರುಗಳಿಗೆ ಉತ್ತರಿಸಬೇಕಾಗುತ್ತದೆ.

I) ಸಾಮಾನ್ಯ ಅಭ್ಯಾಸ (GENERAL STUDIES) = 100 ಅಂಕಗಳು.



II ಸ್ನಾತಕೋತ್ತರ ಪದವಿಯಲ್ಲಿ ತೆಗೆದುಕೊಂಡ ವಿಷಯಗಳ ಕುರಿತು ವಸ್ತು ನಿಷ್ಠ ಮಾದರಿಯ ಪ್ರಶ್ನೆಗಳು = ೧೦೦ ಅಂಕಗಳು.

III ಸ್ನಾತಕೋತ್ತರ ಪದವಿಯಲ್ಲಿ ವಿಶೇಷವಾಗಿ ಆಯ್ಕೆಮಾಡಿಕೊಂಡ ವಿಷಯ ಕುರಿತು ವಿವರಣಾತ್ಮಕ ಮಾದರಿಯ ಪ್ರಶ್ನೆಗಳು = ೨೦೦ ಅಂಕಗಳು.

ಪರೀಕ್ಷೆಯಲ್ಲಿ ಉತ್ತೀರ್ಣರೆಂದು ಘೋಷಿಸಲು ಪ್ರತಿ ಪೇಪರಿನಲ್ಲೂ ಶೇ. ೪೦ ರಷ್ಟು ಅಂಕಗಳನ್ನು ಪಡೆದಿರಬೇಕು. ಅಂತಹವರು ಉಪನ್ಯಾಸಕರಾಗುವ ಅರ್ಹತೆಯನ್ನು ಪಡೆಯುತ್ತಾರೆ.

ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದವರಿಗೆ ಅವರವರ ವಿಷಯದಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಗರಿಷ್ಠ ಐದು ವರ್ಷಗಳವರೆಗೆ ಶಿಷ್ಯವೇತನವನ್ನು ನೀಡಲಾಗುತ್ತದೆ. ಪ್ರಾರಂಭದ ಎರಡು ವರ್ಷಗಳವರೆಗೆ ತಿಂಗಳಿಗೆ ರೂಪಾಯಿ ೨,೪೦೦/- ರಂತೆ ಕಿರಿಯರ ಸಂಶೋಧನಾ ಶಿಷ್ಯವೇತನವೆಂದೂ (JRF) ನಂತರದ ಮೂರು ವರ್ಷಗಳವರೆಗೆ ತಿಂಗಳಿಗೆ ರೂಪಾಯಿ ೩,೨೦೦/- ರಂತೆ ಹಿರಿಯರ ಸಂಶೋಧನಾ ಶಿಷ್ಯವೇತನವೆಂದೂ (SRF) ನೀಡಲಾಗುತ್ತದೆ.

ಸಂಶೋಧನೆಯನ್ನು ಪೂರ್ಣಗೊಳಿಸಿದವರು ತಮ್ಮ ತಮ್ಮ ವಿಭಾಗಗಳಲ್ಲಿಯೆ ಇಲ್ಲವೆ ದೇಶದ

ಯಾವುದೇ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಸಹಾಯಕರ ಹುದ್ದೆಗೆ (Research Assistant) ಸೇರಿಕೊಳ್ಳಬಹುದು. ಇದರ ಆಯ್ಕೆಯನ್ನು ಸಹ U.G.C. ಯವರೇ ಮಾಡುತ್ತಾರೆ.

SLET - (STATE LEVEL ELIGIBILITY TEST)

ಈ ರಾಜ್ಯಮಟ್ಟದ ಅರ್ಹತಾ ಪರೀಕ್ಷೆಯನ್ನು ಆಯಾರಾಜ್ಯಗಳ ಲೋಕಸೇವಾಯೋಗದವರು ನಡೆಸುತ್ತಾರೆ. ಮಿಕ್ಕೆಲ್ಲಾ ಪರೀಕ್ಷಾ ವಿಧಾನಗಳು ಸ್ವಲ್ಪ ವ್ಯತ್ಯಾಸದಲ್ಲಿ NET ಮಾದರಿಯಲ್ಲೇಯೇ ಇವೆ. SLET ಪಾಸು ಮಾಡಿದವರು ಉಪನ್ಯಾಸಕರಾಗಲು ಮಾತ್ರ ಅರ್ಹರಾಗುತ್ತಾರೆ. ಸಂಶೋಧನೆಯನ್ನು ಕೈಗೊಳ್ಳಲು ಹಾಗೂ ಯಾವುದೇ ಬಗೆಯ ಶಿಷ್ಯವೇತನ ಪಡೆಯಲು ಅರ್ಹರಾಗಿರುವುದಿಲ್ಲ.

ವಯಸ್ಸು : NET ಪರೀಕ್ಷೆ ತೆಗೆದುಕೊಳ್ಳಲು ವಯಸ್ಸಿನ ಯಾವುದೇ ನಿರ್ಬಂಧವಿಲ್ಲ. ಸ್ನಾತಕೋತ್ತರ ಪದವಿ ಪಡೆದವರೆಲ್ಲರು ಈ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಆದರೆ ಕಿರಿಯರಿಗೆ ನೀಡಲಾಗುವ ಸಂಶೋಧನಾ ಶಿಷ್ಯವೇತನವನ್ನು (JRF) ಪಡೆಯಲು ಸಾಮಾನ್ಯ ಅಭ್ಯರ್ಥಿಗಳು ೨೮ ವರ್ಷಗಳು ಮೀರಿರಬಾರದು. ಎಸ್.ಸಿ./ಎಸ್.ಟಿ./ಓ.ಬಿ.ಸಿ./ಅಂಗವಿಕಲರಿಗೆ ನಿಯಮಾನುಸಾರ ರಿಯಾಯ್ತಿ. ಎಲ್.ಎಲ್.ಎಂ. ಪಧವೀಧರರಿಗೆ ಮೂರು ವರ್ಷ ಸಡಿಲಿಕೆ.

SLET ಪರೀಕ್ಷೆ ತೆಗೆದುಕೊಳ್ಳಲು ೩೪ ವರ್ಷಗಳು ಮೀರಿರಬಾರದು.

ನಿಮ್ಮ ಸ್ವಭಾವಕ್ಕೆ ಸರಿ ಹೊಂದುವಂತಹ ಕ್ಷೇತ್ರ ಶಿಕ್ಷಣಕ್ಷೇತ್ರ ಮಾತ್ರ ಎಂದು ಭಾವಿಸಿರುವ, ಸರಳ, ಸಜ್ಜನಿಕೆಯ, ಪರಿಶುದ್ಧವಾಗಿರಲು ಹೆಚ್ಚಿನ ಅವಕಾಶಗಳಿರುವ ಶಿಕ್ಷಣ ಕ್ಷೇತ್ರಕ್ಕೆ ಅರ್ಪಿಸಿ ಕೊಳ್ಳಲು ಸಿದ್ಧವಾಗಿರುವ ಯುವ ಸ್ನಾತಕೋತ್ತರ ಪದವೀಧರರು ತಮ್ಮಲ್ಲಿಯ ಪ್ರತಿಭೆ, ಪಾಂಡಿತ್ಯ, ಸಾಮರ್ಥ್ಯಗಳನ್ನು ಹೊರ ಹಾಕಲು ಇದೊಂದೇ ಕ್ಷೇತ್ರವೆಂದು ಖಚಿತಪಡಿಸಿಕೊಂಡು, ಅಲ್ಲದೆ ಸಂಸ್ಕೃತಿಯ ನಿರ್ಮಾಣ, ರಾಷ್ಟ್ರ ನಿರ್ಮಾಣ ಹಾಗೂ ಯುವಶಕ್ತಿಗೆ ಸರಿದಾರಿ ತೋರುವಂತಹ (ಹುಟ್ಟು) ಆದರ್ಶಗಳ ಬಯಕೆ ನಿಮ್ಮಲ್ಲಿ ಇದ್ದುದಾದರೆ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಕಲಿತ ವಿಷಯಗಳನ್ನು ಮನನ ಮಾಡಿಕೊಂಡು ರಾಷ್ಟ್ರೀಯ ಅರ್ಹತಾ ಪರೀಕ್ಷೆಯ ಟ್ರ್ಯಾಕ್‌ನಲ್ಲಿ ಓಡಲು ಸಿದ್ಧರಾಗುತ್ತೀರೆಂದು ಆಶಿಸಬಹುದಲ್ಲವೇ... ಹಾಗಾದರೆ NET.... SET.....GO

ಸೂರ್ಯಕಾಂತ್ ಗುಣಕಿಮಠ


ಹೊರಟು ಬಿಟ್ಟನು ತಪಸ್ವಿ

'ಮೆತ್ತ ಮೆದು
ಹೂವ ಹಾಸಿಗೆ,
ಒಳ ಹೊರಗೆ
ತುಂಬಿ ಹೋಗುವ ಕಂಪು.
ದೇಹದೀ ಇಳೆಯೊಳಗೆ
ಸಂಭ್ರಮದ ನೋಂಪಿ,
ಅಂಗಅಂಗದಲೆಲ್ಲ
ಮೋಹದ ಭಸಿತ.

ಅಳೆಯಲಾರದ
ಇಳೆಯಗಲಕ್ಕೆ
ಮುಗಿಲು ಚಾಚಿಕೊಳಬೇಕು'

ಮರೆಯೊಳಗೆ
ಇಂತು ನುಡಿದಳು,
ಒತ್ತಿ ನಾಚಿಕೆಯ ಮುದ್ರೆ,
ಆ ತಪೋಮೂರ್ತಿ ಲೋಪಾಮುದ್ರೆ

'ವಿಂಧ್ಯದೆತ್ತರಕು
ಮೀರಿದೆತ್ತರವ
ತಂದು ನಿಲಿಸಿದಳೆನ್ನ ಮಡದಿ'



'ಈ ಪುಟ್ಟ ಎದೆಯೊಳಗೆ ಎಷ್ಟೊಂದು ಗುಟ್ಟು
ಪಟ್ಟನೆ ಎಡೆದೊರೆದು ತೆರೆದು ಬಿಟ್ಟಿದೆ'

'ವರುಷ ವರುಷವೂ
ಸಾಗು ಹಾಕಿದ
ಋತುವಸಂತ
ಸಾಗರವಾಗೀಗ ಹೊಕ್ಕು ಬಿಟ್ಟಿದೆ
ಈ ತಪಸ್ವಿಯ ಕಮಂಡಲು'

'ಎನ್ನ ಬಯಕೆಯ
ಗರ್ಭದೊಳಗಿರಿಸುವುದೊ,
ತಾನೆ
ಕಿರಿಯ ಸಿಸುವಾಗಿ
ಗರ್ಭದಿಂದಿಳಿಯುವುದೊ'
'ಕೊಟ್ಟುದಾಯಿತು ಮಾತು
ಇಲ್ಲ, ಕಟ್ಟೊಡೆಯಿತು ಕೊನೆಗು
ಹೂವಿನೊಂದು ಮೃದುತೆಯು
ಸೋಕದದೆಂತು ಕಳೆಯಿತು ಕಾಡು'

'ಆಯಿತು'
ಆಲುಗೆಯ ಮೆಟ್ಟಿ
ಹೊರಟೆಬಿಟ್ಟನು ತಪಸ್ವಿ
ಗಾಳಿ ಕುದುರೆಯನೇರಿ
ವಸಂತದೊಸಗೆಯ ಮನೆಯ
ಸಿಂಗರಿಸುವುದಕ್ಕೆ.

ಆ ದೇಶ, ಈ ದೇಶ
ಎಲ್ಲದಿಸೆಯೊಳಗೆ
'ಭವತಿ ಭಿಕ್ಷಾಂದೇಹಿ'
ಚಾಚಿದನು ಕೈ
ಅನಂಗನರಿಯದ
ಹಾಸು ಬೀಸಿನೆ ಅಂಗೈ

'ನೀಡಿರೀ ಮುನಿಗೆ
ಮನದ ಕೊನೆಯುತ್ಸವಕೆ
ಬಯಕೆಯಾಲಯದ
ಬ್ರಹ್ಮೋತ್ಸವಕೆ'

-ಆನಂದ ಪಾಟೀಲ

ಅಪರೂಪದ ಉಪನಾಳ ಗೂಳಪ್ಪ

ಮಾಜಿ ಶಾಸಕರೆಂದರೆ ಯಾರು? ಎಂದು ಯಾವ ಒಬ್ಬ ಚಿಕ್ಕ ಬಾಲಕ/ಕಿಯನ್ನು ಹಿಡಿದು ಕೇಳಿದರೂ ಆತ/ಆಕೆ ಸರಳವಾಗಿ ಕೊಡುವ ವಿವರಣೆಯೆಂದರೆ; ತಾನು ಪ್ರತಿನಿಧಿಸಿದ ಕ್ಷೇತ್ರಕ್ಕೆ ಏನೂ ಮಾಡದೆ ಐದು ವರ್ಷ ಸೋಮಾರಿಯಾಗಿ ಅಲೆದ, ಅನೇಕ ಮೂರ್ತ-ಅಮೂರ್ತ ಹಗರಣ, ಕೊಲೆಗಳಲ್ಲಿ ಭಾಗಿಯಾದ, ತನ್ನ ಮುಂದಿನ ಮೂರು ತಲೆಮಾರುಗಳಿಗಾಗುವಷ್ಟು 'ಆಸ್ತಿ ಹೊಡಕೊಂಡ', ತಾನು ಇದುವರೆಗೂ ಗೆಲ್ಲಲು ಕಾರಣವಾಗಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಜಾತಿ, ಧರ್ಮ, ಹಣ ಮೊದಲಾದ ಕುತಂತ್ರ ಬಳಸಿದ, ಈಗ ತನಗಿಂತ ಹೆಚ್ಚಿನ ಜಾತಿವಾದಿ, ಧರ್ಮಾಂಧ, ಲಂಪಟ ಬಂದು ಸೋಲಿಸಿದಾಗ ಕೈ ಚೆಲ್ಲಿ ಕುಳಿತಿರುವ ಮುಖ ಹೀನ ವ್ಯಕ್ತಿ. ಆದರೆ ಇದಕ್ಕೆ ಅಪವಾದವೆಂಬಂತೆ ಒಬ್ಬ ಮಾಜಿ ಶಾಸಕರಿದ್ದಾರೆ. ಅವರ ಹೆಸರು ಗೂಳಪ್ಪ ಫಕ್ಕೀರಪ್ಪ ಉಪನಾಳ. ಶಿರಹಟ್ಟಿ ತಾಲ್ಲೂಕಿನ ಮಾಜಿ ಶಾಸಕರಾದ ಇವರನ್ನು ಜನರು ಪ್ರೀತಿಯಿಂದ 'ಯಜಮಾನ ಜಿ.ಎಫ್.ಉಪನಾಳ' ಎಂದೇ ಕರೆಯುತ್ತಾರೆ. ಉತ್ತರ ಕರ್ನಾಟಕದ ಪಟಗಾ (ರುಮಾಲು) ಧೋತರ ಧರಿಸಿ 'ಪಟಗಾ'ದ ಮಡಿಲಲ್ಲಿ ಎಲೆ ಅಡಿಕೆ ತುರುಕಿ ಛತ್ರಿ ಹಿಡಿದು ಓಡಾಡುವ ಹಿರಿಯ ಜೀವ ಅದು. ತಾನೂ ರೈತಾಪಿ ಮಾಡುತ್ತ ಉಳಿದ ರೈತರಿಗೂ ಹಲವಾರು ರೂಪದಲ್ಲಿ ನೆರವು ನೀಡುತ್ತ ಬಂದಿರುವ ಕ್ರಿಯಾಶೀಲ ಮನಸ್ಸಿನ,



ಹಸುವಿನಂಥ ಈ ವ್ಯಕ್ತಿಯ ಸಾಧನೆಯ ಮೇಲೆ ಕಣ್ಣಾಡಿಸುವುದೇ ಒಂದು ಹೆಮ್ಮೆಯ ಸಂಗತಿ.

ಲಕ್ಷ್ಮೇಶ್ವರದ ಉಪನಾಳರು ಇಲ್ಲಿಯೇ ರೈತರಿಗೆ ಅನುಕೂಲವಾಗಲೆಂದು 'ಸೋಮೇಶ್ವರ ಸಹಕಾರ ನೂಲಿನ ಗಿರಣಿ' ಸ್ಥಾಪಿಸಿದರು. ಅದನ್ನು ಶಿಸ್ತು, ಶ್ರದ್ಧೆ, ಪ್ರಾಮಾಣಿಕ ನಿರ್ವಹಣೆಯಲ್ಲಿ ನಡೆಸಿಕೊಂಡು ಬಂದವರು. ಗಿರಣಿಯಲ್ಲಿ ಮಹಿಳೆಯರನ್ನು, ಅಂಗವಿಕಲರನ್ನು ಕೆಲಸಕ್ಕೆ ತೆಗೆದುಕೊಂಡು ಅವರ ಸ್ವಾಲಂಬನೆಗೆ ನೆರವಾಗಿ ಎಲ್ಲರ ಅಭಿಮಾನಕ್ಕೆ ಪಾತ್ರರಾದವರು. ಜಿ. ಎಫ್. ಉಪನಾಳರು 'ಸಹಕಾರ ನೂಲಿನ ಗಿರಣಿ'ಯನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಅವರ ವ್ಯವಸ್ಥಾಪಕ ಗುಣವನ್ನು, ಗಿರಣಿಯ ಸಾಮಾಜಿಕ ಉಪಯುಕ್ತತೆಯನ್ನು ಗುರುತಿಸಿ ಕೇಂದ್ರ ಸರಕಾರ ೧೯೯೯ರಲ್ಲಿ 'ಉದ್ಯೋಗ ಪತಿ' ಎಂಬ ಬಿರುದನ್ನು ನೀಡಿ ಸನ್ಮಾನಿಸಿತು. ಧಾರವಾಡದ ಕೆ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾಗಿ, 'ಶ್ರೀ ರೇಣುಕಾದೇವಿ ರೈತರ ಗೋವಿನ ಜೋಳ ಸಂರಕ್ಷಣಾ' ಘಟಕದ ಸಂಸ್ಥಾಪಕರು ಮತ್ತು ಚೇರ್ಮನ್ನರಾಗಿ, ಕರ್ನಾಟಕ ಸಹಕಾರ ನೂಲಿನ ಗಿರಣಿಯ ಮಹಾಮಂಡಲ ಬೆಂಗಳೂರು, ಇದರ ಉಪಾಧ್ಯಕ್ಷರಾಗಿ ಇವರು ಸಲ್ಲಿಸುತ್ತಿರುವ ಸೇವೆ ಶ್ಲಾಘನೀಯ.

'ಒಕ್ಕಲಿಗ ಬಿತ್ತದಿದ್ದರೆ ಬಿಕ್ಕುವುದು ದೇಶ' ಎಂದರಿತ ಉಪನಾಳರು ಕೃಷಿಕ ಸಮಾಜಕ್ಕೆ ಅನುಕೂಲವಾಗಲೆಂಬ ಸದಾಸೆಯಿಂದ ಹಲವಾರು ಕೃಷಿ ಸಂಬಂಧಿ ಸಂಸ್ಥೆಗಳನ್ನು ಕಟ್ಟಿದರು. ತಮ್ಮ ಪ್ರೀತಿಯ ಕೃಷಿ ಕೆಲಸವಲ್ಲದೆ ಜನರ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕೆಲಸಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಆಪತ್ತಿನಲ್ಲಿರುವವರಿಗೆ ಬಗೆ ಬಗೆಯಲ್ಲಿ ಸ್ಪಂದಿಸುತ್ತಿರುವುದು, ಶಾಲೆ ಹಾಗೂ ದೇವಾಲಯಗಳ ಕಟ್ಟಡಗಳಿಗೆ ಉದಾರ ದೇಣಿಗೆ ನೀಡುತ್ತಿರುವುದು, ತಮ್ಮ ಸಂಸ್ಥೆಯ ನೌಕರರನ್ನು ಒಂದೇ ಕುಟುಂಬದಂತೆ ಕಾಣುವ ಅವರ ಮಾನವೀಯ ಕಳಕಳಿ- ಇವೇ ಮೊದಲಾದ ಗುಣಗಳು ಅವರ ಜನಪ್ರಿಯತೆಗೆ ಕಾರಣವಾಗಿದೆ. ಅವರ ಸೇವಾಮನೋಭಾವ ಹಾಗೂ ಧಾರ್ಮಿಕ ಶ್ರದ್ಧೆಯನ್ನು ಮೆಚ್ಚಿ ವೀರ ಗಂಗಾಧರ ಶಿವಾಚಾರ್ಯ ಸ್ವಾಮಿಜಿ, ಮುಕ್ತಿ ಮಂದಿರ ಧರ್ಮಕ್ಷೇತ್ರ ಇವರು ಶ್ರೀಯುತರಿಗೆ 'ಗುರುಭಕ್ತಕಂಠಿರವ' ಎಂಬ ಬಿರುದಾಂಕಿತವನ್ನು ನೀಡಿ ಹರಿಸಿದ್ದಾರೆ.

ರಾಜಕಾರಣಿ, ಧರ್ಮಕಾರ್ಯ ದುರಂಧರರಾದ ಉಪನಾಳರು ಈಗ ಮಹತ್ವಾಕಾಂಕ್ಷೆಯ ಕನಸು ಹೊತ್ತು ನಡೆದಾಡುತ್ತಿದ್ದಾರೆ. ಅದೊಂದು ಪುರಾಣವನ್ನು ಇತಿಹಾಸವನ್ನಾಗಿ ಮಾಡುವ ಕನಸು. 'ತ್ರಿಕೋಟಿಲಿಂಗ' ಮಂದಿರದ ಸ್ಥಾಪನೆಯ ಕನಸು. ತನ್ನ ಪುರಾಣ ಮತ್ತು ಇತಿಹಾಸದ ಒಳಪುಟಗಳಲ್ಲಿ ಪಂಪನ ತಿರ್ರುಗನ್ನಡದ ಕಾಕು, ಜೈನ, ಶೈವ, ಸಂಪ್ರದಾಯದ ಅರಸರ ಆಳ್ವಿಕೆ, ಚಾಲುಕ್ಯ ಹಾಗೂ ವಿಜಾಪುರದ ಶಾಹಿ ಆಡಳಿತದ ಅನುಭವ ಪಡೆದಿರುವ ಲಕ್ಷ್ಮೇಶ್ವರ; ಮಹಂತಿಮಠ, ಸಹಸ್ರಜಿನಬಿಂಬ ಬಸದಿ, ದೂದ್‌ಪೀರರ ದರ್ಗಾ- ಮೊದಲಾದ ಆಯಾ ಧರ್ಮೀಯ ಶ್ರದ್ಧಾ ಕೇಂದ್ರಗಳಿಂದ ಭಾವೈಕ್ಯಕ್ಕೆ ಸಂಕೇತವಾದ ಊರು. ಹಸಿರು ಕಲ್ಲಿನ ಮಸೀದಿ (ಇಲ್ಲಿಯ ಕಲ್ಲಿನಲ್ಲಿ ಕೆತ್ತಿರುವ ಸರಪಳಿಗಳ ಶಿಲ್ಪಕಲೆ) ಮತ್ತು ಕರ್ನಾಟಕದ ಮೊಟ್ಟ ಮೊದಲ ಸ್ತ್ರೀ ನಾಟಕ ಮಂಡಲಿಯನ್ನು ಹಿಂದುಸ್ತಾನಿ ಸಂಗೀತ ವಿದೂಷಿ ಕಟ್ಟಿದ್ದು ಈ ನೆಲದ ಕಲಾಶಕ್ತಿಗೆ ಸಾಕ್ಷಿಯಾಗಿವೆ. ಹೀಗೆ ದೊಡ್ಡ ಸಾಂಸ್ಕೃತಿಕ ಚರಿತ್ರೆ ಮತ್ತು ಚಾರಿತ್ರ್ಯ ಹೊಂದಿರುವ ಲಕ್ಷ್ಮೇಶ್ವರದಲ್ಲಿ ಈಗ 'ತ್ರಿಕೋಟಿ ಲಿಂಗ ಮಂದಿರ' ಸ್ಥಾಪನೆಯಾಗಲಿದೆ.

೧೬ ಎಕರೆಗಳ ಈ ಕ್ಷೇತ್ರದಲ್ಲಿ ಮಧ್ಯ ಬಿಂದುವಾಗಿ ತ್ರಿಕೋಟೇಶ್ವರ ದೇವಾಲಯವಿರುತ್ತದೆ. ಅದರ ಸುತ್ತಲೂ ೩೨ ಮಂಟಪಗಳು. ಒಂದೊಂದರಲ್ಲೂ ಒಂದು ಧರ್ಮದ ಮೂರ್ತಿ. ಉದಾ: ಶಿವ, ಬುದ್ಧ ಮಹಾವೀರ, ಸವದತ್ತಿ ಎಲ್ಲಮ್ಮ, ಏಸುಕ್ರಿಸ್ತ, ಕನಕದಾಸರು, ಮಹಾತ್ಮ ಗಾಂಧಿ, ಮಹಮ್ಮದ್ ಪೈಗಂಬರ್ ಮೊದಲಾದವರು. ಈ ಮೂರ್ತಿಗಳು ಸಾಮರಸ್ಯದ ಸಂಕೇತವಾಗಿ ನಿಲ್ಲಲ್ಲಿವೆ.

ಲಕ್ಷ್ಮೇಶ್ವರದಿಂದ ೫. ಕಿ. ಮೀ ಅಂತರದಲ್ಲಿರುವ ಈ ಯೋಜಿತ 'ತ್ರಿಕೋಟಿ ಲಿಂಗ' ೨೦೦೧ನೆಯ ಇಸ್ವಿಯ ಹೊತ್ತಿಗೆ ಭಾರತದ ಪುಣ್ಯಕ್ಷೇತ್ರಗಳ ತೊಟ್ಟಿಲಲ್ಲಿ ಸೇರಿರುತ್ತದೆ. ಕೊರಡೂರು ಕಲ್ಲಪ್ಪನವರ ಉದಾರದಾನದಿಂದ ಹದಿನೆಂಟು ಎಕರೆಯಲ್ಲಿ ಮುಕ್ತಿಮಂದಿರ ರಚನೆಯಾದರೆ, ಈಗ ಜಿ. ಎಫ್. ಉಪನಾಳರು ದಾನಮಾಡಿದ ಒಂದು ಕೋಟಿ ಐವತ್ತು ಲಕ್ಷ ರೂಪಾಯಿ ಬೆಲೆಯ ೧೬ ಎಕರೆ ಭೂಮಿಯಲ್ಲಿ ತ್ರಿಕೋಟಿ ಲಿಂಗ ಮಂದಿರ ಸ್ಥಾಪನೆಯಾಗಲಿದೆ. ಇದರ ಅಂದಾಜು ವೆಚ್ಚ ೧೫ ಕೋಟಿ!

ಕರ್ನಾಟಕದಲ್ಲಿ ಸಹಸ್ರ ಲಿಂಗ, ಕೋಟಿ ಲಿಂಗಗಳ ಕ್ಷೇತ್ರಗಳಿದ್ದು, ತ್ರಿಕೋಟಿ ಲಿಂಗಗಳ ಮಂದಿರ ವಿಶಿಷ್ಟವಾದ ಯಾತ್ರಾ ಸ್ಥಳವಾಗ್ಲಲಿದೆ. ಈಗಿನ ವಿಮಲರೇಣುಕ ವೀರಕ್ತಮುನಿ ಶಿವಾಚಾರ್ಯ ಸ್ವಾಮಿಜಿಯವರ ಸ್ಫೂರ್ತಿ. ಅಖಿಲ ಭಾರತ ತ್ರಿಕೋಟಿ ಲಿಂಗ ಟ್ರಸ್ಟಿನ ಅಧ್ಯಕ್ಷರಾದ ಶ್ರೀಯುತ ಉಪನಾಳರ ದುಡಿಮೆ, ಜನರ ಸಹಕಾರ ತ್ರಿಕೋಟಿ ಲಿಂಗದ ಕನಸನ್ನು ಸಾಕಾರಗೊಳಿಸಲಿದೆ. ಸ್ಥಾವರವನ್ನು ಧಿಕ್ಕರಿಸುತ್ತಿದ್ದ ಜಂಗಮವನ್ನು ಪ್ರೀತಿಸುತ್ತಿದ್ದ ಬಸವಣ್ಣನವರ ನೆಲದಲ್ಲಿ ಇದು ವಿರೋಧಭಾಸವಾಗಿ ಕಂಡರೂ ಬಸವಣ್ಣನವರು ಸಾರಿದ 'ಇವ ನಮ್ಮವ ಇವ ನಮ್ಮವ' ಎಂಬ ತತ್ವವನ್ನು ಈ ಕ್ಷೇತ್ರ ' ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬ ಘೋಷ್ಯ ಮಂತ್ರದಲ್ಲಿ ತುಂಬಿಕೊಂಡು ಸಾಗುತ್ತಿದೆ. ಈ ಕ್ಷೇತ್ರ ಕಂದಾಚಾರ, ಪೊಳ್ಳು ಧಾರ್ಮಿಕತೆಯನ್ನು ಪೋಷಿಸದೆ ಜನರ ನೆಮ್ಮದಿಗೆ, ಸಮನ್ವಯದ ಶಾಂತಿಯುತ ಬದುಕಿಗೆ 'ತ್ರಿಕೋಟಿ ಲಿಂಗ'ದ ಸ್ಥಾಪನೆ ನಾಂದಿಯಾಗಲಿ.

ಶೇಖರ್

ಅರಿವು

ಭಾಗೀರಥಿ ಹೆಗಡೆ

ಕಿಟಕಿಯಿಂದ ಬೆಳಗು ಒಳ ಬಂದು ಅದೆಷ್ಟೊ ಹೊತ್ತಾಗಿತ್ತೊ, ರೆಪ್ಪೆಗಳನ್ನು ಬಿಗಿಯಾಗಿ ಬೆಸೆದುಕೊಂಡರೂ ಅರೆಗೇಸರಿ ಬಣ್ಣ ಒಳ ನುಗ್ಗುತ್ತಿತ್ತು. ನೂರಾರು ಅಸ್ಪಷ್ಟ ಆಕಾರಗಳನ್ನು ಮುಚ್ಚಿದ ಕಣ್ಣೆದುರು ಥಕಥೈ ಕುಣಿಸುತ್ತಿತ್ತು. ಜೊತೆಗೆ ನಡುಭಾಗದ ಕೆಳ ಒತ್ತಡ ಬೇರೆ ಒದ್ದು ಒದ್ದು ಮೇಲೆಬ್ಬಿಸುತ್ತಿತ್ತು. ಆದರೆ ಏನೊ ಒಂದು ನಿಃಶಕ್ತಿ, ಏನೊ ಒಂದು ಜಡತ್ವ.. ಇನ್ನು ಜನ್ಮರಾತ್ರಿ ನಾನು ಮೇಲೇಳಲಾರೆ ಎದ್ದು ಓಡ್ಯಾಡಲಾರೆ, ಮನಷ್ಯರೆಂಬೊ ಮನುಷ್ಯರ ಮುಖ ನೋಡಲಾರೆ... ಎಂಬಂಥ ಒಂದು ಒಜ್ಜೆ ಮೈಯಿಡೀ ಹೇರಿ ಕುಂತಾಗ 'ಘಂಟೆ ಎಂಟಾತು. ಇನ್ನೂ ಏಳ್ಲಿಲ್ವಾ ನಿನ್ನಪ್ಪ? ಹೋಗೋ ಪಿಳ್ಳು.. ಅವ್ರನ್ನೆಬ್ಸು ... ಚಾಕ್ಕೆ ಬರ್‍ಬೇಕಂತ್ಹೇಳು.. ಅಡಿಗೆ ಕೋಣೆ ಗುಡುಗಿದ ಅಬ್ಬರಕ್ಕೆ ಬುಡಕ್ಕನೆ ಮೇಲೆದ್ದವನು ಮತ್ತಲೇ ಹೊದ್ದು ಮಲಗಿಬಿಟ್ಟೆ.



ಅಷ್ಟಕ್ಕೂ ಮಹಾ ಏನ್ಮಾಡ್ತಳಿವ್ರು? ಒಂದಿಷ್ಟು ಸುಟು ಸುಟು ಪಾತ್ರೆಗಳ ಧಡಬಡ - ಮಕ್ಕಳಿಗೆ ಗುಡುಂ ಗುಡುಂ... ಮತ್ತೂ ಹೆಚ್ಚೆಂದರೆ ಜೋರಂಪ್ರತಿ ಮಳೆ ಹೊಳೆ, ಬಿಟ್ರೆ ಮತ್ತೇನು ಮನೆ ಬಿಟ್ಟು ಓಡಿ ಹೋಗ್ಲಿಕ್ಕುಂಟಾ ಅಥ್ವಾ ಅಪ್ಪನ ಮನೆಗೆ ದೂರು ಕೊಡ್ತಾಳಾ? ಕೊಟ್ರೂ, ಮಗ್ಳಿಗೇ ಬುದ್ಧಿ ಹೇಳೋದರ ಬದ್ಲು ಅವ್ರೇನು ಮಾಡ್ತಾರೆ?...ಇಲ್ಲ, ಏಳಲಾರೆ. ಯಾವತ್ಕಾಲಕ್ಕೂ ಮೇಲೆದ್ದು ಕೂಡ್ರಲಾರೆ. ಆಳಾಗಿ ಗೇಯಲಾರೆ. ಒಳಗೊಳಗೆ ಜಗ್ಗಿ ಎಳೆವ ಸಂಕಟದಿಂದ ಪಾರಾಗಲಾರೆ...

'ನಾನೂ ಮಲಕ್ಕೊಂಡು ಬಿಡ್ತೇನೆ ಹಾಂಗಾದ್ರೆ, ಹೊಯ್ದಿಟ್ಟ ದೋಸೆ ಹಾಂಗೇ ಇರ್ಲಿ. ಮನೆ ತುಂಬಾ ಕಸ ಮುಸರೆ... ಹಾಂಗೇ ಬಿದ್ದಿರ್ಲಿ. ಗಂಟೆ ಎಂಟೂವರೆ ಆದ್ರೂ, ಏಳೊ ಸುದ್ದಿಯೇ ಇಲ್ಲ. ಎಲ್ಲಾ ತಂದು ನನ್ನೊಬ್ಳ ಎದೆ ಮೇಲೆ ಹೇರಿ ಸುಡ್ತಾರಾ?...' ಆರ್ಭಟಿಸುತ್ತ ಬಂದವಳು ನನ್ನ ಮುಸುಕು ಕಿತ್ತೊಗೆದು ಪಕ್ಕದಲ್ಲೇ ತಾನೂ ಉರುಳಿಕೊಂಡಾಗ ಇಂಥದೇ ಎಂದು ಗೊತ್ತಾಗದ ಉರಿಯಿಂದ ಮೈಯ್ಯಿಡೀ ಬೇಯತೊಡಗಿ ಧಿಗ್ಗನೆದ್ದು ಬಚ್ಚಲಿಗೆ ನಡೆದೆ.

ಜನ್ಮಾಂತರದ ಹಗೆಯಂತೆ ಹೊಗೆಯೊಂದನ್ನೇ ಕಾರುತ್ತಿರುವ ಬಚ್ಚಲೊಲೆ... ಜ್ವಾಲೆಯಾಗಿ ಧಗಧಗಿಸಿ ಮೇಲೆಳದೆ ಪೂರ್ತಿ ನಂದಲೂ ಆರದೆ ಒಳಗೊಳಗೇ ಮಣಕುತ್ತಿರುವ ಮತ್ತಿ ಸೌದೆಯ ಬೆಂಕಿ... ಮನೆಯುದ್ದಕ್ಕೂ ಕೌಂಚಿ ಉಸಿರು ಕಟ್ಟಿಸುತ್ತ, ಕಣ್ಣೀರು ಹಾಕಿಸುತ್ತ, ಕೆಮ್ಮು ತರಿಸುತ್ತ, ಕಾಡುವ ಕತ್ತಲೆಯನ್ನು ಮತ್ತಷ್ಟು ಕರ್‍ರಗಾಗಿಸುವ ಹೊಗೆ!... ಈ ನಡುವೆ ಎರಡು ಮಕ್ಕಳೊಂದಿಗೆ ನಾಲ್ಕು ಅಬ್ಬಲಿಗೆ ಗಿಡದೊಂದಿಗೆ, ಚಾಳಿನ ಹೆಂಗಸರ ನಲ್ಲಿ ಜಗಳದೊಂದಿಗೆ-ಸಂಡಾಸಿನ ಕ್ಯೂದೊಂದಿಗೆ, ಆರೂ ಮನೆಯ ಬಚ್ಚಲ ವಾಸನೆಯೊಂದಿಗೆ ಇಡೀ ದಿನ ಧಿಗ್ಗಿಣಥೋಂ ಮಾಡುವ ಇವಳು.

.... ಒಂದು ಬೆಳಿಗ್ಗೆ ಒಂಬತ್ತರಿಂದ ರಾತ್ರಿ ಒಂಬತ್ತರವರೆಗೆ ಹನ್ನೆರಡೂ ತಾಸು ಗಿರಾಕಿಗಳೆದುರು ಮಂಗನಂತೆ ಹಲ್ಲು ಕಿರಿಯುತ್ತ ಇದು ಚಂದ ಇದೆ- ಈ ಸೀರೆ ತುಂಬಾ ಡ್ಯುರೇಬಲ್- ಇದರ ಸೆರಗು ನೋಡಿ- ಅದರ ಬಣ್ಣ ನೋಡಿ - ಈ ಸೂಟಿಂಗ್ ವ್ಹೆರಿ ವ್ಹೆರಿ ನೈಸ್ - ಎಂದೆಲ್ಲ ಗಿಳಿಪಾಠ ಒಪ್ಪಿಸಿ, ಒಂದನೇ ತಾರೀಖಿಗೆ ಎಲ್ಲಿಗೂ ಮುಟ್ಟದ ಕೇವಲ ಆರು ಹಸಿರು ನೋಟು ಜೇಬಿಗಿಳಿಸಿ ಬರುವ ನಾನು.

.... ಆರನೇ ಕ್ಲಾಸಿನ ಪಿಳ್ಳೂನ ಹರಿದ ಯುನಿಫಾರಂ-ಮೂರನೇಯತ್ತೆಯ ಸಣ್ಣವಳ ಮುರುಕು ಕೊಡೆ -ಇನ್ನು ಚಪ್ಪಲಿಯೊ ಅಂಗಡಿಯಲ್ಲೇ ಬಿದ್ದಿರಲಿ. ಬರಿಗಾಲ ನಡಿಗೆಯಿಂದ ಪಾದ ಗಟ್ಟಿಯಾಗುತ್ತದಂತೆ. ಇವಳ ಮೈ ಮುಚ್ಚುವ ಜಿಬುರೆತ್ತಿದ ಸೀರೆಗಳು- ನನ್ನ ಮಾನ ಕಾಪಾಡುವ ತೇಪೆ ಹಚ್ಚಿದ ಪ್ಯಾಂಟು ಶರ್ಟುಗಳು-ಮಕ್ಕಳು ಓದುವ ಅರ್ಧ ಬೆಲೆಯ ಪುಸ್ತಕಗಳು-ಎಲ್ಲ ಎಲ್ಲವೂ ನಮ್ಮ ಸಿರಿ ಸೌಭಾಗ್ಯಗಳು, ಯಾರಿಗುಂಟು ಯಾರಿಗಿಲ್ಲ?

'ಊರಲ್ಲಿ ಮನೆ ಇದೆ. ಜಮೀನಿದೆ. ಅದರಲ್ಲಿ ನಮ್ದೂ ಒಂದು ಪಾಲಿದೆ ಹೌದ? ನಾವಿಲ್ಲಿ ಬಿಕ್ಕೇ ಭದ್ರರ ಹಾಂಗೆ ಸೊಕಾ ಸುಮ್ನೆ ಗೋಳಾಡೋದಷ್ಟೇ ಬಂತು. ಅಲ್ಲಿ ಅವ್ರ ಚೈನಿ ನೋಡಿದ್ರೆ ದಿಕ್ಕು ಬ್ಯಾಡ. ವಾರಕ್ಕೆರಡು ಸಲ ಪ್ಯಾಟಿಗ್ಬಂದು ಸಿನಿಮಾ ನೋಡೋದೇನು? ವರ್ಷಕ್ಕೊಂದು ಹೊಸ ಸರ ಹಾಕೊಂಡು ಆ ಹೆಂಗಸ್ರು ಥೌಲು ಹಾರ್ಸೋದೇನು?.. ಅಣ್ಣ ತಮ್ಮ ಎರಡೆರಡು ಗಾಡಿ ಡುರುಗುಟ್ಸೋದೇನು?.... ಅಬಬೊ! ನೋಡ್ಲಿಕ್ ನಾಲ್ಕು ಕಣ್ಣು ಸಾಲ್ದು. ನಮ್ದೂಂತ ಅಲ್ಲಿ ಏನಿದ್ಯೊ ಅದಷ್ಟನೇ ಕೇಳ್ಲಿಕ್ಕೆಂತಾ ಧಾಡಿ ನಿಮ್ಗೆ?.....'

ಸತತ ನಾಲ್ಕು ವರ್ಷಗಳಿಂದ ಇವಳು ಹಾಡುವ ಒಂದೇ ಒಂದು ಹಾಡು ನನ್ನದಾಗಲಿಲ್ಲವಾದರೂ ಇತ್ತೀಚೆ ನಾನೂ 'ಸೋಗುಟ್ಟುತ್ತಿದ್ದುದಂತೂ ಸತ್ಯ. ಒಪ್ಪಿಕೊಳ್ಳುತ್ತೇನೆ. ಆದರೆ....

ಇಲ್ಲವೆಂದಲ್ಲ ಹುಟ್ಟಿದೂರಲ್ಲಿ ಅಪ್ಪಜ್ಜರ ಕಾಲದಿಂದ ಬಂದ ಮೂರೆಕರೆ ಅಡಿಕೆ ತೋಟ. ಹನ್ನೆರಡಂಕಣದ ಹೆಂಚಿನ ಮನೆ. ದನ ಎಮ್ಮೆ-ಹಿತ್ತಿಲು-ಬೇಣ-ಬೆಟ್ಟ ಎಂದು ಹತ್ತಿಪ್ಪತ್ತು ಜನ ಬೇಕಾದ್ಹಾಂಗೆ ಬದುಕಿಕೊಂಡು ಹೋಗಲು ಸಾಕಾಗುವಷ್ಟು ಬಂಡವಾಳ ಇದೆ. ಅದರಲ್ಲಿ ಮೂರರಲ್ಲೊಂದು ಪಾಲಿಗೆ ನಾನು ವಾರಸುದಾರನಾಗಿರುವದೂ ಸತ್ಯವೇ... ಆದರೆ...

ಆದರೆ ಈ ಹೊಗೆ...ಒಳಗೊಳಗೇ ಸುಡುವ ಬೆಂಕಿ.. ಉಬ್ಬೆ ಹಾಕಿದಂಥ ಧಗೆ... ಇದರಿಂದ ಪಾರಾಗಲಿಕ್ಕೆಂದೇ ಅಲ್ಲವೇನೆ ಹೆಣ್ಣೆ, ನಾನು ಹೀಗೆ ದೇಶಾಂತ್ರವಾಸಿಯಾಗಿದ್ದು?..... ಮಣ್ಣ ಹಾಸಿಗೆಯಲ್ಲಿ ಮುಗಿಲ ಸೂರಿನ ಕೆಳಗೆ ಹೇಗೋ ಜೀವ ಹಿಡಿದುಕೊಂಡಿದ್ದು... ಆ ಒಂದು ಕಾರಣಕ್ಕಾಗಿಯೇ ಅಲ್ಲವೇನೆ ಅಡಿಬಿದ್ರೂ ಮೂಗು ಮ್ಯಾಲೆ ಎಂದು ಸದಾಕಾಲ ನಿನ್ನೊಂದಿಗೆ ಜಗಳ ಕಾಯುವದು?... ಆದರೆ, ಹೊಟ್ಟೆಯೊಳ್ಳಗನ ಮಾತು ಯಾಕೊ ಮೇಲೆದ್ದು ಗಂಟಲಿಗೆ ಬರ್‍ತಾನೇ ಇಲ್ವಲ್ಲೇ...


ಮುಖ ತೊಳೆದು ಬಂದು ಮಣೆಯ ಮೇಲೆ ಕೂಡ್ರುವ ಹೊತ್ತಿಗೆ ಎದುರಿನ ತಾಟಿನಲ್ಲಿ ದೋಸೆ ಬಂದು ಕೂತಿತು. ಚಟ್ನಿಪುಡಿ-ಬೆಲ್ಲ-ಎಣ್ಣೆ ಒಂದೊಂದಾಗಿ ಬಂದು ಬಿದ್ದವು. ಪಕ್ಕದಲ್ಲಿ ಚಾಲೋಟವೂ ಬಂದು ನಿಂತಿತು. ಮಕ್ಕಳಿಬ್ಬರೂ ಶಾಲೆಗೆ ಹೋಗಿಯಾಯಿತೆಂದು ಎಂಜಲು ತಾಟುಗಳು ಸಾರುತ್ತಿದ್ದವು. ಮಾತಿಲ್ಲದೆ ಚಾತಿಂಡಿ ಮುಗಿಸಿ ಮೇಲೇಳುತ್ತಿದ್ದಾಗ 'ಇವತ್ತಾದ್ರೂ ಹೋಗ್ತೀರೊ ಇಲ್ವೊ?' ಅಂದಳು. 'ಎಲ್ಲಿಗೆ? 'ಮತ್ತೆಲ್ಲಿಗೆ? ನಿಮ್ಮಪ್ಪನ ಮನೀಗೆ. ಅಲ್ಲ, ಈಗ ನಮ್ಮ ಪಾಲಿಗೆ ಬಂದ ನಾಕು ಮೆಟ್ಟು ಜಾಗಕ್ಕೆ. ಹಾಂಗ್ ಹೀಂಗ್ಹೇಳಿ ಮಳೆಗಾಲ ಬಂತು. ಹನಿ ಕುಂಡ್ರೊದ್ರೊಳಗೆ ಅಲ್ಲಿ ಹೋಗಿ ಇರವು ಮಾಡೋದು ಬ್ಯಾಡ್ವ? ಏನಿದೆ ಏನಿಲ್ಲ ನೋಡೋದು ಬ್ಯಾಡ್ವ?.....'ಬರಲಿರುವ ಮಳೆಗಾಲ ಅವಳಲ್ಲೇ ಮೋಡಗಟ್ಟಿತೆ?... ಬೀಳಲಿಕ್ಕೆಂದೇ ಕಾಯುತ್ತಿತ್ತೆ? ಅಥವಾ ಗುಡುಗು ಮಿಂಚಾಗಿ ಸಿಡಿಯಲು ತಯಾರಾಗಿ ನಿಂತಿದೆಯೆ?' ಏನಿದ್ದರೂ ಕೂಡ..... ನಾ ಹೋಗ್ಲಿಲ್ಲ-ನೋಡ್ಲಿಲ್ಲ ಅಂತ ನಿಂಗ್ಯಾರು ಹೇಳಿದ್ರ

ಐದಾರು ದಿನ ಮದ್ಯಪಾನ: ಹೃದಯ ಜೋಪಾನ

[illegible]: ವಾರದಲ್ಲಿ ಐದಾರು ದಿನ ಸ್ವಲ್ಪ ಪರಿಮಾಣದಲ್ಲಿ ಮದ್ಯಪಾನ ಮಾಡುವುದರಿಂದ ಹೃದಯಾಘಾತದ ಅಪಾಯವನ್ನು ತಗ್ಗಿಸಬಹುದೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

'ಸುಮಾರು ಹತ್ತು ವರ್ಷಗಳವರೆಗೆ ಹತ್ತು ಸಾವಿರಕ್ಕೂ ಹೆಚ್ಚು ಜನರ ಅಧ್ಯಯನ ನಡೆಸಿದ ಮೇಲೆ ಆಸ್ಟ್ರೇಲಿಯಾದ ಸಂಶೋಧಕರು ಮೇಲಿನ ತೀರ್ಮಾನಕ್ಕೆ ಬಂದಿದ್ದಾರೆ.

ಅತಿಯಾಗಿ ಮದ್ಯಪಾನಕ್ಕೆ ಶರಣಾದವರು ಮತ್ತು ಮದ್ಯಪಾನವನ್ನು



ಮಾರಾಯ್ತಿ?... ನಿನ್ನೆಯಷ್ಟೆ ಹೋಗಿದ್ದೆ. ಕಣ್ ಕಣ್ ಬಿಟ್ಟು ನೋಡಿದ್ದೆ. ಯಾವೊ ಪಡುಪೋಸಿ ಜನಾ ಆಗಿದ್ರೆ ಅಲ್ಲೇ ಗೊಟಗ್ ಆಗ್ತಿದ್ರು. ನಾನಾಗಿದ್ದಕ್ಕೆ ಎದೆಯೊಡೆಯದೆ ತಲೆ ತಿರುಗಿ ಬೀಳದೆ ಅಥ್ವಾ ಅಲ್ಲಿದ್ದವ್ರೊಂದಿಗೆ ಹೊಡದಾಟ ಮಾಡದೆ ಶಾಬೀತಾಗಿ ಬಂದಿದೇನೆ ಕಂಡ್ಯ? ಮನೆ ಮುರುಕತನವನ್ನು ಕಣ್ಣಾರೆ ಕಂಡೆ ಬಲ್ಯ?... ಹೆಂಡ್ತಿ ಮಕ್ಳ ಜೊತೆ ಎರಡೂ ಹೊತ್ತು ಗಂಜಿ ಸುರ್ಕ್ಕೊಂಡು ಜೀವನಾ ಮಾಡಿದ್ರೂ ಯಾಕೊ ನಮಗಂಥಾ ಬುದ್ಧಿ ಬರ್ಲೇ ಇಲ್ವಲೇ. ಬಾಡಿಗೆ ಮನೆದೊಂದು ಸ್ವಿಚ್ಚು ಹಾಳಾದ್ರೂ ರಿಪೇರಿ ಮಾಡಿಸಿಟ್ಟೇ ಹೊರ ಬಿದ್ದೆವಲ್ಲೇ.... ನಮ್ಮಿಂದಾಗಿ ಯಾರಿಗೂ ತೊಂದ್ರೆಯಾಗಬಾರ್ದು... ನಮ್ಮಿಂದಾಗಿ ಯಾರೂ ಹಾಳಾಗಬಾರ್ದು... ನಮ್ಮ ನಮ್ಮ ಹಣೆಬರಾ ನಮಗಿರ್ಲಿ. ಅವ್ರ ಸುಖ ಅವ್ರು ಉಂಡ್ಕೊಂಡು ಹೋಗ್ಲಿ ಅನ್ನೊದೊಂದೆ ಧ್ಯಾನದಲ್ಲಿ ಒಂದೊಂದು ದಿನಾನೂ ಒಂದೊಂದು ಬೆಟ್ಟದ್ಹಾಂಗೆ ದೂಡಿಕೊಂಡು ಬಂದೆವಲ್ಲೆ. ಆದರೀಗ?.... ಇಂದಲ್ದಿದ್ರೆ ನಾಳೆ... ನಾಳೆ ಅಲ್ಲಾಂದ್ರೆ ನಾಡದಾದರೂ ಆ ಮನೆ ನಿನಗೆ ಹ್ಯಾಂಗ್ ತೋರಿಸ್ಲಿ?... ನಿನ್ನೆದ್ರಿಗೆ ಅವ್ನ ಹೊಗಳಿ ಹೊಗಳಿ ಹೊತ್ಕೊಂಡು ಕುಣಿದೆನಲ್ಲ, ಈಗೀ ಮುಖ ಹೊತ್ಕೊಂಡು ನಿನ್ನೆದ್ರಿಗೆ ಹ್ಯಾಂಗ್ ನಿಲ್ಲಲಿ?.... ಬೆನ್ನಲ್ಲಿ ಬಿದ್ದವನ ಬೆನ್ನಿಗೇ ಚೂರಿ ಹಾಕಿದರಲ್ಲ, ಈಗ ಉರಿ... ಈ ಸಂಕ್ಟ ಹ್ಯಾಂಗ್ ತಡಕೊಳ್ಲಿ?.... ಶಿವ ಶಿವಾ! ಇದೆಂಥ ಗತಿ ತಂದಿಟ್ಟೆಯಪ್ಪಾ?.....

'ಸರಿ ಹಾಂಗಾದ್ರೆ, ನಾಳೆ ನಾನೇ ಹೋಗ್ತೇನೆ...' ಒಂದು ಘಳಿಗೆ ಕಾದು ಅವಳು ನಿಗಿನಿಗಿ ಕೆಂಡವಾದಳು. ಓಹೊ! ಧಾರಾಳವಾಗಿ.. ಅಂತೂ ಒಂದು ದಾರಿ ಸಿಕ್ಕಿತಲ್ಲ. 'ಸರಿ, ನೀನೇ ಹೋಗು. ಆದ್ರೆ ಒಬ್ಬೇ ಹೋಗ್ಬೇಡ. ಪಿಳ್ಳೂನ್ನೂ ಕರ್ಕೊಂಡ್ಹೋಗು. ಮತ್ತೆ, ಸಂಜೆ ವಾಪಸ್ ಬಂದ್ಬಿಡು.'

ಹೊತ್ತ ಹೊರೆಯಾಗಿ ಕೂತ ತಲೆ ಬಿಸಿಯನ್ನು ನೆಲಕ್ಕೊಗೆದ ಹಗುರದಿಂದ ಸರಸರ ಕೈ ತೊಳೆದು ಪ್ಯಾಂಟು ಶರ್ಟು ನೇರಿಸಿಕೊಂಡು ಅಂಗಳವಿಳಿದೆ. ದಾರಿಯಲ್ಲಿ ಸಣ್ಣಗೆ ಸುಳಿದಾಡುವ ತಾಜಾ ಗಾಳಿಯಿಂದಲೂ ತೊಲಗದ ಹೊಗೆನಾತ, ಬಟ್ಟೆಗೆಲ್ಲ ಮೆತ್ತಿಕೊಂಡು ಬಿಟ್ಟಿದೆ. ಉಹುಂ, ಅದು ನನ್ನ ಮೂಗಿನಲ್ಲೆ ಕೂತು ಬಿಟ್ಟಿದೆ. ಆದ್ದರಿಂದಲೇ ಪ್ರಾಣವಾಯು ಪೂರೈಕೆಯಿಲ್ಲದ ಜೀವ ಹೀಗೆ ಸೊರಗುತ್ತಿದೆ. ದೂರ್ವೆ ಜಡ್ಡಿನಂತೆ ಚಿರಿರಿರಿ ಚಿರಿಚಿರಿ ಅನ್ನುತ್ತಿದೆ. ಆದರೆ... ಅದು ಯಾವತ್ತು ಸೊಂಪಾಗಿ ಚಿಗುರಿ ಹಬ್ಬಿತ್ತು ಅನ್ನೋದಾದ್ರೂ ಬೇಕಲ್ಲ!

ನವ ಯುಗಾದಿ

ಯಾವ ಯುಗಾದಿ ಯಾರಿಗೆ ಯುಗಾದಿ
ಹೊಟ್ಟೆ ತುಂಬಿದವರಿಗೆ ಮಾತ್ರ ಈ
ನವಯುಗಾದಿ.
ಮಾಸಿದ ಗೋಡೆಗೆ ಸೇರು ಸುಣ್ಣ
ಬಳಿದು ಸಿಂಗರಿಸಿದ್ದೊಂದೆ ಬಂತು
ಬೇವು ಮಾವುಗಳ ಟೊಂಗೆಗಳ
ಎಲೆ ಎಲೆಯನ್ನೂ ದುಡ್ಡು ಕೊಟ್ಟು
ತಂದು ಬಾಗಿಲಿಗೆ ತೋರಣವ ಮಾಡಿ
ಸಿಂಗರಿಸುವಾಗ ಆಗುವದೇ ಹಿಗ್ಗು.
ಶೋಭಿಸುವದೇ ತಟ್ಟೆಯ ಗುಡಿಸಲು
ಇರಲು ಸೂರೆ ಗಟ್ಟಿಯಾಗಿರದಾಗ
ಯಾವ ಉಗಾದಿ ಯಾರಿಗೆ ಉಗಾದಿ
ಹೊಸೆದ ಸ್ಯಾವಿಗೆ ಬಸಿದದ್ದೊಂದೇ
ಬಂತು
ಬೇಳೆಗೆ ಬೆಲ್ಲ ಕಲೆಸಿದ್ದೂ ಬಂದು.
ಅರೆಬೆಂದ ಸೇರು ಬೇಳೆಗೆ
ಅರಕಲು ಬೆಲ್ಲವನು ಕಲೆಸಿ
ಅರೆಸಪ್ಪೆ ಹೋಳಿಗೆಯನ್ನು
ಹಂಚಿನಲ್ಲಿ ಸುಟ್ಟು ತೆಗೆದಾಗ
ಯಾರಾದರೂ ಬಂತೋ ಬಡವರಿಗೆ
ಈ ಹಿರಿಹಬ್ಬ ಎಂದು ಸುರಿವ
ಬೆವರಿನೊಂದಿಗೆ ನಿಟ್ಟುಸಿರಿನ ಹೊರೆಯು
ಸೇರಿ ಅನಿಸಿದ್ದಿಷ್ಟು, ಕಾಡುವ ಮಕ್ಕಳ
ಕೈಯಲ್ಲಿಷ್ಟು ಕೊಡಲು
ಬೆಲ್ಲವಿಲ್ಲದಿರುವಾಗ
ಯಾವ ಉಗಾದಿ, ಯಾರಿಗೆ ಉಗಾದಿ.


- **ವಿಮಲಾ ಇನಾಮದಾರ**
ಅಳವಂಡಿ

....ಮನೆಯ ಮೂರನೆ ಮಗನಾಗಿ ಸೊಂಟಕ್ಕೆ ಸರಿಯಾಗಿ ನಿಲ್ಲದ ಖಾರೆ ಚಡ್ಡಿಯನ್ನು ನಿಮಿಷಕ್ಕೊಮ್ಮೆ ಮೇಲೆಳೆದುಕೊಳ್ಳುತ್ತ- ಮುನ್ನೂರರ ವತ್ತೂ ದಿನ ಮೂಗಲ್ಲಿಳಿವ ಗಂಗೆಯಮುನೆಯರನ್ನು ಆಗಾಗ ನೆಕ್ಕಿ ನಿವಾರಿಸಿಕೊಳ್ಳುತ್ತ-ಬೆರಳ ಸಂದಿಯಲ್ಲಿದ್ದ ಕಜ್ಜಿ ಕೆರೆದುಕೊಂಡು ಉರಿಗೆ ಹಾಯ್, ಹಾಯ್ ಮಾಡುತ್ತ-ಗುರೂಜಿ ಹೇಳಿದ್ದೇನೆಂದು ಗೊತ್ತಾಗದೆ, ಕೇಳಿದ ಪ್ರಶ್ನೆ ಅರ್ಥವಾಗದೆ, ಇಡೀ ಕ್ಲಾಸು ಬಿದ್ದೂ ಬಿದ್ದೂ ನಕ್ಕು, ಮೇಲಿನ ಮನೆ ಗೌರಿಯಿಂದ ಸುsssರು ಕೆನ್ನೆಗೆ ಹೊಡೆಸಿದಾಗ ಅಲ್ಲೇ... ಶಾಲೆಯ ಬಾವಿಯಲ್ಲೇ ಧುಡುಂ ಜಿಗಿದು ಸತ್ತು ಹೋಗ ಬೇಕೆಂದುಕೊಂಡರೂ ಕಾಲು ಹೋಗಿದ್ದು ಮಾತ್ರ ಕೊಟ್ಟಿಗೆ ಮೂಲೆಗೆ. ಅಲ್ಲಿ ಬಂಗಾರಿ ದನದ ಕೊರಳು ತಬ್ಬಿ, ಗಂಗೆದೊಗಲು ಸವರಿ, ಕೋಡಿನ ಬುಡ ತುರಿಸಿ, ಒಂದಿಷ್ಟು ಮೂಕಮಾತಾಡಿ ಹುರುಪಾದ ಹುಡುಗ ಮತ್ತೆ ಪಾಟೀಚೀಲ ತೆಗೆದಿದ್ದ.

ಮೂವರು ಅಕ್ಕಂದಿರಿಗೆ ಕುಂತರೂ ನಿಂತರೂ ಈ ತಮ್ಮನೇ ಬೇಕು. ಏ ತಮ್ಮಾ ನನ್ನ ಬೆನ್ನು ಮೆಟ್ಟಿಕೊಡು ಬಾರೋ- ಏ ತಮ್ಮಾ ನಂಗೊಂದಿಷ್ಟು ಸುರುಗಿ ಮೊಗ್ಗೆ ಕೊಯ್ಕೊಡೊ- ಏ ತಮ್ಮಾ ಆಚೆ ಮನೆ ವಿನೋದಿ ಕರ್ಕೊಂಡು ಬಾರೊ- ಏ ತಮ್ಮಾ ಊಟಕ್ಕೆ ಬಾಳೆ ಮಣೆ ಹಾಕೊ- ಇತ್ಯಾದಿ ಇತ್ಯಾದಿ ಪಡಿಚಾಕರಿಗೊಂದೇ ಹದ. ತಮ್ಮನ ಶಾಲೆ ಅಭ್ಯಾಸ?.... ಉಹುಂ ಕೇಳ್ಬಾರ್ದು.

ಹಿರೇ ಹುದ್ದರಿಗಳಾದ ಅಣ್ಣಂದಿರಿಗೆ ಮುಟ್ಟಿದ್ದೇ ತಪ್ಪು, ಮಾಡಿದ್ದೇ ತಪ್ಪು. ದೋಸೆ ಕೆಂಪು ಹತ್ತಲಿಲ್ಲ-ಅನ್ನ ಬಲೂವ-ಹುಳಿ ಖಾರ-ಪಲ್ಯ ಚಪ್ಪೆ-ಅದು ವಾರೆ-ಇದು ಡೊಂಕು ಎಂಬ ಅಣ್ಣಂದಿರ ಗಲಾಟೆಗೆ ಮೂಗು ಮುಚ್ಚಿಕೊಂಡು ಸೈಗುಟ್ಟುವ ಅಮ್ಮ-ಒಬ್ಬೊಬ್ಬರಿಗೂ ಒಂದೊಂದು ತಪರಾಕಿ ಬಿಗಿದು ಅಮ್ಮನಿಗೆರಡು ಕೆಂಡಗಣ್ಣು ಬಿಟ್ಟು ಧಡಕ್ಕನೆ ಎದ್ದು ಹೋಗುವ ಅಪ್ಪ-ಊಟ ತಿಂಡಿಯ ಪಂಕ್ತಿಯೆಂದರೆ ಗೌಜೀ ಗೌಜಿ. ಡುಮ್ಮು ಡುಮ್ಮು ಪ್ಯಾಂ ಪೇಂ. ಇದೊಂದು ಪರದೇಸಿ ಮಾತ್ರ ಪಂಕ್ತಿ ತುದೀಗೆ ಕೂತು, ಹಾಕಿದಷ್ಟನ್ನು ಚೊಕ್ಕ ನೆಕ್ಕಿ ಜಾಗ ಖಾಲಿ ಮಾಡುತ್ತಿತ್ತು.

ಇದು ಒಳಗಿನ ಪರಿಯಾದರೆ ಹೊರಗಿನದು ಇನ್ನೂ ಅತ್ತತ್ತ ಪದ್ಮಕ್ಕನ ಹಿತ್ತಿಲ ಪೇರಲ ಹಣ್ಣು, ನಾ ಮೊದಲು ಕಂಡಿದ್ದು ನನಗೆ ದೊಡ್ಡಪಾಲು ಎಂದು ಸಣ್ಣಣ್ಣ-ಬರೀಕಂಡುಬಿಟ್ಟರೇನ್ ಬಂತು? ಮರ ಹತ್ತಿ ಕೊಯ್ದವನು ನಾನು, ನನಗೇ ದೊಡ್ಡ ಪಾಲು ಎಂದು ದೊಡ್ಡಣ್ಣ, ಮಾತಿಗೆ ಮಾತು, ಕೈಗೆಕೈ, ಇಬ್ಬರೂ ದೂಡ್ಯಾಡಿಕೊಂಡು ಧೂಳಲ್ಲುರುಳಿ ಮೈಯೆಲ್ಲಾ ಹುಲಿಗಾಯ ಮಾಡಿಕೊಂಡು ಮೇಲೇಳುವಾಗ ಆ ಸುಡುಗಾಡಿನ ಪೇರಲ ಕಾಯಿ ಮಣ್ಣು ಮುದ್ದೆ. ಸುರಕ್ಷಿತ ದೂರದಲ್ಲಿ ಎಲ್ಲಕ್ಕೂ ಸಾಕ್ಷಿಯಾದ ಮತ್ತಿಮರ



ತೋಳ

ಚಿಟ್ಟೆಯು ಹಾರಾಟಕ್ಕೆ
ಕೋಗಿಲೆಯು ಹಾಡಿಗೆ
ಹರಿಣಿಯು ನೋಟಕ್ಕೆ
ನನ್ನೆದೆ ಸ್ಪಂದಿಸದು
ರಕ್ತ-ಮಾಂಸ ಬಯಸುವ
ತೋಳ
ನನ್ನಲ್ಲಿಹುದು !

-ಗಣೇಶ ಪಿ.ನಾಡೋರ

ದಂತೆ ತಣ್ಣಗೆ ನಿಲ್ಲುವ ತಮ್ಮ ಏನೇ ಆದರೂ ಅವರ ಬಾಲ ಬಿಡಲಾರ. ತನ್ನಷ್ಟಕ್ಕೆ ತಾನಿರಲಾರ.

ದೊಡ್ಡಣ್ಣನ ಸಣ್ಣ ಸೈಕಲ್ಲು, ಮೂರು ಮೈಲಿ ದೂರದ ಹೈಸ್ಕೂಲಿಗೆ ಹೋಗಲೆಂದು ತಂದದ್ದು. ಸಣ್ಣಣ್ಣನಿಗೂ ಸದಾಕಾಲ ಅದರ ಮೇಲೇ ಕಣ್ಣು. ಹಗಲೆಲ್ಲಾ ಅದೇ ಗುದ್ದಾಟ. ನೀ ಕೊಡೆ ನಾಬಿಡೆ-ನಾ ಕೊಡೆ ನೀ ಬಿಡೆ... ಅಪ್ಪನಿಗಷ್ಟು ಕೈ ತುರಿಕೆ ತೀರಿಸಿಕೊಂಡ ಸಮಾಧಾನ. ಇಡೀ ದಿನದ ಗೆಯ್ಮೆಯಿಂದ ಹಣ್ಣಾದ ಅಮ್ಮನಿಗೆ ಸಿಟ್ಟುಕ್ಕಿ ಉಕ್ಕಿ ಅವಳೂ ಬಂದು ಇಬ್ಬರಿಗೂ ನಾಲ್ಕು ಹೇರುವವಳೇ. ಅಕ್ಕಂದಿರದ್ದು ಅಲ್ಲೇ ಶಕುನಿ ಪಾರ್ಟಿ. ಈ ತಮ್ಮ ಮಾತ್ರ ಎಲ್ಲದರಿಂದಲೂ ಹೊರಗೆ. ಎಲ್ಲರಿಂದಲೂ ಆಚೆ. ತೋಟದ ತುದಿಯಲ್ಲಿ ಸುಮ್ಮನೆ ಹರಿವ ಹೊಳೆಯಂತೆ ಯಾವುದಕ್ಕೂ ತಲೆಕೊಟ್ಟು ನಿಂತ ಮನೆಯ ಹಿಂದಿರುವ ಮಾಮ್ಮೇರಿ ಬೆಟ್ಟದಂತೆ-ಮುಂದೆ ತಾನು ಕಾಯಾದೇನೊ-ಹಣ್ಣಾದೇನೊ ಇಲ್ಲ. ಸುಮ್ಮನೆ ಹಳಸಿ ಉದುರುವೆನೊ ಎಂಬ ನಿರೀಕ್ಷೆಯ ನೆರಳೂ ಸೋಕದೆ ನಿರುಮ್ಮಳ ಅರಳಿದ ಬದನೆ ಹೂವಿನಂತೆ.

ಹೂವು ಹಳಸಿ ಒಳ ಅರಿವು ಮಿಡಿ ಕಚ್ಚುತ್ತಿದ್ದಂತೆ ಹೇಗಾದರೂ ಮಾಡಿ ಇರವಲ್ಲದ ಈ ಇರುವಿನಿಂದ ಪಾರಾಗಲೇಬೇಕೆಂಬ ಕಾತರ. ಈ ಸುಡು ಸುಡು ಸಿಟ್ಟಿನಿಂದ - ಧುಸು ಮುಸು ಹೊಗೆಯಿಂದ - ಛಟ ಛಟಿಲ್ಲನೆ ಸಿಡಿವ ಕಿಡಿಮಾತಿನಿಂದ ಒಮ್ಮೆ ಕಳಚಿಕೊಂಡರೆ ಸಾಕೆಂದು ಎಸ್ಸೆಸ್ಸೆಲ್ಸಿ ಪರೀಕ್ಷೆ ಮುನ್ನಾದಿನ ದಿಕ್ಕು ದೆಸೆಯಿಲ್ಲದೆ ಹೊರಟು ಬಿಟ್ಟಿದ್ದು. ದೂರದೊಂದು ಪೇಟೆಯಲ್ಲಿ ಮೊಟ್ಟ ಮೊದಲು ಹೋಟೆಲ್ ಮಾಣಿಯಾಗಿ-ನಂತರ ಪೇಪರು ಹಂಚಿ, ಲಾಟರಿ ಟಿಕೇಟು ಮಾರಿ-ಪ್ರೆಸ್ಸಿನಲ್ಲಿ ಮೊಳೆ ಜೋಡಿಸಿ-ಅಂಗಡಿ ಲೆಕ್ಕ ಬರೆದು... ಛೆಛೆ! ಒಂದೆ-ಎರಡೆ? ಕೊನೇಗಂತೂ ಇನ್ನಿಷ್ಟೇ ಹಣೆಬರಾ, ಮತ್ತೇನೂ ತನ್ನಿಂದ ಸಾಧ್ಯವಿಲ್ಲ, ಅನ್ನೊ ಸತ್ಯ ಗೋಚರಿಸಿ ಜವಳಿ ಅಂಗಡಿಯ ಕೆಲಸಕ್ಕೆ ಸೇರಿ ಅಖಂಡ ಹದಿನೈದು ವರ್ಷಗಳಿಂದ ಅಲ್ಲೇ ತಾಪ ತೆಗೆಯುತ್ತ- ಅಲ್ಲೇ ಮತ್ತೆ ತಲುಬು ತಡೆಯಲಾರದೆ ಹೆಣ್ಣೊಬ್ಬಳ ಕೈ ಹಿಡಿದು-ಮಕ್ಕಳನ್ನೂ ಹುಟ್ಟಿಸಿ ತಲೆವಜ್ಜೆ ಹೆಚ್ಚಿಸಿಕೊಂಡು... ಇಲ್ಲೂ ಕೂಡ ಸದಾಕಾಲ ಸುಟು-ಸುಟು, ಸಿಡಿ,ಸಿಡಿ ಇದು ನಂಗೆ-ಅದೂ ನಂಗೆ! ಇಂಥಲ್ಲೂ ಮತ್ತೆ ಇಪ್ಪತ್ತು ವರ್ಷಗಳ ಹಿಂದಿನ ಕನಸು ಮಧ್ಯರಾತ್ರಿಯ ಎಚ್ಚರದಲ್ಲಿ ಬಂದು ವಕ್ಕರಿಸಿತೆಂದರೆ ಬೆಳಗುವರೆಗೆ ಜಾಗರಣೆಯೇ ಸೈ.

ಅಲ್ಲಿ- ಆ ಕನಸಿನಲ್ಲಿ ಒಡಲ ಕುಡಿಗಳಿಗಾಗಿ ಹನಿವ ಎದೆಯಿದೆ. ಒಡಹುಟ್ಟಿದವರೊಂದಿ[ಗೆ] ಏನೆಲ್ಲವನ್ನೂ ಹಂಚಿಕೊಳ್ಳುವ ಔದಾರ್ಯವಿದೆ[.] ಇನ್ನೊಂದರ ಒಳ ಹೊರಗನ್ನೆಲ್ಲ ಇಡಿಯಾಗಿ ಅರಿತುಕೊಳ್ಳುವ ತಾಳ್ಮೆಯಿದೆ. ಬದುಕಿಗಾಗಿ ಬದುಕಿ ಬದುಕು ಕಟ್ಟಿ ನಿಲ್ಲಿಸುವ ಶ್ರದ್ಧೆಯಿದೆ[.] ಒಟ್ಟಿನಲ್ಲಿ ಭಾಷೆಗಳು ಹೆಸರಿಸುವ ಸುಖ-ಸಂತೋಷ ಸಮೃದ್ಧಿ ತುಂಬಿ ತುಳುಕುತ್ತಿದೆ. ಎಲ್ಲ[ಾ] ಅಲ್ಲೇ... ಯಾವತ್ತಿನಿಂದಲೂ ಅಲ್ಲೇ. ಇಲ್ಲಿ? ಸ್ವಪ್ನ ಸತ್ಯವಾಗಲಾರದು. ಕಲ್ಪನೆ ಕಾರ್ಯವಾಗಲಾರದು. ಹಾಗಾಗಲು ಒಮ್ಮೆ ಸಾಧ್ಯವಿದ್ದಿದ್ದರೆ.. ಭೂಮಿಯ ಮೇಲಿನ ಜೀವಿತವೊಂದು ಸಹನೀಯ ಅವಧಿಯಾಗಿದ್ದರೆ... ರೆ...?

ಹುಡುಗಾಟಿಕೆಯಲ್ಲಿ ಎಲ್ಲಾ ಅಣ್ಣ ತಮ್ಮಂದ್ರೂ ಜಗಳಾಡ್ತಾರೆ. ಬಡಿದಾಡ್ತಾರೆ, ಅಲ್ಲೇ ಎಲ್ಲಾ ಮರೆತು ಒಟ್ಟಾಗಿ ಆಡ್ತಾರೆ. ಅದು ಈ ಲೋಕಕ್ಕೆ ಸಹಜ. ಆದರೆ ಐವತ್ತು ತುಂಬಿದ ಹಣ್ಣುಗೂದಲ ಹಿರಿಯಣ್ಣ ಹೀಗೆ ಮಾಡಿದ ನೆಂದರೆ... ಬಿಟ್ಟು ಕೊಡಬೇಕಾದ ಕಿಚ್ಚು ಇಷ್ಟು ಭಯಂಕರವೇ? ಇಷ್ಟೊಂದು ಭೀಭತ್ಸವೆ?.... ಇಷ್ಟೆಲ್ಲ ವರ್ಷಗಳಿಂದ ಒಡಲಲ್ಲಿಟ್ಟು ಜೋಪಾನ ಮಾಡಿಕೊಂಡು ಬಂದ ಅಣ್ಣ ತಮ್ಮ ಅನ್ನೋ ಮಮಕಾರವೆಲ್ಲ ಬರೀ ನಾಟಕವಾಗಿಬಿಟ್ಟಿತೆ?..... ಶ್ಯೋ ದೇವಾ! ಯಾಕಪ್ಪಾ ಇದೆಲ್ಲ? ಇಷ್ಟು ದಿನದ ಹಾಂಗೇ ಇಲ್ಲೇ ಬಿದ್ದಿರದೆ ಅಲ್ಲಿ ಹೋಗೊ ಬುದ್ಧಿ ಯಾಕೆ ಕೊಟ್ಟೆಯಪ್ಪಾ?

ಯಾಕೆ?...... ಕಾಡು ಸೇರಿದ ಕುಂತಿ ಮಕ್ಕಳು ನಾಡಿಗೆ ಯಾಕೆ ಬರಬೇಕಿತ್ತು? ಬಂದವರು ಕಾಯಕಷ್ಟ ಮಾಡಿಕೊಂಡು ಹೇಗೊ ಬದುಕಿರದೆ ಭೂಮಿಯಾಳುವ ಬಯಕೆಗೆ ಯಾಕೆ ಬೀಳಬೇಕಿತ್ತು? ಮನ ಮನದ ಕುರುಕ್ಷೇತ್ರಕ್ಕೆ ಯಾಕೆ ನಾಂದಿ ಹಾಡಬೇಕಿತ್ತು?.. ಅಯ್ಯೊ ಗೊತ್ತಿಲ್ಲ!.... ಎಲ್ಲೊ ಹಬ್ಬ ಹುಣ್ಣಿಮೆಗೊಮ್ಮೆ ಊರಿಗೆ ಹೋದಾಗ ಅದೆಷ್ಟು ಪ್ರೀತಿ!.. ಮಕ್ಕಿದಾರಲ್ಲ ತಿಂದ್ಯೋತಾರೆ.. ನಿಮಗಲ್ಲಿ ಅಪರೂಪ. ತಗೊಂಡ್ಹೋಗು.. ನೀವಲ್ಲಿ ದುಡ್ಡುಕೊಟ್ಟು ತಿನಬೇಕು, ಇಲ್ಲಿ ಕೊಳತು ಹಾಳಾಗ್ತಾ ಇದೆ... ಎಂದು ಹೊತ್ತೇನೆಂಬಷ್ಟು ಮಾವಿನ ಹಣ್ಣು-ಹಲಸಿನ ಕಾಯಿ-ಬಾಳೆ ಕೊನೆ ಹೊರಿಸಿದ್ದೇ ಹೊರಿಸಿದ್ದು.. ಇದೆಲ್ಲ ಬೇಕಾದಷ್ಟು ತಗೊಂಡ್ಹೋಗು ತಮಾ, ಜಮೀನು ಮನೆಯಲ್ಲಿ ಮಾತ್ರ ಪಾಲು ಕೇಳ್ಬೇಡ, ಅನ್ನೋದೆ ನಿಮ್ಮಣ್ಣನ ಹುನಾರು, ಎಂಬ ಇವಳ ಮಾತನ್ನು ಹೇಗೆ ಬರೋಬರೆ ಮಾಡಿಬಿಟ್ಟ!.... ಹೌದೆ?... ಸತ್ಯವೆ? ಹೇಗೆ ನಂಬಲಿ?... ನಂಬಿಕೆಯ ಮೊಟ್ಟೆಯೊಡೆದ ಲೋಳೆಯನ್ನು ಯಾವ ನೀರಿನಿಂದ ತೊಳೆದುಕೊಳ್ಳಲಿ?

...ಮನೆ ಬಿಟ್ಟು ಓಡಿ ಬಂದು ನಾಲ್ಕು ವರ್ಷಗಳೇ ಸಂದು ಹೋದ ನಂತರದ ಒಂದು ದಿನ-ಇನ್ನೊಂದು ಚಣವೂ ಇಲ್ಲಿ ನಿಲ್ಲಲಾರೆ, ಹುಟ್ಟಿದ ಮಣ್ಣನ್ನು ಮೆಟ್ಟದೆ ಬದುಕಲಿಕ್ಕೇ ಸಾಧ್ಯವಿಲ್ಲ ಅನ್ನಿಸಿ, ಕೂಡಲೇ ಗಾಡಿ ಹತ್ತಿ ಅಲ್ಲಿ ಹೋಗಿ ನೋಡಿದರೆ ಅಪ್ಪನ ಒಂದು ನಮೂನೆ ಉದಾಸೀನ. ಅಣ್ಣಂದಿರ ಕಣ್ಣಲ್ಲಿ ನೀನೊ-ನಿನ್ನ ಧಂಧೆಯೊ ಎಂಬ ಕುಹಕ ನಗೆ. ಅಕ್ಕಂದಿರಿಗೆ ಬಳೆ ರಿಬ್ಬನ್ನೂ ಒಯ್ದಿದ್ದರಿಂದ ಇರಬೇಕು-ಮೂವರೂ ನನ್ನ ಸುತ್ತುಗಟ್ಟಿ ಕೂತು ಎರಡು ದಿನ ಮಾತೇ ಮಾತಾಡಿದ್ದರು. ಅಮ್ಮ ಮಾತ್ರ ತೋಟದ ಬದಿಗೆ ಹೊರಟವನನ್ನು ಹಿಂಬಾಲಿಸಿ ಬಿಳಿ ಕಪ್ಪು ಕೂದಲು ಬಾಚಿ ಎಣ್ಣೆಗಂಟು ಹಾಕಿಕೊಳ್ಳುತ್ತ ಹೆಗ್ಗಾದಿಗೆ ಸಂಕದ ಮೇಲೆ ಕುಳಿತು ಸೊರ ಸೊರ ಮಾಡಿದ್ದಳು. ಈ ನಾಲ್ಕು ವರ್ಷಗಳಲ್ಲಿ ನಿನ್ನ ನೆನಪಾಗದೆ ಒಂದು ತುತ್ತನ್ನೂ ಉಣ್ಣಲಾಗಲಿಲ್ಲವೆಂದೂ- ಪ್ರತಿಬಾರಿ ದೇವರಿಗೆ ನಮಸ್ಕರಿಸುವಾಗಲೂ ದೇವ್ರೆ ನನ್ನ ಮಗ ಎಲ್ಲಿದ್ರೂ ಒಂದಿನ ಜೀವಗೂಡಿ ಬರ್ಲ್ಪಾ, ಎಂದು ಬೇಡಿಕೊಳ್ಳುವದೇ ಆಗಿತ್ತೆಂದೂ-ನಿನ್ನ ಪ್ರೀತಿಯ ಹೋಳಿಗೆ ತಿನ್ನುವಾಗಲಂತೂ ಗಂಟಲಿಳಿ ಯುತ್ತಿರಲೇ ಇಲ್ಲವೆಂದೂ-ಆದರೆ ಉಳಿದವರೆಲ್ಲ ಲಕ್‌ಲಾಲಾಗಿಯೇ ಇದ್ದರೆಂದೂ-ಹುಟ್ಟಿಸಿದ ಅಪ್ಪಸೈತ-ಹಾಳಾಗಿ ಹೋಗ್ಲಿ ಬಿಡು, ದಿನಕ್ಕೊಂದ್ ಸಿದ್ದೆ ಅಕ್ಕಿಕಾಳು ಉಳತ್ತು ಎಂದು ರೋಪು ಹಾರ್ಸಿದನೆಂದೂ-ಇತ್ತಿತ್ತಲಾಗಿ ಇವ್ರೆಲ್ಲ ಯಾಕ್ಹೀಂಗ್ ಆಗ್ತಾ ಇದ್ದಾರೊ? ನನ್ನ ಪುಣ್ಯಕ್ಕೆ ಗಡಿ ಮಿತಿ ಇಲ್ಲ ನೋಡು ಮಗಾ,... ನನಗೆ, ಹೆತ್ತ ಕಳ್ಳಿಗೆ ನನ್ನ ಕಳ್ಳ ಬಳ್ಳಿಗಳೆಲ್ಲ ಹಬ್ಬಿ ಹೂ ಬಿಡಲಿ ಅನ್ನೋದೊಂದೇ ಆಸೆ, ಯಾವ ಬಳ್ಳಿ ಸೊರಗಿದ್ರೂ ನೋಡ್ಲಿಕ್ಕಾಗ.... ನೀನೇಲ್ಲಾದ್ರೂ ಇರು ಮಗನೆ ನಿನ್ನ ಅನ್ನ ನೀ ಹುಟ್ಟಿಸ್ಕೊಂಡು ಮರ್ಯಾದೆಯಿಂದಿರು.. ಅನ್ನುತ್ತ ಮೇಲೆದ್ದಿದ್ದಳು.

ಆದರೆ ನಾನಲ್ಲಿದ್ದ ನಾಲ್ಕು ದಿನದಲ್ಲಿ ಒಂದೇ ಒಂದು ಬಾರಿ ಮನೆಯ ಗಂಡು ಶೂರರು ಊಟಕ್ಕೆ ಬಾರೊ ತಮಾ ಎಂದು ಕರೆದಿದ್ದರೆ.... ಮಗನೆ ಇಷ್ಟು ದಿನ ಎಲ್ಲಿದ್ದೆ? ಏನು ಮಾಡಿದೆ? ಯಾಕ್‌ಹಾಂಗ್ ಹೇಳ್ದೆ ಕೇಳ್ದೆ ಓಡಿ ಹೋದೆ?.... ಎಂಬ ಶಕಾರ ಶಬ್ದ ಅಪ್ಪನ ಬಾಯಿಂದ ಬಂದಿದ್ದರೆ....ಆಚೆ ಮನೆಯ ತಿಥಿಗೆ ಬಂದ ಘಟಾನುಘಟಿಗಳೆಲ್ಲ ಸೇರಿ ರಮ್ಮಿ ಆಡುತ್ತಿರು ವಲ್ಲಿಗೆ ಹೋಗಿ 'ಅಪ್ಪ, ನಾ ಹೋಗಿ ಬರ್ತೇನೆ' ಅಂದಾಗ ಕೂಡ ಎಲ್ಲಿಗ್ಹೊಂಟೆ? ಯಾಕೆ? ಅಲ್ಲೇನು ದಂಟು ಕಡಿಯೋದಿದೆ? ಇಲ್ಲೇ ಬಿದ್ದಿರು ಸುಮ್ಮನೆ ನಮ್ಹಾಂಗೇ ಮಣ್ಣಲ್ಲಿ ಗೇಯ್ತಾ.. ಕೆಸರಲ್ಲಿ ಓಡಾಡ್ತಾ ಇರು. ನಿಂಗೆಂತಾ ಧಾಡಿಯಲ್ಲ ಎಂದು ಒಂದೇ ಒಂದು ಮಾತು ಜೋರು ಮಾಡಿದ್ದರೆ.... ಹಾಗೆ ಜೋರು ಮಾಡಿಬಿಟ್ಟರೆ... ಎಂಬ ಅತ್ಯಂತ ತೆಳುವಾದ ಆಸೆಯೊಂದು ಎದೆಯಲ್ಲಿ ಮೂಡಿದ್ದು ಸಟ್ಟನೆ ಹರಿದು ಹೋದಾಗ ಇನ್ನೆಂದೂ-ಎಂದೂ ಆ ಮನೆಯ ಅನ್ನ ತಿನ್ನುವದಿಲ್ಲ ಎಂಬ ಪ್ರತಿಜ್ಞೆಯೊಂದು ಮೊಳೆತು,.. ನಂತರ ಅಪ್ಪನಿಗೆ ಕೊಳ್ಳಿ ಹಾಕಲಿಕ್ಕೇ ಅಲ್ಲಿಗೆ ಹೋಗಿದ್ದು. ಮತ್ತೆರಡು ವರ್ಷಕ್ಕೆ ಅಮ್ಮನೂ ಖಾಲಿಯಾದಾಗ ಅಲ್ಲಿಂದ ಮನಸ್ಸು ಪೂರ್ತಿ ಮುರಿದು ಹೋದರೂ ಹೋಗಿ ಬರುವ ಸಂಬಂಧ ಮುರಿದುಕೊಳ್ಳಲಿಲ್ಲ. ತೀರಾ ಅಪರೂಪಕ್ಕೆ ಹೋದಾಗ ಅಣ್ಣ ಅತ್ತಿಗೆಯರ ಉಪಚಾರಕ್ಕೂ ಕೊರತೆಯೇನಿರಲಿಲ್ಲ.

ಹಾಗೆ ಬಿಟ್ಟು ಬಂದ ಬಂದುವನ್ನೇ ಮತ್ತೆ ಮೆಟ್ಟಲು ಹೋಗುವಂಥ ಅನಿವಾರ್ಯ ಬಂದಿದ್ದಕ್ಕೆ ಕಾರಣವಾಗಿ ನನ್ನ ದುರಾದೃಷ್ಟವಿರಬಹುದು- ಅಥವಾ ನನ್ನ ಅಸಾಮಾರ್ಥ್ಯವಿರಬಹುದು- ಹೆಂಡತಿ ಮಕ್ಕಳ ಕೆಟ್ಟ ನಸೀಬವಿರಬಹುದು. ಅಥವಾ... ಅಥವಾ.. ನನಗೆ ಬರಬೇಕಾದ್ದನ್ನು ಅವರು ತಿನ್ನುತ್ತಾರಲ್ಲ ಎಂಬ ಒಳಕ್ಕಿಚ್ಚೇ ಹೌದೊ?... ಇಲ್ಲ, ಇವಳ ಕಟಕಟೆಗಾಗಿಯೂ ಅಲ್ಲ. ದಿನನಿತ್ಯದ ದರಿದ್ರಾವಸ್ಥೆಗೆ ಮನಸ್ಸು ರೋಸಿ ಹೋಗಿ ನಾನಾಗಿಯೇ ಒಂದು ಮುಂಜಾನೆ ಬಸ್ಸು ಹತ್ತಿ ಹಿರಿಯಣ್ಣನೆದುರು ಹೋಗಿ ಕೂತು, ಒಂದೊಂದೇ ಶಬ್ದ ಒಟ್ಟುಗೂಡಿಸಿ... ನನಗೂ ಮಕ್ಳು ದೊಡ್ಡವರಾದ್ರು.. ಬರೋ ನಾಕು ದುಡ್ಡು ಏನೇನೂ ಸಾಕಾಗೋದಿಲ್ಲ.. ಪ್ಯಾಟೆ ಮ್ಯಾಲಿನ ಬದುಕು... ಒಂದು ಹಿಡಿ ಕುಂಟಿಗೂ ದುಡ್ಡೇಯ.. ಹೇಗಾದ್ರು ನೀನೊಂದಿಷ್ಟು ಮುದ್ದತು ಮಾಡೋದೇ ಸೈ- ಅಂದಾಗ ಅಣ್ಣನ ಮುಖ ನೂರು ಅಮಾವಾಸ್ಯೆಯಾಗಿತ್ತು. ಸಾವಿರ ರಾತ್ರಿಗಳು ಕಣ್ರಗೆ ಸುರಿಯುತ್ತಿದ್ದವು. ಹತ್ತು ನಿಮಿಷದ ಘನಮೌನದ ನಂತರ 'ಸರಿ ನೋಡೋಣ' ಎಂಬ ಒಂದೇ ಮಾತು ಹೇಳಿ ಒಳಗೆದ್ದು ಹೋಗಿದ್ದ. ಅಣ್ಣ ಈಗ ಬಂದ. ಆಗ ಬಂದ. ಇದೀಗ ಮುಂದಿನ ಮಾತಾಡಿದ ಎಂದು ಕಾದು ಕಾದು ಕೊನೆಯ ಬಸ್ಸೂ ತಪ್ಪಿ ಹೋಗುವ ಹೊತ್ತಾದಾಗ 'ಇದೇನ್ರಯ್ಯಾ ವಿಚಿತ್ರ?' ಎಂಬ ಪ್ರಶ್ನೆ ಹೊತ್ತು ಹಿಂತಿರುಗಿದ್ದೆ.

ವಾರ ಬಿಟ್ಟು ಮತ್ತೊಮ್ಮೆ ಹೋಗಿ ಮಾತಾಡಿಸಿದಾಗ 'ಅಲ್ಲೊ ಮಾರಾಯ ನಿನ್ಹತ್ರ ಮನೆ ಬಿಟ್ಟು ಹೋಗು ಅಂತ ಯಾರ್‍ಹೇಳಿದ್ರು? ನೀನೇ ಊರ ತಿರಗೋ ಚಟದಿಂದ ಓಡಿ ಹೋದೆ. ಈಗಾದ್ರೂ ಏನಾತು? ಹೆಂಡ್ತಿ ಮಕ್ಳ ಸಂಗ್ತಿ ಇಲ್ಲೇ ಬಂದಿರಲ್ಲ. ಹ್ಯಾಂಗೂ ತೋಟದ ಕೆಲ್ಸ ಮನೆ ಕೆಲ್ಸ ಎಂದೂ ಮುಗೀಲಾರ್ದರಷ್ಟು ಬಿದ್ದಿದೆ'... ಅಂದು ಅದೇ ಕ್ಷಣದಲ್ಲಿ 'ಹ್ಹಂ,ಹ್ಹಂ, ಬರೀ ಬಾಯಲ್ಲಿ ಹೇಳಿಬಿಟ್ರಾಗಲಿಲ್ಲ. ತ್ವಾಟದಲ್ಲಿ ಆಳುಗಳಾಂಗೇ ಗೇಯ್ಬೇಕು. ಉಂಬ್ಳ-ನುಸಿ ಕಚ್ಚಿದ ಕೆರ್ರೊ ಬೇಕು, ಬಿಸಿಲು-ಮಳೆ-ಇಬ್ಬನಿ-ಹೇಳಿಲ್ದೆ ದುಡೀಬೇಕು. ಅದೇನು ಉದ್ದಕ್ಕೆ ಪ್ಯಾಂಟು ನೇಲಿಸಿಕೊಂಡು ಗಿರಾಕಿಗಳೆದ್ರು ಹಲ್ಲು ಕಿರದ್ಹಾಂಗಲ್ಲ, ನೆನಪಿಟ್ಕ..' ಎಂಬ ಕೊಂಕು ಸೇರಿಸಿದಾಗ ಗುಂಡಿಗೆ ಬಾಯಿಗೆ ಬಂದಿತ್ತು. ಹೆಂಡತಿಯ ಹೊಟ್ಟೆಕಿಚ್ಚು ಸಾಯಲಿ, ನನಗೇ ಅವರೆಲ್ಲರೊಂದಿಗೆ ಬೇಳೆ ಬೇಯಿಸುವ ಧೈರ್ಯವಿರಲಿಲ್ಲ. ಅಷ್ಟೇ ಅಲ್ಲ, 'ಹೆತ್ತ ಅಪ್ಪನ ಆಸ್ತಿಯಲ್ಲಿ ಮಗನಿಗೇನೇನೂ ಇಲ್ಲದೆ ಹೋಯಿತೆ ಹಾಗಾದರೆ?.... ಇದೆಯೊ ಇಲ್ಲವೊ ನಾನೂ ನೋಡಿಯೇ ಬಿಡುತ್ತೇನೆ, ಮೂರು ಆರಾಗ್ಲಿ, ಆರು ಒಂಬತ್ತಾಗ್ಲಿ, ನನ್ನ ಪಾಲಿನ ಆಸ್ತಿ ಪಡೆದೇ ತೀರುತ್ತೇನೆ.' ಎಂಬ ಕೆಟ್ಟ ಹಟವೂ ಅಲ್ಲೇ ಹುಟ್ಟಿತ್ತು.

ಶತಾರಿಪಿಯಂತೆ ಸತತ ಎರಡು ವರ್ಷ, ತಿಂಗಳಿಗೊಮ್ಮೆ ಭೇಟಿ ಕೊಟ್ಟು, ಅವ ಮನೆಯಲ್ಲಿ ರ್‍ಲಿ ಬಿಡಲಿ-ಮಾತಾಡಲಿ ಬಿಡಲಿ-ಊಟ ತಿಂಡಿ ಸಾಯಲಿ ಕುಡ್ತೆ ನೀರೂ ಕೊಡದಿದ್ದರೂ ನೆಲಕ್ಕೆ ಬಡಿದು ಕೂತು ಅಂತೂ ಅಣ್ಣ ಬೇಜಾರು ಹತ್ತಿ ಹಿಸೆ ಪಂಚಾತ್ಗೆಗೆ ಕರೆದಿದ್ದ. ಎರಡು ವಾರದ ಹಿಂದೆ ಪಂಚರ ನಿರ್ಣಯಕ್ಕೆ ಮೂವರೂ ಒಪ್ಪಿಕೊಂಡು ಕರಾರು ಬರೆದು ಸಹಿಯಾಗಿತ್ತು. ದೊಡ್ಡ ಮನೆಯನ್ನು ಅವರಿಬ್ಬರಿಗೆ ಬಿಟ್ಟು ಪಕ್ಕದ ವೋರಿ-ಅದಕ್ಕೆ ತಾಗಿದಂತಿರುವ ಕೊಟ್ಟಿಗೆ-ಗ್ಯಾಸ್ ಬಾವಿ ನನ್ನ ಪಾಲಿಗೆ ಕೊಟ್ಟಿದ್ದರು. ಬರುವ ಅಕ್ಷಯ ತದಿಗೆಗೆ ಅಲ್ಲಿ ಹೋಗಿ ಬಿಡಾರ ಹೂಡಬೇಕೆಂದು ನಿಶ್ಚಯಿಸಿದವನು ಒಮ್ಮೆ ನೋಡಿ ಬರೋಣ ವೆಂದು ನಿನ್ನೆ ಸುಮ್ಮನೆ ಬಸ್ಸು ಹತ್ತಿ... ಒಂದೆಕರೆ

ಗೋಡೆ!

ಒಂದು ಮಾತಿನ ಕಥೆ
ಇಷ್ಟೇ ನೋಡು ಗೆಳತಿ
ಮೌನದಲೆಗಳು ಹರಿದು
ಸಮುದ್ರದಂಚಿಗೆ ಬಂದು
ಘೀಳಿಡುವಂತೆ
ಮನದ ಚಿಪ್ಪೊಡೆದಾಗ
ಹೆಪ್ಪುಗಟ್ಟಿದ ಭಾವನೆಗಳು
ಚೆಲ್ಲಾಪಿಲ್ಲಿಯಾಗಿ
ವಿರಹವನ್ನೆ ನಿರ್ಮಿಸಿದವು
ನಮ್ಮಿಬ್ಬರ ನಡುವೆ
ತಡೆಗೋಡೆಯನ್ನೆ ನಿಲ್ಲಿಸಿದವು.

– ಚನ್ನಬಸವ ಎಂ.ಹೇಡೆ

ಹೆಣ್ಣೇ

ಸಂಪ್ರದಾಯ
ಮೌಢ್ಯಗಳನೆಲ್ಲ
ಮೆಟ್ಟಿ ನಿಂತರೆ
ನೀ ಸಬಲೆ.
ಗಂಡಿನ ಅಟ್ಟಹಾಸಕೆ
ಮಣಿದು
ಗಾಣದೆತ್ತಿನಂತೆ
ತಲೆದೂಗಿದರೆ
ನೀ ಅಬಲೆ

-ಜಿ. ಎಸ್. ಲಕ್ಕುಂಡಿಮಠ

ಅಡಿಕೆ ತೋಟವೆಂದರೆ ಏನಿಲ್ಲಾಂದ್ರೂ ನಾಲ್ವತ್ತು ಸಾವಿರದ ಗಂಟು... ಸುಡುಗಾಡಿನ ಮನೆ ಬಾಡಿಗೆ ರಗಳೆ ಇಲ್ಲ... ಇಡೀ ದಿನ ಗೂಟ ಬಡಿದು ನಿಲ್ಲಬೇಕಿಲ್ಲ. ನನ್ನ ಬಂಗಾರಿಯಂಥದೇ ಒಂದು ಸಣ್ಣ ದನ ತಂದು ಸಾಕಿದರೆ ಈಗಾದರೂ ಮಕ್ಕಳು ತಾಜಾ ಹಾಲಿನ ರುಚಿ ಕಂಡಾರು ದೇವರು ನಡೆಸಿಕೊಟ್ಟರೆ ಬೆಣ್ಣೆ ತುಪ್ಪವೂ ಆದೀತು. ....ಬಸ್ಸಿಳಿಯುವ ವರೆಗೂ ಕನಸು ಕಂಡಿದ್ದೇ ಕಂಡಿದ್ದು.

ಆದರೆ ಅಲ್ಲಿ ಹೋಗಿ ನೋಡಿದಾಗ ಮಾತ್ರ ಆಯ್ತು, ಕತೆ ಮುಗಿದೇ ಹೋತು. ಸಾಕ ನಿನ್ನ ಹಣೆಬರಕ್ಕೆ? ಅಥ್ವಾ ಇನ್ನೂ ಬೇಕ? ಎಂದು ಯಾವುದೊ ದನಿ ಹಂಗಿಸಿದಂತೆ ಭಾಸವಾಗಿ ಸೂರಂಚಿನ ಕಂಬಕ್ಕೆ ಕಂಬವಾಗಿ ನಿಂತು ಕಣ್ಣು ಬಿಟ್ಟರೆ-ಎದುರಿಗೆ ಭೂಕಂಪದ ಮರುಕ್ಷಣದ ಕಿಲಾರಿಯೊ? ಯುದ್ದನಿಂತ ಮರುದಿನದ ರುವಾಂಡವೊ?... ನೆರೆ ಬಂದು ಮುರಿದು ಹೋದ ಇಹದ ಬದುಕೋ? ಅರ್ಥವಾಗಲಿಲ್ಲ.

ಆ ಕರಾಳ ವಿಕರಾಳವಾಗಿ ಹಂಚು ಕೀಳಿಸಿಕೊಂಡು ಗುಡಿ ದೆಬ್ಬೆಗಳು ಮಾತ್ರ 'ಕೀ ಹಾ' ಎಂದು ಹಲ್ಲು ಕಿರಿಯುತ್ತಿರುವ ಕೊಟ್ಟಿಗೆಯ ಮಾಡು.. ಜಂತಿ-ಹಲಗೆ ಕಿತ್ತು ಬಾಗಿಲು ಚೌಕಟ್ಟು ಕಿತ್ತು ಗೋಡೆ ಮಾಡಷ್ಟೇ ನನ್ನದಾಗಿ ನಿಂತ ವೋರಿ..ಮುಚ್ಚಿದ್ದ ಕಬ್ಬಿಣದ ಡ್ರಂ ಇಲ್ಲದೆ ಹುಳು ಮಿಜಿವ ಗೋಬರ್ ಗ್ಯಾಸಿನ ನರಕ..... ಗಡೆಗಡೆ ಕಿತ್ತ ಬರಿ ಬಾವಿ... ಶಿವ ಶಿವಾ ಶಿವ ಶಿವಾ!!

ಅದೇ ಹೊತ್ತಿಗೆ, ಒಂದು ಬಾಳೆ ಹಣ್ಣಿನಲ್ಲೂ ಕಣಕುಸುಮ ಹೆಚ್ಚು ಕಡಿಮೆಯಾಗದಂತೆ ಸರೀ ಆರು ಪಾಲು ಮಾಡಿ ಮಕ್ಕಳಿಗೆ ಹಂಚಿ ಕೊಡುತ್ತಿದ್ದ ಅಮ್ಮನ ನೆನಪು... ಅವಳು ದಿನಾ ಹೇಳುತ್ತಿದ್ದ 'ಕೆರೆ ಬಾವಿ ದೇವಾಲಯವ ನೀ ಕಟ್ಟಿಸು! ಅರವಟ್ಟಿಗೆ ಅನ್ನದಾನವ ನಡೆಸು! ನಿನ್ನ ನಂಬಿದ ನೆರೆ ಬಳಗವ ಸಲಹೂ..' ಎಂಬ ಹಾಡಿನ ನೆನಪು... ಎಲ್ಲರೂ, ಛೀಥೂ ಮಾಡುತ್ತಿದ್ದ ಬಾಂದೇರ ಹೊನ್ನಜ್ಜಿಯನ್ನು ಹಿತ್ತಿಲ ಕಡೆ ಕರೆದು ಮಜ್ಜಿಗೆ ತಂಬ್ಗಿ ಕೊಡುತ್ತಿದ್ದುದರ ನೆನಪು....ಯಾವ ವಾಸನೆಗೆ ಸಣ್ಣಣ್ಣ ಬಂದನೊ... 'ಅಣ್ಣಯ್ಯನ ಘನಕಾರ್ಯ ನೋಡು' ಎಂದು ಆತ ಶುರು ಹಚ್ಚುತ್ತಿದ್ದಂತೆಯೇ ಯಾಕೊ ಹೊಟ್ಟೆ ತೊಳೆಸಿ ಅಲ್ಲೇ ವಾಂತಿಯಾಗಿ ಬಿಟ್ಟಿತೆಂಬ ಹೆದರಿಕೆಯಿಂದ ಓಡಿ ಬಂದಿದ್ದೆ. ಮನೆ ಸೇರಿದವನು ರಾವು ಬಡಿದವನಂತೆ ಬಿದ್ದುಕೊಂಡಿದ್ದೆ.

... ಅಂತೂ ಅಂಗಡಿ ಬಂತು. ಅಲ್ಲಲ್ಲ, ಅಂಗಡಿಯ ಸಮೀಪಕ್ಕೆ ನಾನು ನಡೆದುಕೊಂಡು ಬಂದೆ. ಇನ್ನು ಸಂಜೆ ಒಂಬತ್ತರ ತನಕ ಅಡ್ಡಿಯಿಲ್ಲ. ಮನೆ ಕಡೆ ಚಿಂತೆ-ರಗಳೆ-ಬೇಜಾರು ಎಲ್ಲವೂ ಖಲಾಸ್. ಆದಷ್ಟೂ ಹೊತ್ತೂ ಮಾತು-ಮಾತು-ಮಾತು-ಮಾತಿಗೊಂದು ನಗೆ ಬನ್ನಿ ಬನ್ನಿ ಎಂಬ ಸ್ವಾಗತ-ಏನ್ ಬೇಕು ನಿಮಗೆ ಎಂಬ ವಿನಯ-ಇದ ತಗೊಳ್ಳಿ ಇದತಗೊಳ್ಳಿ ಎಂಬ ಉಪಚಾರ. ಎಲ್ಲ ಎಲ್ಲವೂ ಶುದ್ಧ ನಾಟಕವಾಗಿದ್ದರೂ ಸುಟ್ಟ ಜನ್ಮಕ್ಕೆ ಕಚ್ಚಿಕೊಂಡಿರಲು ಇಷ್ಟಾದರೂ ಬೇಕಲ್ಲ...

'ಎಲ್ಲಿದ್ದೀಯೊ ಭಡವಾ....?' ಗುಂಡಣ್ಣ ಬೆನ್ನಿಗೊಂದು ಶಾಭಾಸ್ ಕೊಟ್ಟು ಸಾವ್ಕಾರ್ರು ಬರುತ್ತಿರುವ ಸೂಚನೆ ಕೊಟ್ಟಿಧ್ದಕ್ಕೆ ಕಣ್ಣಲ್ಲೇ ಅವನಿಗೆ ಕೃತಜ್ಞತೆ ಹೇಳಿ ಹತ್ತಿರ ಬಂದ ಗಿರಾಕಿಗಳತ್ತ ಗಮನ ಹರಿಸಿದೆ... ರಬ್ಬರ್ ಸಿಲ್ಕ್ ಸೀರೆಯಂತೆ.. ಮ್ಯಾಚಿಂಗ್‌ಕಲರ್ ಬ್ಲೌಸ್‌ಪೀಸಂತೆ.. ಲಂಗವಂತೆ -ಅಂಗಿಯಂತೆ.. ಒಳಬಟ್ಟೆಯಂತೆ... ಅವರು ಆರಿಸಿಕೊಂಡ ಎಲ್ಲವನ್ನೂ ಒಟ್ಟು ಮಾಡಿಟ್ಟು ಪ್ಯಾಂಟು ಶರ್ಟಿನ ಬಟ್ಟೆ ಸಿಗಿಯುವಾಗ-ಯಾರೊ ನನ್ನ ನೆತ್ತಿಯಿಂದಾರಂಭಿಸಿ ಸರೀ ಅರ್ಧಕ್ಕೆ ಸಿಗಿದು ಒಗೆಯುತ್ತಾರೆ ಬಹುಶಃ ಎಂಬ ವಿಚಾರ ಬಂದದ್ದೇ ಥರ ಥರ ನಡುಗಿ ಹೋದೆ.

ಇಲ್ಲ, ಇಲ್ಲ, ಹಾಗಾಗಲಾರದು... ಹಾಗಾಗಬಾರದು, ಸಿಗಿದ ಹೊರ್ತೂ ಅಂಗಿ ಇಲ್ಲ. ಕತ್ತರಿಸಿದ ಹೊರತೂ ಅಳತೆ ಆಕಾರವಿಲ್ಲ. ಕಾಲೆಂದು-ಕೈ ಎಂದು, ಬೆನ್ನು ಎದೆಯೆಂದು ಬೇರೆ ಬೇರೆ ತುಂಡು ಮಾಡಿ, ಆ ತುಂಡುಗಳನ್ನು ಸೇರಿಸಿ ಹೊಲಿದೇ ಬಟ್ಟೆ ಸಿಗಬೇಕು. ಹಲವು ಬಿಡಿಗಳಿಂದಲೇ ಒಂದು ಇಡಿಯಾಗಬೇಕು. ನೂರು ಸಂಕಟದ ಚೂರುಗಳನ್ನು ಒಟ್ಟು ಗೂಡಿಸಿ ಹೊಲಿದು ಮೂರೇ ಆದರೂ ಸಂತಸದ ಅರಿವೆ ತೊಡಬೇಕು. ತೊಟ್ಟೇ ತೊಡುತ್ತೇನೆ ಎಂಬ ಉತ್ಸಾಹದಿಂದ ರಾತ್ರಿ ಮನೆ ಸೇರಿದವನು ಊಟಕ್ಕೆ ಕುಳಿತಾಗ 'ನಾಳೆ ನಾವೆಲ್ರೂ ಊರಿಗೆ ಹೋಗೋಣ. ನಾನೂ ರಜೆ ಮಾಡ್ತೇನೆ'. ಅಂದೆ. ಇವಳು ಸುಮ್ಮನೆ ಕಣ್ ಕಣ್ ಬಿಟ್ಟು ನೋಡಿದಳು. ಮಕ್ಕಳಿಗಂತೂ ಬಸ್ಸಿನಲ್ಲಿ ಹೋಗುವ ಖುಶಿಯೋ ಖುಶಿ.

ಬೆಳಗಾಗಲು ಇನ್ನೂ ಒಂದು ತಾಸಿರುವಾಗಲೇ ಗಲಾಟೆ ಶುರು. ಬಡಬಡ ಮಿಂದು ಉಪ್ಪಿಟ್ಟು ತಿಂದು ಎಂಟು ಗಂಟೆಗೆಲ್ಲ ಬಸ್ ಸ್ಟ್ಯಾಂಡ್ ತಲುಪುತ್ತಿದ್ದಂತೆ ತೌರೂರಿನ ಬಸ್ಸು ರೆಡಿಯಾಗಿ ನಿಂತಿತ್ತು. ಆಗಲಿ, ಶಕುನವಂತೂ ಒಳ್ಳೆಯದೇ ಅಂದುಕೊಂಡು ಮಕ್ಕಳಿಬ್ಬರನ್ನೂ ಹತ್ತಿರ ಕೂಡ್ರಿಸಿ ಕೊಂಡು ಅದೂ ಇದೂ ಮಾತಾಡುತ್ತಿರುವಾಗಲೇ ಕಂಡಕ್ಟರ್ 'ಯಾರ್ರೀ ಸಸಿಹಿತ್ಲು? ಇಳೀರಿ ಬೇಗ' ಅಂದ.

ಮಗನ ಮುಂದಿಟ್ಟುಕೊಂಡ ನಾನು-ಮಗಳ ಕೈ ಹಿಡಿದ ಇವಳು-ನಮ್ಮದೆನ್ನುವ ಮನೆಯ ಪಾಗಾರದಾಟಿ, ಅಂಗಳ ಅಳೆದು, ಮೆಟ್ಟಿಲೇರಿದ್ದೇ ತಡ, ಹೆಬ್ಬಾಗಿಲು ಬೇಂಚಿನ ಮೇಲೆ ಕೂತಿದ್ದ ದೊಡ್ಡಣ್ಣ ಮುಖ ಅಡ್ಡ ಹಾಕಿ ಎದ್ದು ಹೋದದ್ದು ಕಂಡು 'ದೊಡ್ಡಪ್ಪಾ...' ಎಂಬ ಮಕ್ಕಳ ಕೂಗು ಅರ್ಧದಲ್ಲೇ ನಿಂತಿತು. ಇವಳು ಪಿಳಿ ಪಿಳಿ ನನ್ನ ನೋಡಿದಳು. ನಾನು, ನಾನಲ್ಲ ಆ ಗೋಡೆ ಅಂದುಕೊಂಡು ಸೀದಾ ಮುನ್ನುಗ್ಗಿದೆ ನಮ್ಮದೆಂಬ ಆ ವೋರಿಗೆ. ಅಂದರೆ ಕಿಟಕಿ ಬಾಗಿಲು ತೊಲೆ-ಜಂತಿ-ಕೆಂಪು ಸಿಮೆಂಟಿನ ನೆಲ-ಎಲ್ಲವೂ ಕಿತ್ತು-ಕಿತ್ತು ಅಸಡ್ಡಾಳವಾಗಿ ನಿಂತ ಅವಶೇಷಕ್ಕೆ .. ಹೊತ್ತೊಯ್ಯಲು ಬಾರದ ನೆಲವನ್ನೂ ಬಿಟ್ಟಿಲ್ಲ ಪುಣ್ಯಾತ್ಮ. ಅಗೆದಗೆದು ಗಾಯಗೊಳಿಸಿದ್ದಾನೆ.

'ಇದ್ರೇನ್ರಿ ಇದು? ....' ಇವಳು ಕೂಗುತ್ತ ಅಲ್ಲೇಕುಕ್ಕರಿಸಿದರೂ ಕೇಳಿಯೇ ಇಲ್ಲವೆಂಬಂತೆ ಸೂರು ನೋಡುತ್ತ ನಿಂತಾಗ ಮಗ ಬಿಡಲಿಲ್ಲ', ಅಪ್ಪಾ, ನಾವೆಲ್ಲ ಚೌತಿ ಹಬ್ಬಕ್ಕೆ ಬಂದಾಗ ಎಷ್ಟೆಲ್ಲಾ ಜನ ಇಲ್ಲೇ ಕೂತು ಊಟ ಮಾಡ್ತಿದ್ದೆವಲ್ಲ. ಈಗ ನೋಡಿದ್ರೆ ಬಾಗಿಲೂ ಇಲ್ಲ - ಕಿಟಕಿಯೂ ಇಲ್ಲ. ನೆಲವು ಹಾಳು. ಇದೇನಾಯ್ತುಪ್ಪ? ಇಲ್ಲಿನಾವು ಹ್ಯಾಂಗಿರೋದು? ಕಳ್ಳರು ಗಿಳ್ಳರು ಬಂದು ಬಿಟ್ರೆ...?'

ಹ್ಯಾಂಗಾದ್ರೂ ಇರೋಣ ಪಿಳ್ಳ.. ನಿಮ್ಮ ಇತಿಹಾಸ ಪುಸ್ತಕದಲ್ಲಿ ಬರ್ತದಲ್ಲ. ಅಲೆಗ್ಝಾಂಡರನ ದಂಡಯಾತ್ರೆ ಅಂತ. ಆ ದಾಳಿಯ ಅವಶೇಷ ಇಲ್ಲೇ ಇದೆ. ನೋಡು, ಎಲ್ಲಾ ಕೊಳ್ಳೆ ಹೊಡೆದು ಒಯ್ಲಿಕ್ ಬರುವಂಥದಷ್ಟನ್ನೂ ಕಿತ್ಗೊಂಡ್ಹೋಗಿ ದಾರೆ ವೈರಿಗಳು. ಮಣ್ಣ ಗುಪ್ಪೆ ಮಾತ್ರ

ಬಿಟ್ಹೋಗಿದಾರೆ. ಇಷ್ಟೇ ಅಲ್ಲ ಇನ್ನೂ ಇದೆ ಬನ್ನಿ.... ಇಲ್ನೋಡಿ, ಈ ಕೊಟ್ಟಿಗೆ. ಇದು ಘೋರಿ ಮಹಮ್ಮದ ಹಾಳು ಮಾಡಿದ್ದು. ಆ ಬಾವಿ ನೋಡಿ, ಅದು ಕಳಿಂಗ ಯುದ್ಧದಲ್ಲಿ ನಾಶವಾದದ್ದು.... ಎಷ್ಟು ಮಜಾ ಅಲ್ವಾ?' ಮಕ್ಕಳನ್ನು ನಗಿಸುತ್ತಿರುವ ಸಂಭ್ರಮದಿಂದ ನಾನು ತಿರುಗಿ ನೋಡುವುದಕ್ಕೂ ಇವಳು ನಿಂತಲ್ಲೇ ಕುಸಿದು ಬೀಳುವುದಕ್ಕೂ ಹೊತ್ತು ಕೂಡಿ ಬಂತು. 'ಅಯ್ಯಯ್ಯೋ-ಅಯ್ಯಯ್ಯೋ' ಕೂಗಿನೊಂದಿಗೆ ಮಕ್ಕಳಿಬ್ಬರೂ 'ಅಮ್ಮಾ' ಎಂದು ಅಳತೊಡಗಿದಾಗ ಒಂದು ಕ್ಷಣ ನಾನೂ ದಿಗ್ಭ್ರಾಂತನಾಗಿ, ಮರು ಗಳಿಗೆ ಎಚ್ಚತ್ತು ಅವಳ ತಲೆಗೆ ನೀರು ಹಾಕಿ ತಟ್ಟೋಣವೆಂದು ತಡಕಾಡಿದರೆ ಎಲ್ಲಿದೆ ನೀರು? 'ಬರ್ರೋ.. ಯಾರಾದ್ರೂ ಕುಡ್ತೆ ನೀರು ಕೊಡ್ರೋ... 'ನಾನೇ ಕೂಗಿದ್ದೋ ಅಥವಾ ಬೇರೆಯಾರೋ ಗೊತ್ತಾಗಲಿಲ್ಲ. ಗದ್ದಲಕ್ಕೆ ಓಡಿ ಬಂದ ಸಣ್ಣಣ್ಣ ಸೀದ ಒಳಗೆ ಹೋಗಿ ಚೊಂಬು ನೀರು ತಂದು ತಲೆಗೆ ಸುರಿದಾಗ 'ಆಂ' ಎನ್ನುತ್ತ ಕಣ್ಣು ಬಿಟ್ಟಳು.

ಸಣ್ಣಣ್ಣ ಹತ್ತಿರ ಬಂದು ಕುಳಿತು ತನಗಷ್ಟೇ ಕೇಳುವಂತೆ ಹೇಳುತ್ತ ಹೋದ- ಹಿಸೆ ಪಂಚಾತ್ಗೆ ಆದ ಮರುದಿನವೇ ದೊಡ್ಡಣ್ಣ-ಅವ್ನ ಮಗ ಎರಡು ಆಳುಗಳನ್ನೂ ಕರ್ಕೊಂಡು ಕಿತ್ತಿದ್ದೇ ಕಿತ್ತಿದ್ದು, ಹೊತ್ತಿದ್ದೇ ಹೊತ್ತಿದ್ದು. .... ನಮ್ಮಜ್ಜನ ಕಾಲದ ಮನೆಯಾಗಿತ್ತಂತೆ ಇದು. ಆದ್ರೂ ಇಷ್ಟು ಗಟ್ಟಿ ಇತ್ತು. ಇಂವೊಬ್ಬ ಹುಟ್ಟಿದನ್ನಲ್ಲ ಹಾಳಗೆಡಕ. ಎಲ್ಲಾ ನವಾ ನಾಶ್ನ ಮಾಡ್ಬಿಟ್ಟ.... ಹಿಂಗ್ಯಾಕ ಹಾಳು ಮಾಡ್ತೀರೊ? ಅಂದೆ... ನಿಂದೊಂದ ನೀ ನೋಡ್ಕೊ ಸಾಕು ಅಂದ. ಅವ್ನೂ ನಮ್ಮ ಬೆನ್ನಲೇ ಬಿದ್ದವನು. ಅಂವಂಗೀ ರೀತಿ ಮೋಸ ಮಾಡೋದು ಸರಿಯಲ್ಲ ಅಂದೆ. ಅಷ್ಟಿದ್ರೆ ನಿನ್ನ ತಲೆ ಮ್ಯಾಲೆ ಹೊತ್ಕೊಂಡು ಪೂಜೆ ಮಾಡು ಅಂದ. ಮತ್ತೆಲ್ಲ ಸಾಯ್ಲಿ, ಎಲ್ರಿಗೂ ಬೇಕಾದ ಕುಡಿಯೋ ನೀರಿನ ಬಾವಿ-ಇದರ ಗಡಗಡೇನೂ ಕಿತ್ಕೊಂಡ್ಹೋಗೋದ?... ಮನಷಾ ಇಷ್ಟೆಲ್ಲಾ ನೀಚತನಕ್ಕಿಳಿಬಾರ್ದು ನೋಡು. ಇಂಥವ್ರನ್ನ ಹಜಾರ್ ಮಂದಿ ಕಂಡಾಗಿದೆ. ಕಡೀಗೊಂದಿನ ಹೊಟ್ಯಲ್ಲಿ ಹುಟ್ಟಿದ ಮಕ್ಕಿಂದ್ಲೇ ಬಿಸಿ ಬಿಸಿ ತಲೆ ಮ್ಯಾಲೆ ಹ್ವೊಯ್ಸಿ ಕೊಂಡು ಸಾಯ್ತಾರೆ ಅಷ್ಟೆ...

ಇನ್ನೂ ಎಷ್ಟು ಮಾತಿತ್ತೋ.. ಇವಳು 'ಏ ಅಣ್ಣಾ, ನಂಗೊಂದ್ ಲೋಟ ನೀರು ಕೊಡ್ತೀಯಾ?' ಎಂದು ಕೇಳಿದ ರೀತಿಗೆ ಯಾಕೊ ಎದೆಯೊಡೆದು ಹೋಯಿತು' ಎಂದೆಂದೂ ಕೈ ಹಿಡಿದವಳಿಗಾಗಿ ಕರಗಿರದ ನಾನು ಮೊಟ್ಟಮೊದಲು ಬಾರಿ ನೀರಾಗಿಬಿಟ್ಟೆ. ಹುಟ್ಟಿದ ಮನೆಯ ಎಲ್ಲವನ್ನೂ ಅಲ್ಲಲ್ಲೇ ಬಿಟ್ಟು, ಕೊಟ್ಟ ಮನೆಯ ದೌರ್ಜನ್ಯಕ್ಕೆ-ಅಮಾನುಷ ಕ್ರೌರ್ಯಕ್ಕೆ ತಲೆಕೊಟ್ಟು, ಕಾಲಲ್ಲಿ ಹಾಕಿದ್ದನ್ನು ಕೈಯಿಂದೆತ್ತಿ ತಿನ್ನುತ್ತ 'ನಮ್ಮನೆ ನಮ್ಮನೆ' ಎಂದು ಒದ್ದಾಡುವ ಹೆಣ್ಣು ಜಾತಿಯ ಬಗ್ಗೆ ಯಾಕೊ ದುಃಖ್ವೆದ್ದು ಬಂದು ಬಿಟ್ಟಿತು. ಮುಖ ತಿರುಗಿಸಿ ಒಂದು ಕ್ಷಣ ಸುಧಾರಿಸಿಕೊಂಡು ಇತ್ತ ತಿರುಗಿದಾಗ ಇವಳು ಅತ್ಯಂತ ತಣ್ಣಗೆ 'ಹೋಗೋಣ್ವಾ?' ಅಂದಳು.

'ಇಲ್ಲ, ಇವತ್ತು ನಾನಿಲ್ಲೇ ಉಳೀತೇನೆ. ನಿಂಗೆ ಹೆದ್ರಿಕೆಯಾದ್ರೆ ಮಕ್ಳ ಕರ್ಕೊಡ್ಹೋಗು... ಖಾಲಿ ಮನೆ ಅಂದ್ರೆ ಕತ್ತಲಿರತ್ತೆ, ಕತ್ತಲಲ್ಲಿ ದೆವ್ವ ಬಂದು ತುಂಬ್ಕೊಳ್ಳತ್ತೆ, ಮಿಣಿ ಮಿಣಿ ದೀಪ ಹಚ್ಚಿ ದೆವ್ವ ಓಡಿಸ್ಬೇಕು. ಈ ರಣರಂಗ ಎಲ್ಲ ಚೊಕ್ಕಮಾಡಿ ಮನೆ ಮಾಡ್ಬೇಕು, ನೀ ಬೇಕಿದ್ರೆ ಈಗ್ಹೋಗಿ ನಾಳೆ ಬಾ' ಅಂದೆ ಸಾವಕಾಶವಾಗಿ. 'ನಿಮ್ಮೊಬ್ರನ್ನೇ ಇಲ್ಲಿ ಬಿಟ್ಟು ನಾ ಹೋಗೋದಿಲ್ಲಪ್ಪ. ಕತ್ತಲೊ ಬೆಳಕೊ-ಬಿಸಿಲೊ ಮಳೆಯೊ -ಏನಿದ್ರೂ ನಮಗೆಲ್ರಿಗೂ ಬರ್ಲಿ.... ಏನಾದ್ರೂ ನಮಗೆಲ್ರಿಗೂ ಆಗ್ಲಿ... ಆಚೆಮನೆ ಅಕ್ಕನಿಂದ ಒಂದು ಬೆಂಕಿಪೊಟ್ಣ ತರ್ತೇನೆ ಮೊದ್ಲು... ' ಅನ್ನುತ್ತ ನಿರಿಗೆ ಸರಿಮಾಡಿಕೊಂಡು ಮೇಲೆದ್ದಳು. ನಾನು ಪ್ಯಾಂಟಿನ ಕಿಸೆಯಿಂದ ಮೇಣದ ಬತ್ತಿ ಹುಡುಕಿ ತೆಗೆದು ಅವಳನ್ನೇ ಕಾಯತೊಡಗಿದೆ..

ನನ್ನ ಕಣ್ಣೆದುರಿತ್ತು ಪತ್ರ ಮತ್ತು ಮನದೊಳಗಿತ್ತು ಅದರ ಒಕ್ಕಣೆ - 'ಶ್ರೀಮತಿ ಕುಸುಮಾರವರೇ-ನಿಮ್ಮ'ವಿಚ್ಛೇದನ' ಕತೆ 'ವರ್ಷದ ಕತೆ' ಯಾಗಿ ಆಯ್ಕೆಯಾಗಿದೆ. ಮಾರ್ಚ್ ೧೫ರಂದು ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಬರುವುದು'. ದಿನಾಂಕ, ಸ್ಥಳ ಮತ್ತು ಕಾರ್ಯದರ್ಶಿಯ ಸಹಿಯನ್ನೊಳಗೊಂಡ ಪತ್ರ. ಪತ್ರ ಓದಿದ ಅರ್ಧ ಗಂಟೆಯವರೆಗೂ ಗಾಳಿಯಲ್ಲಿ ತೇಲಿದ ಅನುಭವ. ಚೊಚ್ಚಲ ಕತೆಗೆ ಪ್ರಶಸ್ತಿ ಬಂದರೆ ಎಷ್ಟು ಖುಷಿಯಾಗಲಿಕ್ಕಿಲ್ಲ. ಆದರೆ ಅದೇ ಖುಷಿ ಸೂಜಿ ಚುಚ್ಚಿಸಿಕೊಂಡ ಬಲೂನಿನಂತಾಗಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ.

'ವಿಚ್ಛೇದನ' ಪೂರ್ತಿ ನನ್ನ ಸ್ವಂತ ಕತೆಯೆಂದರೆ ಆತ್ಮ ವಂಚನೆಯಾಗುತ್ತದೆ. ಹಾಗಂತ ಪೂರ್ತಿ "ಕೃತಿಚೌರ್ಯ" ಎನ್ನಿಸಿಕೊಳ್ಳದೇ ವಾರಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು.

ಕತೆಯ ಬಗ್ಗೆ ಪ್ರಶಂಸೆ ಹೊತ್ತ ಒಂದು ಪತ್ರವೂ ನನಗೆ ಬರಲಿಲ್ಲ. ನನ್ನ ನಿಜನಾಮವನ್ನು ಬದಲಿಸಿ 'ಕುಸುಮಾ' ಎಂದು ಬರೆದಿದ್ದರಿಂದ ಪರಿಚಯದವರಿಗೂ ಕೂಡ ಗೊತ್ತಾಗಿರಲಿಲ್ಲ. ಆಯ್ಕೆ ಸಮಿತಿಯ ನಾಲ್ಕು ಮಂದಿಗೆ ಅದು ಹೇಗೆ ಇಷ್ಟವಾಯಿತೋ, ಪ್ರಥಮ ಬಹುಮಾನ ಕೊಡುವಷ್ಟು ಅದೇನು ಕಂಡರೋ ಅದರಲ್ಲಿ ತಿಳಿಯುತ್ತಿಲ್ಲ.

ಅರ್ಧರಾತ್ರಿಯಲ್ಲಿ ಬಾಗಿಲು ತಟ್ಟಿದ ಶಬ್ದ. ಮಾಮೂಲಿನಂತೆ ಅವರೇ. ಅವರು ಹೀಗೆ ಮನೆಗೆ ಅರ್ಧರಾತ್ರಿಯಲ್ಲಿ ಬರುವುದು ಈಗೊಂದು ಹದಿನೈದು ದಿನದಿಂದ ಮಾಡಿಕೊಂಡ ಅಭ್ಯಾಸ. ಉಪವಾಸದ ಫಲವಾಗಿ ಅರೆಮನಸ್ಸಿನಿಂದಲೇ ಒಪ್ಪಿಕೊಂಡಿದ್ದರು.

ನನಗೆ ರಜೆಯಿದ್ದಿದ್ದರೆ ಇಬ್ಬರೂ ಹೋಗ ಬಹುದಿತ್ತು. 'ನೀನೊಬ್ಬಳೇ ಹೇಗೆ ಹೋಗ್ತೀಯಾ?' ಎಂಬುದು ಅವರ ವಾದ. ಅದರೊಳಗಿನ ಅರ್ಥ ನನಗೆ ತಿಳಿಯದಿದ್ದಾ ದೇನಲ್ಲ. ಮದುವೆಯಾಗಿ ಹದಿನೈದು ದಿನ ತುಂಬಾ ಸಂತಸ ಪಟ್ಟಿದ್ದೆ. ಯಾಕೆಂದರೆ ನನ್ನ ಗಂಡ ಕುಡಿಯುವುದಿಲ್ಲ, ಸಿಗರೇಟು, ಬೀಡಿ ಮುಂತಾದ ಯಾವುದೇ ದುಶ್ಚಟಗಳಿಲ್ಲ ಅಂತ. ಆ ಮೇಲೆ ನಿಧಾನಕ್ಕೆ ಅರ್ಥವಾಯಿತು. ನನ್ನ ಗಂಡನಿಗೆ 'ಸಂಶಯ'ವೆಂಬ ಗುಣಪಡಿಸಲಾಗದ ರೋಗವಿದೆಯೆಂಬುದು. ನಾನು ಅವರಿಗಿಂತ ದುಪ್ಪಟ್ಟು ಸುಂದರವಾಗಿರುವುದು ಕೂಡ ಕಾರಣವಾಗಿರಬಹುದು. ಕೆಲಸಕ್ಕೆ ಕಳುಹಿಸುತ್ತಿರುವುದು ಕೂಡ ಮದುವೆಗೆ ನಿಂತಿರೋ ಅವರ ತಂಗಿಯರನ್ನು ನೆನೆದೇ. ಅವರ ದುಡಿಮೆ ಕೇವಲ ನಮ್ಮಿಬ್ಬರ ಊಟ-ಬಟ್ಟೆಗೆ ಸಾಕಾಗಬಹುದೇ ಹೊರತು ಮತ್ತೇನಕ್ಕು ಸಾಲುವುದಿಲ್ಲ. ಅಷ್ಟಾದರೂ ಸಾಕು ಕೆಲಸ ಬಿಟ್ಟು ಬಿಡೋಣ ಎಂದು ನಾನು ಸಾಕಷ್ಟು ಬಾರಿ ಯೋಚಿಸಿದ್ದುಂಟು. ಇವರಿಗೆ ಅಂಟಿದ ಸಂಶಯಪಿಶಾಚಿ ನನ್ನನ್ನು ಕಾಡಿದರೂ ಚಿಂತೆಯಿಲ್ಲ, ಬೆಳೆದು ನಿಂತ ಇವರ ಸದ್ಗುಣಿ ತಂಗಿಯರು ನನ್ನ ಮೇಲಿಟ್ಟ ಪ್ರೀತಿಗೆ ಮೋಸ ಮಾಡುವುದು ನನ್ನಿಂದ ಸಾಧ್ಯವಾಗಿರಲಿಲ್ಲ. ಅವರಿಗಿಂತ ಹೆಚ್ಚು ಸಂಬಳ ತರುವ ನನ್ನ ಕೆಲಸವೂ ಕೂಡ ಅವರ ರೋಗ ಉಲ್ಬಣಿಸಲು ಕಾರಣವಾಗಿದ್ದಿತು. ಮಾತುಮಾತಿಗೂ ಚುಚ್ಚುವುದು, ಸಿಡುಕುವುದು, ಯಾವುದೇ ಬೇರೊಬ್ಬ ಗಂಡಸು ಎನ್ನುವ ಪ್ರಾಣಿಯೊಡನೆ ಮಾತನಾಡಿದರೂ ಅವನನ್ನೇ ಮದುವೆ ಮಾಡಿಕೋಬೇಕಾಗಿತ್ತು ಎಂದು ಹಂಗಿಸುವುದು ಮಾಮೂಲಾಗಿರುತ್ತಿತ್ತು.

ಕತೆಯೊಳಗಿನ ಕತೆ

ಯಾಗಿ ಚೌರ್ಯವೂ ಅಲ್ಲ. ನಾನು ಎಂದೋ ಓದಿದ ಕತೆಗೆ ಸ್ವಲ್ಪ ಉಪ್ಪು - ಖಾರ ಬೆರೆಸಿ, ಅಂತ್ಯವನ್ನು ಬದಲಾಯಿಸಿ ಬರೆದಿದ್ದೆ. ನಾ ಓದಿದ ಮೂಲ ಕತೆಯ ಹೆಸರಾಗಲೀ, ಲೇಖಕ/ಕಿಯ ಹೆಸರಾಗಲೀ ನನಗೆ ನೆನಪಿರಲಿಲ್ಲ. ಕಥಾ ಸಾರಾಂಶ ಮಾತ್ರ ಚೆನ್ನಾಗಿ ನೆನಪಿತ್ತು - ಒಲ್ಲದ ಗಂಡನೊಂದಿಗೆ ಸಂಸಾರ ಮಾಡುತ್ತಿರುವ ನಾಯಕಿಗೆ ಒಮ್ಮೆ ಪ್ರಯಾಣದಲ್ಲಿ ಮತ್ತೊಬ್ಬ ಗಂಡಸಿನ ಪರಿಚಯವಾಗುತ್ತದೆ. ಅವನ ಗುಣ-ರೂಪ-ನಡತೆಗಳು ಇವಳಿಗೆ ತುಂಬಾ ಇಷ್ಟವಾಗುತ್ತವೆ. ಅವನ ಮುಖವನ್ನೇ ಮನಸ್ಸಿನಲ್ಲಿ ತುಂಬಿಕೊಂಡು ಮನೆಗೆ ಬರುತ್ತಾಳೆ. ಮತ್ತೆ ಮನೆಯಲ್ಲಿ ಗಂಡನೊಂದಿಗೆ ವಿರಸ. ಒಮ್ಮೆ ಗಂಡ ಹೊರಗೆ ಹೋಗಿದ್ದಾಗ ಅಪಘಾತದಲ್ಲಿ ಸತ್ತ ಸುದ್ದಿ ಫೋನಿನಲ್ಲಿ ಗೊತ್ತಾಗುತ್ತದೆ. ತಕ್ಷಣ ಅವಳಿಗೆ ಸಹ ಪ್ರಯಾಣಿಗನ ಮುಖ ಕಣ್ಮುಂದೆ ಬಂದತಾಗುತ್ತದೆ. ಕರೆಗಂಟೆಯ ಶಬ್ದವಾಗಿ ಬಾಗಿಲು ತೆಗೆದಾಗ ಪ್ರತ್ಯಕ್ಷ ಸಹ ಪ್ರಯಾಣಿಗನೇ ಬಂದಿರುತ್ತಾನೆ.

ಇದೇ ಕತೆಗೆ ನಾನು 'ವಿಚ್ಛೇದನ' ಎಂದು ಹೆಸರಿಟ್ಟು, ಕೊನೆಯಲ್ಲಿ ನಾಯಕಿಯ ಗಂಡನನ್ನು ಸಾಯಿಸದೆ ಡೈವೋರ್ಸ್ ಮಾಡಿಸಿದ್ದೆ. ಮಧ್ಯೆ ಮಧ್ಯೆ ಘಟನಾವಳಿಗಳನ್ನು ಬೇರೆ ಮಾಡಿದ್ದರಿಂದ ಏತಕ್ಕಾಗಿ ಹೀಗೆ ಮಾಡುತ್ತಾರೆನ್ನುವುದೂ ಗೊತ್ತು. ತಪ್ಪಿಲ್ಲದ ನನ್ನಲ್ಲಿ ಕಾಣದ ತಪ್ಪನ್ನು ಅರಸ ಹೊರಟ ಅವರಿಗೆ ಖಂಡಿತ ಜಯ ಸಿಗುವುದಿಲ್ಲ. ಪ್ರಪಂಚದಲ್ಲಿ ಈ ರೀತಿಯ ಗಂಡಸೂ ಇದ್ದಾನೆಂದು ಬಹುಷಃ ನನಗಲ್ಲದೆ ಮತ್ತಾರಿಗೂ ಗೊತ್ತಿರಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಇವರಂತ ಮನುಷ್ಯರು ಮತ್ತೊಬ್ಬರು ಹುಟ್ಟಿರಲಿಕ್ಕೆ ಸಾಧ್ಯವೇ ಇಲ್ಲ. ಸದ್ಯ ನಮ್ಮ ಸಂಸಾರಕ್ಕೆ (ಥೇ ಸಂಸಾರವಲ್ಲ, ಹಾಗಂತ ಹೇಳಬೇಕಷ್ಟೆ) ದೇವರು ಮಕ್ಕಳನ್ನು ಕೊಡಲಿಲ್ಲ ಸದ್ಯ.

ಬಂದವರೇ ಕೇಳಿದ ಮಾಮೂಲಿ ಪ್ರಶ್ನೆ 'ಏನಂತ ತೀರ್ಮಾನಿಸಿದ್ದೀಯಾ?' ನನ್ನಿಂದ 'ಇನ್ನೂ ಇಲ್ಲ' ಎನ್ನುವ ಉತ್ತರ ಪಡೆದು ಮಲಗಿ ನಿದ್ರಿಸಿಬಿಟ್ಟರು. ನನಗೆಲ್ಲಿಂದ ನಿದ್ದೆ ಬರಬೇಕು? ವಿಷಯವನ್ನು ಮಂಥಿಸುತ್ತಲೇ ಇದ್ದೆ. ನಾಳೆಯೊಳಗೆ ನಿರ್ಧಾರವೆಂಬ ನವನೀತವನ್ನು ತೆಗೆದೇ ತೀರಬೇಕೆಂದು ತೀರ್ಮಾನಿಸಿದೆ. ಮನಸ್ಸು ಹಿಂದಕ್ಕೋಡಿತು.

ನಾನು ಕೆಲಸ ಮಾಡುತ್ತಿದ್ದ ಕಂಪನಿಯ ವತಿಯಿಂದ ನನ್ನನ್ನು ಒಂದು ವಾರದ ಮಟ್ಟಿಗೆ ದೆಹಲಿಯಲ್ಲಿರುವ ಹೆಡ್ ಆಫೀಸಿಗೆ ಕಳುಹಿಸುತ್ತಿದ್ದರು. ಮೊದಲು ಬೇಡವೇ ಬೇಡವೆಂದು ಹಾರಾಡಿದ ಇವರು ನನ್ನ ಎರಡು ದಿನಗಳ


ಅಂತೂ ರೈಲು ಹೊರಡುವವರೆಗೂ ಉಪದೇಶವಾಯ್ತು. ಅವರ ದುರದೃಷ್ಟಕ್ಕೆ ನನ್ನ ಎದುರು ಸೀಟಿನಲ್ಲೇ ಸುಂದರ ಸದೃಢ ಯುವಕನೊಬ್ಬ, ಅವನು ಮಾತನಾಡಿಸಿದರೂ ಮಾತನಾಡಬಾರದೆಂಬ ಎಚ್ಚರಿಕೆಯ ಮಾತನ್ನೂ ಕಿವಿಯಲ್ಲಿ ಉಸಿರಿದ್ದಾಯ್ತು. ಅಸಮದಾನದಿಂದಲೇ ಕಳುಹಿಸಿಕೊಟ್ಟರು.

ಡೆಲ್ಲಿಯಿಂದ ಹಿಂತುರಿಗಿದ ಎಂಟನೇ ದಿನಕ್ಕೆ ಸರಿಯಾಗಿ ನನ್ನ ಕತೆ ಪ್ರಕಟವಾದದಕ್ಕೆ ಸಂಭಾವನೆಯೂ, ಗೌರವ ಪ್ರತಿಯೂ ಬಂದಿತು.

ಬಹುಷಃ ಅವರು ಜೀವನದಲ್ಲಿ ಓದಿದ ಮೊದಲ ಕತೆ, ಓದಿದವರೇ ಕೆಂಡಮಂಡಲವಾದರು. ಅವರ ಪ್ರಕಾರ - ನಾನವರಿಗೆ ಮೋಸ ಮಾಡುತ್ತಿದ್ದೇನೆ. ಅವರಿಗೆ ವಿಚ್ಛೇದನ ಕೊಡಲು ಬಯಸುತ್ತೇನೆ. ಬೇರೆ ಯಾರನ್ನೋ ಮದುವೆಯಾಗಲು ಹವಣಿಸುತ್ತಿದ್ದೇನೆ. ಯಾರು ಹೇಳು ಅಂತ ಒಂದೇ ಗಲಾಟೆ. ಇಲ್ಲದ ವ್ಯಕ್ತಿಯನ್ನು ಎಲ್ಲಿಂದ ತರಲಿ? ಬರೀ ಕತೆಯಷ್ಟೆ ಎಂದರೆ ನಂಬುತ್ತಲೇ ಇಲ್ಲ. 'ನಿನ್ನ ಮನಸ್ಸಿನಲ್ಲಿ ಈ ರೀತಿ ಭಾವನೆಯಿಲ್ಲದಿದ್ದರೆ ಕತೆಗೆ ಐಡಿಯಾ ಹೇಗೆ ಬಂತು?' ಎನ್ನುವ ವಿಚಿತ್ರ ತರ್ಕ. ಕಳ್ಳ, ಕೊಲೆಗಾರನ ಕತೆ ಬರೆದವರೆಲ್ಲ ಕಳ್ಳರೇ? ಕೊಲೆಗಾರರೇ? ಎಂದೂ ಕತೆ ಕಾದಂಬರಿಗಳನ್ನೇ ಓದದ ಅವರಿಗೆ ಅದೆಲ್ಲ ಹೇಳಿದರೆ ಹೇಗೆ ಅರ್ಥವಾಗಬೇಕು. 'ಡೆಲ್ಲಿಗೆ ಹೋಗುವಾಗ ಎದುರು ಕೂತಿದ್ದನಲ್ಲಾ ಅವನೇನಾ ನಿನ್ನ ಕತೆಯಲ್ಲಿನ ಅಲ್ಲಲ್ಲಾ ನಿನ್ನ ಜೀವನದ ಜೊತೆಗಾರ?'' ಅಂತ ಪ್ರಶ್ನೆ, ಹೇಗೆ ಉತ್ತರಿಸಲಿ. ಡೆಲ್ಲಿಗೆ ಹೋಗುವುದಕ್ಕಿಂತ ಒಂದು ತಿಂಗಳು ಮುಂಚೆಯೇ ಕಳುಹಿಸಿದ್ದೆ ಈಗ ಪ್ರಕಟಿಸಿದ್ದಾರೆ ಎಂದರೆ ನಂಬಲು ಅವರೇನು 'ಸಂಶಯ ರೋಗ'ವಿಲ್ಲದ ಶುದ್ಧ ವ್ಯಕ್ತಿತ್ವದ ಗಂಡಸೇ? ಪೇಟೆಯಲ್ಲಿ ನಡೆಯುತ್ತಿರುವಾಗ ಎದುರು ಒಬ್ಬ ಗಂಡಸು ಬಂದರೆ, ಆ ಗಂಡಸಿನ ಮುಖವನ್ನೂ, ನನ್ನ ಮುಖವನ್ನೂ ಎರಡೆರಡು ಬಾರಿ ದೃಷ್ಟಿಸಿ ನೋಡಿ, ಏನೂ ಸನ್ನೆ ಮಾಡಿಕೊಳ್ಳುತ್ತಿಲ್ಲ ಎಂದು ಖಾತ್ರಿಯಾದ ಮೇಲೆ ನೋಟವನ್ನು ಬೇರೆಡೆ ಹರಿಸುವ ಸ್ವಭಾವದವರು. ಜೊತೆಗೆ ನಿನ್ನ ಫೋಟೋ ಕಳುಹಿಸಿರುತ್ತೀಯಾ, ಸುಂದರ ಮುಖ ನೋಡಿ ಕತೆ ಹೇಗಿದ್ದರೂ, ಸುಂದರಿ ನೊಂದುಕೊಳ್ಳಬಾರದು ಎಂದು ಪ್ರಕಟಿಸಿರುತ್ತಾನೆ ಸಂಪಾದಕ. ಅದೂ ಒಳ್ಳೆಯದೇ ಆಯ್ತು, ಕತೆಯ ಮೂಲಕವಾದ್ರೂ ನಿನ್ನ ಮನಸ್ಸನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಅನುಕೂಲವಾಯ್ತು''. ಎಂತಹ ಕೆಟ್ಟ ಮಾತುಗಳು. ತಿರುಗಿ ಮಾತಾಡುವುದಕ್ಕಿಂತ



ಉಮಾ ರತ್ನಾಕರ್



ಸುಮ್ಮನಿರುವುದೇ ಲೇಸು.

ನಾಲ್ಕೈದು ತಿಂಗಳು ಜಿಡಿ ಜಿಡಿ ಮಳೆಯಂತೆ ಗೋಣಗಾಟದಲ್ಲೇ ಕಳೆಯಿತು. ಎಷ್ಟೆಷ್ಟೋ ಐಡಿಯಾಗಳಿದ್ದರೂ ನಾನು ಕತೆ ಬರೆಯುವ ಗೋಜಿಗೆ ಹೋಗಲಿಲ್ಲ. ನನಗೆ ಮನೆಗೆಲಸ, ಆಫೀಸು ಎಂತ ಹೇಗೋ ಸಮಯ ಜಾರುತ್ತಿತ್ತು. ಮಧ್ಯದಲ್ಲಿ ಅವರ ದೊಡ್ಡ ತಂಗಿಯ ಮದುವೆಯೂ ಆಯ್ತು.

ಜಿಟಿಜಿಟಿ ಮಳೆಯು ಧಾರಾಕಾರವಾಗಿ ಸುರಿಯಲ್ಪಟ್ಟಿದ್ದು ಸಾಹಿತ್ಯ ಪರಿಷತ್ತಿನಿಂದ ಪತ್ರ ಬಂದನಂತರ. ನನ್ನ ಅದೃಷ್ಟಕ್ಕೆ ನನ್ನ ಮೊದಲ ಕತೆಗೇ ಪ್ರಶಸ್ತಿ. ಅದೃಷ್ಟ ನನ್ನ ಪಾಲಿಗೆ ದುರದೃಷ್ಟವಾಯ್ತು. ಪತ್ರ ಬಂದಂದಿನಿಂದ ಅವರದು ಒಂದೇ ಹಠ-'ನೀನು ಪ್ರಶಸ್ತಿ ಸ್ವೀಕರಿಸಬಾರದು.... ಹಾಗೇನಾದರೂ ಸ್ವೀಕರಿಸಿದರೆ ಕತೆಯಲ್ಲಿನ ವಿಚ್ಛೇದನ ನಮ್ಮ ಜೀವನದಲ್ಲೂ ನಡೆಯುತ್ತೆ. ಯೋಚಿಸಿ ತೀರ್ಮಾನಿಸು. ಎಂಟು ದಿನದಿಂದ ಅವರು ಕೇಳುವ ಪ್ರಶ್ನೆ, ಆಡುವ ಮಾತೂ ಕೂಡ ಅದೊಂದೇ 'ಏನು ತೀರ್ಮಾನ ಮಾಡಿದೆ?'

ಮಂಥನ ಯಶಸ್ವಿಯಾಗಿ ನವನೀತ ಚೆನ್ನಾಗಿ ಹೊರಬಂತು. ಬಾಯಲ್ಲಿ ಹೇಳುವುದಕ್ಕಿಂತ ಬರವಣಿಗೆ ಸುಲಭ ಎಂದುಕೊಂಡು ಬರೆಯತೊಡಗಿದೆ - ನಲ್ಮೆಯ ಸುರೇಶ್,

ನನ್ನ ಈ ತೀರ್ಮಾನದಿಂದ ನಿಮಗೆ ತೊಂದರೆಯಾಗುವುದಿಲ್ಲ ಎಂದು ಭಾವಿಸುತ್ತೇನೆ. ನನಗೆ 'ವಿಚ್ಛೇದಿತೆ' ಎಂಬ ಹಣೆಪಟ್ಟಿ ಇಷ್ಟವಿಲ್ಲ. ಆದ್ದರಿಂದ ವಿಚ್ಛೇದನ ಬೇಕಾಗಿಲ್ಲ. ಹಾಗೆಯೇ ನಿಮ್ಮಿಂದ ದೂರ ಹೋಗುತ್ತೇನೆ. ನೀವು ಬೇಕಿದ್ದರೆ ಬೇರೆ ಮದುವೆ ಮಾಡಿಕೊಳ್ಳಬಹುದು. ನಾನು ಎಂದಿಗೂ ನಿಮ್ಮನಲ್ಲದೆ ಬೇರೆಯವರನ್ನು ಪತಿಯಾಗಿ ನಿಮ್ಮಸ್ಥಾನದಲ್ಲಿ ನೋಡಲು ಇಷ್ಟಪಡುವುದಿಲ್ಲ. ಹಾಗಂತ ನಿಮ್ಮ ಜೊತೆಗೇ ಇದ್ದು ನನ್ನೊಳಗಿನ ಭಾವನೆಗಳನ್ನು, ಕತೆಗಾರ್ತಿಯನ್ನು ಸಾಯಿಸಲು ಇಷ್ಟಪಡುವುದಿಲ್ಲ. ನಿಮ್ಮ ತಂಗಿಯರ ಜವಾಬ್ದಾರಿ ನನ್ನದು. ಅವರ ಬಗ್ಗೆ ನೀವು ಯೋಚಿಸಬೇಕಾದದ್ದಿಲ್ಲ. ನಿಮಗೆ ಹಣಕಾಸಿನ ಸಹಾಯಬೇಕಿದ್ದರೆ ಸಂಕೋಚವಿಲ್ಲದೆ ಕೇಳಿ. ಖಂಡಿತಾ ಸಹಾಯ ಮಾಡುತ್ತೇನೆ. ನಿಮಗೆ ಭಗವಂತ ಆಯುರಾರೋಗ್ಯ, ಐಶ್ವರ್ಯ ಜೊತೆಗೆ ಸದ್ಬುದ್ಧಿಯನ್ನೂ ಕೊಡಲಿ ಎಂದು ಆಶಿಸುತ್ತೇನೆ.

ನಮಸ್ಕಾರಗಳೊಂದಿಗೆ
ನಿಮ್ಮ ಹೆಂಡತಿ.

ಸನ್ಯಾಸ ಮತ್ತು ಸಂಸಾರ

ಡಾ. ಶ್ರೀನಿವಾಸ ಹಾವನೂರ

ಸಂಸಾರ ಎಂದರೆ ಐಹಿಕ ಸುಖದ ಭೋಗ. ಸನ್ಯಾಸ ಎಂದರೆ ಐಹಿಕ ಸುಖದ ತ್ಯಾಗ. ಸಂಸಾರಿಗ ಸಮಾಜ ಜೀವಿ. ಸನ್ಯಾಸಿ ಸಾಮಾಜಿಕವಾಗಿ ಏಕಾಂಗಿ; ಮತ್ತು ವಿರಾಗಿ. ಹೀಗೆ ಸನ್ಯಾಸ ಮತ್ತು ಸಂಸಾರ - ಇವೆರಡೂ ಪರಸ್ಪರ ವಿರೋಧ ಭಾವಗಳು.

ಸನ್ಯಾಸವು ಹಲವು ಸ್ತರಗಳಲ್ಲಿ ಕಂಡು ಬರಬಹುದು. ಒಂದು, ಹುಟ್ಟಿನಿಂದಲೇ ಪ್ರಪಂಚದ ಬಗ್ಗೆ ವಿರಕ್ತ ಭಾವನೆ ಮೂಡಿ ತಾನಾಗಿ ಸನ್ಯಾಸ ಹೊಂದಬಹುದು. ಇನ್ನೊಂದು ಸಂಸಾರ ಜೀವನವನ್ನು ಮನದಣಿಯುವಂತೆ ಪೂರ್ಣತಃ ನಡೆಸಿಯಾದ ಮೇಲೆ ಸನ್ಯಾಸದತ್ತ ವಾಲಬಹುದು. ಇವು ಸಹಜ ಸ್ವರೂಪದವು.

ಮತ್ತೊಂದು ಹದಿವಯದಲ್ಲೇ ಹಿರಿಯರ ಹೇಳಿಕೆಯಂತೆ ಸನ್ಯಾಸದೀಕ್ಷೆಯನ್ನು ಹೊಂದಿ ಸ್ವಾಮಿಗಳಾಗುವುದು. ಇನ್ನೊಂದು ಕೆಲ ಕಾಲ ಸಂಸಾರ ಜೀವನ ನಡೆಸಿ, ಅದರಿಂದ ಬೇಸತ್ತು ನಡು ವಯಸ್ಸಿನಲ್ಲಿ ವಿರಕ್ತನಂತೆ ಬಾಳುವುದು. ಇವನ್ನು ಅಕಾಲ ಸನ್ಯಾಸವೆಂದು ಕರೆಯಬಹುದು. ಒಮ್ಮೊಮ್ಮೆ ಸಂಸಾರದಲ್ಲಿರುವಾಗ 'ಸಾಕಪ್ಪಾ, ಈ ಸಂಸಾರದ ಗೋಳು' ಎಂದುಕೊಳ್ಳುತ್ತೇವೆ. ಆದರೆ ಅದು ಕ್ಷಣಿಕ. ಸೂಜಿಗಲ್ಲಿನಂತೆ ಸಂಸಾರ ವ್ಯಾಮೋಹ ಮತ್ತೆ ನಮ್ಮನ್ನು ಸೆಳೆದುಕೊಳ್ಳುತ್ತದೆ. ಇದು ಸಹಜವೇ.

ಆದರೆ ಸನ್ಯಾಸದಲ್ಲಿದ್ದಾಗ ಸಂಸಾರದ ವ್ಯಾಮೋಹ ಸೆಳೆದದ್ದಾದರೆ? ಆಗ ಸನ್ಯಾಸಿಯು ತನ್ನ ವ್ಯಾಮೋಹವನ್ನು ಮನದಲ್ಲೇ ಇಟ್ಟುಕೊಂಡು ಕೊರಗಬಹುದು. ಇಲ್ಲವೆ ಕದ್ದು ಮುಚ್ಚಿ ಆ ಭೋಗದಲ್ಲಿ ತೊಡಗಬಹುದು. ಇಲ್ಲವೆ ಸನ್ಯಾಸವನ್ನು ಬಹಿರಂಗವಾಗಿ ತ್ಯಜಿಸಿ ಸಂಸಾರಿಯಾಗಲೂಬಹುದು.

ಈ ಬಗೆಯ ವ್ಯಾಮೋಹವನ್ನು ನಿಗ್ರಹಿಸುವುದು ಸಾಧ್ಯವಿಲ್ಲ, ಎಂದಲ್ಲ. ಆದರೆ ಯಾವುದೋ ಉದ್ದೀಪನದಿಂದ ಆ ನಿಗ್ರಹ ಫಕ್ಕನೆ ಸಡಲಿ ಹೋಗಬಹುದು. ಅಖಂಡ ತಪಸ್ಸು ಮಾಡಿದ ಮುನಿಗಳು ಒಬ್ಬ ರಂಭೆಯನ್ನೋ ಮೇನಕೆಯನ್ನೋ ಕಂಡಾಗ ಹೇಗೆ ಪ್ರತಿಕ್ರಿಯಿಸಿದರೆಂಬುದಕ್ಕೆ ಪುರಾಣಗಳಲ್ಲಿ ಬೇಕಾದಷ್ಟು ನಿದರ್ಶನಗಳು ದೊರೆಯುತ್ತವೆ. ಈ ಶತಮಾನದಲ್ಲಿ ಬಾಲ ಸನ್ಯಾಸವನ್ನು ತ್ಯಜಿಸಿ ಸಂಸಾರಿಗಳಾದ ಹಲವು ಉಡುಪಿ ಮಠ ಸ್ವಾಮಿಗಳದು ಇನ್ನೊಂದು ನಿದರ್ಶನ.

ತಿಳಿಯಬೇಕಾದ ಮಾತೆಂದರೆ ಜೀವನ ಕ್ರಮದಲ್ಲಿ ಸನ್ಯಾಸ ಎನ್ನುವುದು ಬೇಕು - ಮೇಲೆ ಹೇಳಿಧ ಸಹಜ ಸ್ವರೂಪದಲ್ಲಿ. ಅದರ ಕಾಲ ಮತ್ತು ಪರಿಸ್ಥಿತಿಯನ್ನು ಮನು ತನ್ನ ಸ್ಮೃತಿಯಲ್ಲಿ ಹೀಗೆ ಹೇಳಿದ್ದಾನೆ:

ಸಂಸಾರ ಜೀವನವನ್ನು, ಎಂದರೆ ಗೃಹಸ್ಥಾಶ್ರಮವನ್ನು ಪೂರ್ಣತಃ ಅನುಭವಿಸಿದ ಮೇಲೆಯೇ ಸನ್ಯಾಸದತ್ತ ತಿರುಗಬೇಕು. ಇಷ್ಟೇ ಅಲ್ಲ. ಮಕ್ಕಳನ್ನು ಪಡೆಯದೆ ಸನ್ಯಾಸವನ್ನು ಅಪೇಕ್ಷಿಸುವವರು ನರಕ ಭಾಜನರಾಗುತ್ತಾರೆ. (ಅನುತ್ಪಾದ್ಯ ತಥಾ ಸುತಾನ್ ಮೋಕ್ಷಮಿಚ್ಛನ್ ವ್ರಜತಿ ಅಧಃ)

ಇದರ ಹಿಂದಿನ ಉದ್ದೇಶ ಸೃಷ್ಟಿಕ್ರಮದ ಮುಂದುವರಿಕೆ. ಅರ್ಥಾತ್ ಪ್ರಜೋತ್ಪತ್ತಿ.

ಬ್ರಹ್ಮಚರ್ಯ, ಗೃಹಸ್ಥ ಮುಂತಾಗಿ ಆಶ್ರಮಗಳನ್ನು ರೂಪಿಸಿದ ನಮ್ಮ ಹಿರಿಯರು ವ್ಯಾವಹಾರಿಕ ಜಾಣ್ಮೆಯುಳ್ಳವರು. ಗೃಹಸ್ಥಾಶ್ರಮದ ಆಕರ್ಷಣೆಯನ್ನು ಒಮ್ಮೆಲೇ ಹರಿದೊಗೆದು ಸನ್ಯಾಸಾಶ್ರಮದ ಕಡೆಗೆ ಧಾವಿಸುವುದು ಒಮ್ಮೆಲೇ ಸಾಧ್ಯವಾಗದು. ಇದನ್ನು ಗಮನಿಸಿ ಅವೆರಡರ ಮಧ್ಯೆ ವಾನಪ್ರಸ್ಥ - ಎಂಬ ಹಂತವನ್ನು ರೂಪಿಸಿದರು. ವಾನಪ್ರಸ್ಥ ಎಂದರೆ ಅರಣ್ಯವಾಸಿಗಳಾಗುವುದು.

ಅದರ ಸಮಯವನ್ನು ಮನುಸ್ಮೃತಿಯಲ್ಲಿ ಹೀಗೆ ನಿಗದಿ ಪಡಿಸಿದೆ:

ಗೃಹಸ್ಥರು ತನ್ನ ಮೈಚರ್ಮ ಸುಕ್ಕು ಗಟ್ಟಿದ ಮೇಲೆ, ಮೊಮ್ಮಕ್ಕಳನ್ನು ಪಡೆದ ಮೇಲೆ ಅರಣ್ಯವನ್ನು ಆಶ್ರಯಿಸಬೇಕು. ಇಷ್ಟೇ ಅಲ್ಲ ಆಗ ಹೆಂಡತಿಯನ್ನೂ ಕರೆದೊಯ್ಯಬಹುದು- ಅರ್ಥಾತ್ ಅವಳು ಬರುವುದಕ್ಕೆ ಒಪ್ಪಿದರೆ.

ಮಧ್ಯಮ ವರ್ಗದ ನಾವಾದರೂ ಯುಗಮಾನಕ್ಕೆ ತಕ್ಕಂತೆ ಇಂಥದೇ ಮಾರ್ಗವನ್ನು ಅನುಸರಿಸುತ್ತೇವೆ. ನೌಕರಿಯಿಂದ ನಿವೃತ್ತರಾದ ಕಾಲಕ್ಕೆ ಮಕ್ಕಳ ಮದುವೆಯಾಗಿ ಮೊಮ್ಮಕ್ಕಳು

ಹುಟ್ಟಿರುತ್ತವೆ. ಆಗ ನಮಗೆ ಸಂಸಾರದ ಜವಾಬ್ದಾರಿ ಇರುವುದಿಲ್ಲ. ಆದಾಗ್ಯೂ ಉಪವೃತ್ತಿಯೊಂದನ್ನು ಆಯ್ದುಕೊಳ್ಳುತ್ತೇವೆ. 'ಅದು, ಇದು ಕೆಲಸ' ಎನ್ನುತ್ತ ಓಡಾಡಿಕೊಂಡು ಒಂದಿಲ್ಲೊಂದು ಸಾಂಸಾರಿಕ ಚಟುವಟಿಕೆಯಲ್ಲಿ ತೊಡಗಿರುತ್ತೇವೆ. ಏನಿಲ್ಲೆಂದರೂ ಟೀವಿ ನೋಡುವ ಆಸಕ್ತಿಯನ್ನು ಉಳಿಸಿಕೊಂಡಿರುತ್ತೇವೆ.

ಈ ತೃತೀಯ ಹಂತ ಮುಗಿದ ಮೇಲೆ, ಗುಣವಾಗದ ಹಣ್ಣುವಯದ ರೋಗವೊಂದು ತಗುಲಿದಾಗ, 'ನಾನಿನ್ನು ಬಹಳ ದಿನ ಬದುಕಲಾರೆ' ಎಂದು, ದಿನದಲ್ಲಿ ಹಲವಾರು ಬಾರಿ ಅಂದುಕೊಳ್ಳುವ ಸ್ಥಿತಿಯಲ್ಲಿದ್ದಾಗ, 'ಇನ್ನು ಯಾವುದೇ ಐಹಿಕ ಭೋಗವು ಬೇಡ' 'ಇಲ್ಲಿಗೆ ಸಾಕು' ಎನಿಸುತ್ತದೆ. ಇದು ಈಗ ಶ್ರೀಸಾಮಾನ್ಯನು ಸಹಜ ಸ್ವರೂಪದಲ್ಲಿ ನಡೆಸುವ ಸನ್ಯಾಸ.

ಇಂಥ ಸಹಜ ಸ್ಥಿತಿಯನ್ನು ಬಿಟ್ಟು, ಸಂತಾನವನ್ನು ಸೃಷ್ಟಿಸದೇ ಸನ್ಯಾಸವನ್ನು ತೆಗೆದುಕೊಂಡರೆ, ಅದು ಸಮಾಜದ ಅವನತಿಗೆ ಕಾರಣವಾಗುತ್ತದೆ. ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದವರು ಪಂಡಿತ ಮ.ಪ್ರ. ಪೂಜಾರರು. ೧೯೧೪ರಷ್ಟು ಹಿಂದೆಯೇ ತಮ್ಮೊಂದು ಲೇಖದಲ್ಲಿ ಇದರ ವಿವರಣೆ ಕೊಟ್ಟಿದ್ದಾರೆ:

ಸನ್ಯಾಸವು ಎಷ್ಟೆಂದರೂ ವ್ಯಕ್ತಿಗತವಾದುದ್ದು. ಇದರಿಂದ ಸಮಾಜಕ್ಕೆ ಆಗುವ ಹಾನಿಯಾದರೂ ಏನು- ಎಂದು ಅನಿಸಬಹುದು. ಎಲ್ಲೋ ಕೆಲವರು ಮಾತ್ರ ಆ ರೀತಿ - ಬಾಳಿದರೆ ಹಾನಿ ಇಲ್ಲ; ನಿಜ. ಆದರೆ ಸಾವಿರಗಟ್ಟಲೆ ಸನ್ಯಾಸಿಗಳಿದ್ದರೆ? ಸಮಾಜದ ಅಡಿಗಲ್ಲನ್ನೇ ಅಲ್ಲಾಡಿಸಬಹುದು! 'ಸಂಸಾರಕ್ಕಿಂತ ಸನ್ಯಾಸವೇ ಶ್ರೇಷ್ಠ' ಎಂದು ಪ್ರಾರಂಭದ ಬೌದ್ಧ ಧರ್ಮ ಸಾರಿದಾಗ, ಅನೇಕರು ಮುಗಿಬಿದ್ದು ಸ್ವೀಕರಿಸತೊಡಗಿದರು. ಅಶೋಕ ಸಾಮ್ರಾಟನ ಕಾಲದಲ್ಲಿ ೯೦ ಸಾವಿರ ಬೌದ್ಧ ಭಿಕ್ಷುಗಳಿದ್ದರೆಂದು ಇತಿಹಾಸದ ದಾಖಲೆಯೇ ಇದೆ. (ಅವರಲ್ಲಿ ಭಿಕ್ಷಣಿಯರೂ ಇದ್ದರು). ಸಾಲದ್ದಕ್ಕೆ ಇವರೆಲ್ಲ ಭಾರತದ ಎಲ್ಲೆಡೆ ಹೋಗಿ ಧರ್ಮಪ್ರಸಾರ ಕೈಕೊಂಡರು; ಜೊತೆಗೆ ಸನ್ಯಾಸವನ್ನೂ. ಮುಂದಿನ ಕೆಲವು ಶತಮಾನಗಳಲ್ಲಿಯೂ ಇಂಥ ಭಿಕ್ಷು- ಭಿಕ್ಷುಣಿಯರ ಬಾಹುಳ್ಯ ಕಂಡು ಬರುತ್ತದೆ.

ಇಲ್ಲಿ ಅವಶ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಸನ್ಯಾಸ ಸ್ವೀಕರಿಸಬೇಕೆನ್ನುವವರು ಜಾತ್ಯತಃ ಬುದ್ಧಿವಂತರೂ ಪ್ರತಿಭಾಶಾಲಿಗಳೂ ಇರುತ್ತಾರೆ. ಎಂತಲೇ ಸನ್ಯಾಸಿಗಳಾಗುವ ಮನೋದಾರ್ಢ್ಯವನ್ನು ಹೊಂದಿರುತ್ತಾರೆ. ಇಂಥವರು ಸನ್ಯಾಸಿಗಳಾದರೆಂದರೆ ಅವರ



ಪೂರ್ವಾಶ್ರಮದಲ್ಲಿ ಸ್ವಾಮಿಗಳಾಗಿದ್ದ ವಿದ್ಯಾಭೂಷಣರು, ಭಕ್ತಿ ಸಂಗೀತಗಾರರೆಂದು ಖ್ಯಾತಿವೆತ್ತಿದ್ದಾರೆ. ಅವರು ಸ್ವಾಮಿಯಾಗೇ ಮುಂದುವರಿದಿದ್ದರೆ ಆ ಸಂಗೀತದ ಒಂದು ಅಪೂರ್ವ ಪರಂಪರೆ ತ್ರುಟಿತವಾಗುತ್ತಿತ್ತು. ಆ ಕಾಲದಲ್ಲಿ ಹೊಂದಿದ್ದ ಸನ್ಯಾಸವನ್ನು ಅವರೀಗ ತೊರೆದು ಸಂಸಾರಿಗಳಾಗಿದ್ದಾರೆ. ತನ್ನನ್ನು ಮೀರಿಸುವ ಸಂಗೀತಗಾರನನ್ನೊ, ಸಂಗೀತಗಾರ್ತಿಯನ್ನೊ ಸಮಾಜಕ್ಕೆ ನೀಡುವ ಅವಕಾಶ ದೊರೆತಿದೆ - ಎನ್ನೋಣವೆ?

ವಂಶವೃದ್ಧಿ ನಿಂತು ಬಿಟ್ಟು, ಅವರಿಂದ ಹುಟ್ಟಬರಬಹುದಾದ ಧೀಮಂತ ಸಂತಾನ ತಪ್ಪಿ ಹೋಗುತ್ತದೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಇದಕ್ಕೆ ತದ್ವಿರುದ್ಧವಾಗಿ ಸಾಮಾನ್ಯ ಗೃಹಸ್ಥಾಮಿ ಜನರ ಸಂಖ್ಯೆ ಅದೇ ಪ್ರಮಾಣದಲ್ಲಿ ಬೆಳೆಯುತ್ತಲೇ ಹೋಗುವುದು ಸಮಾಜದ ಉನ್ನತಿ ಎಂಬುದು ಉಳಿಯಿತೆಲ್ಲಿ?

ಜನಸಂಖ್ಯೆಯ ಸ್ಫೋಟದ ವಿಚಾರದಲ್ಲಿ ಮೂಲ್ಥಸನ ಸಿದ್ಧಾಂತ ನಮಗೆ ಗೊತ್ತು. ೨x೨=೪, ೪x೪=೧೬, ೧೬x೧೬=..... ಇತ್ಯಾದಿ. ಒಂದು ಕಾಲಕ್ಕೆ ೧೦ ಜನ ಧೀಮಂತರಿದ್ದರೆಂದು ತಿಳಿಯುವಾ. ಅವರಿಗೆ ಧೀಮಂತ ಮಕ್ಕಳೇ ಹುಟ್ಟುತ್ತ ಇದ್ದು ೩೦೦ ವರ್ಷಗಳಾದ ಮೇಲೆ ಇಂಥ ಸಂಭಾವ್ಯ ಧೀಮಂತರ ಸಂಖ್ಯೆ ೪೧ ಸಾವಿರ ಆದೀತು! (ಎಲ್ಲರೂ ಧೀಮಂತರಿರುವುದಿಲ್ಲ ಎನ್ನುವುದನ್ನು ಒಪ್ಪೋಣ) ಅದೇ ಆ ೧೦ ಜನ ಸನ್ಯಾಸಿಗಳಾದರೆ ಮುಂಬರುವ ಸಮಾಜವು ಎಷ್ಟೊಂದು ಹಾನಿಗೀಡಾಗುವುದೆಂಬುದನ್ನು ಊಹಿಸಿರಿ- ಎನ್ನುತ್ತಾರೆ ಪಂ. ಪೂಜಾರರು. ಜೊತೆಗೆ ಮಹಾಮೇಧಾವಿ ವಿದ್ಯಾರಣ್ಯರ ಸನ್ಯಾಸವನ್ನು ಬೇಸರದಿಂದ ಉಲ್ಲೇಖಿಸಿದ್ದಾರೆ.

ಕಳೆದ ವರ್ಷದ ಉದಾಹರಣೆಯನ್ನು -ಶ್ರೀಯುತವಿದ್ಯಾಭೂಷಣರದ್ದು- ತೆಗೆದುಕೊಳ್ಳುವಾ, ಎಷ್ಟೋ ಜನ ಸಂಗೀತಗಾರರ ಮಕ್ಕಳು ಬಾಪಕಾ ಬೇಟಾ ಸವಾಯಿ'ಎನ್ನುವ ತೆರದಲ್ಲಿ ಬೆಳಗಿದ್ದಾರೆ. ಪೂರ್ವಾಶ್ರಮದಲ್ಲಿ ಸ್ವಾಮಿಗಳಾಗಿದ್ದ ವಿದ್ಯಾಭೂಷಣರು, ಭಕ್ತಿ ಸಂಗೀತಗಾರರೆಂದು ಖ್ಯಾತಿವೆತ್ತಿದ್ದಾರೆ. ಅವರು ಸ್ವಾಮಿಯಾಗೇ ಮುಂದುವರಿದಿದ್ದರೆ ಆ ಸಂಗೀತದ ಒಂದು ಅಪೂರ್ವ ಪರಂಪರೆ ತ್ರುಟಿತವಾಗುತ್ತಿತ್ತು. ಆ ಕಾಲದಲ್ಲಿ ಹೊಂದಿದ್ದ ಸನ್ಯಾಸವನ್ನು ಅವರೀಗ ತೊರೆದು ಸಂಸಾರಿಗಳಾಗಿದ್ದಾರೆ. ತನ್ನನ್ನು ಮೀರಿಸುವ ಸಂಗೀತಗಾರನನ್ನೊ, ಸಂಗೀತಗಾರ್ತಿಯನ್ನೊ ಸಮಾಜಕ್ಕೆ ನೀಡುವ ಅವಕಾಶ ದೊರೆತಿದೆ - ಎನ್ನೋಣವೆ?

●

ಸ್ತ್ರೀ ಶಕ್ತಿ - ಸ್ತ್ರೀ ಬುದ್ಧಿ

ಲಕ್ಷ್ಮೀಶನ ಜೈಮಿನೀ ಭಾರತವನ್ನೋ ದುತ್ತಿದ್ದೆ. ಅರ್ಜುನನು ಯಜ್ಞಾಶ್ವದೊಂದಿಗೆ ಪ್ರಮೀಲಾ ರಾಜ್ಯ ಪ್ರವೇಶ ಮಾಡುತ್ತಾನೆ. ಆ ಸ್ತ್ರೀ ಪರ, ಅಲ್ಲ ಸ್ತ್ರೀಮಯವಾದ ರಾಜ್ಯದಲ್ಲಿ ಅರ್ಜುನನಿಗೆ ಮತ್ತೊಮ್ಮೆ ತಾನು ಬೃಹನ್ನಳೆಯಾದುದರ ನೆನಪು ಬಂದಿರಬೇಕು.

ಪ್ರಮೀಳಾ ರಾಣಿಯ ನೆನಪು ಏಕೆ ಎಂದರೆ, ನೀವೇ ಹೇಳಿ ನೋಡೋಣ? ಇತಿಹಾಸ ಕಾಲದಲ್ಲಿ ಕಿತ್ತೂರ ರಾಣಿ ಚೆನ್ನಮ್ಮ, ಝಾಂಸಿ ಲಕ್ಷ್ಮೀಬಾಯಿ, ಇಂದಿರಾಗಾಂಧಿ (ಇವರು ಅಶ್ವಾರೋಹಿ ಆಗಿರದಿದ್ದರೂ ಇವರ ಅಪ್ಪ, 'ನಮ್ಮ ನಿಮ್ಮ ನೆಹರು! ಅಶಾಶ್ವರೋಹರು' ಎಂದುಕವಿ ಬೇಂದ್ರೆ ಹೇಳಿದ್ದಾರಲ್ಲ ಅವರು ಅಶ್ವಾರೋಹಿಯಾಗಿದ್ದರು. ಆಶಾಶ್ವರೋಹಿಗಳೂ ಆಗಿದ್ದರೂ. ಇಂದಿರಾಗಾಂಧಿ ಬರಿ ಆಶಾರೋಹಿಯಾಗಿದ್ದರು) ಅವರ ಸೊಸೆ ರೋಮರಾಣಿಯವರೆಗೂ 'ಸ್ತ್ರೀ ಶಕ್ತಿ' 'ಪುರುಷ ಕೇಸರಿ'ಗಳ ಮೇಲೆ ಸವಾರಿ ಮಾಡಿ, ಸಿಂಹಾಸನಗಳನ್ನಷ್ಟೇ ಏಕೆ ಸಿಂಹಗಳನ್ನು ಏರಿ ಮೆರೆದ ಮಹೋದಾಹರಣೆಗಳು ಮೈಲುಗಲ್ಲುಗಳಂತೆ ಭಾರತವು ನಡೆದು ಬಂದ ದಾರಿಯಲ್ಲಿ ಕಂಗೊಳಿಸುತ್ತಿವೆ. ನಮ್ಮ ಸ್ವಾತಂತ್ರ್ಯವು ನಡೆದು ಬಂದ ದಾರಿಯಲ್ಲಿ ಮಾತ್ರ ಈ ಅತ್ತೆ-ಸೊಸೆಯರಿಬ್ಬರೆ ಚರಿತ್ರ ನಿರ್ಮಾಣ ಮಾಡಿದ ಮಹಿಳೆಯರು. ಅತ್ತೆ-ಸೊಸೆಯರ ಮಹಾತ್ಮೆ ನಮ್ಮ ಭಾರತದ ವೀರ ಪುಟಗಳಲ್ಲಿ ಸ್ಪುಟವಾಗಿ ಕಂಗೊಳಿಸಿದೆ. ನರಗುಂದ ಬಾಬಾ ಸಾಹೇಬನ ಪತ್ನಿ ಸಾವಿತ್ರಿ ಸೊಸೆಯೊಡನೇ ಹೊಳೆಯ ಪಾಲಾದುದು ಇತಿಹಾಸ ದುರಂತ.

ಆದರೆ ರೋಮ ಸಾಮ್ರಾಜ್ಯದ ಇತಿಹಾಸ ಜ್ವರಿಗೆಲ್ಲಾ ರೋಮ ರೋಮಗಳಲ್ಲಿ ರೋಮಾಂಚನವಾಗುವಂತಹ ರೋಮನ್ ಚರಿತ್ರೆಗೆ ಹೊಸ ಗರಿಗಳನ್ನು ಮುಡಿಸಿದ ಈ ಗರತಿಯ ಗರಿಮೆಗೆ ನೀವೇನೆನ್ನುತ್ತೀರೋ! ಸ್ವಾತಂತ್ರ್ಯದ ಸುವರ್ಣ ವರ್ಷದಲ್ಲಿ ನಾವೆಲ್ಲ ರಾಮರಾಜ್ಯದ ಕನವರಿಕೆಯಲ್ಲಿದ್ದಾಗ, ರೋಮರಾಜ್ಯದ ನೆನಪು ಮಾಡಿಕೊಟ್ಟ ಈ ನಾರೀಶಕ್ತಿಗೆ ನಮೋನಮೋ ಎಂದು 'ಕೇಸರಿ' ಯಂತಹ ಸಿಂಹ ಪುರುಷರೊಬ್ಬರೆ ಏಕೆ ಮೊಲಗಳಂತಹ ಪ್ರಜಾಪುರುಷರೂ ನಮಸ್ಕಾರ ಮಾಡಬೇಕು!

ಛೇ! ಅದೇನು ಬಿರುಗಾಳಿಯ ಭಾಷಣಗಳು! ಆ ಬಿರುಗಾಳಿಯಲ್ಲಿ ಬರೆದುಕೊಟ್ಟ ಭಾಷಣದ ಪುಟಗಳು ಗಾಳೀಪಟಗಳಂತೆ ಹಾರಿಹೋಗಿದ್ದರೆ ಮಾತ್ರ ಫಜೀತಿಯಾಗುತ್ತಿತ್ತು! ನಮ್ಮ ಅರ್ಥ ಪೂರ್ಣ ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷ್ಮಣ್ ಒಂದು ದಿನ ಒಂದು ಚಿತ್ರಬಿಡಿಸಿದ್ದನ್ನು ತಾವು ನೋಡಿದ್ದೀರೊ ಇಲ್ಲವೊ! ಈ ಚೌಕೋನ ಮುಖದ (ಚೌಕರಾಣಿ - ನಮ್ಮ ಭಾರತದ ಸಾಂಪ್ರದಾಯಿಕ ಮದುವೆಗಳಲ್ಲೂ ಒಂದು ಚೇಕರಾಣಿ ಎಂಬ ಕಾರ್ಯಕ್ರಮ ನಡೆಯುತ್ತದೆ. ಅದು 'ಚೌಕನಾಹಣೆ' ಎಂಬ ಮರಾಠಿ ಪದದ ತದ್ಭವರೂಪ.) ನಾರೀಶಕ್ತಿ ಭಾಷಣಕ್ಕೆ ನಿಂತಾರ, ಅವರ Ghost writing (ಪ್ರೇತಲೇಖನ, ಅರ್ಥಾತ್ ಪಿ.ಎ. ತಯಾರಿಸಿದ ಭಾಷಣ) ಭಾಷಣ ಪುಟಗಳು ಬಿರುಗಾಳಿಗೆ ಹಾರಿ ಹೋದಾಗ, ತಬ್ಬಿಬ್ಬಾಗಲು ಕಾರ್ಯದರ್ಶಿಗಳು ಕಿವಿಯಲ್ಲಿ ''ಇರಲಿ ಹಾಗೇ ಮುಂದರಿಸಿ ಮ್ಯಾಡಮ್, ಮೊದಲು ಕೈ ಮಾಡುವುದು ಹಸ್ತ ಪ್ರದರ್ಶನ, ಆ ಮೇಲೆ ಹೇಳುವುದು. ಮೈ ಭಾರತ ಕೀ ಬಹೂ, My mother in law was so and so, I am stained with the blood of....Don't give the reins into the hands of casteism and Hindutwa. Vote for C. Jai Hind - Jai Bharat" ಎಂದು. ಇದು ಬಿರುಗಾಳಿ ಭಾಷಣ, ಬರಿಗಾಳಿ ಭಾಷಣ (ಎ.ಐ.ಆರ್. ಭಾಷಣವಲ್ಲ ಮತ್ತೆ).

ಅಂತೂ ಭಾರತದ ಮಣ್ಣಿನಲ್ಲಿ ಇನ್ನೂ ನಾರೀ ಶಕ್ತಿ ಕಣಕಣದಲ್ಲಿ ತುಂಬಿದೆ; ಕಲುಷಿತ ಗಂಗಾ ಪ್ರವಾಹದ ಗುಂಪ ಹರಿಯುತ್ತಿದೆ ಎಂಬುದನ್ನು ಜೀವಂತವಾಗಿ ಕಂಡಿದ್ದೇವೆ. ''ಸ್ತ್ರೀ ಪರ'' ವಾದಿಗಳ ವಿಜಯ ಪತಾಕೆಯ ಫಡಫಡಾಫವಲ್ಲವೆ ಇದು? ಸ್ತ್ರೀ ಪರ ಇತಿಹಾಸ, ಪುರಾಣ, ವೇದಗಳೇ ನಮಗೆ ಸಾಕ್ಷಿ ಇರುವಾಗ ಮತ್ತೆ ಪ್ರತ್ಯೇಕವಾದ ಸ್ತ್ರೀಪರ ಸಾಹಿತ್ಯವೇಕೆ ಬೇಕು? 'ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದ ತಾಯಿ' ಎಂದಾಗ ಈ ವಿಶ್ವವೇ ಸ್ತ್ರೀ ಪರ, ಅಷ್ಟೇ ಅಲ್ಲ ಸ್ತ್ರೀ ಜಾತವೆಂದಾಯಿತಲ್ಲವೆ? ಕೇಸರಿಯಂತಹ ಪುರುಷರಿಗೂ ಅನ್ವಯಿಸುತ್ತದೆ - 'ಪೆಣ್ಣಲ್ಲವ ಪಡೆದವಳು - ಪೊರೆದವಳು. (ಪೊರಕೆ ಕೈಯಿಂದ ಅರ್ಧಾಂಗಿಯೆನಿಸಿದವಳು ಅಂತೀರಾ?)

ಅರವಿಂದರು ಕೂಡ ಸ್ತ್ರೀ ಶಕ್ತಿಯ ಮಹಾತ್ಮೆ, ಮಹತಿ, ಮಹತ್ವಗಳನ್ನು ಕುರಿತು "On Women' ಎಂಬ ಶೀರ್ಷಿಕೆಯಲ್ಲಿ ಬರೆದಿದ್ದಾರೆ! (ಅದರ ಕನ್ನಡ ಅನುವಾದವೂ ಮೊನ್ನೆ ಮೊನ್ನೆ ಆಗಿದೆ!) ಪುರಾಣ, ಇತಿಹಾಸ, ಕಾವ್ಯಗಳಲ್ಲಿ 'ಸ್ತ್ರೀ' ಕುರಿತು ಹೇಳಿದ್ದಾರೆ.

ಪುರಾಣದಲ್ಲಿ ಸ್ತ್ರೀ ಅಪ್ಸರೆಯಾಗಿ ದೇವತೆಗಳನ್ನೂ ಋಷಿಗಳನ್ನೂ ಮೋಹಿಸಿ ಆಳಿದ್ದಾಳೆ. ತನ್ನ ಗಾನ-ನರ್ತನಗಳಿಂದ ಆಕರ್ಷಿಸಿದ್ದಾಳೆ. ಇತಿಹಾಸ ಕಾಲದಲ್ಲಿ ರಾಜಗಣಿಕೆಯರಾಗಿ ಹೋದರು. ಕಾರ್ಯದಲ್ಲಿ ಸ್ತ್ರೀ ಚಿತ್ರಣದಲ್ಲಿ

ಸ್ವಾತಂತ್ರ್ಯದ ಸುವರ್ಣ ವರ್ಷದಲ್ಲಿ ನಾವೆಲ್ಲ ರಾಮರಾಜ್ಯದ ಕನವರಿಕೆಯಲ್ಲಿದ್ದಾಗ, ರೋಮರಾಜ್ಯದ ನೆನಪು ಮಾಡಿಕೊಟ್ಟ ಈ ನಾರೀಶಕ್ತಿಗೆ ನಮೋನಮೋ ಎಂದು 'ಕೇಸರಿ' ಯಂತಹ ಸಿಂಹ ಪುರುಷರೊಬ್ಬರೆ ಏಕೆ ಮೊಲಗಳಂತಹ ಪ್ರಜಾಪುರುಷರೂ ನಮಸ್ಕಾರ ಮಾಡಬೇಕು!

ಎನ್. ಕೆ. ಕುಲಕರ್ಣಿ

ಕಾಳಿದಾಸನನ್ನು ಮೀರಿಸಿದವರು ಯಾರು? "Frailty thy name is woman' (ಚಂಚಲತೆಯೇ, ನಿನ್ನ ಹೆಸರ ಹೆಣ್ಣು) ಎಂದು ಶೇಕ್ಸಪಿಯರ್ ಸ್ತ್ರೀಕುಲಕ್ಕೆ ಉಡುಗೊರೆ ಕೊಟ್ಟಿದ್ದಾನೆ.

ಆದರೆ ವೇದಕಾಲದಲ್ಲಿ ಸ್ತ್ರೀ ಪುರುಷರು ಸಮಾನರಷ್ಟೇ ಅಲ್ಲ, ಸ್ತ್ರೀಯರಿಗೇ ಹೆಚ್ಚಿನ ಸ್ವಾತಂತ್ರ್ಯವಿತ್ತೆಂದು ತಿಳಿಯುತ್ತದೆ. ಕೈಲಾಸಂರ 'ಅಮ್ಮಾವ್ರಗಂಡ'ದ ಸರೋಜಾಗೂ ತನ್ನ ಪತಿಗಿಂತ ಹೆಚ್ಚಿನ ಸ್ವಾತಂತ್ರ್ಯ. ಇಷ್ಟೇ ಅಲ್ಲ ಆ ಪತಿಗೊಂದು ಕೊರಳಪಟ್ಟಿಯನ್ನೂ ಕಟ್ಟಿದ್ದಳಂತೆ!

ಆದರೆ ಸಂಸ್ಕೃತದಲ್ಲಿ ಒಂದು ಸೂಕ್ತಿ ಇದೆ - ''ಸ್ತ್ರೀ ಬುದ್ಧಿ ಪ್ರಲಯಾಂತಿಕಾ'' ಎಂದು! ಎಂದ ಮೇಲೆ ಇದನ್ನು ಸೂಕ್ತಿ ಎನ್ನುವುದಕ್ಕಿಂತ ದುರುಕ್ತಿ ಎಂದೇ ಹೇಳುವುದುಲೇಸು, ಅಲ್ಲವೆ? ಏನ್ರೀ ಸ್ತ್ರೀ ಬುದ್ಧಿ ಪ್ರಳಯಕಾರಿಯೇ? ಅದಕ್ಕೇ ಹೇಳುತ್ತಿದ್ದಾರೇನೋ ಈ ಶತಮಾನ ಮುಗಿಯುವ ಹೊತ್ತಿಗೆ ಎಂದರೆ ೧೯೯೯ ಇಸ್ವಿಗೇ ನಾವೆಲ್ಲಾ ಇಲ್ಲದಂತಾಗಿ ನಮ್ಮ ಡೆಮಾಕ್ರಸಿಗೂ ಇತಿಶ್ರೀ ಭವಿಸುತ್ತದೆ ಎಂದು?

ಅದೂ ಹೋಗಲಿ, ಹಾಗೆ ಹೇಳಬಹುದೆ ಸ್ವಾಮಿ ಸ್ತ್ರೀ ಬುದ್ಧಿ ಪ್ರಳಯಾಂತಿಕ ಅಂತ? ಏನನ್ಯಾಯ ಇದು? ಸ್ತ್ರೀ ಸೌಂದರ್ಯ ದೇಶಗಳನ್ನು ಸೋಲಿಸಿರಬಹುದು. 'ಹೆಲೆನ್ ಆಫ್ ಟ್ರಾಮ್' ಕಥೆ ಕೂಡ ಸ್ತ್ರೀ ಬುದ್ಧಿ ಪ್ರಳಯಾಂತಿಕವೆಂದು ಹೇಳಲಿಲ್ಲ. ಹೆಣ್ಣಿನ ಚೆಲುವು ಪ್ರಳಯಾಂತಿಕ ವಾಗಿರಬಹುದು. ಆದರೆ ಹೆಣ್ಣಿನ ಬುದ್ಧಿಗೇನಾಗಿದೆ ಸ್ವಾಮಿ? ಸ್ತ್ರೀ ಬುದ್ಧಿ ಕಾವ್ಯ ಬರೆದಿಲ್ಲವೆ? ಸಾಹಿತ್ಯ ಸಮ್ಮೇಳನಾಧ್ಯಕ್ಷ ಸಿಂಹಾಸನದ ಮೇಲೆ ಮೆರೆದಿಲ್ಲವೆ? ದಿಲ್ಲೀ ಸಿಂಹಾಸನದ ಮೇಲೆ ಕುಳಿತಿಲ್ಲವೆ? ಹಾ! There is the rule! ಇರೋದು ಇಲ್ಲೆ. ಇಪ್ಪತ್ತೆರಡು ವರ್ಷಗಳ ಹಿಂದೆ 'ಎಮರ್ಜನ್ಸಿ' ಅನ್ನೋದು ಸ್ತ್ರೀ ಬುದ್ಧಿಗಳಿಂದಲ್ಲವೆ ಸ್ಫೋಟಿಸಿದ್ದು?

ಸಿನಿಮಾ ಚಿತ್ರಗಳಲ್ಲಿ ಖಳನಾಯಕರಂತೆ ಖಳನಾಯಿಕೆಯರೂ ಬೆಳ್ಳಿಯ ತೆರೆಯ ಮೇಲೆ ಕಾಣಿಸಿಕೊಂಡಿದ್ದಾರೆ! ನಮ್ಮ ರಾಮಾಯಣ, ಮಹಾಭಾರತಗಳಲ್ಲಿ ಸ್ತ್ರೀ ದುರ್ಬುದ್ಧಿಗಳಿಗೇನು ಕೊರತೆ? ನಮ್ಮ ಕೈಕೇಯೀ, ನಮ್ಮ ಮಂಥರೆ ಏನು ಕಮ್ಮಿ? ಇವರನ್ನು ಹೋಲುವಷ್ಟು ಖಳನಾಯಕಯರು ಮಹಾಭಾರತದಲ್ಲಿಲ್ಲ ಬಿಡಿ. ಆ ಹೊತ್ತಿಗಾಗಲೆ ಸ್ತ್ರೀ ಸದ್ಬುದ್ಧಿ ಜಾಗ್ರತಗೊಂಡಿತ್ತು. ಒಬ್ಬ ಶಕುನಿ ಪ್ರಳಯಾಂತಕ ಬುದ್ಧಿಯವನಾಗಿದ್ದುಕೊಂಡು ಯಾವ ಸ್ತ್ರೀಗೂ ತನ್ನಷ್ಟು ಖಳತ್ವಕ್ಕೇರಲು ಬಿಡಲೇ ಇಲ್ಲವೇನೋ!

ಆದರೂ ಸ್ತ್ರೀ ಬುದ್ಧಿ ಪ್ರಳಯವನ್ನುಂಟು ಮಾಡೀತೆ? ಈ ಶತಮಾನದ ಕೊನೆಗೇ ಮಹಾ ಪ್ರಳಯವೇನೂ ಬರಲಿಕ್ಕಿಲ್ಲ ಎಂದು ಹಲವಾರು ವಿಜ್ಞಾನಿಗಳು, ಜ್ಯೋತಿಷಿಗಳು ಭರವಸೆ ಕೊಟ್ಟಿದ್ದಾರೆ ಬಿಡಿ. ಈ ಶತಮಾನದ ಕೊನೆಗೇ ಪ್ರಳಯ ಸಂಭವಿಸಲಿಕ್ಕಿಲ್ಲ. ಆದರೂ ಇನ್ನು ಸಾವಿರಾರು ವರ್ಷಗಳ ನಂತರದ ಮೇಲಾದರೂ ಪ್ರಳಯವುಂಟಾದರೆ ಅದು ಸ್ತ್ರೀ ಬುದ್ಧಿಯಿಂದಲೇ ಉಂಟಾದೀತು ಅಂತೀರಾ? ಯೋಚಿಸಿ. ನಾನಂತೂ ಸ್ತ್ರೀ ಬುದ್ಧಿ ಇಷ್ಟು ಪ್ರಳಯಾಂತಕಾರೀ ಎಂದು ನಂಬೋದಿಲ್ಲ. ನೀವು? ನಿಮ್ಮ ಮತವೂ ಸ್ತ್ರೀ ಪರವೆಂದೇ ನಂಬುತ್ತೇನೆ. ಆಗಲೆ ನೀವೆಲ್ಲಾ ಮತದಾನ ಮಾಡಿ ಮಸಿಹಚ್ಚಿಕೊಂಡಿದ್ದೀರಲ್ಲವೆ? ಈ ಒಂದು ಮಸಿಗಾಗಿಯೆ ಈ ಸಲದ ಮಹಾ ಚುನಾವಣೆಯಲ್ಲಿ ನಮ್ಮ ಡೆಮಾಕ್ರಸಿ ಸರಕಾರ, ನಮ್ಮ ಸೆಕ್ಯೂಲರ್ ಸರಕಾರ, ನಮ್ಮ ಚಾರ್ಜ್‌ಶೀಟ್ ಆಗಿದ್ದರೂ ಕೋರ್ಟಿನ ತೀರ್ಪು ಆಗಿರದ ನಾಯಕರುಳ್ಳ ಸರಕಾರ, ಮೂರು ಕೋಟಿ ರೂಪಾಯಿ ಖರ್ಚು ಮಾಡಿ ಈ ಮಸಿ ಖರೀದಿಸಿದೆಯಂತೆ. ಅದೇ ಮಸಿಯನ್ನು ಹಚ್ಚಿಕೊಂಡ ನಾವು ನೀವೆಲ್ಲಾ ಕಳಂಕಪ್ರಾಯರು ಎಂದೇನೂ ಅರ್ಥವಲ್ಲ ಬಿಡಿ. ಯಾಕೆಂದರೆ ಮತದಾನ ಮಾಡಿದ ನಮ್ಮ ಮೇಲೇನೂ ಚಾರ್ಜ್‌ಶೀಟುಗಳಿರುವುದಿಲ್ಲವಲ್ಲ! ●

ಬಿಸಿಲ ಬಳ್ಳಾರಿಯಲ್ಲೊಂದು ಹಸಿರು ಸ್ಮಾರಕ

ಮೊದಲ ಮಹಾಯುದ್ಧ ಆಹಾಕಾರ ಎಲ್ಲೆಲ್ಲೂ. ಬಳ್ಳಾರಿಯಲ್ಲೂ! ಹೌದು. ಅದು ಕ್ರಿ.ಶ. ೧೯೧೮. ಸುಮಾರು ಎರಡು ಸಾವಿರ ಟರ್ಕಿ ಸೈನಿಕರ ಹಾಗೂ ಅವರ ರಾಜಕುಮಾರ ಬ್ರಿಟಿಷರ ವಶದಲ್ಲಿ ಬಳ್ಳಾರಿಗೆ ಬಂದಿದ್ದಾರೆ. ಬಂದು ತಿರುಗಿ ಹೋಗಲಿಲ್ಲ. ರಾಜಕುಮಾರ ಅಬ್ದುಲ್‌ಸಲಾಮ್ ಆಗಾಭಾಷನನ್ನು ಸೇರಿದಂತೆ ಟರ್ಕಿ ಸೈನ್ಯ ಬಳ್ಳಾರಿಯ ಈಗಿನ ವಿಮಾನ ನಿಲ್ದಾಣದ ಸ್ಥಳದಲ್ಲಿ ಕ್ರೂರ ಬ್ರಿಟಿಷರ ಗುಂಡಿಗೆ ಬಲಿಯಾಗ ಬೇಕಾಯಿತು. ಟರ್ಕಿಯರ ಬಲಿದಾನಕ್ಕೆ, ಬ್ರಿಟಿಷರ ಕ್ರೌರ್ಯಕ್ಕೆ ಸಾಕ್ಷಿಯಾಗಿ ಈಗ ಅಲ್ಲೊಂದು ಸ್ಮಾರಕ.

ಇದು ಸಾಧ್ಯವಾಗಿದ್ದು ಬಳ್ಳಾರಿ ನಗರ ಸಭೆ ಸದಸ್ಯ ಹಾಜಿ ಅಬಸಾಕ್ ಆದಂಸಾಬ್ ಎಂಬುವವರ ಕ್ರಿಯಾಶೀಲತೆಯಿಂದ ಹಾಗೂ ಭಾರತದಲ್ಲಿರುವ ಟರ್ಕಿ ರಾಯಭಾರಿಗಳು ತಮ್ಮ ದೇಶದ ಕುರಿತ ತಾಳಿರುವ ಅಭಿಮಾನದಿಂದ. ಟರ್ಕಿ ಸೈನಿಕರ ಸಮಾಧಿಗಳ ಮೇಲಿನ ಉರ್ದುವಿನಲ್ಲಿ ಬರೆದ ಫಲಕಗಳನ್ನು ಓದಿದ ಹಾಜಿ ಅಬಸಾಕ್ ಆದಂಸಾಬ್ ಅದೇ ಉತ್ಸಾಹದಲ್ಲಿ ಭಾರತದಲ್ಲಿಯ ಟರ್ಕಿ ರಾಯಭಾರಿಗಳ ಜೊತೆ ಪತ್ರವ್ಯವಹಾರ ಮಾಡಿದರು. ತಮ್ಮ ದೇಶಕ್ಕಾಗಿ ಮಡಿದ ಯೋಧರ ಕುರಿತ ಭಾರತೀಯನೊಬ್ಬನ ಆಸಕ್ತಿ ಕಂಡು ಟರ್ಕಿ ರಾಯಭಾರಿಗಳು ಖುದ್ದಾಗಿ ಬಳ್ಳಾರಿಗೆ ಬಂದು ಸ್ಥಳವನ್ನು ಸಂದರ್ಶಿಸಿ ಭಾರತ ಸರ್ಕಾರದ ಅಗತ್ಯ ನೆರವು ಪಡೆದು ಆ ಸ್ಥಳವನ್ನು ಐತಿಹಾಸಿಕ ಸ್ಮಾರಕವಾಗಿ ನಿರ್ಮಿಸಲು ಯಶಸ್ವಿಯಾಗಿದ್ದಾರೆ. ಅಲ್ಲದೆ ಆ ಸ್ಮಾರಕದ ಅಭಿವೃದ್ಧಿಯನ್ನು ಕಾಪಾಡಿ ಕೊಂಡು ಹೋಗಲು ಹಾಜಿ ಅಬಸಾಕ್ ಆದಂಸಾಬ್ ಅವರನ್ನು ಟ್ರಸ್ಟಿಯಾಗಿ ನೇಮಿಸಿದ್ದಾರೆ. ಸುಮಾರು ಎಕರೆಯಲ್ಲಿ ಹರಡಿರುವ ಈ ಐತಿಹಾಸಿಕ ನೆಲ ಈಗ ಎರಡು ಎಕರೆ ಜಾಗದಲ್ಲಷ್ಟೇ ಕಣ್ಮನ ಸೆಳೆಯುವ ನೋಟವಾಗಿ ಹಬ್ಬಿದೆ.

ಜೈಪುರ ಮಾರ್ಬಲ್‌ಗಳಿಂದ ನಿರ್ಮಿಸಿರುವ ಇಲ್ಲಿನ ಸ್ಮಾರಕಗಳು ಹಾಗೂ ಹಸಿರಾಗಿ ನಿಂತಿರುವ ಸುತ್ತಲಿನ ಪರಿಸರ ಮನೋಹರವಾಗಿದೆ. ಸಂಜೆಯಲ್ಲಿ ಇದರ ಮೆರಗು ಇನ್ನಷ್ಟು ಹೆಚ್ಚುತ್ತದೆ. ಆದರೆ ಅಲ್ಲಿ ಬರುವ ಮಾರ್ಗದಲ್ಲಿ ಬೀದಿ ದೀಪಗಳಿಲ್ಲ. ಸಂಬಂಧಪಟ್ಟ ಇಲಾಖೆ ಈ ಕಡೆ ಗಮನಹರಿಸುತ್ತಾರೆಂದು ಸಾರ್ವಜನಿಕರು ಎದುರು ನೋಡುತ್ತಾ ಕುಳಿತ್ತಿದ್ದಾರೆ.

ಟರ್ಕಿಯರ ನೋವು, ಸ್ವಾಭಿಮಾನ ಹಾಗೂ ಬ್ರಿಟಿಷರ ಕೇಡು ಏಕಕಾಲದ ಸಾಕ್ಷಿಗಳಿಗಾಗಿ ಬನ್ನಿ ಬಳ್ಳಾರಿ ನಗರಕ್ಕೆ.



ದೊರೆಯ ಮಗನ ಸಮಾಧಿ



ಹತರಾದ ಎರಡು ಸಾವಿರ ಸೈನಿಕರ ಗೋರಿ

ಕೆ. ಶ್ರೀನಿವಾಸರೆಡ್ಡಿ ಅಲ್ಲಿಪುರ

ನಾರಿಯರ ಪರಿಪೂರ್ಣ ಬದುಕಿಗೆ ರೇಷ್ಮೆ



ಎಸ್. ಬಿ. ಮಲ್ಲೂರ

ರೇಷ್ಮೆ ಸೀರೆಗಳು ಹೆಣ್ಣಿಗೆ ಸೂಜಿಗಲ್ಲಿನಂತಹ ವಸ್ತು. ಅದರಲ್ಲಿಯೂ ನಮ್ಮ ಭಾರತೀಯ ನಾರಿಯರಿಗೆ ರೇಷ್ಮೆ ಬಟ್ಟೆಗಳಿಲ್ಲದೆ ಜೀವನವೆ ಇಲ್ಲ. ರೇಷ್ಮೆ ಸೀರೆಗಳನ್ನು ಒಮ್ಮೆಯಾದರೂ ಬಳಸದಿದ್ದರೆ ಬದುಕಿಗೆ ಪರಿಪೂರ್ಣತೆ ಬರುವುದಿಲ್ಲವೆಂಬುದೇ ನಮ್ಮ ಹೆಣ್ಣುಮಕ್ಕಳ ನಂಬಿಕೆ.

ರೇಷ್ಮೆ ಹುಳುಗಳಿಂದ ಗೂಡುಗಳಲ್ಲಿ ಬರುವ ರೇಷ್ಮೆ ನೂಲುಗಳಿಗೆ ನಮ್ಮ ಕರ್ನಾಟಕವೇ ಪ್ರಸಿದ್ದಿ. ಅದರಲ್ಲೂ ಕಾವೇರಿ ನೀರಿನಿಂದ ಬೆಳೆಯುವ ರೇಷ್ಮೆಯೇ ಶ್ರೇಷ್ಠವಾದದು. ಹೊಳಪಿಗೆ ಚೈನಾ ರೇಷ್ಮೆಯು ಪ್ರಸಿದ್ದಿಯಾದರೂ ಬೆಲೆಯಲ್ಲಿ ಅಧಿಕ. ಸೀರೆಗಳ ತಯಾರಿಕೆಯಲ್ಲಿ ಚೈನಾ ರೇಷ್ಮೆಯು ಒಂದು ಭಾಗ ಮಾತ್ರ. ಬಾಳಿಕೆಯಲ್ಲಿ ದಪ್ಪ ನೂಲು ಉಪಯೋಗಿಸಿ ತಯಾರಾಗುವ ರೇಷ್ಮೆ ಸೀರೆಗಳೇ ಉತ್ತಮ. ಅದರಲ್ಲಿಯೂ ಪೂರ ಜರಿಯಲ್ಲಿ ತಯಾರಾಗುವ ಕಾಂಚಿವರಂ ರೇಷ್ಮೆ ಸೀರೆಗಳಿಗೇ ಮೊದಲನೆ ಸ್ಥಾನ.

ಸಾಮಾನ್ಯ ಜನತೆಗೆ ಕೈಗೆಟಕುವ ಈ ಕಾಂಚಿವರಂ ಸೀರೆಗಳ ಜಾಗವನ್ನು ಮೊಣಕಾಲ್ಮೂರು ಸೀರೆಗಳು ಮತ್ತು ಧರ್ಮಾವರಂ ಸೀರೆಗಳು ತುಂಬಿವೆ.

ವೈಭವವಾಗಿ ಕಾಣುವ ಬನಾರಸ್ ಸೀರೆಗಳು ತಮ್ಮ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಇತ್ತೀಚೆಗೆ ವಿಫಲವಾಗಿದೆ.

ಇತ್ತೀಚೆಗೆ ಫ್ಯಾನ್ಸಿ ಸೀರೆಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ನಿತ್ಯವು ಹೊಸ ಹೊಸ ವಿಧವಾದ ಪ್ರಿಂಟೆಡ್ ಸೀರೆಗಳು ಮಾರ್ಕೆಟಗೆ ಬರುತ್ತಿವೆ. ಅದಲ್ಲದೆ ಕೃತಕ ರೇಷ್ಮೆಯ ಹಾವಳಿ ಹೆಚ್ಚಾಗಿರುವುದರಿಂದ ಇದರ ಬಳಕೆ ಹೆಚ್ಚಾಗಿದೆ. ರೇಷ್ಮೆ ಸೀರೆಗಳನ್ನು ಕೃತಕ ರೇಷ್ಮೆಯೊಡನೆ ಸೇರಿಸಿ ನೇಯುವ ರೂಢಿಯು ಹೆಚ್ಚಾಗಿದೆ.

ಜರಿಗಳಲ್ಲಿ ಈಗ ಲೆಕ್ಕವಿಲ್ಲದಷ್ಟು ವಿಧಗಳಿರುವುದರಿಂದ ನಿರ್ಧಿಷ್ಟವಾದ ಮಾಹಿತಿ ನಿಮಗೆ ಸಿಗುವುದು ಕಷ್ಟ. ನೀವು ಕೊಳ್ಳುವಾಗ ಬಟ್ಟೆಗಳ ಬಗ್ಗೆ ಮತ್ತು ಬಳಸಿರುವ ಜರಿಗಳ ಬಗ್ಗೆ ಸಾಕಷ್ಟು ಮಾಹಿತಿ ಪಡೆದುಕೊಳ್ಳಿರಿ. ಏಕೆಂದರೆ ರೇಷ್ಮೆ ಬಟ್ಟೆಗಳಿಗೆ, ಬಣ್ಣಗಳಿಗೆ ಮತ್ತು ಜರಿಗಳಿಗೆ ನಿರ್ಧಿಷ್ಟವಾದ ಬಾಳಿಕೆಯ ಅವಧಿಯು ಇರುವುದಿಲ್ಲ. ನಾವು ಉಪಯೋಗಿಸುವ ರೀತಿಗಳ ಮೇಲೆಯೆ ಬಾಳಿಕೆ ಅವಲಂಬಿಸಿರುತ್ತದೆ.

ಆದರೂ ಕೈಮಗ್ಗದಲ್ಲಿ ತಯಾರಾಗುವ ಯಾವುದೇ ಸೀರೆಗಳು ಒಂದೆ ವಿಧವಾಗಿ ಉತ್ತಮವಾಗಿ ತಯಾರಾಗುವುದಿಲ್ಲ. ನೇಕಾರನ ಕೈಚಳಕವೂ ಇರುತ್ತದೆ. ಆದ್ದರಿಂದ ನೀವು ಕೊಳ್ಳುವಾಗಲೇ ಪೂರ್ಣ ಮಾಹಿತಿಗಳನ್ನು ಪಡೆಯಬೇಕು. ಬಳಸುವ ವಿವರಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು

ಭಾರತೀಯ ಸಂಸ್ಕೃತಿಯ ಪ್ರತೀಕ

ಸೀರೆ ಭಾರತೀಯ ಬಹಳ ಪುರಾತನ ಉಡುಪಿನ ವಿಧಾನ. ನಾವು ಕಾಲಾನುಸಾರ ವಿವಿಧ ಫ್ಯಾಷನ್‌ಗಳ ಬೆಳವಣಿಗೆಯನ್ನು ಲೆಕ್ಕ ಹಾಕಿದರೆ ಸೀರೆ ಭಾರತೀಯ ಮಹಿಳೆಯರ ಫ್ಯಾಷನ್ ಆಗಿ ಆಕರ್ಷಣೆ ಪಡೆದಿದೆ. ಹಲವು ಫ್ಯಾಷನ್‌ಗಳು ಬಂದು ಹೋಗಿವೆ. ಆದರೆ ಈಗಿನ ಫ್ಯಾಷನಬಲ್ ಉಡುಪುಗಳ ಪೈಕಿ ಸೀರೆ ಜನರ ಆಕರ್ಷಣೆ ಪಡೆದಷ್ಟು ಬೇರೆ ಯಾವುದೂ ಪಡೆದಿಲ್ಲ ಹಾಗು ಸೀರೆಯ ಕುರಿತು ಒಲವು ಹಾಗೆಯೇ ಉಳಿದಿದೆ.

ಸೀರೆ ಭಾರತೀಯ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಗುರುತಿಸುವ ಹಲವಾರು ವಸ್ತುಗಳಲ್ಲಿ ಒಂದಾಗಿದೆ. ಮೇಲಾಗಿ ವಿದೇಶಗಳಲ್ಲಿ ಸೀರೆ ನಮ್ಮ ಶ್ರೀಮಂತ ಪರಂಪರೆಯ ಪ್ರತಿನಿಧಿಯಾಗಿದೆ. ಸೀರೆ ಉಡುವ ಕ್ರಮ ಯಾವಾಗ ಅಷ್ಟು ವ್ಯಾಪಕವಾಯಿತೆಂದು ಹೇಳಲು ಸಾಧ್ಯವಿಲ್ಲ. ಆದರೆ ಹಲವು ಕಾಲ ಚಕ್ರಗಳನ್ನು ದಾಟಿದ ಮೇಲೂ ಸೀರೆ ಮೇಲ್ಲಿನ ಒಲವು ಹಾಗೆಯೇ ಉಳಿದಿದೆ. ಹಾಗು ದಶಕಗಳ ಬಳಿಕವೂ ಸೀರೆ ಭಾರತೀಯ ಮಹಿಳೆಯರ ಉಡುಗೆಯಾಗಿ ಬೆಳಿದಿದೆ. ಮುಂದಿನ ದಶಕಗಳಲ್ಲೂ ಅದು ಹಾಗೆಯೇ ಉಳಿಯಲಿದೆ.

ಭಾರತೀಯ ಮಹಿಳೆಯರಿಗೆ ಸೀರೆ ಪ್ರಥಮ ಆಯ್ಕೆಯಾಗುವುದಕ್ಕೆ ಕಾರಣಗಳನ್ನು ವಿಚಾರಿಸಿದಾಗ ಸಾಂಸ್ಕೃತಿಕ ಉಡುಪಾಗಿ ಸೀರೆಯ ಸೌಮ್ಯತೆ ಅದಕ್ಕೆ ಪ್ರಧಾನ್ಯತೆ ತಂದು ಕೊಟ್ಟಿದೆ ಎಂದು ತಿಳಿಯಬಹುದು. ಇದು ಎಂತಹಾ ಉಡುಗೆಯೆಂದರೆ ಮಹಿಳೆಗೆ ಉತ್ತಮ ನಡತೆಯ ನೋಟವನ್ನು ಕೊಡುತ್ತದೆ ಮತ್ತು ಆಕೆಯ ಸೌಂದ್ಯರ್ಯ ಮತ್ತು ಸರಳತೆಯನ್ನು ವರ್ಧಿಸುತ್ತದೆ.

ಸೀರೆಗಳು ವೈವಿಧ್ಯ, ಭಾರತೀಯರು ಮಾತ್ರವಲ್ಲ ವಿದೇಶಿ ಮಹಿಳೆಯರ ನಡುವೆಯೂ ಮೆಚ್ಚುಗೆಗೆ ಕಾರಣವಾಗಿದೆ. ಸೀರೆಯ ಇನ್ನೊಂದು ವಿಶೇಷತೆ ಎಂದರೆ ಅದನ್ನು ಗುಡಿಸಲು ವಾಸಿಗಳೂ ಉಡುತ್ತಾರೆ. ಬಂಗ್ಲೆಯಲ್ಲಿ ವಾಸಿಸುವವರೂ ಉಡುತ್ತಾರೆ. ಉಳಿದ ಉಡುಪುಗಳಿಗೆ ಹೋಲಿಸಿದಾಗ ಸೀರೆ ಅಗ್ಗವಾಗಿಯೂ ಸಿಗುತ್ತದೆ.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಕೊಡುಗೆ

ಕರ್ನಾಟಕದಲ್ಲಿ ರೇಷ್ಮೆ ಉದ್ಯಮವು ವ್ಯವಸಾಯ ಹಾಗೂ ಕೈಗಾರಿಕೆ ಮಾದರಿಯಲ್ಲಿ ಸುಮಾರು ೧೦೦೦ ವರ್ಷಗಳಿಂದಲೂ ಪ್ರಸಿದ್ಧಿಯಾಗಿದೆ. ಈ ಉದ್ಯಮಕ್ಕೆ, ಟಿಪ್ಪುಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಉತ್ತೇಜನ ಸಿಕ್ಕಿ ಮೈಸೂರು, ಕೋಲಾರ, ಬೆಂಗಳೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ರೇಷ್ಮೆ ಕೃಷಿ ವ್ಯವಸಾಯ ನೆಲೆಯೂರಿತು. ಶತಮಾನಗಳಿಂದಲೂ ಅಭಿವೃದ್ಧಿ ಹೊಂದುತ್ತಾ ಬಂದು ಕರ್ನಾಟಕದ ಒಂದು ಹೆಮ್ಮೆಯ ಉದ್ಯಮವಾಗಿ ರಾಷ್ಟ್ರದಲ್ಲೇ ರೇಷ್ಮೆ ಉತ್ಪಾದನೆಯಲ್ಲಿ ಪ್ರಪ್ರಥಮ ಸ್ಥಾನ ಪಡೆದು ಜಾಗತಿಕವಾಗಿ ಭಾರತ ದೇಶವು ಈ ಉದ್ಯಮದಲ್ಲಿ ಎರಡನೆ ಸ್ಥಾನ ಗಳಿಸಲು ಸಹಾಯಕವಾಗಿದೆ. ಕರ್ನಾಟಕ ಸರ್ಕಾರವು ಸ್ವಾತಂತ್ರ್ಯದ ನಂತರ ಈ ಉದ್ದಿಮೆಯ ಪ್ರಗತಿಯತ್ತ ಸಾಗಲು ಒತ್ತು ನೀಡಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಹೆಚ್ಚಿನ ರೀತಿಯ ಬೆಳವಣಿಗೆಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡಿರುತ್ತದೆ. ರೇಷ್ಮೆ ಉದ್ಯಮ ಈ ರಾಜ್ಯದ ಒಂದು ಬೆನ್ನೆಲುಬಾಗಿ ಲಕ್ಷಾಂತರ ಕುಟುಂಬಗಳಿಗೆ ಉದ್ಯೋಗ ಒದಗಿಸಿ ಕೊಟ್ಟಿರುತ್ತದೆ. ಅಂಕಿ ಅಂಶಗಳ ಪ್ರಕಾರ ರೇಷ್ಮೆ ಕೃಷಿ ಚಟುವಟಿಕೆಯಲ್ಲಿ ಸುಮಾರು ಎರಡುವರೆ ಲಕ್ಷ ಕುಟುಂಬಗಳು ಅವಲಂಬಿತವಾಗಿರುತ್ತವೆ. ಇದಲ್ಲದೆ ರೇಷ್ಮೆ ಕೃಷಿಕರು ಇತರೇ ಚಟುವಟಿಕೆಗಳಲ್ಲಿ ಅಂದರೆ ಮೊಟ್ಟೆ ತಯಾರು ಮಾಡುವಿಕೆ, ನೂಲು ಬಿಚ್ಚುವಿಕೆ, ನೂಲು ಹುರಿ ಮಾಡುವುದು, ನೇಯ್ಗೆ ಬಣ್ಣ ಹಾಕುವುದು ಹಾಗೂ ಇತರೇ ಸಂಬಂಧಪಟ್ಟ ಕಸುಬುಗಳಲ್ಲಿ ೨೦ ಲಕ್ಷಕ್ಕೂ ಮೇಲ್ಪಟ್ಟು ಜನರು ಅವಲಂಬಿತರಾಗಿರುತ್ತಾರೆ. ಸಾಂಸ್ಥಿಕವಾಗಿ ಈ ರಾಜ್ಯದಲ್ಲಿ ನಮ್ಮ ಸಂಸ್ಥೆಯನ್ನು ಬಿಟ್ಟು ಕೇಂದ್ರ ರೇಷ್ಮೆ ಮಂಡಳಿ, ಕರ್ನಾಟಕ ರಾಜ್ಯ ರೇಷ್ಮೆ ಸಂಸ್ಥೆ (ಕೆ. ಎಸ್. ಐ. ಸಿ) ಕರ್ನಾಟಕ ರಾಜ್ಯ ಕೈ ಮಗ್ಗಗಳ ಉದ್ಯಮ ಸಂಸ್ಥೆ (ಕೆ ಹೆಚ್.ಡಿ.ಸಿ) ಇವುಗಳು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿ ಈ ಉದ್ಯಮಕ್ಕೆ ನೆರವಾಗಲು ಸಹಾಯಕವಾಗುತ್ತಿವೆ.

ಅಂಕಿ ಅಂಶಗಳು

ಅಖಿಲ ಭಾರತದಲ್ಲಿ			
೧. ರೇಷ್ಮೆ ವ್ಯವಸಾಯದ ಪ್ರದೇಶ ಭಾರತದಲ್ಲಿ	೧೯೮೭-೮೮ರಲ್ಲಿನ ಗಣತಿಯಂತೆ		೫೨,೦೦೦ ಹಳ್ಳಿಗಳು
೨. ರೇಷ್ಮೆ ಉದ್ಯಮವನ್ನು ಅಳವಡಿಸಿಕೊಂಡಿರುವ ರೈತರ ಸಂಖ್ಯೆ	೧೯೮೭-೮೮ರಲ್ಲಿನ ಗಣತಿಯಂತೆ		೫೭.೬೫ ಲಕ್ಷಗಳು
ಕರ್ನಾಟಕ ರಾಜ್ಯದಲ್ಲಿ	**೧೯೭೬-೭೭**	**೧೯೮೬-೮೭**	**೧೯೯೬-೯೭**
೩. ರೇಷ್ಮೆ ಗೂಡಿನ ಉತ್ಪಾದನೆ (ಟನ್ನುಗಳಲ್ಲಿ)	೨೫,೦೦೦	೩೯,೫೪೮	೪೯,೧೯೪
೪. ರೇಷ್ಮೆ ನೂಲಿನ ಉತ್ಪಾದನೆ (ಟನ್ನುಗಳಲ್ಲಿ)	೨,೧೨೬	೪,೬೭೧	೮,೦೦೦
೫. ರೇಷ್ಮೆ ಗೂಡಿನ ಬೆಲೆ (ಕೆ. ಜಿ. ಒಂದಕ್ಕೆ)	೩೧೫	೫೪೦	೧,೨೨೦
೬. ರೇಷ್ಮೆ ನೂಲಿನ ಬೆಲೆ	೩೧೫	೫೪೦	೧,೨೨೦

ಅಸ್ತಿತ್ವಕ್ಕೆ ಬರುವ ಮುನ್ನ

ಯಾವುದೇ ಕೃಷಿ ಚಟುವಟಿಕೆಯಲ್ಲಿ ಕೃಷಿಕರು ಬೆಳೆದ ಉತ್ಪಾದನೆಯನ್ನೆ ನ್ಯಾಯ ಸಮ್ಮತವಾದ ಬೆಲೆಯಲ್ಲಿ ಮಾರಾಟವಾಗುವ ವ್ಯವಸ್ಥೆ ಇಲ್ಲದ ಪಕ್ಷದಲ್ಲಿ ಆ ಉತ್ಪಾದನೆಗೆ ಬೆಲೆ ಸಿಗದೆ ನಷ್ಟ ಮತ್ತು ಬವಣೆಪಡುವಂತಾಗುತ್ತದೆ. ರೇಷ್ಮೆ ಉದ್ಯಮದಲ್ಲೂ ರೇಷ್ಮೆ ಕೃಷಿಕರು ಹಾಗೂ ನೂಲು ಬಿಚ್ಚುವವರು ವರ್ತಕರ ಶೋಷಣೆಗೆ ಹಲವು ಶತಮಾನಗಳಿಂದಲೂ ಗುರಿಯಾಗಿದ್ದರು. ಈ ಉದ್ಯಮದ ಮಹತ್ವ ಅರಿತು ಇದರಿಂದ ಪ್ರತ್ಯೇಕ ಮತ್ತು ಪರೋಕ್ಷವಾಗಿ ಅವಲಂಬಿತವಾಗಿರುವ ಜನರ ಹಿತದೃಷ್ಟಿಯನ್ನುಗಣನೆಗೆ ತೆಗೆದುಕೊಂಡು ಕರ್ನಾಟಕ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಸ್ವಾತಂತ್ರ್ಯದ ನಂತರ ಹಾಕಿಕೊಂಡಿತ್ತು ಆದರೂ ರೇಷ್ಮೆ ನೂಲಿನ ವ್ಯಾಪಾರ ಕೆಲವೇ ವರ್ತಕರ (ಕೋಠಿಗಳು) ಹಿಡಿತದಲ್ಲಿ ಇದ್ದು ರೇಷ್ಮೆ ನೂಲು ಬಿಚ್ಚುವವರು ಅವರ ಶೋಷಣೆಗೆ ಒಳಗಾಗಿದ್ದರು. ವರ್ತಕರಿಂದ ನೂಲು ಬಿಚ್ಚುವವರಿಗೆ ಸರಿಯಾದ ರೀತಿಯಲ್ಲಿ ಬೆಲೆ ನಿಷ್ಕರ್ಷ, ಹಣ ಪಾವತಿ, ತೂಕ ಇರುತ್ತಿರಲಿಲ್ಲ. ಎರಡನೆಯದಾಗಿ ನೂಲು ಬಿಚ್ಚುವವರು ತಮ್ಮ ಸರಕನ್ನು ಬೆಂಗಳೂರಿನಲ್ಲಿಯೇ ವರ್ತಕನ ಬಾಗಿಲಿಗೆ ಬಂದು ಸಾಲದಲ್ಲಿ ಮಾರಾಟ ಮಾಡುವ ವ್ಯವಸ್ಥೆ ಇತ್ತು. ಸರ್ಕಾರವು ವರ್ತಕರ ಹಿಡಿತದಿಂದ ನೂಲು ಬಿಚ್ಚುವವರ ಶೋಷಣೆಯನ್ನು ತಪ್ಪಿಸುವ ಸಲುವಾಗಿ ರೇಷ್ಮೆ ಉದ್ಯಮದ ಕಾನೂನನ್ನು ತಿದ್ದುಪಡಿ ಮಾಡಿ ೧೯೭೯ರಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಿತು. ಕಾನೂನಿನ ಪ್ರಕಾರ ರೇಷ್ಮೆ ತಯಾರು ಮಾಡುವವರು ತಮ್ಮ ಉತ್ಪಾದನೆಯನ್ನು ಮೊದಲ ಹಂತದಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿಯೇ (ರೇಗ್ಯುಲೇಟೆಡ್ ಮಾರ್ಕೆಟ್ಸ್) ಮಾರಾಟ ಮಾಡಬೇಕೆಂದು ಹಾಗೂ ಕೊಳ್ಳುವವರು ಅಂದರೆ

> ಕರ್ನಾಟಕ ರೇಷ್ಮೆ ಉದ್ಯಮ ಮತ್ತು ರೇಷ್ಮೆ ಕೃಷಿಯಲ್ಲಿ ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿಯ ಪಾತ್ರಬಹಳ ಮಹತ್ವದ್ದಾಗಿದೆ. ಇದರ ಬಗ್ಗೆ ಈ ಇಲಾಖೆಯಲ್ಲಿಯೇ ಮಾರುಕಟ್ಟೆಯ (ಖರೀದಿ) ವ್ಯವಸ್ಥಾಪಕರಾದ **ಎಂ. ಆರ್. ರಾಜುರವರು** ತಿಳಿಸಿದ್ದಾರೆ.
>
> ಎಂ. ಬಿ. ಎ. ಪದವೀಧರರಾದ ರಾಜುರವರು ೨೦ ವರ್ಷದಿಂದಲೂ ಈ ಇಲಾಖೆಯಲ್ಲೇ ಕಾರ್ಯ ನಿರ್ವಹಿಸುತ್ತಿದ್ದಾರೆ.

ನೇಕಾರರಾಗಿರಬಹುದು, ಹುರಿಕಾರರಾಗಿರ ಬಹುದು, ವರ್ತಕರಾಗಿರಬಹುದು. ರೇಷ್ಮೆ ವಿನಿಮಯ ಕೇಂದ್ರದಲ್ಲಿಯೇ ಬಂದು ಬಹಿರಂಗ ಹರಾಜಿನ ಮೂಲಕ ದರಗಳನ್ನು ಕೂಗಿ ಆ ರೇಷ್ಮೆಗೆ ನಗದು ಹಣ ಪಾವತಿ ಮಾಡಿ ರೇಷ್ಮೆ ಕೊಳ್ಳುವಂತೆ ಕಾನೂನು ಮಾಡಲಾಯಿತು.

ಇದು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಸ್ತಿತ್ವಕ್ಕೆ ಬರಲು ಬಹು ಮುಖ್ಯವಾದಂತಹ ಕಾರಣ.

ಮಂಡಳಿಯ ಉದ್ದೇಶ:

ಸರ್ಕಾರ ಕಾನೂನು ಮಾಡುವಾಗ ಮಾರಾಟ ನಿಯಂತ್ರಣಗೊಳಿಸದಿದ್ದಲ್ಲಿ ರೇಷ್ಮೆ ಉತ್ಪಾದನೆ ಮಾಡುವ ನೂಲು ಬಿಚ್ಚುವವರು ರೇಷ್ಮೆ ವಿನಿಮಯ ಕೇಂದ್ರಗಳಿಗೆ ಬಂದಾಗ ರೇಷ್ಮೆಯನ್ನು ಯಾರು ಕೊಳ್ಳದೇ ಇದ್ದ ಪಕ್ಷದ ಹಾಗೂ ಬಹಿರಂಗ ಹರಾಜಿನಲ್ಲಿ ವರ್ತಕರು ಗುಂಪುಗಾರಿಕೆಯಿಂದ ಬೆಲೆಗಳಲ್ಲಿ ವ್ಯತ್ಯಾಸ ಮಾಡಿದಾಗ ಇವುಗಳಿಂದ ಆಗುವ ದುಷ್ಪರಿಣಾಮಗಳನ್ನು ತಡೆಯುವ ಸಲುವಾಗಿ ಹಾಗೂ ಉದ್ಯಮದ ಸ್ಥಿರತೆಯನ್ನು ಕಾಪಾಡಿ ರೇಷ್ಮೆ ಕೃಷಿಕರಿಗೆ ಬೆಂಬಲಿಗರಾಗಿ ನಿಲ್ಲುವ ಸಲುವಾಗಿ ಸರ್ಕಾರಿ ಸಂಸ್ಥೆಯಾದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯನ್ನು ರೇಷ್ಮೆ ವಿನಿಮಯ ಕೇಂದ್ರಗಳ ಜೊತೆಯಲ್ಲಿ ಸ್ಥಾಪಿಸಲಾಯಿತು. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಈ ಗುರುತರವಾದ ಹೊಣೆಯನ್ನು ವ್ಯವಸ್ಥಿತವಾದ ರೀತಿಯಲ್ಲಿ ನಿರ್ವಹಿಸಲು ಅದಕ್ಕೆ ಬೇಕಾಗುವ ಬಂಡವಾಳ ಹಾಗೂ ಇನ್ನಿತರ ಸೌಲಭ್ಯಗಳನ್ನು ಸರ್ಕಾರವು ಒದಗಿಸಿ ೧೯೭೯ನೇ ಡಿಸೆಂಬರ್ ತಿಂಗಳಿನಿಂದ ಮಂಡಳಿಯನ್ನು ಸ್ಥಾಪಿಸಿತು. ಪ್ರಾರಂಭದಿಂದಲೂ ಈ ಮಂಡಳಿಯು ತನಗೆ ಕೊಟ್ಟಿರುವ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ಹಲವಾರು ತೊಂದರೆ, ಅಡಚಣೆ ಹಾಗೂ ವೈಪರೀತ್ಯಗಳಿದ್ದಾಗ್ಯೂ ಅವುಗಳನ್ನು ಎದುರಿಸಿ ರೇಷ್ಮೆ ಉದ್ಯಮದ ಹಿತದೃಷ್ಟಿಯಿಂದ ತನ್ನ ಕಾರ್ಯಚಟುವಟಿಕೆಯನ್ನು ನಡೆಸಿಕೊಂಡು ಬಂದಿರುತ್ತದೆ.

ಮಾರಾಟ ಮಂಡಳಿಯ ಕರ್ತವ್ಯ

ಕಾನೂನಿನ ಪ್ರಕಾರ ರಾಜ್ಯದಲ್ಲಿ ತಯಾರಾಗುವ ೮ ರಿಂದ ೯ ಸಾವಿರ ಮೆಟ್ರಿಕ್ ಟನ್ ರೇಷ್ಮೆಯು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿಯೇ ವಹಿವಾಟಾಗಬೇಕೆಂದು ಕಾನೂನು ಇರುತ್ತದೆ. ರೇಷ್ಮೆ ಮಾರಾಟ ಮಂಡಳಿಯು ಒಬ್ಬ ಪೋಷಕನಂತೆ ಹಾಗೂ ಕ್ಲಿಷ್ಟ ಪರಿಸ್ಥಿತಿಯಲ್ಲಿ ಒಬ್ಬ ಸೈನಿಕನಂತೆ ವರ್ತಿಸಿ ಉತ್ಪಾದಕರಿಗೆ ನಷ್ಟವಾಗದಂತೆ ಹಾಗೂ ಬೆಲೆಯಲ್ಲಿ ಅತ್ಯಂತ ಏರಿಳಿತ ಆಗದಂತೆ ನೋಡಿಕೊಳ್ಳುವುದೇ ಮುಖ್ಯ ಕರ್ತವ್ಯ. ಆದುದರಿಂದ ಅದು ಇಂತಿಷ್ಟೆ ರೇಷ್ಮೆ ಪ್ರಮಾಣ ಖರೀದಿಸಬೇಕೆಂದು ಕಾನೂನು ಇರುವುದಿಲ್ಲ. ಸ್ಥಾಪಿಸಿದ ಉದ್ದೇಶ ನೆರವೇರಿದ್ದಲ್ಲಿ ಉದ್ಯಮಕ್ಕೆ ಇದರಿಂದ ಫಲಕಾರಿಯಾಗಿರುತ್ತದೆ. ಆದರೂ ಸ್ವಾಭಾವಿಕವಾಗಿ ವರ್ತಕರು ಈ ಉದ್ಯಮವನ್ನು ತಮ್ಮ ಹಿಡಿತದಲ್ಲಿಯೇ ಉಳಿಸಿಕೊಳ್ಳಲು ಹಲವಾರು ತಂತ್ರಗಳನ್ನು ಈ ಸಂಸ್ಥೆಯು ಪ್ರಾರಂಭದಲಾಗಾಯ್ತು ಮಾಡುತ್ತಲೇ ಬಂದಿರುತ್ತಾರೆ. ಆದರೂ ಅದನ್ನೆಲ್ಲವನ್ನು ಈ ಸಂಸ್ಥೆಯು ಯಶಸ್ವಿಯಾಗಿ ನಿಭಾಯಿಸಿರುತ್ತದೆ. ಇದಲ್ಲದೆ ಉದ್ಯಮದಲ್ಲಿ ಬಂದಂತಹ ಹಲವಾರು ತೊಡಕುಗಳು, ಅವುಗಳಲ್ಲಿ ಮುಖ್ಯವಾಗಿ ೧೯೮೧-೮೨ರಲ್ಲಿ ಹೂಜಿ ನೊಣದ ಹಾವಳಿಯಲ್ಲಿ ಮಂಡಳಿಯ ಪಾತ್ರ, ವರ್ತಕರುಗಳು ೧೯೯೦-೯೧ ರಲ್ಲಿ ರೇಷ್ಮೆ ಖರೀದಿ ಮಾಡಲು ಮುಷ್ಕರ ಹೂಡಿದಾಗ ಮಂಡಳಿ ನಿರ್ವಹಿಸಿದ ಪಾತ್ರ, ಗಂಟು ರೋಗದ ಹಾವಳಿಯಿಂದಾಗಿ ಇಡೀ ರೇಷ್ಮೆ ಉದ್ಯಮವೇ ಕರ್ನಾಟಕದಿಂದ ನಿರ್ನಾಮವಾಗುವ ಪರಿಸ್ಥಿತಿಯನ್ನು ಮನಗಂಡು ರೈತರ ಸಹಾಯಕ್ಕೆ ನೆರವಾಗಿ ಬೆಂಗಾವಲಿಗರಾಗಿ ನಿಂತು ಮತ್ತು ಆದರಿಂದ ರೈತರು ಮತ್ತು ನೂಲು ಬಿಚ್ಚುವವರು ಪಡಬೇಕಾದಂತಹ ನಷ್ಟವನ್ನು ತಾನೂ ಅನುಭವಿಸಿ ಉದ್ಯಮವನ್ನು ೧೯೯೧-೯೨ರಲ್ಲಿ ರಕ್ಷಿಸಲಾದ, ಇವುಗಳಲ್ಲಿ ಸಂಸ್ಥೆಯ ಪಾತ್ರ ಬಹು ಮುಖ್ಯವಾಗಿರುತ್ತದೆ. ನಷ್ಟ ಅನುಭವಿಸಿದ್ದಾಗ್ಯೂ, ಅದನ್ನು ಮುಂದಿನ ವರ್ಷಗಳಲ್ಲೇ ಬರಿಸಿಕೊಂಡು ಸಂಸ್ಥೆಯು ಕಳೆದ ನಾಲ್ಕು ವರ್ಷಗಳಿಂದಲೂ ಪುನಃ ಲಾಭದಲ್ಲಿಯೆ ವಹಿವಾಟು ನಡೆಸಿಕೊಂಡು ಬಂದಿರುತ್ತದೆ. ಸರ್ಕಾರವು ನೀಡಿರುವ ಬಂಡವಾಳವನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಂಡು, ಸರ್ಕಾರದಿಂದ ಯಾವುದೇ ರೀತಿಯ ಅನುದಾನ (Grant) ವಾಗಲೀ ಸಹಾಯಧನ (subsidy) ವಾಗಲೀ ನೆರವನ್ನು ಬಯಸದೇ ಹಾಗೂ ತನ್ನ ಸಿಬ್ಬಂದಿಗೆ ಸಂಬಳ ಮತ್ತು ಇತರೇ ಸವಲತ್ತುಗಳನ್ನು ಹಾಗೂ ಕಂಪನಿಯ ಖರ್ಚುಗಳನ್ನು ತನ್ನ ವಹಿವಾಟಿನಿಂದಲೇ ಸಂಪಾದಿಸಿ ಸಂಸ್ಥೆಯು ಸ್ವಾವಲಂಬಿಯಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ ಹಾಗೂ ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಉದ್ಯಮ ಬೆಳೆಯಲು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತದೆ.



ಬೆಡಗಿನ ರೇಷ್ಮೆ ಉಡುಗೆಗಳು

ಸುಮಾರು ಎಪ್ಪತ್ತರ ದಶಕದಲ್ಲಿ ಕಾಲೇಜಿಗೆ ಹೋಗುವ ಹುಡುಗಿಯರು ಸೀರೆಯನ್ನೇ ಉಟ್ಟು ಕೊಳ್ಳುತ್ತಿದ್ದರು. ಸ್ವಲ್ಪ ಆಧುನಿಕ ಹುಡುಗಿಯರು ಲಂಗದಾವಣಿಯನ್ನು ಧರಿಸುತ್ತಿದ್ದರು. ಬರು ಬರುತ್ತಾ ನಗರವಲಯದ ಕಾಲೇಜುಗಳಲ್ಲಿ ಈ ಎರಡೂ ಉಡುಪುಗಳು ಕಾಣದಂತಾದವು. ಈಗಿನ ಕಾಲೇಜು ಕನ್ಯೆಯರಲ್ಲಿ ದಿನ ನಿತ್ಯ ಟಿಶರ್ಟ್, ಜೀನ್ಸ್, ಮಿಡೀ, ಚೂಡಿದಾರ್‌ನಂತಹ ಉಡುಪು ಗಳು ಇದ್ದಕ್ಕಿದ್ದ ಹಾಗೆ ಬೆಳಕಿಗೆ ಬಂದವು. ಸೀರೆ ಮತ್ತು ಲಂಗದಾವಣಿಯಂತೂ ಯಾರೂ ಕೇಳುವವರೇ ಇಲ್ಲವಾದರು.

ಆದರೆ ಕಾಲೇಜಿನಲ್ಲಿ ವಾರ್ಷಿಕೋತ್ಸವ ಅಥವಾ ಇನ್ನಾವುದೇ ಸಮಾರಂಭದ ದಿನವಂತೂ ಎಲ್ಲಿ ನೋಡಿದರೂ ಸೀರೆ ಉಟ್ಟು ಗೌರಮ್ಮನಂತೆ ಕಾಣುವ ತರುಣಿಯರೇ ಕಾಣುತ್ತಾರೆ. ಅದರಲ್ಲೂ ಎಲ್ಲರೂ ರೇಷ್ಮೆ ಸೀರೆಯನ್ನೇ ಉಟ್ಟಿರುತ್ತಾರೆ. ಮಾಮೂಲಿ ದಿನಗಳಲ್ಲಿ ಸೀರೆಯನ್ನೇ ಇಷ್ಟಪಡದ ಹೆಣ್ಣುಮಕ್ಕಳು ಆ ದಿನದಂದು ರೇಷ್ಮೆ ಸೀರೆಯನ್ನೇ ಹೆಚ್ಚು ಇಷ್ಟ ಪಡುತ್ತಾರೆ.

ರೇಷ್ಮೆ ಸೀರೆಯನ್ನು ಇಷ್ಟಪಡದ ಹುಡುಗಿ ಯರೇ ಇಲ್ಲವೆನ್ನಬಹುದು. ರೇಷ್ಮೆ ಸೀರೆಗೂ ಮಹಿಳೆಯರಿಗೂ ಎಲ್ಲಿಲ್ಲದ ಭಾವನಾತ್ಮಕ ಸಂಬಂಧ.

ಇತ್ತೀಚಿನ ದಿನಗಳಲ್ಲಿ ಕೆಲವು ಕಾಲೇಜುಗಳಲ್ಲಿ 'ಎಥ್ನಿಕ್‌ಡೇ' ಎಂದು ಆಚರಿಸುತ್ತಾರೆ. ಆ ದಿನದಂದು ಹುಡುಗರು ರೇಷ್ಮೆ ಜುಬ್ಬಾ, ರೇಷ್ಮೆ ಪಂಚೆಗಳನ್ನು ಧರಿಸುತ್ತಾರೆ. ಹುಡುಗಿಯರು ರೇಷ್ಮೆ ಸೀರೆಯನ್ನು ಧರಿಸುತ್ತಾರೆ.

ಪ್ರತಿದಿನ ಜೀನ್ಸ್, ಟಿಶರ್ಟ್, ಮಿಡೀ, ಚೂಡೀದಾರ್‌ನಿಂದ ಕಂಗೊಳಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು 'ಎಥ್ನಿಕ್‌ಡೇ' ನೋಡಿದ ವರಿಗೆ ಎಲ್ಲಿಲ್ಲದ ಆಶ್ಚರ್ಯವಾಗುತ್ತದೆ.

ಅಂದು ನೀವು ಕಾಲೇಜಿಗೆ ಭೇಟಿ ನೀಡಿದರೆ ಯಾವುದೋ ಒಂದು ದೊಡ್ಡ ಮದುವೆ ಮನೆ ಯನ್ನು ನೋಡಿದ ಅನುಭವವಾಗುತ್ತದೆ. ಅಂದು ಹುಡುಗರ ಕಣ್ಣಿಗಂತೂ ಎಲ್ಲಿಲ್ಲದ ಹಬ್ಬ.

ಎಂಟು ವರ್ಷದ ಪುಟ್ಟ ಹುಡುಗಿಯಿಂದ ಹೆಂಗಸರವರೆಗೆ ರೇಷ್ಮೆಸೀರೆ ಎಂದರೆ ಎಲ್ಲಿಲ್ಲದ ಆಸೆ ಮತ್ತು ಉತ್ಸಾಹ. ಎಲ್ಲಾ ಹೆಣ್ಣು ಮಕ್ಕಳ ತಾಯಂದಿರುಗಳಿಗೂ ತಮ್ಮ ಪುಟ್ಟ ಹೆಣ್ಣುಮಗು ನಡೆಯುವಂತಾದಾಗ ತಕ್ಷಣ ರೇಷ್ಮೆ ಲಂಗವನ್ನು ತೊಡಿಸಬೇಕೆಂಬ ಆಸೆ ಇರುತ್ತದೆ. ಒಟ್ಟಾರೆ ರೇಷ್ಮೆ ಬಟ್ಟೆಗೂ ಹೆಂಗಸರಿಗೂ ಒಂದು ರೀತಿಯ ಭಾವನಾತ್ಮಕ ಸಂಬಂಧವಿರುತ್ತದೆ.

ಇನ್ನು ಮದುವೆ ಮತ್ತು ರೇಷ್ಮೆಯಂತೂ ಒಂದನ್ನೊಂದು ಬಿಟ್ಟಿರಲಾರವು. ಭಾರತದ ಯಾವುದೇ ಭಾಗದಲ್ಲೂ ರೇಷ್ಮೆ ಸೀರೆ ಮತ್ತು ರೇಷ್ಮೆ ಶಲ್ಯ ಇಲ್ಲದೆ ಮದುವೆಯಾಗುವುದೇ ಇಲ್ಲ. ಎಂಥ ಬಡವರಾದರೂ ಈಗಿನ ಕಾಲದಲ್ಲಿ ಕಡಿಮೆ ಎಂದರೆ ಒಂದು ಸಾವಿರ ರೂಪಾಯಿ ಬೆಲೆಯ ಸೀರೆಯನ್ನಾದರೂ ಮದುಮಗಳು ಉಟ್ಟು ಕೊಳ್ಳಲೇ ಬೇಕು. ಅಪ್ಪಿ ತಪ್ಪಿ ಹೆಣ್ಣುಮಕ್ಕಳು ಮದುವೆ ಅಥವಾ ಸಮಾರಂಭಗಳಲ್ಲಿ ರೇಷ್ಮೆ ಸೀರೆ ಉಟ್ಟುಕೊಳ್ಳದಿದ್ದರೆ, ಆ ಸಮಾರಂಭವೇ ಅಪೂರ್ಣಗೊಂಡಂತೆ.


ಶ್ರೀಮಂತ ಮನೆಯವರ ಮದುವೆ ಎಂದರೆ ಕನಿಷ್ಠ ಪಕ್ಷ ರೂಪಾಯಿ ಹತ್ತು ಸಾವಿರದಿಂದ ಹಿಡಿದು ಎಪ್ಪತ್ತು ಸಾವಿರದವರೆಗಿನ ಬೆಲೆಯ ಸೀರೆಯನ್ನು ಮಧುಮಗಳಿಗೆ ಉಡುಗೊರೆ ಕೊಡುತ್ತಾರೆ. ಆದರೆ ಈ ಮದುವೆ ಸೀರೆಯನ್ನು ಹೆಣ್ಣುಮಕ್ಕಳು ಜೀವನದಲ್ಲಿ ಹೆಚ್ಚೆಂದರೆ ಸುಮಾರು ೧೦ರಿಂದ ೧೫ ಬಾರಿ ಧರಿಸಬಹುದು.

ಹಿಂದಿನಿಂದಲೂ ರೇಷ್ಮೆ ಬಟ್ಟೆ ಎಂದರೆ ಪವಿತ್ರ ಬಟ್ಟೆ ಎಂದು ಹೆಸರು ಮಾಡಿ ಬಿಟ್ಟಿದೆ. ಹಿಂದೆ ರಾಜರುಗಳು ದಾನ ಕೊಡುವಾಗ ರೇಷ್ಮೆ ಬಟ್ಟೆಯನ್ನೇ ದಾನವಾಗಿ ಕೊಡುತ್ತಿದ್ದರು. ಈಗಲೂ ಕೆಲವು ಶ್ರೀಮಂತರು ವರ್ಷಕ್ಕೊಂದು ಬಾರಿ ಬ್ರಾಹ್ಮಣರಿಗೆ ರೇಷ್ಮೆ ಬಟ್ಟೆಯನ್ನು ದಾನವಾಗಿ ಕೊಡುತ್ತಾರೆ. ರೇಷ್ಮೆ ಬಟ್ಟೆಯನ್ನು ದಾನ ಕೊಟ್ಟರೆ ತಮ್ಮ ಪಾಪ ಪರಿಹಾರವಾದಂತೆ ಎಂದು ಭಾವಿಸುತ್ತಾರೆ.

ಅಕ್ಬರನ ಕಾಲದಲ್ಲಿ ಭಾರತದ ರೇಷ್ಮೆ ಬಟ್ಟೆಗೆ ವಿದೇಶಿ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯಿತ್ತು ಎಂದು ನಾವು ಇತಿಹಾಸದಲ್ಲಿ ನೋಡಬಹು ದಾಗಿದೆ. ಆಗ ಹತ್ತು ಮೀಟರ್‌ನಷ್ಟು ರೇಷ್ಮೆ ಬಟ್ಟೆಯನ್ನು ಒಂದು ಬೆಂಕಿಪೊಟ್ಟಣದಲ್ಲಿ ಇಡಬಹುದಾಗಿತ್ತು ಎಂದರೆ ಎಂತಹವರಿಗೂ ಆಶ್ಚರ್ಯವಾಗುತ್ತದೆ.

ಇಂತಹ ಹಲವಾರು ವಿಶೇಷ ಸ್ಥಾನ ಪಡೆದ ರೇಷ್ಮೆಬಟ್ಟೆ, ಆ ಆಧುನಿಕ ಕಾಲದಲ್ಲಿ ಹಲವಾರು ರೀತಿಯ ಬಟ್ಟೆಗಳು ಬಂದರೂ ತನ್ನದೇ ಆದ ವಿಶೇಷ ಸ್ಥಾನ ಉಳಿಸಿಕೊಂಡು ಬಂದಿರುವುದೇ ಆಶ್ಚರ್ಯ.

●



ಅತಿ ಬೇಡಿಕೆಯ ಮೈಸೂರು ರೇಷ್ಮೆ ಸೀರೆಗಳು

ಮೈಸೂರು ಎಂದ ಕೂಡಲೇ ಘಮ ಘಮಿಸುವ ಮಲ್ಲಿಗೆ, ಘಮ ಘಮಿಸುವ ಶ್ರೀಗಂಧ, ವಿದ್ಯುತ್ ದೀಪಗಳಲ್ಲಿ ಜಗಜಗಿಸುವ ಅರಮನೆ ಹೀಗೆ...... ಈ ಊರನ್ನು ಪ್ರತಿನಿಧಿಸುವ ವಸ್ತುಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇಂತಹ ರೂಪಕಗಳನ್ನು ತನ್ನೊಳಗೆ ಹುದುಗಿಸಿ ಕೊಂಡಿರುವ ಈ ಊರು ಸುಂದರ ಹೆಣ್ಣನ್ನು ಪ್ರತಿಬಿಂಬಿಸುತ್ತದೆ. ಆ ಸುಂದರ ಹೆಣ್ಣಿಗೆ ನವಿರಾದ ಮೈಸೂರು ರೇಷ್ಮೆಯಿಂದ ನೇಯ್ದ ನವಿರಾದ ಸೀರೆಯನ್ನು ಉಡಿಸಿದರೆ ಹೇಗೆ ಕಂಡಾಳು ಎಂಬುದನ್ನು ನೀವೇ ಕಲ್ಪಿಸಿಕೊಳ್ಳಿ.

ಹೌದು ಮೈಸೂರು ರೇಷ್ಮೆ ಸೀರೆಯೇ ಹೀಗೆ, ಕಂಚಿ, ಕಾಳಹಸ್ತಿ ಕಾಮಾಕ್ಷಿ, ಆ ಊರು ಈ ಊರು ಎಂದು ಇನ್ನಾವುದ್ಯೋ ಊರಿನ ಜಗ ಜಗಿಸುವ ಸೀರೆಗಳು ಬಂದು ಬಿದ್ದರೂ ಇವೆಲ್ಲಕ್ಕೂ ಭಿನ್ನವಾದ ಮೈಸೂರು ರೇಷ್ಮೆ ಸೀರೆಗೆ ಸ್ತ್ರೀ ಸಮೂಹದಿಂದ ಎಲ್ಲಿಲ್ಲದ ಬೇಡಿಕೆ ಬಂದಿದೆ. ಮೈಸೂರು ಸಿಲ್ಕ್ ಸೀರೆ ಇಡೀ ಭಾರತ ಜನತೆಗೇ ದೊಡ್ಡ ಉಡುಗೊರೆ ಎಂದರೆ ತಪ್ಪಾಗಲಾರದು.

೧೯೩೨ರಲ್ಲಿ ವಿಶ್ವಬ್ಯಾಂಕ್‌ನ ಯೋಜನೆ ಯಡಿಯಲ್ಲಿ ಪ್ರಾರಂಭವಾದ ಮೈಸೂರು ಸಿಲ್ಕ್ ಕಾರ್ಖಾನೆಯನ್ನು ೧೯೮೦ರಲ್ಲಿ ಜಪಾನಿನ ತಂತ್ರಜ್ಞಾನದಿಂದ ಆಧುನೀಕರಣಗೊಳಿಸ ಲಾಯಿತು.

ಕೆ. ಎಸ್. ಐ. ಸಿ.ಇಡೀ ಭಾರತದಲ್ಲಿಯೇ ಶೇ.೧೦೦%ರಷ್ಟು ಉತ್ತಮ ಮತ್ತು ನೈಸರ್ಗಿಕವಾದ ರೇಷ್ಮೆ ತಯಾರಕರೆಂದು ಹೆಸರು ಪಡೆದಿದೆ. ಕೆ. ಎಸ್. ಐ. ಸಿ.ಬರೀ ರೇಷ್ಮೆಯನ್ನಲ್ಲದೆ ಮೈಸೂರು ಕ್ರೇಪ್ ಸಿಲ್ಕ್ ಶಿಫಾನಿಸ್, ಸಿಲ್ಕ್ ಶರ್ಟ್ ಹಲವಾರು ವಿಧದ ಟೈ ಹಾಗೂ ಇತ್ತೀಚೆಗೆ ಸ್ವೆಟರ್ ಕಮೀಜ್‌ಗಳನ್ನು ಸಹ ತಯಾರಿಸುತ್ತಿದೆ.

ಭಾರತದಲ್ಲಿ ರೇಷ್ಮೆ ಸೀರೆ ತಯಾರಿಸುವ ಹಲವಾರು ಖಾಸಗಿ ಮತ್ತು ಇತರ ರಾಜ್ಯದ ಕಾರ್ಖಾನೆಗಳು ನೂರಾರು ತಲೆ ಎತ್ತಿದರೂ, ಕೆ. ಎಸ್. ಐ. ಸಿ.ತನ್ನದೇ ಆದ ಸ್ಥಾನವನ್ನು ಹೊಂದಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಜನತೆಗೆ ಉತ್ತಮವಾದ ರೇಷ್ಮೆ ಬಟ್ಟೆಯನ್ನು ಅವರಿಗೆ ಕೈಗೆಟಕುವ ಬೆಲೆಯಲ್ಲಿ ಕೊಡುವುದಾಗಿದೆ. ಅಂದಿನಿಂದ ಇಂದಿನವರೆಗೂ ಕೆ. ಎಸ್. ಐ. ಸಿ. ಜನತೆಯಲ್ಲಿ ನಂಬಿಕೆ ಉಳಿಸಿಕೊಂಡುಬಂದಿದೆ.

ಕೆ. ಎಸ್. ಐ. ಸಿ. ಟೀನರಸೀಪುರ, ಕನಕಪುರ, ಮೈಸೂರು ಮತ್ತು ಚನ್ನಪಟ್ಟಣದಲ್ಲಿ ತನ್ನ ತಯಾರಿಕಾ ಘಟಕಗಳನ್ನೊಳಗೊಂಡಿದೆ. ಇಡೀ ಘಟಕದಲ್ಲಿ ರೇಷ್ಮೆ ಬಟ್ಟೆ ತಯಾರಿಕೆಗೆ ಬೇಕಾದ ಎಲ್ಲ ಯಂತ್ರಗಳನ್ನೂ ಹೊಂದಿದೆ.

೧೦೦ಕ್ಕೂ ಹೆಚ್ಚು ಡಿಸೈನ್‌ಗಳಲ್ಲಿ ಕೆ. ಎಸ್. ಐ. ಸಿ. ಸೀರೆಗಳು ದೊರೆಯುತ್ತವೆ. ಹಾಗೆಯೇ ಇದು ಉತ್ತಮ ಝರಿ ಸೀರೆಗಳನ್ನು ಸಹ ತಯಾರಿ ಸುತ್ತವೆ.ಇತ್ತೀಚೆಗೆ ಕೆ. ಎಸ್. ಐ. ಸಿ. ರಾಯಲ್ ಕಲೆಕ್ಷನ್ಸ್ ಎಂದು ಹಲವು ವಿಧದ ಉತ್ತಮ ರೇಷ್ಮೆ ಉಡುಗೆಗಳನ್ನು ಸಹ ಬಿಡುಗಡೆ ಮಾಡಿದೆ.

ಬೇರೆ ರಾಜ್ಯದ ಹಾಗೂ ಖಾಸಗಿಯವರು ತಯಾರಿಸಿದ ರೇಷ್ಮೆ ಸೀರೆಗಳು ಕೇವಲ ಎರಡು ಮೂರು ವರ್ಷಗಳಲ್ಲಿ ಹೊಸ ಸೀರೆಗಿದ್ದ ಬಣ್ಣವನ್ನು ಕಳೆದುಕೊಂಡು ಬಿಡುತ್ತವೆ. ಆದರೆ ಕೆ. ಎಸ್. ಐ. ಸಿ. ಸೀರೆಗಳು ೧೦ ವರ್ಷಗಳಾದರೂ ಹೊಸ ಸೀರೆಯ ಕಳೆಯನ್ನೆ ಉಳಿಸಿಕೊಂಡಿರುತ್ತವೆ.

ಕೆ. ಎಸ್. ಐ. ಸಿ.ತಾನು ತಯಾರಿಸಿದ ಸೀರೆಗಳಿಗೆ ಮಾರುಕಟ್ಟೆ ಒದಗಿಸಲು ಉತ್ತಮವಾದ ಜಾಲವೊಂದಿದೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳನ್ನೊಳ ಗೊಂಡಂತೆ ೧೨ ಷೋರೂಂಗಳನ್ನು ಹೊಂದಿದೆ. ಹಾಗೆಯೇ ಕಾವೇರಿ ಎಂಪೋರಿಯಂ ಇರುವ ಕಡೆಗಳಲ್ಲೂ ಮೈಸೂರು ಸಿಲ್ಕ್ ಸೀರೆಗಳು ದೊರೆಯುತ್ತವೆ. ಮುಂಬೈನಲ್ಲಿ ಎಂ.ಎಸ್.ಐ. ಎಲ್. ನ ಮೂಲಕ ಮಾರುಕಟ್ಟೆ ಮಾಡುತ್ತಾರೆ. ಭಾರತಾದ್ಯಂತ ೩೩ ಕೆ. ಎಸ್. ಐ. ಸಿ.ಯ ಅಧೀಕೃತ ಡೀಲರ್‌ಗಳಿದ್ದಾರೆ. ಇಂಡಿಯನ್ ಏರ್‌ಲೈನ್ಸ್‌ನ ಗಗನ ಸಖಿಯರು ಮೈಸೂರು ಸಿಲ್ಕ್ ಸೀರೆಗಳನ್ನು ಧರಿಸುತ್ತಾರೆ.

ಒಟ್ಟಾರೆ ಗ್ರಾಹಕರಿಂದ ಒಳ್ಳೆಯ ಹೆಸರನ್ನು ಪಡೆದ ಮೈಸೂರು ಸಿಲ್ಕ್ ಸೀರೆಗಳು ಈಗ ಅಂತರರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿ ಗೊಳ್ಳುತ್ತಿವೆ.

ರೇಷ್ಮೆ ಸೀರೆಗಳನ್ನು ಉಪಯೋಗಿಸುವ ರೀತಿ

ಯಾವುದೇ ರೇಷ್ಮೆ ಸೀರೆಗಳನ್ನು ಅತ್ಯಂತ ನಾಜೂಕಾಗಿ ಉಪಯೋಗಿಸಬೇಕು. ಬೆವರಿನಿಂದ, ಬಿಸಿಲಿನಿಂದ, ಮಳೆಯಿಂದ, ಸೀರೆಗಳನ್ನು ದೂರವಿಡಿ. ಉಪಯೋಗಿಸಿ ಮಡಿಚಿಡುವಾಗ ಕ್ಲೀನಾಗಿ ತೀಡಿ ಮೇಲ್ಮುಖವನ್ನು ಒಳಗೆ ಮಾಡಿ ಮಡಿಚಿಡಿ. ಇದರಿಂದ ಜರಿಯ ಹೊಳಪು ಕೆಡುವುದಿಲ್ಲ. ರೇಷ್ಮೆ ಸೀರೆಗಳನ್ನು ನೀರಿನಲ್ಲಿ ತೊಳೆಯಕೂಡದು. ಕೇವಲ ಡ್ರೈಕ್ಲೀನ್ ಮಾತ್ರ. ನೆನಪಿರಲಿ ರೇಷ್ಮೆ ಸೀರೆಗಳು ಶೋಭೆಗಷ್ಟೆ.

– ಗೀತಾ ಶೇಖರ


ನಾವು ಎಲೆಕ್ಟ್ರಾನಿಕ್ಸ್ ಅನ್ನು ಒಂದು ಉತ್ತಮ
ಕಲೆಯನ್ನಾಗಿ ವಿಕಾಸಗೊಳಿಸಿದ್ದೇವೆ.
ಯೆಲ್ಲಾ, ವೈವಿಧ್ಯಮಯವಾದ ಸ್ಥಳೀಯ ಕಲಾ ಚಟುವಟಿಕೆಗಳನ್ನು ಕೈಗೆತ್ತಿಕೊಂಡು
ಭಾರತೀಯ ಕಲಾ ಪರಂಪರೆಯನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿದೆ.
ಉದ್ಯೋಗ ರಂಗದಲ್ಲಾಗಲೀ ಅಥವಾ ಇನ್ನಿತರ ಕ್ಷೇತ್ರಗಳಲ್ಲಾಗಲೀ ಭಾರತ್
ಎಲೆಕ್ಟ್ರಾನಿಕ್ಸ್ ಭಾರತದ ವೈವಿಧ್ಯಮಯ ಪ್ರತಿಭೆಯನ್ನು ಗುರುತಿಸಿ ಸಾಕಾರಗೊ
ಳಿಸುವಲ್ಲಿ ಗುರುತರವಾದ ಪಾತ್ರವಹಿಸುತ್ತಿದೆ.
ಭಾರತ್ ಎಲೆಕ್ಟ್ರಾನಿಕ್ಸ್
BHARAT ELECTRONICS
QUALITY, TECHNOLOGY AND INNOVATION.
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಭಾರತ ಸರ್ಕಾರದ ಉದ್ಯಮ)
ರಿ. ಕಛೇರಿ: 116/2, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001
KAMERAD-NEWS/BEL-875-96 KAN

ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್

ಮದುವೆ ಜವಳಿಗೆ ರಾಜ್ಯದಲ್ಲಿಯೇ ಸುಪ್ರಸಿದ್ಧವಾದ ಬಿ. ಎನ್. ಚನ್ನಬಸಪ್ಪ ಅಂಡ್ ಸನ್ಸ್, ಕಾಳಿಕಾದೇವಿ ರಸ್ತೆ, ದಾವಣಗೆರೆ, ಇದು ೧೯೩೮ರಲ್ಲಿ ಬಿ. ಎಸ್. ನಂಜುಂಡಪ್ಪನವರು ಸ್ಥಾಪಿಸಲ್ಪಟ್ಟಿದ್ದು. ಅದು ಇಂದು ತನ್ನ ಜನ್ಮಶತಾಬ್ದಿಯನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಅವರ ಅಂಗಡಿಗೆ ಭೇಟಿ ಕೊಟ್ಟಾಗ ಅಲ್ಲಿ ಸೀರೆ ಕೊಳ್ಳುವರ ಜಾತ್ರೆಯೇ ನಡೆದಿತ್ತು. ಅಷ್ಟೊಂದು ಜನ ಸಮೂಹವಿರುವ ಅಂಗಡಿ ಬಹಳ ವಿರಳ.

ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಸಂಸ್ಥೆಯು ಸಂಸ್ಥಾಪಕರಾದ ಬಿ.ಎಸ್. ನಂಜುಂಡಪ್ಪನವರು ೧೯೩೮ರಲ್ಲಿ ಜವಳಿಯ ಗಂಟನ್ನು ಹೊತ್ತು ಮಾರುತ್ತಿದ್ದರು . ಅವರ ಸತತ ಪರಿಶ್ರಮ, ಅವರಲ್ಲಿಯ ವೃತ್ತಿ ಧರ್ಮದ ಮನೋಭಾವ, ಹಾಗೂ ಶ್ರದ್ಧೆ ಇವುಗಳೆಲ್ಲವು ಇಂದಿನ ಈ ಸಂಸ್ಥೆಯ ಬೆಳವಣಿಗೆಗೆ ಕಾರಣವಾಗಿದೆ.

ಈ ಸಂಸ್ಥೆಯಲ್ಲಿ ಸುಮಾರು ೧೦೦ ರಿಂದ ೧೫೦ ನೌಕರ ವರ್ಗದವರಿದ್ದು ಇಷ್ಟೊಂದು ದೊಡ್ಡ ಸಂಖ್ಯೆ ನೌಕರರು ಇರುವ ಕೆಲವೇ ಕೆಲವು ಸಂಸ್ಥೆಗಳಲ್ಲಿ ಇದೊಂದು ಆಗಿದೆ. ಅಷ್ಟಲ್ಲದೆ ಅಲ್ಲಿಯ ಎಲ್ಲ ನೌಕರವರ್ಗದವರಿಗೆ as per Govt.salary ಭವಿಷ್ಯ ನಿಧಿಯನ್ನು ಹಾಗು ಓವರ ಡ್ಯೂಟಿ (O.T. ಬೊನಸ್‌ನ್ನು ಕೊಡಲಾಗುತ್ತಿದೆ ಹಾಗು ಕರ್ನಾಟಕದಲ್ಲಿ ಜವಳಿ ವ್ಯಾಪಾರದಲ್ಲಿ ವರಮಾನ ತೆರಿಗೆ (Income Tax) ಪಾವತಿ ಮಾಡುವಲ್ಲಿ ಈ ಸಂಸ್ಥೆಯೇ ಮೆಲುಗೈ.

ಕರ್ನಾಟಕದ ನಾನಾ ಕಡೆಯಿಂದ ಈ ಜವಳಿ ಅಂಗಡಿಗೆ ಬರುತ್ತಾರೆ. ಇಲ್ಲಿ ಸಗಟು ಖರೀದಿ (whole sale) ಕೂಡಾ ಇರುತ್ತದೆ. ಭಾರತದಾದ್ಯಂತ ಸೀರೆ ನೇಕಾರರಿಂದ ಸೀರೆಗಳನ್ನು ತಂದು ಇಲ್ಲಿ ಮಾರಾಟಕ್ಕಿಡಲಾಗುತ್ತದೆ, ಇದು ನೇಕಾರರಲ್ಲಿ ಉತ್ಸಾಹ ಮೂಡಿಸಿದೆ. ಆದುದರಿಂದ ಗಿರಾಕಿಗಳು ಒಂದೆ ಸೂರಿನಡಿ ವಿವಿಧ ನಮೂನೆಯ ಸೀರೆಗಳ ಲಭ್ಯತೆಯ ಲಾಭ ಪಡೆಯ ಬಹುದಾಗಿದೆ.

ಈಗಿನ ಅಂಗಡಿ ಮಾಲೀಕರಲ್ಲಿ ಒಬ್ಬರಾದ ಬಿ.ಎಸ್. ಚಂದ್ರಶೇಖರ ಅವರನ್ನು 'ಬಿಸಿಲು ಬದುಕು' ತಂಡ ಕಂಡು ಮಾತನಾಡಿಸಿದಾಗ ಇಷ್ಟೊಂದು ಜವಳಿ ವ್ಯಾಪಾರದಲ್ಲಿ ತಾವು ಹೆಸುವಾಸಿಯಾಗಿರಲು ಕಾರಣಗಳೇನು?' ಎಂದು ಕೇಳಿದಾಗ ನಮ್ಮ ವ್ಯಾಪಾರದಲ್ಲಿ ನಿಷ್ಠೆ, ಪ್ರಮಾಣಿಕತೆ, ಯೋಗ್ಯ ಹಾಗೂ ಆಕರ್ಷಕ ಬೆಲೆ, ಅತ್ಯಾಕರ್ಷಕ ಸೀರೆಗಳು, ಗ್ರಾಹಕರನ್ನು ಶೋಷಣೆ ಮಾಡದೇ ಮಾರುವುದು, ಉತ್ತಮ ಗುಣಮಟ್ಟದ ಸೀರೆಗಳನ್ನು ಬಹಳ ಕಡಿಮೆ ಅಥವಾ ಯೋಗ್ಯ ಬೆಲೆಗೆ ಮಾರುವುದು, ಗ್ರಾಹಕರ ಬಗ್ಗೆ ನಮಗೆ ಇದ್ದ ಕಾಳಜಿ, ಎಲ್ಲ ತರಹದ ಗಿರಾಕಿಗಳನ್ನು ನಾವು ಸಮನಾದ ದೃಷ್ಟಿಯಲ್ಲಿಇಟ್ಟುಕೊಂಡಿರುವುದರಿಂದ, ನಮ್ಮ ನೌಕರವರ್ಗದವರ ಪರಿಶ್ರಮ, ಇವಲ್ಲಕ್ಕೆ ಮಿಗಿಲಾಗಿದ್ದು ಗ್ರಾಹಕರು ನಮ್ಮ ಮೇಲೆ ಇಟ್ಟಿರುವ ನಂಬಿಕೆ, ವಿಶ್ವಾಸವೇ ಇಂದು ನಾವು ಈ ಮಟ್ಟವನ್ನು ತಲುಪಲು ಕಾರಣ.

'ಗ್ರಾಹಕರ ತೃಪ್ತಿಯೇ ನಮ್ಮ ವ್ಯಾಪಾರದ ಗುರಿ. ಇದೇ ನಮ್ಮ ಬೆಳವಣಿಗೆಯ ದಾರಿ' ಎಂದು ಹೇಳಿ ನಮ್ಮನ್ನು ಬೀಳ್ಕೊಟ್ಟಾಗ ಅವರ ಮುಖದಲ್ಲಿ ತಾಳ್ಮೆ ಮತ್ತು ಗ್ರಾಹಕರ ಬಗ್ಗೆ ಇದ್ದ ಕಾಳಜಿಯ ತೇಜಸ್ಸು ಎದ್ದು ಕಾಣುತ್ತಿತ್ತು. ಬರುವ ವರ್ಷಗಳಲ್ಲಿ ಇವರ ಜವಳಿ ವ್ಯಾಪಾರವು ಭಾರತದಲ್ಲಿ ಹೆಚ್ಚಿನ ಖ್ಯಾತಿಯನ್ನು ಪಡೆಯುವಂತಾಗಲಿ ಎಂದು ಹಾರೈಸೋಣ.

ಶೇಖರ ಭೀ. ಮಲ್ಲೂರ

ಗಲ್ಫ್ ಒಂಟೆಯ ಮೇಲೆ



ಯಾವುದೊ... ಕರಾಳ ರಾತ್ರಿಯಲ್ಲಿ
ಹೆಣ್ಣುಗಳ ಸಾಲೆ ಅತ್ಯಾಚಾರಕ್ಕೊಳಪಟ್ಟು
ವಿಧಿಯಿಲ್ಲದೆ ಕೂಸುಗಳ ಕೊನರಿಸಿಕೊಂಡು
ಪಾಪದ ಪಿಂಡವಾದರೂ ಕರುಳ ಕುಡಿಯ ಸಂಬಂಧ
ತನ್ನಲ್ಲೆ ಉದಯಿಸಿದ ಕನಸುಗಳು ಭಗ್ನ ತೊಟ್ಟಿಲು
ಅಂಜಿಕೆಯಿದ್ದರೂ ಅನುಬಂಧದ ಪೊರೆ ಆವರಿಸಿದೆ.

ಬದುಕಿನ ಅರ್ಥ ಅವಳಿಗೆ ಗೊತ್ತು
ತದುಕಿ-ಕೆದುಕಿ ಕನವರಿಸಿ ಹುಡುಕಿದ್ದಾಳೆ
ಒಂದು ಹೊತ್ತಿನ ತುತ್ತಿಗಾಗಿ, ತುತ್ತು ಸಿಗದ
ಜಗದಲಿ ಮುತ್ತಿಗೇನು ಬೆಲೆ....!?

ಗರಿಗರಿಯಾದ ನೋಟು ಸೂರ್ಯನಿಗಿಂತಲೂ ತೇಜ
ಹುದಲು ಬದುಕಿಗೆ ಅನ್ನದ್ದೆ ಬಾಜನ
ಕರುಳ ಕುಡಿಯಾದರೂ ಕರುಳೆ ಹೈರಾಣವಾದಾಗ
'ಹೆಣ್ಣು ಕೂಸು' ಮತ್ತೆ ನನ್ನಂತಾಗಬಾರದೆಂದು
ಗಲ್ಫ್ ಪೆಟ್ರೋಲಿಯಂ ಶ್ರೀಮಂತರ ಹುಚ್ಚು ಸಂತಸಕ್ಕೆ
ಗ್ರಾಸವಾಗಲೆಂದು ಮಾರಿಬಿಟ್ಟಿದ್ದಾಳೆ.

ಹರಕೆಯ ಕುರಿ ತಳಿರು ತಿಂದಂತೆ ಮೃಷ್ಟಾನ್ನ ಭೋಜನ
ಸಾವಿರಾರು ಜನರ ನಗು ಸಂತೋಷಕ್ಕೆಂದು ಒಂಟೆಯ ಬೆನ್ನ
ಮೇಲೆ ಬೀಳದಂತೆ ಬಿಗಿದು ಕಟ್ಟಿದಾಗ
ಕಿರುಚಿದೆ, ಪಾಶಧರ ಓಡತೊಡಗಿತು.
ನನ್ನದೆ ಇಳಿವಯಸ್ಸಿನ ನೂರಾರು ಮಕ್ಕಳ ಆನಂದಬಾಷ್ಪದಲಿ
ನನ್ನ ಕಿರುಚಾಟಕ್ಕೆ, ಕಂಬನಿಗಳಿಗೆ ಅರ್ಥವಿತ್ತೆ?
ಬುದ್ಧಿವಂತರೆಲ್ಲಾ ಆನಂದಕ್ಕೆ ಬದ್ಧರಾಗಿದ್ದರು ಪ್ರತಿಭಟಿಸುವವರಾರು?
ಓಸೋನ್ ಪದರವಿಲ್ಲದ ರವಿಕರಗಳಲ್ಲಿ ಎಳೆಕನಸುಗಳು
ಬಲಿಯುವುದಾದರೂ ಎಂದು?

-ಗಹಲ್ ನಾಯಕ್ ಚನ್ನಗಿರಿ



ಉಷಾ ನವರತ್ನರಾಮ್

ಅವಳ ದೇಹದ ಇಂಚಿಂಚೂ ಗೊತ್ತು!

ನನಗೆ ೨೪ ವರ್ಷ. ಕಳೆದ ೫ ವರ್ಷಗಳಿಂದ ೨೫ರ ಹರೆಯದ ಹೆಣ್ಣೊಬ್ಬಳನ್ನು ಮನದಲ್ಲೇ ಪ್ರೀತಿಸುತ್ತ ಬಂದೆ. ಅವಳಿಗೆ ಮದುವೆಯಾಗಿ ೮ ವರ್ಷ ಆಗಿದೆ. ಜತೆಗೆ ೨ ಮಕ್ಕಳ ತಾಯಿ. ಗಂಡ ವಿದೇಶದಲ್ಲಿದ್ದಾನೆ. ಒಂದು ದಿನ ಆಕೆಯ ಎದಿರು ನನ್ನ ಬಯಕೆಗಳನ್ನೆಲ್ಲಾ ತೋಡಿಕೊಂಡೆ. ಆಕೆ ತುಂಬಾ ಬೈದಳು. ಅವಳಿಗೆ ನನ್ನನ್ನು ಕಂಡರೆ ತುಂಬಾ ಇಷ್ಟವಿದೆ. ಆದರೆ ನಾನು ಅವಳ ಗಂಡನ ಜತೆ Close ಆಗಿದ್ದೇನೆ. ಇದಕ್ಕಾಗಿಯೇ ಆಕೆ ನನ್ನನ್ನು ದೂರ ಮಾಡುತ್ತಿದ್ದಾಳೋ ಏನೋ! ನಾನು ಅವಳ ದೇಹದ ಇಂಚಿಂಚನ್ನೂ ನಗ್ನವಾಗಿ ನೋಡಿದ್ದೇನೆ. ಆದರೆ ಏನೂ ಮಾಡಿಲ್ಲ. ಅವಳನ್ನು ದೇವತೆ ಎಂದು ಪೂಜಿಸುತ್ತಿದ್ದೇನೆ. ಅವಳ ಅಂದದ ಬಗ್ಗೆ ವರ್ಣನೆ ಮಾಡಿದಾಗ ಮಾತ್ರ ಸುಮ್ಮನಿರುತ್ತಾಳೆ. ಉಳಿದಂತೆ ನನ್ನ ಮಾತನ್ನು ಕೇಳುವುದಿಲ್ಲ. ಅವಳಿಂದಾಗಿ ನನ್ನ ಬಾಳೇ ಹಾಳಾಗುತ್ತಿದೆ. ದಯವಿಟ್ಟು ನನ್ನನ್ನೂ ಒಬ್ಬ ಮನುಷ್ಯನನ್ನಾಗಿ ಮಾಡಿ.

– ಹೆಸರು, ಊರು ಬೇಡ

ಸಲಹೆ

ದೇವತೆಯಂತೆ ಪೂಜಿಸುತ್ತೇನೆ ಎನ್ನುವ ನೀವು ಆ ಹೆಂಗಸನ್ನು ಕಾಮುಕ ದೃಷ್ಟಿಯಿಂದ ನೋಡುವುದು ತಾಯಿಯನ್ನು ಮಗ ಕಾಮುಕ ದೃಷ್ಟಿಯಿಂದ ನೋಡಿದಷ್ಟೇ ಕೀಳಾದುದು. ಮದುವೆಯಾದ, ಎರಡು ಮಕ್ಕಳ ತಾಯಿಯಾದ, ನಿಮ್ಮ ಪರಿಚಯದವನ ಹೆಂಡತಿಯಾದ ಆ ಹೆಣ್ಣನ್ನು ಆ ದೃಷ್ಟಿಯಿಂದ ನೀವು ನೋಡುತ್ತಿರುವುದು ನಿಮ್ಮ ಮನಸ್ಸಿನ ಮೃಗೀಯ ಕಲ್ಪನೆ. ಆಕೆ ನಿಮ್ಮನ್ನು ದೂರದಲ್ಲಿಟ್ಟಿರುವುದು ಶ್ಲಾಘನೀಯ. ಮನಸ್ಸು ಹಾಳು ಮಂಟಪದಂತೆ. ದಣಿದು ಬಂದವರು, ಎಡವಿದವರು ಎಲ್ಲಾ ಅಲ್ಲಿ ಬಂದು ಕುಳಿತು ಹೋಗುತ್ತಾರೆ. ಕೆಟ್ಟ ಕೆಟ್ಟ ಯೋಚನೆಗಳೂ ಅಲ್ಲಿ ಜೇಡರ ಬಲೆ ಕಟ್ಟಿ ಹೋಗಬಹುದು. ಆ ಮಾಲಿನ್ಯ ಶುಚಿ ಮಾಡಿ ಒಳ್ಳೆಯ ಭಾವನೆಗಳು ಬಂದು ತಂಗುವಂತೆ ಮಾಡಿಕೊಳ್ಳಿ, ದೈಹಿಕ ಕಾಮನೆಗಳು ಕ್ಷಣಿಕ. ಮಾನವೀಯ ದೈವಿಕ ಭಾವನೆಗಳು ಚಿರಂತನ. ಮನಸ್ಸಿನ ಕೊಳೆ ಸ್ವಚ್ಛಮಾಡಿಕೊಳ್ಳಲು ಅವಳಿಂದ ದೂರ ಹೋಗಿ ಯೋಗ, ಮೆಡಿಟೇಷನ್, ಕಷ್ಟದಲ್ಲಿರುವವರಿಗೆ ಸಹಾಯ ಸೇವೆ ಮಾಡಿ, ಪರಿಶುದ್ಧಿ ಮಾಡಿಕೊಳ್ಳಿ, ಪರಸ್ತ್ರೀಯನ್ನು ತಾಯಿಯಂತೆ ನೋಡು ಎನ್ನುವ ದೇಶದಲ್ಲಿ, ರಾಮ ಲಕ್ಷ್ಮಣರಂತಹವರು ಜನಿಸಿ ಪಾವನಗೊಂಡಿರುವ ನಮ್ಮ ಭೂಮಿಯಲ್ಲಿ ನಿಮ್ಮಂತಹ ಗಂಡಸರು ದಾರಿ ತಪ್ಪಿ ನಡೆಯದಂತೆ ಎಚ್ಚರಿಕೆ ವಹಿಸಬೇಕು. ತಾಯಿ ಋಣ ತಾಯ್ನಾಡಿನ ಋಣಕ್ಕಾದಾರೂ! ಫ್ರಾಯ್ಡ್‌ನ ಪ್ರಕಾರ ತಾಯಿಯನ್ನೇ ಮಗ ಪ್ರೀತಿಸಿ, ಬಯಸುವುದಕ್ಕೆ ಈಡಿಪಸ್ ಕಾಂಪ್ಲೆಕ್ಸ್ ಎನ್ನುತ್ತಾನೆ. ಇದೊಂದು ರೀತಿ ಮನೋವಿಕಾರ!

ಹೀಗೆ ಮಾಡಲೊ? ಹಾಗೆ ಮಾಡಲೊ?

ನಾನೊರ್ವ ೨೪ ವರ್ಷದ ತರುಣ. ಸರ್ಕಾರಿ ನೌಕರಿಯಿದೆ. (ಶಿಕ್ಷಕ) ಆದರೂ ಏನೋ ತಳಮಳ. ಉನ್ನತ ಹುದ್ದೆಗೇರಬೇಕು, ಅದಕ್ಕೆ ವಿದ್ಯಾರ್ಹತೆ ಗಳಿಸಬೇಕು. ಇನ್ನು ಪದವಿ (ಡಿಗ್ರಿ) ಪಡೆದಿಲ್ಲ. ಓದಲು ಮನಸ್ಸಿಲ್ಲ. ಬಿಡಲೂ ಆಗದು. ಮದುವೆಯಾಗಬೇಕು. ಛೇ! ಮದುವೆಯಾದರೆ ವಿದ್ಯಾಭ್ಯಾಸ ಹಾಳಾಗುತ್ತದೆ. ಮದುವೆಯಾಗದಿದ್ದರೆ ಯೌವನವೆಲ್ಲ ವ್ಯರ್ಥ. ಉದ್ಯೋಗಸ್ಥ ವಧು ಬೇಕು. ಅಯ್ಯೋ ಬೇಡಪ್ಪಾ ದುಡಿಯುವ ಹೆಣ್ಣಿಗೆ ಹೊಂದಿಕೊಳ್ಳೋದಿಕ್ಕಾಗಲ್ಲ. ಇದೆಲ್ಲ ಸರಿಯಲ್ಲ! ಹೆಂಡತಿಯೂ ದುಡಿದರೆ ಆರ್ಥಿಕವಾಗಿ ಚೆನ್ನಾಗಿರಬಹುದು. ಎಂತಹವರನ್ನು ಆಯ್ದುಕೊಳ್ಳಲಿ? ಬರೀ ದ್ವಂದ್ವ ಡೋಲಾಯಮಾನ ತೊಳಲಾಟ...

ಈಗ ಸೇದೋ ಸಿಗರೇಟೇ ಕೊನೆಯದೆನ್ನುತ್ತಾ ನಾಲ್ಕು ವರ್ಷದಿಂದ ಸಿಗರೇಟು ಸುಡ್ತಾ ಇರೋದು, ಹಣ ಉಳಿಸಬೇಕು ಉಳಿಸಬೇಕು ಅನ್ನುತ್ತಾ ವೃಥಾ ಖರ್ಚು ಮಾಡುತ್ತಿರುವುದು...

ಬರೆದ ಪರೀಕ್ಷೆಗಳಲ್ಲೆಲ್ಲಾ ಯಾವತ್ತೂ ಪ್ರಥಮ ಶ್ರೇಣಿ. ನನ್ನ ವಿದ್ಯಾರ್ಥಿಗಳೆಲ್ಲಾ ಬುದ್ಧಿವಂತರಾಗಬೇಕೆಂಬ ಹಂಬಲ. ನನ್ನಂತೆಯೇ ಸಹೋದ್ಯೋಗಿಗಳಿಗೆ ಆ ಚಿಂತೆಯೇ ಇಲ್ಲವೆಂಬ ಕೊರಗು...

ಈಗ ಹೇಳಿ ನನ್ನದೇನು ಮಾನಸಿಕ ಅಸ್ವಸ್ಥತೆಯೇ?

– ಹೆಸರು ಬೇಡ, ಮಧುಗಿರಿ

ಸಲಹೆ

ನಿಮ್ಮ ರೀತಿಯ ತಳಮಳ ಎಲ್ಲಾ ಯುವ ಜನಾಂಗದ ತಳಮಳ. ಇದರಲ್ಲಿ ತಪ್ಪೇನಿಲ್ಲ. ಆದರೆ ಪಾಸಿಟಿವ್ ಥಿಂಕಿಂಗ್ ಬೇಕು-ನಿಮ್ಮ ಬುದ್ಧಿಶಕ್ತಿ, ದೇಹ ಶಕ್ತಿ, ನಿಮ್ಮ ಪರಿಸರ ಇವುಗಳಿಗನುಸಾರವಾಗಿ ನೀವು ತಾಳ್ಮೆಯಿಂದ ಭವಿಷ್ಯ ರೂಪಿಸಿಕೊಳ್ಳಿ, ಸಿಗರೇಟು ಸೇದುವುದರಿಂದ ಏನೂ ಸಾಧಿಸಲಾರಿರಿ. ನಿಮ್ಮ ಆರೋಗ್ಯ ಹಾಳು ಮಾಡಿಕೊಳ್ಳುತ್ತೀರಿ. ಮನಸ್ಸಿನ ತಳಮಳಕ್ಕೆ ಯೋಗ, ಮೆಡಿಟೇಷನ್, ದೈವಭಕ್ತಿ, ಪರೋಪಕಾರ ಇವುಗಳು ಒಳ್ಳೆಯ ಮದ್ದು. ಒಂದು ನಿರ್ದಿಷ್ಟ ಗುರಿಯಿಟ್ಟುಕೊಂಡು ತಾಳ್ಮೆ ಸಂಯಮದಿಂದ ಮುನ್ನಡೆಯಿರಿ. ಪ್ರಾಣಿಯಾವುದನ್ನಾದರೂ ಸಾಕಿಕೊಳ್ಳಿ, ನಾಯಿ, ಬೆಕ್ಕು, ಗಿಣಿ-ಯಾವುದಾದರೂ ಸರಿ. ಅದರ ಪಾಲನೆ, ಲಾಲನೆ, ಜೊತೆಯಾಟದಿಂದ ನೆಮ್ಮದಿ ಸಿಗುವುದು. ತಾಳ್ಮೆ ಸಂಯಮವಿಲ್ಲದೆ ಮನಸ್ಸು ಚಂಡಾಟವಾಗುವದರಲ್ಲಿ ಸಂಶಯವಿಲ್ಲ. ನಿಮ್ಮದು ಬಹಳ ನಾರ್ಮಲ್ ಮನಸ್ಸು.

ಭಾಷಣ ಕಲೆ

ನನಗೆ ಭಾಷಣದ ಕಲೆ ಸ್ವಲ್ಪ ಗೊತ್ತಿದೆ. ನಾನು ೮ನೇ ತರಗತಿಯಲ್ಲಿ ಓದುತ್ತಿದ್ದೇನೆ. ಕರ್ನಾಟಕದ ಶ್ರೇಷ್ಠ ಭಾಷಣಕಾರನಾಗಬೇಕೆಂಬ ಆಸೆ ಇದೆ. (ತರಬೇತಿ ಇಲ್ಲದೆ) ಆದ್ದರಿಂದ ತಾವು ನನಗೆ ಮಾರ್ಗದರ್ಶನ ನೀಡಬೇಕಾಗಿ ವಿನಂತಿ.

– ಚಂದ್ರಶೇಖರ, ತಬಸಿ

ಸಲಹೆ

ಭಾಷಣ ಕಲೆ ಕೆಲವರಿಗೆ ಕರಗತವಾಗಿ ಬಿಡುತ್ತದೆ. ಕೆಲವರು ಇದನ್ನು ಸಾಧನೆ ಮಾಡಿ ಸಾಧಿಸಿಕೊಳ್ಳುತ್ತಾರೆ. ಸ್ಪಷ್ಟವಾದ ಉಚ್ಚಾರಣೆ, ಒಳ್ಳೆಯ ದನಿ, ನಿಂತು ಮಾತಾಡುವ ಭಂಗಿ, ಆತ್ಮವಿಶ್ವಾಸ ಇವುಗಳನ್ನು ರೂಢಿಸಿಕೊಳ್ಳಬೇಕು. ಅಲ್ಲದೇ ಮಾತಾಡುವ ವಿಷಯದ ಬಗ್ಗೆ ಅಧ್ಯಯನ ಮಾಡಿರಬೇಕು. ಇದೆಲ್ಲಾ ಒಂದೆರಡು ದಿನಗಳಲ್ಲಿ ಕಲಿಯಬಹುದಾದುದಲ್ಲ. ತಾಳ್ಮೆಯಿಂದ ಅಭ್ಯಾಸ ಮಾಡಬೇಕು. ಮನಸ್ಥೈರ್ಯ ಬೆಳೆಸಿಕೊಳ್ಳಬೇಕು. ನಾಲ್ಕು ಮಂದಿ ಗೆಳೆಯರು ಅಥವಾ ಮನೆಮಂದಿಯ ಮುಂದೆ ಭಾಷಣ ಮಾಡಿ ಅಭ್ಯಸಿಸಿ. ಕೋಣೆಯಲ್ಲಿ ಕನ್ನಡಿಯ ಮುಂದೆ ನಿಂತು ನಿಮ್ಮ ಭಾಷಣದ ಹಾವಭಾವ ಗಮನಿಸಿಕೊಳ್ಳಿ, ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ.

ಕಣ್ಣಿನ ಮೂಲಕ ಪ್ರೇಮ

ನಾನು ಪಿ.ಯು.ಸಿ ಓದುತ್ತಿದ್ದೇನೆ. 2 ತಿಂಗಳಿಂದ ಒಬ್ಬರನ್ನು ಮನಸಾರೆ ಪ್ರೀತಿಸುತ್ತಿದ್ದೇನೆ. ನಮ್ಮಿಬ್ಬರ ಜಾತಿ ಬೇರೆ ಬೇರೆ. ಆದರೆ ನನಗೆ ಆಗಲೆ ನಮ್ಮ ತಾಯಿಯವರ ತಮ್ಮನ ಜೋಡಿ ನಿಶ್ಚಿತಾರ್ಥವಾಗಿದೆ. ಆದರೆ ಇದು ಸುಲಭವಾಗಿ ಅಲ್ಲ. ಎಲ್ಲರ ಒತ್ತಾಯದ ಮೇಲೆ ಮಾವ ಒಪ್ಪಿದ್ದಾರೆ. ನಮ್ಮ ತಾಯಿಯವರಿಗೆ ಇದು ಇಷ್ಟವಿಲ್ಲ. ಅಪ್ಪನವರಿಗೆ ಇಷ್ಟವಿದೆ. ಆದರೂ ಒಂದೊಂದು ಸಲ ನನ್ನನ್ನು ಮಾವನಿಗೆ ಕೊಡುವುದಿಲ್ಲ ಅನ್ನುತ್ತಾರೆ. ಮೊದಲು ನನಗೆ ಮಾವನ ಮೇಲೆ ಇಷ್ಟವಿತ್ತು. ಈಗ ಈ ಹುಡಗನನ್ನು ಪ್ರೀತಿಸಿದ ನಂತರ ಬಹಳ ನೋವಾಗ್ತಿದೆ. ಒಂದು ಕ್ಷಣ ಬಿಟ್ಟಿರಲು ಆಗುತ್ತಿಲ್ಲ. ಆದರೆ ಅವರು ಬೇರೆ ಊರಿನವರು. ಒಮ್ಮೊಮ್ಮೆ ನಮ್ಮ ಪಕ್ಕದ ಮನೆಗೆ ಬಂದು ಹೋಗುತ್ತಾರೆ. ಮೌನಕಣ್ಣಿನ ಮೂಲಕ ಪ್ರೇಮ. ಬಹಳ ತೊಂದರೆಯಾಗಿದೆ. ಮನೆಯಲ್ಲಿ ದಿನ ಜಗಳ. ನನ್ನ ತಂದೆಯವರು ಬಹಳ ಮರ್ಯಾದಸ್ಥರು. ಈ ಜಗಳದ, ಮನಸ್ಸಿಲ್ಲದ ಮದುವೆಯಾಗಬೇಕೆ ಅಥವಾ ಅವರ ಜೋಡಿ ಹೋಗಬೇಕೇ ಹೇಳಿ. ನಾನು ಬಹಳ ಹೆದರಿಕೆ ಸ್ವಭಾವದವಳು. ದಯವಿಟ್ಟು ನನ್ನ ಚಿಂತೆ ದೂರ ಮಾಡಿ.

- ಹೆಸರು ಬೇಡ, ಯಲಬುರ್ಗಾ

ಸಲಹೆ

ನಿಮ್ಮ ಮಾವನೊಂದಿಗೆ ನಿಶ್ಚಿತಾರ್ಥವಾಗಿದೆಯೆಂದು ಹೇಳಿದ್ದೀರಿ. ಆದರೆ ನೀವು ಬೇರೊಬ್ಬ ಹುಡುಗನನ್ನು ಪ್ರೀತಿಸುವುದಕ್ಕೆ ನಿಶ್ಚಿತಾರ್ಥದ ಮುಂಚೆಯೇ ಪ್ರಾರಂಭಿಸಿದಿರೋ ಅಥವಾ ಅನಂತರವೋ ತಿಳಿಸಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಆ ಹುಡುಗ ಬೇರೆ ಊರಿನವನು, ಬೇರೆ ಜಾತಿ ಎನ್ನುತ್ತೀರಿ. ಬರಿಯ ಕಣ್ಣುಗಳ ಮೂಲಕ ಒಲವು, ಪ್ರೀತಿ ವಿತರಣೆಯಾದರೆ ಸಾಲದು. ಆ ಹುಡುಗನಿಗೆ ನಿಮಗೆ ಮದುವೆ ನಿಶ್ಚಿತವಾಗಿದೆಯೆಂದು ತಿಳಿದಿದೆಯೇ? ಅವನು ನಿಮ್ಮನ್ನು ವಿವಾಹವಾಗಲು ಸಿದ್ಧನಿರುವನೇ? ಜಾತಿ, ಕಟ್ಟುಪಾಡು, ಊರು ನಿಮ್ಮ ಮನೆಯವರು, ಅವನ ಮನೆಯವರನ್ನು ಎಲ್ಲವನ್ನೂ ಮೆಟ್ಟಿ, ನಿಂತು ನಿಮ್ಮ ಕೈ ಹಿಡಿದು ಬಾಳುಕೊಡಲು ಸಿದ್ಧನಿರುವನೇ? ಇವೆಲ್ಲವೂ ಕಣ್ಣುಗಳ ಮೌನ ಭಾಷೆಯಿಂದ ತಿಳಿಯುವುದಿಲ್ಲ. ಹಿಂದೆ ಮುಂದೆ ವಿವೇಚಿಸದೇ 'ನೋಡಿದೆ ಪ್ರೀತಿಸುತ್ತೇನೆ' ಎಂದೆಲ್ಲಾ ಹೇಳುವುದು ತಪ್ಪಾದೀತು. ನಿಮಗಿನ್ನು ಚಿಕ್ಕ ವಯಸ್ಸು. ವಿವೇಚನೆಯಿಲ್ಲದೇ ಯಾವ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಎಲ್ಲಾ ರೀತಿಯಲ್ಲೂ ತೊಂದರೆ, ಸಮಸ್ಯೆಗಳಿಗೆ ಸಿಕ್ಕುವುದು ನೀವೇ. ಪಶ್ಚಾತ್ತಾಪ ಪಡಬೇಕಾದೀತು, ಎಚ್ಚರಿಕೆ.

ಮಗು ಬೆಳ್ಳಗೆ ಜನಿಸಲು ಏನು ಮಾಡಬೇಕು?

ನಾನು ೨೩ ವರ್ಷದ ವಿವಾಹಿತ ಹೆಂಗಸು. ನಾನು ಈಗ ೬ ತಿಂಗಳು ಗರ್ಭಿಣಿ. ಆದರೆ ನನ್ನದೊಂದು ಸಮಸ್ಯೆ ಇದೆ. ನಾನೂ ನನ್ನ ಗಂಡ ಇಬ್ಬರೂ ಕಪ್ಪಾಗಿದ್ದೇವೆ. ನಮಗೆ ಹುಟ್ಟುವ ಮಗು ಎಲ್ಲಿ ಕಪ್ಪಾಗಿ ಹುಟ್ಟುತ್ತದೆಯೋ ಎಂಬ ಆತಂಕ. ಆದ್ದರಿಂದ ಮಗು ಬೆಳ್ಳಗೆ ಹುಟ್ಟಲು ಔಷಧಿಗಳೇನಾದರೂ ತಗೋಬೇಕಾ? ಇದ್ದರೆ ಯಾವಾಗ್ಯಾವಾಗ ತೆಗೆದುಕೊಳ್ಳಬೇಕು. ದಯವಿಟ್ಟು ತಿಳಿಸಿಕೊಡಿ.

- ಲಕ್ಷ್ಮಿ, ಕೊರಟಗೆರೆ

ಸಲಹೆ

ವಂಶಪಾರಂಪರ್ಯವಾಗಿ ಬರಬಹುದಾದ ಎಲ್ಲಾ ಗುಣಗಳನ್ನು, ವಿಶೇಷಗಳನ್ನು ಹೊತ್ತು ಮಗು ಹುಟ್ಟುತ್ತದೆ. ಭ್ರೂಣ ಆಕಾರ ಹೊಂದುವಾಗಲೇ ಅದರ ಭವಿಷ್ಯ, ಬದುಕು ನಿಶ್ಚಿತವಾಗಿರುತ್ತದೆ. ಯಾವ ಚಿಕಿತ್ಸೆಯಿಂದಾಗಲೀ 'ಜೀನ್ಸ್' ಬದಲಾಗದು. ನೀವಿಬ್ಬರೂ ಕಪ್ಪಗಿರುವಿರೆಂದ ಮೇಲೆ ಮಗು ಕಪ್ಪಾಗಿಯೇ ಜನಿಸುವ ಸಾಧ್ಯತೆ ಹೆಚ್ಚು. ನಿಮ್ಮಿಬ್ಬರ ವಂಶದಲ್ಲಿನ ಹತ್ತಿರದವರು ಬೆಳ್ಳಗೆ, ಕೆಂಪಗೆ ಇದ್ದರೆ ಕೆಲವು ವೇಳೆ ಕಪ್ಪಾಗದಿರಲು ಸಾಧ್ಯ.

ಸಮಾಜಸೇವೆಯೂ ಸನ್ಯಾಸಿಯೂ

ನಾನೊರ್ವ ೧೭ ವರ್ಷದ ಯುವಕ. ನಾನು ಮುಂದೆ ಬ್ರಹ್ಮಚರ್ಯವನ್ನು ಸ್ವೀಕರಿಸಿ ಸನ್ಯಾಸಿಯಾಗಲು ಇಚ್ಚೆಸಿದ್ದೇನೆ ಹಾಗೂ ನಾನು ಅನೇಕ ಆಧ್ಯಾತ್ಮಿಕ ಪುಸ್ತಕಗಳನ್ನು ಓದುತ್ತಿರುವೆನು. ಉದಾ: ವಿವೇಕಾನಂದ ಕೃತಿಶ್ರೇಣಿ, ಧ್ಯಾನ ಯೋಗ, ಕರ್ಮಯೋಗ ಮತ್ತು ರಾಜಯೋಗ. ಇದೆಲ್ಲದರ ಒಟ್ಟು ಪರಿಣಾಮವೆಂದರೆ ವ್ಯಕ್ತಿ ಸಮಾಜ ಸೇವೆಯನ್ನು ಮಾಡಬೇಕು ಮತ್ತು ಹಿಂಸೆಯನ್ನು ತ್ಯಜಿಸಿದ ಸಾದು ಜೀವನವನ್ನು ನಡೆಸಬೇಕೆಂದು ತುಂಬಾ ಆಸೆ. ಈಗ ನಾನು P.U.C.II(P.C.M.B) ಓದುತ್ತಿರುವೆ. ಮುಂದೆ ಡಿಗ್ರಿ ಪಡೆದು ಆ ರೀತಿ ಆಗಬೇಕೆಂಬ ಆಸೆ. ಆದರೆ ನನಗೆ ಒಂದು ದೌರ್ಬಲ್ಯವಿದೆ. ಅದೇನೆಂದರೆ ಸ್ವಲ್ಪ ಲೈಂಗಿಕ ಆಸಕ್ತಿ ಇದೆ. ಟಿ.ವಿ.ಯಲ್ಲಿ, ಪತ್ರಿಕೆಯಲ್ಲಿ ಸುಂದರ ಯುವತಿಯರನ್ನು ನೋಡಿದಾಗ ನನ್ನ ಚಂಚಲತೆ ನನಗೇ ಗೊತ್ತಾಗುತ್ತದೆ. ಕೆಲ ದಿವಸದ ಹಿಂದೆ ಪತ್ರಿಕೆಯೊಂದರಲ್ಲಿ ಓದಿದೆ. ಒಬ್ಬ ರಷ್ಯಾದವನು ಯುವತಿಯ ಮೇಲೆ ಅತ್ಯಾಚಾರ ಮಾಡಿದ್ದಗೋಸ್ಕರ ಆತನಿಗೆ ಅಲ್ಲಿಯ ನ್ಯಾಯಾಲಯ ಲೈಂಗಿಕ ಆಸಕ್ತಿಯನ್ನು ಕಳೆದುಕೊಳ್ಳುವ ಚುಚ್ಚುಮದ್ದನ್ನು ನೀಡಿತು. ಹಾಗಾದರೆ ಲೈಂಗಿಕಾಸಕ್ತಿಯನ್ನು ಕಳೆದುಕೊಳ್ಳುವ ಆ ಲಸಿಕೆಯಿದ್ದರೆ ಭಾರತ ಅದರಲ್ಲಿಯೂ ಕರ್ನಾಟಕದಲ್ಲಿ ಲಭ್ಯವಿದೆಯೇ ಅಥವಾ ವೈದ್ಯಕೀಯ ವಿಭಾಗದಲ್ಲಿ ಸಿಗುತ್ತದೆಯೇ, ದಯವಿಟ್ಟು ಎಲ್ಲಿ ಸಿಗುತ್ತದೆ ಎಂಬುದನ್ನು ತಿಳಿಸಿ.

ಊರು, ಹೆಸರು ಬೇಡ

ಸಲಹೆ

ಬ್ರಹ್ಮಚರ್ಯಕ್ಕೆ ಬಹಳ ಮುಖ್ಯವಾದುದು ಇಂದ್ರಿಯ ನಿಗ್ರಹ. ನೀವಿನ್ನೂ ಮನಸ್ಸನ್ನು ನಿಗ್ರಹಿಸಲು ಕಲಿಯಬೇಕು. ಸನ್ಯಾಸಿಯಾಗಿ ಸಮಾಜಸೇವೆ ಮಾಡಬೇಕೆಂದಿರುವೆ ಎನ್ನುವಿರಿ. ಗೃಹಸ್ಥನಾಗಿಯೂ ಬೇಕಾದಷ್ಟು ಒಳ್ಳೆಯ ಕಾರ್ಯಗಳನ್ನು ಸಾಧಿಸಬಹುದು. 'ಆಸೆಗಳು ದು:ಖಕ್ಕೆ ಮೂಲ' ಎಂದು ಗೌತಮ ಬುದ್ಧ ಹೇಳುತ್ತಾನೆ. ಆಸೆಗಳನ್ನು ಮೆಟ್ಟನಿಂತು ಇಂದ್ರಿಯ ನಿಗ್ರಹ ಮಾಡಿ ಸನ್ಯಾಸಿಯಾಗಲು ಸಾಕಷ್ಟು ಸಾಧನೆ ಮಾಡಬೇಕು. ಕಾಮನೆಗಳೆಲ್ಲಾ ತಾನೇ ತಾನಾಗಿ ಸುಟ್ಟು ಬೂದಿಯಾಗಬೇಕು. ಔಷಧಿ, ಲಸಿಕೆಗಳನ್ನು ನಂಬಿದರೆ ಮುಂದೆ ಅದರ ಪರಿಣಾಮ ಕಡಿಮೆಯಾಗುತ್ತ ಬಂದರೆ ಏನು ಮಾಡುತ್ತೀರೀ? ಏನು ಸಾಧಿಸುವುದಕ್ಕೂ ಧೃಡ ನಿರ್ಧಾರ, ಮನಸ್ಥೈರ್ಯ, ವಿವೇಚನೆ ಬಹಳ ಮುಖ್ಯ.

ಹೆಂಡತಿಯ ಬಿಚ್ಚು ಮನಸು

ನಾನು ೩೦ ವರ್ಷದ ಸದೃಡಯುವಕ. ಆರು ತಿಂಗಳ ಹಿಂದೆ ಮದುವೆಯಾಯಿತು. ಆದರೆ ನಾನು ಮದುವೆಯಾದದ್ದು ಒಬ್ಬ ಸುಂದರ ಕನ್ಯೆಯನಲ್ಲ. ಐದು ವರ್ಷಗಳ ಹಿಂದೆ ಒಬ್ಬ ಹುಡುಗನನ್ನು ಪ್ರೀತಿಸಿ ಅವನೊಡನೆ ೮-೧೦ ರಾತ್ರಿಗಳನ್ನು ಕಳೆದ ಶೀಲಗೆಟ್ಟ ಹೆಣ್ಣನ್ನು. ಇದನ್ನೆಲ್ಲ ಈ ನನ್ನ ಹೆಂಡತಿಯೇ ನನ್ನ ಬಳಿ ಹೇಳಿಕೊಂಡಿದ್ದಾಳೆ. ಈಕೆಯನ್ನು ಪ್ರೀತಿಸಿದ ಹುಡುಗ ಐದು ವರ್ಷಗಳ ಹಿಂದೆ ಮನೆಯವರ ವಿರೋದ ಕಟ್ಟಿಕೊಂಡು ಬರುವಾಗ ದಾರಿಯಲ್ಲಿ ವಿಷ ಕುಡಿದು ಇವಳ ಮನೆಗೆ ಬಂದು ಪ್ರಾಣ ಬಿಟ್ಟನಂತೆ. ನಮ್ಮದು ಮರ್ಯಾದಸ್ಥ ದೊಡ್ಡ ಮನೆತನ. ಈಗ ನಾನೇನು ಮಾಡಲಿ? ಎಲ್ಲವನ್ನು ಹೇಳಿಕೊಂಡ ಇವಳ ಜೊತೆ ಬಾಳಲೇ ಅಥವಾ ವಿಚ್ಛೇದನ ಕೊಟ್ಟು ಬೇರೆ ಮದುವೆಯಾಗಲೇ ಅಥವಾ ಇವಳ ಜೊತೆಗೆನೆ ಇನ್ನೊಬ್ಬಳನ್ನು ಮದುವೆ ಮಾಡಿಕೊಂಡು ಜೀವನ ನಡೆಸಲೆ? ಈ ಎಲ್ಲದಕ್ಕೂ ನನ್ನ ಹೆಂಡತಿಯ ಸಂಪೂರ್ಣ ಒಪ್ಪಿಗೆ ಇದೆ. ಒಬ್ಬ ಸುಂದರ ಕನ್ಯೆಯೊಡನೆ

ಬಾಳಬೇಕೆಂದು ಮಹದಾಸೆ. ಈ ಒಂದು ವಿಷಯ ಬಿಟ್ಟು ಎಲ್ಲದರಲ್ಲೂ ನನಗೆ ಹೊಂದಿಕೆಯಾಗುತ್ತಾಳೆ. ಇಂಥ ಶೀಲಗೆಟ್ಟ ಹೆಣ್ಣಿನೊಡನೆ ಹೇಗೆ ಬಾಳಲಿ ಕ್ಷಣ ಕ್ಷಣಕ್ಕೂ ಇವಳ ಹಿಂದಿನ ಇತಿಹಾಸ ನನ್ನ ಕಣ್ಣ ಮುಂದೆ ಬಂದು ಕ್ಯಾನ್ಸರ್ ಹುಳುವಿನಂತೆ ನನ್ನ ಮನಸ್ಸನ್ನು ಕೊರೆಯುತ್ತಿದೆ. ನೀವು ಕೊಡುವ ಉತ್ತರ ನನ್ನ ಜೀವನದ ದೊಡ್ಡ ತಿರುವಾಗಲಿದೆ.

- ಹೆಸರು, ಊರು ಬೇಡ

ಸಲಹೆ

ನಿಮ್ಮ ಸಮಸ್ಯೆ ಮಾನವೀಯತೆಗೆ, ನ್ಯಾಯಕ್ಕೆ, ಸತ್ಯಕ್ಕೆ, ಧರ್ಮಕ್ಕೆ ಕನ್ನಡಿ ಹಿಡಿದಂತಿದೆ. ನಿಮ್ಮ ಪತ್ನಿ ಯಾವುದನ್ನೂ ಮುಚ್ಚಿಡದೆ ನಿಮ್ಮನ್ನು ನಂಬಿ ಎಲ್ಲವನ್ನೂ ತಿಳಿಸಿದ ಮೇಲೂ ನಿಮಗೆ ಈ ರೀತಿ ಎನಿಸುವುದು ತಪ್ಪು.' ಟು ಎರ್ ಈಸ್ ಹ್ಯೂಮನ್ ಟು ಫರ್‌ಗಿವ್ ಈಸ್ ಡಿವೈನ್' (ತಪ್ಪು ಮಾಡುವುದು ಮನುಷ್ಯ ಸಹಜ. ಆದರೆ ಕ್ಷಮಿಸುವುದು ದೈವ ಸಮಾನ)- ಎಂದು ಆಂಗ್ಲ ಉಕ್ತಿಯಿದೆ. ನಿಮ್ಮ ಪತ್ನಿ ಎಲ್ಲದರಲ್ಲೂ ನಿಮಗೆ ತಕ್ಕಂತಿರುವಾಗ ಯಾವುದೋ ಒಂದು ಬಾರಿ ಹಿಂದೆ ಎಡವಿರುವುದನ್ನೇ ದೊಡ್ಡದು ಮಾಡಿದರೆ ಮಾನವತ್ವಕ್ಕೆ ಸರಿಯಲ್ಲ. ನೀವೇ ಒಂದು ವೇಳೆ ತಪ್ಪು ಮಾಡಿದ್ದಲ್ಲಿ ನಿಮ್ಮ ಪತ್ನಿಯ ಬಳಿ ನೀವು ನಿಮ್ಮ ಪತ್ನಿಯಷ್ಟು ಧೈರ್ಯವಾಗಿ ಬಿಚ್ಚು ಮನಸ್ಸಿನಿಂದ ಹೇಳುತ್ತಿದಿರಾ? ಆಕೆಯೂ ನಿಮ್ಮಂತೆ ಜಿಜ್ಞಾಸೆಗೆ ಒಳಗಾಗಿದ್ದರೆ ನೀವೇನು ಮಾಡುತ್ತಿದ್ದೀರಿ? ಹಿಂದಿನದೆಲ್ಲಾ ಯಾವುದೋ ಕೆಟ್ಟ ಕನಸೆಂದು ಪರಿಗಣಿಸಿ ಹೊಸ ಬದುಕನ್ನು ನಂಬಿಕೆ, ಪ್ರೀತಿ, ವಿಶ್ವಾಸದ ಬುನಾದಿಯ ಮೇಲೆ ಪ್ರಾರಂಭಿಸಿ.

ಇಬ್ಬರೂ ನನ್ನ ಎರಡು ಕಣ್ಣುಗಳು

ನಾನೀಗ ಬಿ.ಎ. ತೃತೀಯ ವರ್ಷದಲ್ಲಿ ಓದುತ್ತಿರುವೆ. ನಮ್ಮ ಮನೆಯವರು ಬಲವಂತವಾಗಿ ನನ್ನಕ್ಕನ ಮಗಳನ್ನು ನನಗೆ ಮದುವೆ ಮಾಡಿದ್ದಾರೆ. ಮನೆಯವರ ಮಾತು ಮೀರದೆ ಮದುವೆಯಾದೆ. ಆದರೆ ಅವಳನ್ನು ಸಂಪರ್ಕಿಸಲು ಇಷ್ಟವಿಲ್ಲ. ಆದರೆ ಅವಳಿಗೆ ನನ್ನ ಮೇಲೆ ಇಷ್ಟವಿದೆ. ಆಕೆ ಮಾನಸಿಕವಾಗಿ ಕೊರಗುತ್ತಿದ್ದಾಳೆ. ಇಷ್ಟಾದರೂ ಅವಳ ಕಡೆಗೆ ಮನಸ್ಸು ಕೊಟ್ಟಿಲ್ಲ. ಯಾಕೆಂದರೆ ನನ್ನ ಸಹಪಾಠಿಯಾದ ಒಬ್ಬ ಹುಡುಗಿಯನ್ನು ಪ್ರೀತಿ ಮಾಡಿದ್ದೇನೆ. ಇಬ್ಬರು ಮದುವೆಯಾಗಲು ಒಪ್ಪಿದ್ದೇವೆ. ಒಂದು ವೇಳೆ ನಾನು ಆಗಲ್ಲ ಎಂದರೆ ಆ ಹುಡುಗಿ ಸಾಯುತ್ತೇನೆ ಎನ್ನುತ್ತಿದ್ದಾಳೆ. ನನ್ನ ಹೆಂಡತಿಯೂ ಸಹ ಇನ್ನೂ ೩ ತಿಂಗಳಲ್ಲಿ ನೀನು ಇಷ್ಟಪಡದಿದ್ದರೆ ಸಾಯುವೆ ಎಂದಿದ್ದಾಳೆ. ಇತ್ತ ಹೆಂಡತಿಗೆ ಬೆಲೆ ಕೊಡಲೇ ಅಥವಾ ಪ್ರೇಯಸಿಗೆ ಬೆಲೆ ಕೊಡಲೇ? ಇಬ್ರೂ ನನ್ನ ಎರಡು ಕಣ್ಣುಗಳಿದ್ದಂತೆ. ನಮ್ಮ ೩ ಜನರ ಪ್ರಾಣ ನಿಮ್ಮ ಕೈಯಲ್ಲಿದೆ. ಸೂಕ್ತ ಪರಿಹಾರ ದೊರಕಿಸಿ ಕೊಡಿ.

ಬಿ.ಸಿ. ಅಜ್ಜಯ್ಯ, ಊರು ಬೇಡ

ಸಲಹೆ

ನಿಮ್ಮ ಪತ್ನಿ ಹಾಗೂ ನಿಮ್ಮನ್ನು ಪ್ರೀತಿಸುತ್ತಿರುವ ಸಹಪಾಠಿ ಇಬ್ಬರಿಗೂ ತಲೆ ನೆಟ್ಟಗಿಲ್ಲ. ನೀವು ಅವರಿಬ್ಬರ ಅಮಾಯಕತೆ, ನಿರ್ವಾಜ್ಯ ಪ್ರೇಮದೊಂದಿಗೆ ಹುಡುಗಾಟವಾಡುತ್ತಿರುವಿರಿ. ಕೈ ಹಿಡಿದ ಹೆಂಡತಿ ಇರುವಾಗ ಇನ್ನೊಬ್ಬ ಹುಡುಗಿಯನ್ನು ಮದುವೆಯಾಗುವುದು ಕಾನೂನು ಬಾಹಿರವೆಂದು ನಿಮಗೂ ನಿಮ್ಮ ಪ್ರೇಯಸಿಗೂ ತಿಳಿದಿರಬೇಕಲ್ಲವೇ? ಹೆಂಡತಿಯ ಸ್ಥಾನವನ್ನು ನಿಮ್ಮ ಪ್ರೇಯಸಿಗೆ ಕೊಡಲಾಗದು. ಬಟ್ಟೆ, ಚಪ್ಪಲಿ ಬದಲಿಸುವಂತೆ ಹೆಂಡತಿಯನ್ನು ಬದಲಿಸುತ್ತಾ ಹೋದರೆ ಹೇಗೆ? ನಿಮ್ಮ ಪ್ರೇಯಸಿ ನಿಮ್ಮನ್ನು ಎಷ್ಟು ನಂಬಬಹುದು? ಕೈಹಿಡಿದ ಹೆಂಡತಿಯನ್ನು ಬಿಟ್ಟು ಆಕೆಯನ್ನು ಮದುವೆಯಾದಿರಿ ಎಂದಿಟ್ಟುಕೊಳ್ಳಿ, ನಾಳೆ ಬೇರೊಬ್ಬ ಪ್ರೇಯಸಿ ಸಿಕ್ಕರೆ? ಅದರ ಬದಲು ನಿಮ್ಮ ಸಹಪಾಠಿಗೆ ಬುದ್ಧಿ ಹೇಳಿ ಯಾವುದಾದರೂ ಯೋಗ್ಯ ವರವನ್ನು ನೋಡಿ ಮದುವೆಯಾಗಿ ಸುಖವಾಗಿರಲಿ. ನೀವು ಕೈಹಿಡಿದ ಹೆಂಡತಿಯನ್ನು ಪತ್ನಿಯಾಗಿ ಕಾಯಾ, ವಾಚ, ಮನಸಾ ಒಪ್ಪಿ ಸುಖವಾಗಿ ಸಂಸಾರ ಮಾಡಿ. ಪ್ರೀತಿ, ಪ್ರೇಮ, ಪ್ರೇಯಸಿ ಎಲ್ಲಾ ಕ್ಷಣ ಭಂಗುರ. ನಿಮ್ಮ ಪ್ರೇಯಸಿ ನಿಜವಾಗಿಯೂ ನಿಮ್ಮನ್ನು ಪ್ರೀತಿಸುವುದಾದರೆ ನಿಮ್ಮ ದಾಂಪತ್ಯಕ್ಕೆ ಅಡ್ಡಿ ಬರುವುದಿಲ್ಲ.

ಹುಡುಗನಿಗೆ ನೌಕರಿ ಸಿಕ್ಕಿದೆ!

ನಾನು ಇಪ್ಪತ್ತು ವರ್ಷದ ಹುಡುಗಿ. ನನ್ನ ಹೆಸರು ರವೀನ. ಒಬ್ಬ ಹುಡುಗ ನನ್ನನ್ನು ಕಳೆದ ನಾಲ್ಕು ವರ್ಷಗಳಿಂದ ಪ್ರೀತಿಸುತ್ತಿದ್ದಾನೆ. ಆತನನ್ನು ಹಲವಾರು ರೀತಿ ಪರೀಕ್ಷಿಸಿ ನಾನೂ ಸೋತೆ. ನಾವಿಬ್ಬರೂ ಒಂದೇ ಜಾತಿ. ಆತನ ತಂದೆಯವರು ಒಪ್ಪಿಗೆ ಕೊಟ್ಟಿದ್ದರು. ಆದರೆ ನಮ್ಮ ದುರಾದೃಷ್ಟ ಆತನ ತಂದೆಯವರು ತೀರಿಕೊಂಡರು. ಅವರಿಗೆ ಈತ ಒಬ್ಬನೇ ಮಗ. ನಮ್ಮ ತಂದೆಯವರಿಗೆ ನಾವು ಪ್ರೀತಿಸುವುದು ಗೊತ್ತಾಗಿ ಸಮಾಧಾನ ರೀತಿಯಲ್ಲಿ ಬುದ್ಧಿವಾದ ಹೇಳಿದರು. ನಾನು ನಮ್ಮ ತಂದೆ ಮಾತನ್ನು ಮೀರುವುದಿಲ್ಲ. ನನ್ನ ಮೇಲೆ ನನ್ನ ತಂದೆಗೆ ಬಹಳ ನಂಬಿಕೆ, ಪ್ರೀತಿ. ನನ್ನ ತಂದೆಗೆ ಆತನ ನಡೆನುಡಿ ಸೋಮಾರಿತನ ಹಿಡಿಸುತ್ತಿರಲಿಲ್ಲ. 'ಆತನಿಗೆ ನೌಕರಿ ಸಿಗಲಿ ಆಮೇಲೆ ನೋಡೋಣ' ಎಂದು ಹೇಳಿದ್ದರು. ಅಲ್ಲಿಯ ತನಕ ನೀನು ಆ ಹುಡುಗನನ್ನು ಮಾತಾಡಿಸಬಾರದು ಎಂದಿದ್ದರು. ನಾವು ಹಾಗೇ ಮಾಡಿದೆವು. ಈಗ ಆತನಿಗೆ ಕೆಲಸ ಸಿಕ್ಕಿದೆ. ಆ ದಿವಸವೇ ಬಂದು ನಿನ್ನ ಅಪ್ಪನಿಗೆ ಹೇಳಿ ಒಪ್ಪಿಸು ಎಂದು ನನ್ನ ಗೆಳೆಯ ಕೇಳಿದ್ದಾನೆ. ಕೆಲಸ ಸಿಕ್ಕ ವಿಷಯ ತಂದೆಗೆ ಗೊತ್ತಿದ್ದೂ ಅವರು ಬೇರೆ ಗಂಡುಗಳಿಗೆ ನನ್ನನ್ನು ತೋರಿಸುತ್ತಿದ್ದಾರೆ. ನಾನು ಅವರಿಗೆ ಯಾವ ರೀತಿ ತಿಳಿಸಬೇಕೋ? ನನಗೆ ದೊಡ್ಡ ಕೊರಗಾಗಿದೆ. ನನಗೆ ಮತ್ತು ನಾನು ಪ್ರೀತಿಸುವ ಹುಡುಗನಿಗೆ ಇರುವ ಆಸೆ ಎಂದರೆ ಹಿರಿಯರ ಒಪ್ಪಿಗೆ ಪಡೆದು ಮದುವೆಯಾಗಬೇಕು ಎನ್ನುವುದು. ಹೇಗೆ ಮಾಡಲಿ.

- ಹೆಸರು, ಊರು ಬೇಡ.

ಸಲಹೆ

ನಿಮ್ಮ ತಂದೆ ನಿಮ್ಮ ಒಳಿತಿಗಾಗಿಯೇ ಹಾಗೆ ಮಾಡುತ್ತಿರಬೇಕು. ಆತನ ಸೋಮಾರಿತನ ನಿಮ್ಮ ತಂದೆಗೆ ಹಿಡಿಸುವುದಿಲ್ಲ ಎಂದ ಮೇಲೆ ಆತನಿಗೆ ನೌಕರಿ ಸಿಕ್ಕರೂ ಅದನ್ನು ದಕ್ಷತೆಯಿಂದ ಕಾಪಾಡಿಕೊಳ್ಳುವನೆಂಬ ನಂಬಿಕೆ ಅವರಿಗಿಲ್ಲವೆಂದು ಕಾಣುತ್ತದೆ. ಹೆಂಡತಿಯನ್ನು ಸಾಕಲಾರದವನ ಕೈಗೆ ಯಾವ ತಂದೆಯೂ ಮಗಳನ್ನು ಒಪ್ಪಿಸುವುದಿಲ್ಲ. ಹಿರಿಯರ ಒಪ್ಪಿಗೆ ಬೇಕಾದ್ದಲ್ಲಿ ಆ ಹುಡುಗ ನೌಕರಿಯಲ್ಲಿ ಕೆಲವು ಕಾಲ ಸಮರ್ಥನಾಗಿ ದುಡಿದು ತಾನು ಸೋಮಾರಿಯಲ್ಲ, ಸಂಪಾದಿಸಿ ಹೆಂಡತಿಯನ್ನು ಸಾಕುವ ತಾಕತ್ತಿದೆ ಎಂದು ತೋರಿಸಲಿ. ಅನಂತರ ವಿವಾಹವಾಗಬಹುದಲ್ಲವೇ?

ವಯಸ್ಸಿನ ಅಂತರ

ನನಗೆ ಈಗ ೧೮ ವರ್ಷ. ನಾನು ಪ್ರೀತಿಸುವ ಹುಡುಗಿಗೆ ೨೨ ವರ್ಷ. ನಾವು ಇನ್ನೂ ನಾಲ್ಕು ವರ್ಷ ಬಿಟ್ಟು ಮದುವೆಯಾಗೋಣ ಎಂದು ತೀರ್ಮಾನಿಸಿದ್ದೇವೆ. ಆಗ ನನಗೆ ೨೨ ವರ್ಷ ವಯಸ್ಸಾಗುತ್ತದೆ. ಕೆಲವರು ತನಗಿಂತಲೂ ದೊಡ್ಡವಳೊಂದಿಗೆ ಲೈಂಗಿಕ ಸಂಪರ್ಕ ಮಾಡಬಾರದು ಎಂದು ಹೇಳುತ್ತಾರೆ. ಈ ಸಂಬಂಧದಿಂದ ನನಗೆ ಯಾವುದೇ ದೈಹಿಕ ಹಾಗೂ ಲೈಂಗಿಕ ಶಕ್ತಿಗೆ ತೊಂದರೆಯಾಗುತ್ತದೆಯೇ?

ಹೆಸರು, ಊರು - ಇಲ್ಲ.

ಸಲಹೆ

ವಯಸ್ಸಿನ ಅಂತರಕ್ಕೂ ಮದುವೆಗೂ ಯಾವ ತೊಂದರೆಯೂ ಆಗದು. ಈಚೆಗೆ ಪಾಶ್ಚಾತ್ಯ ದೇಶವೊಂದರಲ್ಲಿ ಹದಿನಾಲ್ಕು, ಹದಿನಾರು ವರ್ಷದ ಹುಡುಗಿ ಮಗುವಿಗೆ ತಾಯಿಯಾದುದು ವೃತ್ತ ಪತ್ರಿಕೆ, ಟೀವಿಯಲ್ಲಿ ನೋಡಿಲ್ಲವೇ, ಓದಿಲ್ಲವೇ?



ಫೋಟೋಗ್ರಫಿ ಸಮಗ್ರ ಮಾಹಿತಿ



ಆಧುನಿಕ ಬದುಕಿನಲ್ಲಿ ಸಂದರ್ಭಕ್ಕೆ ಅನುಸಾರವಾಗಿ ಬಂದು ಹೋಗುವ ಛಾಯಾಚಿತ್ರಣವನ್ನು ಆನೇಕರು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಈ ಕಲೆಯ ಸಾಧ್ಯತೆಗಳನ್ನು ಸಮರ್ಥವಾಗಿ ದುಡಿಸಿಕೊಂಡು ಸಾಧನೆಗೈಯುವವರಿಗೆ ಮಾತ್ರ ಇಲ್ಲಿ ವಿಪುಲ ಅವಕಾಶವಿದೆ. ಹಾಗಾಗಿ ಫೊಟೋಗ್ರಫಿಯನ್ನು ವೃತ್ತಿಯನ್ನಾಗಿಯೋ, ಹವ್ಯಾಸವನ್ನಾಗಿಯೋ ತೆಗೆದುಕೊಳ್ಳುವ ಉತ್ಸಾಹಿಗಳಿಗೆ ಮಾರ್ಗದರ್ಶಕವಾಗುವಂತಹ ಸಮಗ್ರ ಲೇಖನವನ್ನು ನೀಡುತ್ತಿದ್ದೇವೆ. ಅನುಭವಿ ಹವ್ಯಾಸಿ ಛಾಯಾಚಿತ್ರಕಾರರಾದ ಡಾ. ಎಚ್. ಚಂದ್ರಶೇಖರ, ಎಸ್.ಹನುಮಂತ ಜೋಯಿಸ; ವೃತ್ತಿ ನಿರತ ಛಾಯಾಚಿತ್ರಕಾರರಾದ ವಸಂತ ಮಾಲವಿ ಹಾಗೂ ಸಿನಿಮಾ ಛಾಯಾಚಿತ್ರಕಾರ ಕೆ.ಎಂ. ವೀರೇಶ್ ಅವರು ಬರೆದ ಲೇಖನಗಳು ಆಸಕ್ತರಿಗೆ ಉಪಯುಕ್ತ ಮಾಹಿತಿ ಒದಗಿಸುತ್ತವೆ.



ಛಾಯಚಿತ್ರ ತೆಗೆಯುವ ಮುನ್ನ.....

ಮಾಲವಿ ವಸಂತ್

ಕ್ಯಾಮೆರಾ ಎಂದರೆ ಎಂತಹವರಿಗೂ ನೋಡಬೇಕೆನ್ನುವ ಕುತೂಹಲ ಕಾತುರಗಳು ಮೂಡುತ್ತವೆ. ಆದರೆ ಕ್ಯಾಮೆರಾದ ಬೆಲೆ ಕೇಳಿದ ಮೇಲೆ ಬಹಳಷ್ಟು ಆಸಕ್ತರು ತಮ್ಮ ಆಸೆಯನ್ನು ಮತ್ತೆ ಮೇಲೇಳದಂತೆ ಚಿವುಟಿ ಹಾಕಿ ಬಿಡುತ್ತಾರೆ. ಕೆಲವರು ತಮ್ಮ ಕೈಗೆಟುಕುವ ಕ್ಯಾಮೆರಾ ಖರೀದಿಸುತ್ತಾರೇನೊ ನಿಜ. ಆದರೆ ಅವರ ಭಾವನೆಗಳನ್ನು ಸೆರೆ ಹಿಡಿಯಲು ವಿಫಲರಾಗಿ ತಾವು ಖರೀದಿಸಿದ ಕ್ಯಾಮೆರಾವನ್ನು ಅತೀ ಕಡಿಮೆ ಬೆಲೆಗೆ ಮಾರಿ ಕೈ ತೊಳೆದುಕೊಂಡು ಬಿಡುತ್ತಾರೆ.

ಅತ್ಯುತ್ತಮ ಛಾಯಚಿತ್ರಗಳನ್ನು ನೋಡಿದ ಮೇಲಂತೂ ಕ್ಯಾಮೆರಾ ಖರೀದಿಯ ಆಸೆಗಳು ಪುನಃ ಪುನಃ ಚಿಗುರೊಡೆಯುತ್ತವೆ. ದುಬಾರಿ ಹವ್ಯಾಸವಾದ ಇದು ಹೆಚ್ಚಾಗಿ ಉಳ್ಳವರ ಬಳಿಯೇ ಇರುತ್ತದೆ. ಅದೇನೆ ಆಗಲಿ ನಾನು ಉತ್ತಮ ಛಾಯಗ್ರಾಹಕನೆನಿಸಿಕೊಳ್ಳುವ ಛಲ ಹೊಂದಿದವರು ಕಷ್ಟ ಪಟ್ಟು ಈ ಹವ್ಯಾಸವನ್ನು ಬೆಳೆಸಿಕೊಳ್ಳುತ್ತಾರೆ. ಪರಿಸ್ಥಿತಿಗಳನ್ನು ಛಾಲೆಂಜ್ ಆಗಿ ಸ್ವೀಕರಿಸುವವರಿಗೆ ಇದೇನೂ ದೊಡ್ಡ ಹವ್ಯಾಸವೆನಿಸುವುದಿಲ್ಲ.

ನಮ್ಮ ಬಳಿ ಲಭ್ಯವಿರುವ ಕ್ಯಾಮೆರಾಗಳಲ್ಲಿಯೇ ಸ್ವಲ್ಪ ಬುದ್ಧಿ ಬಳಸಿ ಚಿತ್ರಗಳನ್ನು ಸೆರೆ ಹಿಡಿದರೆ ಅದಕ್ಕಿಂತ ಹೆಚ್ಚಿನ ಸಂತೋಷ ಬೇರೆಲ್ಲೂ ಸಿಗುವುದಿಲ್ಲ. ಛಾಯಚಿತ್ರ ತೆಗೆಯಲು ಮೊದ ಮೊದಲು ಕಪ್ಪು ಬಿಳುಪು ಫಿಲ್ಮ್ ಅನ್ನು ಬಳಸಬೇಕು. ಕಲರ್ ಫಿಲ್ಮ್ ಮತ್ತು ಅದರ ಪ್ರೊಸೆಸಿಂಗ್ ವೆಚ್ಚ ಹೆಚ್ಚಾಗುವುದರಿಂದ ಕಲಿಕೆಯ ಹಂತದ ಛಾಯಚಿತ್ರ ಹವ್ಯಾಸಿಗರು ಕಪ್ಪು ಬಿಳುಪು ಫಿಲ್ಮ್ ಬಳಸುವುದು ಸೂಕ್ತ. ಮೊದ ಮೊದಲು ಸ್ವಲ್ಪ ಹಾಳಾಗಬಹುದು. ಅವುಗಳನ್ನು ಗಣನೆಗೆ ತೆಗೆದುಕೊಳ್ಳದೇ, ನಾವು ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಮತ್ತೆ ಮತ್ತೆ ಪ್ರಯತ್ನಿಸಿದರೆ ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ.

ಇತ್ತೀಚಿನ ಒಂದು ದಶಕದಿಂದ ಕ್ಯಾಮೆರಾಗಳ ತಂತ್ರಜ್ಞಾನದಲ್ಲಿ ಬಹಳಷ್ಟು ಬದಲಾವಣೆಯಾಗಿದೆಯಲ್ಲದೇ ಯಾರಾದರೂ ಬಳಸಬಹುದಾದಷ್ಟು ಸುಲಭವಾದ ತಂತ್ರಜ್ಞಾನವನ್ನು ಕ್ಯಾಮೆರಾಗಳಲ್ಲಿ ಅಳವಡಿಸಲಾಗಿದೆ. ಚಿಕ್ಕ ಮಕ್ಕಳು ಸಹ ಆಪರೇಟ್ ಮಾಡಬಹುದಾದಂತಹ ಕ್ಯಾಮೆರಾಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಅತೀ ಸೂಕ್ಷ್ಮ ತಂತ್ರಜ್ಞಾನದ ದುಬಾರಿ ಬೆಲೆಯ ಕ್ಯಾಮೆರಾಗಳು ಒಂದು ಕಡೆ ದೊರೆತರೆ, ಸ್ಪರ್ಧಾತ್ಮಕ ಯುಗವಾದ ಇಂದು ಕಡಿಮೆ ಬೆಲೆಯ ಒರಟಾಗಿ ಬಳಸಬಹುದಾದ ಕ್ಯಾಮೆರಾಗಳು ಇನ್ನೊಂದೆಡೆ ಜನಪ್ರಿಯವಾಗುತ್ತಿವೆ. ಇತ್ತೀಚಿನ ದಿನಗಳಲ್ಲಿ ಕೆಲ ಪ್ರತಿಷ್ಠಿತ ಕಂಪನಿಗಳು ಮಕ್ಕಳು ಸುಲಭವಾಗಿ ಬಳಸಬಲ್ಲ ಕ್ಯಾಮೆರಾಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿವೆ.

ಛಾಯಚಿತ್ರ ತೆಗೆಯಲು ಹೇಳಿಕೊಡುವ ವಿದ್ಯಾಲಯಗಳಿವೆ, ಮುಕ್ತ ಮನಸ್ಸಿನ ವೃತ್ತಿ ಛಾಯಗ್ರಾಹಕರಿದ್ದಾರೆ. ಇವರ ಲಾಭವನ್ನು ಛಾಯಗ್ರಾಹಕನಾಗುವ ಕನಸನ್ನು ಹೊಂದಿದವರು ಪಡೆಯುವ ಮೂಲಕ ತಮ್ಮ ಕನಸುಗಳನ್ನು ನನಸನ್ನಾಗಿಸಿಕೊಳ್ಳಲು ಸಾಧ್ಯ.

ಕಪ್ಪು ಬಿಳಿಪಿನ ಚಿತ್ರಗಳನ್ನು ನೋಡಿದಾಗ ಸಿಕ್ಕಷ್ಟು ಸಂತೋಷ ವರ್ಣಛಾಯ ಚಿತ್ರಗಳಲ್ಲಿ ದೊರೆಯುವುದಿಲ್ಲವಾದರೂ ಹವ್ಯಾಸಿ ಛಾಯಗ್ರಾಹಕರು ಹೆಚ್ಚಾಗಿ ವರ್ಣ ಚಿತ್ರಗಳನ್ನು ತೆಗೆಯಲು ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಒಳ್ಳೆಯ ಚಿತ್ರ ಸೆರೆಹಿಡಿಯಲು ಕೆಲ ಮಾಹಿತಿಗಳು

ಸವಿ ನೆನಪುಗಳನ್ನು ಹಾಗೆಯೇ ಹಸಿರಾಗಿಸಿಟ್ಟುಕೊಳ್ಳಲು, ಕ್ಯಾಮೆರಾವನ್ನು ಯಾವಾಗಲೂ ರೆಡಿಯಾಗಿಟ್ಟುಕೊಂಡಿರಬೇಕು. ಏನಾದರೂ ಘಟನೆಗಳು ನಡೆಯುತ್ತಿರುವಾಗಲೇ ಪ್ರಯತ್ನಿಸಿದರೆ ವೃತ್ತಿ ಛಾಯಾಗ್ರಾಹಕರನ್ನು ಮೀರಿಸುವಷ್ಟು ಉತ್ತಮ ಹಾಗು ಸುಂದರ ಚಿತ್ರಗಳನ್ನು ಸೆರೆ ಹಿಡಿಯಬಹುದು.

❑ ನೈಸರ್ಗಿಕವಾದ ಸೆರೆ : ಚಿತ್ರ ಸೆರೆಹಿಡಿಯುವುದು ಗೊತ್ತಾಗಿಬಿಟ್ಟರೆ ಬಹಳಷ್ಟು ಜನ ತಮ್ಮ ಮುಖವನ್ನು ಗಂಭೀರದ ಭಾವನೆಗಳಿಂದ ತುಂಬಿಕೊಂಡು ಬಿಡುತ್ತಾರೆ. ಆದಕಾರಣ ಅವರಿಗೆ ಗೊತ್ತಿಲ್ಲದಂತೆ ಚಿತ್ರಗಳನ್ನು ಸೆರೆಹಿಡಿದು ನೋಡಿ-ನೀವಂದುಕೊಂಡದ್ದಕ್ಕಿಂತ ಉತ್ತಮ ಚಿತ್ರಗಳನ್ನು ಸೆರೆಹಿಡಿಯಬಹುದು.

❑ ಮಕ್ಕಳು ಆಡುವಾಗ : ಮಕ್ಕಳು ತಮ್ಮ ಪಾಡಿಗೆ ತಾವು ಆಡುವಾಗ ಮೈ ಮರೆತಿರುತ್ತವೆಯಾದ್ದರಿಂದ ಆ ಸಮಯದಲ್ಲಿ ಕ್ಯಾಮೆರಾ ಕ್ಲಿಕ್ಕಿಸಿದರೆ ತುಂಬಾ ಚೆನ್ನಾಗಿರುವ ದೃಶ್ಯಗಳು ಸಿಗುತ್ತವೆ. ಫೋಟೋ ತೆಗೆಯುವ ಸಲುವಾಗಿ ಮಕ್ಕಳನ್ನು ಆಡಲು ಹೇಳಿದರೆ ಆ ದೃಶ್ಯಗಳು ಅಷ್ಟೊಂದು ಸಹಜವಾಗಿರುವುದಿಲ್ಲ.

ಭಾವಚಿತ್ರಗಳಲ್ಲಿ ಎಲ್ಲಾ ರೀತಿಯ ಭಾವನೆಗಳು ಮೂಡುವ ಸಲುವಾಗಿ ಬಹಳ ಹತ್ತಿರದಿಂದ ಚಿತ್ರ ಸೆರೆಹಿಡಿದರೆ ಒಳ್ಳೆಯದು. ದೂರದಿಂದ ತೆಗೆದರೆ ಫೋಟೋದ ಯಾವುದೋ ಭಾಗದಲ್ಲಿ ನೋಡಿದಂತಾಗುತ್ತದೆಯಾದ್ದರಿಂದ ಆದಷ್ಟು ಹತ್ತಿರದಿಂದಲೇ ಫೋಟೋ ತೆಗೆಯಬೇಕು.

❑ ಸೂಕ್ತ ಆ್ಯಂಗಲ್‌ನ್ನು ಮೊದಲೇ ಆಯ್ದುಕೊಂಡು ಚಿತ್ರವನ್ನು ಸೆರೆ ಹಿಡಿಯಬೇಕು. ಇದನ್ನು ಟಿ. ಎಲ್. ಆರ್ ಮತ್ತು ಎಸ್. ಎಲ್. ಆರ್ ಕ್ಯಾಮೆರಾಗಳೆರೆಡರಲ್ಲೂ ಪ್ರಯತ್ನಿಸಬಹುದು. (ಟಿ. ಎಲ್. ಆರ್. Twin lens Re-

flex : ಎಸ್. ಎಲ್. ಆರ್. single lens reflex) ಪಾಕೆಟ್ ಕ್ಯಾಮೆರಾಗಳಲ್ಲಿ ಶೇಕಡಾ ೯೫ ರಷ್ಟು ವಿಧಗಳು ಟಿ. ಎಲ್. ಆರ್. ನಿಂದ ಕೂಡಿದ್ದಾಗಿರುತ್ತವೆ. ತಲೆಯ ಮೇಲಿಂದ ಚಿತ್ರ ಸೆರೆಹಿಡಿಯುವುದಕ್ಕಿಂತ ಸ್ವಲ್ಪ ಪಕ್ಕದಿಂದ ಚಿತ್ರಗಳನ್ನು ಸೆರೆಹಿಡಿದರೆ ಮನ ಸೆಳೆಯುವಂತಹ ದೃಶ್ಯವನ್ನು ಸೆರೆಹಿಡಿಯಬಹುದು.

❑ ಯಾವುದಾದರೂ ಚಿತ್ರವನ್ನು ಸೆರೆಹಿಡಿಯುವಾಗ ಒಂದಕ್ಕಿಂತ ಹೆಚ್ಚು ಚಿತ್ರಗಳನ್ನು ಮತ್ತು ಬೇರೆ ಬೇರೆ ಆ್ಯಂಗಲ್‌ನಲ್ಲಿ ಸೆರೆಹಿಡಿಯಲು ಪ್ರಯತ್ನಿಸಬೇಕು. ಹೀಗೆ ಪ್ರಯತ್ನಿಸಿದ್ದಲ್ಲಿ ನೈಸರ್ಗಿಕವಾದ ಭಾವನೆಗಳನ್ನು ಹೊರಚೆಲ್ಲುವಂತಹ, ನೆನಪಿನಲ್ಲಿ ಉಳಿಯುವಂತಹ ಚಿತ್ರಗಳನ್ನು ಪಡೆಯಬಹುದು.

❑ ಬಯಲು ಪ್ರದೇಶದಲ್ಲಿ ಛಾಯಚಿತ್ರಗಳನ್ನು ಸೆರೆಹಿಡಿಯುವಾಗ ಕೊಂಚ ಜಾಣ್ಮೆಯನ್ನು ಬಳಸಬೇಕು. ನಾವು ತೆಗೆಯಬೇಕೆಂದುಕೊಂಡಿರುವ ವಸ್ತುವಿನ ಮೇಲೆ ಗಾಢವಾದ ನೆರಳು ಇದ್ದ ಪಕ್ಷದಲ್ಲಿ ಫ್ಲಾಶ್‌ನ್ನು ಬಳಸುವುದು ಸೂಕ್ತ. ಇಲ್ಲವಾದಲ್ಲಿ ಚಿತ್ರಗಳು ಕಪ್ಪಾಗಿ ಕೆಟ್ಟು ಹೋಗುವ ಸಂಭವವಿರುತ್ತದೆ. ಕ್ಯಾಮೆರಾ ಜೊತೆ ಯಾವಾಗಲೂ ಫ್ಲಾಶ್‌ನ್ನು ಇಟ್ಟುಕೊಂಡು ಹೋಗುವುದು ಸಮಂಜಸ.

❑ ಒಳಾಂಗಣದಲ್ಲಿ ಛಾಯಾಚಿತ್ರ ಸೆರೆಹಿಡಿಯ ಬಯಸಿದಲ್ಲಿ ಫ್ಲಾಶ್ ಅನ್ನು ಬಳಸಲೇಬೇಕಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ಇದ್ದ ಬೆಳಕಿನಲ್ಲಿಯೇ ಉತ್ತಮ ಆ್ಯಂಗಲ್‌ನ್ನು ಉಪಯೋಗಿಸಿ ಚಿತ್ರ ಸೆರೆಹಿಡಿಯುವುದು ಸರ್ವೇಸಾಮಾನ್ಯವಾಗಿದ್ದು, ಇಂತಹ ಚಿತ್ರಗಳೇ ಅತೀ ಆಕರ್ಷಣೀಯವಾಗಿ ಮೂಡಿಬರುತ್ತವೆ.

ಪ್ರವಾಸ ಮತ್ತು ರಮ್ಯನೋಟ (ಭೂ ದೃಶ್ಯ)ಗಳನ್ನು ಸೆರೆಹಿಡಿಯುವಾಗ

❑ ಭೂ ದೃಶ್ಯಗಳನ್ನು ಕಣ್ಣಿಗೆ ಕಾಣುವ ರೀತಿಯಲ್ಲಿ ಸೆರೆಹಿಡಿಯಬೇಕಾದರೆ ಸಂಯೋಜನೆಯ ಬಗ್ಗೆ ಸ್ವಲ್ಪ ಮಾಹಿತಿ ಇರಬೇಕು. ಇದಿಲ್ಲದಿದ್ದರೆ ಭೂಮಟ್ಟದಲ್ಲಿಯೇ ಸೆರೆ ಹಿಡಿದ ಚಿತ್ರಗಳು ಮನಸ್ಸನ್ನು ಸೆಳೆಯುವಲ್ಲಿ ಹಿಂದೆ ಬೀಳುತ್ತವೆ. ಭೂ ದೃಶ್ಯಗಳನ್ನು ತೆಗೆಯುವ ಮುಂಚೆ ಮೊದಲೇ ಸುತ್ತಲೂ ಒಮ್ಮೆ ನೋಡಿಕೊಂಡು ನಂತರ ಚಿತ್ರ ಸೆರೆಹಿಡಿಯುವ ಸ್ಥಳವನ್ನು ನಿರ್ಧರಿಸಬೇಕು.

❑ ಚಿತ್ರ ಸೆರೆಹಿಡಿಯುವಾಗ ಅದರಲ್ಲೂ ವಿಶೇಷವಾಗಿ ಲಂಬವಾಗಿ ಚಿತ್ರ ಸೆರೆಹಿಡಿಯುವಾಗ ದಿಗಂತ (ಬಾನಂಚು) ಚಿತ್ರದ ಮಧ್ಯದಲ್ಲಿ ಬರುವಂತೆ ಚಿತ್ರ ತೆಗೆಯಬಾರದು. ಹೀಗೆ ತೆಗೆದರೆ ನಿರ್ವಿಶೇಷದ ಚಿತ್ರ ತೆಗೆದಂತಾಗುತ್ತದೆ. ಚಿತ್ರದ ಎರಡನೇ ಮೂರು ಭಾಗದಷ್ಟು ಆಕಾರ ಒಂದನೇ ಮೂರರಷ್ಟು ಭೂಮಿ ಇದ್ದರೆ ಚೆನ್ನ.

❑ ಚಿತ್ರಗಳನ್ನು ಸೆರೆ ಹಿಡಿಯುವ ಮುನ್ನ ಮನಸ್ಸಿನ ಮೇಲೆ ಅಚ್ಚೊತ್ತುವಂತಹ ದೃಶ್ಯಗಳನ್ನು ಹುಡುಕಬೇಕು, ಕಾಂತಿಯುಳ್ಳ, ಸೌಂದರ್ಯವಾದ ಕಣ್ಣಿಗೆ ತಂಪನ್ನೀಯುವ ವರ್ಣದ ಸ್ಥಳಗಳನ್ನು ಆಯ್ದುಕೊಳ್ಳುವಲ್ಲಿ ಸ್ವಲ್ಪ ಜಾಣ್ಮೆ ವಹಿಸಬೇಕು.

❑ ಸೂರ್ಯ ಮುಳುಗುವಾಗ ಅಥವಾ ಬೆನ್ನ ಹಿಂದೆ ಪ್ರಕಾಶಮಾನವಾದ ಬೆಳಕನ್ನು ಉಪಯೋಗಿಸಿಕೊಂಡು ಸಹ ಉತ್ತಮ ಚಿತ್ರಗಳನ್ನು ಸೆರೆ ಹಿಡಿಯಬಹುದು. ಸೂರ್ಯ ಮುಳುಗುವ ಸಂದರ್ಭದಲ್ಲಿ ಅಥವಾ ಸೂರ್ಯ ಹುಟ್ಟುವಾಗಿನ ನೆರಳಿನ ರೂಪವು ತುಂಬಾ ಸುಂದರ ಕಾಣುತ್ತದೆ. ಈ ಸಂದರ್ಭದಲ್ಲಿ ಕೆಲವು ಬಾರಿ ಫ್ಲಾಶ್‌ನ್ನು ಬಳಸಬೇಕಾಗುತ್ತದೆ. ಫ್ಲಾಶ್ ಬಳಸಬೇಕೋ ಬೇಡವೋ ಎನ್ನುವುದು ಛಾಯಾಗ್ರಾಹಕರ ಅಭಿರುಚಿಗೆ ಬಿಟ್ಟ ವಿಷಯವಾಗಿರುತ್ತದೆ.

❑ ಭೂ ದೃಶ್ಯಗಳನ್ನು ಸೂರ್ಯನು ಮರೆಯಾದಾಗ (ಮೋಡಗಳಿಂದ) ಸೆರೆಹಿಡಿಯುವುದಕ್ಕಿಂತ ಸೂರ್ಯನ ಬೆಳಕಿನಲ್ಲಿ ತೆಗೆದರೆ ಮಾತ್ರ ಚಿತ್ರವನ್ನು ಅರ್ಥಮಾಡಿಕೊಳ್ಳಬಹುದು.

❑ ನೈಸರ್ಗಿಕವಾಗಿ ದೊರೆಯುವ ಅವಕಾಶಗಳನ್ನು ಬಳಸಿಕೊಂಡು ಉತ್ತಮ ಚಿತ್ರಗಳನ್ನು ಸೆರೆಹಿಡಿಯಬಹುದು. ಉದಾಹರಣೆಗೆ ಕಾಮನಬಿಲ್ಲು ಮೂಡಿದಾಗ ಕಟ್ಟಡಗಳ ಚಿತ್ರಗಳನ್ನು ತೆಗೆದರೆ ಅತ್ಯುತ್ತಮ ಚಿತ್ರ ಪಡೆಯಬಹುದು. ತೆಗೆದ ಚಿತ್ರಗಳು ವಿಶಿಷ್ಟವಾಗಿರಬೇಕಾಗಿದ್ದಲ್ಲಿ ನಿಸರ್ಗದ ಜೊತೆ ಈಜಿದಾಗಲೇ ಸಾಧ್ಯವಾಗುತ್ತದೆ.

❑ ಭೂ ದೃಶ್ಯಗಳನ್ನು ಸೆರೆಹಿಡಿಯುವಾಗ ಕೆಲವೊಮ್ಮೆ ಕ್ಯಾಮೆರಾ ಸ್ಟ್ಯಾಂಡ್‌ಗಳು ಬಹು ಮಹತ್ವದ ಪಾತ್ರವನ್ನು ವಹಿಸುತ್ತವೆ. ವಿಸ್ತೃತ ದೃಶ್ಯಗಳನ್ನು ಸೆರೆಹಿಡಿಯಬೇಕಾದರೆ ಉತ್ತಮವಾದ ಸ್ಟ್ಯಾಂಡ್‌ನ್ನು ಬಳಸಿ ಮೂರ್‍ನಾಲ್ಕು ಚಿತ್ರಗಳನ್ನು ಕ್ರಮವಾಗಿ ಅಡ್ಡ ಅಥವಾ ಲಂಬವಾಗಿ ತೆಗೆದು ನಂತರ ಒಂದರ ಪಕ್ಕದಲ್ಲೊಂದು ಅಂಟಿಸಿದರೆ ಉತ್ತಮ ಚಿತ್ರ ಸಿದ್ಧವಾಗುತ್ತದೆ.

❑ ಕ್ಯಾಮೆರಾ ಲೆನ್ಸ್ ಮುಂದೆ ಕೈ ಬೆರಳು ಅಥವಾ ಕ್ಯಾಮೆರದ ಬೆಲ್ಟ್ ಬೀಳದಂತೆ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ. ಕ್ಯಾಮೆರಾವನ್ನು ಅಡ್ಡವಾಗಿ ಅಥವಾ ಲಂಬವಾಗಿ ಹಿಡಿಯಬೇಕೇ ಹೊರತು ವಾಲಿದಂತೆ ಹಿಡಿಯಬಾರದು. ಚಿತ್ರಸೆರೆ ಹಿಡಿಯುವಾಗ ಕ್ಯಾಮೆರಾ ಸ್ವಲ್ಪವೂ ಅಲುಗಾಡದಂತೆ ಎಚ್ಚರ ವಹಿಸಬೇಕು. ಫಿಲ್ಮ್ ಮೇಲೆ ತಿಳಿಸಿರುವ ಫಿಲ್ಮ್ ವೇಗವನ್ನು ಕ್ಯಾಮೆರಾದಲ್ಲಿ ಹೊಂದಿಸಬೇಕು. ಫೋಟೋ ಸರಿಬರದಿರಲು ವೇಗವನ್ನು ಹೊಂದಿಸದ ಕಾರಣಗಳು ಅನೇಕ ಬಾರಿ ಆಗುತ್ತದೆ. ಈ ಎಚ್ಚರಿಕೆ ವಹಿಸದಿದ್ದರೆ ಚಿತ್ರಗಳು ಬಿಳುಪಾಗಬಹುದು ಅಥವಾ ಕಪ್ಪಾಗಿ ಹಾಳಾಗಬಹುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ನಮ್ಮ ಬಳಿ ಇದ್ದ ಕ್ಯಾಮೆರಾಗಳಿಂದಲೇ ಚಿತ್ರಗಳನ್ನು ಸೆರೆಹಿಡಿದರೆ ಯಾರಾದರೂ ಅತ್ಯುತ್ತಮ ಛಾಯಾಗ್ರಾಹಕರಾಗಬಹುದು ಎನ್ನುವುದರಲ್ಲಿ ಸಂಶಯವೇ ಇಲ್ಲ. ಯಾವುದೇ ವಿದ್ಯೆ ಹುಟ್ಟಿನಿಂದ ಬಂದಿರುವುದಿಲ್ಲ. ಮರಳಿ ಮರಳಿ ಪ್ರಯತ್ನಿಸಿದಾಗ ನಾವು ಯಶಸ್ವಿಯಾಗಲು ಸಾಧ್ಯ. ●

ಭಾರೀ ಬೆಲೆಯ ಕ್ಯಾಮೆರಾ!

Hasselblad (ಹ್ಯಾಸೆಲ್‌ಬ್ಲಾಡ್) ಎನ್ನುವ ಎಸ್.ಎಲ್.ಆರ್. ಕ್ಯಾಮೆರಾವು ಇಡೀ ಕ್ಯಾಮೆರಾ ಕ್ಷೇತ್ರದಲ್ಲಿ ಅತೀ ಹೆಚ್ಚಿನ ಬೆಲೆಯದಾಗಿರುತ್ತದೆ ಇದರ ಬೆಲೆ ಕೇವಲ ೪,೬೦,೦೦೦ ರೂಪಾಯಿಗಳು! ಅತೀ ಕಡಿಮೆ ಬೆಲೆಯ ಕ್ಯಾಮೆರಾವೆಂದರೆ ಪ್ರೀಮಿಯರ್ ಎನ್ನುವ ಟಿ.ಎಲ್.ಆರ್. ಕ್ಯಾಮೆರಾವಾಗಿದೆ. ಇದರ ಬೆಲೆ ಕೇವಲ ೬೦೦ ರೂಪಾಯಿಯಾಗಿದೆ.

ಅತ್ಯುತ್ತಮ ಕ್ಯಾಮೆರಾಗಳ ಗುಂಪುಗಳ ಸಾಲಿಗೆ ಕ್ಯಾನನ್, ನಿಕಾನ್, ಮಿನೋಲ್ಟ್‌ಗಳು ಸೇರ್ಪಡೆಯಾಗುತ್ತವೆ. ಫ್ಲಾಶ್ ಲೈಟ್‌ಗಳ ಸಾಲಿಗೆ ಮಿನೋಲ್ಟ್; ವಿವಿಟಾರ್ ಇನ್ನು ಮುಂತಾದವುಗಳು ಸೇರುತ್ತವೆ. ರಿಕೋ, ಕೋನಿಕಾ, ಯಶಿಕಾ, ಕೊಸಿನಾ, ಪೆಂಟಾಕ್ಸ್, ಕೊಡಾಕ್, ಒಲಂಪಸ್, ಮಾಮಿಯಾ ಕ್ಯಾಮೆರಾಗಳು ಉತ್ತಮ ಕ್ಯಾಮೆರಾಗಳಾಗಿದ್ದು ಈ ಎಲ್ಲಾ ಕಂಪನಿಗಳಲ್ಲಿ ಟಿ.ಎಲ್.ಆರ್. ಮತ್ತು ಎಸ್.ಎಲ್.ಆರ್.ಕ್ಯಾಮೆರಾಗಳು ದೊರೆಯುತ್ತವೆ.



ನೀವು ಪತ್ರಿಕಾ ಛಾಯಾಗ್ರಾಹಕರಾಗಬೇಕೆ?

ಕೆ.ಎಂ. ವೀರೇಶ್

ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಒಂದು ಛಾಯಾಚಿತ್ರ ಪ್ರಕಟಗೊಂಡಿತು. ಮುರಿದು ಬಿದ್ದ ಜಟಕಾಗಾಡಿಯ ಸಾಮಾನ್ಯ ಚಿತ್ರವದು. ಆದರೆ ಆ ಚಿತ್ರದ ಬ್ಯಾಕ್ ಡ್ರಾಪ್‌ನಲ್ಲಿ (ಬೃಹತ್ ಕಲ್ಲುಕಟ್ಟಡ) ವಿಧಾನಸೌಧ. ಪತ್ರಿಕೆಯಲ್ಲಿ ಪ್ರಕಟಗೊಂಡ ಆ ಛಾಯಾಚಿತ್ರಕ್ಕೆ ವಿವರಣೆ ಬೇಕಾಗಿರಲಿಲ್ಲ. ಅಡಿ ಟಿಪ್ಪಣಿ ಅಗತ್ಯವಿರಲಿಲ್ಲ. ಆದರೂ ಆ ಛಾಯಾಚಿತ್ರ ಲಕ್ಷಾಂತರ ಮಂದಿ ಯೊಂದಿಗೆ ಮಾತುಕತೆ ನಡೆಸಿತು. ಕುಸಿದು ಬಿದ್ದ ಆಡಳಿತ ವ್ಯವಸ್ಥೆಗೆ ಕನ್ನಡಿ ಹಿಡಿದ ಛಾಯಾಚಿತ್ರ ಅಂದಿನ ಆ ಪತ್ರಿಕೆಯ ಹೈಲೈಟ್. ನೂರು ವಾಕ್ಯಗಳಲ್ಲಿ ಹೇಳಲು ಸಾಧ್ಯವಿಲ್ಲದ್ದನ್ನು ಒಂದು ಛಾಯಾಚಿತ್ರ ಹೇಳಲು ಸಾಧ್ಯವಾದರೆ ಅಕ್ಷರ ರೂಪಿ ಪತ್ರಿಕೆಗಳೇ ಬೇಕಾಗಿರಲಿಲ್ಲವೇನೋ?...! ಇದು ಪತ್ರಿಕೆಯತ್ತ ಬೀರುವ ಅಸಡ್ಡೆಯ ದೃಷ್ಟಿಯಲ್ಲ. ಛಾಯಾಚಿತ್ರದತ್ತ ಬೀರುವ ಅಭಿಮಾನದ ನೋಟ....

ದಿನಪತ್ರಿಕೆಗಳಿಗೆ ಸಂಬಂಧಿಸಿದಂತೆ ಎರಡು ರೀತಿಯ ಛಾಯಾಚಿತ್ರಗಳಿವೆ. ಒಂದು ತಾನೇ ಸುದ್ದಿಯಾಗುವುದು. ಮತ್ತೊಂದು ಸುದ್ದಿ ಯೊಂದಿಗೆ ಬೆರೆತು ಹೋಗುವುದು. ಛಾಯಾ ಗ್ರಾಹಕರ ಸಾಮರ್ಥ್ಯದ ಮೇಲೆ ಇದರ ನಿರ್ಧಾರ ವಾಗುತ್ತದೆ.

ರೂಢಿಯಲ್ಲಿರುವ ಮಾತೊಂದಿದೆ. 'ಕ್ಯಾಮರಾ ಹಿಡಿದವರೆಲ್ಲಾ ಉತ್ತಮ ಛಾಯಾ ಗ್ರಾಹಕರಾಗಲು ಸಾಧ್ಯವಿಲ್ಲ. ಉತ್ತಮ ಛಾಯಾ ಗ್ರಾಹಕರೆಲ್ಲಾ ಪತ್ರಿಕಾ ಛಾಯಾಗ್ರಾಹಕರಾಗಲು ಸಾಧ್ಯವಿಲ್ಲ'.

ಪತ್ರಿಕಾ ಛಾಯಾಗ್ರಾಹಕ ತಾನು ಕ್ಲಿಕ್ಕಿಸಿದ ಉತ್ತಮ ಚಿತ್ರಗಳ ಬಗ್ಗೆ ಹೆಮ್ಮೆಪಟ್ಟುಕೊಳ್ಳುತ್ತಾ ನಾದರೂ ತಾನು ಕ್ಲಿಕ್ಕಿಸಬಹುದಾಗಿದ್ದ ಅತ್ಯುತ್ತಮ ಚಿತ್ರಗಳನ್ನು ತೆಗೆಯಲಾಗಲಿಲ್ಲವೆಂಬ ಕೊರಗು ಆತನಲ್ಲಿ ಇದ್ದೇ ಇರುತ್ತದೆ. ಈ ವಿಚಾರದಲ್ಲಿ ಅತೃಪ್ತಿಯೇ ಜೀವಂತಿಕೆಯ ಲಕ್ಷಣ. ಒಂದು ಚಿತ್ರದ ಅತೃಪ್ತಿ ಮತ್ತೊಂದು ಚಿತ್ರದ ಜೀವ ನೆಲೆಯಾಗಬಲ್ಲದು. ನಿರ್ಜೀವ ಬ್ರೋಮೈಟ್‌ನಲ್ಲಿ ಜೀವ ಸಂಚಾರವಾಗುವುದೇ ಇಂಥಾ ಸಂದರ್ಭ ಗಳಲ್ಲಿ.

ಪತ್ರಿಕಾ ಛಾಯಾಗ್ರಾಹಣದಲ್ಲೇ ಅನೇಕ ವಿಭಾಗಗಳಿವೆ. ರಾಜಕೀಯ, ಕ್ರೈಮ್, ಕ್ರೀಡೆ, ಸಿನಿಮಾ.... ಇತ್ಯಾದಿ. ಸಾಮಾನ್ಯವಾಗಿ ಒಂದು ಪತ್ರಿಕೆಯಲ್ಲಿ ಆತ ಕೆಲಸ ಮಾಡಬಲ್ಲವನಾದರೆ, ಆತ ಎಲ್ಲಾ ವಿಭಾಗದಲ್ಲೂ ಫೋಟೋ ತೆಗೆಯುವನಾಗಿರುತ್ತಾನೆ. ಕೆಲವರು ಯಾವು ದಾದ್ರೂ ಒಂದು ವಿಭಾಗವನ್ನ ಆರಿಸಿಕೊಂಡು ಆ ವಿಭಾಗದಲ್ಲೇ ಪರಿಣಿತಿ ಹೊಂದಲು ಆಶಿಸುತ್ತಾರೆ.

ಸಾಮಾನ್ಯವಾಗಿ ದಿನಪತ್ರಿಕೆಯ ಛಾಯಾ ಗ್ರಾಹಕರು ಗ್ಲಾಮರ್ ಛಾಯಾ ಚಿತ್ರಗಳನ್ನು ಅಂದರೆ ಸಿನಿಮಾ ಛಾಯಾಚಿತ್ರಗಳನ್ನು ಕ್ಲಿಕ್ಕಿಸಲು ಅಷ್ಟಾಗಿ ಆಸಕ್ತಿ ತೋರುವುದಿಲ್ಲ. ಕಾರಣ ಒಂದು ಸಿನಿಮಾ ಶೂಟಿಂಗೆಂದು ಹೋದರೆ ಒಂದು ದಿನವೆಲ್ಲಾ ಅಲ್ಲಿ ಕಳೆಯಬೇಕಾಗುತ್ತದೆ. ಇಲ್ಲಿ ವ್ಯರ್ಥವಾಗುವಷ್ಟು ಸಮಯ ಬೇರೆ ವಿಭಾಗದಲ್ಲಿ ಆಗುವುದಿಲ್ಲ. ಆದ್ದರಿಂದ ಅನೇಕರು ಸಿನಿಮಾ ಪತ್ರಿಕಾ ಛಾಯಾಗ್ರಾಹಕರಾಗಲು ಇಷ್ಟಪಡು ವುದಿಲ್ಲ. ಆದ್ರೆ ಸಿನಿಮಾ ಛಾಯಾಗ್ರಾಹಕರಿಗೆ ಪತ್ರಿಕೆಯಲ್ಲಿ ಸಿಗುವಷ್ಟು ಹೆಸರು ಬೇರೆ ವಿಭಾಗದಲ್ಲಿ ಸಿಗುವುದಿಲ್ಲ ಎನ್ನುವುದು ನನ್ನ ಅನಿಸಿಕೆ.

ಸಿನಿಮಾ ಛಾಯಾಗ್ರಾಹಕರಾದವರಿಗೆ ಮಿಕ್ಕ ವಿಭಾಗದ ಪತ್ರಿಕಾ ಛಾಯಾಗ್ರಾಹಕರಿಗಿಂತ ತಾಳ್ಮೆ ಹೆಚ್ಚಾಗಿಯೇ ಇರಬೇಕಾಗುತ್ತದೆ.

ಫೋಟೋಗ್ರಾಫಿ ಎಂದರೆ ಬೆಳಕಿನೊಂದಿಗೆ ಆಡುವ ಚೆಲ್ಲಾಟ. ಸಿನಿಮಾ ಛಾಯಾಗ್ರಾಹಕ ಈ ಬೆಳಕಿನೊಂದಿಗೆ ಆಟವಾಡುತ್ತಾ ಸಿನಿಮಾ ತಾರೆಯರನ್ನು ಅಂದವಾಗಿ ತನ್ನ ಕ್ಯಾಮರಾದಲ್ಲಿ ಸೆರೆಹಿಡಿದಾಗ ತಾನು ವ್ಯರ್ಥ ಮಾಡಿದ ಸಮಯ ಸಾರ್ಥಕವಾದಂತೆ ಎಂದು ಭಾವಿಸುತ್ತಾನೆ.

ಸಿನಿಮಾ ಪತ್ರಿಕಾ ಛಾಯಾಗ್ರಾಹಕರಾ ಗುವವರಿಗೆ ಬೆಳಕಿನ (Lights) ಬಗ್ಗೆ, ಕಾಸ್ಟ್ಯುಮ್, ಮೇಕಪ್ ಬಗ್ಗೆ ಗೊತ್ತಿರಬೇಕಾದದ್ದು ಅತ್ಯವಶ್ಯಕ.

ಬೇರೆ ವಿಭಾಗಗಳಲ್ಲಿ ಆ್ಯಕ್ಷನ್ ಚಿತ್ರಗಳಿಗೆ ಹೆಚ್ಚು ಮಹತ್ವ, ಆದ್ರೆ ಸಿನಿಮಾದಲ್ಲಿ ಹಾಗಲ್ಲ.

ಹೊಸದಾಗಿ ಬರುವ ಸಿನಿಮಾ ಪತ್ರಿಕಾ ಛಾಯಾಗ್ರಾಹಕರಿಗೆ ಕೆಲ ಸೂಚನೆಗಳು

- ಆರ್ಟಿಸ್ಟ್‌ಗಳ ಬಗ್ಗೆ ಒಳ್ಳೆ ಅಭಿಪ್ರಾಯ ಹೊಂದಿರಿ. ಅವರೊಂದಿಗೆ ಕಟ್ಟದಾಗಿ ಮಾತನಾಡಬೇಡಿ.
- ಯಾರೊಂದಿಗೂ ಏಕವಚನದಲ್ಲಿ ಮಾತನಾಡಬೇಡಿ.
- ನಿಮ್ಮ ಕೆಲಸದತ್ತ ಹೆಚ್ಚು ಗಮನ ಹರಿಸಿ ಮಿಕ್ಕ ಅನಾವಶ್ಯಕ ವಿಷಯದತ್ತ ಮೂಗು ತೂರಿಸದಿರಿ.
- ಶೂಟಿಂಗ್ ಸ್ಥಳದಲ್ಲಿ ಫೋಟೋ ತೆಗೆಯುವ ಮೊದಲು ಆ ಚಿತ್ರದ ನಿರ್ದೇಶಕರ ಅನುಮತಿ ಪಡೆಯಿರಿ.
- ಸೀನ್ ಶೂಟ್ ಮಾಡುತ್ತಿರುವಾಗ ಕ್ಯಾಮರಾ ಫ್ಲ್ಯಾಷ್ ಉಪಯೋಗಿಸಬೇಡಿ.
- ಆರ್ಟಿಸ್ಟ್‌ನ ಮೂಡ್ ನೋಡಿ ಅವರ ಫೋಟೋ ತೆಗೆಯಲು ಹೋಗಿ.
- ಅನಾವಶ್ಯಕವಾಗಿ ಶೂಟಿಂಗ್‌ಗೆ ತೊಂದರೆ ಮಾಡಬೇಡಿ. ಅದರಿಂದ ನಿರ್ಮಾಪಕರಿಗೂ ನಷ್ಟ.
- ನೀವು ಆರಂಭದಲ್ಲಿ ತೆಗೆದ ಒಂದೆರಡು ಫೋಟೋಗಳು ಪತ್ರಿಕೆಯಲ್ಲಿ ಪ್ರಕಟವಾದಾಗ, ಅಹಂಕಾರ ಪಡಬೇಡಿ. ಆ ಅಹಂಕಾರವೇ ನಿಮ್ಮ ಅವನತಿಗೆ ಕಾರಣವಾಗಬಹುದು.
- ಫ್ರೀಲ್ಯಾನ್ಸ್ ಛಾಯಾಗ್ರಾಹಕರಾದ್ರೆ ಒಂದು ಪತ್ರಿಕೆಯಲ್ಲಿ ಬರುವ ಸುದ್ಧಿಯನ್ನು ಇನ್ನೊಂದು ಪತ್ರಿಕೆಯವರೊಂದಿಗೆ ಹೇಳಬೇಡಿ.
- ಒಂದೇ ತರಹದ ಫೋಟೋಗಳನ್ನ ಅನೇಕ ಪತ್ರಿಕೆಗಳಿಗೆ ಕೊಡಬೇಡಿ.
- ಛಾಯಾಚಿತ್ರಗಳನ್ನು ತೆಗೆದು ಪತ್ರಿಕೆಗೆ ಕೊಟ್ಟ ನಂತರ ನೀವು ಯಾರ ಛಾಯಾಚಿತ್ರವನ್ನು, ಯಾವ ಪತ್ರಿಕೆಗೆ ಕೊಟ್ಟಿರುವಿರೆಂದು ಬೇರೆ ಪತ್ರಿಕೆಯವರಿಗೆ ಹೇಳಬೇಡಿ.
- ನಟಿಯರ ಫೋಟೋ ತೆಗೆಯುವಾಗ ಅಂಗಾಂಗ ಪ್ರದರ್ಶನ ಮಾಡಿಸಿ. ಅಶ್ಲೀಲವಾಗಿ ಫೋಟೋ ತೆಗೆಯಬೇಡಿ.

ಆ್ಯಕ್ಷನ್ ಚಿತ್ರಗಳ ಜೊತೆ ವಿವಿಧ ಭಂಗಿಯಲ್ಲಿ ವಿವಿಧ ರೀತಿಯ ಲೈಟಿಂಗ್‌ನಲ್ಲಿ ತೆಗೆದ ಛಾಯಾಚಿತ್ರಗಳಿಗೆ ಹೆಚ್ಚು ಮಹತ್ವ. ಸಾಮಾನ್ಯವಾಗಿ ಸಿನಿಮಾ ಪತ್ರಿಕೆಗಳು ಲೈಟಿಂಗ್‌ನಲ್ಲಿ ತೆಗೆದ ಚಿತ್ರಗಳನ್ನು ಹೆಚ್ಚಾಗಿ ಪ್ರಕಟಿಸುತ್ತವೆ. ಲೈಟಿಂಗ್‌ನಲ್ಲಿ ಎರಡು ವಿಧಾನ ಇದೆ. ಒಂದು ಹೊರಾಂಗಣದಲ್ಲಿ ನ್ಯಾಚುರಲ್ ಲೈಟಿಂಗ್‌ನಲ್ಲಿ ತೆಗೆಯುವ ಚಿತ್ರಗಳಾದ್ರೆ, ಸ್ಟುಡಿಯೋದಲ್ಲಿ umbrella ಲೈಟಿಂಗ್‌ನಲ್ಲಿ ತೆಗೆಯುವುದು ಮತ್ತೊಂದು ವಿಧಾನ. ಕೆಲ ಛಾಯಾಗ್ರಾಹಕರು ಹೆಚ್ಚಾಗಿ ಹೊರಾಗಂಣದಲ್ಲಿ ಚಿತ್ರಗಳನ್ನು ತೆಗೆಯಲು ಇಷ್ಟಪಟ್ಟರೆ, ಮತ್ತೆ ಕೆಲವರು ಸ್ಟುಡಿಯೋವನ್ನ ಹೆಚ್ಚು ಇಷ್ಟಪಡುತ್ತಾರೆ.

ಹೊರಾಂಗಣದಲ್ಲಿ ಛಾಯಾಚಿತ್ರ ತೆಗೆಯಬೇಕಾದ್ರೆ ಮೊದಲು ಅಲ್ಲಿನ ಪರಿಸರ, ಸ್ಥಳ, ಬೆಳಕಿನ ವ್ಯವಸ್ಥೆಯ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ಹೊರಾಂಗಣದಲ್ಲಿ ಛಾಯಾಚಿತ್ರಗಳನ್ನ ತೆಗೆಯುವಾಗ ಸಾಮಾನ್ಯ ತೊಂದರೆಯೆಂದರೆ ಅಭಿಮಾನಿಗಳು. ನಮ್ಮಲ್ಲಿ ಸಿನಿಮಾ ನಟ-ನಟಿಯರನ್ನ ಕಂಡಾಕ್ಷಣ ಅಭಿಮಾನಿಗಳು ಗುಂಪು ಕೂಡುವುದು ಸಾಮಾನ್ಯ. ಅವರ ಮಧ್ಯೆ ಛಾಯಾಚಿತ್ರಗಳನ್ನು ವಿಶೇಷವಾಗಿ ತೆಗೆಯುವುದು ಪ್ರಯಾಸದ ಸಂಗತಿಯೇ. ಉದಾಹರಣೆಗೆ ಹೀರೋ-ಹಿರೋಯಿನ್ ತಬ್ಬಿಕೊಂಡು ಪೋಸ್ ಕೊಡುವ ದೃಶ್ಯ ತೆಗೆಯುವಾಗ ಅಲ್ಲಿರುವ ಅಭಿಮಾನಿಗಳಿಗೆ ಅದೊಂದು ಬಿಟ್ಟಿ ಮನರಂಜನೆ ಆದ್ರೆ ಛಾಯಾಗ್ರಾಹಕನಿಗೆ ಹಾಗೂ ಹೀರೋ-ಹೀರೋಯಿನ್‌ಗೆ ಮುಜುಗರವಾಗಿರುತ್ತದೆ.


ಆದ್ದರಿಂದ ಅನೇಕರು ಸ್ಟುಡಿಯೋದಲ್ಲಿ ಫೋಟೋ ಸೆಷನ್ ಮಾಡಲು ಹೆಚ್ಚು ಆಸಕ್ತಿ ವಹಿಸುತ್ತಾರೆ. ಇಲ್ಲಿ ಒಂದು ಸಮಸ್ಯೆಯೆಂದರೆ ಆರ್ಟಿಸ್ಟ್‌ಗಳ ಡೇಟ್ಸ್. ಒಂದು ಫೋಟೋ ಸೆಷನ್‌ನಲ್ಲಿ ವಿವಿಧ ರೀತಿಯಲ್ಲಿ ಲೈಟಿಂಗ್ ಮಾಡಿ, ಅವರ ಹೇರ್ ಸ್ಟೈಲ್ ಚೇಂಜ್, ಕಾಸ್ಟುಮ್ ಚೇಂಜ್ ಮಾಡಿಸಿ, ಫೋಟೋ ತೆಗೆಯಲು ಏನಿಲ್ಲವೆಂದರೂ ೪-೫ ಗಂಟೆಯಾದ್ರು ಬೇಕು. ಜನಪ್ರಿಯ ನಟ-ನಟಿಯರ ಫೋಟೋ ಸೆಷನ್‌ಗೆ ಅವರ ಡೇಟ್ಸ್‌ಗಳ ಸಮಸ್ಯೆಯೇ ಜಾಸ್ತಿ. ಇದರಿಂದ ಅನೇಕ ಸಲ ಅವರು ಶೂಟಿಂಗ್ ಮಾಡುವ ಸ್ಥಳದಲ್ಲೇ ಫೋಟೋ ಸೆಷನ್ ಮಾಡಬೇಕಾಗುತ್ತದೆ. ಕೆಲವೊಮ್ಮೆ ಅನಿವಾರ್ಯವಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಶೂಟಿಂಗ್ ಸ್ಥಳದಲ್ಲಿರುವ ಲೈಟ್‌ನಲ್ಲಿ ಫೋಟೋ ತೆಗೆದರೆ, ಕಲರ್ ಪ್ರಿಂಟ್‌ನಲ್ಲಿ ಬ್ಲೂ ಕಲರ್ ಜಾಸ್ತಿ ಇರುತ್ತದೆ. ಆಗ ಬ್ಲೂ ಕಲರ್ ಫಿಲ್ಟರ್ ಉಪಯೋಗ ಸೂಕ್ತ. ಆದ್ದರಿಂದ ನಮ್ಮ ಸ್ಟುಡಿಯೋ ಲೈಟ್‌ಗಳನ್ನು (Umbrells ಲೈಟ್‌ಗಳು) ಶೂಟಿಂಗ್‌ಗೆ ತೆಗೆದುಕೊಂಡು ಹೋದರೆ ಅನುಕೂಲವಾಗಿರುತ್ತದೆ. ಹೊರಾಂಗಣದಲ್ಲಿ ಶೂಟಿಂಗ್ ನಡೆಯುವಾಗ ಅಲ್ಲಿರುವ ರಿಫ್ಲೆಕ್ಟರ್ಸ್‌ಗಳನ್ನು ಉಪಯೋಗಿಸಿಕೊಳ್ಳಬಹುದು. ಮಧ್ಯಾಹ್ನದ ಬಿಸಿಲಿನಲ್ಲಿ



ಫೋಟೋ ತೆಗೆಯುವುದು ಸೂಕ್ತವಲ್ಲ. ಪ್ಲ್ಯಾಷ್‌ನಲ್ಲಿ ತೆಗೆಯುವ ಫೋಟೋ ಫ್ಲಾಟ್ ಆಗುವುದರಿಂದ ಅದನ್ನ ಯಾರೂ ಹೆಚ್ಚಾಗಿ ಇಷ್ಟಪಡುವುದಿಲ್ಲ.


ಕೆಲವು ಪತ್ರಿಕೆಗಳು ಆ್ಯಕ್ಷನ್ ಚಿತ್ರಗಳನ್ನೇ ಪ್ರಕಟಿಸಲು ಇಷ್ಟಪಡುತ್ತಾರೆ. ಆ್ಯಕ್ಷನ್ ಚಿತ್ರಗಳನ್ನು ತೆಗೆಯುವಾಗ ಛಾಯಾಗ್ರಾಹಕ ಮೈಯೆಲ್ಲಾ ಕಣ್ಣಾಗಿಸಿ ಸುತ್ತಲೂ ಗಮನಿಸಬೇಕಾಗುತ್ತದೆ. ಸಿನಿಮಾ ಪಾರ್ಟಿಗಳಲ್ಲಿ ಈ ರೀತಿಯ ಆ್ಯಕ್ಷನ್ ಚಿತ್ರಗಳನ್ನು ಹೆಚ್ಚಾಗಿ ತೆಗೆಯಬಹುದು. ಅವರ ಹಾವ ಭಾವವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಅವರ ಫೋಟೋ ತೆಗೆಯುವುದರಲ್ಲಿ ಹೆಚ್ಚಿನ ಥ್ರಿಲ್ ದೊರೆಯುತ್ತದೆ.

ಕೊನೆಯದಾಗಿ, ಸಿನಿಮಾ ಪತ್ರಿಕಾ ಛಾಯಾಗ್ರಾಹಣ ಹೆಚ್ಚು ಖರ್ಚಿನ ವೃತ್ತಿ. ಅನೇಕ ಸಲ ನಾವು ಖರ್ಚು ಮಾಡಿದ ಹಣ ನಮಗೆ ವಾಪಸ್ಸು ಬರದೇ ಇರಬಹುದು. ಆದ್ರೆ ಉತ್ತಮ ಚಿತ್ರಗಳನ್ನು ತೆಗೆದಾಗ ಅದಕ್ಕೆ ತಕ್ಕ ಪ್ರತಿಫಲ ಖಂಡಿತಾ ಲಭ್ಯ. ●



ಗೌತಮ್ ರಾಜಾಧ್ಯಕ್ಷ

ಉನ್ನತ ಗುಣಮಟ್ಟದ ಫೋಟೋಗ್ರಫಿಯಲ್ಲಿ ಗೌತಮ್ ರಾಜಾಧ್ಯಕ್ಷ ಅವರದು ಬಹು ದೊಡ್ಡ ಹೆಸರು. ಮುಂಬೈಯಲ್ಲಿ ಜನಿಸಿದ ರಾಜಾಧ್ಯಕ್ಷರು ಪ್ರಸಿದ್ಧ ಜಾಹೀರಾತು ಏಜೆನ್ಸಿ ಲಿಂಟಾಸ್‌ನಲ್ಲಿ ಸೇವೆ ಸಲ್ಲಿಸುವುದಕ್ಕೆ ಮುಂಚೆ ಸೇಟ್ ಜೇವಿಯರ್ ಕಾಲೇಜಿನಲ್ಲಿ ಕೆಮಿಷ್ಟ್ರಿ ಉಪನ್ಯಾಸಕರಾಗಿದ್ದರು. ೧೯೮೭ರಲ್ಲಿ ಫ್ರೀಲಾನ್ಸ್ ಛಾಯಾಚಿತ್ರಕಾರರಾಗಿ ಸ್ವತಂತ್ರ ವೃತ್ತಿ ಆರಂಭಿಸಿದ ಅವರು ಮರಾಠಿ ಪಾಕ್ಷಿಕವೊಂದರ ಸಂಪಾದಕರಾಗಿ ಪತ್ರಿಕೋದ್ಯಮದಲ್ಲಿ ತೊಡಗಿದ್ದಾರೆ. ಈ ಬಾರಿಯ 'ಬದುಕು' ಮುಖಪುಟ ಅಲಂಕರಿಸಿದ ರೂಪಸಿ ಮೆಹರ್ ಜೇಸಿಯಾ ಅವರ ಚಿತ್ರವನ್ನು ರಾಜಾಧ್ಯಕ್ಷರೇ ಸೆರೆಹಿಡಿದಿದ್ದಾರೆ. ಯುವ ಛಾಯಾಚಿತ್ರಕಾರರು ರಾಜಾಧ್ಯಕ್ಷರನ್ನು ಅಭ್ಯಸಿಸುವ ಅಗತ್ಯ ತುಂಬಾ ಇದೆ.



ಹವ್ಯಾಸಿ ಛಾಯಾ ಚಿತ್ರ ಗ್ರಾಹಕರಿಗೆ ಹಲವು ಸಲಹೆ

ಎಸ್. ಹನುಮಂತ ಜೋಯಿಸ್


ಸುಮಾರು ಎರಡು ಶತಮಾನಗಳ ಇತಿಹಾಸವನ್ನು ಹೊಂದಿರುವ ಈ ಛಾಯಾಚಿತ್ರ ಕಲೆಗೆ ನಾಂದಿ 'ಹಾಡಿದವರೇ' ಹವ್ಯಾಸಿ ಛಾಯಾಚಿತ್ರ ಗ್ರಾಹಕರು. ಛಾಯಾಚಿತ್ರಕಲೆಯ ವಿಕಾಸವು ಕ್ಯಾಮರಾಗಳ ಹೊಸ ಶೋಧನೆಯ ಫಲದೊಂದಿಗೆ ಹೊಂದಿಕೊಂಡಿದೆ. ೧೬ನೆ ಶತಮಾನದ ಫ್ರಾನ್ಸ್‌ನ ಖ್ಯಾತ ಲಿಯೋನಾರ್ಡೊ-ಡ-ವಿಂಚಿಯ 'ಪಿನ್‌ಹೋಲ್ ಕ್ಯಾಮರಾ'ದಿಂದ ತೊಡಗಿ ಇತ್ತೀಚಿನ ಡಿಜಿಟಾಲ್ ಛಾಯಾಚಿತ್ರಣದ ಕ್ಯಾಮರದವರೆಗೆ ಈ ಕಲೆಯು ನಡೆದು ಬಂದ ಹೆಜ್ಜೆಗಳು ಇವೆ. ೧೭ನೇ ಶತಮಾನದಲ್ಲಿ ಕ್ಯಾಮೆರಾ ಅಬ್‌ಸ್ಕ್ಯುರಾ ಆವಿಷ್ಕಾರವಾಯಿತು. ಕ್ರಿ.ಶ ೧೮೩೯ರಲ್ಲಿ ಡ್ಯಾಗ್ಯೂರೊ ಎಂಬಾತನು ಸಾರ್ವಜನಿಕರಿಗೆ ತನ್ನ ಪ್ರಪಥಮ ಛಾಯಾಚಿತ್ರವನ್ನು ಪ್ರದರ್ಶಿಸಿದ. ಜಾಜ್ ಈಸ್ಟ್‌ಮನ್‌ರು ಕ್ರಿ.ಶ. ೧೮೮೮ರಲ್ಲಿ ಕೋಡಕ್ ಕಂಪನಿ ತೆರದರು. ಕ್ರಿ.ಶ.೧೯೮೭ರಲ್ಲಿ ಉಪಯೋಗಿಸಿ ಎಸೆಯುವ ಕ್ಯಾಮರಾಗಳು ಬಳಕೆಗೆ ಬಂದುವು. ಈ ಎಲ್ಲ ಘಟನೆಗಳು ಛಾಯಾಚಿತ್ರ ಕಲೆಯ ರೋಚಕ ಇತಿಹಾಸಕ್ಕೆ ಹೊಸ ಆಯಾಮವನ್ನೇ ನೀಡಿದವು. ಕೇಂದ್ರ ಸರ್ಕಾರದ ಇತ್ತೀಚಿನ ಉದಾರ ಆರ್ಥಿಕ ನೀತಿಯಿಂದಾಗಿ ಈ ಕಲೆಯ ಅಭಿವೃದ್ಧಿಗೆ ಹೊಸ ಬಾಗಿಲುಗಳನ್ನೆ ತೆರೆದಂತಾಗಿದೆ. ಈ ನೀತಿಯಿಂದ ಹೊರದೇಶದಲ್ಲಿ ಅತ್ಯಾಧುನಿಕ ತಾಂತ್ರಿಕತೆಯಿಂದ ತಯಾರಾದ ಕ್ಯಾಮರಾ ಫಿಲಂ, ಮಸೂರ ಫ್ಲ್ಯಾಷ್ ಮೊದಲಾದ ಛಾಯಾಚಿತ್ರಕಲೆ ಸಂಬಂಧಿ ಉಪಕರಣಗಳು ನಮ್ಮ ದೇಶದ ಪ್ರಮುಖ ನಗರಗಳಲ್ಲೆಲ್ಲಾ ದೊರೆಯುತ್ತಿವೆ. ಇದರ ಪ್ರಯೋಜನಗಳನ್ನು ಹವ್ಯಾಸಿ ಛಾಯಾಚಿತ್ರ ಕಲಾವಿದರು ಪಡೆಯುತ್ತಿದ್ದಾರೆ.

ನನ್ನ ಅನುಭವ ಹಾಗೂ ಇತ್ತೀಚಿನ ಸಮೀಕ್ಷೆಯಿಂದ ಹವ್ಯಾಸಿ ಛಾಯಚಿತ್ರ ಗ್ರಾಹಕರನ್ನು ಮೂರು ಗುಂಪುಗಳಾಗಿ ನೋಡಬಯಸುತ್ತೇನೆ. ಮೊದಲನೆ ಗುಂಪಿನವರಿಗೆ ಬಜಾರಿನಲ್ಲಿ ದೊರೆಯುವ ಎಲ್ಲ ವಿಧದ ಕ್ಯಾಮರಾಗಳನ್ನು ನೋಡುವ ಮತ್ತು ಉಪಯೋಗಿಸುವ ಹಂಬಲವಿರುತ್ತದೆ. ಸ್ವಲ್ಪವೂ ಯೋಚಿಸದೆ, ಕಣ್ಣಿಗೆ ಕಂಡ ಚಿತ್ರಗಳನ್ನೆಲ್ಲಾ ಸೆರೆಹಿಡಿಯುವ ಇವರಿಂದ ಉತ್ತಮವಾದುದನ್ನು ನಿರೀಕ್ಷಿಸುವಂತಿಲ್ಲ. ಏಕೆಂದರೆ ಇವರು ಕೇವಲ ಕ್ಯಾಮರಾ ಆರಾಧಕರಂತೆ ಕಂಡು ಬರುತ್ತಾರಲ್ಲದೆ ತಮ್ಮ ಹವ್ಯಾಸ ದುಬಾರಿಯಾಗುತ್ತಿದ್ದಂತೆ ಈ ಕಲೆಯಿಂದ ಕ್ರಮೇಣ ದೂರವಾಗಲು ಪ್ರಯತ್ನಿಸುತ್ತಾರೆ.

ಎರಡನೆ ಗುಂಪಿನವವರಾದರೋ, ಮೊದಲಿನವರಂತೆ ವಿವಿಧ ಕ್ಯಾಮರಾ ಕೊಳ್ಳುವವರೇ ಆಗಿರುತ್ತಾರೆ. ಆದರೆ ಇವರು ಫಿಲಂರೋಲನ್ನು ಮಿತವ್ಯಯವಾಗಿ ಬಳಸುತ್ತಾ ಹಣವನ್ನು ಗಳಿಸಲು ಪ್ರಯತ್ನಿಸುವವರು. ಧಾರಾಳವಾಗಿ ಮಾತಾಡಬಲ್ಲವರು. ತಾವು ಸೆರೆಹಿಡಿದ ಚಿತ್ರಗಳನ್ನು ನುರಿತ ಛಾಯಾಚಿತ್ರಗಾಹಕರಲ್ಲಿ ಸಿದ್ಧಪಡಿಸಿ ಆತ್ಮ ಸಂತೋಷವನ್ನು ಅನುಭವಿಸುವವರು! ಇವರಲ್ಲಿ ಸ್ಪರ್ಧಾ ಮನೋಭಾವವು ತುಂಬಾ ಕಡಿಮೆ. ಬಜಾರಿನಲ್ಲಿ ದೊರೆಯುವ ಫಿಲ್ಮನ್ನು ಸಂಸ್ಕರಿಸುವ ಮತ್ತು ಅದರಿಂದ ಧನ ಚಿತ್ರಗಳನ್ನು ಪಡೆಯಲು ಬೇಕಾದ ರಾಸಾಯನಿಕಗಳು ಮತ್ತು ಉಪಕರಣಗಳ ಪರಿಜ್ಞಾನವನ್ನು ಪಡೆದಿರುತ್ತಾರೆ. ಆದರೆ ಸ್ವಂತವಾಗಿ ಮಾಡಲು ಹಿಂಜರಿಕೆ ಸ್ವಭಾವದವರು. ಮೂರನೆಯ ಗುಂಪಿನವರ ಲಕ್ಷಣಗಳೇ ವಿಶಿಷ್ಟವಾದವು. ಇವರು ಯಾವ ಕ್ಯಾಮರಾದಿಂದಾದರೂ ಉತ್ತಮ ಚಿತ್ರಗಳನ್ನು ಹಿಡಿಯಬಲ್ಲರು. ಇವರು ಈ ಕಲೆ ಕುರಿತು ಆಳವಾದ ಅಧ್ಯಯನ ಮಾಡಿ, ತಾವೇ ಪ್ರಯೋಗಾತ್ಮಕವಾಗಿ ತಯಾರಿಸಿದ ಚಿತ್ರಗಳನ್ನು ಪ್ರದರ್ಶಿಸುವ ಕಾತರವುಳ್ಳವರಾಗಿರುತ್ತಾರೆ. ಅಲ್ಲದೆ ರಾಷ್ಟ್ರೀಯ ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಈ ಕ್ಷೇತ್ರದ ಸಿಹಿ-ಕಹಿಗಳನ್ನು ಅನುಭವಿಸುವವರಾಗಿರುತ್ತಾರೆ. ತಮ್ಮ ಉತ್ಕೃಷ್ಟ ಕಲೆಗಾಗಿ ಹಣವನ್ನು ಲೆಕ್ಕಿಸದೆ ಧಾರಾಳವಾಗಿ ಖರ್ಚು ಮಾಡುವ ಇವರು ತಮ್ಮ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಗುಣಾಢ್ಯರಾಗಿರುತ್ತಾರೆ. ಮೂರನೆ ಗುಂಪಿನವರಿಗೆ ಛಾಯಾಚಿತ್ರಕಲೆಯ ಕುರಿತು ಆಳವಾದ ಪ್ರೀತಿ ಮತ್ತು ಸಮರ್ಪಣಾ ಗುಣ ಇರುತ್ತದೆ.

ಬಜಾರಿನಲ್ಲಿ ದೊರೆಯುವ ೩೫ ಎಂ.ಎಂ. ಕ್ಯಾಮರಾದಿಂದ ೩೬ ಚಿತ್ರಗಳನ್ನು ಪಡೆಯಬಹುದಾಗಿದೆ. ಇನ್ನೂ ಕೆಲವು ಕ್ಯಾಮರಾಗಳಿಗೆ ೭೨ ಚಿತ್ರಗಳನ್ನು ಪಡೆಯುವ ತಂತ್ರಗಾರಿಕೆ ಅಳವಡಿಸಲಾಗಿದೆ. ಆದರೆ ಇದಕ್ಕೆ ಸರಿಹೊಂದುವಂತಹ ಮಸೂರಗಳು, ಶೋಧಕಗಳು ಹಾಗೂ ವಿವಿಧ ಫ್ಲ್ಯಾಷ್‌ಗಳನ್ನು ನುರಿತ ಛಾಯಾಚಿತ್ರಗ್ರಾಹಕರ ಸಹಕಾರ ಮತ್ತು ಸಲಹೆಗಳಿಂದ ಖರೀದಿಸುವುದು ಉತ್ತಮ. ಇವುಗಳಲ್ಲೂ ಮುಖ್ಯವಾಗಿ ಏಕಮಸೂರ ಆವರ್ತನ (ಎಸ್.ಎಲ್.ಆರ್) ಮ್ಯಾನುಯಲ್ ಕ್ಯಾಮರಾ ಅಥವಾ ಆಟೋಮ್ಯಾಟಿಕ್ ಕ್ಯಾಮರಾ ಕೊಂಡುಕೊಳ್ಳುವುದು ಒಳಿತು. ಇದಕ್ಕೆ ಬೇಕಾದ ಮಸೂರಗಳು ಮತ್ತು ಶೋಧಕಗಳು ಮಾರುಕಟ್ಟೆಯಲ್ಲಿ ಲಭ್ಯವಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಹವ್ಯಾಸಿ ಛಾಯಾಚಿತ್ರ ಗ್ರಾಹಕರು ಹಲವಾರು ಸಮಸ್ಯೆಗಳನ್ನು




ಎದುರಿಸುತ್ತಿದ್ದಾರೆ. ಅವುಗಳಿಗೆ ತಾಳ್ಮೆ ಮತ್ತು ಎಚ್ಚರಿಕೆಗಳಿಂದ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ಈಗ ಬಜಾರಿನಲ್ಲಿ ವಿವಿಧ ಮಾದರಿಯ ಕ್ಯಾಮರಾಗಳು ದೊರೆಯುತ್ತವೆ. ಯಾವುದೇ ವರ್ಗದ ಕ್ಯಾಮರಾವಾಗಿರಲಿ, ಅದರ ಜೊತೆಯಲ್ಲಿ ಕಂಪನಿಯವರು ಒದಗಿಸಿರುವ ವಿವರಣಾತ್ಮಕ ಪುಸ್ತಕವನ್ನು ಅಧ್ಯಯನ ಮಾಡಿ, ಅದರ ಪ್ರತಿಯೊಂದು ಭಾಗಗಳ ಉಪಯೋಗ ಮತ್ತು ಕಾರ್ಯಗಳನ್ನು ಅರಿಯುವುದು ಉತ್ತಮ.


ಕ್ಯಾಮರಾ ಹಿಂಬದಿಯನ್ನು ತೆಗೆದು ಮಸೂರವನ್ನು ಪರೀಕ್ಷಿಸಿಕೊಳ್ಳಬೇಕು. ಅದರ ಕವಾಟವೇಗವನ್ನು 'B' ಅಥವಾ 'T'ಗೆ ಹೊಂದಿಸಿ ಮಸೂರವನ್ನು ಪೂರ್ಣವಾಗಿ ನೋಡುವುದರಿಂದ ಅದರ ಮೇಲೆ ಏನಾದರೂ ಗೀರುಗಳು ಬಿದ್ದಿದ್ದರೆ ಅಥವಾ ಫಂಗಸ್ ಬಂದಿದ್ದರೆ ಪರೀಕ್ಷಿಸಲು ಅನುಕೂಲವಾಗುತ್ತದೆ. ಯಾವಾಗಲೂ u-u ಶೋಧಕವನ್ನು (ಎಸ್.ಎಲ್.ಆರ್) ಕ್ಯಾಮಾರಾದ ಮಸೂರಕ್ಕೆ ಜೋಡಿಸಬೇಕು. ಇದರಿಂದ ಧೂಳು ಮತ್ತು ನೇರವಾಗಿ ಬೀಳುವ ನೀರಿನ ಹನಿಗಳನ್ನು ತಡೆಯಬಹುದು, ಫಿಲಂರೋಲನ್ನು ಹಾಕುವಾಗಲೂ, ತೆಗೆಯುವಾಗಲೂ ಬಿಸಿಲು ಬೀಳದಂತೆ ನೋಡಿಕೊಳ್ಳಬೇಕು. ಫಿಲಂರೋಲನ್ನು ಹಾಕಿದ ಕೂಡಲೆ ಫಿಲಂರೋಲ್ ರಿವೈಂಡಿಂಗ್ ಕ್ರಾಂಕ್ ಚಲಿಸುವುದೇ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು. ಮಸೂರಗಳನ್ನು ಒರಟು ಬಟ್ಟೆಯಿಂದ ಒರೆಸಬಾರದು. ಇದನ್ನು ಸ್ವಚ್ಛಗೊಳಿಸಲು ಕಂಪನಿಯವರು ಒದಗಿಸಿರುವ ದ್ರಾವಣವನ್ನು ಬಳಸಬೇಕು. ಫ್ಲ್ಯಾಷ್ ಬಳಸಿದಾಗ, ಕ್ಯಾಮರಾದ ಮೇಲೆ ಕವಾಟ ವೇಗವನ್ನು ಗುರುತು ಮಾಡಿದ ವೃತ್ತದಲ್ಲಿರುವ "X" ಗುರುತಿಗೆ ಹೊಂದಿಸಿ ಕೊಳ್ಳಬೇಕು. (೧/೬೦ ಅಥವಾ ೧/೧೨೫ ಅಥವಾ ೧/೨೫೦) ಇದನ್ನು ಪರೀಕ್ಷಿಸಲು ಕ್ಯಾಮರಾದ ಹಿಂಬದಿಯನ್ನು ತೆರೆದು ಷಟರ್ ರಿಲೀಜ್ ಗುಂಡಿಯನ್ನು ಒತ್ತಿದಾಗ ಫ್ಲ್ಯಾಷನ ಬೆಳಕು ಒಮ್ಮೆಲೆಯೆ ಚಿಮ್ಮುವುದೇ ಎಂಬುವುದನ್ನು ಮತ್ತು ಹಿಂಬದಿಯ ಮುಚ್ಚಳವು ಭದ್ರವಾಗಿರುವುದೇ ಎಂಬುದನ್ನು ಪರೀಕ್ಷಿಸುವುದು ಅಗತ್ಯವಾಗಿದೆ. ಇಲ್ಲದಿದ್ದರೆ ಅದರಿಂದ ಫಿಲಂ ಮೇಲೆ ಪರಿಣಾಮ ಉಂಟಾಗುತ್ತದೆ. ಕ್ಯಾಮರಾವನ್ನು ಉಪಯೋಗಿಸದೆ ಇದ್ದಾಗ ಅದರ ಕವರಿನಲ್ಲಿಡುವುದು ಉತ್ತಮ. ಕವರಿಗೆ ಸಿಲಿಕಾನ್ ಜೆಲ್‌ನ್ನು ಬಳಸಿರುವುದರಿಂದ ತೇವಾಂಶವನ್ನು ಹೀರಲು ಸಾಧ್ಯವಾಗುತ್ತದೆ. ಯಾವುದೇ ಕ್ಯಾಮರಾವನ್ನು ಕೊಂಡರೂ ಮೊದಲು ಕಪ್ಪು-ಬಿಳುಪು



ಫಿಲಂರೋಲನ್ನು ಹಾಕಿ ಕ್ಯಾಮರಾ ಮಸೂರದ ಸ್ಪಷ್ಟತೆಯನ್ನು ನಿರ್ಧರಿಸಿಕೊಳ್ಳಬೇಕು. ಕಪ್ಪು ಬಿಳುಪು ಫಿಲಂ ಬಳಸಿದರೆ ಡಿ-೭೬ನ್ನು ಸಂಸ್ಕರಿಸಲು ಉಪಯೋಗಿಸುವುದು. ವರ್ಣ ಫಿಲಂರೋಲನ್ನು ಚಿತ್ರೀಕರಣದಲ್ಲಿ ಬಳಸಿದರೆ ಆಯಾ ಕಂಪನಿಯ ಲ್ಯಾಬ್‌ನಲ್ಲಿಯೇ ಸಂಸ್ಕರಿಸಿ, ಮುದ್ರಿಸಲು ಪ್ರಯತ್ನಿಸಿದರೆ ಒಳ್ಳೆಯದು. ಇತ್ತೀಚಿಗೆ ಆಧುನಿಕ ಸಂಸ್ಕರಣ ಯಂತ್ರಗಳು ಬಂದಿವೆ. ಅವುಗಳ ಮಾಹಿತಿಗಳನ್ನು ಪಡೆದುಕೊಳ್ಳುತ್ತಾ ಇರಬೇಕಾಗುತ್ತದೆ. ರೀಪ್ಯಾಕ್ಡ್ ಫಿಲಂಗಳನ್ನು ಬಳಸದೇ ಕಂಪನಿಯ ಪ್ಯಾಕ್ ಹೊಂದಿರುವ ಹೊಸ ಫಿಲಂರೋಲ್‌ಗಳನ್ನು ಬಳಸುವುದು ಉತ್ತಮ. ●



ಕೆ.ಎಂ. ವೀರೇಶ್



ಹಾಲಕ್ಕಿಯ ವೇಷದಲ್ಲಿ ಶ್ರುತಿ. ಮೇಕಪ್, ಕಾಸ್ಟ್ಯುಮ್‌ಗೆ ಹೆಚ್ಚು ಪ್ರಾಮುಖ್ಯ ಕೊಡುವುದರಿಂದ ಹೆಚ್ಚು ಸಮಯ ವ್ಯಯಿಸ ಬೇಕಾಗುತ್ತದೆ.



ಈ ರೀತಿಯ ವಿಶೇಷ ಗೆಟಪ್ ಚಿತ್ರಗಳನ್ನು ತೆಗೆಯುವಾಗ ತುಂಬಾ ಮುತುವರ್ಜಿ ವಹಿಸಬೇಕಾಗುತ್ತದೆ. ನಿವೇದಿತಾ ಜೈನ್ ಅವರ ಈ ಚಿತ್ರ ಸೆರೆ ಹಿಡಿಯಲು ೧೦ ಗಂಟೆಗಳ ಸಮಯ ತೆಗೆದುಕೊಂಡಿತು.



ಸ್ಟುಡಿಯೋದಲ್ಲಿ ತೆಗೆದ ಉಪೇಂದ್ರ-ಚಾಂದಿನಿ ಫೋಟೋ.

ನೀವು ಹವ್ಯಾಸಿ ಛಾಯಚಿತ್ರಗ್ರಾಹಕ ಆಗ ಬೇಕೆ?

ಚಿತ್ರ - ಲೇಖನ

ಡಾ. ಹೆಚ್. ಚಂದ್ರಶೇಖರ





ಹವ್ಯಾಸಿ ಛಾಯಾಗ್ರಾಹಕನಾರು?

ಫೋಟೋಗ್ರಫಿ ಕಲೆಯನ್ನು ಕನ್ನಡದಲ್ಲಿ ಛಾಯಾಚಿತ್ರಕಲೆಯೆಂದು ಕರೆಯುವುದು ಇಂದು ರೂಢಿಯಾದರೂ ಫೋಟೋಗ್ರಫಿಯ ಪೂರ್ಣ ಅರ್ಥ ಛಾಯಾ ಚಿತ್ರಣ ಎಂಬ ಶಬ್ದದಲ್ಲಿ ಹೊಮ್ಮುವುದಿಲ್ಲ. ಇಂಗ್ಲಿಷಿನಲ್ಲಿ Photography ಎಂದರೆ ಬೆಳಕಿನಿಂದ ಬರೆಯುವುದು ಎಂದರ್ಥ. ಆದರೆ ನಾವು ಕನ್ನಡದಲ್ಲಿ ಬಳಸುವ ಶಬ್ದ, ಈ ಅರ್ಥವನ್ನು ಪೂರ್ಣರೂಪದಲ್ಲಿ ನೀಡುವುದಿಲ್ಲ. ಅದೇನೆ ಇದ್ದರೂ ಛಾಯಾಚಿತ್ರಣವೆಂಬ ಶಬ್ದ, ಸಮಾನಾರ್ಥವೆಂದು ಒಪ್ಪಿಕೊಂಡು ಮುಂದುವರೆಯೋಣ.

೧೮೨೭ರಲ್ಲಿ ನೇಪಿಯಿಂದ ಆರಂಭಗೊಂಡು, ೧೮೩೯ರಲ್ಲಿ ಫ್ರೆಂಚ್ ವಿಜ್ಞಾನಿ ದಾಗೀರ್ ಮತ್ತು ಇಂಗ್ಲಿಷ್ ವಿಜ್ಞಾನಿ ಟಾಲ್ಬಟ್‌ನಿಂದ ಒಂದು ನಿಶ್ಚಿತ ರೂಪ ಪಡೆದ ಈ ವೈಜ್ಞಾನಿಕ ಕಲೆ ಇಂದು ನಮ್ಮ ನಿತ್ಯ ಜೀವನದ ಅವಿಭಾಜ್ಯಅಂಗವಾಗಿದೆ. ಅದರಲ್ಲಿಯೂ ಪಟ್ಟಣ ಮತ್ತು ನಗರ ವಾಸಿಗಳ ಜೀವನದಲ್ಲಿ ಹುಟ್ಟಿನಿಂದ ಸ್ಮಶಾನಯಾತ್ರೆಯವರೆಗೆ, ಎಲ್ಲಾ ಚಟುವಟಿಕೆಗಳನ್ನು ದಾಖಲಿಸುವ ಅತ್ಯಂತ ಪ್ರಭಾವಶಾಲಿ ಮತ್ತು ನಂಬಲರ್ಹ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಕೇವಲ ದಾಖಲೆಯ ಹಂತವನ್ನು ದಾಟಿ ಇಂದು ಈ ಮಾಧ್ಯಮವು, ಕಲೆಯ ಸ್ಥಾನವನ್ನು ಗಳಿಸಿಕೊಂಡಿದೆ. ಈ ಕಲೆಗಾಗಿ ಬಳಸುವ ಕ್ಯಾಮರಾ, ಫಿಲ್ಮ್ ಮತ್ತು ಫೋಟೋ ಕಾಗದಗಳಲ್ಲಿ ಆಗಿರುವ ಆವಿಷ್ಕಾರಗಳನ್ನು ಬಳಸಿ ಹಲವಾರು ಫೋಟೋ ಕಲಾವಿದರು ತಮ್ಮ ಚಿತ್ರಗಳ ಮೂಲಕ ಕಲಾ ಜಗತ್ತಿನಲ್ಲಿ ಈ ಮಾಧ್ಯಮಕ್ಕೆ ಸ್ಥಾನವನ್ನು ದೊರಕಿಸಿ ಕೊಟ್ಟಿದ್ದಾರೆ.

ಛಾಯಾ ಚಿತ್ರಗ್ರಾಹಕರನ್ನು ಸಾಮಾನ್ಯವಾಗಿ, ಎಲ್ಲಾ ಲಲಿತಕಲಾಕಾರರನ್ನು ವರ್ಗೀಕರಿಸುವಂತೆ, ಹವ್ಯಾಸಿ ಮತ್ತು ವೃತ್ತಿ ನಿರತ ಛಾಯಾಗ್ರಾಹಕರೆಂದು ವರ್ಗೀಕರಿಸಲಾಗುತ್ತದೆ. ಛಾಯಾಚಿತ್ರ ಕಲೆಯನ್ನೇ ಉಪಜೀವನಕ್ಕಾಗಿ ಆಧಾರವಾಗಿ ಹೊಂದಿ ಹಣವನ್ನು ಗಳಿಸುತ್ತಿರುವವರನ್ನು ವೃತ್ತಿ ನಿರತರೆಂದೂ, ಯಾವುದಾದರೊಂದು ಬೇರೆ ವೃತ್ತಿಯಲ್ಲಿದ್ದುಕೊಂಡು ಛಾಯಾಗ್ರಾಹಕರಾಗಿರುವವರನ್ನು ಹವ್ಯಾಸಿಗಳೆಂದು ಸ್ಥೂಲವಾಗಿ ವರ್ಗೀಕರಿಸಬಹುದು. ಆದರೆ ಹಣ ಗಳಿಕೆಯ ದೃಷ್ಟಿಯಿಂದ ಹವ್ಯಾಸಿ ಕಲಾವಿದರೂ ಹಲವು ವೃತ್ತಿ ನಿರತರಿಗಿಂತಲೂ ಹೆಚ್ಚಿಗೆ ಗಳಿಸುವ ಕೆಲ ಉದಾಹರಣೆಗಳುಂಟು. ಆದ್ದರಿಂದ ಹವ್ಯಾಸಿ ಮತ್ತು ವೃತ್ತಿ ನಿರತರನ್ನು ಹಣಗಳಿಕೆಯ ದೃಷ್ಟಿಯಿಂದ ವರ್ಗೀಕರಿಸುವುದು ಸರಿಯಾಗಲಾರದು.

ಈ ವರ್ಗೀಕರಣ ಸುಲಭವಾದುದಲ್ಲವೆಂದು ಒಪ್ಪಿಕೊಂಡರೂ, ಇಬ್ಬರೂ ಉಪಯೋಗಿಸುವುದು ಕ್ಯಾಮರಾವನ್ನೇ ಎಂಬುದಂತು ಸತ್ಯ. ನಾನೀ ಲೇಖನದ ಮಟ್ಟಿಗೆ, ಉಪಜೀವನದ ಆಧಾರವನ್ನೇ ಮಾನದಂಡವಾಗಿರಿಸಿಕೊಂಡು ಮುಂದುವರೆಯುತ್ತೇನೆ. ಅಲ್ಲಲ್ಲಿ ನನ್ನ ಅನುಭವಗಳನ್ನು ನನ್ನ ಪರಿಕಲ್ಪನೆಯನ್ನು ಸ್ಪಷ್ಟೀಕರಿಸಲು ಹೇಳುತ್ತೇನೆ. ಅದನ್ನು ನನ್ನ 'ಅಹಂ' ಎಂದು ಯಾರೂ ಭಾವಿಸಬಾರದೆಂದು ಮೊದಲಿಗೇ ಕೋರುತ್ತೇನೆ.




ಕನಿಷ್ಠ ಅವಶ್ಯಕ ಉಪಕರಣಗಳು


ನಾನು ನನ್ನ ವಿದ್ಯಾರ್ಥಿ ಜೀವನದಲ್ಲಿಯೇ ಕ್ಯಾಮರಾವನ್ನು ಎರವಲು ಪಡೆದು ಫೋಟೋಗಳನ್ನು ತೆಗೆಯಲು ಪ್ರಾರಂಭಿಸಿದರೂ, ಈ ಪುಟ್ಟ ಡಬ್ಬಿಯು ನನ್ನನ್ನು ಸುಮಾರು ೪೫ ವರ್ಷಗಳಿಂದಲೂ ತನ್ನ ಪ್ರೇಮ ಬಂಧನದಲ್ಲಿ ಬಂಧಿಸಿದೆ. ಮೊದ ಮೊದಲು ಬಾಕ್ಸ್ ಕ್ಯಾಮರಾ ಉಪಯೋಗಿಸಿದ ನಂತರ, ೧೯೭೦ರ ಸುಮಾರಿಗೆ ಅಗ್ಫಾ ಕ್ಲಿಕ್ III ನ್ನು ಪಡೆದೆನು. ಅದರಿಂದಲೇ ಕೆಲ ಉತ್ತಮ ಕ.ಬಿ. (ಕಪ್ಪು-ಬಿಳುಪು) ಚಿತ್ರಗಳನ್ನು ತೆಗೆದು ನನ್ನ ಲೇಖನಗಳಿಗೆ ಬಳಸಿದ್ದುಂಟು. ಆದರೆ ದಿನಗಳೆದಂತೆ ಒಳ್ಳೆಯ ಕ್ಯಾಮರಾದ (S.L.R= Single Lens Reflex) ಅವಶ್ಯಕತೆಯ ಅರಿವಾಯಿತು. ೧೯೭೭ರಲ್ಲಿ ನಾನು ವ್ಯಾಸಂಗ ಮತ್ತು ತರಬೇತಿಗೆಂದು ಅಮೇರಿಕೆಗೆ ಹೋಗುವ ಸದವಕಾಶ ಸಿಕ್ಕಿತು. ಇದು ನನ್ನ ಎರಡನೇ ಸಲದ ವಿದೇಶ ಪಯಣ. ನನ್ನ ವೃತ್ತಿಗೂ ಮತ್ತು ತನ್ನ ಹವ್ಯಾಸಕ್ಕೂ ಅತಿ ಅವಶ್ಯಕವೆಂದು ಕಂಡುಕೊಂಡು S.L.R. ಕ್ಯಾಮರಾವನ್ನು ಆಗ ಕೊಂಡೆನು. ಅದು ಕ್ಯಾನನ್. ಅಲ್ಲಿಂದೀಚೆಗೆ ಕ್ಯಾನನ್‌ನ ಇನ್ನೊಂದು ಕ್ಯಾಮರಾ ಮತ್ತು ಜೂಮ್ ಲೆನ್ಸ್‌ನ್ನು ಭಾರತದಲ್ಲಿಯೇ ಕೊಂಡೆ. ಅಂದರೆ ನೀವು ಹವ್ಯಾಸಿ ಕಲಾವಿದರಾಗಿದ್ದರೆ ಕನಿಷ್ಠ ಒಂದು (ಸಾಧ್ಯವಿದ್ದರೆ ಎರಡು) ಯಾವುದೇ ಒಳ್ಳೆಯ ಕಂಪನಿಯ S.L.R. ಕ್ಯಾಮರಾ ಮತ್ತು ಹಲವು ಸೋಸುಕಗಳನ್ನು (Filtters) ಮತ್ತು ಕನಿಷ್ಠ ಒಂದು ೧೦೦-೩೦೦mm ಜೂಮ್ ಲೆನ್ಸ್‌ನ್ನು ಹೊಂದಿಸಿಕೊಳ್ಳಬೇಕು. ಇದರ ಒಟ್ಟು ಬೆಲೆ ಇಂದಿನ ದುಬಾರಿಯ ದಿನಗಳಲ್ಲಿ ಸುಮಾರು ೫೦,೦೦೦ ರೂ. ಗಳಾದೀತು. ನಿರಾಶರಾಗಬೇಡಿ. ಒಂದೊಂದಾಗಿ ಹೊಂದಿಸಿಕೊಳ್ಳಿ. ನನಗೆ ಸಿಗರೇಟ್, ಮದ್ಯಪಾನ ಇತ್ಯಾದಿ ಯಾವ ಚಟಗಳು ಇರದಿದ್ದರಿಂದ ಸುಮಾರು ೫-೬ ವರ್ಷಗಳ ಅವಧಿಯಲ್ಲಿ ಇಷ್ಟನ್ನು ಹೊಂದಿಸಿಕೊಳ್ಳಲು ಸಾಧ್ಯವಾಯಿತು. ನಿಮಗೂ ಸಾಧ್ಯವಾದೀತು. ನೀವು ಮನೆಯೊಳಗಡೆ ಫೋಟೋ ತೆಗೆಯುವ ಆಸಕ್ತಿಯುಳ್ಳವರಾದರೆ ಒಂದು Electronic Flash ಕೊಳ್ಳಲೇಬೇಕು.

ನಾನು ೭೦ ಮತ್ತು ೮೦ರ ದಶಕದಲ್ಲಿ ಹವ್ಯಾಸಿ ಛಾಯಾಗ್ರಾಹಕನಾಗಿ ಕೆಲಸ ಮಾಡುತ್ತಿದ್ದಾಗ, ಕ. ಬಿ. ಫಿಲ್ಮ್ ಮತ್ತು ವರ್ಣ ಪಾರದರ್ಶಿಕೆಯ ಫಿಲ್ಮ್‌ಗಳನ್ನು ಬಳಸುತ್ತಿದ್ದೆ. ಕೆಲವಾದರೂ ಉತ್ತಮ ಮಟ್ಟದ ಚಿತ್ರಗಳನ್ನು ತೆಗೆದದ್ದುಂಟು-ಫೋಟೋ ಕಲೆಯ ದೃಷ್ಟಿಯಿಂದ. ನನ್ನ ವೃತ್ತಿಗಾಗಿ ಕ್ಯಾಮರಾಗಳನ್ನು ಬಳಸಿ ಚಿತ್ರಗಳನ್ನು ತೆಗೆದಿದ್ದೇನೆ. ಈ ಚಿತ್ರಗಳನ್ನು ಬಳಸಿ ಕನ್ನಡದ ಎಲ್ಲಾ ಪ್ರತಿಷ್ಠಿತ ಪತ್ರಿಕೆಗಳಿಗೆ ಮತ್ತು ದೀಪಾವಳಿ ಸಂಚಿಕೆಗಳಿಗೆ ಲೇಖನಗಳನ್ನು ಬರೆದು ಕಳಿಸಿದ್ದೇನೆ. ಆದರೆ ಇದಕ್ಕಾಗಿ ನಾನು ಖರ್ಚು ಮಾಡಿದ ಹಣವೇ ಹೆಚ್ಚು, ಆದಾಯ ಕಡಿಮೆ. ಆದರೆ ನಾನೂ ನನ್ನ ಚಿತ್ರಗಳನ್ನು ನೋಡಿ ನಾನೇ ಆನಂದ ಪಟ್ಟಿದ್ದೇನೆ. ಹಲವಾರು ಕಡೆ ವರ್ಣಪಾರದರ್ಶಿಕಾ ಉಪನ್ಯಾಸಗಳನ್ನು ನೀಡಿದ್ದೇನೆ. ಎಲ್ಲಾ ಕಡೆಯೂ ಸಭಿಕರು (ಅವರಲ್ಲಿ ಕರ್ನಾಟಕದ ಹಲವು ಗಣ್ಯವ್ಯಕ್ತಿಗಳಿದ್ದಾರೆ) ಖುಷಿ ಪಟ್ಟಿದ್ದಾರೆ. ನಾನೂ ಖುಷಿ ಪಟ್ಟಿದ್ದೇನೆ. ಈ ಆನಂದದ ಮುಂದೆ ನನಗಾದ ಹಣದ ವೆಚ್ಚ ನಗಣ್ಯವೆನಿಸಿದೆ. ನಾವು ಎಲ್ಲವನ್ನೂ ಕೇವಲ ಹಣದ ಮಾನದಂಡದಿಂದ ಅಳೆಯಬಾರದಲ್ಲ! ಆದರೂ ನನ್ನಷ್ಟು ಆರ್ಥಿಕ ಸೌಕರ್ಯವಿಲ್ಲದ ಕೆಲ ಹವ್ಯಾಸಿ ಕಲಾವಿದರಿಗಾಗಿ ಕೆಲ ಸೂಚನೆಗಳನ್ನು ನೀಡ ಬಯಸುತ್ತೇನೆ.

ಮೂರನೇ ಕಣ್ಣು

ಈಗ ಕ. ಬಿ. ಚಿತ್ರಗಳನ್ನು ತೆಗೆಯುವುದು ತೊಳೆಯುವುದು (ನೀವೇ ತೊಳೆಯಬೇಕು)





ಮತ್ತು ಪ್ರಿಂಟ ಮಾಡುವುದು ಕೊಂಚ ಹೆಚ್ಚು ಶ್ರಮದಾಯಕ ಮತ್ತು ಹೆಚ್ಚು ಖರ್ಚಿನ ಬಾಬತ್ತು. ಸ್ಟುಡಿಯೋಗಳ ಮೊರೆ ಹೋದರೆ, ಚಿತ್ರ ನೀವು ಊಹಿಸಿದಂತೆ ಬರಲಾರದು. ಕ.ಬಿ. ಚಿತ್ರಗಳು ತೀರ ಅವಶ್ಯವಿದ್ದರೆ ಮಾತ್ರ ಅಥವಾ ನಿಮಗೆ ಅದರಲ್ಲಿ ಸಿಗುವ ಆನಂದವನ್ನು ಅನುಭವಿಸುವ ಇಚ್ಛೆ ಇದ್ದರೆ ಮಾತ್ರ ಕ.ಬಿ. ಫಿಲ್ಮ್‌ನ್ನು ಉಪಯೋಗಿಸಿರಿ. ಇಲ್ಲವಾದರೆ ಬಣ್ಣದ ಫಿಲ್ಮ್‌ನ್ನು ಉಪಯೋಗಿಸಿರಿ. ನೀವು ನಿಮ್ಮ ಶಟರ್‌ನ್ನು ಒತ್ತುವಾಗ ಎಲ್ಲಾ ಲೆಕ್ಕಾಚಾರ ಮಾಡಿ ಒತ್ತಬೇಕು. ಪ್ರತಿ ಒತ್ತುವಿಕೆಗೆ ನೀವು ರೂ. ೬ನ್ನು ತೆರಬೇಕಾಗುತ್ತದೆ ಎಂಬುದನ್ನು ನೆನಪಿನಲ್ಲಿಡಿರಿ. ವರ್ಣಪಾರದರ್ಶಿಕೆಯ ಫಿಲ್ಮ್ ಆದರೆ ಸುಮಾರು ೧೨ ರೂಗಳನ್ನು ವೆಚ್ಚ ಮಾಡಬೇಕಾಗುತ್ತದೆ. ನೆನಪಿನಲ್ಲಿಡಿರಿ.

ನಿಮ್ಮ ಸುತ್ತಲಿನ ಪರಿಸರವನ್ನು ತೆರೆದ ಕಣ್ಣುಗಳಿಂದ ಕಲಾತ್ಮಕ ದೃಷ್ಟಿಯಿಂದ ನೋಡುವುದನ್ನು ಅಭ್ಯಾಸ ಬಲದಿಂದ ರೂಢಿಸಿ ಕೊಳ್ಳಿರಿ. ಸಾಮಾನ್ಯರ ದೃಷ್ಟಿಯಲ್ಲಿ ಏನು ಅಲ್ಲದಂಥ ದೃಶ್ಯ ನಿಮ್ಮ ಕ್ಯಾಮರಾದ ಕಣ್ಣಿನಲ್ಲಿ ಅಸಾಮಾನ್ಯ ದೃಶ್ಯವಾಗಿ ಕಾಣಬಹುದು. ಅದಕ್ಕಾಗಿಯೇ ನಾನು ಕ್ಯಾಮರಾವನ್ನು ನನ್ನ ಒಂದು ಲೇಖನದಲ್ಲಿ ನನ್ನ ಮೂರನೇ ಕಣ್ಣು ಎಂದು ಕರೆದದ್ದು. ಕವಿ ಕಣವಿಯರು ಕಂಡ ದೃಶ್ಯಗಳಿಗೆ ಸಂವಾದಿಯಾಗಿ ನನ್ನ ವರ್ಣ ಪಾರದರ್ಶಿಕೆಗಳನ್ನು ಹೊಂದಿಸಿ ಲೇಖನ ಪ್ರಕಟವಾದಾಗ ಸ್ವತಃ ಶ್ರೀ ಕಣವಿ ಅವರೇ ಮೆಚ್ಚಿಕೊಂಡರು. ಅಂದರೆ ನೀವೂ ಕ್ಯಾವ್ಯಾತ್ಮಕವಾಗಿ ನೋಡುವುದನ್ನು ಕಲಿಯಬಹುದು. ಅಷ್ಟೇ ಅಲ್ಲ, ಕಲಿಯಿರಿ.

ಸಾಮಾನ್ಯವಾಗಿ ಹೂಗಳು, ಸುಂದರ ದೇವಾಲಯಗಳು, ಶಿಲ್ಪಗಳು, ಮಳೆಗಾಲ, ರೈತನ ಕಸುಬುಗಾರಿಕೆ, ಹಳ್ಳಿಯ ಕಸುಬುಗಳು, ನಗರ ಜೀವನದ ಧಾವಂತ, ಕೊಳಚೆ ಪ್ರದೇಶ ಇತ್ಯಾದಿ ನೂರಾರು ದೃಶ್ಯಗಳನ್ನು ಕಲಾತ್ಮಕವಾಗಿ ಹೊಂದಿಸಿದರೆ (Compose) ಒಳ್ಳೆಯ ಚಿತ್ರಗಳನ್ನು ಸೃಷ್ಟಿಸಲು ಸಾಧ್ಯ. ಇದಕ್ಕಾಗಿ ಫೋಟೋಗ್ರಫಿ ಕಲೆಯ ಪುಸ್ತಕಗಳನ್ನು ಕೊಂಡು ಓದಿ ಹಾಗೆ ನೋಡುವುದನ್ನು ರೂಢಿಸಿಕೊಳ್ಳಿರಿ.

ನಿಸರ್ಗದ ಚಿತ್ರಗಳನ್ನು ತೆಗೆಯುವುದು ತುಲನಾತ್ಮಕವಾಗಿ ಸುಲಭವಾದರೂ, ಇದಕ್ಕಾಗಿ ವನ್ಯಜೀವಿಗಳ ಜೀವನ ಕ್ರಮದ ಅಧ್ಯಯನ ಅವಶ್ಯ. ವನ್ಯಜೀವಿಯ ಅಧ್ಯಯನ ಶೇಕಡ ೯೦ ರಷ್ಟು ಇದ್ದರೆ ಫೋಟೋಗ್ರಫಿ ಶೇಕಡ ೧೦ರಷ್ಟು ಎಂದು ಸುಪ್ರಸಿದ್ಧ ವನ್ಯಜೀವಿ ಛಾಯಾಗ್ರಾಹಕ ಶ್ರೀ ಇ. ಹನುಮಂತರಾವ್ ಅವರು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಇನ್ನೊಂದು ಮಾತನ್ನು ಹೇಳಲೇಬೇಕು. ಭಾರತದ ಮಟ್ಟಿಗೆ ನೈಸರ್ಗಿಕ ಫೋಟೋಗ್ರಫಿ ಎಂದರೆ (Nature photography) ವನ್ಯಜೀವಿ ಫೋಟೋಗ್ರಫಿ ಮಾತ್ರ. ಆದರೆ ಇದರ ಪೂರ್ಣ ಪರಿಕಲ್ಪನೆಯಲ್ಲಿ (Concept) ಭೂವಿಜ್ಞಾನ, ಸಸ್ಯಶಾಸ್ತ್ರ ಇತ್ಯಾದಿ ಶಾಸ್ತ್ರಗಳಿಗೆ ಸಂಬಂಧಿಸಿದ ವಸ್ತುಗಳು ಸೇರುತ್ತವೆ. ಆದರೆ ಭಾರತದ ಫೋಟೋಗ್ರಾಫರರ ದೃಷ್ಟಿ ಸಂಕುಚಿತವಾಗಿದೆ. ಇದನ್ನು ನೆನಪಿನಲ್ಲಿಡಿರಿ.

ಮಾರ್ಗದರ್ಶಿ ಸೂತ್ರಗಳು

ಪತ್ರಿಕೆಗಳಿಗೆ ಚಿತ್ರಗಳನ್ನು ಕಳಿಸುವಾಗ ಫೋಟೋಗಳನ್ನೇ ಕಳಿಸುವುದು ಉಚಿತ. ವರ್ಣ ಪಾರದರ್ಶಿಕೆಗಳು ತುಲನಾತ್ಮಕವಾಗಿ ಒಳ್ಳೆಯ ಮರುಮುದ್ರಣಕ್ಕೆ (Reproduction) ಅಪೇಕ್ಷಣೀಯವಾದರೂ, ಬಹುತೇಕ ಎಲ್ಲಾ ಪತ್ರಿಕೆಗಳವರು ಇವುಗಳನ್ನು ಅಚ್ಚಾದನಂತರ ಕಳೆದು ಬಿಡುತ್ತಾರೆ ಅಥವಾ ಹಲವು ತಿಂಗಳುಗಳ ನಂತರ ವಿರೂಪಗೊಳಿಸಿ ಹಿಂತಿರುಗಿಸುತ್ತಾರೆ. ಕನ್ನಡದ ಒಂದು ಪ್ರತಿಷ್ಠಿತ ಮಾಸ ಪತ್ರಿಕೆಯು ಬೀದರ ಜಿಲ್ಲೆಗೆ ಸಂಬಂಧಿಸಿದ ನನ್ನ ಸುಮಾರು ೧೫ ವರ್ಣ ಪಾರದರ್ಶಿಕೆಗಳನ್ನು ಹಿಂತಿರುಗಿಸಲೇ ಇಲ್ಲ. ಸುಮಾರು ೫-೬ ಚಿತ್ರಗಳನ್ನು ಪ್ರಕಟಿಸಿದರು. ಅದಕ್ಕೇನೋ ಸಂಭಾವನೆ ಕೊಟ್ಟರು. ಆದರೆ ಇದುವರೆಗೆ ಸುಮಾರು ೫-೬ ವರ್ಷಗಳಾದರೂ ನನಗೆ ಬೀದರಿಗೆ ಪುನಃ ಹೋಗಲು ಸಾಧ್ಯವಾಗಿಲ್ಲ. ಇಂಥ ಕಟು ಅನುಭವಗಳೂ ಸಾಕಷ್ಟು ಇವೆ. ಆದರೂ ನಾನು ಅವುಗಳನ್ನು ನುಂಗಿಕೊಂಡಿದ್ದೇನೆ! ನೀವು ಈ ರೀತಿ ನುಂಗಿ ಕೊಳ್ಳಲು ಸಿದ್ಧರಿರಬೇಕು!! ಇಲ್ಲವಾದರೆ ಪತ್ರಿಕೆಗಳಿಂದ ದೂರವಿರಬೇಕು. ಇದು ಹವ್ಯಾಸಿ ಕಲಾವಿದನಿಗೆ ಅಸಾಧ್ಯ.

ಚಿತ್ರಕಲಾವಿದನಂತೆ ಹವ್ಯಾಸಿ ಛಾಯಾ ಗ್ರಾಹಕರು ತನ್ನ ಚಿತ್ರಗಳ ಪ್ರದರ್ಶನ ನಡೆಸಲ ಸಾಧ್ಯ. ಆದರೆ ಇದರಿಂದ ಕೇವಲ ಹೆಸರು ಬರಬಹುದು. ಅದೂ ಪತ್ರಿಕಾ ಸಂಪಾದಕರು ಮತ್ತು ವರದಿಗಾರರು ಕೃಪೆಮಾಡಿದರೆ ಮಾತ್ರ. ಆದರೆ ಸಂಪಾದನೆ ಶೂನ್ಯ. ಸುಮಾರು ನೂರು ಚಿತ್ರಗಳ ಪ್ರದರ್ಶನ ನಡೆಸಬೇಕೆಂದರೆ ಒಟ್ಟು ಖರ್ಚು ರೂ. ೧೦.೦೦೦ ಬರಬಹುದು. ಆದರೆ ಚಿತ್ರಗಳನ್ನು ಕೊಳ್ಳುವರು ಮಾತ್ರ ಇರಲಾರರು. ದಿ.ಮುಗುಳಿಯವರ 'ಒಂದಾರಕೊಳ್ಳಿರೋ ಮಂದಾರ ಹೂವ' ಎಂಬ ಕವಿತೆಯನ್ನು ನೆನೆಪಿಸಿಕೊಳ್ಳುತ್ತಾ ನೀವು ಎರಡು ಮೂರು ದಿನಗಳನ್ನು ಕಳೆಯಬೇಕು. ಆದರೂ ಒಂದೆರಡು ಪ್ರದರ್ಶನಗಳನ್ನು ಆತ್ಮ ತೃಪ್ತಿಗಾಗಿ ನಡೆಸಬಹುದು. ಅದೃಷ್ಟ ಲಕ್ಷ್ಮಿ ಒಲಿದರೆ ಒಲಿಯಬಹುದು.

ನಾವು ಎಷ್ಟೇ ಆತ್ಮ ಸಂತೋಷ, ಖುಷಿ ಇತ್ಯಾದಿಗಳ ಬಗ್ಗೆ ಮಾತಾಡಿದರೂ, ದುಬಾರಿ ಖರ್ಚಿನ ಈ ಹವ್ಯಾಸದಿಂದ ಸ್ವಲ್ಪವಾದರೂ ಹಣದ ಆದಾಯ ಬರದಿದ್ದರೆ ಹವ್ಯಾಸವನ್ನೇ ಕೈ ಬಿಡ ಬಹುದು. ಅಂಥ ಉದಾಹರಣೆಗಳು ಇಲ್ಲದಿಲ್ಲ. ಆದ್ದರಿಂದ ಕೊಂಚವಾದರೂ ಹಣಗಳಿಸುವ ಕೆಲ ಸೂಚನೆಗಳನ್ನು ನೀಡಿ ಈ ಲೇಖನ ಮುಗಿಸು ತ್ತೇನೆ.

- ❑ ಕೆಲ ಪತ್ರಿಕೆಗಳು ತಮ್ಮ ಪತ್ರಿಕೆಯ ಲೇಖನಗಳಿಗೆ ಮತ್ತು ಕವನಗಳಿಗೆ ಛಾಯಾ ಚಿತ್ರಗಳನ್ನು ಉಪಯೋಗಿಸುತ್ತಾರೆ. ಆದ್ದರಿಂದ ಅಂಥ ಪತ್ರಿಕೆಗಳೊಂದಿಗೆ ಸಂಪರ್ಕವಿಟ್ಟುಕೊಳ್ಳಿರಿ. ಕನ್ನಡದ ಪತ್ರಿಕೆಯು ನೀಡುವ ಗೌರವಧನ ನಿಜವಾದ ಅರ್ಥದಲ್ಲಿಯೂ ಗೌರವಧನವೇ!!. ಅಷ್ಟೇ ಅಲ್ಲದೆ ಕೆಲ ಪತ್ರಿಕೆಗಳು ತಮ್ಮ ಪೆಟ್ (Pet)ಗಳನ್ನು ಹೊಂದಿದ್ದಾರೆ. ಆದ್ದರಿಂದ ಮೊದ ಮೊದಲಿಗೆ ಪ್ರೋತ್ಸಾಹ ಸಿಗದಿದ್ದರೆ ನಿರಾಶರಾಗ ಬೇಡಿ.
- ❑ ಜಾಹೀರಾತು ಕಂಪನಿಗಳಿಗೆ, ಪ್ರವಾಸೋ ದ್ಯಮಕ್ಕೆ ಸಂಬಂಧಿಸಿದ ಸಂಸ್ಥೆಗಳಿಗೆ ಫೋಟೋಗಳ (ಅದರಲ್ಲಿಯೂ ವಿಶೇಷವಾಗಿ ವರ್ಣಪಾರ ದರ್ಶಿಕೆಗಳು) ಅವಶ್ಯಕತೆ ಇರುತ್ತದೆ. ಆದರೆ ಬಹುತೇಕ ಜಾಹೀರಾತು ಕಂಪನಿಗಳು ಶೋಷಣಾ ತಾಣಗಳು. ಜಾಹೀರಾತಿನಿಂದ ಲಕ್ಷಗಟ್ಟಲೆ ಲಾಭಗಳಿಸಿದರೂ ಛಾಯಾಗ್ರಾಹಕನಿಗೆ ಒಂದು ಸಾವಿರವನ್ನು ಗೌರವಧನವನ್ನಾಗಿ ನೀಡುವುದಿಲ್ಲ. ಇವರೊಡನೆ ಎಚ್ಚರಿಕೆಯಿಂದ ವ್ಯವಹರಿಸಬೇಕು.
- ❑ ಛಾಯ ಚಿತ್ರಗಳನ್ನು ಏಜೆಂಟರುಗಳ ಮೂಲಕವೂ ಮಾರಾಟ ಮಾಡಬಹುದು. ಆದರೆ ಈ ಏಜೆಂಟೂಗಳೂ ಛಾಯಾಗ್ರಾಹಕನನ್ನು

ವಂಚಿಸುವುದುಂಟು. ಆದ್ದರಿಂದ ಏಜೆಂಟೂಗಳನ್ನು ಆರಿಸುವುದು ಅವಶ್ಯಕವಾದರೂ, ಇಲ್ಲಿ ಸ್ವಾನುಭವವೇ ಮಾನದಂಡ. ಈ ಲೇಖನದ ಜೊತೆಗೆ ಕೆಲ ಸ್ವದೇಶೀ ಮತ್ತು ಪರದೇಶಿ ಏಜೆಂಟರ ವಿಳಾಸಗಳನ್ನು ಕೊಟ್ಟಿದ್ದೇನೆ. ಆದರೆ ಅವುಗಳ ಕಾರ್ಯಕ್ಷಮತೆ ಮತ್ತು ಪ್ರಾಮಾಣಿಕತೆ ಬಗ್ಗೆ ನಾನು ಜವಾಬ್ದಾರನಲ್ಲ ಎಂಬುದನ್ನು ಹೇಳ ಬಯಸುತ್ತೇನೆ. ಒಬ್ಬೊಬ್ಬರ ಅನುಭವ ಒಂದೊಂದು ತರಹ. ನಾನಂತೂ ಇದುವರೆಗೂ ಯಾವ ಏಜೆಂಟರೊಡನೆ ಸಂಪರ್ಕವಿಟ್ಟು ಕೊಂಡಿಲ್ಲ.

❑ ಭಾವ ಅಭಿವ್ಯಕ್ತಿ ಚಿತ್ರಗಳಿಗಿಂತಲೂ (Pictorial photos) ವನ್ಯಜೀವಿ ಚಿತ್ರಗಳಿಗೆ ಹೆಚ್ಚಿನ ಬೇಡಿಕೆ ಇದೆ. ನಂತರ, ಐತಿಹಾಸಿಕ ಸ್ಮಾರಕಗಳು, ಸಾಮಾಜಿಕ ಜೀವನ, ಹಬ್ಬ, ಜಾತ್ರೆಗಳು ಇತ್ಯಾದಿ ವಸ್ತುಗಳ ಚಿತ್ರಗಳಿಗೆ ಬೇಡಿಕೆ ಇದೆ.

❑ ನಮ್ಮ ದೇಶದಲ್ಲಿ ಹವ್ಯಾಸಿ ಛಾಯಾಗ್ರಾಹಕರಿಗೆ ಸೂಕ್ತವಾದ ಪ್ರೋತ್ಸಾಹವಿಲ್ಲವೆಂಬುದು ಕಟು ಸತ್ಯ. ಛಾಯಾಗ್ರಹಣ ಕೇವಲ ದಾಖಲೆಯ ಹಂತವನ್ನು ದಾಟಿ ಕಲೆಯ ಮಟ್ಟಕ್ಕೆ ಏರುವುದು ಹವ್ಯಾಸಿ ಛಾಯಾಗ್ರಾಹಕರಿಂದ ಎಂಬುದೂ ಅಷ್ಟೇ ಸತ್ಯ. ಆದ್ದರಿಂದ ಎಲ್ಲಾ ಭಾಷೆಯ ಪತ್ರಿಕೆಗಳು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ಸರ್ಕಾರ, ಹವ್ಯಾಸಿ ಛಾಯಾಚಿತ್ರ ಕಲೆಗೆ ಪ್ರೋತ್ಸಾಹಿಸುವುದು ಅವಶ್ಯಕ. ಅಂಥ ಪರಿಸ್ಥಿತಿ ಆದಷ್ಟು ಬೇಗ ನಿರ್ಮಾಣವಾಗಿ ನಮ್ಮ ದೇಶದ ಹವ್ಯಾಸಿ ಛಾಯಾಗ್ರಾಹಕರ ಮಟ್ಟ ಮತ್ತು ಸಂಖ್ಯೆ ಏರಲಿ ಎಂದು ಹಾರೈಸುತ್ತೇನೆ.

ಕೆಲ ಫೋಟೋ ಏಜೆಂಟರು

DINODIA PICTURE AGENCIES
13, VITHOBA LANE, 2ND FLOOR
KALABADEVHI,
BOMBAY - 400002.

R.FOTOMEDIA (P) LTD
FLAT NO. 301, E 540, GREATER KAILASH
NEW DELHI - 110048.

MEDIA FUSION
87, KUMARKRUPA ROAD,
BANGALORE - 560 001.

BLACK STAR INC.,
450, PARK AVENUE, S.
NEW YORK NY- 10016, U.S.A.

WOODFIN CAMP & ASSOCIATE INC.,
415, MADISON AVENUE
NEW YORK,
NY 10022, USA

BRUCE COLEMAN INC.
381, 5TH AVENUE, NEW YARK,
NY 10016, USA

COLORIFIC PHOTO LIBRARY
GARDEN OFFICES,
GILRAY HOUSE,
GLOUCESTAR TEVRACE,
LONDON W23DF, UK.

SUSAN GRIGGS AGENCY
17, VICTORIA GROUP,
LONDON W8 5RW, UK

ಫೋಟೋಗ್ರಫಿ- ಹಣ ಕೀರ್ತಿ ತರುವ ಗೌರವಾನ್ವಿತ ವೃತ್ತಿ



ಚಿತ್ರ : ಎಸ್. ಹನುಮಂತ ಜೋಯಿಸ್

ಫೋಟೋಗ್ರಫಿಯು ಎಲ್ಲಾ ಕಲೆಗಳಂತೆ ಸೃಜನಾತ್ಮಕ ಕಲೆ. ಇಂದು ಜಗತ್ತಿನಾದ್ಯಂತ ಎಲ್ಲಾ ವರ್ಗದ ಜನತೆಯಿಂದ ಆಕರ್ಷಿತವಾಗಿರುವ ಫೋಟೋಗ್ರಫಿಯು ಗೌರವಾನ್ವಿತ ವೃತ್ತಿಯೂ ಆಗಿದೆ. ದೈನಂದಿನ ಜನಜೀವನದ ಸಂಸ್ಕೃತಿಯ ಒಂದು ಭಾಗವೇ ಆಗಿರುವ ಫೋಟೋಗ್ರಫಿಯು ಇತರ ಎಲ್ಲಾ ಕಲೆಗಳಂತೆ ಜನಾದರಣೀಯವಾದ ಹಾಗೂ ಕೀರ್ತಿ ಬಹುಮಾನಗಳನ್ನು ತರುವ ಸೃಜನಾತ್ಮಕ ವೃತ್ತಿಯೆನಿಸಿದೆ. ಜಗತ್ತಿನಲ್ಲಿ ಬಹಳಷ್ಟು ಮಂದಿ ಫೋಟೋಗ್ರಾಫರ್‌ಗಳು ಇತರೆ ಕಲಾವಿದರಷ್ಟೇ ಪ್ರಖ್ಯಾತರಾಗಿದ್ದಾರೆ.

'ಕೈಯಲ್ಲಿ ಕ್ಯಾಮರಾ ಇದ್ದರೆ ಜಗತ್ತನೇ ಗೆಲ್ಲುವ ಶಕ್ತಿ ಕ್ಯಾಮರಾ ಹಿಡಿದ ಕೈಗೆ ಬರುತ್ತದೆ' ಎಂಬ ಮಾತಿದೆ ನಿಜ. ಆದರೆ 'ಕೋಲು ಹಿಡಿದವರೆಲ್ಲರೂ ಹೇಗೆ ಭೇಟೆಗಾರರಾಗುವುದಿಲ್ಲವೋ ಅದೇ ರೀತಿ ಕ್ಯಾಮರಾ ಹಿಡಿದವರೆಲ್ಲರೂ ಪ್ರಖ್ಯಾತರಾದ ಫೋಟೋಗ್ರಾಫರ್ಸ್ ಆಗುವುದಿಲ್ಲ. ಬರೀ ಕ್ಯಾಮರಾ ವ್ಯಕ್ತಿಯನ್ನು ಪ್ರಖ್ಯಾತ ಪೋಟೋ ಗ್ರಾಫರ್‌ನನ್ನಾಗಿ ಪರಿವರ್ತಿಸಿ ಬಿಡುವುದಿಲ್ಲ. ಬಿಸಿಲಿನಲ್ಲಿ ನಿಂತು ಬೆವರು ಸುರಿಸಿ ಸ್ಟುಡಿಯೋದಲ್ಲಿ ನಿಂತು ಮಾನಸಿಕ ಮತ್ತು ದೈಹಿಕವಾಗಿ ಶ್ರಮವಹಿಸಿದರೆ ಮಾತ್ರ ಶ್ರೇಷ್ಠ ಫೋಟೋಗ್ರಾಫರ್ ಎಂದು ಹೆಸರು ಪಡೆಯಬಹುದಾಗಿದೆ. ಅಂದರೆ ಇದಕ್ಕೆ ತರಬೇತಿಯು ಅಗತ್ಯವಾಗಿ ಬೇಕಾಗುತ್ತದೆ.

ಫೋಟೋಗ್ರಫಿಯು 'make it or break it' ರೂಪಿಸು ಇಲ್ಲವೇ ಚಿಂದಿ ಮಾಡು' ಎಂಬ ವೃತ್ತಿ. ಈ ವೃತ್ತಿಯಲ್ಲಿ ಯಾವುದೇ ರಕ್ಷಣಾ ಮಾರ್ಗಗಳಿಲ್ಲ. ತಾಂತ್ರಿಕ ಕುಶಲತೆ, ಸೌಂದರ್ಯ ಪ್ರಜ್ಞೆ. ಸೃಜನಾತ್ಮಕ ಸಾಮರ್ಥ್ಯ ಮತ್ತು ಎಲ್ಲರಿಂದಲೂ ಆಕರ್ಷಣೆಗೊಳಗಾಗುವ ಚಿತ್ರಗಳನ್ನು ತೆಗೆಯುವ ಒಳಗಣ್ಣು ಇವೆಲ್ಲವುಗಳ ಮಿಶ್ರಣವೇ ಫೋಟೋಗ್ರಫಿ. ಇದನ್ನು ವೃತ್ತಿಯಾಗಿ ಸ್ವೀಕರಿಸುವವರಿಗೆ ಆಯ್ಕೆಗಳು ಬಹಳಷ್ಟಿದೆ.

ಆಯ್ಕೆಯ ಅವಕಾಶಗಳು

ಫೋಟೋಗ್ರಫಿಯಲ್ಲಿ 'ವಾಣಿಜ್ಯ ಫೋಟೋಗ್ರಫಿ' ಉತ್ತಮವಾದದ್ದು ಇಲ್ಲಿ ಫೋಟೋಗ್ರಾಫರ್‌ನಿಗೆ ಚಿತ್ರಗಳನ್ನು ತೆಗೆಯುವಾಗ ಬಹಳಷ್ಟು ವೈವಿಧ್ಯತೆಯ ಅವಕಾಶ ಇರುತ್ತದೆ. ಪ್ಯಾಷನ್ ದಿನಬಳಕೆಯ ವಸ್ತುಗಳು, ಜಾಹೀರಾತು, ಒಳಾಂಗಣದ ದೃಶ್ಯಗಳನ್ನು ಸೆರೆಹಿಡಿಯುವ ಇಲ್ಲಿನ ಕೆಲಸ ಆಕರ್ಷಕವಾದದ್ದು. ವಾಣಿಜ್ಯ ಫೋಟೋಗ್ರಫಿಯಲ್ಲಿ ತೆಗೆಯುವ ಫ್ಯಾಷನ್ ಮತ್ತು ಗ್ಲಾಮರ್ ಚಿತ್ರಗಳನ್ನು ಜಾಹೀರಾತು, ಪ್ಯಾಷನ್, ಮ್ಯಾಗಜಿನ್, ಪೋಸ್ಟರ್ ಹಾಗೂ ಪ್ಯಾಷನ್ ಮಾರಾಟಗಳಲ್ಲಿ ಬಳಸಲಾಗುತ್ತದೆ. ಉತ್ಪಾದಕ ವಸ್ತುಗಳ ಚಿತ್ರಗಳು ಜಾಹೀರಾತಿಗಾಗಿ ಬಳಕೆಯಾಗುತ್ತವೆ.

ವಾಣಿಜ್ಯ ಫೋಟೋಗ್ರಫಿಯ ನಂತರದ ಆಯ್ಕೆ 'ವೃತ್ತಪತ್ರಿಕಾ' ಫೋಟೋಗ್ರಫಿ ಹಾಗೂ ಫೋಟೋ ಜರ್ನಲಿಸಂ. ಯಾವುದೇ ಒಂದು ಲೇಖನಕ್ಕೆ ಪೂರಕವಾಗಿ ಫೋಟೋಗಳು ವೃತ್ತ ಪತ್ರಿಕೆಗೆ ಬೇಕಾಗುತ್ತವೆ. ವೃತ್ತ ಪತ್ರಿಕೆಗಳಲ್ಲಿ ಬರೀ ಚಿತ್ರಗಳನ್ನು ಮಾತ್ರ ಹಾಕಿ ಸನ್ನಿವೇಶವನ್ನೋ ಅಥವಾ ಸಂದರ್ಭವನ್ನೋ ಮನ ಮುಟ್ಟುವಂತೆ ಕಟ್ಟಿಕೊಡುವ ಪತ್ರಿಕೆಗಳು ಪಾಶ್ಚಾತ್ಯರಲ್ಲಿವೆ. ಆಗೊಮ್ಮೆ ಈಗೊಮ್ಮೆ ಭಾರತೀಯ ಭಾಷಾ ಪತ್ರಿಕೆಗಳಲ್ಲಿಯೂ ಇವು ಕಾಣುತ್ತವೆ. ಫೋಟೋ ಜರ್ನಲಿಸಂನಲ್ಲಿ ಚಿತ್ರಗಳ ಮೂಲಕವೇ ಕತೆ ಹೇಳುವ ವಿಧಾನವಿರುತ್ತದೆ. ಮ್ಯಾಗಜಿನ್, ವಾರದ ಪುರವಣಿಗಳಲ್ಲಿ ವಾರಪತ್ರಿಕೆಗಳಲ್ಲಿ ಫೋಟೋ ಜರ್ನಲಿಸಂ ಇರುತ್ತದೆ. ಸುಧಾ ವಾರ ಪತ್ರಿಕೆಯಲ್ಲಿ ಪ್ರಕಟವಾಗುವ ಫೋಟೋ ಚಿತ್ರಕಥೆ, ಫೋಟೋ ಜರ್ನಲಿಸಂ'ಗೆ ಒಂದು ಸ್ಪಷ್ಟ ಉದಾಹರಣೆ.

Aerial photography (ಆಕಾಶ ಫೋಟೋಗ್ರಫಿ) ಮತ್ತು under water photography (ಅಂತರ್‌ಜಲ ಫೋಟೋಗ್ರಫಿ) ಇವು ಬಹಳ ವಿಶಿಷ್ಟವಾದವುಗಳು. ಈ ಫೋಟೋಗ್ರಫಿಗೆ ವಿಶೇಷವಾದ ತಾಂತ್ರಿಕ ಉಪಕರಣ ಬೇಕಾಗುತ್ತದೆ. 'ಇಂಡಸ್ಟ್ರಿಯಲ್ ಫೋಟೋಗ್ರಫಿಯ' ಚಿತ್ರಗಳಿಗೆ ಕೈಗಾರಿಕೆಗಳು ವಾಣಿಜ್ಯ ಮತ್ತು ಮ್ಯಾಗಜಿನ್‌ಗಳಿಂದ ಅಪಾರ ಬೇಡಿಕೆ ಇರುತ್ತದೆ. ವೈಜ್ಞಾನಿಕ ಫೋಟೋಗ್ರಫಿಯ ಸಂಶೋಧನೆ ವೈಜ್ಞಾನಿಕ ಗ್ರಂಥಗಳಿಗೆ ಮತ್ತು ಮ್ಯಾಗಜಿನ್‌ಗಳಿಗೆ ಉಪಯುಕ್ತವಾಗುತ್ತದೆ. ಪ್ರಾಣಿ ಪರಿಸರ ಅದರಲ್ಲಿಯೂ ಕ್ರೂರ ಪ್ರಾಣಿಗಳ ಚಿತ್ರಗಳನ್ನು ತೆಗೆಯುವ ಫೋಟೋಗ್ರಫಿಯು ತುಂಬಾ ಅಪಾಯಕಾರಿಯಾದದ್ದು. ಇದಕ್ಕೆ ಸಹನೆ, ತಾಳ್ಮೆ ಪ್ರಾಣಿ ಪಕ್ಷಿಗಳಲ್ಲಿ ಪ್ರೀತಿ, ಸಾಹಸ ಪ್ರವೃತ್ತಿ ಹಾಗೂ ಸೂಕ್ಷ್ಮಮತಿಯುಳ್ಳವರಾಗಿರಬೇಕು.

ಒಂದಂಶವಂತೂ ಸ್ಪಷ್ಟ. ಫೋಟೋ ಗ್ರಫಿಯಲ್ಲಿ ಪ್ರಾವಿಣ್ಯತೆ ಗಳಿಸಬೇಕಾದರೆ ಬೇಕಾದಷ್ಟು ಫಿಲ್ಮ್‌ರೋಲ್ ಮತ್ತು ಹಣ ವ್ಯಯ ಮಾಡಿದರೆ ಒಂದು ಚಿತ್ರ ತೆಗೆಯಬಹುದು. ಆದರೆ ಉತ್ತಮ ಚಿತ್ರ ತೆಗೆಯುವುದು ಕಷ್ಟ. ಏಕೆಂದರೆ ಇದಕ್ಕೆ ಫೋಟೋಗ್ರಫಿಯ ಪ್ರಾಥಮಿಕ ಅರಿವು, ತಾಂತ್ರಿಕ ಉಪಕರಣದ ಬಳಕೆಯ ವಿಧಾನ, ವಿವಿಧ ಬಗೆಯ ಫೋಟೋಗ್ರಫಿಯಲ್ಲಿ ಕ್ಯಾಮರಾ ಹೇಗೆ ಬಳಸಬೇಕೆಂಬುದರ ನೈಪುಣ್ಯತೆ ಇತ್ಯಾದಿಗಳ ಬಗ್ಗೆ ಜ್ಞಾನ ಬೇಕೇಬೇಕು.

ಕೀರ್ತಿ ಮತ್ತು ಹಣ

ಫೋಟೋಗ್ರಫಿಯಲ್ಲಿ ಯಶಸ್ವಿಯಾದರೆ ಅವನಿಗೆ ಹಣ, ಕೀರ್ತಿ ತಾನೇ ತಾನಾಗಿ ಬರುತ್ತದೆ. ಇಂದು ಎಲ್ಲಾ ರಂಗಗಳಲ್ಲಿ, ಕ್ಷೇತ್ರಗಳಲ್ಲಿ ಹಬ್ಬ, ಹರಿದಿನ, ಸಭೆ ಸಮಾರಂಭಗಳಲ್ಲಿ ಫೋಟೋಗ್ರಫಿಗೆ ತನ್ನದೇ ಆದ ಸ್ಥಾನವಿದೆ. ಒಂದು ಫೋಟೋ ಪ್ರಕಟವಾದರೆ ರೂ ೫೦ರಿಂದ ರೂ ೧೦೦೦ ವರೆಗೆ ಸಂಭಾವನೆ ದೊರೆಯುತ್ತದೆ. ಬಹಳ ಪ್ರಸಿದ್ಧರಾದ ಫೋಟೋಗ್ರಾಫರ್ಸ್ ಇಂದು ಐದು ಅಂಕಿಯ ಸಂಭಾವನೆಯ ಬೇಡಿಕೆ ಮುಂದಿಡುತ್ತಾರೆ. ಮಾಡೆಲಿಂಗ್ಸ್‌ನ ಫೋಟೋ ಗ್ರಫಿಗೆ ರೂ ೨೫,೦೦೦. ಸಾಮಾನ್ಯವಾಗಿ ಇದರಲ್ಲಿ ಒಂದು ದಿನಕ್ಕೆ ರೂ. ೫೦೦೦ ನಿಗದಿಪಡಿಸಲಾಗುತ್ತದೆ. ಸರ್ಕಾರದ ಸಾಧನೆ, ಕಲೆ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಡಾಕ್ಯುಮೆಂಟ್ ತಯಾರಿಸಲು ಸರ್ಕಾರದ ಹುದ್ದೆಗಳು ದೊರೆಯುತ್ತವೆ.

ಸೃಜನಾತ್ಮಕ ಕಲೆ

ಮೊದಲೇ ತಿಳಿಸಿದಂತೆ ಫೋಟೋಗ್ರಫಿಯು ಒಂದು ಸೃಜನಾತ್ಮಕ ಕಲೆ. ಕ್ಯಾಮರಾವನ್ನು ಯಾರು ಬೇಕಾದರೂ ನಿರ್ವಹಿಸಬಹುದು. ಆದರೆ ಅದು ಕಲೆಯಾಗಬೇಕಾಗಿದೆ ಕ್ಯಾಮರಾ ಹಿಡಿದವನು ಸೃಜನಶೀಲನಾಗಿರಬೇಕಾಗುತ್ತದೆ. ಈ ಸೃಜನಶೀಲತೆ ತಾಂತ್ರಿಕತೆಯ ತಿಳುವಳಿಕೆಯಿಂದ ಸಾಧ್ಯವಾಗುವಂತಹದ್ದು. ಆದ್ದರಿಂದ ತರಬೇತಿ ಅತ್ಯವಶ್ಯಕ. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಫೋಟೋಗ್ರಫಿ ಕೋರ್ಸ್‌ಗಳನ್ನು ನಡೆಸುತ್ತಿವೆ. ಯಾವ ಬಗೆಯ ಫೋಟೋಗ್ರಫಿಯಲ್ಲಿ ವಿಶೇಷ ಪ್ರಾವಿಣ್ಯತೆಯನ್ನು ಗಳಿಸಿಕೊಳ್ಳಬೇಕೆಂದು ಮೊದಲೇ ಆಯ್ಕೆ ಮಾಡಿಕೊಳ್ಳುವುದು ಬಹಳ ಮುಖ್ಯ. ಉದಾಹರಣೆಗೆ ವಾಣಿಜ್ಯ ಫೋಟೋ ಗ್ರಫಿಯಲ್ಲಿ ವಿಶೇಷ ಪರಿಣತಿಯನ್ನು ಪಡೆದುಕೊಳ್ಳಬೇಕೆಂದರೆ 'ವಾಣಿಜ್ಯ ಫೋಟೋ ಗ್ರಫಿ'ಯನ್ನು ಆಯ್ಕೆ ಮಾಡಿಕೊಳ್ಳಬೇಕು.

ಇದಕ್ಕಿಂತ ಮೊದಲು ೩೫ ಎಂ.ಎಂ.ಎಸ್.ಎಲ್. ಆರ್. ಕ್ಯಾಮರಾ ಅಗತ್ಯವಾಗಿಬೇಕು. ಜೂಂಲೆನ್ಸ್, ಟೆಲಿ ಲೆನ್ಸ್ ಕಲಿಕೆಯ ನಂತರದಲ್ಲಿ ಬೇಕಾಗುತ್ತವೆ. ಯಾವುದೇ ವಿದ್ಯಾರ್ಹತೆ ಬೇಕಾಗಿಲ್ಲ.

ತರಬೇತಿಗಾಗಿ ಸಂಸ್ಥೆಗಳನ್ನು ಆರಿಸಿಕೊಳ್ಳುವಾಗ ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು.

೧. ಆ ಸಂಸ್ಥೆಯಲ್ಲಿ ನುರಿತ ಅಧ್ಯಾಪಕ ಹಾಗೂ ಸಿಬ್ಬಂದಿವರ್ಗ ಇದೆಯೆ?

೨. ಸುಸಜ್ಜಿತವಾದ ಸ್ಟುಡಿಯೋ ಮತ್ತು ಡಾರ್ಕ್ ರೂಂ ಇದೆಯೆ?

೩. ಫೋಟೋಗ್ರಫಿಯಲ್ಲಿ ಪರಿಣಿತರಾದವರಿಂದ ಪ್ರಾತ್ಯಕ್ಷಿಕೆ ಹಾಗೂ ಕಮ್ಮಟಗಳನ್ನು ನಡೆಸಲಾಗುತ್ತದೆಯೆ?

ಈ ಮೇಲಿನ ಸೌಕರ್ಯಗಳುಳ್ಳ ಉತ್ತಮವಾದ ತರಬೇತಿ ಸಂಸ್ಥೆಗಳು.

ಪದವಿ ಕೋರ್ಸ್

ಅವಧಿ - ೫ ವರ್ಷ

ಫೋಟೋಗ್ರಫಿ ಮತ್ತು ಫೋಟೋಜರ್ನಲಿಸಂ ವಿಭಾಗ,
ಚಾಮರಾಜೇಂದ್ರ ದೃಶ್ಯಕಲೆಗಳ ಅಕಾಡೆಮಿ,
ಸಯ್ಯಾಜಿರಾವ್ ರಸ್ತೆ. ಮೈಸೂರು - ೫೭೦ ೦೦೧.

ಡಿಪ್ಲೊಮಾ

ಅವಧಿ - ೧ ವರ್ಷ

ವರ್ಸ್ ವಿಶ್ಯುಯಲ್ಸ್, ೩೨೩ ಸಿ.ಎಂ.ಎಚ್ ರಸ್ತೆ,
೧೦೮, ಇಂದಿರಾ ನಗರ,
ಬೆಂಗಳೂರು - ೩೮.

ಜವಹರಲಾಲ್ ನೆಹರು ಟೆಕ್ನಿಕಲ್
ವಿಶ್ವವಿದ್ಯಾನಿಲಯ,
ಹೈದರಾಬಾದ್,

ಶ್ರೀ ವೆಂಕಟೇಶ್ವರ ಯೂನಿವರ್ಸಿಟಿ,
ತಿರುಪತಿ, ಚಿತ್ತೂರು - ೫೧೭೫೦೨

ಭೂಪಾಲ ವಿಶ್ವವಿದ್ಯಾಲಯ
ಹೊಸಂಗಬಾದ್ ರಸ್ತೆ
ಭೂಪಾಲ - ೨೬.

ಗೋರಕ್‌ಪುರ ವಿಶ್ವವಿದ್ಯಾಲಯ
ಗೋರಕ್‌ಪುರ - ೨೭೩೦೦೧.

ರವಿಶಂಕರ್ ವಿಶ್ವವಿದ್ಯಾನಿಲಯ
ರಾಯ್‌ಪುರ, ಮಧ್ಯಪ್ರದೇಶ,
ಅಕಾಡೆಮಿ ಆಫ್ ಫೋಟೋಗ್ರಫಿ
ಕಲ್ಕತ್ತ,

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ಸ್
ಅಹಮದಾಬಾದ್, ಭಾರತೀಯ ವಿದ್ಯಾಭವನ್
ಕೆ. ಜಿ. ಮಾರ್ಗ,
ಹೊಸ ದೆಹಲಿ - ೧೧೦೦೦೧.

ಇಂಡಿಯನ್ ಇಂಟರ್ ನ್ಯಾಷನಲ್
ಫೋಟೋಗ್ರಫಿಕ್ ಕೌನ್ಸಿಲ್
೧೨, ಮಾಡ್ರನ್ ಸ್ಕೂಲ್ ಬಾರಕಾಂಭ ರಸ್ತೆ,
ಹೊಸ ದೆಹಲಿ -೧೧೦೦೦೧.

ಸರ್ಟಿಫಿಕೇಟ್ ಕೋರ್ಸ್

ಅವಧಿ- ಒಂದು ವರ್ಷ

ಅಲಹಾಬಾದ್ ವಿಶ್ವವಿದ್ಯಾಲಯ,
ಅಲಹಾಬಾದ್ - ೨೧೧೦೦೨.

ಅಲ್ಪಾವಧಿ ಕೋರ್ಸ್

ಅವಧಿ - ೧೦ ದಿನಗಳು

ಮೀಡಿಯಾ ಸೆಂಟರ್,
೯೬ ಲೋಯಲ್ಲ ಮಂದಿರ್,
ಲ್ಯಾವೆಲ್ಲಿ ರಸ್ತೆ,
ಬೆಂಗಳೂರು - ೫೬೦ ೦೦೧.



ಕಿಲಕಿಲ







ತುಂಟ ಪುಟ್ಟಿ

ಪುಟ್ಟಿಯೊಮ್ಮೆ ಶಾಲೆಯಿಂದ
ಅರ್ಧದಲ್ಲೇ ಬಂದಳು.

ಚೀಲ ಎಸೆದು, ಅಮ್ಮ ನನಗೆ
ಹೊಟ್ಟೆನೋವು ಎಂದಳು.

'ಹೊಟ್ಟೆ ಖಾಲಿ ಇಹದು ಆದಕೆ
ನೋವು' ಅಮ್ಮ ನುಡಿದಳು.

ಕೊಂಚ ಊಟ ಮಾಡಲದುವೆ
ಮಾಯವಹುದು ಎಂದಳು.

ಅಷ್ಟರಲ್ಲಿ ತಂದೆ ತಲೆ-
ನೋವು ಎನುತ ಬಂದನು.
ಪುಟ್ಟಿಯನ್ನು ಕರೆದು, 'ತಲೆಯ-
ಒತ್ತು ಮಗಳೆ' ಎಂದನು.

ಊಟ ಮಾಡಿ ಪುಟ್ಟಿ ಚಂಗ
ನೆಂದು ನೆಗೆದು ಬಂದಳು.

ನೋವಿನಿಂದ ಬಳಲುತಿರುವ
ತಂದೆ ಕುರಿತು ಅಂದಳು.

ಅಪ್ಪ ನಿನಗೆ ತಲೆಯ ನೋವು
ಏಕೆ ಬಂತು ಎಂದರೆ,

ನಿನ್ನ ತಲೆಯು ಖಾಲಿ ಇಹದು
ಅದಕೆ ಇಂಥ ತೊಂದರೆ !

-ಗುರುರಾಜ ಬೆಣಕಲ್

ಒಗಟು!

ಹಸುರಂಗಿ ಹುಡಗ
ಬಿಸಿಲಾಗ ನಗುತ
ಉಸುಕಿನ ಮ್ಯಾಲ ಬೆಳೆದ!

ಬೇಸಿಗೆಯ ತಾಪ
ತುಸುವಾದರಿಲ್ಲ
ಹಸನಾದ ಮೊಗವ ತಳೆದ!

ಒಡಲೆಲ್ಲ ಕೆಂಪು
ಕರಿ ಹವಳ ಮುತ್ತು
ತಂಪಾದ ರಕ್ತ ಇವಗೆ!

ಅಪರೂಪದಿಂಥ
ಹುಡುಗನ ಹೆಸರ
ಬಿಡಿಸ್ಹೇಳಬೇಕು ನನಗೆ!

[ಉತ್ತರ : ಕಲ್ಲಂಗಡಿಹಣ್ಣು]

-ಚಂದ್ರಗೌಡ ಕುಲಕರ್ಣಿ

ಇಲಿಯ ಚಡ್ಡಿ!


ಆನೆಯು ಒಂದು ಅಂದದಿ ಅಂದು
ನದಿಯಲಿ ಜಳಕವ ಮಾಡುತಲಿತ್ತು
ಇಲಿಯದು ಒಂದು ಓಡುತ ಬಂದು
ಆನೆಯ ಹೀಗೆ ತಾ ಕೇಳಿತ್ತು.
ಹೇ ಗಜರಾಜನೆ ಹೇ ಗಜರಾಜನೆ
ನೀರನು ಬಿಟ್ಟು ನೀ ಹೊರಬಾ
ನಂತರ ನದಿಯಲಿ ಮೀಯುವಿಯಂತೆ
ನನ್ನ ಕೋರಿಕೆಯ ಆಲಿಸೆ ಬಾ.
ಮೂಷಕ ಪಿಳ್ಳೆಯೆ ಹೇಳೆಲೊ ಅಂತಹ
ಕಾರ್ಯವು ನನ್ನಲಿ ಏನಿಹುದು?
ಪ್ರಶ್ನಿಸೆ ಗಜವು, ಹೇಳಿತು ಇಲಿಯು
ದೈನ್ಯದಿ ಇಂತು ಕೈಮುಗಿದು.
ಹೇ ಗಜರಾಜ ನನ್ನಯ ಚಡ್ಡಿಯು
ಎಲ್ಲಿಯೂ ನನಗೆ ಕಾಣುತಲಿಲ್ಲ
ನೀನೇನಾದರೂ ಕದ್ದು ಧರಿಸಿಹೆಯೋ?
ಎಂಬುದ ನಾನು ಅರಿಯಬೇಕಲ್ಲ!

-ಗುರುರಾಜ ಬೆಣಕಲ್



ತುಂಟಿ ಪಿಂಕಿ

ರಾಜೇಂದ್ರ ಅಪ್ಪಗಿ.



ನನ್ನ ನೆಚ್ಚಿನ ಗೆಳೆಯ / ಗೆಳತಿ

ದಿಬ್ಬಮ್ಮ

ನನ್ನ ಗೆಳತಿಯ ಹೆಸರು ಪ್ರೀತಿ. ತುಂಬಾ ಆತ್ಮೀಯಳು. ಇವಳು ನಮ್ಮೂರಲ್ಲಿ ವಿಶೇಷವಾಗಿ ಆಚರಿಸುವ ದಿಬ್ಬಮ್ಮನ ಹಬ್ಬಕ್ಕೆ ಎಲ್ಲರ ಮನೆಗೂ ದಿಬ್ಬಮ್ಮನ ಮೂರ್ತಿಯನ್ನು ಬಹಳ ಚೆನ್ನಾಗಿ ಮಾಡಿಕೊಡುತ್ತಾಳೆ. ಆದ್ದರಿಂದ ಅವಳಿಗೆ 'ದಿಬ್ಬಮ್ಮ' ನೆಂದೆ ನಾವೆಲ್ಲರೂ ಕರೆಯುತ್ತೇವೆ. ಇವಳು ನನಗೆ ಕಲ್ಯಾಣಮ್ಮ ಎಂದು ಪ್ರೀತಿಯಿಂದ ಕರೆಯುತ್ತಾಳೆ. ನಮ್ಮ ಮನೆ ಇವಳ ಮನೆ ಒಂದೆ ಹತ್ತಿರ ಇದೆ. ಇವಳಲ್ಲಿರುವ ವಿಶೇಷತೆ ಎಂದರೆ ಮೂರ್ತಿ ಮಾಡಿಕೊಡುವುದು.

-ಜ್ಯೋತಿ ಕೆ.

ಒಳ್ಳೆಯದನ್ನೇ ಬಯಸುವ

ನನ್ನ ಆತ್ಮೀಯ ಗೆಳೆಯ ಮುರುಗೇಶ. ಅವನ ಸ್ವಭಾವ ಎಂಥದ್ದೆಂದರೆ ಯಾವಾಗಲೂ ಬೇರೆಯವರಿಗೆ ಒಳ್ಳೆಯದನ್ನೇ ಬಯಸುವುದು, ತನೆಗೆ ಇಲ್ಲದಿದ್ದರೂ ಇನ್ನೊಬ್ಬರಿಗೆ ದಾನ ಮಾಡುವುದು, ಎಲ್ಲರನ್ನೂ ಒಳ್ಳೆಯ ದೃಷ್ಟಿಯಿಂದ ನೋಡುವುದು. ಅವನ ಶಾಂತ ಸ್ವಭಾವ ಮತ್ತು ಓದಿನಲ್ಲಂತೂ ಇವನನ್ನು ಮೀರಿಸಿದವರೇ ಇಲ್ಲ. ಈ ಎಲ್ಲಾ ಗುಣಗಳನ್ನು ಹೊಂದಿರುವುದರಿಂದ ಅವನು ನನಗೆ ಇಷ್ಟ.

-ರಾಕೇಶ್ ಜಿ. ಎಚ್., ಹಾವೇರಿ

ಒಬ್ಬರಿಗೊಬ್ಬರು

ನನ್ನ ಆತ್ಮೀಯ ಗೆಳೆಯ ಎ. ವಿರೇಶ. ಇಬ್ಬರೂ ದಿನಾಲೂ ಶಾಲೆಯಲ್ಲಿ ನಡೆದ ಪಾಠಗಳ ಬಗ್ಗೆ ಒಂದು ಕಡೆ ಕುಳಿತು ವಿಚಾರಿಸುತ್ತೇವೆ. ಹಾಗೆಯೇ ಬಿಡುವಿನ ವೇಳೆಯಲ್ಲಿ ಹಿಂದಿನ ತರಗತಿಯಲ್ಲಿ ನಡೆದ ಪಾಠಗಳ ಬಗ್ಗೆಯೂ ಚರ್ಚಿಸಿ ತಿಳಿಯದೆ ಇರುವಂತಹ ವಿಷಯಗಳನ್ನು ತರಗತಿ ಗುರುಗಳಿಂದ ಕೇಳಿ ಉತ್ತರ ಪಡೆಯುತ್ತೇವೆ. ಹೀಗೆ ನಾವಿಬ್ಬರೂ ಒಬ್ಬರಿಗೊಬ್ಬರು ಸಹಕರಿಸುತ್ತಾ ಓದುತ್ತೇವೆ. ನನ್ನ ಗೆಳೆಯ ಆಟಗಳಲ್ಲಿಯೂ ಸಹಕಾರ ಮನೋಭಾವನೆ ಹೊಂದಿ, ದೈಹಿಕ ಹಾಗೂ ಮಾನಸಿಕ ಸ್ಥಿರತೆಯನ್ನು ಕಾಪಾಡಿಕೊಂಡು ಬಂದಿರುತ್ತಾನೆ. ಆದ್ದರಿಂದ ಇವನು ನನಗೆ ತುಂಬಾ ಆತ್ಮೀಯ ಗೆಳೆಯನಾಗಿದ್ದಾನೆ.

-ಶಾಪುರದ ದೇವೇಂದ್ರ, (೭ನೇ ತರಗತಿ)
ಬಾದನಹಟ್ಟಿ.

ಬೆಸ್ಟ್‌ಕ್ಲಾಸ್

ನನ್ನ ಪ್ರೀತಿಯ ಗೆಳೆಯ ಬಾಬು. ನಾವಿಬ್ಬರು ಕೂಡಿಯೇ ಇರುತ್ತಿದ್ದೆವು. ನಾನು ೬ನೇ ತರಗತಿ ಇದ್ದಾಗ ಆದರ್ಶ ವಿದ್ಯಾರ್ಥಿ ಎಂದು ಬಹುಮಾನ ಪಡೆದಿದ್ದೆ. ಆಗ ಕೆಲ ವಿದ್ಯಾರ್ಥಿಗಳು ನನ್ನನ್ನು ಹೀಯಾಳಿಸುತ್ತಿದ್ದರು. ಅದೇ ಸಂದರ್ಭದಲ್ಲಿ ನನ್ನ ಗೆಳೆಯ ನಿನ್ನನ್ನು ಮನೆಯಲ್ಲಿ ಕರೆಯುತ್ತಾರೆ ಹೋಗು ಎಂದು ಸುಳ್ಳು ಹೇಳಿ ಹೀಯಾಳಿಸಿದರನ್ನು ಥಳಿಸಿದ್ದ. ನಂತರ ನನ್ನ ಬಳಿ ಬಂದು ಕ್ಷಮೆ ಕೇಳಿದ. ಅದನ್ನು ನಾನು ಗುರುಗಳಿಗೆ ವಿವರವಾಗಿ ಹೇಳಿದೆ. ಅವರು ಎಲ್ಲರನ್ನೂ ಕರೆದು ಬುದ್ಧಿಮಾತು ಹೇಳಿದರು. ಪ್ರಾಥಮಿಕ ಶಾಲೆ ಬಿಟ್ಟು ಹೋಗುವಾಗ ಹೀಯಾಳಿಸಿದ ವಿದ್ಯಾರ್ಥಿಗಳು ನಮ್ಮಿಬ್ಬರಲ್ಲಿ ಕ್ಷಮೆ ಕೇಳಿದರು. ೭ನೇ ತರಗತಿ ಇದ್ದಾಗ ಇರ್ವರಿಗೂ ನಮ್ಮ ಗುರುಗಳು 'ಬೆಸ್ಟ್‌ಕ್ಲಾಸ್' ಎಂಬ ಬಿರುದನ್ನು ಕೊಟ್ಟಿದ್ದರು. ನನ್ನ ಗೆಳೆಯ ಆಗಾಗ ಬರುತ್ತಾನೆ. ಬಂದಾಗ ಇಬ್ಬರೂ ಸಿನಿಮಾ ನೋಡಲು ಹೋಗುತ್ತೇವೆ.

-ಪ್ರಶಾಂತ ಪಾಟೀಲ (೮ ನೇ ತರಗತಿ)
ಧಾರವಾಡ

ಜ್ವರ ಬಂದಾಗ

ನನ್ನ ಚಡ್ಡಿದೋಸ್ತ್ ನರೇಶ. ಒಳ್ಳೆಯ ಗುಣವುಳ್ಳವನು. ನನಗೆ ತುಂಬಾ ಸಲ ಓದಲು ಪುಸ್ತಕಗಳನ್ನು ಕೊಡುತ್ತಾನೆ. ಶಾಲೆಯಲ್ಲಿ ಮತ್ತು ಮನೆಗೆ ಬಂದಾಗ ಕ್ರಿಕೆಟ್ ಆಡಲು ಜೊತೆಯಾಗಿರುತ್ತಾನೆ. ನಾವು ಒಟ್ಟಿಗೆ ಕುಳಿತು ಅಭ್ಯಾಸ ಮಾಡುತ್ತೇವೆ. ನನಗಿಂತಲೂ ನನ್ನ ಗೆಳೆಯ ಓದುವುದರಲ್ಲಿ ಚೂಟಿ.

ಒಮ್ಮೆ ಜ್ವರ ಬಂದಾಗ ಶಾಲೆಗೆ ಹೋಗದೆ ಮಲಗಿದ್ದೆ. ಸಂಜೆ ನನ್ನ ಗೆಳೆಯ ಮನೆಗೆ ಬಂದು ನನಗೆ ಜ್ವರ ಬಂದ ಕಾರಣ ವಿಚಾರಿಸಿ ಸರಿಯಾಗಿ ಚಿಕಿತ್ಸೆ ಪಡೆದುಕೊಳ್ಳಲು ಹೇಳಿ ಹೋದನು. ನಮ್ಮ ಶಾಲೆಯ ಹತ್ತಿರ ಮನೆಯನ್ನು ಕಟ್ಟಿಸುತ್ತಿದ್ದೀವಿ ಸಮಯ ಸಿಕ್ಕಾಗ ಇಬ್ಬರೂ ಕೂಡಿ ಮನೆಯ ಹತ್ತಿರ ಹೋಗುತ್ತೀವಿ. ನಮ್ಮ ಮನೆಯನ್ನು ನೋಡಿ ಸಂತೋಷ ಪಡುತ್ತಾನೆ.

-ವಿನಯಕೃಷ್ಣ (೭ನೇ ತರಗತಿ)
ಮಂಡ್ಯ.

ಸ್ನೇಹ

ಸ್ನೇಹವೆ ಶಾಶ್ವತ
ಇದ್ದ ಹಾಗೆ ಪರ್ವತ
ಸ್ನೇಹಕ್ಕಿಲ್ಲ ಸ್ವಾರ್ಥ
ಇದೇ ಸಹೋದರತೆಯ ಅರ್ಥ.
ಸ್ನೇಹಕ್ಕೆಲ್ಲಿದೆ ಧರ್ಮ
ಸ್ನೇಹವೆ ಒಂದುಧರ್ಮ
ಸ್ನೇಹ ಹಬ್ಬುತ್ತಿರಲಿ
ಪ್ರೀತಿ ಹರಡುತ್ತಿರಲಿ
ಸ್ನೇಹ ಸಿಗುವುದೇ ಭಾಗ್ಯ
ತಕ್ಕಂತಿರುವುದೇ ಯೋಗ್ಯ.
ಸ್ನೇಹವೆಂಬುದು ಅಮೃತ
ಅದುವೆ ಭಾವಕ್ಕೆ ಅದ್ಭುತ.

-ನೀಲಮ್ಮ ಬಳಿಗೇರ
ಕೆರೂರ

ಜೀವನ

'ಸ್ನೇಹ ಇಲ್ಲದ ಜೀವನ ಬತ್ತಿದ ನದಿಯಂತೆ'

-ರಾಜು ರೇವಡಿ (೨ನೆ ತರಗತಿ)

ಅಗಲುವುದಿಲ್ಲ

ನನ್ನ ಜೀವದ ಗೆಳೆಯ ರಕ್ಷಿತ ನಾವಿಬ್ಬರೂ ತಪ್ಪದೆ ಶಾಲೆಗೆ ಹೋಗುತ್ತೀವಿ. ಶಾಲೆಯಲ್ಲಿ ಮಿಸ್ ಹೇಳಿದ ಪಾಠಗಳನ್ನು ಕೇಳಿ, ಅರ್ಥವಾಗದಿದ್ದರೆ ಇನ್ನೊಮ್ಮೆ ಕೇಳುತ್ತೇವೆ. ನನ್ನ ಗೆಳೆಯ ಆಟವಾಡುವುದರಲ್ಲಿ ಮುಂದು. ಮಧ್ಯಾಹ್ನದ ಸಮಯದಲ್ಲಿ ಇಬ್ಬರೂ ಕೂಡಿ ಊಟ ಮಾಡುತ್ತೇವೆ. ದಿನದ ವೇಳೆಯನ್ನು ಹಾಳು ಮಾಡುವುದಿಲ್ಲ. ನಮಗೆ ಕಷ್ಟವೆನಿಸಿದ ಪಾಠಗಳಿದ್ದರೆ ಮನೆಯಲ್ಲಿ ಅಂಕಲ್‌ನ್ನು ಕೇಳಿ ಪರಿಹರಿಸಿಕೊಳ್ಳುತ್ತೇವೆ. ಈ ಬಾರಿ ವಾರ್ಷಿಕ ಪರೀಕ್ಷೆಯಲ್ಲಿ ಇಬ್ಬರೂ ಶಾಲೆಗೆ ಮೊದಲನೆ ತರಗತಿಯಲ್ಲಿ ಉತ್ತೀರ್ಣರಾಗಬೇಕೆಂದು ಶ್ರಮ ವಹಿಸಿ ಓದುತ್ತಿದ್ದೀವಿ. ಹೀಗೆ ನಾವು ಒಬ್ಬರನೊಬ್ಬರು ಬಿಟ್ಟು ಅಗಲುವುದಿಲ್ಲ. ಬೇಸಿಗೆ ರಜೆಯಲ್ಲಿ ರಕ್ಷಿತನನ್ನು ಬಿಟ್ಟು ಹೇಗಿರುವುದೆಂದು ಯೋಚಿಸುತ್ತಿರುವೆ.

-ಎಚ್. ಎಮ್. ಸಂದೀಪ (ಯುಕೆಜಿ)
ಮೆಟ್ರಿ

ಕಿರಿಯ ಮಗನ ಮದುವೆ

ಹಿಮಾಚಲದ ಹಳ್ಳಿಯೊಂದರಲ್ಲಿ ಆಗರ್ಭ ಶ್ರೀಮಂತಳಾದ ಒಬ್ಬ ಹೆಂಗಸು ಇದ್ದಳು. ಅವಳಿಗೆ ಮದುವೆಯ ವಯಸ್ಸಿಗೆ ಬಂದ ಮೂರು ಮಂದಿ ಮಕ್ಕಳು ಇದ್ದರು. ಹೆಂಗಸಿನ ಹತ್ತಿರ ಒಂದು ಪೆಟ್ಟಿಗೆಯ ತುಂಬ ನವರತ್ನಗಳನ್ನು ಪೋಣಿಸಿದ ಬಂಗಾರದ ಒಡವೆಗಳಿದ್ದವು. ಅದನ್ನು ತಿಳಿದು ಮಕ್ಕಳು ಅವಳ ಬಳಿಗೆ ಬಂದು, 'ಅಮ್ಮಾ ಈ ಒಡವೆಗಳನ್ನು ನಮಗೆ ಹಂಚಿ ಕೊಡ ಬಹುದಲ್ಲವೆ? ಇಷ್ಟೊಂದು ಸಂಪತ್ತು ನಿನಗೇಕೆ?' ಎಂದು ಕೇಳಿದರು.

ಆ ಮಾತಿಗೆ ಹೆಂಗಸು, 'ನೀವು ಮೂವರಲ್ಲಿ ಯಾರ ಹೆಂಡತಿ ಗುಣವಂತೆಯೂ ಬುದ್ಧಿವಂತೆ ಯೂ ಆಗಿರುತ್ತಾಳೋ ಅವಳಿಗೇ ಈ ಒಡವೆಗಳು ಸೇರುತ್ತವೆ. ಇದು ಈವರೆಗೆ ನಮ್ಮ ಮನೆತನದಲ್ಲಿ ನಡೆದು ಬಂದ ಸಂಪ್ರದಾಯ' ಎಂದು ಹೇಳಿದಳು.

'ಹಾಗಿದ್ದರೆ ನಾವು ಮೂವರೂ ಮದುವೆ ಮಾಡಿಕೊಳ್ಳುತ್ತೇವೆ' ಎಂದರು ಮಗಂದಿರು.

'ದುಡಕಬೇಡಿ, ಯಾವಳನ್ನೋ ಮದುವೆ ಯಾಗಿ ಕರೆ ತಂದರೆ ಅವಳು ಈ ಬಂಗಾರದ ಒಡತಿಯಾಗುವುದಿಲ್ಲ. ನಾನು ಹೇಳಿದ ಕೆಲಸ ಗಳನ್ನು ಮಾಡಿದವರಿಗೆ ಮಾತ್ರ ಇದರ ಹಕ್ಕು. ನಿಮಗೆ ಬಂಗಾರದ ಎಳೆಗಳನ್ನು ಕೊಡುತ್ತೇನೆ. ಇದನ್ನು ನಮ್ಮ ಮನ ಮೆಚ್ಚಿದ ಹುಡುಗಿಗೆ ಕೊಟ್ಟು ಇದರಿಂದ ಬಟ್ಟೆ ನೇಯ್ದು ಕೊಡುವಂತೆ ಹೇಳಿ ನನಗೆ ತಂದು ತೋರಿಸಿ' ಎಂದಳು ತಾಯಿ.

ಮೂವರು ಮಕ್ಕಳೂ ಚಿನ್ನದ ಎಳೆಗಳನ್ನು ತೆಗೆದುಕೊಂಡು ಮನೆಯಿಂದ ಹೊರಟರು. ಕಿರಿಯವನು ಒಂದು ಜಲಾಶಯದ ಬಳಿಯಲ್ಲಿ ಹೋಗುತ್ತಾ ಇದ್ದ. ಆಗ ನೀರಿನಿಂದ ಏನೋ ಒದ್ದಾಟದ ಸದ್ದು ಅವನಿಗೆ ಕೇಳಿಸಿತು. ಅಲ್ಲಿಗೆ ಓಡಿದ. ಒಂದು ಹಾವು ದೊಡ್ಡ ಆಮೆಯೊಂದರ ಕೊರಳನ್ನು ನುಂಗುವ ಪ್ರಯತ್ನದಲ್ಲಿತ್ತು. ಆಮೆ ವಿಲಿವಿಲಿ ಒದ್ದಾಡುತ್ತಿತ್ತು. ಕಿರಿಯವನು ಆಮೆಯ ಪರಿಸ್ಥಿತಿ ನೋಡಿ ಮರುಕಗೊಂಡ. ಹಾವಿನ ಹಿಡಿತದಿಂದ ಆಮೆಯನ್ನು ಪಾರು ಮಾಡಿದ.

ಆಮೆ ನೀರಿನಾಳಕ್ಕೆ ಹೋಯಿತು. ಈ ಗಡಿಬಿಡಿಯಲ್ಲಿ ಅವನ ಕೈಯಲ್ಲಿದ್ದ ಬಂಗಾರದ ಎಳೆಗಳ ಉಂಡೆ ಕೈಜಾರಿ ನೀರಿನಾಳಕ್ಕೆ ಬಿದ್ದಿತು. ಇದನ್ನು ತಿಳಿದು ಕಿರಿಯವನು ಬಿಕ್ಕಿ ಬಿಕ್ಕಿ ಅಳತೊಡಗಿದ. ತನ್ನ ಅಜಾಗರೂಕತನದಿಂದ ಮದುವೆಯಗುವ ಅವಕಾಶವೂ ಇಲ್ಲ. ಒಡವೆ ಗಳೂ ಸಿಗದ ಹಾಗಾಯಿತೆಂದು ಅವನಿಗೆ ಸಂಕಟವಾಗಿತ್ತು. ಆಗ ನೀರಿನಿಂದ ಗುಳುಗುಳು ಸದ್ದಾಯಿತು. ಆ ಕಡೆಗೆ ನೋಡಿದ.

ಕಿರಿಯವನು ಪಾರು ಮಾಡಿದ್ದ ಆಮೆಯು ಈಜುತ್ತಾ ಆಳದಿಂದ ಮೇಲಕ್ಕೆ ಬಂದಿತು. ಅದರ ಬಾಯಿಯಲ್ಲಿ ಅವನ ಎಳೆಗಳಿಂದ ತಯಾರಿಸಿದ ಕಲಾತ್ಮಕವಾದ ಒಂದು ಬಟ್ಟೆ ಇತ್ತು. ಅದರಲ್ಲಿ ತುಂಬ ಚಿತ್ತಾರಗಳಿದ್ದವು. ಆಮೆಯು ದಡದ ಮೇಲೆ ಅದನ್ನು ಬೀಳಿಸಿ ಮತ್ತೆ ನೀರಿನಾಳಕ್ಕೆ ಇಳಿಯಿತು. ಕಿರಿಯವನು ಆ ಬಟ್ಟೆಯನ್ನು ಎತ್ತಿಕೊಂಡ. ಅದನ್ನು ಒಂದೇ ಉಸಿರಿಗೆ ತಾಯಿಯ ಬಳಿಗೆ ತೆಗೆದು ಕೊಂಡು ಬಂದ.

ಹಿರಿಯ ಮಕ್ಕಳಿಬ್ಬರೂ ತಮ್ಮ ಪ್ರಿಯತಮೆಯರಿಂದ ಬಟ್ಟೆಗಳನ್ನು ನೇಯಿಸಿ ತಂದಿದ್ದರು. ಆದರೆ ಕಿರಿಯ ಮಗನು ತಂದ ಬಟ್ಟೆಯನ್ನು ನೋಡಿ ತಾಯಿಗೆ ಅಪಾರ ಸಂತಸ ವಾಯಿತು. ಆದರೂ ಅದನ್ನು ತೋರ್ಪಡಿಸದೆ, 'ಪರೀಕ್ಷೆ ಇಲ್ಲಿಗೇ ಮುಗಿಯಲಿಲ್ಲ ' ನಾನು ನಿಮ್ಮ ಪ್ರೇಯಸಿಯರಿಗಾಗಿ ಒಂದೊಂದು ಹುಂಜ ಗಳನ್ನು ಕೊಡುತ್ತೇನೆ. ಅದರ ಗರಿಗಳನ್ನು ಚಿನ್ನದ ಗರಿಯಾಗಿ ಪರಿವರ್ತಿಸಿ ಕೊಡಲು ಹೇಳಿ ನನಗೆ ತಂದು ತೋರಿಸಿ ಎಂದಳು.

ಮೂವರೂ ಹುಂಜಗಳನ್ನು ಕಂಕುಳಿನಲ್ಲಿರಿಸಿ ಕೊಂಡು ಹೊರಟರು. ಹಿರಿಯರಿಗೆ ತಮ್ಮ ಪ್ರೇಯಸಿಯರು ಎಷ್ಟು ತಡವಿದರೂ ಹುಂಜದ ಗರಿ ಚಿನ್ನವಾಗುವುದಿಲ್ಲ ಎಂಬುದು ತಿಳಿದಿತ್ತು. ಆದ್ದರಿಂದ ಅಕ್ಕ ಸಾಲಿಗನಿಂದ ಚಿನ್ನದ ಗರಿಗಳನ್ನು ಮಾಡಿಸಿ ಹುಂಜಗಳಿಗೆ ಸಿಕ್ಕಿಸಿದರು.

ಕಿರಿಯವನು ಚಿಂತೆಯಿಂದಲೇ ನಡೆಯುತ್ತಾ ಅದೇ ಜಲಾಶಯದ ಬಳಿಗೆ ಬಂದ. ಆಗ ಅವನಲ್ಲಿದ್ದ ಹುಂಜ ಪುರ್ರನೆ ಜಲಾಶಯಕ್ಕೆ ಹಾರಿ ಕಾಣದಾಯಿತು. ಅವನು ಚಿಂತೆಯಿಂದ ತಲೆಗೆ ಕೈಹೊತ್ತು ಜಲಾಶಯದ ದಡದಲ್ಲಿ ಕುಳಿತು ಅಳತೊಡಗಿದ.

ಆಗ ದೊಡ್ಡ ಆಮೆಯು ನೀರಿನಿಂದ ಮೇಲೆ ಬಂದಿತು. ಅದರ ಬೆನ್ನಿನ ಮೇಲಿದ್ದ ಹುಂಜವು ಹಾರುತ್ತಾ ಕಿರಿಯವನನ್ನು ಸೇರಿತು. ಅದರ ಮೈ ನೋಡಿದಾಗ ಅವನಿಗೇ ಅಚ್ಚರಿಯಾಯಿತು. ಹುಂಜದ ಮೈಯಲ್ಲಿ ಎಲ್ಲಾ ಗರಿಗಳೂ ಬಂಗಾರವಾಗಿದ್ದವು.

ಸಂತೋಷದಿಂದ ಕಿರಿಯವನು ಹುಂಜ ದೊಂದಿಗೆ ತಾಯಿಯ ಬಳಿಗೆ ಬಂದ. ಅವಳಿಗೆ ಹುಂಜದ ಗರಿಗಳನ್ನು ಕಂಡು ಆದ ಸಂತೋಷ ಅಷ್ಟಿಷ್ಟಲ್ಲ. ಹಿರಿಯ ಮಕ್ಕಳಿಬ್ಬರೂ ತಂದ ಹುಂಜಗಳಿಗೆ ಇರಿಸಿದ ಕೃತಕ ಗರಿಗಳು ಮುಟ್ಟಿದ ಕೂಡಲೇ ಉದುರಿದವು.

'ಸರಿ, ನೀವು ಮದುವೆಯಾಗಲಿರುವ ಹುಡುಗಿಯರನ್ನು ವೈಭವದಿಂದ ಇಲ್ಲಿಗೆ ಕರೆತನ್ನಿ. ಆಮೇಲೆ ಮದುವೆ ಸಮಾರಂಭ ಮಾಡೋಣ' ಎಂದಳು ತಾಯಿ.

ಈಗ ಕಿರಿಯವನು ಇಕ್ಕಟ್ಟಿಗೆ ಸಿಲುಕಿದ. ಎರಡೂ ಪರೀಕ್ಷೆಗಳಲ್ಲಿ ತನ್ನನ್ನು ಗೆಲ್ಲಿಸಿದ್ದು ಒಂದು ಆಮೆ ಎಂದರೆ ಯಾರಾದರೂ ನಂಬುತ್ತಾರೆಯೆ? ಆಮೆಯನ್ನು ಮದುವೆಯಾಗುತ್ತೇನೆಂದರೆ ಗೇಲಿ ಮಾಡುವುದಿಲ್ಲವೆ ಎಂದು ಅವನಿಗೆ ಚಿಂತೆಯಾಯಿತು. ಆದರೂ ಬೇರೆ ದಾರಿಯಿಲ್ಲದೆ ಜಲಾಶಯದ ಬಳಿಗೆ ಬಂದ. ದಳದಲ್ಲಿ ಅಳುತ್ತ ಕುಳಿತುಕೊಂಡ.

ಸ್ವಲ್ಪ ಹೊತ್ತಿನಲ್ಲಿ ನೀರಿನಿಂದ ಆಮೆಯು ಮೇಲಕ್ಕೆ ಬಂದಿತು. ಮನುಷ್ಯ ಭಾಷೆಯಲ್ಲಿ 'ಅಳುವುದೇಕೆ? ನನ್ನನ್ನು ಮದುವೆಯಾಗಲು ಸಿದ್ಧನಿರುವೆಯಾ?' ಎಂದು ಕೇಳಿತು. 'ಪ್ರಾಣಿಯಾದರೇನು ನಿನ್ನಂತಹ ಬುದ್ಧಿವಂತೆ ಮನುಷ್ಯರಲ್ಲಿ ಇಲ್ಲ'ಎಂದ ಕಿರಿಯವನು.

ಆಮೆ ನೀರಿನಾಳಕ್ಕಿಳಿದು ಮೇಲೆಕ್ಕೆ ಬಂದಿತು. ಆಗ ಅದರ ಕತ್ತಿನಲ್ಲಿ ರತ್ನಗಳಿಂದ ಅಲಂಕೃತವಾದ ಸರ, ತಲೆಯಲ್ಲಿ ಬಂಗಾರದ ಕಿರೀಟ ಇತ್ತು. ದೊಡ್ಡ ಕಪ್ಪೆಗಳನ್ನು ಹೂಡಿದ ರಥದಲ್ಲಿ ಅದು ಕುಳಿತ್ತಿತ್ತು. ಅದು ಮುಂದೆ ಸಾಗಿದಾಗ, ಕಿರಿಯವನು ಹಿಂಬಾಲಿಸಿದ.

ದಾರಿಯಲ್ಲಿ ಮೂವರು ಹೆಂಗಸರಿದ್ದರು. ಅವರಲ್ಲಿ ಒಬ್ಬಳಿಗೆ ಕಣ್ಣು ಇರಲಿಲ್ಲ, ಇನ್ನೊಬ್ಬಳಿಗೆ ಕೈಗಳಿರಲಿಲ್ಲ. ಮತ್ತೊಬ್ಬಳು ಕಾಲು ಮುರುಕಿ, ಆಮೆಯು ಕುಳಿತಿದ್ದ ಕಪ್ಪೆಗಳ ಗಾಡಿ ಅವರ ಬಳಿಗೆ ಬಂದು ಅವರಿಗೆ ತಗುಲಿತು. ಆ ಕೂಡಲೆ ಅವರ ಅಂಗವಿಕಲತೆ ತೊಲಗಿ ಅವರು ಸುರ ಸುಂದರಿಯರಾದರು.


ಆ ಸುಂದಿರಯರು ಆಮೆಯೊಂದಿಗೆ, 'ನಾವು ಶಾಪಗ್ರಸ್ತರಾದ ಅಪ್ಸರೆಯರು. ನಿನ್ನ ಸ್ಪರ್ಶದಿಂದ ನಾವು ಮೊದಲಿನಂತಾದೆವು. ನೀನು ಕೂಡ ಋಷಿ ಶಾಪದಿಂದ ಆಮೆಯಾದ ರಾಜಕುಮಾರಿ. ಇದೋ ನೀನು ಮೊದಲಿನಂತೆ ಸುಂದರಿಯಾಗು. ನಿನ್ನ ಈ ಕಪ್ಪೆಗಳ ರಥ ಕುದುರೆಗಳ ರಥವಾಗಲಿ' ಎಂದು ಹರಸಿ ಆಕಾಶಮಾರ್ಗದಲ್ಲಿ ಹಾರಿಹೋದರು.

ಈ ವಿಸ್ಮಯವನ್ನು ನೋಡುತ್ತಾ ನಿಂತ ಕಿರಿಯವನನ್ನು ಆಮೆಯಾಗಿದ್ದ ರಾಜಕುಮಾರಿಯು ರಥದ ಮೇಲೇರಿಸಿ ಕೊಂಡಳು. ಅವಳೊಂದಿಗೆ ತಾಯಿಯ ಬಳಿಗೆ ಬಂದು ಅವನು ಅವಳನ್ನೇ ಮದುವೆಯಾದ. ಒಡವೆಗಳ ಪೆಟ್ಟಿಗೆ ಅವನ ಹೆಂಡತಿಗೇ ಸಿಕ್ಕಿತು.

(ಹಿಮಾಚಲದ ಜಾನಪದ ಕತೆ)

ಪ. ರಾಮಕೃಷ್ಣ ಶಾಸ್ತ್ರಿ

'ಅಗ್ನಿಪರೀಕ್ಷೆ'ಯಲ್ಲಿ ವಾರ್ನ್



ಭಾರತದ ಈ ಬೇಸಿಗೆ ಸ್ವತಃ ಅದರ ಪಾಲಿಗಲ್ಲದಿದ್ದರೂ 'ಮಾಂತ್ರಿಕ' 'ಕಲಾವಿದ' 'ಮೋಡಿಗಾರ' 'ಅತ್ಯದ್ಭುತ' ಎಂದೆಲ್ಲ ವಿಶ್ವದಾದ್ಯಂತ ಹೊಗಳಿಸಿಕೊಂಡಿರುವ ಆಸ್ಟ್ರೇಲಿಯಾದ ಲೆಗ್‌ಸ್ಪಿನ್ನರ್ ಶೇನ್ ಕೀಥ್ ವಾರ್ನ್ ಪಾಲಿಗಂತೂ ಒಂದು 'ಅಗ್ನಿಪರೀಕ್ಷೆ'ಗಿಂತ ಕಡಿಮೆಯದೇನೂ ಅಲ್ಲ. ವಿಶ್ವದ ಖ್ಯಾತನಾಮ ಬ್ಯಾಟ್ಸ್‌ಮನ್‌ಗಳನೆಲ್ಲ ಗೋಳು ಹೊಯ್ದು ಕೊಂಡಿರುವ ಈ ಬೌಲರ್ ಭಾರತೀಯ ಅಂಕಣಗಳ ಮೇಲೆ ಅಜರ್-ಸಚಿನ್ ದಂಡಿನ ಎದುರು ಯಾವ ರೀತಿಯ ಪ್ರದರ್ಶನ ನೀಡುತ್ತಾರೆ ಎನ್ನುವುದನ್ನು ಇಡಿಯ ಕ್ರಿಕೆಟ್ ವಿಶ್ವವೇಬಿಟ್ಟ ಕಂಗಳಿಂದ ಎದುರು ನೋಡುತ್ತಿದೆ ಎಂದರೆ ಅದು ಉತ್ಪ್ರೇಕ್ಷೆಯಾಗಲಾರದು.

ಕಳೆದ ನಾಲ್ಕೈದು ವರ್ಷಗಳಲ್ಲಿ ವಿಶ್ವಕ್ರಿಕೆಟ್‌ನಲ್ಲಿ ಅತ್ಯಧಿಕ ಪ್ರಚಾರ ಪಡೆದ ವಾರ್ನ್ ಅದನ್ನು ಸಮರ್ಥಿಸಿಕೊಳ್ಳುವಂತಹ ಪ್ರದರ್ಶನ ನೀಡುವ ಬೃಹತ್ ಜವಾಬ್ದಾರಿಯೊಂದಿಗೆ ಭಾರತಕ್ಕೆ ಬಂದಿಳಿದಿದ್ದಾರೆ ಎನ್ನುವುದು ಗುಟ್ಟಿನ ಮಾತೇನು ಅಲ್ಲ. ೨೮ ವರ್ಷ ವಯಸ್ಸಿನ ಈ ವಿಕ್ಟೋರಿಯದ ಬೌಲರ್ ಇದುವರೆಗೆ ತಾವಾಡಿರುವ ೬೪ ಟೆಸ್ಟ್‌ಪಂದ್ಯಗಳಲ್ಲಿ ಕೆಡವಿರುವ ೩೦೩ ವಿಕೆಟ್‌ಗಳ ಸಾಧನೆ ಕಡಿಮೆಯದೇನಲ್ಲ. ಹಲವರು ತಮ್ಮ ಮೊದಲ ಟೆಸ್ಟ್ ಪಂದ್ಯವನ್ನೇ ೨೫-೨೬ನೇ ವಯಸ್ಸಿನಲ್ಲಿ ಆಡುತ್ತಿರುವಾಗ ಕೇವಲ ೨೮ರ ವಯಸ್ಸಿನಲ್ಲೇ ಅವರ 'ತ್ರಿಶತಕ'ದ ಸಾಧನೆಗೆ ಏನೆನ್ನೋಣ?

ಶೇನ್‌ವಾರ್ನ್ ತಮ್ಮ ಟೆಸ್ಟ್ ಜೀವನ ಆರಂಭಿಸಿದ್ದು ಭಾರತೀಯರ ಎದುರೇ ಎನ್ನುವುದು ವೈಶಿಷ್ಟಪೂರ್ಣ. ೧೯೯೨ರಲ್ಲಿ ಸಿಡ್ನಿಯಲ್ಲಿ ಪ್ರವಾಸಿ ಭಾರತೀಯರ ಎದುರು ತಮ್ಮ ಮೊದಲ ಟೆಸ್ಟ್ ಆಡಿದ ಈ 'ಮಾಂತ್ರಿಕ' ಅಲ್ಲಿ ಹೇಳಿಕೊಳ್ಳುವುದಂತಹದೇನನನ್ನು ಸಾಧಿಸಲಿಲ್ಲ. ಅವರನ್ನು ಮನಬಂದಂತೆ ದಂಡಿಸಿದ ರವಿಶಾಸ್ತ್ರಿ ಕೊನೆಗೆ ಅವರಿಗೆ ವಿಕೆಟ್ ಒಪ್ಪಿಸಿದರಾದರೂ, ಅಷ್ಟರೊಳಗೆ ತಮ್ಮ ವೈಯಕ್ತಿಕ ದ್ವಿಶತಕ ಪೂರೈಸಿಬಿಟ್ಟಿದ್ದರು! ವಾರ್ನ್‌ರನ್ನು ದಂಡಿಸುವ ಕೆಲಸದಲ್ಲಿ ಸಚಿನ್ ಸಹ ಹಿಂದೆ ಬೀಳಲಿಲ್ಲ. ತಮ್ಮ ಮೊದಲ ಎರಡು ಟೆಸ್ಟ್‌ಗಳ ಆ ನಂತರ ವಾರ್ನ್ ನಿಜವಾಗಿಯೂ ಅತ್ಯುಚ್ಚ ಮಟ್ಟದಲ್ಲಿ ಆಡುವ ಸಾಮರ್ಥ್ಯ ಹೊಂದಿದ್ದಾರೆಯೇ ಎಂಬ ಪ್ರಶ್ನೆಯೂ ಕಾಂಗರೂ ಆಯ್ಕೆದಾರರ ಎದುರು ಮೂಡದೇ ಇರಲಿಲ್ಲ.

ಚೆಂಡನ್ನು ತಿರುಗಿಸುವ ಅವರು ಬೆರಳು ಶಸ್ತ್ರ ಚಿಕಿತ್ಸೆಗೆ ಒಳಗಾದ ನಂತರ ಅವರ ಮತ್ತೆ ಆಡುವ ಬಗ್ಗೆ ಮತ್ತೊಮ್ಮೆ ಕ್ರಿಕೆಟ್ ವಿಶ್ವ ಆತಂಕದಿಂದ ಎದುರ ನೋಡಿದ್ದೂ ಸುಳ್ಳಲ್ಲ. ಆಡಿದರೂ ಮೊದಲಿನ 'ಮೊನಚು' ಉಳಿಯಲಾರದು ಎಂದು ನುಡಿದಿದ್ದವರ ಸಂಖ್ಯೆಯೇ ಹೆಚ್ಚು. ಆದರೆ ಅವರೆಲ್ಲರ ಊಹೆಯನ್ನು ತಲೆಕೆಳಗು ಮಾಡುವಂತೆ ಬೌಲ್ ಮಾಡಿದ ವಾರ್ನ್ ಸದ್ಯ ತಮ್ಮ ಪ್ರದರ್ಶನದ 'ಶೃಂಗ' ದಲ್ಲಿದ್ದಾರೆನ್ನುವುದು ಸುಳ್ಳೇನಲ್ಲ. ದಕ್ಷಿಣ ಆಫ್ರಿಕದ ಎದುರು ಇತ್ತೀಚೆಗಷ್ಟೇ ಮುಗಿದ ಟೆಸ್ಟ್ ಸರಣಿ ಈ ಮಾತಿಗೆ ಸಾಕ್ಷಿ. ಮೊದಲು ಮೆಲ್ಬೋರ್ನ್‌ನಲ್ಲಿ ಹಾಗೂ ನಂತರ ಸಿಡ್ನಿಯಲ್ಲಿ ಆಫ್ರಿಕನ್ನರು 'ವಾರ್ನ್ ಮೋಡಿ'ಗೆ ಉದುರಿದರು. ಅವರ ದಾಳಿಯ ತಲೆ-ಬುಡ ಒಂದೂ ಅರ್ಥವಾಗದವರಂತೆ.

ಶತಮಾನದ ಎಸೆತ: ಆದರೆ ವಾರ್ನ್‌ರನ್ನು ವಿಶ್ವವಿಖ್ಯಾತರನ್ನಾಗಿಸಿದ್ದು ೧೯೯೩ರ ಆ್ಯಸಿಸ್ ಸರಣಿಯ ಆ ಒಂದು ಎಸೆತ. ಓಲ್ಡ್‌ಟ್ರಾಫರ್ಡ್‌ನಲ್ಲಿ ನಡೆದ ಆ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಎದುರು ಎಸೆದ ಮೊಟ್ಟ ಮೊದಲ ಎಸೆತವೇ ಅವರನ್ನು ಖ್ಯಾತನಾಮರನ್ನಾಗಿಸಿದ್ದು. ಆಗ ಅವರೆದುರಿಗಿದ್ದವರು ಮೈಕ್ ಗ್ಯಾಟಿಂಗ್. ಚೆಂಡು ಲೆಗ್‌ಸ್ಟಂಪಿನಿಂದ ಸುಮಾರು ೧೮ ಅಂಗುಲ ಆಚೆ ಬಿದ್ದಾಗ ಗ್ಯಾಟಿಂಗ್ ಸಹ ಬಹಳಷ್ಟು ತಲೆಕೆಡಿಸಿಕೊಂಡಿರಲಿಕ್ಕಿಲ್ಲ. ಆದರೆ ಗಕ್ಕನೆ ಒಳತಿರುಗಿದ ಅದು ಆಫ್‌ಸ್ಟಂಪ್‌ನ ಮೇಲಿದ್ದ ಬೇಲ್ ಎಗರಿಸಿಕೊಂಡು ಹೋದಾಗ ಬರೀ ಗ್ಯಾಟಿಂಗ್ ಅಲ್ಲ, ಇಡೀ ಕ್ರಿಕೆಟ್ ವಿಶ್ವವೇ ದಿಟಾಗಿತ್ತು! ವಾರ್ನ್‌ರ ಆ ಎಸೆತವನ್ನು ಹಲವು ಪಂಡಿತರು 'ಶತಮಾನದ ಎಸೆತ' ಎಂದೇ ಕರೆದರು.!!

ಆ ಒಂದು ಎಸೆತದಿಂದ ವಾರ್ನ್ ಕುರಿತಂತೆ

•

ವಸಂತ ಮುರ್ಡೇಶ್ವರ

ಆಂಗ್ಲರು ಒಂದು ರೀತಿಯ ಹೆದರಿಕೆ ಬೆಳೆಸಿಕೊಂಡಿದ್ದಂತೂ ಖಚಿತ. ಈ 'ಲೆಗ್ಗಿ'ಯ ಎದುರು ಅವರು ಅತೀವ ಆತ್ಮ ವಿಶ್ವಾಸದಿಂದ ಆಡಿದ್ದಕ್ಕಿಂತ ಅವರ ಎದುರು ಕುಸಿದಿದ್ದೆ ಹಲವು ಸಲ. ೧೯೯೩ರ ಆ ಸರಣಿಯಲ್ಲಿ ಇಂಗ್ಲೆಂಡ್ ಎದುರು ೩೪ ವಿಕೆಟ್ ಉರುಳಿಸಿದ ಅವರು ಆಂಗ್ಲರ ಎದುರು ಇದುವರೆಗೆ ಆಡಿರುವ ಮೂರೇ ಸರಣಿಗಳಲ್ಲಿ ೮೫ 'ಬಲಿ' ಹಾಕಿರುವುದು ಮೇಲಿನ ಮಾತಿಗೊಂದು ಸಾಕ್ಷಿ.

ಆ 'ಶತಮಾನದ ಎಸೆತ' ಶೇನ್‌ವಾರ್ನ್‌ರ ಕ್ರಿಕೆಟ್ ಜೀವನಕ್ಕೊಂದು ಹೊಸ ತಿರುವು ನೀಡಿತೆಂದರೂ ತಪ್ಪಿಲ್ಲ. ತಮ್ಮ ಸಾಮರ್ಥ್ಯದ ಅರಿವನ್ನು ಅವರಿಗೆ ಮೂಡಿಸಿದ ಎಸೆತವದು. ಅಂದಿನಿಂದ ಅವರನ್ನು ಎದುರಿಸುವ ಮೊದಲು ಪ್ರತಿಯೊಬ್ಬ ಬ್ಯಾಟ್ಸ್‌ಮನ್ ಕೂಡ ಅವರ ಈ ಸಾಮರ್ಥ್ಯದ ಕುರಿತು ನೆನಪಿಸಿಕೊಳ್ಳದೇ ಇರುವುದಿಲ್ಲ. ಅಂದಿನಿಂದ ಏರಲಾಂಭಿಸಿದ ಅವರ 'ಬಲಿ'ಗಳ ಸಂಖ್ಯೆ ಮೂನ್ನೂರರ ಗಡಿದಾಟಿರುವ ಹಿನ್ನೆಲೆಯಲ್ಲಿ ಇಂದು ಶೇನ್‌ವಾರ್ನ್ ದಾಳಿ ನಿರ್ವಹಿಸಲು ತಮ್ಮ ಕ್ಯಾಪ್ ತೆಗೆದು ಅಂಪೈರ್‌ಕೈಗಿಡುವಾಗಲೇ ಎದುರಾಳಿ ಶಿಬಿರದಲ್ಲಿ ಕಂಪನ ಆರಂಭವಾಗುತ್ತದೆ. ಅವರ ಎಸೆತ ಎದುರಿಸುವ ಮೊದಲೇ 'ಔಟ್' ಆಗಿರುವ ಬ್ಯಾಟ್ಸ್‌ಮನ್‌ಗಳ ಸಂಖ್ಯೆಯೂ ಕಡಿಮೆಯೇನಿಲ್ಲ!

ಇಂದು ಶೇನ್‌ವಾರ್ನ್ ಬತ್ತಳಿಕೆಯಲ್ಲಿರುವ ಅಸ್ತ್ರಗಳು ಹತ್ತು ಹಲವು. 'ಫ್ಲಿಫರ್, ಲೆಗ್‌ಬ್ರೆಕ್, ಗೂಗ್ಲಿ, ಟಾಪ್‌ಸ್ಪಿನ್, ಇವಲ್ಲದೇ ತಾವು 'ಝೂಟರ್' ಎನ್ನುವ ಹೊಸ ಅಸ್ತ್ರ ಕಂಡು ಕೊಂಡಿದ್ದಾಗಿ ವಾರ್ನ್ ಎದುರಾಳಿ ಬ್ಯಾಟ್ಸ್‌ಮನ್‌ಗಳನ್ನು ಬೆದರಿಸಿದ್ದುಂಟು. ಅವರ ಪ್ರಕಾರ ಇದು ಲೋಬ್ರೇಕ್‌ನ ಇನ್ನೊಂದು ವೈವಿಧ್ಯವಂತೆ. ಕೈಯ ಮುಂಭಾಗದಿಂದ ಬರುವ ಚೆಂಡು ಅಂತಿಮ ಕ್ಷಣದ ವರೆಗೂ ಲೋ ಬ್ರೇಕ್‌ನಂತೇ ಕಂಡರೂ ಚೆಂಡು ಒಳಗಡೆ ತಿರುಗದೇ ನೇರವಾಗಿ ನುಗ್ಗಿ ಬ್ಯಾಟ್ಸ್‌ಣನ್‌ಗಳನ್ನು ವಂಚಿಸುವುದಂತೆ. ವಾರ್ನ್ ನಿಜಕ್ಕೂ 'ಝೂಟರ್ ' ಕಂಡು ಹಿಡಿದರೋ, ಇಲ್ಲವೋ ಎಂಬ ಮಾತು ಮುಖ್ಯವಲ್ಲ. ಆದರೆ ಈ ರೀತಿಯ ಮಾನಸಿಕ ಒತ್ತಡ ಹೇರಿ ವಾರ್ನ್ ಹಾಕಿರುವ 'ಬಲಿ'ಗಳ ಸಂಖ್ಯೆಯೂ ಕಡಿಮೇಯೇನಿಲ್ಲ.

ವಾರ್ನ್ ಆಗಮನ ಕ್ರಿಕೆಟಿಂಗ್ ವಲಯಗಳಲ್ಲಂತೂ ಹೊಸ ಗಾಳಿ ತಂದಿದ್ದಂತೂ ಖಚಿತ. ಆಸ್ಟ್ರೇಲಿಯಾದ ಎಳೆಯರ ಮೇಲಂತೂ ಅವರು ಬೀರಿರುವ ಪ್ರಭಾವ ಅಪಾರ. ನೀವು ಮುಂದೇನಾಗುತ್ತೀರೆಂದು ಎಳೆಯರನ್ನು ಕೇಳಿದ್ದೇ ಆದರೆ ಐದೋ ಆರೋ ಹುಡುಗರ ಉತ್ತರ 'ಶೇನ್‌ವಾರ್ನ್' ಎಂದಾದಾರೆ ಅಚ್ಚರಿಪಡಬೇಕಿಲ್ಲ.

೭೦ರ ದಶಕದ ಮಧ್ಯದಲ್ಲಿ ಕಪಿಲ್‌ದೇವ್ ಹಾಗೂ ನಂತರ ಸಚಿನ್ ತೆಂಡೂಲ್ಕರ್ ಭಾರತದಲ್ಲಿ ಬೀರಿದ್ದ ಪ್ರಭಾವವನ್ನೇ ಇಂದು ವಾರ್ನ್ ಇಡೀ ವಿಶ್ವದ ಎಳೆಯರ ಮೇಲೆ ಬೀರುವಲ್ಲಿ ಯಶಸ್ವಿಯಾಗಿದ್ದಾರೆಂದರೆ ಅದು ಉತ್ಪ್ರೇಕ್ಷೆಯ ಮಾತಾಗಲಾರದು. ಅವರ ಪ್ರಭಾವ ಕೇವಲ ಎಳೆಯರ ಮೇಲಷ್ಟೇ ಸೀಮಿತವಾಗಿದೆಯೆಂದರೆ ಅದೂ ತಪ್ಪು. ಇಂದು ಆಸ್ಟ್ರೇಲಿಯಾದ ಎದುರು ಆಡುವ ಯಾವುದೇ ತಂಡದ 'ಟೀಮ್ ಮೀಂಟಿಂಗ್'ನಲ್ಲಿ ಪ್ರಮುಖವಾಗಿ ಚರ್ಚಿಸಲ್ಪಡುವುದು ವಾರ್ನ್‌ರ ದಾಳಿಯನ್ನು ಯಾವ ರೀತಿ ಎದುರಿಸಬೇಕೆನ್ನುವುದೇ!

ವಾರ್ನ್ ಪೂರ್ಣ ಪ್ರಮಾಣದ ಟೆಸ್ಟ್ ಸರದಿಯೊಂದನ್ನು ಆಡಲು ಭಾರತಕ್ಕೆ ಬಂದಿರುವುದೂ ಇದೇ ಮೊದಲು. ಮುಂಬೈನಲ್ಲಿ ನಡೆದ ವಿಶ್ವಕಪ್ ಪಂದ್ಯದಲ್ಲಿ ಅವರು ಭಾರತದ ಆಟಗಾರರಿಂದ ದಂಡನೆಗೆ ಗುರಿಯಾಗಿದ್ದೇ ಹೆಚ್ಚು. ಸ್ಪಿನ್ನರ್‌ಗಳ ಎದುರು ಪಾದಚಲನೆಯಲ್ಲಿ ಉಳಿದವರಿಗಿಂತ ಪರಿಣಿತರಾಗಿರುವ ಭಾರತೀಯರ ಎದುರು ವಾರ್ನ್‌ರ ಸಾಧನೆಯನ್ನು ಎಲ್ಲೆಡೆ ಕಾತರದ ಕಂಗಳಿಂದ ಎದುರು ನೋಡಲಾಗುತ್ತಿದೆ. ಟೆಸ್ಟ್‌ನ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಮೊದಲ ಟೆಸ್ಟಿನಲ್ಲಿ ವಾರ್ನ್ ಭಾರತದ ನಾಲ್ವರನ್ನು ಕಬಳಿಸಿದರಾದರೂ ಎರಡನೇ ಸರದಿಯಲ್ಲಿ ಅವರಾಟ ನಡೆಯದ ಸಂಗತಿ ಮಹತ್ವದ್ದೇ. ಸಚಿನ್ (ಅಜೇಯ ೧೫೫) ನೇತೃತ್ವದಲ್ಲಿ ಆತಿಥೇಯರು ೪೦೦ರ ಗಡಿದಾಟಿದ್ದನ್ನು ಅಸಹಾಯಕರಂತೆ ನೋಡುತ್ತ ನಿಂತ ವಾರ್ನ್ ತಮ್ಮ ೩೦ ಓವರ್‌ಗಳಲ್ಲಿ ಒಂದೇ ವಿಕೆಟ್ ಪಡೆದರೂ ಅದಕ್ಕೆ ತೆತ್ತಿದ್ದು ೧೨೨ ಓಟಗಳನ್ನು! 'ಸಚಿನ್-ವಾರ್ನ್ ಸಮರ' ಎಂದೇ ಹಣೆಪಟ್ಟಿ ಹೊತ್ತಿದ್ದ ಪ್ರಸಕ್ತ ಸರಣಿಯಲ್ಲಿ ಮೊದಲ ಗೆಲುವಂತೂ ಸಚಿನ್‌ರದೇ ಎನ್ನುವುದರಲ್ಲಿ ಎರಡು ಮಾತಿಲ್ಲ.

ಇನ್ನೂ ಸಾಕಷ್ಟು ವರ್ಷದ ಆಟವನ್ನೂ ತಮ್ಮಲ್ಲಿ ಉಳಿಸಿಕೊಂಡಿರುವ ಶೇನ್ ವಾರ್ನ್‌ರಿಗೆ ೪೩೪ ವಿಕೆಟ್‌ಗಳ ಕಪಿಲ್‌ದೇವ್‌ರ ವಿಶ್ವದಾಖಲೆ ದೊಡ್ಡ ಸವಾಲಾಗಲಿಕ್ಕಿಲ್ಲ. ಇನ್ನೂ ಏಳೆಂಟು ವರ್ಷಗಳವರೆಗೆ ಆಡಿದರೂ, ವಾರ್ನ್‌ರ ಸದ್ಯದ 'ಸ್ಟ್ರೈಕ್ ರೇಟ್' ಗಮನದಲ್ಲಿರಿಸಿಕೊಂಡು ನೋಡಿದಾಗ ಅವರ 'ಬಲಿ' ಗಳ ಸಂಖ್ಯೆ ೫೦೦ನ್ನು ದಾಟಿ ನಡೆಯುತ್ತದೆ. ೩೦೦ ಕ್ಕೂ ಅಧಿಕ ವಿಕೆಟ್ ಪಡೆದ ೧೩ನೇ ಬೌಲರ್ ಎನ್ನುವ ಸಾಧನೆಗೈದ ವಾರ್ನ್ '೫೦೦ಬಲಿ'ಗಳ ತಮ್ಮ ಗುರಿ ಸಾಧಿಸಿಯೇ ತೀರುತ್ತಾರೆ ಎನ್ನಲು ಅವರಲ್ಲಿರುವ ಒಂದು ಗುಣ ಕಾರಣವೆನ್ನಬಹುದು. ಈಗಾಗಲೇ ವಿಶ್ವಕ್ರಿಕೆಟ್ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನ ಸಂಪಾದಿಸಿರುವ ವಾರ್ನ್ ತಾವು 'ಪರಿಪೂರ್ಣ'ರು ಎಂದು ಎಂದೂ ಅಂದುಕೊಂಡವರೇ ಅಲ್ಲ. ಪ್ರತಿದಿನ ಏನೊಂದಾದರೂ ಹೊಸದನ್ನು ಕಲಿಯಬೇಕೆನ್ನುವ ಮನೋವೃತ್ತಿ ಅವರದು. 'ಝೂಟರ್ ಅದರ ಪರಿಣಾಮವಾದರೂ ಇರಬಹುದು!

ಶೇನ್‌ವಾರ್ನ್ ಕ್ರಿಕೆಟ್ ಇತಿಹಾಸ ಕಂಡ ಅತ್ಯುತ್ಕೃಷ್ಟ ಸ್ಪಿನ್ನರ್ ಹೌದೇ ಎಂಬ ಪ್ರಶ್ನೆಯೂ ಏಳದೇ ಇಲ್ಲ. ಆದರೆ ಇದು ಚರ್ಚೆಯ ವಿಷಯ. ಅವರ ಸಾಧನೆ ಎಷ್ಟೇ 'ಅತ್ಯದ್ಭುತ' ವಾದರೂ ಈ ಕಲೆಯಲ್ಲಿ 'ಟೈಗರ್' ಓರೀಲಿ, ಕ್ಲೆರಿ ಗ್ರಾಮಿಟ್ ಆರ್ಥರ್ ಮೇಲಿ, ರಿಚಿ ಬೆನೋ, ಭಾಗವತ ಚಂದ್ರಶೇಖರ್ ಸುಭಾಷ ಗುಪ್ತೆ, ಹಾಗೂ ಅಬ್ದುಲ್ ಕಾದಿರ್‌ರಂತಹ ಅತಿರಥ ಮಹಾರಥರನ್ನು ಮರೆಯಲಾದೀತೇ?

●

ತಾರೆಯರ ಯುಗಾದಿ

ಎಂ. ಮೊಹ್ಮದ್ ಬಾಷ ಗೂಳ್ಯಂ

ಹಸಿರ ತಳಿರ ಮೇಲೆ ಬಿಳಿಯ ಮುತ್ತಾಗಿ ನಿಂತ ಮಂಜು ಹನಿಗೂ, ಹೊಂಗನಿಸಿನೊಡನೆ ಹೂ ನಗೆ ಹೊತ್ತು ಬರುವ ವಯ್ಯಾರದ ಉಕ್ಕಿಗೂ, ಮೂಡಲದ ಮುಂಜಾವು ಸರಿಸಿ ಸ್ವರ್ಣಕಿರಣ ಹರಿಸಿ ಸೃಷ್ಟಿ ಸೌಂದರ್ಯ ಬೆಳಗುವ ಸೂರ್ಯನಿಗೂ-ಹರ್ಷವೋ ಹರ್ಷ! ವರ್ಷವಿಡೀ ದುಡಿದು ಫಸಲು ಮನೆ ಸೇರುವ ರೈತಣ್ಣನಿಗೂ ಹೊಸ ಹೊಸ ಹುಮ್ಮಸ್ಸು ಮೂಡಿಸಲು ಸಜ್ಜಾಗುವ ಮುಂಗಾರಿಗೂ ಜೀವೋತ್ಕರ್ಷ!! ಹೀಗೆ ಸುಸಮಯದ ಬಗ್ಗೆ ಬರೆಯುತ್ತಲೇ ಹೋಗಬಹುದು. ಹೆಸರೇ ಸೂಚಿಸುವಂತೆ ಯುಗಾದಿ - ಹೊಸ ಬದುಕಿಗೆ ನಾಂದಿಯೂ ಹೌದು. ಹಳತನ್ನು ಮರೆಸಿ ಹೊಸತನ್ನು ಸ್ಪುರಿಸುವಂತೆ ಮಾಡುವುದು ಯುಗಾದಿಯ ವೈಶಿಷ್ಟವೂ ಕೂಡ.

ಪ್ರಿಯ ಓದುಗರೇ : ಇಂಥ ವೈವಿಧ್ಯಮಯವಾದ ಹಬ್ಬವನ್ನು ತಾರೆಯರು ಹೇಗೆ ಆಚರಿಸುತ್ತಾರೋ ನೋಡೋಣವೇ?!

ಮೊದಲು ಅಣ್ಣನವರನ್ನು ಹುಡುಕುತ್ತ ಹೊರಟೆ.

ಅದೇ ತಾನೇ ಯೋಗ, ಪೂಜೆ ಮುಗಿಸಿ, ಶುದ್ಧ ಬಿಳಿ ಅಂಗಿ, ರೇಶ್ಮೆ ಪಂಚೆ ತೊಟ್ಟಿದ್ದ ಡಾ. ರಾಜಕುಮಾರ್ ಅವರು ಆದರದಿಂದ ಬರ ಮಾಡಿಕೊಳ್ಳುತ್ತಾ - ಸಹಜವಾಗಿ ಕರ್ನಾಟಕ ಜನತೆಗೆ ಶುಭಕೋರಿದರು.

''ಕನ್ನಡದ ಕುಲಕೋಟಿ ಬಾಂಧವರಿಗೆ ನಮಸ್ಕಾರ. ಜೊತೆಗೆ ಹೊಸ ವರುಷದ ಯುಗಾದಿಯ ಶುಭಾಶಯ! ನನ್ನನ್ನು ಮೆಚ್ಚಿ ಹರ್ಷ ವ್ಯಕ್ತಪಡಿಸಿದ್ದೀರಿ! ಅಭಿಮಾನದಿಂದ ಬೆಳೆಸಿದ್ದೀರಿ. ಅದೆಷ್ಟೋ ಪ್ರಶಸ್ತಿಗಳ ಸರಮಾಲೆ ತೊಡಿಸಿದ್ದೀರಿ. ಕಳಶ ಪ್ರಾಯವೆಂಬಂತೆ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ ಬರುವುದಕ್ಕೂ ಕಾರಣರಾಗಿದ್ದೀರಿ. ಈ ಯುಗಾದಿಯಲ್ಲಿ ಇದಕ್ಕಿಂತ ಬೇರೆ ಆನಂದ ಬೇಕೇ? ಆದರೆ ನನಗೊಂದೇ ಚಿಂತೆ! ನಾವು ಹೇಗೋ ಇರ್ತೀವೆ! ಆಚರಿಸ್ತೇವೆ! ಶ್ರೀಮಂತರಿಂದ ಹಿಡಿದು ಶ್ರೀಸಾಮಾನ್ಯರವರೆಗೂ ಸುಖಶಾಂತಿ ಲಭಿಸಬೇಕು. ಹಾಗಾಗಲೆಂದು ರಾಯರಿಗೆ ವಿಶೇಷ ಪೂಜೆ ಮಾಡಿಸುವೆ. ಶಕ್ತಿ ಮೀರಿ ದಾನಧರ್ಮ ಮಾಡುವೆ ಈ ಯುಗಾದಿಯಲ್ಲಿ ಇದಿಷ್ಟು ಮಾಡಲು ಯೋಚಿಸಿಕೊಂಡಿರುವೆ''.

ಮುಂದೆ ಮತ್ತೇನೋ ಹೇಳುವ ಕಾತುರ ಅವರಲ್ಲಿತ್ತಾದರೂ ನಿಗದಿಪಡಿಸಿದ್ದ ಸಮಯ ಮುಗಿಯುತ್ತ ಬಂದಿತು. ಬೇರೆ ಮಾರ್ಗವಿಲ್ಲದೆ ಬೀಳ್ಕೊಡುಗೆ ಪಡೆದು ಕಂಠೀರವ ಸ್ಟುಡಿಯೋ ಕಡೆ ಹೊರಟೆ!

ಮೂರು ಜನ ಹೆಂಡತಿಯರ 'ಷೋಕ್'ನಿಂದ ಕಂಗಾಲಾಗಿರುವ, ಪ್ರಸಾದ್ ಸ್ಟುಡಿಯೋದಲ್ಲಿ ''ಮೈಡಿಯರ್ ಟೈಗರ್''ನ ಸಂಕಲನ ಕಾರ್ಯದಲ್ಲಿ ಮಗ್ನರಾಗಿದ್ದ ಟೈಗರ್ ಪ್ರಭಾಕರ್ ಬಳಿ ಹೋಗಿ ಬಂದ ವಿಷಯ ತಿಳಿಸಿದೆ. ಸ್ವಲ್ಪ ಹೊತ್ತು ಮೌನಿಗಳಾಗಿ ಪುನಃ ಅವರೇ ಮಾತಿಗಿಳಿದರು''.

''ನೋಡಿ ಅದೆಷ್ಟೋ ಯುಗಾದಿಗಳನ್ನು ಕಂಡಿದ್ದೇನೆ! ಎಲ್ಲದರಲ್ಲೂ ತೃಪ್ತಿ ಇತ್ತು. ಮಾಧುರ್ಯವಿತ್ತು. ಮೈಮನ ತಣಿಸಲು ಹೆಣ್ತಿ ಮಕ್ಕಳಿದ್ದರು. ಅದೆಲ್ಲ ಹೋಗಲಿಬಿಡಿ. ಯಾಕ್ಚುಲ್ ಆಗಿ ನಾನು ಯುಗಾದಿ ಮಾಡಲ್ಲ. ಸಾಧ್ಯವಿದ್ದಷ್ಟು ಬಡಬಗ್ಗರಿಗೆ ದಾನಧರ್ಮ ಮಾಡುತ್ತೇನೆ. ಪ್ರತಿಸಲ ಮಾಡ್ತಾ ಇದ್ದೆ. ಹಾಗೆಂದು ಪಬ್ಲಿಸಿಟಿ ನಂಗೆ ಇಷ್ಟ ಇಲ್ಲ! ಇಂಥ ಹಬ್ಬದಲ್ಲಿ ನನ್ನ ಲೋಪದೋಷ ತಿದ್ದಿಕೊಳ್ತೀನಿ. ಇದೇ ಸಂದರ್ಭದಲ್ಲಿ ಜಯಮಾಲ ನಟಿಸಿರುವ ''ತಾಯಿ ಸಾಹೇಬ'' ಚಿತ್ರದ ದೇವರ ದಯೆಯಿಂದ ಯಶಸ್ವಿಯಾಗಲೆಂದು ಬೇಡಿಕೊಳ್ಳುತ್ತೇನೆ.



ಏಕಧಾಟಿಯಲ್ಲಿ ಡಯಲಾಗಿನ ಥರ ಹೇಳುತ್ತ ಆಗಸದ ಕಡೆ ಮುಖಮಾಡಿದಾಗ ಟೈಗರ್ ಪ್ರಭಾಕರ್ ಕಂಗಳಲ್ಲಿ ನೋವಿನಲೆಯೊಂದು ಮಿಂಚಿ ಮಾಯವಾಯಿತು. ಇನ್ನಷ್ಟು ಕೇಳುವ ಕುತೂಹಲ ನನ್ನಲ್ಲಿರಲಿಲ್ಲ. ಮುಂದೆ ಮಾತಾಡಿಸಿದರೆ ಫಿಲಾಸಫಿಯ ಕ್ಲಾಸು ಶುರು ಆಗಬಹುದೆಂಬ ಭಯವೂ ಇದ್ದಿತು. 'ಬರುವುದಾಗಿ ಹೇಳಿ ಕಂಠೀರವ ದಾಟಿ'. ''ಕುಹೂ ಕುಹೂ'' ಸೆಟ್ ಕಡೆ ಹೊರಟೆ.

◩

ಉದ್ದವಾದ ಡಯಲಾಗ್ ಹೇಳುವುದರಲ್ಲಿದ್ದ ಪ್ರಕಾಶ್ ರೈ ಅವರಿಗೆ ಮಧ್ಯದಲ್ಲಿ ತೊಂದರೆ ಕೊಡಲು ನನಗೆ ಇಷ್ಟವಾಗಲಿಲ್ಲ. ಸ್ವಲ್ಪ ಹೊತ್ತು ಕಾದು ಕೂತೆ. ಕಾಫಿ ಬ್ರೇಕ್‌ಗೆ ಅವರು ಹೊರಬಂದಾಗ ಅವರ ಮುಖದಲ್ಲೇನೋ ಅಸಮಧಾನ! ತಾಯ್ನಾಡಿನಲ್ಲೇ ತಮಗೆ ಪ್ರಶಸ್ತಿ ಬರಲಿಲ್ಲವೆಂಬ ಕೊರಗು. ಹಾಗೆಂದು ಅವರು ನನ್ನ ಬಳಿ ಬಾಯಿಬಿಚ್ಚಿ ಹೇಳಲಿಲ್ಲ. ಆದರೆ, ಅವರ ಚಹರೆ ಮಾತ್ರ ಪ್ರಶಸ್ತಿಯ ಪ್ರಸ್ತಾಪವೆತ್ತಬೇಡವೆನ್ನುತ್ತಿತ್ತು.

ನನ್ನೆದುರಿಗೆ ಚೈರ್ ಹಾಕಿ ಕುಳಿತ ರೈ, ಹೇಳ ತೊಡಗಿದರು.

''ನಮ್ಮೂರಲ್ಲಿದ್ದಾಗ ಯುಗಾದಿಯನ್ನು ಆಚರಿಸುತ್ತಿದ್ದೆ. ಈಗಿಲ್ಲ! ಬೆಳಗಾದರೆ ಬೆಂಗಳೂರು, ಸಂಜೆಯಾದ್ರೆ ಹೈದ್ರಾಬಾದು, ರಾತ್ರಿಯಾದ್ರೆ





ಮದ್ರಾಸು. ಹಾಗಾಗಿ ಟೈಮಿಲ್ಲ. ಪ್ರತಿಯೊಂದು ಯುಗಾದಿಯಲ್ಲೂ ಒಂದು ನಿಯಮ ಮಾತ್ರ ಪಾಲಿಸ್ತೀನಿ. ಇಲ್ಲಿಯವರೆಗೆ ಅದೆಷ್ಟೋ ಏಳು ಬೀಳು ಕಂಡೀನಿ! ಹಗರಣಗಳ ಮನುಷ್ಯಾಂತ ಬಿರುದು ಪಡ್ದೀನಿ! ಹಲವಾರು ಜನರ ವೈಷಮ್ಯಕ್ಕೂ ಕಾರಣವಾಗಿರುವೆನು. ಆದ್ರೇ ಯುಗಾದಿಯಿಂದ ಸಾಧ್ಯವಾದಷ್ಟು ಜನರ ಜೊತೆ. ಪತ್ರಿಕೆಯವರ ಜೊತೆ ಜಗಳವಾಡೋಲ್ಲ. ಸಾರ್ವಜನಿಕರಿಂದ ಹಿಡಿದು ಸಿನಿಮಾದವರೆಗೆ ಸುಖಶಾಂತಿಯಿಂದ ಇರಲು ಇಚ್ಚಿಸುತ್ತೇನೆ!!! ಮುಂದೇನು ಹೇಳುತ್ತಿದ್ದರೋ! ನಿರ್ದೇಶಕರ ಕರೆ ಬಂದಿತು. ಕತ್ತಲಲ್ಲಿ ತಿಳಿಯಾದ ಲೈಟಿನ ಬೆಳಕು ಇದ್ದಾಗ್ಯೂ ಮೇಕಪ್‌ನಲ್ಲಿದ್ದ ಅವರ ಮುಖ ಹೊಳೆಯಬೇಕಿತ್ತು. ಅದೇಕೋ ನೀರಸ ವಾಗಿದ್ದಿತು. ಸೆಟ್‌ಗಾಗಿ ವೀರಪ್ಪನ್ ಮೀಸೆ ಇಟ್ಟಿದ್ದರು. ಅದರಲ್ಲಿ ಕ್ರೌರ್ಯ ಇರಬೇಕಿತ್ತು. ಇರಲಿಲ್ಲ. ಅವರ ಕಂಗಳೋ ನಿರಾಸೆಯ ನೆರಳಲ್ಲಿದ್ದಂತೆ ಕಾಣಿಸುತ್ತಿದ್ದವು. ಆದರೆ ಕೈಯಲ್ಲಿದ್ದ ಗುಂಡು ಮಾತ್ರ ಗಂಭೀರವಾಗಿತ್ತು!

ರಮೇಶ್ ಅವರನ್ನು ಭೇಟಿಯಾಗಬೇಕಂತ ಯೋಚಿಸಿಕೊಳ್ತಾ ಇರುವಾಗ ನನ್ನ ಗೆಳೆಯ ರೊಬ್ಬರು ಅವರ ಮನೆಗೆ ಫೋನ್ ಮಾಡಿಯೇ ಬಿಟ್ಟರು. 'ಅವರು ಔಟ್ ಡೋರ್ ಷೂಟಿಂಗ್ ನಲ್ಲಿದ್ದಾರೆ. ಅಸ್ಸಾಮಿಗೆ ಹೋಗಿದ್ದಾರಂತೆ ಕಾಣ್ಸುತ್ತೆ. ಇವತ್ ಬರ್ತೀನಿ ಅಂದಿದ್ರು! ಬಂದ್ರೇ ಹೇಳ್ತೀನಿ' ಅಂತ ಮಿಸೆಸ್ ರಮೇಶ್ ಹೇಳಿದರಂತೆ. ಮೊದಲೇ ಸ್ಟಾರ್ ನಟ. ಸಮಯ ಸ್ಫೂರ್ತಿಯ ಮನುಷ್ಯ! ಜೊತೆಗೆ ಪ್ರಶಸ್ತಿಯ ಕಿರೀಟ ಬೇರೆ ಮುಂತಾಗಿ ಯೋಚಿಸುತ್ತ ಮನೆಗೆ ಹೊರಟೆ. ಬೆಳಿಗ್ಗೆ ಬಹುಬೇಗ 'ಪತ್ರಿಕಾ' ಕಛೇರಿಗೆ ಹೋಗಿ ಕುಳಿತಿದ್ದೆ. ಫೋನ್ ಟ್ರಿಣ್ಣೆಸಿತು. ''ನಮಸ್ಕಾರ ನಾನು ರಮೇಶ್! ರಾತ್ರಿ ಫೋನ್ ಮಾಡಿದ್ರಂತೆ. ವಿಷಯ ತಿಳಿಯಿತು. ಕ್ಷಮಿಸ್ಬೇಕು ಇವರೇ! ಡೈರೆಕ್ಟ್ ಆಗಿ ಭೇಟಿ ಮಾಡೋಕಾಗಲ್ಲ. ತುಂಬ ಟೆನ್‌ಷನ್. ಬಿಜಿಯಲ್ಲಿದ್ದೀನಿ. ಪ್ರಶಸ್ತಿಯ ಖುಷಿಯಲ್ಲಿದ್ದೀನಿ. ಇದಿಷ್ಟು ಆದ್ಮೇಲೆ ತಮ್ಮ ಕಛೇರಿಗೆ ಬರ್ತೀನಿ. ಆದ್ದರಿಂದ ವಿಷಯವನ್ನು ಫೋನ್‌ನಲ್ಲೇ ಹೇಳ್ಬಿಡ್ತೀನಿ. ಬರ್ಕ್ಕೊಳ್ಳಿ! ಯಾಕೆ ಹೀಗೆ ಹೇಳ್ತೀದಿನಿ ಅಂದ್ರೇ! ನೀವು ಬರೋದಿಕ್ಕೆ ನಂಗ್ಯಾವ ಅಭ್ಯಂತರವಿಲ್ಲ. ದುಃಖವೇನೆಂದ್ರೇ ನೀವು ಬರೋದ್ರೊಳ್ಗೆ ನನ್ನ ಮೈಂಡ್ ಎಲ್ಲ ಸಿದ್ಧತೆ ಮಾಡಿಕೊಳ್ಳುತ್ತೆ. ನ್ಯಾಚುರಾಲ್ಟಿ ಇರೊಲ್ಲ. ಯಾಂತ್ರಿಕ ಅನ್ಸುತ್ತೆ. ಅದು ನಂಗೆ ಇಷ್ಟವಿಲ್ಲ ಆದ್ರಿಂದ ಹೀಗೆ ಹೇಳ್ಬಿಡ್ತೀನಿ.



ಈ ಯುಗಾದಿ ನನ್ನ ಜೀವನದಲ್ಲಿ ಸಿಗ್ನಿಫಿಕಂಟ್ ಆಗಿದೆ. ಖುಷಿಯೆಂಬ ಗಿರಿಯ ತುದಿಯ ಮೇಲಿದ್ದೇನೆ. ಹಬ್ಬದ ದಿನ ನಾನು ಸಿಂಪಲ್ ಆಗಿ, ಕಾಜುವಲ್ ಆಗಿರ್ತೀನಿ! ಮನೆಯಲ್ಲಿ ವಿಪರೀತ ಪೂಜೆ. ನಂಗೆ ಕಡ್ಡಾಯವಿಲ್ಲ. ಸಿಹಿಯ ಜೊತೆಗೆ ಕೋಡು ಬಳೆ ಚಪ್ಪರಿಸುವುದು ಸ್ವರ್ಗ ಸುಖ! ಬಂದ ಅತಿಥಿಗಳಿಗೂ ಸಿಹಿ-ಕೋಡು ಬಳೆಯ ಸ್ಪರ್ಶ ಇದ್ದೇ ಇರುತ್ತದೆ. ಹೀಗೆ ಫ್ರೀ ಆಗಿದ್ದಾಗ ಇತ್ತೀಚೆಗೆ ಅದೇಕೋ ಮನಸ್ಸಿಗೆ ಪೂಜೆ ಪುನಸ್ಕಾರ ಇಷ್ಟವಾಗುತ್ತೆ. ಅದರ ಚಾರ್ಮಿಂಗೇ ಬೇರೆ! ಈ ಹಬ್ಬದ ದಿನ ನನ್ನ ಕೀರ್ತಿಯ ಶಿಖರವನ್ನು ಅವಲೋಕಿಸುತ್ತಿದ್ದೇನೆ. ಅದೇ ರೀತಿ, ಅವಕಾಶಗಳಿಲ್ದೇ ಮದ್ರಾಸು ಹೈದ್ರಾಬಾದ್ ಅಲೆದ ದಿನಗಳನ್ನು ನೆನೆಸಿಕೊಳ್ತಲೂ ಇದ್ದೀನಿ. ಇನ್ಮುಂದೆ ಒಳ್ಳೊಳ್ಳೆ ಕ್ಯಾರೆಕ್ಟರ್ ಮಾಡಿ ಡಿಫೆರೆಂಟ್ ನಟಿ ಅನಿಸ್ಕೊತೀನಿ. ಪತ್ರಿಕೆ, ಸಾರ್ವಜನಿಕ ಸಂಬಂಧಗಳ ಬಗ್ಗೆ ಸೂಕ್ಷ್ಮಾವಲೋಕನ ಮಾಡ್ತಾ ಇರ್ತೀನಿ. ಇದಿಷ್ಟು ಯೋಚಿಸಿ ಪ್ರಾಕ್ಟಿಕಲ್ ಸ್ಕೇಚ್ ಹಾಕಿಕೊಳ್ಳುವುದೇ ಈ ಸಲದ ಯುಗಾದಿಯ Speciality ಅಂತೀನಿ!'' ಸಾಲುಬಾಣಗಳಂತೆ ಪಟಪಟಾಂತ ಮಾತುಗಳನ್ನು ಸಿಡಿಸುತ್ತಲೇ ಹೋದರು. ಆಯ್ದುಕೊಳ್ಳುವವರ ಹಾಗೆ ಹಾಳೆಯ ಮೇಲೆ ಅಕ್ಷರಗಳನ್ನು ಜೋಡಿಸುತ್ತಲೇ ಇದ್ದೇ!

ಸಿನಿಮಾ ಸುದ್ದಿಗಳನ್ನು ಸೃಷ್ಟಿಸುವವರೇ ಬಹಳ - ಸೃಷ್ಟಿಸದಂತಿರುವವರೇ ವಿರಳ. ಮೊದಲ ಗುಂಪಿಗೆ ಸೇರುವ ನಟಿ ಪ್ರೇಮ ಮದ್ರಾಸಿಗೆ ಹೋದರೊಂದು ಸುದ್ದಿ. ಕೇರಳಕ್ಕೋದರೆ ಸುದ್ದಿ! ಅಷ್ಟೇ ಏಕೆ ಅವರು ಹೈದ್ರಾಬಾದ್‌ಗೆ ಹೋದರಂತೂ ಟೇಬಲ್ ಗುದ್ದಿ ಗುದ್ದಿ ಸುದ್ದಿ ಮಾಡುವವರಿದ್ದಾರೆ. ವಿಶೇಷವೆಂದರೆ ಪ್ರೇಮ ಅವರಿಗೆ ಈ ಸುದ್ದಿಗಳೇ ಗೊತ್ತಿಲ್ಲವಂತೆ. ಹೂವು ಅರಳಿದಂತೆ ಕಂಗಳನ್ನು ಅಗಲಿಸಿ - 'ಹೌದಾ' ಅಂತ ನಮ್ಮನ್ನೇ ಕೇಳುವ ಪ್ರೇಮ ''ಶಾಂತಿ ಶಾಂತಿ'' ಷೂಟಿಂಗ್‌ನಲ್ಲಿದ್ದಾಗ ಮಾತನಾಡಿಸಿದೆ. ತೊಳೆದ ಮುತ್ತಿನ ಹಾಗೆ ಮೃದು ಮಧುರವಾಗಿ ವರ್ತಿಸಿದಳು. ತಾನು ಯಾವುದೇ ಸುದ್ದಿಯಾಗಲ್ಲವೆಂದು ಕಿಲ ಕಿಲ ನಕ್ಕು ''ಯುಗಾದಿಯ ಬಗ್ಗೆ ಕೇಳ್ಬೇಕಂದುಕೊಂಡಿದ್ದೀರಿ! am I correct?"

''ಹೌದು ಮೇಡಮ್''

''ನೋಡೀ ನಮ್ಮ ಮನೆಯಲ್ಲಿ ಯುಗಾದಿಯನ್ನು ತುಂಬ ಟ್ರೇಡಿಷನಲ್ ಆಗಿ ಆಚರಿಸ್ತೀವಿ. ಎದ್ದ ಕೂಡಲೇ ತಲೆಗೆ ಎಣ್ಣೆ ಹಚ್ಚಿ ಪನ್ನೀರ ಸ್ನಾನ ಮಾಡಿಸುತ್ತಾರೆ. ಬೇಡವೆಂದರೂ ಲೋಬಾನದ ಹೊಗೆ ಬೇರೆ. ಆ ಸ್ಮೆಲ್ಲೋ ಸೆಂಟ್‌ಗಿಂತ ತುಂಬ ವಾಸಿ! ಕೊಡುಗಿನವರ ಹಾಗೆ ಉಡುಪು ಸೀರೆ, ಕುಬುಸದ ಮೆರುಗು ಕಂಡು ನನ್ನಷ್ಟಕ್ಕೆ ನಾನೇ ಆನಂದಿಸ್ತೀನಿ. ಬಂದ ಅತಿಥಿಗಳು ಹೊಗಳಿದಾಗ ನಾಚಿ ನೀರಾಗ್ತೀನಿ!

ಮನೆಯಲ್ಲಿ ಹೊಸ ಊಟ ಘಮಘಮಿಸುತ್ತಲೇ ಇರುತ್ತದೆ. ಬೇವಿನ ಹೂವು, ದ್ರಾಕ್ಷಿ, ಕಸಕಸೆ ಬೆರೆಸಿ ಮಾಡಿದ ಸಿಹಿ ಪಾಯಸವೋ ಹೇಳತೀರದು! ಆದರ ಸವಿಯೋ ಒಂಥರಾ ಹುಳಿ - ಒಂದು ರೀತಿಯ ಬೇವು! ಈ ಹಬ್ಬ ಅಂದ್ರೆ ನಂಗೆ ತುಂಬ ಇಷ್ಟ! ಸಾಧ್ಯವಾದಷ್ಟು ಎಲ್ಲಿಗೂ ಹೋಗುವುದಿಲ್ಲ. ಆತ್ಮೀಯರು ಬಂಧುಗಳು ಮನೆಗೆ ಬರುತ್ತಾರೆ.

ಬಂದವರಿಗೆ 'ಪಾಯಸ' ಹಂಚುವುದೆಂದರೆ ನಂಗೆ ತುಂಬ ಇಷ್ಟ; ಇದಿಷ್ಟು ಹಬ್ಬದ ಖುಷಿ, ದುಃಖವನ್ನು ನೆನೆಯುತ್ತೇನೆ. ಅದ್ರೆ ಕ್ಷಣ ಕಾಲ ಮಾತ್ರ. ನಾನೊಬ್ಬ ಅಮಾಯಕಳು. ಯಾರ ಜೊತೆ ನನ್ನ ಆಫರ್ ಇಲ್ಲ. ಈ ರಂಗದಲ್ಲಿ ಎಲ್ರೂ ಒಳ್ಳೆಯವರು. ಯಾರೂ ಯಾರಿಗೆ ದ್ವೇಷಿಗಳಲ್ಲ. ಯಾವುದೇ ಸಿನಿಮಾಕ್ಕೆ ನಾನು ವಸ್ತುವಾಗಿಲ್ಲ. ಉಪೇಂದ್ರ, ನಾವು ಒಳ್ಳೇ friends ಅವರೊಬ್ಬ ಪ್ರತಿಭಾವಂತ ದಿಗ್ದರ್ಶಕರು. ನಮ್ಮಿಬ್ಬರ ಮಧ್ಯೆ ಯಾವುದೇ ವಿರಸವಿಲ್ಲ. ಕೆಲವು ಗಾಸಿಪ್ ಸುದ್ದಿಗಳು ಸೃಷ್ಟಿಯಾಗುತ್ತಲೇ ಇವೆ. ಅವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. don't care ಅಂದ್ರೇ! ಗಾಳಿಯಲ್ಲಿರುವ ಅಂಥ ಗಾಸಿಪ್‌ಗಳನ್ನು ಎಡಕಿವಿಯಿಂದ ಕೇಳಿ ಬಲಗಿವಿಯಿಂದ ಹೊರಬಿಡುತ್ತೇನೆ! ಸಾಧ್ಯವಾದಷ್ಟು ಹಬ್ಬದ ದಿನ ಮೌನ ವಾಗಿರ್ತೀನಿ; ನಾನು ಕನ್ನಡದ ಹುಡುಗಿ! ನಮ್ಮ ಸಂಸ್ಕೃತಿ, ಸರ್ವಧರ್ಮ ಸಹಿಷ್ಣತೆ ಹಿರಿದು ಸಾಧ್ಯವಾದಷ್ಟು ಶಾಸ್ತ್ರ ಗ್ರಂಥ ಓದ್ತೀನಿ! ಮದುವೆ ಬಗ್ಗೆ ಈ ಯುಗಾದಿಯಲ್ಲೂ ತಲೆ ಕೆಡಿಸಿಕೊಳ್ಳೊಲ್ಲ. ಮೊದಲು ಸಾಧನೆ! ಆ ಬಳಿಕ ಮದುವೆ!



ಕೊನೆಯದಾಗಿ ನಟನೆ ನನ್ನ ಜೀವ! ಭಾವಾಭಿನಯ ನನ್ನ ಸರ್ವಸ್ವ! ಒಂದರ್ಥದಲ್ಲಿ ಇದೇ ನನ್ನ ನಿಜವಾದ ಯುಗಾದಿ!!

''ಬನ್ನಿ ಮೇಡಮ್ ಲೊಕೇಷನ್ ರೆಡಿಯಾಗಿದೆ'' ಅಂತ ಲೈಟ್ ಬಾಯ್ ಕರೆಯಲು ಬಂದಾಗ ಹೋಗಲು ಮನಸುಬಾರದೆ, ಅನಿವಾರ್ಯವೆಂಬಂತೆ, ವಿದಾಯ ಹೇಳಿದಾಗ ಸಂಜೆಯಾಗಿತ್ತು. ಹೊರಗಡೆಯ ತೋಟವೊಂದರಲ್ಲಿ ಅರಳಿನಿಂತ ಜಾಜಿ, ಸಾವಂತಿಗೆ, ಬಿಳಿ ಮಲ್ಲಿಗೆ ವಿಶೇಷ ಪರಿಮಳಬೀರುತ್ತಿದ್ದವು. ಯೋಚಿಸುತ್ತಾ ನಡೆಯ ತೊಡಗಿದೆ. ಪ್ರೇಮಳ ಸುತ್ತ ಹೆಣೆದಿರುವ ಸುದ್ದಿಗಳು ಸತ್ಯವೋ ಅವರು ಹೇಳುವ ಮಾತು ಮಿಥ್ಯವೋ ಯೋಚಿಸುವುದು ಅಪ್ರಸ್ತುತ! ಪರಭಾಷಾ ತಾರೆಯರಿಗೆ ಸಿಗುವ, ಅವಕಾಶ, ಮನ್ನಣೆ ಪ್ರೇಮಳಿಗೆ ಸಿಗಲಿಲ್ಲವೋ - ಅದಕ್ಕೆ ಆಕೆ ಅರ್ಹಳಲ್ಲವೋ - ವಿಧಿಗೆ ಬಿಟ್ಟ ವಿಷಯ.

ಶಶಿಕುಮಾರ್ ಅವರ ಮನೆಯಲ್ಲಿಯೇ ಇದ್ದರು. ಆದರೆ ಸೋತ ಗ್ರೀಕ್ ವೀರನ ಹಾಗೆ ಕಂಡರು. ಅದೇ ಸಂಜೆಗೆಂಪು, ಅಗಲ ಕಂಗಳನ್ನು ಅರಳಿಸಿ ಹೇಳ ತೊಡಗಿದರು!

''ನೋಡೀ ಯುಗಾದಿ ಅಂದ್ರೆ, ಹೊಸತು! ಹೊಸ ಯುಗದ ಆರಂಭ!. ಇತ್ತಿತ್ತಲಾಗಿ ಯಾವ ಹಬ್ಬದ ಕಡೆ ಒಲವಿಲ್ಲ. ಆದ್ರೇ ಯಾಕೋ ಮನಸು ಆಧ್ಯಾತ್ಮಿಕದ ಕಡೆ ವಾಲುತ್ತಿದೆ. ದೇವರ್ನ ನಂಬಬೇಕು ಅನಿಸ್ತಾ ಇದೆ! ಆದ್ದರಿಂದ ಯುಗಾದಿಯಲ್ಲಿ ಭಾಗ ವಹಿಸ್ತೀನಿ, ಸಂಪ್ರದಾಯ ಪ್ರಕಾರ ಮನೆಯಲ್ಲಿ ಮಾಡ್ತಾರೆ. ಸಿಹಿ-ಕಹಿ ಮಾಡ್ತಾರೆ. ಹೊಸ ಬಟ್ಟೆ ಹಾಕ್ಕೊತೀನಿ. ಸಾಧ್ಯವಾದರೆ ಕಬ್ಬನ್ ಪಾರ್ಕಿಗೆ ಹೋಗಿಬರ್ತೀನಿ, ಜೊತೆಗೆ ಹೊಸ ಹೊಸ ಯೋಜನೆ ಹಾಕ್ಕೋಳ್ತೇನೆ. ಕುಡಿತ ಬಿಡುವೆ. ಮೊದಲ ಹಾಗೆ ಆ್ಯಕ್ಟಿಂಗ್‌ಗೆ ಹೆಚ್ಚು ಒತ್ತು ಕೊಡುವೆ. ಟೈಮ್ ಪಿಕಪ್ ಮಾಡುವೆ; ಬಾಡಿಬಿಲ್ಡ್ ಮಾಡ್ತೀನಿ. ಒಳ್ಳೊಳ್ಳೆ ಅವಕಾಶ ಬಂದ್ರೆ ತಪ್ಪದೇ ನಟಿಸ್ತೀನಿ. ಇತ್ತೀಚೆಗೆ ಪತ್ರಿಕೆಗಳು ಕೆಟ್ ಕೆಟ್‌ದಾಗಿ ಬರೆಯುತ್ತವೆ. ಖಿಷಿಪಡ್ತೀನಿ. ಹಬ್ಬದ ದಿನ ಯಾವುದೇ ವಿಷಯ ಸೀರಿಯಸ್ ಆಗಿ ತಗೋಳಲ್ಲ. ಬಂದಿದ್ದನ್ನು ಗಮನದಲ್ಲಿಡ್ತೀನಿ. ನಟನೆಯ ಬಗ್ಗೆ ತುಂಬ ತಿಳಿಯಬೇಕೆಂಬ ಆಸೆ ಇದೆ. ನಟನೆಯೇ ಜೀವನವಾಗಿರುವಾಗ ಸಹಜವಾಗಿ ನಟಿಸಬೇಕೆಂಬುದೇ ನನ್ನ ಕೋರಿಕೆ. ಅದೇ ರೀತಿ ಇನ್ನು ಮುಂದೆ ಯಾವುದೇ ಗಾಳಿ ಸುದ್ದಿಗಳು ಬರದ ಹಾಗೆ ಪ್ಲಾನ್ ಮಾಡಿಕೊಳ್ಳುವುದರ ಬದಲು ಗಾಳಿ ಸುದ್ದಿಯಾಗದಂತೆ ಇರಲು ಯತ್ನಿಸುತ್ತೇನೆ! ಇದೇ ಈ ಸಲದ ಯುಗಾದಿಯು ನನ್ನ ವೈಶಿಷ್ಟ್ಯ!

ಮಿಸ್ ಬೆಂಗಳೂರ್‌ದಿಂದ ಹಿಡಿದು 'ಪ್ರೇಮರಾಗ ಹಾಡು ಗೆಳತಿ'ಯವರೆಗೆ ಬೆಳೆದು ನಿಂತಿದ್ದ ನಿವೇದಿತಾ ಜೈನ್ ಶುದ್ಧ ಸಂಪ್ರದಾಯದ ಆಚಾರ ವಿಚಾರಗಳನ್ನು ಗೌರವಿಸುವ ಸಭ್ಯ ನಟಿಯೆಂಬುದನ್ನು ಮೊದಲೇ ಅರಿತಿದ್ದ ನಾನು ಯುಗಾದಿಯ ಬಗ್ಗೆ ಆಕೆಯ ಮುಂದೇ ಪ್ರಸ್ತಾಪಿಸುವ ಅಗತ್ಯವೇ ಇರಲಿಲ್ಲ.

''ಎಸ್! ನಂಗೇ ಇನ್ನೂ ನೆನಪಿದೆ. ನಾನು 'ಮಿಸ್ ಬೆಂಗಳೂರ್' ಆಗುವ ಮುನ್ನ ರಾಜರಾಜೇಶ್ವರಿಯ ದೇವಾಲಯದಲ್ಲಿ ಕುಳಿತು ಬಣ್ಣ ಬಣ್ಣದ ಚಿಣ್ಣರ ಹಾಗೆ ಸಣ್ಣ ಕನಸು ಕಾಣುತ್ತಿದ್ದೆ. ಹಿಂದಿಯಲ್ಲಿ 'ತಮನ್ನಾ' ಅಂತಾರಲ್ಲ ಹಾಗೆ. ಆ ದೇವಿಯ ಗುಡಿಯಲ್ಲಿ ಅದೂ ಇಂಥ ಯುಗಾದಿಯ ದಿನ ಅಂದ್ಕೊಂಡದ್ದು ನಡೆಯುತ್ತೆ ಅಂತ ಡ್ಯಾಡಿ ಹೇಳ್ತಿದ್ರು. ಹಾಗೇ ಮಾಡ್ದೆ! ಮುಂದೆ ಆದದ್ದೆಲ್ಲ ನಿಮಗೆ ಗೊತ್ತೇ ಇದೆ. ನೋಡ್ರೀ,



ಪ್ರೇಕ್ಷಕರೆದುರು ಪ್ರತಿ ದಿನ ಸೆಲ್ಯುಲಾಯಿಡ್ ಮೇಲೆ ಕಾಣಿಸ್ತಲೇ ಇರ್ತೀವಿ. ಕಲಾವಿದರ ಬದುಕು ಒಂಥರಾ ಋಷಿಗಳ ಜೀವನದ ಹಾಗೆ. ಅವರು ನಿರಂತರ ತಪಸ್ಸು ಮಾಡಿದರೆ, ದೇವರು ಕಾಣಿಸ್ಕೊಂಡು ವರ ಪಡೀತಾರೆ. ನಾವು ನಿತ್ಯ ನಟನೆಯಲ್ಲೇ ಮುಳುಗಿರ್ತೀವಿ. ಒಂದರ್ಥದಲ್ಲಿ ಪ್ರೇಕ್ಷರೇ ನಮಗೆ ದೇವರು. ಚೆನ್ನಾಗಿದ್ರೆ ಅವರೇ ಮೋಕ್ಷ ಪ್ರಸಾದಿಸ್ತಾರೆ. ಅಂಥ ಮೋಕ್ಷ ಪಡೆದ ದಿನವೇ ನಮಗೆ ನಿಜವಾದ ಯುಗಾದಿ. ಅದೇ ಜೀವನದ ಬಹುದೊಡ್ಡ ಹಬ್ಬ. ನಾವೆಷ್ಟೋ ಕಷ್ಟ ಪಡ್ತೀವಿ. ಪುರಾಣವೆಲ್ಲ ಹೇಳುತ್ತಿರುವುದಕ್ಕೆ ಬೋರ್ ಅನ್ನಿಸಿದ್ರೆ Sorry! ಅಂದ ಹಾಗೆ ಮೊದಲೇ ಹೇಳಬೇಕಿದ್ದ ವಿಷಯ ಮಧ್ಯದಲ್ಲಿ ಹೇಳ್ತಿದೀನಿ. ಹ್ಹಿ ಹ್ಹಿ (ನಗೆ) ಯುಗಾದಿಯ ದಿನ ಸೂರ್ಯಹುಟ್ಟುವುದಕ್ಕಿಂತ ಮುಂಚಿತವಾಗಿ ತಲೆಗೆ ಸ್ನಾನ ಆಗುತ್ತದೆ. ಕೂಡಲೇ ತಂಗಿಯ ಜೊತೆ ರಾಜರಾಜೇಶ್ವರಿಯ ಗುಡಿಗೆ ಹೋಗ್ತೀನಿ. ಪೂಜೆಯಾದ ಮೇಲೆ ಮನೆಗೆ ಬಂದು ಸ್ವೀಟ್ ತಿನ್ತೀನಿ. ಆದ್ರೇ ನನ್ ತಂಗಿ ಅದ್ಯಾವುದೋ ಶ್ಲೋಕ, ಪೂಜೆ ಮಾಡ್ತಾಳೆ. ಅವಳು ದೊಡ್ಡ ಭಕ್ತೆ, ನಂಗೆ ಅದ್ಯಾವುದೂ ಅರ್ಥವಾಗೊಲ್ಲ. ಅವುಳ್ನ ನೋಡ್ತಾ ಕೂಡುವುದೇ ಒಂಥರಾ ಖುಷಿ! ಹಬ್ಬದ ದಿನ ಎಲ್ಲಿಗೂ ಹೋಗೋಲ್ಲ! ಒಳ್ಳೇದನ್ನ ಯೋಚಿಸ್ತೀನಿ. ರಾಜಕೀಯ ಅಂದ್ರೆ ತುಂಬ ಇಷ್ಟ. ಒಂದ್ಸಲ ದಿನ ಖಂಡಿತ ರಾಜಕೀಯಕ್ಕೆ ಬರಬೇಕೆಂದುಕೊಂಡೀನಿ. ಅಂಥ ದಿನಕ್ಕೆ ಜಯಸಿಗಲಿ ಅಂತ ಇಂದೇ ದೇವರ್ನ ಬೇಡ್ತೀನಿ. ಸಂತೋಷಮಯವಾದ ಈ ಯುಗಾದಿಯಲ್ಲಿ ಒಂದು ದುರ್ಘಟನೆ ನೆನಪಿಸ್ಕೋ ಬೇಕು. ಷೂಟಿಂಗ್ ಒಂದರಲ್ಲಿ ಬುಲ್ಲೆಟ್ ಗಾಡಿ ಮೇಲೆ ಕೂತು ಅದನ್ನ ನಡೆಸ್ಬೇಕಾಗಿ ಬಂತು. ನಾನು ಮೊದ್ಲೇ ತೆಳ್ಳಗೆ-ಸಣಕಲು- ಹುಡುಗಿ! ಬುಲ್ಲೆಟ್ ಅಂದ್ರೆ ತೂಕ ಅಲ್ವಾ? ಮುಂದೇನಾಯಿತು? 'ಧೋಪ್' ಅಂತ ಬಿದ್ದು ಕಾಲ್ ಫ್ರಾಕ್ಚರ್ ಆಯಿತು! ''ಜೈಹಿಂದ್'' ನಲ್ಲಿ ನಟಿಸಲು ಸಾಧ್ಯವಿಲ್ಲ ಅಂದೆ. ಪುನಃ ಒಳ್ಳೆಯ ಟ್ರೀಟ್‌ಮೆಂಟ್‌ನಿಂದಾಗಿ ಮತ್ತೆ ನಟಿಸ್ಬೇಕಾಯಿತು. ಆದ್ರೂ ಕಾಲು ತುಂಬ ನೋಯ್ತಿತ್ತು ಕಣ್ರೀ. ಈ ಹಬ್ಬದಲ್ಲಿ ಇದೇ ಕಹಿ ಘಟನೆ. ಬಾಕಿಯೆಲ್ಲ ಓಕೇ.

ಈ ಹಬ್ಬದಲ್ಲಿ ಕೆಲವು ನಿಯಮ ಮಾಡ್ಕೋತೀನಿ. ಅದನ್ನೇ ವರ್ಷವಿಡೀ ಪಾಲಿಸಲು ಪ್ರಯತ್ನಿಸ್ತೀನಿ.

ಗ್ಲಾಮರಸ್ ಆಗಿ ನಟಿಸ್ಬಾರ್ದೂಂತ ಮನಸು ಹೇಳ್ತಾ ಇದೆ. ಸಂಪ್ರದಾಯ ಸೆಂಟಿಮೆಂಟಲ್, ಟ್ರಯಾಂಗಲ್ ಲವ್‌ಸ್ಟೋರಿ ನಂಗೆ ತುಂಬ ಇಷ್ಟ. ಭಾವನೆಗಳು ಉಕ್ಕಿ ಬಂದಾಗ ಷೂಟಿಂಗ್ ಷಾಟ್‌ಗಳಲ್ಲಿ ಅತ್ತದ್ದೂ ಇದೆ. ಆದ್ದರಿಂದ ಅಂಥ ಪಾತ್ರ ಸಿನಿಮಾ ಮಾಡಲು ಪ್ರಯತ್ನಿಸ್ತೀನಿ. ನಾಡಿನಲ್ಲಿರುವ ಅಜ್ಞಾನ ತೊಲಗಿಸಲು ಸಾಮಾಜಿಕ ಕಾನ್‌ಫ್‌ರೆನ್ಸ್‌ಗಳಲ್ಲಿ ಭಾಗವಹಿಸ್ಬೇ ಕಂದುಕೊಂಡಿದ್ದೇನೆ. ದೇವರಿಗೆ ಕೋಣ, ಕೋಳಿ ಕುರಿಗಳ್ನ ಬಲಿ ಕೊಡುವ ಮೂಢನಂಬುಗೆಗಳ ವಿರುದ್ಧ ಚಳುವಳಿ ಮಾಡ್ಬೇಕು ಅಂದ್ಕೊಂಡಿದ್ದೇನೆ. ಇದು ನನ್ನ ಜೀವನದ ಬಹು ದೊಡ್ಡ ಗುರಿಯೂ ಹೌದು. ಈ ಯುಗಾದಿಯಿಂದ್ಲೇ ಇಷ್ಟೆಲ್ಲ ಮಾಡ್ಬೇಕೆಂದುಕೊಂಡಿದ್ದೇನೆ. ಇನ್ನೂ ಹೇಳ್ತೀದ್ದ ರೇನೋ. ಅವರ ತಾಯಿ ತೆಂಗಿನ ಹಾಲು ಹಿಡಿದು ಬಂದರು. ಆಥಿತ್ಯ ಮುಗಿಯುವುದರೊಳಗೆ 'ಖ್ಯಾತ' ನಿರ್ದೇಶಕರ ಫೋನು ಬೇರೆ. ನಾನು ಬೀಳ್ಕೊಂಡು ಬರುವಾಗ ಅವರ ತಂಗಿ ಯಾವುದೋ ಶ್ಲೋಕ ಪಠಿಸುತ್ತಿರುವುದು ಕೇಳಿಬಂತು!

◪

ಇಂದು ಟಿ.ವಿ. ಅಥವಾ ರೇಡಿಯೋ ಆನ್ ಮಾಡಿದರೆ ಸಾಕು. ಯಾವುದೋ ಒಂದು ಹಾಡು ಬರುತ್ತದೆ. ಅದು ವಿ.ಮನೋಹರ್ ಅವರ ಹಾಡೇ ಆಗಿರುತ್ತದೆ. ಆಡು ಮುಟ್ಟದ ಸೊಪ್ಪಿಲ್ಲ ಮನೋಹರ್ ಮಾಡದ ಟ್ಯೂನ್ ಇಲ್ಲ ಅನ್ನುವಷ್ಟು ಬೆಳಿತಾ ಇರುವ ಇವರು ಸಂಗೀತ, ಕಲೆ, ನಿರ್ದೇಶನ, ವ್ಯಂಗ್ಯಚಿತ್ರ ಮುಂತಾದ ಕ್ಷೇತ್ರಗಳಲ್ಲಿ ಮೆರೆದ ಅವರ ಟ್ಯಾಲಂಟ್ ಪಟ್ಟಿ ಮಾಡುತ್ತಲೇ ಹೋಗಬಹುದು. ಇದನ್ನ ಬಿಟ್ಟು ಬೇರೇನು ಬರಿಯಬಹುದೂಂತ ಯೋಚಿಸು ತ್ತಲೇ ಅವರ ಭೇಟಿಗೆ ಹೊರಟೆ. ನೀಳವಾದ ಮೂಗಿನ ಮೇಲೆ ಕಾಲು ಚಾಚಿದ್ದ ಕನ್ನಡಕ ಸರಿಪಡಿಸಿಕೊಳ್ಳುತ್ತ ಅರ್ಧ ಬರುಡಾದ ತಲೆಯನ್ನು ಅಲಂಕರಿಸಿದ್ದ ಜೀನ್ಸ್ ಟೋಪಿಯನ್ನ ತೆಗೆದು ಕೆಳಗಿಟ್ಟು, ಬರ್ತೀರಂತ ತಿಳಿಯಿತು. ಏನ್ ಹೇಳೋದಂತಾನೆ ಹೊಳೀತಿಲ್ಲ. ನಾನು ಯುಗಾದೀನ್ನ ಆಚರಿಸೋಲ್ಲ. ಮೊದ್ಲೇ ನಂಗೆ ಹೆಣ್ತಿಮಕ್ಳಿಲ್ಲ. ಅವುರಿದ್ರೇ ಅದೆಲ್ಲ. ಹೆಣ್ತೀಗೆ ಸೀರೆ ತರ್ಬೇಕಾಗಿತ್ತು! ಮಕ್ಳಿಗೆ ಸ್ಕಿಟ್ಟು, ಬೆಂಡು ಬತ್ತಾಸು - ಕೊಡಿಸ್ಬೇಕಾಗಿತ್ತು. ಅವ್ರೇ ಇಲ್ದಾಗ ಯಾವ ಹಬ್ಬಾನೂ ಇಲ್ಲ. ಅಲ್ದೇ ಅದ್ರ ಬಗ್ಗೆ ನಂಗೆ ನಂಬುಗೆ ಇಲ್ಲ. ಟೈಮೂ ಇಲ್ಲ.

ಒಂದು ಮಾತಂತು ಗ್ಯಾರಂಟಿ. ಇಂಥ ಹಬ್ಬದಾಗ ಒಳ್ಳೇ ಹಾಡು ಸ್ಫುರಿಸಿದಾಗ ಆನಂದ ಆಗುತ್ತದೆ. ವಸ್ತುವಿಗೆ ತಕ್ಕ ಟ್ಯೂನ್ ರೆಡಿಯಾದಾಗ ಊಟ ಜೋರಾಗಿ ಮಾಡ್ಬೇಕನಿಸುತ್ತದೆ. ನನ್ ದೃಷ್ಟೀಲಿ ಇದೇ ನಿಜವಾದ ಯುಗಾದಿ.

ಈ ಹಬ್ಬದಲ್ಲಿ ಕಹಿ ಘಟನೆಯೆಂದರೆ ಹಾಡು ಸಂಗೀತ ಪಡೆದು ಸರಿಯಾಗಿ ಹಣ ಕೊಡದಂತಹ ಗೆಳೆಯರನ್ನ ಕಂಡ್ರೇ ಬೇಜಾರು. ಹೀಗಾಗುವುದಕ್ಕೆ ನನ್ನಲ್ಲೂ ಲೋಪದೋಷಗಳಿವೆ. ಮುಖಕ್ಕೆ ಹೊಡೆದ ಹಾಗೆ ಹಣ ಕೇಳುವ ಕಠಿಣ ಗುಣ ನನ್ನಲ್ಲಿ ಇಲ್ಲ.

ಚತುರತೆ, ಮಾತಿನ ಚಕಮಕಿ ಕಲಿತವನಲ್ಲ.

ಅಷ್ಟೇಕೆ ಇನ್ನೊಬ್ರನ್ನ ನೋಯಿಸ್ಬೇಕೂಂದ್ರೆ ನನ್ನಿಂದ ಆಗೋಲ್ಲ. ಏನು ಮಾಡುವುದು ಬಿಡಿ! ಅದೇನೋ ಹೇಳ್ತಾರಲ್ಲ. ಹೊಸ ಹೂವು ಹೊಸ ಚಿಗುರು ಅಂತ. ಅದ್ರಂಗೆ ಇಲ್ಲಿಂದಾದ್ರೂ ನನ್ನ ವೀಕ್‌ನೆಸ್‌ಗಳ್ನ ಆಸರೆಯಾಗಿ ಬಳಸಿಕೊಳ್ಳದೆ, ಶ್ರಮಕ್ಕೆ ತಕ್ಕ ಬೆಲೆ ಕೊಡೋ ನಿರ್ಮಾಪಕ ಗೆಳೆಯರು ಮುಂದೆ ಬರಲಿ ಅಂತ ಆಶಿಸ್ತೀನಿ. ಹಾಗಾದ ದಿನವೂ ನಂಗೆ ಯುಗಾದಿಯೇ.

ಮುಂದೆ ಬರಲಿರುವ ದಿನಗಳಲ್ಲಿ ಒಳ್ಳೆ ಹಾಡುಗಳ್ನ ಬರೆದು ಸುಂದರವಾದ ಸಂಗೀತ ಕನ್ನಡ ತಾಯಿಯ ಮಡಿಲಿಗೆ ಹಾಕ್ತೀನಿ. ಒಳ್ಳೊಳ್ಳೆ ಸಿನಿಮಾಗಳ್ನ ಡೈರೆಕ್ಟ್ ಮಾಡ್ತೀನಿ. ಈ ಯುಗಾದಿಯ ದಿನ ಕೈಗೊಂಡಿರುವ ಈ ಯೋಜನೆ ಸಕ್ಸೆಸ್ ಆಗಲಿ ಅಂತ ಕನಸ್ ಕಾಣ್ತೀನಿ... ಇಷ್ಟು ಹೇಳಿ ಬೋಳುತಲೆಗೆ ಕೈ ಇಟ್ಟು ಸ್ವಲ್ಪ ರೆಸ್ಟ್ ತಗೋತೀನಿ. ತಲೆ ಸುಡ್ತಾ ಇದೆ''. ಅನ್ನೋ ಪೋಜು ಕೊಟ್ಟಾಗ ಮೌನಿಯಾಗಿ ಹೊರಬಂದೆ.

◩

ವಿನಯ ಪ್ರಸಾದ್ ಅವರು ವಿನಯದಿಂದಲೇ ಪೋನಿಸಿ ವಿಷಯ ವಿಸ್ತರಿಸಿದರು. ''ಕ್ಷಮಿಸಿರಿ. ನೀವು ಫೋನ್ ಮಾಡಿದ್ರಂತೆ. ಔಟ್ ಡೋರ್ ಷೂಟಿಂಗ್‌ನಲ್ಲಿದ್ದೆ. ನಿನ್ನೆ ರಾತ್ರಿ ಮನೆಗೆ ಬಂದಾಗ ತಂಗಿ ಹೇಳಿದಳು! ಈ ಯುಗಾದಿ ನನಗೆ ಸಂಭ್ರಮ್ವವೂ ಹೌದು - ಬೋರ್ ಕೂಡ. ಮನೆಯವರ್ನ ನೆನೆದು ದುಃಖ. ನಟನೆ ಸ್ಮರಿಸಿದರೆ, ಸುಖ, ಗಾಸಿಪ್‌ಗಳನ್ನ ಆಲಿಸ್ತೀನಿ, ಜಸ್ಟ್ ಎ ಮಿನಿಟ್ ಅಂದ್ರೇ ಎರಡು ಕಣ್ಣೀರ ಹನಿಯಷ್ಟು ಮಾತ್ರ ಚಿಂತಿಸ್ತೀನಿ, ಪುನಃ ವಿನಯ, ವಿನಯ ಪ್ರಸಾದ್ ಆಗ್ತೀನಿ! ಮನೆಯಲ್ಲಿ ಟ್ರೆಡಿಷನಲ್ ಆಗಿ ಹಬ್ಬ ಮಾಡ್ತೀವಿ. ಇಳಕಲ್ ಸೀರೆ ಕುಬುಸ ತುಂಬ ಇಷ್ಟ. ಎಣ್ಣೆ ಸ್ನಾನ ಜೋರು. ಪೂಜೆಯಾದ ಮೇಲೆ ಸಿಹಿಗೆ ತುಪ್ಪ ಬೆರೆಸಿ ತಿನ್ನುತ್ತಿರುವುದೇ ಒಂದು ಸುಖ. ಎಲ್ರಿಗೂ ಒಂದಿಷ್ಟು ಊಟ, ಸುಖ ಶಾಂತಿ ಸಿಗಲಿ ಅಂತ ದೇವ್ರಿಗೆ ಬೇಡಿಕೋಳ್ತೀನಿ. ನನ್ನ ಚಿತ್ರ ನೂರು ದಿನ ಓಡ್ಲೀ ಅಂತ ಆಸೆ. ಅದಕ್ಕೆ ತಕ್ಕ ಅಭಿನಯ ಖಂಡಿತ ಮಾಡ್ತೀನಿ. ಟೆಲಿಫೋನ್ ಕಟ್ ಆಯಿತು. ಅವರು ಹೇಳುವುದೆಲ್ಲ ನೇರವಾಗಿ ಹೇಳಿಯಾಗಿತ್ತು.

◩

ಕ್ರೇಜಿಸ್ಟಾರ್ ರವಿಚಂದ್ರನ್ 'ಯಾರೇ ನೀನು ಚೆಲುವೆ'ಗಾಗಿ ಲೋಕ ವಿಖ್ಯಾತ ಜೈಪುರದ ಅರಮನೆಗೆ ಹೋಗಿದ್ದರು. ಅವರ ತಮ್ಮ ಬಾಲಾಜಿ ಆಫೀಸಿನಲ್ಲಿದ್ದರು. ನೀಳನಾಸಿಕ, ಕಿತ್ತಳೆ ಬಣ್ಣ ಗುಂಗುರು ಕೂದಲ ಆತ ''ಬನ್ನಿ ಬನ್ನಿ'' ಅಂತ ಸ್ವಾಗತಿಸಿ ಟೀ ಕುಡಿಸಿ, ಮಾತಿಗಿಳಿದ ''ನೋಡಿ ಸಾರ್ ನಾವ್ ಹಬ್ಬ ಮಾಡೋಲ್ಲ. ಯುಗಾದೀನ ನೆನಪಿಸಿಕೊಳ್ಳಲ್ಲ. ಒಂದು ಮಾತು ಗ್ಯಾರಂಟಿ ನಾವು ನಿರ್ಮಿಸಿದ ಚಿತ್ರ ನೂರು ದಿನ ಓಡಿದ್ರೇ ಅದೇ ನಮಗೆ ಯುಗಾದಿ. ನಾನು ನಟಿಸಲಿರುವ 'ಕಾಲೇಜ್' ಹಿಟ್ ಆದ್ರೇ ಅದಕ್ಕಿಂತ ಒಳ್ಳೇ ಯುಗಾದಿ ಬೇರೆ ಇಲ್ಲ! ನಂದು ಜೀವನದ ಪ್ರಶ್ನೆ. ಅಣ್ಣ ತುಂಬ ರಿಸ್ಕ್ ತಗೊಂಡು ನಿರ್ಮಿಸ್ತವ್ರೇ. ಡಿಫರೆಂಟ್ ಫೈಟ್ಸ್ ಇದೆ. ಬಹಳಷ್ಟು ಸಾಂಗ್ಸ್ ಅವುಟ್ ಡೋರ್‌ನಲ್ಲೇ ಷೂಟ್ ಆಗ್ತಿವೆ. ಹೇಗೋ ರಂಗದಲ್ಲಿ ಬಂದು ಆಗಿದೆ. ಸೋಲೋ ಗೆಲುವೋ! ಜನರು ಹೇಗೆ ಸ್ವೀಕರಿಸುತ್ತಾರೋ ಅವರಿಗೆ ಬಿಟ್ಟಿದ್ದು. ಶಕ್ತಿ ಮೀರಿ ಚನ್ನಾಗಿ ಮಾಡ್ತೀನಿ. ಅಣ್ಣನ ಬೆಂಬಲ ಇರೋವರ್ಗೂ ನಂಗೆ ಯುಗಾದೀನೇ. ಚಿತ್ರಕಥೆ, ಹಾಡುಗಳ ಲಯ, ಜನರಿಗೆ ತುಂಬ ಇಷ್ಟ ಆಗುತ್ತೇಂತ ಅಂದ್ಕೋತೀನಿ. ಹೊಸತನದಿಂದ ಬರುವ ನನ್ನ 'ಕಾಲೇಜ್' ಸಿನಿಮಾವನ್ನು ಜನ ಹೇಗೆ ಪ್ರತಿಕ್ರಿಯಿಸ್ತಾರೋ ಅಂತ ಈ ಯುಗಾದಿಯ ದಿನ ನೆನೆದು ಖುಷಿ ಪಡ್ತಿರ್ತೀನಿ.

◩


ನಿರ್ದೇಶಕರೊಬ್ಬರ ಪೋನಿಗಾಗಿ ಕಾದು ಕುಳಿತಿದ್ದ ಶ್ರುತಿ ಸುಲಭವಾಗಿ ಸಿಕ್ಕರು. ಪ್ರೆಸ್‌ನೋರು ಎಂಬ ಕುತೂಹಲ, ಏನೋ ಬರೀತಾರೆಂಬ ಉತ್ಸುಕತೆ ಮಾಯವಾಗಿ ಯಾವುದೋ ಒಂದು ಉದಾಸೀನತೆ ಶ್ರುತಿಯ ಮುಖದ ಮೇಲೆ ಲಾಸ್ಯವಾಡುತ್ತಿರುವುದನ್ನು ಸೆರೆಹಿಡಿಯಬೇಕೆನ್ನುವಷ್ಟರಲ್ಲಿ ಅವರ ತಾಯಿ ಹೊರ ಬಂದು ಮುಗುಳು ನಗೆ ಬೀರಿ ಒಳಗೆ ಹೋದರು. ಕೂಡಲೇ ಶ್ರುತಿ ಮಾತಿಗಿಳಿದರು ''ಈ ಯುಗಾದಿಯಲ್ಲಿ ನೆಮ್ಮದಿಯಿಂದ ಇದ್ದೇನೆ. ಕೆಲವರು ನನ್ ಬಗ್ಗೆ ಏನೇನೋ ಬರೀತಾರೆ. ಚಿಂತೆ ಇಲ್ಲ ಅಂದ್ಕೊಂಡ್ರೇ ಸಾಕಷ್ಟು ಆಫರ್‌ಗಳು ಬರುತ್ತವೆ. ಇಲ್ಲಿನ ತಾರಾಪಟ್ಟ ಯಾರಿಗೂ ಸ್ಥಿರವಲ್ಲ. ಹಾಗೆ ಯಾರೂ ಯೋಚಿಸುವುದಿಲ್ಲ. ನನಗೂ ಬಹಳಷ್ಟು ಅನುಭವ ಆಗಿದೆ. ಈ ಹಬ್ಬ ಚೆನ್ನಾಗಿ ಆಚರಿಸ್ತೀವಿ. ಸಾಧ್ಯವಾದ್ರೇ ಜೋಯಿಸರ್ನ ಕರೆಸಿ ಪಂಚಾಂಗ ಕೇಳ್ತೀವಿ. ಯುಗಾದಿಯ ದಿನ ಬಡವರಿಗೆ ಬಟ್ಟೆ ಬರೆ ದಾನ ಮಾಡುವುದು ನಮ್ಮ ಸಂಪ್ರದಾಯ. ನಾವೂ ಹೊಸ ಬಟ್ಟೆ ತೊಡ್ತೀವಿ. ಪೂಜೆ ಪುನಸ್ಕಾರ ಇದ್ದೇ ಇರುತ್ತದೆ.

ಈ ಯುಗಾದಿ ಬರುವ ಮುಂಚಿತವಾಗಿಯೇ ''ಕಣ್ಣೀರ ಕಾಲುವೆ'' ಹರಿಸಬಾರದೆಂಬ ನನ್ನ ಮಹತ್ತರ ನಿರ್ಣಯ ಈಗಾಗಲೇ ಎಲ್ಲರಿಗೂ ತಿಳಿದಿದೆ. ತಮಿಳಿನಲ್ಲಿ 'ಕಲ್ಕಿ' ಅಂತ ಒಂದು ಸಿನಿಮಾದಲ್ಲಿ ನಟಿಸಿದ್ದೆ. ತುಂಬ ಹೆಸ್ರು ಬಂತು. ಚನ್ನಾಗಿ ಓಡ್ತು. ಅಲ್ಲಿಯ ಜನ ಸಿನಿಮಾವನ್ನು ಮುಗಿ ಬಿದ್ದು ನೋಡ್ತಾರೆ! ಒಳ್ಳೇದನ್ನ ಕನ್ನಡದವರೂ ಸ್ವೀಕರಿಸ್ತಾರೆ. ಇದನ್ನ ಯುಗಾದಿ ಯಲ್ಲಿ ನೆನೆದು ತುಂಬ ಸಂತೋಷವೆನಿಸ್ತಾ ಇದೆ. ಇನ್ನುಂದೆ ಹೈದ್ರಾಬಾದು ಮದ್ರಾಸಿಗೆ ಹೋಗು ವುದು ಕಡಿಮೆ ಮಾಡಿ ಕನ್ನಡದಲ್ಲೇ ಹೆಚ್ಚು ಇನ್‌ವಾಲ್ವ್ ಆಗೋದಕ್ಕೆ ಪ್ರಯತ್ನಿಸ್ತೀನಿ. ಇದೇ ಯುಗಾದಿಯ ನನ್ನ ವಿಶೇಷ. ಎಲ್ಲರಿಗೂ ಯುಗಾದಿಯ ಶುಭಾಶಯ.

◩

ಉದಯೋನ್ಮುಖ ಕಲಾವಿದ ಆರಡಿಯ ಸ್ಫುರುದ್ರೂಪಿ ಸುಧೀಪ್ ಸಂಜೀವ್ ''ಶುಚಿ ದರ್ಶನ್'' ಹೋಟೆಲ್ ಮ್ಯಾನೇಜರ್ ಹತ್ತಿರ ಮಾತುಕತೆಯಾಡುತ್ತ ಇದ್ದರು. ಕಂಡಕೂಡಲೇ ಸಂತೋಷಗೊಂಡು ಪಕ್ಕದಲ್ಲೇ ಇದ್ದ ಮನೆಗೆ ಕರೆದೊಯ್ದರು. ದೊಡ್ಡ ಬಂಗ್ಲೆ. ಸುಂದರವಾಗಿತ್ತು, ಬಾಗಿಲ ಮುಂದೆ ಹಿರಿಯ ನಾಯಿಗಳೆರಡು ಗುರುಗುಟ್ಟಿದವು. ಸಂದೀಪ್‌ನ ಸಹಾಯದಿಂದ ಮನೆಯೊಳಗೆ ಹೋದೆ. ''ನೀವು ಕಂಡಿದ್ದು ತುಂಬ ಸಂತೋಷ ಸಾರ್. ಮನಸ್ ಬಿಚ್ಚಿ ನಾಲ್ಕು ಮಾತಾಡಬಹುದು. ಬೈ ದಿ ಬೈ ಯುಗಾದಿ ಹಬ್ಬ ಮಾಡೊಲ್ಲ. ಬಟ್ ಒನ್ ಥಿಂಗ್, ನಾನು ಷೂಟಿಂಗ್‌ನಲ್ಲಿ ಇದ್ದ ದಿನವೇ ನಂಗೆ ಯುಗಾದಿ. ಅವಕಾಶಗಳು ಸಿಕ್ರೇ ಅದೇ ಯುಗಾದಿ. ಪ್ರತಿಯೊಬ್ಬ Producer Director ಮನೆ ಬಾಗಿಲು ತಟ್ಟೀನಿ. ನಾನು ತಿರುಗೀನಿಸಾರ್ ಆದ್ರೇ ಟ್ಯಾಲಂಟ್ ನೋಡಿ ಪಾತ್ರ ಕೊಡಿ ಅನ್ನುವುದೇ ನನ್ನ ರಿಕ್ವೆಸ್ಟ್, ಯಾವುದೇ ಇನ್‌ಫ್ಲುಯೆನ್ಸ್ ನನಗೆ ಸರಿ ಬರೋಲ್ಲ. ಫಿಲ್ಡ್‌ಗೆ ಬರುವ ಮುನ್ನ ಬಾಂಬೆಯಲ್ಲಿದ್ದೆ. ಮಾಡಲಿಂಗ್ ಮಾಡ್ತಿದ್ದೆ. ಹೇಗೋ ಇಲ್ಲಿಗೆ ಬಂದಾಯ್ತು! Nice and tuff field ಲೀಡ್ ಮಾಡಲೇಬೇಕಲ್ವ, 'ತಾಯವ್ವ' ತುಂಬ ಚನ್ನಾಗಿ ಮಾಡ್ದೆ. ಸ್ವಲ್ಪ ಗ್ರಿಪ್ ಸಿಕ್ತು, ಈಗ ಮದ್ರಾಸ್‌ದಿಂದ famous Direter ಒಬ್ಬರ ಕರೆ ಬಂದಿದೆ. ಭೇಟಿಯಾಗಿ ಬಂದಿದೀನಿ. ಇದನ್ನೆಲ್ಲ ಈ ಹಬ್ಬದಲ್ಲಿ ನೆನೆಯುವೆ. ಸಿನಿಮಾ ರಂಗದ ನೆಲೆಗಾಗಿ ಶಕ್ತಿಮೀರಿ ಶ್ರಮಿಸ್ತಿದೀನಿ. ಆ್ಯಕ್ಟಿಂಗ್ ಬಗ್ಗೆ ಸೀರಿಯಸ್ ಆಗಿ ಯೋಚಿಸ್ತೀನಿ. ಇತ್ತೀಚೆಗೆ ಲೋಕನಾಥ್ ಅಂಕಲ್ ಜೊತೆ ತುಂಬ ಸೆಂಟಿಮೆಂಟಲ್ ಆಗಿ ಆ್ಯಕ್ಟ್ ಮಾಡೀನಿ. ಅದನ್ನ ಮರೆಯೋಕೆ ಸಾಧ್ಯವೇ ಇಲ್ಲ. ಅಂಥವುಗಳೇ ನನಗೆ ನಿತ್ಯ ಯುಗಾದಿ ಅಂದ್ರೇ ತಪ್ಪಲ್ಲ. Because, Ugadi is nothing but act ನನಗೂ ಹೊತ್ತಾಗುತ್ತಾ ಬಂದಿತ್ತು, ಹೋಗಿ ಬರುವುದಾಗಿ ಹೇಳಿ ಸಂದೀಪ್‌ನ ಮಾತುಗಳ ಬಗ್ಗೆ ಯೋಚಿಸಬೇಕೆನಿಸಿತು.

●



ಬಿಚ್ಚಿದರೆ ಕಾಲ್‌ಶೀಟ್ ಮುಚ್ಚಿದರೆ ಗೇಟ್‌ಪಾಸ್!

ಕೇಶವ ನಾಡಕರ್ಣಿ

ಮೈಯನ್ನು ಇಡಿಯಾಗಿ ಮುಚ್ಚುವ ಮೈಸೂರು ಸಿಲ್ಕ್, ಹಣೆಗೆ ಕಾಸಗಲ ಕುಂಕುಮ, ಕೈಗೆ ಗಲಗಲವೆನ್ನಿಸುವಂತೆ ಬಳೆಗಳ ಶೃಂಗಾರ, ಜುಟ್ಟಿಗೆ ಮಲ್ಲಿಗೆ ಹೂ. ಈ ಅಪ್ಪಟ ಭಾರತೀಯನಾರಿ, ಒಂದು ಕಾಲಕ್ಕೆ ನಮ್ಮ ಸಿನಿಮಾ ನಾಯಕಿ. ಲೀಲಾವತಿ, ಭಾರತಿ, ಆರತಿ-ಮೊದಲಾದ ಬೆಳ್ಳಿತೆರೆಯ ಅತಿಥಿಗಳೆಲ್ಲಾ ಹೆಚ್ಚಾಗಿ ನೆಚ್ಚಿಕೊಂಡಿದ್ದು ಈ ಸಾಂಪ್ರದಾಯಿಕ ವೇಷವನ್ನೇ. ಆಗಾಗ ಅಲ್ಲಲ್ಲಿ ಮಾಡ್ ಮಿಂಚಲ್ಲಿ ಕಾಣಿಸಿಕೊಂಡಿದ್ದರೂ ಪ್ರೇಕ್ಷಕ ಅವರನ್ನು ಇಷ್ಟಪಟ್ಟಿದ್ದು ಸೀರೆ ತೊಟ್ಟ ನೀರೆಯ ರೂಪದಲ್ಲೇ.

'ಜೇಡರ ಬಲೆ' ಚಿತ್ರದಲ್ಲಿ ಜಯಂತಿ ನೀರಿಗಿಳಿದಾಗ, ರುಚಿಗೆ ತಕ್ಕಷ್ಟು ಮೈಬೋರಿದಾಗ, ಜನ ಕರೆಂಟ್ ಹೊಡೆದಂತೆ ಬೆಚ್ಚಿಬಿದ್ದ ಪ್ರಸಂಗವನ್ನು ಇಂದಿಗೂ ನೆನೆಸಿಕೊಳ್ಳವವರಿದ್ದಾರೆ. ಬಹುಶಃ ಆ ತಲೆಮಾರಿನಲ್ಲಿ ಸೆಕ್ಸ್ ಇಮೇಜ್‌ಗೆ ಗಂಟುಬಿದ್ದು ಅದರಲ್ಲಿ ಯಶಸ್ಸು ಕಂಡ ಏಕೈಕ ನಾಯಕಿ ನಟಿಯೆಂದರೆ ಜಯಂತಿ. ಶೈಲಶ್ರೀಯಂಥ 'ಮಾದಕಿ'ಯರಿದ್ದರೂ ಅವರು ಖಳನಾಯಕಿಯಾಗಿ ಕಾಣಿಸಿಕೊಂಡವರು. ಅಂದಿನ ನಿರ್ಮಾಪಕರಿಗಾಗಲಿ, ನಿರ್ದೇಶಕರಿಗಾಗಲಿ, ತಮ್ಮಿಷ್ಟವನ್ನು ನಾಯಕಿಯರ ಮೇಲೆ ಹೇರುವ ಧೈರ್ಯವೂ ಇರಲಿಲ್ಲ. ಅವರು ಕ್ಯಾಮರಾ ಮುಂದೆ ನಿಂತರೆ ತಮ್ಮ ಪುಣ್ಯ ಎಂಬ ಪರಿಸ್ಥಿತಿಯಿತ್ತು.

ಕಾಲ ಬದಲಾಯಿತು, ಜನರ ಬೇಡಿಕೆಗಳು ಬದಲಾದವು, ಇವೆಲ್ಲದರ ಜೊತೆಗೆ 'ಪೈಪೋಟಿ' ಎಂಬ ಪದ ನುಸುಳಿತು. ಅವರು ಬಿಟ್ಟು ಅವರು ಬಿಟ್ಟು ಅವರ್‍ಯಾರು ಎನ್ನುವಷ್ಟರ ಮಟ್ಟಿಗೆ ನಿರ್ಮಾಪಕನಿಗೆ ಆಯ್ಕೆ ಸ್ವಾತಂತ್ರ್ಯ ಸಿಕ್ಕಿತು. ತಾನಲ್ಲದಿದ್ದರೆ ತನ್ನ ಜಾಗಕ್ಕೆ ಇನ್ನೊಬ್ಬಳು ಬರ್‍ತಾಳೆ ಎಂಬ ವಾಸ್ತವದ ಅರಿವಾದಾಕ್ಷಣ ನಮ್ಮ ನಟಿಯರು ಧಾರಾಳಿಗಳಾಗತೊಡಗಿದರು. 'ಚುಂಬನದ ದೃಶ್ಯವಿದ್ದರೆ, ಎಕ್ಸ್‌ಪೋಸಿಂಗ್ ಸೀನ್ ಇದ್ದರೆ ನಾನು ನಟಿಸೋದಿಲ್ಲ' ಎನ್ನುತ್ತಿದ್ದ ಮಡಿವಂತೆಯರು 'ಸನ್ನಿವೇಶಕ್ಕೆ, ಕಥೆಗೆ ಅಗತ್ಯವಿದ್ದರೆ ಎಕ್ಸ್‌ಪೋಸ್ ಆಗುವುದಕ್ಕೆ ನನ್ನ ಅಡ್ಡಿಯೇನಿಲ್ಲ' ಎಂದು ಪತ್ರಿಕಾ ಸಂದರ್ಶನಗಳಲ್ಲಿ ಘೋಷಿಸತೊಡಗಿದರು. ಅಂಥ ಸನ್ನಿವೇಶಗಳನ್ನು ಸೃಷ್ಟಿಸುತ್ತಲೇ ನಿರ್ದೇಶಕರ ಗಮನ ಹರಿಯತೊಡಗಿತು. ಉದಾಹರಣೆಗೆ ಸ್ವಿಮ್ಮಿಂಗ್ ಪೂಲ್ ದೃಶ್ಯದಲ್ಲಿ ಸೀರೆ ಉಡುವುದಕ್ಕಾಗುತ್ತದೆಯೇ?

ಈ ರೂಪಾಂತರದ ಹಿಂದೆ ಎರಡು ಕಾರಣಗಳಿವೆ. ಮೊದಲನೆಯದಾಗಿ ನಾಯಕಿಯ ಪಾತ್ರದ ವ್ಯಾಖ್ಯಾನವೇ ಬದಲಾಗಿರುವುದು. ೬೦-೭೦ರ ದಶಕದ ಚಿತ್ರಗಳಲ್ಲ ನಾಯಕನ ಪಾತ್ರಕ್ಕೆ ಸರಿಸಮಾನವಲ್ಲದಿದ್ದರೂ, ಅವರ ಅರ್ಧದಷ್ಟು ಪ್ರಾಧಾನ್ಯ ನಾಯಕಿಗೂ ಇರುತ್ತಿತ್ತು. ಹಾಗಾಗಿ ಮುಖಾಭಿನಯಕ್ಕೆ ಅವಕಾಶವಿತ್ತು. ಪ್ರತಿಭೆ, ಅನುಭವ, ಇವರೆಡೂ ಸಂಗಮಿಸಿದ್ದ ನಟಿಗಷ್ಟೇ ಇದು ಸಾಧ್ಯವಾಗ್ತಾ ಇತ್ತು. ಇಂದಿನ ಚಿತ್ರಗಳಲ್ಲಿ ನಿಮಗೆ ನಾಯಕಿಯ ಮುಖದ ಕ್ಲೋಸಪ್ ಸಿಗುವುದು ಕಡಿಮೆ. ಆಕೆಯ ದೇಹದ ಇತರೇ ಭಾಗಗಳನ್ನೇ ಕ್ಯಾಮರಾ ಸೆರೆಹಿಡಿಯುತ್ತದೆ. ನಾಯಕಿ ಪಾತ್ರದ ತೂಕವೂ ಕಡಿಮೆಯಾಗಿದೆ. ನಾಲ್ಕು ಹಾಡಿಗೆ ಮೈ ಕುಲುಕಿದರೆ ಆಕೆಯ ಡ್ಯೂಟಿ ಮುಗಿದಂತೆ. ಪ್ರತಿಭೆಗಿಂತ ಫಿಗರ್ ಮುಖ್ಯವಾದಾಗ ಯಾರು ಬೇಕಾದರೂ ಹೀರೋಯಿನ್ ಆಗಬಹುದಲ್ಲ.

ಕನ್ನಡದ ನಾಯಕಿಯರಿಗೆ ಈ ಬದಲಾವಣೆ ಅನಿವಾರ್ಯವಾಗೋದಕ್ಕೆ ಕಾರಣವೆಂದರೆ ಪರಭಾಷಾ ನಟಿಯರ ಆಕ್ರಮಣ. ಮದ್ರಾಸಿನಿಂದ ಬರುತ್ತಿದ್ದಂತೆ ತಮ್ಮ ಉಡುಪನ್ನು ಸಡಿಲಗೊಳಿಸುವ ಅವರ ಔದಾರ್ಯದ ಮುಂದೆ ನಮ್ಮವರು ಏನು ಮಾಡಿದರೂ ಕಡಿಮೆಯೇ. ಉದಾಹರಣೆಗೆ ಮಾಲಾಶ್ರೀಯನ್ನೇ ನೋಡಿ. ತನ್ನ ಮೊದಲ ಚಿತ್ರ 'ನಂಜುಂಡಿಕಲ್ಯಾಣ' ದಲ್ಲೇ ಆಕೆ ಬೀದಿಯಲ್ಲಿ ಅರೆಬೆತ್ತಲೆಯಾಗಿ ಓಡಿದ್ದಳು. ಅನಂತರದ ಚಿತ್ರಗಳಲ್ಲಿ ತನ್ನ ಇಮೇಜನ್ನು ಬದಲಾಯಿಸಿಕೊಂಡು ಬಜಾರಿ ಹೆಣ್ಣು, ಗಟ್ಟಿ ಹೆಣ್ಣು, ತ್ಯಾಗಮಯಿಯಾಗಿ ಮೆರೆದಳು. ಇದು ಆಕೆಯ ಜಾಣತನ. ನಮ್ಮ ಹುಡುಗಿಯರು ಇದಕ್ಕೆ ಉಲ್ಟಾ ನೀತಿಯನ್ನು ಅನುಸರಿಸುತ್ತಾರೆ. ಆರಂಭದಲ್ಲಿ ಮೈ ಮುಚ್ಚುವ ಬಟ್ಟೆಗಷ್ಟೇ ಗ್ರೀನ್‌ಸಿಗ್ನಲ್, ಅನಂತರ ಪರಿಸ್ಥಿಯ ಪಿತೂರಿಗೆ ಒಳಗಾಗಿ ಮಿಡಿ, ಮಿನಿ, ಟೂ ಪೀಸ್ ಆಗುತ್ತಾರೆ.

ಉದಾಹರಣೆಗೆ ಮೊನ್ನೆ ಮೊನ್ನೆಯ ತನಕ ನಂಬರ್ ಒನ್ ಆಗಿದ್ದ ಶ್ರುತಿಯನ್ನು ಗಮನಿಸಿ. ಈಕೆಯನ್ನು ಜನ ಮೆಚ್ಚಿದ್ದು ಕಣ್ಣೀರ ಪಾತ್ರಗಳಲ್ಲಿ, ತ್ಯಾಗದ ಉತ್ತುಂಗಕ್ಕೇರಿ ಧನ್ಯತೆಯನ್ನು ಕಾಣುವ ಮನೆ ಮಗಳ ಪಾತ್ರಗಳಲ್ಲಿ. ಆದರೆ ಅಂಥ ಪಾತ್ರಗಳನ್ನೇ ಅತಿಯಾಗಿ ಅವಲಂಬಿಸಿದ ಶ್ರುತಿ ವರ್ಷಕ್ಕೆ ೧೨

ಚಿತ್ರಗಳಲ್ಲಿ ಕಾಣಿಸಿಕೊಂಡಾಗ, ಪ್ರೇಕ್ಷಕರಿಗೆ ಬೋರ್ ಎನಿಸತೊಡಗಿತು. ಇಮೇಜ್ ಬದಲಾಯಿಸುವ ಆತುರದಲ್ಲಿ ಶ್ರುತಿ ಮಾಡರ್ನ್ ಲೇಡಿಯಾದರು. ಆ ಪಾತ್ರವನ್ನು ಪ್ರೇಕ್ಷಕ ಸಾರಾಸಗಟಾಗಿ ತಿರಸ್ಕರಿಸಿದ. ಈಗ ಆಕೆ ಗೊಂದಲನಗರಿಯಲ್ಲಿ ಏಕಾಂಗಿ.

ಇಂಥ ದ್ವಂದ್ವ ಇತರ ಹೊಸಬರನ್ನು ಕಾಡುತ್ತಿದೆ. ನಿವೇದಿತಾ ಜೈನ್, ಅರ್ಚನಾ, ಭಾವನಾ, ಸುಮನ್‌ನಗರ್‌ಕರ್ ಮೊದಲಾದ ಕನ್ನಡತಿಯರು ಪತ್ರಿಕೆಗಳ ಮೂಲಕ ತಮ್ಮ ಬದಲಾದ ನಿಲುವನ್ನು ವ್ಯಕ್ತಪಡಿಸುತ್ತಿದ್ದಾರೆ.

ಬರೀ ಬಟ್ಟೆಯಲ್ಲಷ್ಟೇ ಅಲ್ಲ, ಕೇಶ ವಿನ್ಯಾಸದಲ್ಲಿ, ಆಭರಣಗಳ ಅಲಂಕಾರದಲ್ಲಿ ತಮ್ಮ ಕ್ರೀಡಾಮನೋಭಾವವನ್ನು ತೋರುತ್ತಿದ್ದಾರೆ. ಇದು ಬಾಲಿವುಡ್ ಸ್ಟೈಲ್. ರಮೇಶ್, ಶಿವರಾಜ್‌ಕುಮಾರ್‌ರಂಥಾ ನಟರು ಕೂಡಾ ರೂಪಬದಲಾಯಿಸುವ ಕ್ರಿಯೆಯಲ್ಲಿ ಮಗ್ನರಾಗಿದ್ದಾರೆ. ಜನಕ್ಕೆ ಬದಲಾವಣೆ ಬೇಕು ಎನ್ನೋದು ಇವರಿಗೆ ಅರಿವಾಗಿದೆ.

ಇಷ್ಟಾದರೂ ಒಂದು ಮೂಲಭೂತ ಧೋರಣೆಯಲ್ಲಿ ಬದಲಾವಣೆ ಕಾಣಿಸ್ತಾ ಇಲ್ಲ. ಎಕ್ಸ್‌ಪೋಸ್ ವಿಷಯ ಬಂದಾಗ ಕನ್ನಡ ಪ್ರೇಕ್ಷಕ ಮೆಚ್ಚುವುದು ಪರಭಾಷಾ ನಟಿಯರನ್ನು. ಡಾಲಿ, ನಗ್ಮಾ, ಭಾನುಪ್ರಿಯಾ ಮೊದಲಾದವರು ಶೃಂಗಾರಮಯ ಭಂಗಿಗಳಲ್ಲಿ ಕಾಣಿಸಿಕೊಂಡರೆ ಚಪ್ಪಾಳೆ ಹೊಡೆಯುವ ಮಂದಿ ಆ ಜಾಗದಲ್ಲಿ ಕನ್ನಡಿತಿಯರೇ ಹಾಜರಾದರೆ ಮೌನವಾಗುತ್ತಾನೆ. ನಮ್ಮ ಮನೆ ಹೆಣ್ಮಕ್ಕಳಿಗೆ ಇಂಥಾದ್ದೆಲ್ಲಾ ಒಗ್ಗುವುದಿಲ್ಲ, ಅವರು ಅಂಥಾದ್ದನ್ನು ಮಾಡಲೂ ಬಾರದು ಎನ್ನೋದು ಪ್ರೇಕ್ಷಕರ ತೀರ್ಪು. ಮಂಜುಳಾ, ಭವ್ಯ ಮೊದಲಾದ ಮಾಜಿ ತಾರೆಯರು ಕೂಡ ತಮ್ಮ ವೃತ್ತಿ ಬದುಕಲ್ಲಿ ಒಮ್ಮೆ ಕಳಚಿಕೊಂಡರೂ ಮತ್ತೆ ಸಂಪ್ರದಾಯಕ್ಕೆ ಶರಣಾದವರೇ.

ಈ ವಿಚಿತ್ರ ಟ್ರೆಂಡ್ ಯಾರ ಲೆಕ್ಕಾಚಾರಕ್ಕೂ ಸಿಗುತ್ತಿಲ್ಲ. ಕಥೆಗೆ ಸ್ಕೋಪ್ ಇರುವ ಚಿತ್ರದಲ್ಲಿ ಕನ್ನಡದ ನಾಯಕಿಯರು ಮಿಂಚುತ್ತಿದ್ದರೆ, ಗ್ಲಾಮರ್‌ನ್ನೇ ನೆಚ್ಚಿಕೊಂಡಿರುವ ಚಿತ್ರಗಳಲ್ಲಿ ಆಮದು ಮಣಿಗಳು ಮಿನುಗುತ್ತಿದ್ದಾರೆ. ಹೀಗೆ ಅವರವರಿಗೆ ನಿರ್ದಿಷ್ಟ ಜಾಗ ನಿರ್ಧಾರವಾಗಿದೆ. ಹಾದಿ ಬದಲಾಯಿಸುವ ಅವಸರದಲ್ಲಿರುವ ಕನ್ನಡತಿಯರಿಗೆ ಇದು ಪಾಠವೂ ಹೌದು. ●

ಕಂಬಳಿ

ಚಳಿಯಲ್ಲಿ ಗಡಗಡ ನಡುಗುವ
ಮಡದಿಯ ಕೇಳಿದೆ 'ಹೊಚ್ಚಲೇ'
ಬೆಚ್ಚಗಿನ ಕಂಬಳಿ'
ಸಿಡಿಮಿಡಿಗೊಳ್ಳುತ ಕಡೆಗಣ್ ನೋಟದಿ
ಮಡದಿ ಗುಡುಗಿದಳು come ಬಳಿ

–ಟಿ. ಕೆ. ಗಂಗಾಧರ ಪತ್ತಾರ

ಸಾಲರೀ

ತಿಂಗಳ ಕೊನೆಗೆ
ಕೈತುಂಬಾ salary
ಅಷ್ಟರೊಳಗೆ ಬೆಳೆದಿರುತ್ತೆ
ಮೈತುಂಬಾ ಸಾಲ-ರೀ!

–ಚಂದ್ರಾ ಕೆ. ಹೆಮ್ಮಾಡಿ



ಕವರ್ ಪಾರದರ್ಶಕ: ಡಿ.ಸಿ. ನಾಗೇಶ್